A & CO.
UFACTURERS
CITY, U. P.



ರುದ್ರಪ್ಪ ಅಂಡ್ ಸನ್, ಪ್ರೊಪ್ರೈಟರ್ಸ್, (ಶ್ರೀ ಚಾಮುಂಡೇಶ್ವರೀ ಪ್ರೆಸ್) ಮೈಸೂರು.

ಶ್ರೀರಸ್ತು.

ಶ್ರೀಮನ್ಮಹಾರಾಜಾಧಿರಾಜ

ಶ್ರೀಕೃಷ್ಣರಾಜ ಒಡೆಯರ್ ಅವರುಗಳಿಂದ

ರಚಿಸಲ್ಪಟ್ಟ

ಶ್ರೀ ಕೃಷ್ಣರಾಜ ವಾಣೀವಿಲಾಸ

ಎಂಬ

ಶ್ರೀಮದ್ಭಾಗವತದ ಕನ್ನಡ ಟೀಕು

ಚತುರ್ಥ ಪಂಚಮ ಸ್ಕಂಧಗಳು.

ಶ್ರೀಮನ್ಮಹಿಸೂರು ಮಹಾರಾಣೀ ರೀಜೆಂಟ್ ಅವರುಗಳ ಅಪ್ಪಣೆಯನ್ನು ಪಡೆದು



ಎಂ. ರುದ್ರಪ್ಪ ಅಂಡ್ ಸನ್ ಅವರುಗಳಿಂದ

ಸ್ವಕೀಯ "ಶ್ರೀಚಾಮುಂಡೇಶ್ವರೀ" ಮುದ್ರಾಕ್ಷರಶಾಲೆಯಲ್ಲಿ ಮುದ್ರಾಪಿಸಿ ಪ್ರಕಟಿಸಲ್ಪಟ್ಟಿತು.

ಬೆಂಗಳೂರು:

೧೮೯೮.

ಮೊದಲನೇ ಛಾಪೆ—೧,೦೦೦ ಪ್ರತಿಗಳು.

ಪೀಠಿಕೆ.

ಆಳಿದ ಮಹಾರಾಜರವರಿಂದ ರಚಿಸಲ್ಪಟ್ಟ ಶ್ರೀಕೃಷ್ಣರಾಜ ವಾಣೀವಿಲಾಸವೆಂಬ ಮಹಾಭಾಗವತದ ಕನ್ನಡ ಟೀಕಿನಲ್ಲಿ ಈಗ ಚತುರ್ಥ ಪಂಚಮ ಸ್ಕಂಧಗಳು ಪೂರೈಸಲ್ಪಟ್ಟ ಈ ವಿಳಂಬಿ ಸಂವತ್ಸರದ ಆಷಾಢ ಶುದ್ಧ ದಶಮಿ ಎಂಬ ಮಹಾದಿನದಲ್ಲಿ ಶ್ರೀಮತ್ ಮಹಾರಾಣೀ ರೀಜೆಂಟರವರ ಅನುಗ್ರಹದಿಂದ ಮುದ್ರಿಸಿ ಪ್ರಕಟಿಸುವಷ್ಟು ಭಾಗ್ಯವನ್ನು ಪಡೆದೆವು. ಚತುರ್ಥ ಸ್ಕಂಧದಲ್ಲಿ ದಕ್ಷಪ್ರಜೇಶನ ಯಜ್ಞವು, ಅದನ್ನು ನೋಡಲಿಚ್ಛೈಸಿ ಬಂದ ಸತೀದೇವಿಯಂ ಅವಮಾನಿಸಿದ್ದರಿಂದುಂಟಾದ ಕೋಪದಿಂದ ಆಕೆಯ ಪತಿಯಾದ ಪರಮೇಶ್ವರನು ವೀರಭದ್ರನಂ ಸೃಷ್ಟಿಸಿ ಯಜ್ಞಧ್ವಂಸಂಗೈದದ್ದೂ ಸಪತ್ನೀಮಾತೃವಿನ ವಾಕ್ಯಗಳೆಂಬ ಬಾಣಗಳಿಂದ ಹೃದಯದಲ್ಲಿ ಪೆಟ್ಟುಬಿದ್ದವನಾಗಿ ಊರ್ಧ್ವರೇತಸ್ಕರಾದ ಸನಂದನಾದಿ ಯೋಗಿಗಳಿಗೂಕೂಡ ಅನೇಕಜನ್ಮಗಳಿಂದ ಮಾಡಲ್ಪಟ್ಟ ಸಮಾಧಿಯಿಂದ ಯಾವ ಭಗವಂತನ ಸಮಾಧಿಯನ್ನು ಕಾಣರೋ ಅಂಥಾ ಭಗವಂತನ ಪಾದಚ್ಛಾಯೆಯನ್ನು ಆರುಮಾಸಗಳಲ್ಲೈದಿ ಅನ್ಯರಿಂದ ಪೂರ್ವದಲ್ಲಿ ಪಡೆಯಲ್ಪಡದಿರುವ ಶಾಶ್ವತಸ್ಥಾನವನ್ನು ಪಡೆದ ಭಾಗವತಶ್ರೇಷ್ಠನಾದ ಧ್ರುವರಾಯನ ಚರಿತ್ರೆಯೂ ಪೃಥುರಾಯನ ಚರಿತ್ರೆಯೂ ನಾರದಮಹಾಮುನಿಯಿಂದ ಪ್ರಾಚೀನಬರ್ಹಿರಾಯನಿಗೆ ಉಪದೇಶಂಗೈಯಲ್ಪಟ್ಟ ಪುರಂಜನೋಪಾಖ್ಯಾನರೂಪಕವಾದ ಅಧ್ಯಾತ್ಮ ರಹಸ್ಯವು ವರ್ಣಿಸಲ್ಪಟ್ಟಿರುವವು. ಧ್ರುವರಾಯನ ಚರಿತ್ರೆಯನ್ನು ಸಕಲರಿಂದಲೂ ಮಹಾ ಏಕಾದಶಿ ದಿವಸಗಳಲ್ಲಿ ಪಾರಾಯಣಂಗೈಯಲು ಯೋಗ್ಯವಾಗಿರುವುದರಿಂದ ಚತುರ್ಥಸ್ಕಂಧದಿಂದ ತೆಗೆದು ಬೇರೆಯಾಗಿ ಛಾಪಿಸಿರುವೆವು! ಪಂಚಮಸ್ಕಂಧದಲ್ಲಿ ಭರತರಾಯನ ಉತ್ಪತ್ತಿಯೂ ಆತನಿಗೆ ಹುಲ್ಲೆಯಜನ್ಮ ಬಂದದ್ದೂ ಜಡಭರತನಾಗಿ ಬ್ರಾಹ್ಮಣಜಾತಿಯೊಳ್ಪುಟ್ಟಿ ರಹೂಗಣನಿಗೆ ತತ್ವೋಪದೇಶಂಗೈದದ್ದು ವರ್ಣಿಸಲ್ಪಟ್ಟಿರುವುದರಿಂದ ಬಹಳ ರಸಿಕವಾಗಿಯೂ ರುಚಿಕರವಾಗಿಯೂ ಇಹುದು. ಭೂಗೋಳ ಖಗೋಳ ವಿಸ್ತಾರವೂ ಮತ್ತು ಜ್ಯೋತಿಷ ಶಾಸ್ತ್ರವೂ ನರಕಯಾತನೆಗಳೂ ವಿವರಿಸಲ್ಪಟ್ಟಿದೆ.

ಆಳಿದ ಮಹಾಸ್ವಾಮಿಗಳಾದ ಶ್ರೀಚಾಮರಾಜೇಂದ್ರ ಒಡೆಯರ್ ಬಹದ್ದೂರ್ ಜಿ. ಸಿ. ಎಸ್. ಐ. ಅವರುಗಳ ಅನುಗ್ರಹದಿಂದ ಮೊದಲೇ ಶ್ರೀಕೃಷ್ಣರಾಜ ವಾಣೀವಿಲಾಸವೆಂಬ ಮಹಾಭಾರತವನ್ನೂ ಶ್ರೀಚಾಮರಾಜೋಕ್ತಿವಿಲಾಸವೆಂಬ ಕನ್ನಡ ರಾಮಾಯಣದಲ್ಲಿ ಕೆಲವು ಭಾಗಗಳನ್ನು ಪ್ರಕಟಿಸಿ ಶ್ರೀಮತ್ ಮಹಾರಾಣೀ ರೀಜೆಂಟ್ ಸಿ. ಐ. ಅವರ ಕೃಪಾಕಟಾಕ್ಷದಿಂದ ಉಳಿದ ರಾಮಾಯಣ ಕಾಂಡಗಳನ್ನೂ ಶ್ರೀಕೃಷ್ಣರಾಜ ವಾಣೀವಿಲಾಸವೆಂಬ ಶ್ರೀಮದ್ಭಾಗವತದಲ್ಲಿ ದಶಮ ಏಕಾದಶ ದ್ವಾದಶ ಮತ್ತು ಪ್ರಥಮ ದ್ವಿತೀಯ ತೃತೀಯ ಸ್ಕಂಧಗಳನ್ನೂ ಪ್ರಕಟಿಸಿದೆವು; ಈಗ ಚತುರ್ಥ ಪಂಚಮ ಸ್ಕಂಧಗಳನ್ನು ಪ್ರಕಟಿಸಿ ಮಹಾ ಮಾತೃಶ್ರೀಯವರ ದಿವ್ಯಸನ್ನಿಧಿಗೆ ಒಪ್ಪಿಸುವಷ್ಟು ಭಾಗ್ಯವಂ ಪಡೆದಿದ್ದಕ್ಕಾಗಿ ಭಗವಂತನಂ ಸ್ತೋತ್ರಂಗೈಯುತ ನಮಗೆ ಪರಿಪೋಷಕರಾದವರಿಗೆ ಅತ್ಯಂತ ಕೃತಜ್ಞರಾಗಿದ್ದೇವೆ! ಈ ಪ್ರಚುರಗಳ ಪರಿಶೋಧನೆ ಮೊದಲಾದ ಕೆಲಸಗಳಲ್ಲಿ ಪಂಡಿತರಾದ ವೇದಮೂರ್ತಿ ಕೋಲಾರು ರಾಮಾಶಾಸ್ತ್ರಿಗಳೂ ಗೌತಮಕ್ಷೇತ್ರದ ವರದರಾಮಾನುಜ ದಾಸರೂ ನಮಗೆ ಅತ್ಯಂತ ಸಹಾಯಮಾಡಿದರೆಂದು ಇಲ್ಲಿ ಬರೆದಿಡಲು ಸಂತೋಷಪಡುತ್ತೇವೆ.

ಬೆಂಗಳೂರು,
೨೯—೬—೯೮.

ಎಂ. ರುದ್ರಪ್ಪ ಅಂಡ್ ಸನ್,
ಪ್ರೊಪ್ರೈಟರ್ಸ್, ಶ್ರೀಚಾಮುಂಡೇಶ್ವರಿ ಪ್ರೆಸ್,
ಲಾಲ್‌ಬಾಗ್ ರೋಡ್, ಬೆಂಗಳೂರು.

[redacted]



ವಿಷಯ ಸೂಚಿಕೆ.

ಚತುರ್ಥ ಸ್ಕಂಧ.

ಪುಟ.

ಭಗವಂತನು ಆಕೂತಿದೇವಿಯಲ್ಲಿ ಯಜ್ಞನಾಮಕನಾಗಿ ಅವತರಿಸಿದ್ದು ೧

ಪರಮೇಶ್ವರ ದಕ್ಷರಿಗೆ ವೈರಕ್ಕೆ ಕಾರಣವಾದ ಪ್ರಜೇಶ್ವರ ಯಜ್ಞವು ೬

ಸತೀದೇವಿಯು ದಕ್ಷಪ್ರಜೇಶನ ಯಜ್ಞಮಹೋತ್ಸವವನ್ನು ನೋಡಲಿಚ್ಛೈಸಿದ್ದು ೮

———— ತಂದೆಯಾದ ದಕ್ಷನಿಂದ ಅವಮಾನವನ್ನು ಹೊಂದಿ ಶರೀರತ್ಯಾಗಂಗೈದದ್ದು ... ೧೦

ಪರಮೇಶ್ವರನು ವೀರಭದ್ರನನ್ನು ಸೃಷ್ಟಿಸಿ ದಕ್ಷನನ್ನು ಸಂಹಾರಂಗೈಸಿದ್ದು ೧೩

ಬ್ರಹ್ಮನು ದೇವಸಹಿತನಾಗಿ ದಕ್ಷಾದಿಗಳನ್ನು ಬದುಕಿಸುವದಕ್ಕೋಸ್ಕರ ಪರಮೇಶ್ವರನನ್ನು ಪ್ರಾರ್ಥಿಸಿದ್ದು ೧೫

ದಕ್ಷ ಶಿವರಿಂದ ಸ್ತುತಿಗೈಯಲ್ಪಟ್ಟ ವಿಷ್ಣುವು ದಕ್ಷನಿಂದ ಯಜ್ಞವನ್ನು ಮಾಡಿಸಿದ್ದು .. ೧೮

ಧ್ರುವಚರಿತ್ರೆ ೨೩

ಧ್ರುವನು ಶ್ರೀಹರಿಯನ್ನು ಸ್ತುತಿಸಿ ವರಗಳನ್ನು ಪಡದದ್ದು ೨೮

———— ಯಕ್ಷರನ್ನು ಸಂಹರಿಸಿದ್ದು ... ೩೨

ಸ್ವಾಯಂಭುವಮನುವು ಧ್ರುವನಿಗೆ ತತ್ತ್ವೋಪದೇಶವನ್ನು ಮಾಡಿದ್ದು ೩೪

ಧ್ರುವನು ಶ್ರೀಹರಿಯ ಸ್ಥಾನವನ್ನೈದಿದ್ದು ... ೩೬

ವೇನನ ಚರಿತ್ರೆಯು ೩೯

ವೇನನನ್ನು ಬ್ರಾಹ್ಮಣರು ಶಪಿಸಿದ್ದು... ... ೪೧

ಪೃಥುರಾಯನ ಚರಿತ್ರೆಯು ೪೪

———— ನ್ನು ಸ್ತುತಿಪಾಠಕರು ಸ್ತುತಿಗೈದದ್ದು ೪೬

ಭೂದೇವಿಯು ಪೃಥುರಾಯನನ್ನು ಸ್ತುತಿಸಿದ್ದು ... ೪೭

ಪೃಥುರಾಯನು ಭೂದೇವಿಯ ಕೆಚ್ಚಲಿನಲ್ಲಿ ಬೇಕಾದ ಪದಾರ್ಥಗಳನ್ನು ಕರದುಕೊಂಡದ್ದು ... ೫೦

ಪುಟ.

ಪೃಥುರಾಯನು ನೂರು ಅಶ್ವಮೇಧ ಯಾಗಗಳನ್ನು ಮಾಡಿದ್ದು ೫೨

ಭಗವಂತನು ಪೃಥುರಾಯನಿಗೆ ತತ್ವಜ್ಞಾನೋಪದೇಶಮಾಡಿದ್ದು ೫೪

ಪೃಥುರಾಯನು ದೇವಾದಿಗಳ ಮಹಾ ಸತ್ರಯಾಗದಲ್ಲಿ ಪ್ರಜಾಪಾಲನ ಧರ್ಮವನ್ನು ಋಷಿಗಳನ್ನು ಕುರಿತು ಹೇಳಿದ್ದು ೫೭

ಸನತ್ಕುಮಾರ ಋಷಿಯು ಪೃಥುರಾಯನಿಗೆ ತತ್ವಜ್ಞಾನವನ್ನುಪದೇಶಿಸಿದ್ದು ೬೦

ಪೃಥುರಾಯನು ಸಪತ್ನೀಕನಾಗಿ ವೈಕುಂಠವನ್ನೈದಿದ್ದು ೬೫

ಪ್ರಚೇತಸ್ಕರಿಗೆ ಶ್ರೀರುದ್ರನು ರುದ್ರಗೀತೆಗಳನ್ನುಪದೇಶಂಗೈದದ್ದು ೬೭

ಪುರಂಜನೋಪಾಖ್ಯಾನ ೭೨

ಸ್ವಪ್ನ ಜಾಗರಣಗಳೆಂಬ ಬೇಟೆಯಿಂದ ಜೀವನಿಗೆ ಸಂಸಾರ ಉಂಟಾಗುವದು ೭೬

ನಾರದನು ಪ್ರಾಚೀನಬರ್ಹಿರಾಯನಿಗೆ ಪುರಂಜನ ಕಾಲಕನ್ಯೋಪಾಖ್ಯಾನವನ್ನು ಹೇಳಿದ್ದು ... ೭೮

ಪುರಂಜನನಿಗೆ ವೈದರ್ಭ್ಯಾಖ್ಯಾನಪೂರ್ವಕವಾಗಿ ಮುಕ್ತಿಯುಂಟಾದದ್ದು ೮೦

ಅಧ್ಯಾತ್ಮ ರಹಸ್ಯವು ೮೪

ಪ್ರಚೇತಸ್ಸುಗಳು ಶ್ರೀಹರಿಯಿಂದ ವರವನ್ನು ಪಡದು ವಾರ್ಕ್ಷೀಯೆಂಬ ಕನ್ಯೆಯನ್ನು ವಿವಾಹವಾದದ್ದು ೮೯

———— ನಾರದೋಪದೇಶದಿಂದ ಮುಕ್ತಿಹೊಂದಿದ್ದು ೯೨

ಪಂಚಮ ಸ್ಕಂಧ.

ಪ್ರಿಯವ್ರತರಾಯನು ಪರಮಪದವನ್ನೈದಿದ್ದು ೯೫

ಆಗ್ನೀಧ್ರರಾಯನು ಪೂರ್ವಚಿತ್ತಿಯೆಂಬ ಪತ್ನಿಯಲ್ಲಿ ಪುತ್ರರನ್ನು ಪಡೆದದ್ದು ೯೯

ನಾಭಿರಾಯನ ಚರಿತ್ರೆಯು ೧೦೨

ಋಷಭಮೂರ್ತಿಯು ನೂರುಮಂದಿ ಪುತ್ರರನ್ನು ಪಡೆದು ರಾಜ್ಯಪಾಲನಂ ಮಾಡಿದ್ದು... ೧೦೪

	ಪುಟ.
ಋಷಭಮೂರ್ತಿಯು ತನ್ನ ಪುತ್ರರಿಗೆ ಮೋಕ್ಷಧರ್ಮಗಳನ್ನು ಉಪದೇಶಂಗೈದದ್ದು ...	೧೦೬
——————————ದೇಹತ್ಯಾಗಂಗೈದದ್ದು ...	೧೧೦
ಭರತರಾಯನು ಬದರಿಕಾಶ್ರಮದಲ್ಲಿ ವಾಸುದೇವನನ್ನು ಕುರಿತು ತಪಸ್ಸಂಗೈದದ್ದು ...	೧೧೨
ಭರತರಾಯನು ಹುಲ್ಲೆಯಾಗಿ ಜನಿಸಿದ್ದು ...	೧೧೪
————ಭದ್ರಕಾಳಿಯೆಂಬ ಶಕ್ತಿಗೆ ಪಶುಭಾವದಿಂದ ಅರ್ಪಿಸಲ್ಪಟ್ಟದ್ದು	೧೧೬
ರಹೂಗಣನೆಂಬ ಅರಸು ಭರತನಿಂದಪ್ರಸಾದವನ್ನು ಹೊಂದಿದ್ದು	೧೨೦
ಜಡಭರತನು ರಹೂಗಣನಿಗೆ ಆತ್ಮಸ್ವರೂಪವನ್ನುಪದೇಶಿಸಿದ್ದು	೧೨೩
————ರಹೂಗಣನಿಗೆ ತತ್ವಜ್ಞಾನವನ್ನುಪದೇಶಿಸಿದ್ದು	೧೨೫
————ರಹೂಗಣನಿಗೆ ವೈರಾಗ್ಯವುಂಟಾಗುವದಕ್ಕೋಸ್ಕರ ಸಂಸಾರವೆಂಬ ಅರಣ್ಯವನ್ನು ವರ್ಣಿಸಿದ್ದು	೧೨೩
ಶುಕಮುನಿಯು ಪರೀಕ್ಷಿದ್ರಾಯನಿಗೆ ಸಂಸಾರವೆಂಬ ಅರಣ್ಯವನ್ನು ವಿವರಿಸಿದ್ದು ...	೧೩೧
ಭರತರಾಯನ ವಂಶಸ್ಥರಾದ ಅರಸುಗಳ ಉತ್ಪತ್ತಿಯು	೧೩೫
ಸಪ್ತದ್ವೀಪ ಸಮುದ್ರಗಳ ಪ್ರಮಾಣವು—ಮೇರುವಿನ ಪ್ರಮಾಣಸ್ಥಿತಿಯು ...	೧೩೩
ಇಳಾವೃತ ವರ್ಷದಲ್ಲಿ ರುದ್ರಮೂರ್ತಿಯು ಸಂಕರ್ಷಣ ಮೂರ್ತಿಯುನ್ನು ಉಪಾಸನಂಗೈದದ್ದು	೧೪೦
ವಕ್ಷಮಾಣವಾದ ಮೂರು ಖಂಡಗಳಲ್ಲಿ ಭಗವಂತನ ಮೂರ್ತಿವಿಶೇಷಗಳನ್ನು ವರ್ಣಿಸಿದ್ದು	೧೪೩
ಕಿಂಪುರುಷವರ್ಷದಲ್ಲಿ ಭಾರತವರ್ಷದಲ್ಲಿ ಇರುವ ಭಗವತ್ಸೇವಕರನ್ನು ಭಗವನ್ಮೂರ್ತಿಗಳನ್ನೂ ವಿವರಿಸಿದ್ದು	೧೪೮
ಪ್ಲಕ್ಷಾದಿ ದ್ವೀಪಗಳು ಸಮುದ್ರಗಳು ಲೋಕಾಲೋಕ ಪರ್ವತಗಳ ಸ್ಥಿತಿಯು ...	೧೫೧
ಕಾಲಚಕ್ರದಿಂದ ಸುತ್ತುತಲಿರುವ ಸೂರ್ಯನಿಗೆ ಸ್ವಗತಿಯಿಂದ ರಾಶಿಸಂಚಾರವುಂಟಾಗುವದರಿಂದ ಪ್ರಪಂಚವ್ಯಾಪಾರವು ಉಂಟಾಗುವದು	೧೫೬
ಚಂದ್ರ ಶುಕ್ರ ಮೊದಲಾದ ಗ್ರಹಗಳ ಸ್ಥಿತಿಯು ...	೧೫೯
ಧೃವನ ಸ್ಥಾನವನ್ನು ಶ್ರೀಮಹಾವಿಷ್ಣುವು ಶಿಂಶುಮಾರ ಸ್ವರೂಪನಾಗಿರುವದನ್ನು ವರ್ಣಿಸಿದ್ದು ...	೧೬೧
ಸೂರ್ಯನಿಗಿಂತಲು ಅಧೋಭಾಗದಲ್ಲಿರುವ ರಾಹು ಮೊದಲಾದವರ ಸ್ಥಿತಿಯು—ಅತಳಾದಿ ಸಪ್ತ ಪಾತಾಳಗಳ ಸ್ಥಿತಿಯು	೧೬೩
ಪ್ರಳಯಕಾಲದಲ್ಲಿ ಆದಿಶೇಷನಿಂದ ರುದ್ರೋತ್ಪತ್ತಿಯು	೧೬೩
ಪಾಪಾತ್ಮರಿಗುಂಟಾಗುವ ನರಕಯಾತನೆಗಳು	೧೬೯



ಶ್ರೀಬಾದರಾಯಣಸಮಾಕಲಿತಂ ರಸಾರ್ದ್ರಂ ವೇದಾಮರದ್ರುಮಫಲಂ ಶುಕವಕ್ತ್ರಮುಕ್ತಂ।
ಕೃಷ್ಣಾವತಾರಚರಿತಾಮೃತಪೂರಪೂರ್ಣಂ ಭೋಭಾವುಕಾಃ ಪಿಬತಭಾಗವತಂ ರಸಮಾತ್ಮಬೋಧಂ ॥

ಶ್ರೀ ಕೃಷ್ಣರಾಜ ವಾಣೀವಿಲಾಸ

ಎಂಬ

ಶ್ರೀಮದ್ಭಾಗವತದ ಕನ್ನಡ ಟೀಕು

ಚತುರ್ಥ ಸ್ಕಂಧ.

೧ನೇ ಅಧ್ಯಾಯ.

ಆಕೂತಿದೇವಿಯಲ್ಲಿ ಭಗವಂತನು ಯಜ್ಞನಾಮಕನಾಗಿ ಅವತರಿಸಿದ್ದು.

ಅನಂತರದಲ್ಲಿ ಸೂತಪೌರಾಣಿಕನು ನೈಮಿಶಾರಣ್ಯವಾಸಿಗಳಾದ ಋಷಿಗಳನ್ನು ಕುರಿತು—ಎಲೈ ಶೌನಕಾದಿಗಳಿರಾ, ಪೂರ್ವಸ್ಕಂಧಾರ್ಥದಲ್ಲಿ ಮೈತ್ರೇಯಋಷಿಯು ವಿದುರನನ್ನು ಕುರಿತು "ಎಲೈ ವಿದುರನೆ, ಸ್ವಾಯಂಭುವಮನುವಿನ ಎರಡನೇ ಮಗಳಾದ ದೇವಹೂತಿದೇವಿಯು ಗರ್ಭದಲ್ಲಿ ಉತ್ಪನ್ನನಾಗಿ ಭಗವದ್ರೂಪನಾದ ಕಪಿಲಋಷಿಯು ಮಾತೃವಾದ ದೇವಹೂತಿಗೆ ಸಾಂಖ್ಯಯೋಗ ರಹಸ್ಯಗಳನ್ನು ಉಪದೇಶಂಗೈದು ಆಕೆಯ ಅನುಜ್ಞೆಯಿಂದ ತಮ್ಮ ಆಶ್ರಮವನ್ನು ಕುರಿತು ತಪಸ್ಸಿಗೋಸ್ಕರ ತೆರಳಿಹೋಗಲು ಆ ದೇವಹೂತಿಯು ಬ್ರಹ್ಮಸ್ವರೂಪಾನುಸಂಧಾನದಿಂದ ಮುಕ್ತಳಾದಳು" ಎಂದು ನಿರೂಪಿಸಿದನು.

ಎಲೈ ಋಷಿಗಳಿರಾ, ಆ ಬಳಿಕ ಮೈತ್ರೇಯ ಋಷಿಯು ವಿದುರನನ್ನು ಕುರಿತು "ಎಲೈ ವಿದುರನೆ, ಸ್ವಾಯಂಭುವಮನುವಿಗೆ ಪತ್ನಿಯಾದ ಶತರೂಪಾದೇವಿಯಲ್ಲಿ ಆಕೂತಿ ದೇವಹೂತಿ ಪ್ರಸೂತಿಗಳೆಂಬ ಪ್ರಸಿದ್ಧರಾದ ಮೂರುಮಂದಿ ಪುತ್ರಿಯರು ಜನಿಸಿದರು; ಆ ಸ್ವಾಯಂಭುವ ಮನುವು ಪ್ರಿಯವ್ರತ ಉತ್ತಾನಪಾದರೆಂಬ ಕುಮಾರರು ಪುತ್ರರು ತನಗಿದ್ದಾಗ್ಯೂ ಬಹು ಪುತ್ರಾಪೇಕ್ಷೆಯಿಂದ ಶತರೂಪಾದೇವಿಯ ಸಮ್ಮತಿಯಿಂದ ಜ್ಯೇಷ್ಠಪುತ್ರಿಯಾದ

ಆಕೂತಿದೇವಿಯನ್ನು ಋಚಿಕಪ್ರಜೇಶನಿಗೆ ವಿವಾಹಮಾಡುವ ಕಾಲದಲ್ಲಿ ಈ ಆಕೂತಿದೇವಿಯಲ್ಲಿ ಜನಿಸುವ ಪ್ರಥಮಪುತ್ರನು ತನಗೆ ಪುತ್ರನಾಗಬೇಕೆಂದು ಭಾಷಾನಿಬಂಧನಪೂರ್ವಕವಾದ ಪುತ್ರಿಕಾ ಪುತ್ರಧರ್ಮವನ್ನಾಶ್ರಯಿಸಿ ವಿವಾಹಂಗೈದನು; ಪೂಜ್ಯನಾಗಿ ವರ್ಚಸ್ವಿಯಾದ ಋಚಿಪ್ರಜೇಶನು ಉತ್ಕೃಷ್ಟವಾದ ಈಶ್ವರಧ್ಯಾನದಿಂದ ಆಕೂತಿದೇವಿಯಲ್ಲಿ ಒಬ್ಬ ಪುರುಷನನ್ನೂ ಒಬ್ಬ ಸ್ತ್ರೀಯನ್ನೂ ಸಹಾ ಪಡೆದನು; ಆ ಈರ್ವರಲ್ಲಿ ಪುರುಷನೇ ದಿವ್ಯಕಾಂತಿಯುಳ್ಳ ಯಜ್ಞಸ್ವರೂಪನಾದ ಸಾಕ್ಷಾದ್ಭಗವಂತನಾದ ವಿಷ್ಣುವು; ಆ ಸ್ತ್ರೀಯೇ ಮಹಾಲಕ್ಷ್ಮಿಯ ಅಂಶಭೂತಳಾದ ದಕ್ಷಿಣಾದೇವಿಯು; ಸ್ವಾಯಂಭುವ ಮನುವು ಸಂತೋಷದಿಂದ ತನ್ನ ಪುತ್ರಿಯಲ್ಲಿ ಅವತರಿಸಿರುವ ಪರಮ ತೇಜಸ್ವಿಯಾದ ದೌಹಿತ್ರನಾದ ಯಜ್ಞಮೂರ್ತಿಯನ್ನು ಪೂರ್ವದ ಭಾಷಾನಿಬಂಧನಪೂರ್ವಕವಾಗಿ ತನ್ನ ಮನೆಗೆ ಕರೆದುಕೊಂಡು ಹೋದನು; ಆ ಋಚಿಪ್ರಜೇಶನು ದಕ್ಷಿಣಾದೇವಿಯೆಂಬ ಕನ್ಯೆಯನ್ನು ತನ್ನ ಗೃಹದಲ್ಲಿ ಪುತ್ರಿಯನ್ನಾಗಿ ಪೋಷಿಸಿದನು; ಆ ಬಳಿಕ ಯಜ್ಞಗಳಿಗೂ ಯಜ್ಞೋಪಯುಕ್ತಗಳಾದ ಮಂತ್ರಗಳಿಗೂ ಸ್ವಾಮಿಯಾಗಿ ಷಡ್ಗುಣೈಶ್ವರ್ಯ ಸಂಪನ್ನನಾಗಿ ಯಜ್ಞನಾಮಕನಾದ ಭಗವಂತನು ತನ್ನನ್ನೇ ಅಪೇಕ್ಷಿಸುತಲಿರುವ ಆ ದಕ್ಷಿಣಾದೇವಿಯನ್ನು ವಿವಾಹಂಗೈದನು; ಸಂತುಷ್ಟರಾದ ಆ ದಕ್ಷಿಣಾಯಜ್ಞಮೂರ್ತಿಗಳಿಗೆ ತೋಷ ಪ್ರತೋಷ ಸಂತೋಷ ಭದ್ರ ಶಾಂತಿ ಇಡಸ್ಪತಿ ಇಧ್ಮ ಕವಿ ವಿಭು ಅಸ್ವಪ್ನ ವಸುದೇವನು ರೋಚನರೆಂಬ ಹನ್ನೆರಡುಮಂದಿ ಪುತ್ರರು ಯಾಮರೆಂಬ ಹೆಸರುಳ್ಳವರಾಗಿ ಜನಿಸಿದರು; ಸ್ವಾಯಂಭುವ ಮನ್ವಂತರದಲ್ಲಿ ಈ ಹನ್ನೆರಡುಮಂದಿಯೇ ತುಷಿತರೆಂಬ ಹೆಸರಿನಿಂದ ಪ್ರಖ್ಯಾತರಾದ ದೇವತೆಗಳಾದರು; ಮರೀಚಿಪ್ರಮುಖರೇ ಸಪ್ತರ್ಷಿಗಳಾದರು; ಯಜ್ಞನಾಮಕನಾದ ಭಗವಂತನೇ ಇಂದ್ರನಾದನು; ಮಹಾ ಯಶಸ್ವಿಗಳಾದ ಪ್ರಿಯವ್ರತೋತ್ತಾನ ಪಾದರಾಯರೆಂಬ ಮನುಪುತ್ರರೀರ್ವರೂ ಭೂಪತಿಗಳಾದರು; ಆ ಸ್ವಾಯಂಭುವ ಮನುವಿನ ಪುತ್ರ ಪೌತ್ರಾದಿಗಳ ಸಂತತಿಗಳಿಂದ ಆ ಮನ್ವಂತರವೆಲ್ಲವೂ ವ್ಯಾಪ್ತವಾಯಿತು! ಎಲೈ ವಿದುರನೆ, ಆ ಸ್ವಾಯಂಭುವ ಮನುವು ತನ್ನ ಎರಡನೇ ಮಗಳಾದ ದೇವಹೂತಿಯನ್ನು ಕರ್ದಮಪ್ರಜೇಶನಿಗೆ ಕೊಟ್ಟು ವಿವಾಹಂಗೈದ ವೃತ್ತಾಂತವು ವಿಸ್ತಾರವಾಗಿ ನನ್ನಿಂದ ಹೇಳಲ್ಪಟ್ಟಿತು; ಇನ್ನು ಪೂಜ್ಯನಾದ ಸ್ವಾಯಂಭುವಮನುವು ತನ್ನ ಮೂರನೇ ಪುತ್ರಿಯಾದ ಪ್ರಸೂತಿದೇವಿಯನ್ನು ಬ್ರಹ್ಮಪುತ್ರನಾದ ದಕ್ಷಪ್ರಜೇಶನಿಗೆ ಕೊಟ್ಟ ವೃತ್ತಾಂತವನ್ನು ಕೇಳು: ಆ ಪ್ರಸೂತಿದೇವಿಯ ಸಂತತಿಯಿಂದ ಲೋಕತ್ರಯವು ವ್ಯಾಪ್ತವಾಯಿತು; ಪೂರ್ವದಲ್ಲಿ ಕರ್ದಮಪ್ರಜೇಶನ ಒಂಭತ್ತುಮಂದಿ ಹೆಣ್ಣುಮಕ್ಕಳು ಮರೀಚಿ ಮೊದಲಾದ ನವಬ್ರಹ್ಮರ ಪತ್ನಿಯರುಗಳಾದರು; ಆ ಸ್ತ್ರೀಯರುಗಳ ಪುತ್ರ ಪೌತ್ರಾದಿ ಸಂತತಿಯನ್ನು ನಿರೂಪಿಸುವೆನು ಕೇಳು: ಕರ್ದಮಋಷಿ ಪುತ್ರಿಯಾದ ಮರೀಚಿಬ್ರಹ್ಮನ ಪತ್ನಿಯಾದ ಕಳಾದೇವಿಯು ಕಶ್ಯಪಋಷೀಶ್ವರನನ್ನು ಪೂರ್ಣನೆಂಬ ಋಷಿಯನ್ನು ಸಹ ಪಡೆದಳು; ಅವರೀರ್ವರ ಸಂತತಿಯಿಂದ ಲೋಕತ್ರಯವು ವ್ಯಾಪ್ತವಾಯಿತು! ಎಲೈ ತಪಸ್ವಿಯಾದ ವಿದುರನೆ, ಪೂರ್ಣಮನೆಂಬ ಋಷಿಯು ವಿಶ್ವಗಾಯೆಂತಲೂ ದೇವತುಲ್ಯಾಯೆಂತಲೂ ಪ್ರಸಿದ್ಧಳಾದ ಒಬ್ಬ ಪುತ್ರಿಯನ್ನು ಪಡೆದನು; ಪ್ರಥಮದಲ್ಲಿ ವಿರಜನೆಂಬ ಪುತ್ರನನ್ನು ಪಡೆದನು; ಆ ದೇವತುಲ್ಯಾಯೆಂಬ ಸ್ತ್ರೀಯು ಪೂರ್ವಜನ್ಮದಲ್ಲಿ ತ್ರಿವಿಕ್ರಮರೂಪನಾದ ಶ್ರೀಹರಿಯ ಪಾದಪ್ರಕ್ಷಾಳನೋದಕವಾದ್ದರಿಂದ ದೇವಗಂಗೆಯಾದಳು; ಮಹಾಕೀರ್ತಿಶಾಲಿಯಾಗಿ ಅತ್ರಿಋಷಿಪತ್ನಿಯಾದ ಅನಸೂಯಾದೇವಿಯು ಹರಿಹರ ಬ್ರಹ್ಮರ ಅಂಶಭೂತರಾದ ದತ್ತಾತ್ರೇಯ ದೂರ್ವಾಸ ಸೋಮರೆಂಬ ನಾಮಧೇಯಗಳಿಂದ ಪ್ರಸಿದ್ಧರಾದ ಮೂರುಮಂದಿ ಪುತ್ರರನ್ನು ಪಡೆದಳು” ಎಂದು ನಿರೂಪಿಸಿದನು.

ಆ ವಾಕ್ಯವನ್ನು ಕೇಳಿ ವಿದುರನು ಮೈತ್ರೇಯ ಋಷಿಯನ್ನು ಕುರಿತು “ಎಲೈ ಮೈತ್ರೇಯ ಋಷಿಯೆ, ಸ್ಥಿತಿ ಲಯೋತ್ಪತ್ತಿಗಳಿಗೆ ಕಾರಣರಾಗಿ ದೇವಶ್ರೇಷ್ಠರಾದ ಹರಿಹರ ಬ್ರಹ್ಮರು ಯಾವ ಕಾರ್ಯವನ್ನು ಅಪೇಕ್ಷಿಸಿ ಅತ್ರಿಋಷಿಯ ಪತ್ನಿಯಾದ ಅನಸೂಯಾದೇವಿಯ ಗರ್ಭದಲ್ಲಿ ಅವತರಿಸಿದರೊ ಆ ಅರ್ಥವನ್ನು ನನಗೆ ನಿರೂಪಿಸು?” ಎಂದು ಪ್ರಶ್ನೆಗೈದನು.

ಆ ಬಳಿಕ ಮೈತ್ರೇಯಋಷಿಯು ವಿದುರನನ್ನು ಕುರಿತು "ಎಲೈ ವಿದುರನೆ, ಬ್ರಹ್ಮತತ್ವಜ್ಞರಲ್ಲಿ ಶ್ರೇಷ್ಠನಾದ ಅತ್ರಿಋಷಿಯು ಬ್ರಹ್ಮದೇವನಿಂದ ಜಗತ್ಸೃಷ್ಟಿಯಲ್ಲಿ ಪ್ರೇರಿತನಾಗಿ ತನ್ನ ಪತ್ನಿಯಾದ ಅನಸೂಯಾದೇವಿಯೊಡನೆ ಋಕ್ಷವೆಂಬ ನಾಮಧೇಯದಿಂದ ಪ್ರಸಿದ್ಧವಾದ ಕುಲಾಚಲವನ್ನೈದಿ ತಪಸ್ಸಂಗೈದನು; ವಿಕಸಿತಗಳಾದ ಪುಷ್ಪಗೊಂಚಲುಗಳುಳ್ಳ ಪಲಾಶವೃಕ್ಷಗಳಿಂದಲೂ ಅಶೋಕವೃಕ್ಷಗಳಿಂದಲೂ ಶೋಭಿತವಾಗಿರುವ ವನವುಳ್ಳದ್ದಾಗಿ ನಿರ್ವಿಂಧ್ಯಾನಾಮಕವಾದ ನದಿಯ ಉದಕಪ್ರವಾಹಗಳಿಂದ ಧ್ವನಿಗೈಯುತಲಿರುವ ಆ ಋಕ್ಷಪರ್ವತದಲ್ಲಿ ಅತ್ರಿಋಷೀಶ್ವರನು ಶೀತೋಷ್ಣಾದಿ ದ್ವಂದ್ವದುಃಖಗಳನ್ನು ಸಹಿಸುವವನಾಗಿ ವಾಯುಭಕ್ಷಣನಾಗಿ ಪ್ರಾಣಾಯಾಮದಿಂದ ಮನೋನಿಗ್ರಹವನ್ನು ಮಾಡಿ ನೂರುವರ್ಷ ಪರ್ಯಂತವು ಏಕಪಾದದಿಂದ ನಿಂತು ಪರಬ್ರಹ್ಮಧ್ಯಾನಂಗೈಯುತ '—ಯಾವವನು ಜಗದೀಶ್ವರನೊ ಆತನನ್ನು ನಾನು ಶರಣುಹೊಂದುತ್ತೇನೆ; ಆ ಸ್ವಾಮಿಯು ತನಗೆ ಸಮಾನನಾದ ಪುತ್ರನನ್ನು ನನಿಗೋಸ್ಕರ ಇತ್ತು ರಕ್ಷಿಸಲೀ—' ಎಂದು ಭಾವನೆಯನ್ನು ಮಾಡುತ ತಪಸ್ಸಂಗೈದನು. ಅನಂತರದಲ್ಲಿ ಅತ್ರಿಋಷೀಶ್ವರನ ಬ್ರಹ್ಮರಂಧ್ರಸ್ಥಾನದಿಂದ ಹೊರಟುಬಂದ ಪ್ರಾಣಾಯಾಮದಿಂದ ಪ್ರಜ್ವಲಿತವಾದ ತಪೋವಹ್ನಿಯಿಂದ ತಪಿಸುತಲಿರುವ ಲೋಕತ್ರಯವನ್ನು ನೋಡಿ ಪ್ರಭುಗಳಾದ ಆ ತ್ರಿಮೂರ್ತಿಗಳು ಅಪ್ಸರಸ್ತ್ರೀಯರುಗಳು ಋಷಿಗಳು ಗಂಧರ್ವರು ಸಿದ್ಧರು ವಿದ್ಯಾಧರರು ಸರ್ಪರಾಜರು ಮೊದಲಾದವರಿಂದ ವರ್ಣಿಸಲ್ಪಡುತ ಕೀರ್ತಿಯುಳ್ಳವರಾಗಿ ಸಂತೋಷದಿಂದ ಆ ಅತ್ರಿಋಷಿಯ ಆಶ್ರಮವನ್ನು ಕುರಿತು ಬಂದರು; ಆ ಸಮಯದಲ್ಲಿ ಅತ್ರಿಋಷಿಯು ಆ ತ್ರಿಮೂರ್ತಿಗಳ ಪ್ರಾದುರ್ಭಾವ ಸಾನ್ನಿಧ್ಯಗಳಿಂದ ಪ್ರಕಾಶಿತನಾದ ಮನಸ್ಸುಳ್ಳವನಾಗಿ ಮುಖವನ್ನೆತ್ತಿ ದೇವೋತ್ತಮರಾದ ಆ ತ್ರಿಮೂರ್ತಿಗಳನ್ನು ಕಂಡನು; ಅತ್ರಿಋಷಿಯು ಭೂಮಿಯಲ್ಲಿ ದಂಡಾಕಾರವಾಗಿ ಸಾಷ್ಟಾಂಗ ಪ್ರಣಾಮಂಗೈದು ಪೂಜಾದ್ರವ್ಯಗಳನ್ನು ಕೈಲಿ ಧರಿಸಿದವನಾಗಿ ಕೃಪಾದೃಷ್ಟಿಯಿಂದಲೂ ಮುಗುಳುನಗುವಿನಿಂದಲೂ ಪ್ರಸನ್ನವಾದ ಮುಖವುಳ್ಳವರಾಗಿ ತಮ್ಮ ತಮ್ಮ ವಾಹನಗಳಾದ ಗರುಡ ವೃಷಭ ಹಂಸಗಳನ್ನಾರೂಢರಾಗಿ ಶಂಖಚಕ್ರಾದಿ ಚಿನ್ಹೆಗಳಿಂದಲೂ ತ್ರಿಶೂಲ ಡಮರುಗಾದಿ ಚಿನ್ಹೆಗಳಿಂದಲೂ ಪುಸ್ತಕಾಕ್ಷಮಾಲಾದಿ ಚಿನ್ಹೆಗಳಿಂದಲೂ ಕ್ರಮವಾಗಿ ಅಲಂಕೃತರಾದ ಹರಿಹರ ಬ್ರಹ್ಮಮೂರ್ತಿಗಳನ್ನು ಅರ್ಘ್ಯಪಾದ್ಯಾದ್ಯುಪಚಾರಗಳಿಂದಲೂ ಪುಷ್ಪಾಂಜಲಿಗಳಿಂದಲೂ ಪೂಜಿಸಿದನು; ಆ ತ್ರಿಮೂರ್ತಿಗಳ ಪ್ರಭೆಯಿಂದ ತಿರಸ್ಕೃತವಾದ ಸಾಮರ್ಥ್ಯವುಳ್ಳವನಾಗಿ ನೇತ್ರಗಳನ್ನು ಮುಚ್ಚಿಕೊಂಡು ಮನಸ್ಸನ್ನು ಆ ತ್ರಿಮೂರ್ತಿಗಳಲ್ಲಿರಿಸಿ ಅಂಜಲಿಬಂಧಂಗೈದು ಗಂಭೀರಾರ್ಥವುಳ್ಳ ಮಧುರವಾದ ವಾಕ್ಕಿನಿಂದ ಆ ಅತ್ರಿಋಷಿಯು ಸರ್ವಲೋಕಶ್ರೇಷ್ಠರಾದ ಆ ತ್ರಿಮೂರ್ತಿಗಳನ್ನು ಸ್ತುತಿಗೈಯುತ ಚರಾಚರಾತ್ಮಕವಾದ ಈ ಜಗತ್ತಿನ ಸೃಷ್ಟಿ ಸ್ಥಿತಿ ಸಂಹಾರಗಳಲ್ಲಿ ವಿಂಗಡಿಸಲ್ಪಟ್ಟ ಮಾಯಾಗುಣಗಳಾದ ರಜಸ್ಸತ್ವತಮಸ್ಸುಗಳಿಂದ ಅಭಿವ್ಯಕ್ತಗಳಾದ ದೇಹಗಳುಳ್ಳ ಬ್ರಹ್ಮ ವಿಷ್ಣು ಮಹೇಶ್ವರರೂಪರಾದ ಎಲೈ ದೇವತಾಶ್ರೇಷ್ಠರುಗಳಿರಾ, ನಿಮಗೋಸ್ಕರ ನಮಸ್ಕಾರ! ಈ ಮೂರುಮೂರ್ತಿಗಳಲ್ಲಿ ಭಗವಂತನಾದ ಯಾವ ದೇವನನ್ನು ನಾನು ಪ್ರಾರ್ಥಿಸಿ ಆಹ್ವಾನಂಗೈದೆನೊ ಆ ದೇವನನ್ನು ನೀವೇ ನಿರೂಪಿಸುವರಾಗೀ! ಎಲೈ ತ್ರಿಮೂರ್ತಿಗಳಿರಾ, ಈ ತಪೋವನದಲ್ಲಿ ಸರ್ವದೇವತಾ ಶ್ರೇಷ್ಠನಾಗಿ ಭಗವಂತನಾದ ಒಬ್ಬ ಪುರುಷನು ಪುತ್ರಾರ್ಥವಾಗಿ ನನ್ನಿಂದ ಪ್ರಾರ್ಥಿಸಲ್ಪಟ್ಟನು; ಪ್ರಾಣಿಗಳ ಮನಸ್ಸಿಗೆ ಅಗೋಚರರಾದ ನೀವು ಮೂರುಮಂದಿಯು ದಯಮಾಡಿ ಹ್ಯಾಗೆ ಬಂದಿರಿ? ಆ ಅರ್ಥವನ್ನು ನನ್ನಲ್ಲಿ ಅನುಗ್ರಹದಿಂದ ಹೇಳಬೇಕು—ಎಂದು ಪ್ರಾರ್ಥಿಸಿದನು. ಅತ್ರಿಋಷಿಯ ವಾಕ್ಯವನ್ನು ಕೇಳಿ ಆ ದೇವೋತ್ತಮರಾದ ತ್ರಿಮೂರ್ತಿಗಳು ಮಂದಹಾಸಪೂರ್ವಕವಾಗಿ ಮಧುರವಾದ ವಾಕ್ಯದಿಂದ ಆತನನ್ನು ಕುರಿತು 'ಎಲೈ ಬ್ರಾಹ್ಮಣಶ್ರೇಷ್ಠನಾದ ಅತ್ರಿಋಷಿಯೆ, ಸತ್ಯಸಂಕಲ್ಪನಾದ ನಿನ್ನ ಸಂಕಲ್ಪಕ್ಕೆ ವೈಪರಿತ್ಯವುಂಟಾಗುವದಿಲ್ಲ; ನಿನ್ನ ಸಂಕಲ್ಪವು ಹ್ಯಾಗೊ ಹಾಗೆ ಆದೀತು; ನೀನು ಯಾವ ವಸ್ತುವನ್ನು ಧ್ಯಾನಂಗೈದೆಯೊ ಆ ವಸ್ತುವೇ ನಾವು ಮೂರುಮಂದಿಯು; ನಮ್ಮ ಮೂರುಮಂದಿಗೂ ಭೇದವಿಲ್ಲ! ಎಲೈ ಅತ್ರಿಋಷಿಯೆ, ನಿನಗೆ ಶುಭವುಂಟಾಗಲಿ; ನಮ್ಮ ಅಂಶಗಳಿಂದುದ್ಭವಿಸಿದ ನಿನ್ನ ಪುತ್ರರು ಮೂರುಮಂದಿಯು ಸರ್ವಲೋಕ ಪ್ರಸಿದ್ಧರಾಗಿ ನಿನ್ನ ಕೀರ್ತಿಯನ್ನು ವಿಸ್ತರಿಸುವರು' ಎಂದು ದೇವೋತ್ತಮರಾದ ಆ ತ್ರಿಮೂರ್ತಿಗಳು ಅನಸೂಯಾ ಅತ್ರಿಋಷಿ

ಗಳಿಗೆ ಅಭೀಷ್ಟವಾದ ಪುತ್ರವರವನ್ನಿತ್ತು ಅವರಿಂದ ಚನ್ನಾಗಿ ಪೂಜಿತರಾಗಿ ದಂಪತಿಗಳು ನೋಡುತಿರುವಾಗಲೆ ಆ ಆಶ್ರಮಸ್ಥಾನದ ದೆಸೆಯಿಂದ ತಮ್ಮ ತಮ್ಮ ಲೋಕಗಳನ್ನು ಐದಿದರು! ಎಲೈ ವಿದುರನೆ, ಅನಂತರದಲ್ಲಿ ಬ್ರಹ್ಮನ ಅಂಶದಿಂದ ಚಂದ್ರನು ವಿಷ್ಣುವಿನ ಅಂಶದಿಂದ ಯೋಗಶಾಸ್ತ್ರಜ್ಞನಾದ ದತ್ತಾತ್ರೇಯನು ಪರಮೇಶ್ವರನ ಅಂಶದಿಂದ ದೂರ್ವಾಸಋಷಿಯು ಈ ಮೂರುಮಂದಿಯೂ ಅತ್ರಿಋಷೀಶ್ವರನಿಗೆ ಪುತ್ರರಾಗಿ ಜನಿಸಿದರು; ಇನ್ನು ಅಂಗಿರಸ್ಸು ಋಷೀಶ್ವರನ ಸಂತತಿಗಳನ್ನು ಕೇಳು: ಆ ಅಂಗಿರಸ್ಸೆಂಬ ಋಷಿಯ ಪತ್ನಿಯಾದ ಕರ್ದಮಪ್ರಜೇಶನ ಮೂರನೇ ಮಗಳಾದ ಶ್ರದ್ಧಾದೇವಿಯು ಸಿನೀವಾಲಿ ಕುಹೂ ರಾಕಾ ಅನುಮತಿ ಎಂಬ ನಾಲ್ವರು ಹೆಣ್ಣುಮಕ್ಕಳನ್ನು ಸ್ವಾರೋಚಿಷಮನ್ವಂತರದಲ್ಲಿ ಪ್ರಖ್ಯಾತರಾಗಿ ಪೂಜ್ಯರಾದ ಉಚಥ್ಯಋಷಿಯು ಸಾಕ್ಷಾತ್ ಬ್ರಹ್ಮನಿಷ್ಠನಾದ ಬೃಹಸ್ಪತಿಯು ಇವರೀರ್ವರು ಪುತ್ರರನ್ನು ಪಡದಳು; ಕರ್ದಮಬ್ರಹ್ಮನ ನಾಲ್ಕನೇ ಪುತ್ರಿಯಾದ ಹವಿರ್ಭುಗ್ದೇವಿಯಲ್ಲಿ ಪುಲಸ್ತ್ಯಬ್ರಹ್ಮನು ಪೂರ್ವಜನ್ಮದಲ್ಲಿ ಜಠರಾಗ್ನಿಯೆಂದು ಪ್ರಸಿದ್ಧನಾದ ಅಗಸ್ತ್ಯಮಹರ್ಷಿಯನ್ನು ಮಹಾ ತಪಸ್ವಿಯಾದ ವಿಶ್ರವಸ್ಸೆಂಬ ಋಷಿಯನ್ನೂ ಪಡದನು; ಆ ವಿಶ್ರವಸ್ಸೆಂಬ ಋಷಿಗೆ ಇಲಬಿಲಾಯೆಂಬ ಜ್ಯೇಷ್ಠಪತ್ನಿಯಲ್ಲಿ ಯಕ್ಷಾಧಿಪತಿಯಾದ ಕುಬೇರನು ಉದ್ಭವಿಸಿದನು; ಕನಿಷ್ಠಪತ್ನಿಯಾದ ಕೈಕಸಿಯಲ್ಲಿ ರಾವಣ ಕುಂಭಕರ್ಣರು ವಿಭೀಷಣನು ಈ ಮೂವರು ಪುತ್ರರು ಹುಟ್ಟಿದರು! ಎಲೈ ಬುದ್ಧಿಶಾಲಿಯಾದ ವಿದುರನೆ, ಪುಲಹಮುನೀಶ್ವರನ ಪತ್ನಿಯಾಗಿ ಕರ್ದಮನಿಗೆ ಐದನೇ ಮಗಳಾಗಿ ಪತಿವ್ರತೆಯಾದ ಮತಿದೇವಿಯಲ್ಲಿ ಕರ್ಮಜ್ಯೇಷ್ಠನು ವರೀಯಾಂಸನು ಸಹಿಷ್ಣು ಎಂಬ ಮೂರುಮಂದಿ ಪುತ್ರರು ಜನಿಸಿದರು; ಕ್ರತುಬ್ರಹ್ಮನ ಪತ್ನಿಯಾದ ಕರ್ದಮಬ್ರಹ್ಮನ ಆರನೇ ಪುತ್ರಿಯಾದ ಕ್ರಿಯಾದೇವಿಯು ಬ್ರಹ್ಮತೇಜಸ್ಸಿನಿಂದ ಪ್ರಕಾಶಮಾನರಾದ ಅರವತ್ತುಸಾವಿರ ವಾಲಖಿಲ್ಯರೆಂಬ ಪುತ್ರರನ್ನು ಪಡದಳು! ಎಲೈ ಶತೃಸಂಹಾರಕನಾದ ವಿದುರನೆ, ವಶಿಷ್ಠಪತ್ನಿಯಾದ ಕರ್ದಮನ ಏಳನೇ ಪುತ್ರಿಯಾದ ಊರ್ಜಾದೇವಿಯಲ್ಲಿ ಚಿತ್ರಕೇತು ಮೊದಲಾದ ಪರಿಶುದ್ಧರಾದ ಸಪ್ತಋಷಿಗಳು ಉದ್ಭವಿಸಿ ಚಿತ್ರಕೇತು ಸುರೋಚಿ ವಿರಜ ಮಿತ್ರ ಉಲ್ಬಣ ವಸುಭೃದ್ಯಾನ ದ್ಯುಮಂತಯೆಂಬ ನಾಮಧೇಯಗಳಿಂದ ಪ್ರಸಿದ್ಧರಾದರು; ಮತ್ತು ಶಕ್ತಿಋಷಿ ಮೊದಲಾದ ಕೆಲವು ಋಷಿಗಳು ಸಹಾ ಉದ್ಭವಿಸಿದರು; ಅಥರ್ವಬ್ರಹ್ಮಪತ್ನಿಯಾದ ಕರ್ದಮನ ಎಂಟನೇ ಪುತ್ರಿಯಾದ ಶಾಂತಿದೇವಿಯು ಧೃತವ್ರತ ದಧೀಚಿ ಅಶ್ವಶಿರಸ್ಸು ಎಂಬ ಮೂರುಮಂದಿ ಮಕ್ಕಳನ್ನು ಪಡದಳು! ಎಲೈ ವಿದುರನೆ, ಇನ್ನು ಭೃಗುವಂಶವನ್ನು ಹೇಳುತ್ತೇನೆ ಕೇಳು: ಭೃಗುಋಷೀಶ್ವರನು ಕರ್ದಮಪ್ರಜೇಶನ ಒಂಭತ್ತನೇ ಮಗಳಾಗಿ ತನ್ನ ಪತ್ನಿಯಾದ ಖ್ಯಾತಿದೇವಿಯಲ್ಲಿ ಧಾತೃ ವಿಧಾತೃ ಎಂಬ ಈರ್ವರು ಪುತ್ರರನ್ನೂ ಸಾಕ್ಷಾತ್ ಭಗವನ್ನಿಷ್ಠಳಾದ ಶ್ರೀದೇವಿಯನ್ನೂ ಪಡದನು; ಮೇರುಪರ್ವತನು ಆ ಧಾತೃ ವಿಧಾತೃಗಳೆಂಬ ಈರ್ವರಿಗೂ ಪುತ್ರಿಯರಾದ ಆಯತಿ ನಿಯತಿಗಳೆಂಬ ಕನ್ಯೆಯರನ್ನು ಕೊಟ್ಟನು; ಧಾತೃವಿನಿಂದ ಆಯತಿದೇವಿಯಲ್ಲಿ ಮೃಕಂಡುಋಷಿಯು ವಿಧಾತೃವಿನಿಂದ ನಿಯತಿದೇವಿಯಲ್ಲಿ ಪ್ರಾಣನು ಜನಿಸಿದರು; ಆ ಮೃಕಂಡುಋಷಿಗೆ ಮಾರ್ಕಂಡೇಯಋಷಿಯು ಜನಿಸಿದನು; ಪ್ರಾಣನಿಗೆ ದೇವಶಿರಸ್ಸೆಂಬ ಪುತ್ರನು ಜನಿಸಿದನು; ಪ್ರಾಣನಿಗೆ ಕವಿಯೆಂಬುವನು ಎರಡನೇ ಪುತ್ರನು; ಆ ಕವಿಗೆ ಪೂಜ್ಯನಾದ ಶುಕ್ರಾಚಾರ್ಯನೆಂಬ ಪುತ್ರನು ಜನಿಸಿದನು; ಮರೀಚಿಪ್ರಮುಖರಾದ ಈ ನವಪ್ರಜೇಶರು ತಮ್ಮ ತಮ್ಮ ಸಂತತಿಗಳಿಂದ ಲೋಕವನ್ನು ವೃದ್ಧಿಯನ್ನೈದಿಸಿದರು! ಎಲೈ ವಿದುರನೆ, ಶ್ರದ್ಧಾವಂತನಾಗಿ ಕೇಳುವ ಪುರುಷನಿಗೆ ಸಕಲ ಪಾಪಪರಿಹಾರಕವಾಗಿ ಉತ್ಕೃಷ್ಟವಾದ ಕರ್ದಮ ಪ್ರಜೇಶ್ವರನ ದೌಹಿತ್ರ ಸಂತತಿಯು ನಿನಗೆ ಹೇಳಲ್ಪಟ್ಟಿತು! ಆ ಬಳಿಕ ಸ್ವಾಯಂಭುವಮನುವಿನ ಮೂರನೇ ಪುತ್ರಿಯಾದ ಪ್ರಸೂತಿದೇವಿಯನ್ನು ಬ್ರಹ್ಮಪುತ್ರನಾದ ದಕ್ಷಪ್ರಜೇಶನು ವಿವಾಹಮಾಡಿಕೊಂಡು ಆ ಪ್ರಸೂತಿದೇವಿಯಲ್ಲಿ ಹೊಳೆಯುತಲಿರುವ ನೇತ್ರಗಳುಳ್ಳ ಹದಿನಾರುಮಂದಿ ಪುತ್ರಿಯರನ್ನು ಪಡದನು; ಧರ್ಮಪುರುಷನಿಗೆ ಹದಿಮೂರುಮಂದಿ ಪುತ್ರಿಯರನ್ನು ಯಜ್ಞೇಶ್ವರನಿಗೆ ಒಬ್ಬ ಮಗಳನ್ನು ಕೊಟ್ಟನು; ಮಿಳಿತರಾದ ಪಿತೃದೇವತೆಗಳಿಗೆ ಒಬ್ಬ ಪುತ್ರಿಯನ್ನು ಕೊಟ್ಟನು; ಉಪಾಸಕರ ಸಂಸಾರಪರಿಹಾರಕನಾದ ಶ್ರೀ ಪರಮೇಶ್ವರನಿಗೆ ಒಬ್ಬ ಪುತ್ರಿಯನ್ನು ಕೊಟ್ಟನು; ಶ್ರದ್ಧೆಯು ಮೈತ್ರಿಯು ದಯೆಯು ಶಾಂತಿಯು ತುಷ್ಟಿಯು ಪುಷ್ಟಿಯು ಕ್ರಿಯೆಯು ಉನ್ನತಿಯು

ಬುದ್ಧಿಯು ಮೇಧೆಯು ತಿತಿಕ್ಷೆಯು ಹ್ರೀದೇವಿಯು ಮೂರ್ತಿಯು ಈ ಹದಿಮೂರು ಮಂದಿಯು ಧರ್ಮಪುರುಷನ ಪತ್ನಿಯರಾದರು; ಶ್ರದ್ಧಾದೇವಿಯು ಶುಭನನ್ನು ಮೈತ್ರಿಯು ಪ್ರಸಾದನನ್ನು ದಯೆಯು ಅಭಯನನ್ನು ಶಾಂತಿಯು ಸುಖನನ್ನು ತುಷ್ಟಿಯು ಸಂತೋಷನನ್ನು ಪುಷ್ಟಿಯು ಸ್ಮಯನನ್ನು ಕ್ರಿಯೆಯು ಯೋಗನನ್ನು ಉನ್ನತಿಯು ದರ್ಪನನ್ನು ಬುದ್ಧಿಯು ಅರ್ಥನನ್ನು ಮೇಧೆಯು ಸ್ಮೃತಿಯನ್ನು ತಿತಿಕ್ಷೆಯು ಕ್ಷೇಮನನ್ನು ಹ್ರೀದೇವಿಯು ವಿನಯನನ್ನು ಮೂರ್ತಿಯು ಸರ್ವಗುಣಗಳಿಗೂ ಉತ್ಪತ್ತಿಸ್ಥಾನರಾದ ನರನಾರಾಯಣ ಋಷಿಗಳನ್ನು ಕ್ರಮವಾಗಿ ಪಡೆದರು; ಆ ನರನಾರಾಯಣರ ಆವಿರ್ಭಾವಕಾಲದಲ್ಲಿ ಈ ಸಮಸ್ತ ಪ್ರಪಂಚವು ಸುಖವುಳ್ಳದ್ದಾಗಿ ಪ್ರಸನ್ನವಾದ ಮನಸ್ಸುಳ್ಳದ್ದಾಗಿ ಸಂತೋಷಪಟ್ಟಿತು; ಸಮಸ್ತ ಪ್ರಾಣಿಗಳ ಮನಸ್ಸುಗಳು ಸರ್ವದಿಕ್ಕುಗಳು ಮಂದಮಾರುತಗಳು ನದಿಗಳು ಮತ್ತು ಸಮುದ್ರಗಳು ಪ್ರಸನ್ನಗಳಾದವು; ಅಂತರಿಕ್ಷದಲ್ಲಿ ವಾದ್ಯಗಳು ಧ್ವನಿಗೈದವು; ಪುಷ್ಪವೃಷ್ಟಿಗಳಾದವು; ಸಂತುಷ್ಟರಾದ ಮುನಿಗಳು ಸ್ತುತಿಗೈದರು; ಗಂಧರ್ವ ಕಿನ್ನರರು ಗಾನಗೈದರು; ದೇವತಾ ಸ್ತ್ರೀಯರು ನರ್ತನಗೈದರು; ಈರೀತಿ ಸಮಸ್ತ ಮಂಗಳಕರವಾಗಿ ಬ್ರಹ್ಮಾದಿ ದೇವತೆಗಳೆಲ್ಲರು ಸ್ತುತಿವಾಕ್ಯಗಳಿಂದ ಆ ನರನಾರಾಯಣ ಋಷಿಗಳನ್ನು ಎದುರುಗೊಂಡರು! ಯಾವ ಭಗವಂತನು ಸ್ವಕೀಯವಾದ ಮಾಯೆಯಿಂದ ಗಗನದಲ್ಲಿ ಗಂಧರ್ವ ನಗರದಂತೆ ತನ್ನಲ್ಲಿ ಕಲ್ಪಿಸಲ್ಪಟ್ಟ ಈ ಸಮಸ್ತ ಪ್ರಪಂಚವನ್ನು ಪ್ರಕಾಶಗೈಯಲೋಸುಗ ಏತಾದೃಶವಾದ ನರನಾರಾಯಣ ರೂಪದಿಂದ ಧರ್ಮಪುರುಷನ ಕ್ಷೇತ್ರವಾದ ಮೂರ್ತಿದೇವಿಯಲ್ಲಿ ಅವತಾರಗೈದನೋ ಅಂಥಾ ಪರಮಪುರುಷನಿಗೋಸ್ಕರ ನಮಸ್ಕಾರವು! ಶಾಸ್ತ್ರಪ್ರಮಾಣದಿಂದ ತಿಳಿಯಲು ಯೋಗ್ಯನಾದ ನಿಜಸ್ವರೂಪವುಳ್ಳ ಆ ಪರಮಾತ್ಮನು ಜಗತ್ಸಂರಕ್ಷಣೆಗೆ ಪ್ರತಿಕೂಲರಾದ ದುಷ್ಟರನ್ನು ನಿಗ್ರಹಿಸಲೋಸುಗ ಸತ್ವಗುಣದಿಂದ ಸೃಷ್ಟಿಸಲ್ಪಟ್ಟ ದೇವತೆಗಳಾದ ನಮ್ಮನ್ನು ಲಕ್ಷ್ಮೀದೇವಿಗೆ ಆವಾಸಸ್ಥಾನರೂಪವಾಗಿ ನಿರ್ಮಲವಾಗಿ ಕಮಲಕಾಂತಿಯನ್ನು ತಿರಸ್ಕಾರಗೈಯುವವಾಗಿ ಕರುಣಾಪೂರ್ಣವಾಗಿರುವ ನೇತ್ರಗಳಿಂದ ನೋಡಲಿ! ಎಲೈ ವಿದುರನೆ, ಈಪ್ರಕಾರವಾಗಿ ದರ್ಶನವನ್ನು ಪಡೆದಿರುವ ದೇವಸಮೂಹಗಳಿಂದ ಸ್ತುತಿಗೈಯಲ್ಪಟ್ಟ ಮತ್ತು ಪೂಜಿಸಲ್ಪಟ್ಟ ಭಗವಂತರಾದ ನರನಾರಾಯಣ ಋಷಿಗಳು ದೇವತೆಗಳಿಂದ ಪೂಜಿತರಾಗಿ ಗಂಧಮಾದನ ಪರ್ವತವನ್ನೈದಿದರು; ಭಗವದಂಶಭೂತರಾದ ಆ ಯಿರ್ವರು ಋಷಿಗಳು ಭೂಭಾರಪರಿಹಾರಾರ್ಥವಾಗಿ ಭೂಲೋಕದಲ್ಲಿ ಅವತರಿಸಿದರು; ನಾರಾಯಣಋಷಿಯು ಯದುಕುಲದಲ್ಲಿ ಶ್ರೀಕೃಷ್ಣನಾಗಿ ಅವತರಿಸಿದನು; ನರಋಷಿಯು ಕುರುಕುಲದಲ್ಲಿ ಅರ್ಜುನನಾಗಿ ಅವತರಿಸಿದನು; ಅಗ್ನಿಪತ್ನಿಯಾದ ಸ್ವಾಹಾದೇವಿಯು ಅಗ್ನ್ಯಭಿಮಾನಿಗಳಾದ ಪಾವಕ ಪವಮಾನ ಶುಚಿಗಳೆಂಬ ಹೆಸರುಗಳುಳ್ಳ ಆಹುತಿಯನ್ನು ಭೋಜನಗೈವ ಮೂರುಮಂದಿ ಮಕ್ಕಳನ್ನು ಪಡೆದಳು; ಆ ಅಗ್ನಿತ್ರಯದದೆಸೆಯಿಂದ ನಾಲ್ವತ್ತೈದು ಅಗ್ನಿಗಳುದ್ಭವಿಸಿದರು; ಆ ಅಗ್ನಿಗಳು ಮುವ್ವರು ಪಿತೃಗಳಿಂದಲೂ ಒಬ್ಬ ಪಿತಾಮಹನಿಂದಲೂ ನಾಲ್ವತ್ತೊಂಭತ್ತು ಅಗ್ನಿಗಳಾದರು; ಯಜ್ಞಕರ್ಮಗಳಲ್ಲಿ ಅಗ್ನಿಗಳ ನಾಮಗಳಿಂದ ಬ್ರಹ್ಮವೇತ್ತೃಗಳಾದ ಬ್ರಾಹ್ಮಣರಿಂದ ಅಗ್ನಿದೇವತಾಕವಾದ ಇಷ್ಟಿಗಳು ಮಾಡಲ್ಪಡುವವೋ ಅವರೇ ಈ ಅಗ್ನಿಗಳು; ಅಗ್ನಿಷ್ವಾತ್ತರು ಬರ್ಹಿಷದರು ಸೋಮಪಾನಾರ್ಹರಾದ ಸೌಮ್ಯರು ಆಜ್ಯಪರು ಎಂದು ಪಿತೃದೇವತೆಗಳು ನಾಲ್ಕುಪ್ರಕಾರನಾಗಿರುವರು; ಇವರಲ್ಲಿ ಯಾರಿಗೆ ಅಗ್ನಿಕರಣವೆಂಬ ವಿಧಿಯುಂಟೋ ಅವರು ಸಾಗ್ನಿಗಳು; ಯಾರಿಗೆ ಅಗ್ನಿಕರಣ ವಿಧಿಯಿಲ್ಲವೋ ಅವರು ಅನಗ್ನಿಗಳು; ಅಂಥಾ ಪಿತೃದೇವತೆಗಳ ಪತ್ನಿಯೂ ದಕ್ಷಪುತ್ರಿಯೂ ಆದ ಸ್ವಧಾದೇವಿಯು ಆ ಪಿತೃದೇವತೆಗಳ ದೆಸೆಯಿಂದ ಬ್ರಹ್ಮವಿಚಾರಪರರಾಗಿ ಶಾಸ್ತ್ರಜನ್ಯಜ್ಞಾನ ಅನುಭವಜನ್ಯಜ್ಞಾನ ಪಾರಂಗತರಾದ ವಯುನಾದೇವಿ ಧಾರಿಣೀದೇವಿಯರೆಂಬ ಈರ್ವರು ಕನ್ಯೆಯರನ್ನು ಪಡೆದಳು; ಪರಮೇಶ್ವರನ ಪತ್ನಿಯಾದ ಸತೀದೇವಿಯು ಗುಣಗಳಿಂದಲೂ ಸ್ವಭಾವದಿಂದಲೂ ತನಗೆ ಅನುರೂಪನಾದ ಪರಮೇಶ್ವರನನ್ನು ಅನುವರ್ತಿಸಿಕೊಂಡಿರುವಳಾದಾಗ್ಯೂ ಪುತ್ರರನ್ನು ಪಡೆಯಲಿಲ್ಲ! ಎಲೈ ಅರಸೆ, ತನಗೆ ತಂದೆಯಾಗಿ ಅನುರೂಪನಲ್ಲದಿರುವ ದಕ್ಷಪ್ರಜೇಶನು ನಿರಪರಾಧಿಯಾದ ಶ್ರೀ ಪರಮೇಶ್ವರನಿಗೆ ಪ್ರತಿಕೂಲನಾಗುತಿರಲು ಸತೀದೇವಿಯು ರೋಷದಿಂದ ಯೋಗವನ್ನಾಶ್ರಯಿಸಿ ಅಪ್ರಾಪ್ತೆಯಾದ ಸ್ತ್ರೀಯಂತೆ ತನ್ನ ದೇಹವನ್ನು ತ್ಯಾಗಗೈದಳು."

೨ನೇ ಅಧ್ಯಾಯ.

ಪರಮೇಶ್ವರ ದಕ್ಷರಿಗೆ ವೈರಕ್ಕೆ ಕಾರಣವಾದ ಪ್ರಜೇಶ್ವರ ಯಜ್ಞವು.

“ಎಲೈ ಪರೀಕ್ಷಿದ್ರಾಯನೆ, ಆ ಬಳಿಕ ವಿದುರನು ಮೈತ್ರೇಯಋಷಿಯನ್ನು ಕುರಿತು—ಎಲೈ ಮೈತ್ರೇಯಋಷಿಯೆ, ಪುತ್ರವತ್ಸಲನಾದ ದಕ್ಷಪ್ರಜೇಶನು ಪ್ರೇಮಾಸ್ಪದಳಾಗಿ ಪುತ್ರಿಯಾದ ಸತೀದೇವಿಯನ್ನು ನೋಡದೆ ಸಚ್ಚರಿತ್ರೆಯುಳ್ಳವರೊಳಗೆ ಶ್ರೇಷ್ಠನಾದ ಪರಮೇಶ್ವರನಲ್ಲಿ ಏನುಕಾರಣ ದ್ವೇಷವನ್ನು ಮಾಡಿದನು? ಸ್ಥಾವರಜಂಗಮಾತ್ಮಕವಾದ ಸಮಸ್ತಪ್ರಪಂಚಕ್ಕೂ ಗುರುರೂಪನಾಗಿ ಸರ್ವಭೂತಗಳಲ್ಲಿಯೂ ನಿರ್ವೈರನಾಗಿ ಶಾಂತಿರೂಪವಾದ ದೇಹವುಳ್ಳ ಆತ್ಮಾರಾಮನಾಗಿ ಜಗತ್ತಿಗೆ ಮಹಾದೇವನಾದ ಪರಮೇಶ್ವರನನ್ನು ಯಾವ ಪುರುಷನಾದಾಗ್ಯೂ ದ್ವೇಷಿಶ್ಯಾನೆ! ಎಲೈ ಬ್ರಾಹ್ಮಣೋತ್ತಮನಾದ ಋಷಿಯೆ, ಅಳಿಯನಾದ ಪರಮೇಶ್ವರನಿಗೂ ಮಾವನಾದ ದಕ್ಷಪ್ರಜೇಶನಿಗೂ ಯಾವನಿಮಿತ್ತವಾಗಿ ದ್ವೇಷವುಂಟಾಯಿತು? ಯಾವ ದ್ವೇಷನಿಮಿತ್ತವಾಗಿ ಸತೀದೇವಿಯು ತ್ಯಾಗಂಗೈಯಲಶಕ್ಯಗಳಾದ ಪ್ರಾಣಗಳನ್ನು ತ್ಯಜಿಸಿದಳು?'' ಎಂದು ಕೇಳಿದನು.

ಆ ವಾಕ್ಯವನ್ನು ಕೇಳಿ ಮೈತ್ರೇಯಋಷಿಯು “ಎಲೈ ವಿದುರನೆ, ಪೂರ್ವದಲ್ಲಿ ದಕ್ಷಪ್ರಜೇಶ್ವರನ ಸತ್ರಯಾಗದಲ್ಲಿ ಮಹರ್ಷಿಗಳು ಸಪರಿವಾರರಾದ ದೇವತೆಗಳು ಮನನಶೀಲರಾದ ಮುನಿಗಳು ಅಗ್ನಿಗಳು ಇವರೆಲ್ಲರೂ ಬಂದರು; ಆ ಸ್ಥಳದಲ್ಲಿ ಸಾಕ್ಷಾತ್ ಸೂರ್ಯನಂತೆ ಮಹಾ ತೇಜಸ್ಸಿನಿಂದ ಪ್ರಕಾಶಿಸುವವನಾಗಿ ಆ ಮಹಾಸಭೆಯನ್ನು ಅಂಧಕಾರಶೂನ್ಯವಾದದ್ದನ್ನಾಗಿ ಮಾಡುತ ಯಜ್ಞಶಾಲೆಯನ್ನು ಪ್ರವೇಶಿಸಿದ ದಕ್ಷಪ್ರಜೇಶನನ್ನು ನೋಡಿ ಸಮಸ್ತಋಷಿಗಳೂ ಅಗ್ನಿಗಳೊಡನೆ ಸಹಿತರಾಗಿ ತಮ್ಮ ತಮ್ಮ ಪೀಠಗಳನ್ನು ಬಿಟ್ಟು ಎದ್ದವರಾದರು; ಬ್ರಹ್ಮನು ಪರಮೇಶ್ವರನು ಇವರೀರ್ವರೂ ಏಳಲಿಲ್ಲ; ಪೂಜ್ಯನಾದ ದಕ್ಷಪ್ರಜೇಶನು ಆ ಸಭೆಯಲ್ಲಿ ಪ್ರಮುಖರಾದ ಮಹರ್ಷಿಗಳಿಂದ ಸತ್ಕೃತನಾಗಿ ಲೋಕಗುರುವಾದ ಬ್ರಹ್ಮನನ್ನು ನಮಸ್ಕರಿಸಿ ಆತನ ಅನುಜ್ಞೆಯಿಂದ ಪೀಠದಲ್ಲಿ ಕುಳಿತನು; ದಕ್ಷನು ಪ್ರಥಮದಲ್ಲೇ ಕುಳಿತಿರುವ ಪರಮೇಶ್ವರನನ್ನು ನೋಡಿ ಆತನಿಂದ ಪ್ರತ್ಯುತ್ಥಾನಾದಿಗಳಿಂದ ಸತ್ಕಾರವನ್ನು ಪಡೆಯದಿರುವನಾಗಿ ಸಹಿಸದೆ ಕ್ರೂರದೃಷ್ಟಿಗಳಿಂದ ದಹಿಸುವನಂತೆ ವಕ್ರವಾಗಿ ಪರಮೇಶ್ವರನನ್ನು ನೋಡುತ—ಎಲೈ ಬ್ರಹ್ಮರ್ಷಿಗಳಿರಾ—ಎಲೈ ದೇವತೆಗಳಿರಾ—ಎಲೈ ಅಗ್ನಿಗಳಿರಾ—ನೀವೆಲ್ಲರು ಕೇಳಿ; ನಾನು ಅಜ್ಞಾನದಿಂದಲೂ ಮತ್ಸರದಿಂದಲೂ ಹೇಳುವದಿಲ್ಲ; ಸತ್ಪುರುಷರ ಚರಿತ್ರವನ್ನು ಹೇಳುತ್ತೇನೆ; ಲೋಕಪಾಲಕರ ಕೀರ್ತಿಯನ್ನು ನಾಶಂಗೈವ ನಿರ್ಲಜ್ಜನಾದ ಈ ರುದ್ರನು ಸ್ತಬ್ಧನಾಗಿ ಮಹಾತ್ಮರಿಂದ ಆಚರಿಸಲ್ಪಡುವ ಸನ್ಮಾರ್ಗವನ್ನು ಹೋಗಲಾಡಿಸಿದನು; ಇವನು ನನ್ನ ಶಿಷ್ಯಭಾವವನ್ನು ಪಡೆದು ಸಜ್ಜನನಂತೆ ನಟನಂಗೈಯುವವನಾಗಿ ಬ್ರಾಹ್ಮಣರು ಅಗ್ನಿಗಳು ಇವರ ಸಮಕ್ಷಮದಲ್ಲಿ ಸಾಕ್ಷಾತ್ಸಾವಿತ್ರೀದೇವಿಗೆ ಸಮಾನಳಾಗಿ ನನ್ನ ಪುತ್ರಿಯಾದ ಸತೀದೇವಿಯನ್ನು ಪಾಣಿಗ್ರಹಣ ಮಾಡಿದನು; ಪ್ರತ್ಯುತ್ಥಾನಾಭಿವಾದನಂಗಳಿಗೆ ಯೋಗ್ಯನಾದ ನನ್ನಲ್ಲಿ ವಾಙ್ಮಾತ್ರದಿಂದಲೂ ಸತ್ಕಾರವನ್ನು ಮಾಡಲಿಲ್ಲ; ಸತ್ಕ್ರಿಯೆಗಳನ್ನು ಲೋಪಂಗೈಯುವವನಾಗಿ ಅಶುಚಿರೂಪನಾಗಿ ದುರಭಿಮಾನಿಯಾಗಿ ಮರ್ಯಾದೆಗಳನ್ನು ಕೆಡಿಸುವವನಾಗಿರುವ ಇವನಿಗೆ ಕನ್ಯೆಯನ್ನು ಕೊಡುವದಕ್ಕೆ ಇಚ್ಛೆಯಿಲ್ಲದವನಾದಾಗ್ಯೂ ಶೂದ್ರನಿಗೆ ವೇದವಾಕ್ಯನಂತೆ ಪುತ್ರಿಯನ್ನು ಕೊಟ್ಟೆನು; ಈ ರುದ್ರನು ಸ್ಮಶಾನದಲ್ಲಿ ಭಯಂಕರರಾದ ಪ್ರೇತರಿಂದಲೂ ಭೂತಸಮೂಹಗಳಿಂದಲೂ ಪರಿವೃತನಾಗಿ ದಿಗಂಬರನಾಗಿ ಚದರಿದ ಕೇಶಗಳುಳ್ಳವನಾಗಿ ನಗುವವನಾಗಿ ರೋದನಂಗೈವವನಾಗಿ ಉನ್ಮತ್ತನಂತೆ ಸಂಚರಿಸುತ್ತಾನೆ; ಚಿತಿಯ ಭಸ್ಮದಿಂದ ಸ್ನಾನವನ್ನು ಮಾಡುವವನಾಗಿ ಪ್ರೇತಗಳಿಗೆ ಅರ್ಪಿಸಲ್ಪಟ್ಟ ಪುಷ್ಪಮಾಲೆಗಳನ್ನು ಧರಿಸುವವನಾಗಿ ಮನುಷ್ಯರ ಅಸ್ಥಿಗಳನ್ನು ಆಭರಣಗಳನ್ನಾಗಿ ಧರಿಸಿದವನಾಗಿ ಅಮಂಗಳರೂಪನಾದಾಗ್ಯೂ ಶಿವನೆಂಬ ಹೆಸರುಮಾತ್ರವುಳ್ಳವನಾಗಿ ಮತ್ತನಾಗಿ ಮತ್ತರಾದ ಜನರಿಗೆ ಪ್ರಿಯನಾಗಿರುವನು; ಕೇವಲ ತಮೋಗುಣಮಾತ್ರವೆ ಸ್ವಭಾವವುಳ್ಳ ಪ್ರಮಥ ಭೂತಗಳಿಗೆ ಅಧಿಪತಿಯಾಗಿ ಉನ್ಮಾದನಾಮಕಗಳಾದ ಭೂತವಿಶೇಷಗಳಿಗೆ ನಾಥನಾಗಿ ನಷ್ಟನಾದ ಶುಚಿಭಾವವುಳ್ಳ ದುಷ್ಟಚಿತ್ತನಾದ ಈ ರುದ್ರನಿಗೆ ನಾನು ಬ್ರಹ್ಮನ ಪ್ರೇರಣೆಯಾದ್ದರಿಂದ

ಪತಿವ್ರತೆಯಾದ ನನ್ನ ಪುತ್ರಿಯನ್ನಿತ್ತೆನು—ಎಂದು ಕೋಪಿಷ್ಠನಾದ ದಕ್ಷನು ಪ್ರತಿಕೂಲನಲ್ಲದೆ ಸ್ವಸ್ಥಚಿತ್ತನಾಗಿ ಕುಳಿತಿರುವ ಪರಮೇಶ್ವರನನ್ನು ನಿಂದಿಸಿ ಉದಕಾಚಮನಂಗೈದು ಆ ಪರಮೇಶ್ವರನನ್ನು ಶಪಿಸಲೋಸುಗ ಉಪಕ್ರಮಂಗೈಯುತ ದೇವಸಮೂಹಗಳಲ್ಲಿ ಅಧಮನಾದ ಈ ರುದ್ರನು ದೇವಯಾಗಸಮಯದಲ್ಲಿ ಇಂದ್ರ ಉಪೇಂದ್ರ ಮೊದಲಾದ ದೇವತೆಗಳೊಡನೆ ಯಜ್ಞಭಾಗವನ್ನು ಪಡೆಯಬೇಡ! ಎಲೈ ವಿದುರನೆ, ಸಭಾಸ್ಥರಾದ ಮಹರ್ಷಿಗಳಿಂದ ಬೇಡವೆಂದು ತಡೆಯಲ್ಪಟ್ಟವನಾದಾಗ್ಯೂ ಕೇಳದೆ ದಕ್ಷನು ಪರಮೇಶ್ವರನಿಗೆ ಶಾಪವನ್ನಿತ್ತು ಮಹಾ ಕೋಪಯುಕ್ತನಾಗಿ ಆ ಸಭಾಸ್ಥಾನದ ದೆಸೆಯಿಂದ ಎದ್ದು ತನ್ನ ಮನೆಗೆ ತೆರಳಿಹೋದನು! ಆಗ ಪರಮೇಶ್ವರನ ಅನುಚರರ ಮಧ್ಯದಲ್ಲಿ ಮುಖ್ಯನಾದ ನಂದೀಶ್ವರನು ಪರಮೇಶ್ವರನಿಗೆ ದಕ್ಷನಿಂದ ಕೊಡಲ್ಪಟ್ಟ ಶಾಪವನ್ನು ತಿಳಿದು ಕೋಪದಿಂದ ಕೆಂಪಾದ ನೇತ್ರಗಳುಳ್ಳವನಾಗಿ ದಕ್ಷನಿಗೂ ಆತನಿಂದ ಮಾಡಲ್ಪಟ್ಟ ಶಿವನಿಂದೆಯನ್ನು ಅನುಮೋದಂಗೈದ ಬ್ರಾಹ್ಮಣರಿಗೂ ಕ್ರೂರವಾದ ಶಾಪವನ್ನು ಪ್ರಯೋಗಿಸಿದನು! ಅಜ್ಞನಾಗಿ ಭೇದದೃಷ್ಟಿಯುಳ್ಳ ದಕ್ಷನು ಮರಣಧರ್ಮವುಳ್ಳ ತನ್ನ ಶರೀರದಲ್ಲಿ ಶ್ರೇಷ್ಠವೆಂಬ ಬುದ್ಧಿಯನ್ನು ಮಾಡಿಕೊಂಡು ಸಾಕ್ಷಾತ್ ಭಗವಂತನಾಗಿ ಪ್ರತಿದ್ರೋಹವನ್ನಾಚರಿಸದಿರುವ ಪರಮೇಶ್ವರನ ವಿಷಯದಲ್ಲಿ ದ್ರೋಹವನ್ನು ಮಾಡಿದ ದಕ್ಷನು ತತ್ವಸ್ವರೂಪವಿಮುಖನಾಗಲಿ! ಇಷ್ಟಮಾತ್ರವೇ ಅಲ್ಲ; ಈ ದಕ್ಷನು ಕಪಟಧರ್ಮಗಳುಳ್ಳ ಗೃಹಗಳಲ್ಲಿ ತುಚ್ಛಗಳಾದ ವಿಷಯಸುಖಗಳಲ್ಲಿ ಆಸಕ್ತನಾಗಿ ಕಾಮ್ಯಫಲಪ್ರತಿಪಾದಕಗಳಾದ ವೇದವಾದಗಳಲ್ಲಿ ಉಂಟಾದ ಭ್ರಾಂತಿಯಿಂದ ನಷ್ಟವಾದ ಜ್ಞಾನವುಳ್ಳವನಾಗಿ ಕರ್ಮಗಳಲ್ಲಿ ಮೋಹಿತನಾಗಿ ದೇಹದಲ್ಲಿ ಆತ್ಮಭಾವವನ್ನು ತಿಳಿಯುವ ಬುದ್ಧಿಯಿಂದ ಮರೆಯಲ್ಪಟ್ಟ ಸ್ವಸ್ವರೂಪವುಳ್ಳವನಾಗಿ ಪಶುಸಮಾನನಾಗಿ ಸ್ತ್ರೀವ್ಯಾಮೋಹಪರವಶನಾಗಿ ಶೀಘ್ರದಲ್ಲಿ ಆಡಿನ ಮುಖವುಳ್ಳವನಾಗಿ ಕರ್ಮಮಯವಾದ ಅವಿದ್ಯೆಯಲ್ಲಿ ವಿದ್ಯೆಯೆಂಬ ಬುದ್ಧಿಯುಳ್ಳವನಾದಕಾರಣ ಈ ದಕ್ಷನು ಆಡಿನ ಸ್ವರೂಪವುಳ್ಳವನಾಗಲಿ—ಎಂದು ಶಾಪವನ್ನಿತ್ತು ತದನುಸಾರಿಗಳಾದ ಬ್ರಾಹ್ಮಣರಿಗೂ ಶಾಪವನ್ನಿತ್ತನು! ಪರಮೇಶ್ವರಾವಮಾನವನ್ನು ಮಾಡಿದ ದಕ್ಷನ ಅನುಸಾರಿಗಳಾದ ಯಾವ ಬ್ರಾಹ್ಮಣರುಂಟೋ ಅವರು ಜನನ ಮರಣ ಪ್ರವಾಹರೂಪವಾದ ಸಂಸಾರದಲ್ಲಿ ಬಿದ್ದು ತೊಳಲುವವರಾಗಲಿ; ಮತ್ತು ಪರಮೇಶ್ವರ ದ್ವೇಷಿಗಳಾದವರು ಅರ್ಥವಾದ ರೂಪಗಳಾಗಿ ಕಾಮ್ಯಫಲ ಪ್ರತಿಪಾದಕಗಳಾದ ವೇದವಾಕ್ಯಗಳ ಸಂಬಂಧಿಗಳಾಗಿ ಚಿತ್ತಮೋಹಕಗಳಾದ ಸ್ವರ್ಗಾದಿ ಫಲಶ್ರವಣಗಳಿಂದ ಮೋಹಿತಚಿತ್ತರಾಗಿ ಕರ್ಮಾಸಕ್ತರಾಗಲಿ! ಇಷ್ಟಮಾತ್ರವೇ ಅಲ್ಲ; ಶಿವದ್ರೋಹಿಗಳಾದ ಈ ಬ್ರಾಹ್ಮಣರು ಭಕ್ಷ್ಯಾಭಕ್ಷ್ಯ ವಿಚಾರರಹಿತರಾಗಿ ಜೀವನಕ್ಕೋಸ್ಕರ ವಿದ್ಯಾ ತಪೋ ವ್ರತಗಳನ್ನು ಆಚರಿಸುವವರಾಗಿ ಧನವು ದೇಹವು ಇಂದ್ರಿಯಗಳು ಇವುಗಳಲ್ಲಿ ಅತ್ಯಂತಾಸಕ್ತರಾಗಿ ಯಾಚಕರಾಗಿ ಸಂಚರಿಸಲಿ—ಎಂದು ಬ್ರಾಹ್ಮಣ ಸಮೂಹಕ್ಕೆ ಶಾಪೋಕ್ತಿಗಳನ್ನು ಹೇಳುತ್ತಿರುವ ನಂದೀಶ್ವರನ ವಾಕ್ಯವನ್ನು ಕೇಳಿ ಭೃಗುಋಷಿಯು ಅನಿವಾರ್ಯವಾದ ಪ್ರತಿಶಾಪವನ್ನಿತ್ತನು! ಯಾವ ಬ್ರಾಹ್ಮಣರು ಶೈವದೀಕ್ಷಾಪೂರ್ವಕವಾದ ಶಿವವ್ರತವನ್ನಾಚರಿಸುತ್ತಾರೆಯೋ ಅವರು ಸಚ್ಛಾಸ್ತ್ರ ದ್ವೇಷಿಗಳಾಗಿ ಪಾಷಂಡಿಗಳಾಗಿ ನಷ್ಟವಾದ ಶುಚಿತ್ವವುಳ್ಳವರಾಗಿ ಮೂಢಬುದ್ಧಿಯುಳ್ಳವರಾಗಿ ಜಡೆಗಳನ್ನು ಭಸ್ಮವನ್ನು ಅಸ್ಥಿಗಳನ್ನು ಧರಿಸುವವರಾಗಿ ಗೌಡಿ ಮಾಧ್ವಿ ಪೈಷ್ಟಿ ಎಂಬ ಮೂರುವಿಧವುಳ್ಳ ಸುರೆಯು ವೃಕ್ಷಾದಿಜನ್ಯವಾದ ಮದ್ಯವು ಪೂಜಾಸಾಧನವಾಗುಳ್ಳ ಶಿವದೀಕ್ಷೆಯಲ್ಲಿ ಪ್ರವೇಶಿಸಲಿ; ಮತ್ತು ಸರ್ವಜನರ ವರ್ಣಾಶ್ರಮಾಚಾರಗಳಿಗೆ ನಿಯಾಮಕವಾಗಿ ಧರ್ಮಾಧರ್ಮ ವ್ಯವಸ್ಥಾಪಕವಾದ ವೇದವನ್ನು ತದನುಸಾರಿಗಳಾದ ಬ್ರಾಹ್ಮಣರನ್ನು ಯಾವಕಾರಣ ನಿಂದಿಸುತ್ತೀರೋ ಅದುಕಾರಣ ನೀವು ಕೇವಲ ಪಾಷಂಡಮತಾವಲಂಬಿಗಳಾಗಿ ಪೂರ್ವಿಕರಾದ ಋಷಿಗಳು ಯಾವ ವೇದಮಾರ್ಗವನ್ನು ಅನುವರ್ತಿಸುವರೋ ಯಾವ ವೇದಮಾರ್ಗದಲ್ಲಿ ಸಾಕ್ಷಾತ್ ನಾರಾಯಣನೇ ಪ್ರಮಾಣರೂಪನೋ ಅಂಥಾ ಈ ವೇದಮಾರ್ಗವೇ ಲೋಕಗಳಿಗೆ ಶುಭಕರವಾದ ಮಾರ್ಗವು; ಇದೇ ಅನಾದಿಸಿದ್ಧವಾಗಿ ಪರಬ್ರಹ್ಮರೂಪವಾಗಿ ಶುದ್ಧವಾಗಿ ಶಾಶ್ವತವಾಗಿ ಸತ್ಪುರುಷರ ಉತ್ತಮಗತಿಗೆ ಮಾರ್ಗರೂಪವಾದ ವೇದವನ್ನು ನಿಂದಿಸಿದವರಾಗಿ ತಮೋಗುಣಪ್ರಧಾನಗಳಾದ ಭೂತಗಳಿಗೆ ಪತಿಯಾದ ರುದ್ರನು ಯಾವ ಮತದಲ್ಲಿ ಪೂಜ್ಯನಾದ ದೈವವೋ ಅಂಥಾ ಪಾಷಂಡಮತವನ್ನು ಪಡೆಯಿರಿ! ಎಲೈ ವಿದುರನೆ, ಈಪ್ರಕಾರವಾಗಿ ಭೃಗುಋಷಿಯು ಶಾಪೋಕ್ತಿಗಳನ್ನು ಪೇಳು

ತಿರಲಾಗಿ ಭಗವಂತನಾದ ಶ್ರೀ ಪರಮೇಶ್ವರನು ಪರಸ್ಪರ ಶಾಪದಿಂದ ಉಭಯರೂ ಭ್ರಷ್ಟರಾಗುತ್ತಾರೆಂದು ವ್ಯಸನವುಳ್ಳವನಂತೆ ಸಪರಿವಾರನಾಗಿ ಆಸ್ಥಾನವನ್ನು ಬಿಟ್ಟು ಎದ್ದು ಹೊರಟುಹೋದನು! ಎಲೈ ವಿದುರನೆ, ಯಾವ ಸತ್ರಯಾಗದಲ್ಲಿ ಸರ್ವೇಶ್ವರನಾದ ಶ್ರೀ ನಾರಾಯಣನು ಆರಾಧ್ಯನೋ ಅಂಥಾ ಸಹಸ್ರ ಸಂವತ್ಸರಕಾಲ ಸಾಧ್ಯವಾದ ಸತ್ರಯಾಗವನ್ನು ನೆರವೇರಿಸಿ ಪ್ರಜೇಶರು ಗಂಗಾ ಯಮುನಾ ಸಂಗಮಸ್ಥಾನವಾದ ಪ್ರಯಾಗಕ್ಷೇತ್ರದಲ್ಲಿ ಅವಭೃತಸ್ನಾನವನ್ನು ಮಾಡಿ ನಿಷ್ಕಲ್ಮಷರಾಗಿ ಸ್ವಸ್ವಸ್ಥಾನಗಳನ್ನೈದಿದರು.”

೨ನೇ ಅಧ್ಯಾಯ.

ಸತೀದೇವಿಯು ದಕ್ಷಪ್ರಜೇಶನ ಯಜ್ಞಮಹೋತ್ಸವವನ್ನು ನೋಡಲಿಚ್ಛೈಸಿದ್ದು.

“ಎಲೈ ವಿದುರನೆ, ಈರೀತಿ ಪರಮೇಶ್ವರನಿಗೂ ದಕ್ಷಪ್ರಜೇಶನಿಗೂ ಪರಮದ್ವೇಷದಿಂದ ಅನೇಕಕಾಲವು ಅತಿಕ್ರಮಿಸಿತು; ಪರಮೇಷ್ಠಿಯಾದ ಬ್ರಹ್ಮದೇವನಿಂದ ದಕ್ಷನು ಯಾವಾಗ ಸಮಪ್ರಜೇಶರಿಗೂ ಆಧಿಪತ್ಯಪದದಲ್ಲಿ ಅಭಿಷಿಕ್ತನಾದನೋ ಆಗಿನಾರಭ್ಯ ಮತ್ತೂ ಗರ್ವಿತನಾದನು; ಆಗ ದಕ್ಷನು ಆಧಿಪತ್ಯ ಗರ್ವದಿಂದ ಬ್ರಹ್ಮನಿಷ್ಠರಾದ ಮಹರ್ಷಿಗಳನ್ನು ತಿರಸ್ಕರಿಸಿ ವಾಜಪೇಯ ಯಾಗವನ್ನು ಬೃಹಸ್ಪತಿಸವವೆಂಬ ಇಷ್ಟಿಯನ್ನೂ ಉಪಕ್ರಮಿಸಿದನು; ಆ ಬೃಹಸ್ಪತಿಸವದಲ್ಲಿ ಬ್ರಹ್ಮರ್ಷಿಗಳು ದೇವರ್ಷಿಗಳು ಪಿತೃದೇವತೆಗಳು ಮನುಷ್ಯರು ಅವರವರ ಪತ್ನಿಯರ ಸಹಿತವಾಗಿ ದಕ್ಷಿಣಾದಿಗಳಿಂದಲೂ ವಸ್ತ್ರಭೂಷಣಾದಿಗಳಿಂದಲೂ ಬಹುಮಾನಿತರಾದರ; ಆಗ ದಕ್ಷನ ಯಜ್ಞಮಹೋತ್ಸವವನ್ನು ಪರಸ್ಪರವಾಗಿ ವರ್ಣಿಸುತ ಅಂತರಿಕ್ಷದಲ್ಲಿ ಹೋಗುತಿದ್ದ ಸಿದ್ಧಚಾರಣಮುಖದಿಂದ ಕೇಳಿದ ದಕ್ಷಪುತ್ರಿಯಾದ ಸತೀದೇವಿಯು ಅಂತರಿಕ್ಷದಲ್ಲಿ ವಿಮಾನಾರೂಢರಾಗಿ ತಮ್ಮ ತಮ್ಮ ಪತಿಗಳೊಡನೆ ಕೂಡಿ ದಿವ್ಯವಸ್ತ್ರಾಭರಣಗಳಿಂದ ಅಲಂಕೃತರಾಗಿ ಕೈಲಾಸಪರ್ವತದ ಸಮೀಪದಲ್ಲಿ ಬರುತ್ತಿರುವ ಸಿದ್ಧಚಾರಣ ಗಂಧರ್ವಾದಿ ಸ್ತ್ರೀಯರುಗಳನ್ನು ನೋಡಿ ಕುತೂಹಲವುಳ್ಳವಳಾಗಿ ಸರ್ವಭೂತ ಪತಿಯಾಗಿ ತನಗೆ ಪತಿಯಾದ ಪರಮೇಶ್ವರನನ್ನು ಕುರಿತು ‘ಎಲೈ ಪರಮೇಶ್ವರನೆ, ನಿಮ್ಮ ಶ್ವಶುರನಾದ ದಕ್ಷಪ್ರಜೇಶನು ಯಜ್ಞಮಹೋತ್ಸವವನ್ನು ಪಕ್ರಮಿಸಿಧಾನಂತೆ; ನಿಮಗೆ ಅಪೇಕ್ಷೆಯಿದ್ದಲ್ಲಿ ನಾವೂ ಅಲ್ಲಿಗೆ ಹೋಗೋಣ; ಬಹುಮಂದಿ ದೇವತೆಗಳು ಈಗಲೂ ಹೋಗುತಲಿಧಾರೆ; ನನ್ನ ಸಹೋದರಿಯರಾದ ಅಕ್ಕತಂಗಿಯರು ತಮ್ಮ ತಮ್ಮ ಪತಿಗಳಿಂದ ಯುಕ್ತರಾಗಿ ಬಂಧುಗಳನ್ನು ನೋಡಲಿಚ್ಛೆಯುಳ್ಳವರಾಗಿ ಅಲ್ಲಿಗೆ ಬರುತ್ತಾರೆ; ಆದ್ದರಿಂದ ನಾನೂ ನಿಮ್ಮೊಡನೆ ಸಮೇತಳಾಗಿ ಅಲ್ಲಿಗೆ ಹೋಗಿ ನನ್ನ ಮಾತಾಪಿತೃಗಳಿಂದ ವಸ್ತ್ರಭೂಷಣಾದಿಗಳಿಂದ ಸತ್ಕೃತಳಾಗಿ ಬಂದೇನು! ಎಲೈ ಪರಮೇಶ್ವರನೆ, ಅಲ್ಲಿ ಪತಿಗಳಿಂದ ಸಮೇತರಾದ ನನ್ನ ಅಕ್ಕತಂಗಿಯರನ್ನು ನನ್ನ ಮಾತೃ ಸಹೋದರಿಯರಾದ ಚಿಕ್ಕತಾಯಿಗಳನ್ನು ದೊಡ್ಡತಾಯಿಗಳನ್ನು ಪ್ರೇಮಾರ್ದ್ರವಾದ ಮನಸ್ಸುಳ್ಳ ನನ್ನ ತಾಯಿಯನ್ನೂ ಸಹಾ ನೋಡುವದಕ್ಕೋಸ್ಕರ ಬಹುದಿವಸಗಳಿಂದಲೂ ಕುತೂಹಲವುಳ್ಳ ನಾನು ಮಹರ್ಷಿಗಳಿಂದ ವಿಸ್ತರಿಸಲ್ಪಟ್ಟ ಶ್ರೇಷ್ಠವಾದ ಆ ಯಜ್ಞವನ್ನು ನೋಡಲಿಚ್ಛೈಸುತ್ತೇನೆ! ಎಲೈ ಶಾಶ್ವತನಾದ ಪರಮೇಶ್ವರನೆ, ನಿನ್ನ ಮಾಯೆಯಿಂದ ಗುಣಾತ್ಮಕವಾಗಿ ರಚಿಸಲ್ಪಟ್ಟ ಈ ಜಗತ್ತು ನಿನ್ನಲ್ಲಿ ಆಶ್ಚರ್ಯರೂಪವಾಗಿ ತೋರುತಲಿದೆಯೋ ಹೊರತು ನಿನಗೆ ಯಾವದೂ ಆಶ್ಚರ್ಯವಲ್ಲ; ಆದಾಗ್ಯೂ ನಾನು ನಿನ್ನ ಸ್ವರೂಪತತ್ವವನ್ನರಿಯದ ಸ್ತ್ರೀಯಾದಕಾರಣ ದೀನಳಾಗಿ ನನ್ನ ಜನ್ಮಭೂಮಿಯಾದ ಸ್ಥಾನವನ್ನು ನೋಡಲಿಚ್ಛೈಸುತ್ತೇನೆ! ಎಲೈ ಅನಾದ್ಯನಂತನಾದ ಶ್ರೀ ಪರಮೇಶ್ವರನೆ, ಅನ್ಯರಾದ ಸ್ತ್ರೀಯರುಗಳು ತಮ್ಮ ಪತಿಗಳ ಸಮೇತರಾಗಿ ವಸ್ತ್ರಭೂಷಣಾದಿಗಳಿಂದ ಅಲಂಕೃತರಾಗಿ ಗುಂಪುಗುಂಪಾಗಿ ಯಜ್ಞಮಹೋತ್ಸವದರ್ಶನಾರ್ಥವಾಗಿ ಹೋಗುತ್ತಾರೆ ನೋಡು! ಎಲೈ ನೀಲಕಂಠನಾದ ಪರಮೇಶ್ವರನೆ, ಹಂಸಪಕ್ಷಿಗಳೋಪಾದಿಯಲ್ಲಿ ಶುಭ್ರವಾದ ಆ ಸ್ತ್ರೀಯರ ದಿವ್ಯವಿಮಾನಗಳಿಂದ ಆಕಾಶವು ಅಲಂಕೃತವಾಗಿದೆ! ಎಲೈ ದೇವಶ್ರೇಷ್ಠನಾದ ಸ್ವಾಮಿಯೆ, ತಂದೆಯ ಗೃಹದಲ್ಲಿ

ಆಗುವ ಶುಭಶೋಭನಾದಿ ಕೌತುಕವ್ಯಾಪಾರವನ್ನು ಕೇಳಿ ಮಗಳಾದವಳಿಗೆ ಶರೀರವು ಹ್ಯಾಗೆ ಚಲಿಸದೆ ಇದ್ದೀತು, ಅದುಕಾರಣ ಹೆಣ್ಣುಮಕ್ಕಳು ಕರೆಯಲ್ಪಡದೆ ಇದ್ದಾಗ್ಯೂ ಸಖಿಯರ ಗೃಹವನ್ನು ಪತಿಗೃಹವನ್ನು ತಂದೆಯ ಗೃಹವನ್ನು ಕುರಿತು ತಾವಾಗಿ ಹೋಗುವರು! ಎಲೈ ಪ್ರಕೃತಿರಹಿತನಾದ ಸ್ವಾಮಿಯೆ, ಅದುಕಾರಣ ನನ್ನಲ್ಲಿ ನೀನು ಪ್ರಸನ್ನನಾಗು; ಮಹಾದಯಾಶಾಲಿಯಾದ ನೀನು ನನ್ನ ಇಷ್ಟಾರ್ಥವನ್ನು ಪ್ರಾರ್ಥನೀಯ್ಯನಾಗುವವನಾಗು; ಅಧಿಕವಾದ ಜ್ಞಾನವುಳ್ಳವನಾದಾಗ್ಯೂ ನೀನು ನನ್ನನ್ನು ಅರ್ಧ ಶರೀರದಲ್ಲಿ ಧರಿಸಿದವನಾಗಿದ್ದೀಯೆ; ಯಾಚಿಸುತಲಿರುವ ನನ್ನನ್ನನುಗ್ರಹಿಸು' ಎಂದು ಪ್ರಿಯಳಾದ ಸತೀದೇವಿಯಿಂದ ಪ್ರಾರ್ಥಿತನಾಗಿ ಸುಹೃದ್ಬಂಧುವಾದ ಶ್ರೀ ಪರಮೇಶ್ವರನು ದಕ್ಷನಿಂದ ಸಮಸ್ತ ಪ್ರಜೇಶರ ಸಮಕ್ಷಮದಲ್ಲಿ ಹೇಳಲ್ಪಟ್ಟ ಮರ್ಮಭೇದಕಗಳಾದ ದುರ್ಭಾಷೆಗಳೆಂಬ ಬಾಣಗಳನ್ನು ಸ್ಮರಿಸಿಕೊಂಡವನಾಗಿ ನಗುತ 'ಎಲೈ ಶುಭಕರಳಾದ ಸತೀದೇವಿಯೇ, ಸ್ತ್ರೀಯರು ಬಂಧುಗಳಮನೆಗೆ ಕರೆಯಲ್ಪಡದೆ ಇದ್ದಾಗ್ಯೂ ತಾವಾಗಿ ಹೋಗುತ್ತಾರೆಂಬದಾಗಿ ನಿನ್ನಿಂದ ಹೇಳಲ್ಪಟ್ಟ ಅರ್ಥವು ಯಥಾರ್ಥವೇ ಸರಿ; ಆ ಬಂಧುಗಳು ದೇಹಾದಿಗಳಲ್ಲಿ ಅಹಂಬುದ್ಧಿರೂಪವಾದ ಅಹಂಕಾರದಿಂದ ಹುಟ್ಟಿದ ಮದದಿಂದಲೂ ಕ್ರೋಧದಿಂದಲೂ ದೋಷದೃಷ್ಟಿಯುಳ್ಳವರಾಗದೆ ವಿಶ್ವಾಸವುಳ್ಳವರಾಗಿದ್ದರೆ ಅವರ ಮನೆಗಳಿಗೆ ಹೋಗಬಹುದು! ಎಲೈ ಸತೀದೇವಿಯೆ ಕೇಳು: ಸತ್ಪುರುಷರಿಗೆ ವಿವೇಕಪ್ರದಗಳಾಗಿ ಯಶಸ್ಕರಗಳಾಗಿರುವ ವಿದ್ಯೆಯೂ ತಪಸ್ಸು ಧನವು ಶರೀರ ಸೌಷ್ಠವವು ಯೌವನವು ಸತ್ಕುಲವು ಎಂಬ ಈ ಆರುಗುಣಗಳಿಂದಲೇ ಅಸತ್ಪುರುಷರು ಅಹಂಕೃತರಾಗಿ ವಿವೇಕಶೂನ್ಯರಾಗಿ ತಾವೇ ಸರ್ವೋತ್ತಮರೆಂಬ ಅಭಿಮಾನದಿಂದ ದುಷ್ಟವಾದ ಜ್ಞಾನವುಳ್ಳವರಾಗಿ ಮಹಾತ್ಮರ ತೇಜಸ್ಸನ್ನು ನೋಡುವದಿಲ್ಲ; ಅದುಕಾರಣ ದುಷ್ಟರಾಗಿ ಅಹಂಕಾರಿಗಳಾದ ಅಸಜ್ಜನರು ವಕ್ರಬುದ್ಧಿಯಿಂದ ಹುಬ್ಬುಗಂಟುಗಳುಳ್ಳವರಾಗಿ ಕ್ರೋಧಯುಕ್ತಗಳಾದ ದೃಷ್ಟಿಗಳಿಂದ ಮನೆಗೆ ಬಂದ ಸ್ವಬಂಧು ಜನರನ್ನು ಧಿಕ್ಕಾರಪೂರ್ವಕವಾಗಿ ನೋಡುವ ಅಸ್ವಸ್ಥಚಿತ್ತರಾದ ಅಂಥಾ ದುರ್ಜನರ ಗೃಹಗಳನ್ನು ಕುರಿತು ಸ್ವಜನ ಭ್ರಾಂತಿಯಿಂದ ಹೋಗಬಾರದು! ಎಲೈ ಸತೀದೇವಿಯೇ ಕೇಳು: ಮಾನಶಾಲಿಯಾದ ಪುರುಷನು ಶತೃಗಳ ತೀಕ್ಷ್ಣಗಳಾದ ಬಾಣಗಳಿಂದ ಪ್ರಹರಿಸಲ್ಪಟ್ಟವನಾಗಿ ವ್ಯಥಾಯುಕ್ತವಾದ ಮನಸ್ಸಿನಿಂದ ಭೂಮಿಯಲ್ಲಿ ಬಿದ್ದಿರುವನು; ವಕ್ರಬುದ್ಧಿಯಿಂದ ಬಂಧುಜನರ ಮರ್ಮಭೇದಕಗಳಾದ ದುರ್ಭಾಷೆಗಳಿಂದ ಪೀಡಿತನಾದರೆ ದಿವಾರಾತ್ರೆಗಳಲ್ಲಿಯೂ ತಪಿಸಲ್ಪಟ್ಟವನಾಗಿ ಮಹತ್ತಾದ ವ್ಯಥೆಯನ್ನೈದುವನು! ಎಲೈ ಸುಂದರಗಳಾದ ಹುಬ್ಬುಗಳುಳ್ಳ ಸತೀದೇವಿಯೇ, ಉತ್ಕೃಷ್ಟವಾದ ಅಧಿಸತ್ಯವುಳ್ಳ ದಕ್ಷಪ್ರಜೇಶನಿಗೆ ತನ್ನ ಹೆಣ್ಣುಮಕ್ಕಳೊಳಗೆ ನೀನೇ ಅತ್ಯಂತ ಶ್ಲಾಘ್ಯಳಾಗಿ ಪ್ರೇಮಾಸ್ಪದಳಾದ ಪುತ್ರಿಯೆಂಬ ಅರ್ಥವನ್ನು ನಾನು ಬಲ್ಲೆನು; ಆದಾಗ್ಯೂ ನೀನು ನನ್ನ ಪತ್ನಿಯಾದ್ದರಿಂದ ನಿನಗೆ ಪಿತೃಗೃಹದಲ್ಲಿ ಬಹುಮಾನವಾಗುವದಿಲ್ಲ; ನನ್ನಲ್ಲಿ ಕ್ರೋಧಾವಿಷ್ಟನಾಗಿ ದಕ್ಷನು ಸಂತಾಪಪಡುತಲಿದ್ದಾನೆ; ಜೀವರ ಬುದ್ಧಿಗಳಿಗೆ ಸಾಕ್ಷಿರೂಪರಾಗಿ ನಿರಹಂಕಾರಿಗಳಾದ ಮಹಾತ್ಮರ ಸತ್ಕೀರ್ತಿ ಪ್ರಭಾವ ಮೊದಲಾದ ಸಂಪತ್ತುಗಳಿಂದ ದಹಿಸಲ್ಪಡುತ್ತಿರುವ ಹೃದಯದಿಂದ ದುಃಖಿತಗಳಾದ ಇಂದ್ರಿಯಗಳುಳ್ಳವನಾಗಿ ದುರಹಂಕಾರಿಯಾದ ಪುರುಷನು ಆ ಮಹಾತ್ಮರ ಉತ್ಕೃಷ್ಟವಾದ ಐಶ್ವರ್ಯವನ್ನು ಪಡೆಯುವದಕ್ಕೆ ಸಮರ್ಥನಲ್ಲದೆ ಅಸುರರು ಹರಿಯನ್ನು ದ್ವೇಷಿಸುವಂತೆ ಮಹಾತ್ಮರನ್ನು ದ್ವೇಷಿಸುತ್ತಾನೆ! ಎಲೈ ಸೂಕ್ಷ್ಮಮಧ್ಯಳಾದ ಸತೀದೇವಿಯೆ, ಲೋಕದಲ್ಲಿ ಜನರಿಂದ ಪರಸ್ಪರವಾಗಿ ಪ್ರತ್ಯುತ್ಥಾನಾಭಿವಾದನಾದ ಸತ್ಕಾರಗಳು ಮಾಡಲ್ಪಡುತಲಿವೆ; ಅವು ಶುಭಕರವಾದ ವ್ಯಾಪಾರಗಳೇ ಸರಿ; ಹ್ಯಾಗೆಂದರೆ: ಪ್ರಾಜ್ಞರಾದವರಿಂದ ಸರ್ವಭೂತ ಹೃದಯಾಂತರ್ಯಾಮಿಯಾದ ಪರಬ್ರಹ್ಮ ವಸ್ತುವಿಗೋಸ್ಕರ ಮನಸ್ಸಿನಿಂದ ಸತ್ಕಾರವು ಮಾಡಲ್ಪಡುತ್ತೆ; ದೇಹಾಭಿಮಾನಿಯಾದ ಮೂಢನಿಗೆ ಅಲ್ಲ; ಅದುಕಾರಣ ಪರಿಪೂರ್ಣವಾದ ಆ ವಸ್ತುವಿಗೋಸ್ಕರ ಮನಸ್ಸಿನಿಂದಲೇ ಸರ್ವವೂ ನನ್ನಿಂದ ಮಾಡಲ್ಪಟ್ಟದೆ! ಎಲೈ ಸತೀದೇವಿಯೇ ಕೇಳು: ವಸುದೇವ ಶಬ್ದಾರ್ಥವಾದ ಯಾವ ಶುದ್ಧವಾದ ಅಂತಃಕರಣವುಂಟೋ ಆ ಅಂತಃಕರಣದಲ್ಲಿ ಪರಮಾತ್ಮನು ಪ್ರಕಾಶಿಸುತಲಿಧಾನೆಯಾದ ಕಾರಣ ಅಜ್ಞಾನಾವರಣ ಪರಿಹಾರಕನಾಗಿ ವಾಸುದೇವನೆನಿಸಿಕೊಂಡಿರುವನು; ಇಂದ್ರಿಯಾಗೋಚರನಾಗಿರುವ ಆ ಭಗವಂತನು ನನ್ನಿಂದ ನಮಸ್ಕಾರಪೂರ್ವಕವಾಗಿ ಅನುಸಂಧಾನಮಾಡಲ್ಪಡುತ್ತಾನೆ! ಎಲೈ ಶ್ರೇಷ್ಠಗಳಾದ ಊರು

ಪ್ರದೇಶವುಳ್ಳ ಸತೀದೇವಿಯೆ, ಯಾವ ದಕ್ಷನು ಪ್ರಜೇಶರ ಯಜ್ಞಾರ್ಥವಾಗಿ ಹೋಗಿದ್ದ ನಿರಪರಾಧಿಯಾದ ನನ್ನನ್ನು
ದುರ್ಭಾಷೆಗಳಿಂದ ತಿರಸ್ಕರಿಸಿದನೋ ಆ ದಕ್ಷನು ನಿನಗೆ ಸಾಕ್ಷಾತ್ ಪಿತೃವಾದಾಗ್ಯೂ ನನಗೆ ದ್ವೇಷಿಯಾಗಿರುವನು ;
ಆದುದರಿಂದ ಅವನನ್ನನುವರ್ತಿಸಿಕೊಂಡಿರುವವರನ್ನು ನೀನು ನೋಡಲೋಸುಗ ಹೋಗಬೇಡ ; ನನ್ನ ವಾಕ್ಯ
ನ್ನತಿಕ್ರಮಿಸಿ ನೀನು ಅಲ್ಲಿಗೆ ಹೋದವಳಾದರೆ ನಿನಗೆ ಕ್ಷೇಮವುಂಟಾಗಲಾರದು ; ಪೂಜ್ಯನಾಗಿ ಮಾನಿತನಾಗಿರುವವ
ನಿಗೆ ಸ್ವಜನರದೆಸೆಯಿಂದ ಅವಮಾನವುಂಟಾದರೆ ಆ ಅವಮಾನವು ಮಾನಶಾಲಿಯಾದವನಿಗೆ ಮರಣಕ್ಕೆ ನಿಮಿತ್ತವಾ
ದೀತು ; ಆದುಕಾರಣ ನೀನು ಸರ್ವಥಾ ಅಲ್ಲಿಗೆ ಹೋಗಬೇಡ' ಎಂದು ಪರಮೇಶ್ವರನು ಸತೀದೇವಿಯನ್ನು ಕುರಿತು
ನುಡಿದನು" ಎಂದು ನಿರೂಪಿಸಿದನು.

೪ನೇ ಅಧ್ಯಾಯ.

ಸತೀದೇವಿಯು ತಂದೆಯಾದ ದಕ್ಷನಿಂದ ಅವಮಾನವನ್ನು ಹೊಂದಿ ಶರೀರತ್ಯಾಗಂಗೈದದ್ದು.

"ಎಲೈ ವಿದುರನೆ, ಪರಮೇಶ್ವರನು ಇಷ್ಟುಮಾತ್ರ ಹೇಳಿ ಹೋಗುವದಕ್ಕೂ ಅಪ್ಪಣೆಕೊಡುವದಕ್ಕೂ ಖಂ
ಡಿತವಾಗಿ ತಡೆಯುವದಕ್ಕೂ ಉಭಯಥಾಪಿ ಸತೀದೇವಿಗೆ ಕ್ಷೇಮವಾಗಲಾರದೆಂದು ಯೋಚಿಸುತ ಸುಮ್ಮನಾದನು ;
ಆಗ ಸತೀದೇವಿಯು ಅದೇಪ್ರಕಾರವಾಗಿ ಸ್ವಜನರನ್ನು ನೋಡುವದಕ್ಕೆ ಕುತೂಹಲವುಳ್ಳವಳಾಗಿ ಹೊರಟುಹೋಗಲಿ
ಚ್ಛೈಸಿ ಪತಿವಾಕ್ಯವನ್ನುಲ್ಲಂಘಿಸಿ ಸ್ವಾತಂತ್ರ್ಯವನ್ನು ಮಾಡುವದಕ್ಕೆ ಶಂಕೆಯುಳ್ಳವಳಾಗಿ ಹೋಗುವದಕ್ಕೂ ನಿಲ್ಲು
ವದಕ್ಕೂ ತೋರದೆ ಡೋಲಾಯಮಾನವಾದ ಮನಸ್ಸುಳ್ಳವಳಾಗಿ ಬಂಧುಜನರನ್ನು ನೋಡಬೇಕೆಂಬ ಅಪೇಕ್ಷೆಗೆ
ವಿಘ್ನ ಬಂದದ್ದರಿಂದ ದುಃಖಿತಮನಸ್ಕಳಾಗಿ ಸ್ನೇಹದಿಂದ ರೋದನಂಗೈಯುತ ನೇತ್ರೋದಕವನ್ನು ಸ್ರವಿಸುತ ದುಃಖದ
ರವಶಳಾಗಿ ಸಮಾನನಾದ ಮತ್ತೊಬ್ಬ ಪುರುಷನಿಲ್ಲದ ಆದಿಪುರುಷನಾದ ಶ್ರೀ ಪರಮೇಶ್ವರನನ್ನು ಕೋಪದಿಂದ ದಹಿ
ಸುವಳಂತೆ ಉತ್ಪನ್ನವಾದ ಕಂಪವುಳ್ಳವಳಾಗಿ ನೋಡಿದಳು ; ಸತ್ಪುರುಷರಿಗೆ ಪ್ರಿಯನಾದ ಯಾವ ಪರಮೇಶ್ವರನು
ಪ್ರೇಮದಿಂದ ತನ್ನ ಅರ್ಧಶರೀರವನ್ನು ಕೊಟ್ಟನೋ—ಅಂಥಾ ಪರಮೇಶ್ವರನನ್ನು ಬಿಟ್ಟು ಸತೀದೇವಿಯು ಸ್ತ್ರೀಸ್ವ
ಭಾವದಿಂದ ಮೂಢವಾದ ಬುದ್ಧಿಯುಳ್ಳವಳಾಗಿ ಶೋಕದಿಂದಲೂ ರೋಷದಿಂದಲೂ ವ್ಯಸನಯುಕ್ತವಾದ ಮನಸ್ಸಿನಿಂದ
ಲೂ ನಿಟ್ಟುಸುರುಗಳನ್ನು ಬಿಡುತ ಮಾತಾಪಿತೃಗಳ ಮನೆಯನ್ನು ಕುರಿತು ತೆರಳಿದಳು ; ಅನಂತರದಲ್ಲಿ ಪರಮೇಶ್ವ
ರಾನುಚರರಾದ ಪ್ರಮಥಗಣಗಳಿಂದಲೂ ಯಕ್ಷರಿಂದಲೂ ಸಮೇತರಾದ ಮಣಿಮಂತನು ಮಣಿಭದ್ರನು ಮೊದಲಾದ
ಗಣೇಶ್ವರರು ಮಹಾ ವೃಷಭವನ್ನು ಮುಂದುಮಾಡಿಕೊಂಡು ನಿರ್ಭಯರಾಗಿ ಅನೇಕಸಹಸ್ರ ಗುಂಪುಗಳಾಗಿ ಅತಿ
ವೇಗದಿಂದ ತೆರಳಿಹೋಗುತಲಿರುವ ಸತೀದೇವಿಯನ್ನನುಸರಿಸಿ ಸಂಗಡಲೇ ತೆರಳಿದರು ; ಆ ಗಣೇಶ್ವರರು ಶುಕಶಾರಿಕಾ
ಪಕ್ಷಿಗಳಿಂದಲೂ ಕ್ರೀಡಾರ್ಥಗಳಾದ ಚಂಡುಗಳಿಂದಲೂ ಕನ್ನಡಿಗಳಿಂದಲೂ ಪದ್ಮಗಳಿಂದಲೂ ಶ್ವೇತಛತ್ರಗಳಿಂದ
ಲೂ ಚಾಮರಗಳಿಂದಲೂ ಪುಷ್ಪಹಾರಗಳಿಂದಲೂ ಶೋಭಿತರಾಗಿ ಗಾನಯುಕ್ತಗಳಾದ ದುಂದುಭಿಗಳಿಂದಲೂ ಶಂಖಗ
ಳಿಂದಲೂ ಕೊಳಲುಗಳಿಂದಲೂ ಯುಕ್ತರಾಗಿ ಆ ಸತೀದೇವಿಯನ್ನು ವೃಷಭದಮೇಲೆ ಕುಳ್ಳಿರಿಸಿಕೊಂಡು ತೆರಳಿದ
ರು ; ಎಲ್ಲಾಕಡೆಯಲ್ಲೂ ವೇದಘೋಷದಿಂದ ಪ್ರಕಾಶಮಾನವಾಗಿ ಪಶುವಿಶಸನಾದಿ ವ್ಯಾಪಾರಗಳಿಂದ ಸಂಕುಲವಾಗಿ ವಿ
ದ್ವಾಂಸರಿಂದಲೂ ಬ್ರಹ್ಮರ್ಷಿಗಳಿಂದಲೂ ನಿಬಿಡವಾಗಿ ಮೃತ್ತಿಗೆಗಳಿಂದಲೂ ಮರಗಳಿಂದಲೂ ಕಬ್ಬಿಣದಿಂದಲೂ ಸುವ
ರ್ಣದಿಂದಲೂ ದರ್ಭೆಗಳಿಂದಲೂ ಚರ್ಮಗಳಿಂದ ನಿರ್ಮಿತಗಳಾದ ಪಾತ್ರೆಗಳಿಂದಲೂ ಪವಿತ್ರಗಳಿಂದಲೂ ಪ್ರಕಾಶಿತವಾದ
ಯಜ್ಞಶಾಲೆಯನ್ನು ಸತೀದೇವಿಯು ಪ್ರವೇಶಿಸಿ ದಕ್ಷನಿಂದ ಆದರಿಸಲ್ಪಡದೆ ಅವಮಾನಿತಳಾದ ಆ ಸತೀದೇವಿಯನ್ನು
ಯಜ್ಞಕರ್ತೃವಾದ ದಕ್ಷನ ಭಯದಿಂದ ಆ ಸಭಾಸ್ಥರಾದ ಜನರೊಳಗೆ ಒಬ್ಬನಾದರೂ ಆದರಿಸಲಿಲ್ಲ ; ಅಕ್ಕತಂಗಿ
ಯರು ಮಾತೃವಾದ ಪ್ರಸೂತಿಯು ಮಾತ್ರವೇ ಆದರವುಳ್ಳವರಾಗಿ ಪ್ರೇಮದಿಂದ ಗದ್ಗದಧ್ವನಿಯುಳ್ಳ ಕಂಠವುಳ್ಳವರಾಗಿ
ಸತೀದೇವಿಯನ್ನಾಲಿಂಗನಂಗೈದರು ; ಅನಂತರದಲ್ಲಿ ಸತೀದೇವಿಯು ತಂದೆಯಾದ ದಕ್ಷನಿಂದ ಉಪೇಕ್ಷಿತಳಾಗಿ ಅಕ್ಕ

ತಂಗಿಯರುಗಳಿಂದಲೂ ಮಾತೃವಿನಿಂದಲೂ ಕುಶಲಪ್ರಶ್ನೆಪೂರ್ವಕವಾಗಿ ಆದರದಿಂದ ಮಾಡಲ್ಪಟ್ಟ ಉಪಚಾರವನ್ನೂ ಅವರಿಂದ ಕೊಡಲ್ಪಟ್ಟ ಪೀಠವನ್ನೂ ಸಹ ಅಂಗೀಕರಿಸಲಿಲ್ಲ; ಆಗ ಸರ್ವೇಶ್ವರಿಯಾದ ಸತೀದೇವಿಯು ಪರಮೇಶ್ವರನಿಗೆ ಕೊಡತಕ್ಕ ಹವಿರ್ಭಾಗದಿಂದ ರಹಿತವಾದ ಆ ಯಜ್ಞವನ್ನು ದಕ್ಷನಿಂದ ಮಾಡಲ್ಪಡುತ್ತಿರುವ ಪ್ರಭುವೂ ದೇವನೂ ಆದ ಪರಮೇಶ್ವರನ ದೂಷಣವನ್ನೂ ನೋಡಿ ತಾನು ಅವಮಾನಿತಳಾದ್ದರಿಂದ ಆ ಯಜ್ಞಶಾಲೆಯಲ್ಲಿ ಲೋಕಗಳನ್ನು ದಹಿಸುವವಳಂತೆ ಬಹು ಕೋಪವನ್ನು ಮಾಡಿದಳು; ಆಗ ಸತೀದೇವಿಯು ದಕ್ಷಸಂಹಾರಾರ್ಥವಾಗಿ ಎದ್ದಂಥಾ ಪ್ರಮಥಪತಿಗಳನ್ನು ತನ್ನ ಆಜ್ಞೆಯಿಂದ ತಡೆದು ಸರ್ವಜನರು ಕೇಳುತ್ತಿರುವಾಗಲೆ ರೋಷದಿಂದ ಅವ್ಯಕ್ತವಾದ ವಾಕ್ಯದಿಂದ ಕರ್ಮಮಾರ್ಗದಲ್ಲಿ ಉಂಟಾಗುವ ವ್ಯರ್ಥಶ್ರಮದಿಂದಲೂ ಗರ್ವದಿಂದಲೂ ಯುಕ್ತನಾಗಿ ಶಿವದ್ವೇಷಿಯಾದ ಆ ದಕ್ಷನನ್ನು ದೂಷಿಸಿದಳು! ಎಲೈ ದಕ್ಷನೆ, ಸರ್ವಪ್ರಾಣಿಗಳಿಗೂ ಪ್ರಿಯನಾಗಿ ಅಂತರಾತ್ಮರೂಪನಾದ ಯಾವ ಪರಮೇಶ್ವರನಿಗೆ ಅಧಿಕನಾದವನು ಮತ್ತೊಬ್ಬನಿಲ್ಲವೋ—ಯಾವ ಈಶ್ವರನಿಗೆ ಪ್ರಿಯನೂ ಅಪ್ರಿಯನೂ ಇಲ್ಲವೋ—ಸಮಸ್ತ ಪ್ರಪಂಚಕ್ಕೂ ಕಾರಣನಾಗಿ ನಿರ್ವೈರನಾದ ಅಂಥಾ ಪರಮೇಶ್ವರನಲ್ಲಿ ನಿನ್ನ ಹೊರ್ತು ಯಾವನಾದರೂ ಪ್ರತಿಕೂಲವ್ಯಾಪಾರವನ್ನಾಚರಿಸ್ಯಾನೆ! ಎಲೈ ದ್ವಿಜನೆ, ನಿನ್ನಂಥಾ ಅಸೂಯಾಪರರು ಅನ್ಯರ ಗುಣಗಳಲ್ಲಿ ದೋಷಗಳನ್ನೇ ಗ್ರಹಿಸುವರು; ಗುಣಗಳನ್ನು ಗ್ರಹಿಸುವದಿಲ್ಲ; ಕೆಲವರು ಪರರ ದೋಷಗಳನ್ನು ಗುಣಗಳನ್ನು ಸಹ ವೈಷಮ್ಯವಿಲ್ಲದೆ ಗ್ರಹಿಸುವರು; ಸಾಧುಗಳಾದವರು ಪರರ ದೋಷಗಳನ್ನು ಗ್ರಹಿಸದೆ ಗುಣಗಳನ್ನು ಗ್ರಹಿಸುವರು, ಮತ್ತೂ ಮಹಾತ್ಮರಾದವರು ಅನ್ಯರ ದೋಷಗಳನ್ನು ಸ್ಮರಿಸದೆ ಗುಣಗಳು ಸ್ವಲ್ಪಗಳಾದಾಗ್ಯೂ ಅವುಗಳನ್ನು ವಿಸ್ತರಿಸಿ ಗ್ರಹಿಸುವರು; ಅಂಥಾ ಮಹಾತ್ಮರಲ್ಲಿ ನೀನು ದೋಷವನ್ನೇ ಗ್ರಹಿಸಿದೆ; ದೇಹದಲ್ಲಿ ಆತ್ಮಬುದ್ಧಿಯುಳ್ಳವರಾಗಿ ಮಹಾತ್ಮರ ಪಾದರೇಣುಗಳಿಂದಲೇ ಪರಿಹರಿಸಲ್ಪಟ್ಟ ತೇಜಃಸ್ವಭಾವವುಳ್ಳ ಅಜ್ಞಜನಗೆ ಅಸೂಯಾಧಿಕ್ಯದಿಂದ ಮಹಾಪುರುಷರನ್ನು ದೂಷಿಸುವದು ಆಶ್ಚರ್ಯವಲ್ಲ: ಅದೇ ಅವರಿಗೆ ಪರಮಶುಭವ್ಯಾಪಾರವು; ಯಾವ ಶ್ರೀ ಪರಮೇಶ್ವರನ ಎರಡು ಅಕ್ಷರಗಳುಳ್ಳ ಶ್ರೀ ಶಿವನೆಂಬ ನಾಮವು ಜನರಿಂದ ಪ್ರಸಂಗಗತಿಯಿಂದ ಒಂದಾವರ್ತಿ ಉಚ್ಚಾರಣೆಗೈಯಲ್ಪಟ್ಟದ್ದಾದರೆ ಆ ಕ್ಷಣದಲ್ಲೇ ಆ ಜನರ ಪಾಪವನ್ನು ಪರಿಹರಿಸುವದು! ಎಲೈ ದಕ್ಷನೆ, ಪವಿತ್ರವಾದ ಕೀರ್ತಿಯುಳ್ಳ ಅತಿಕ್ರಮಿಸಲಶಕ್ಯವಾದ ಆಜ್ಞೆಯುಳ್ಳ ಅಂಥಾ ಶಿವನನ್ನು ನೀನು ಅಮಂಗಳರೂಪನಾದಕಾರಣ ದ್ವೇಷಿಸುತ್ತೀಯೆ! ಕೇಳೈ ದಕ್ಷನೆ, ಬ್ರಹ್ಮಾನಂದವೆಂಬ ಮಕರಂದರಸವನ್ನಪೇಕ್ಷಿಸುತ್ತಿರುವ ಮಹಾತ್ಮರ ಮನಸ್ಸುಗಳೆಂಬ ಭ್ರಮರಗಳಿಂದ ಯಾವ ಪರಮೇಶ್ವರನ ಪಾದಪದ್ಮವು ಸೇವಿಸಲ್ಪಡುತ್ತದೋ—ಕಾಮ್ಯಫಲಾಪೇಕ್ಷೆಯುಳ್ಳವರಿಗೆ ಇಷ್ಟಾರ್ಥಗಳನ್ನು ಕೊಡುವ ಸರ್ವಲೋಕಬಂಧುವಾದ ಅಂಥಾ ಪರಮೇಶ್ವರನಿಗೆ ನೀನು ದ್ರೋಹವನ್ನು ಮಾಡುತ್ತೀಯೆ! ಯಾವ ಪರಮೇಶ್ವರನು ಜಟೆಗಳನ್ನು ಚೆದರಿಸಿಕೊಂಡು ಸ್ಮಶಾನದಲ್ಲಿ ವಾಸಗೈಯುತ್ತಾನೆಯೋ—ಸ್ಮಶಾನದಲ್ಲಿರುವ ಮಾಲ್ಯಗಳು ಭಸ್ಮವು ಅಸ್ಥಿಕಪಾಲಗಳನ್ನು ಭೂಷಣಗಳನ್ನಾಗಿ ಧರಿಸುತ್ತ ಪಿಶಾಚಗಳೊಡನೆ ಇರುತ್ತಾನೆಯೋ—ಅಂಥಾ ಶಿವಸ್ವರೂಪನಾದ ಪರಮೇಶ್ವರನನ್ನು ಆತನ ಚರಣದಿಂದ ಗಳಿತವಾದ ನಿರ್ಮಾಲ್ಯಗಳನ್ನು ಶಿರಸ್ಸಿನಲ್ಲಿ ಧರಿಸುವ ಬ್ರಹ್ಮಾದಿ ದೇವತೆಗಳೂ ಕೂಡ ಅಮಂಗಳರೂಪನನ್ನಾಗಿ ತಿಳಿಯುವದಿಲ್ಲ! ಧರ್ಮರಕ್ಷಕನಾದ ಪರಮೇಶ್ವರನು ನಿರಂಕುಶರಾದ ದುರ್ಜನರಿಂದ ನಿಂದಿಸಲ್ಪಡುತ್ತಿರುವಾಗ ಅಶಕ್ತನಾಗಿ ಪಾಪಭೀರುವಾದವನು ಕಿವಿಗಳನ್ನು ಮುಚ್ಚಿಕೊಂಡು ಆಚೆಗೆ ಹೊರಟುಹೋಗಬೇಕು; ಶಕ್ತನಾದ ಪಕ್ಷದಲ್ಲಿ ನಿಂದೆಯನ್ನು ಮಾಡುತ್ತಿರುವ ದುಷ್ಟರ ನಾಲಿಗೆಯನ್ನು ಬಲಾತ್ಕಾರದಿಂದ ಕೀಳುವ ಛೇದಿಸಬೇಕು; ತಾನಾದರು ಶರೀರವನ್ನು ತ್ಯಾಗಗೈಯಬೇಕು—ಎಂದು ಅನಾದಿಯಾದ ಧರ್ಮವು ಇಹದು; ಆದರಿಂದ ನೀಲಕಂಠನಾದ ಪರಮೇಶ್ವರನಿಂದಕನಾದ ನಿನ್ನ ದೆಸೆಯಿಂದ ಉತ್ಪನ್ನವಾದ ಈ ಶರೀರವನ್ನು ನಾನು ಧರಿಸುವದಿಲ್ಲ; ಪ್ರಮಾದದಿಂದಲಾದರೂ ಅಪವಿತ್ರವಾದ ಅನ್ನವನ್ನು ಭಕ್ಷಿಸಿದರೆ ಶೀಘ್ರವಾಗಿ ಆ ಅನ್ನವನ್ನು ವಮನಂಗೈಯುವದೊಂದೇ ಪರಿಶುದ್ಧವೆಂದು ಮಹಾತ್ಮರು ಹೇಳುವರು; ಸ್ವಸ್ವರೂಪಾನಂದದಲ್ಲಿ ರಮಿಸುತ್ತಿರುವ ಮನನಶೀಲನಾದ ಮಹಾಪುರುಷನ ಬುದ್ಧಿಯು ಕಾಮ್ಯಫಲಪ್ರತಿಪಾದಕಗಳಾಗಿ ವಿಧಿನಿಷೇಧರೂಪಗಳಾದ ವೇದವಾದ

ಗಳನ್ನು ಅನುವರ್ತಿಸುವದಿಲ್ಲ ; ತಮ್ಮ ತಮ್ಮ ಅಧಿಕಾರಾನುಗುಣವಾಗಿ ತಾವು ನಡೆಯಬೇಕು; ದೇವತೆಗಳು ಆಕಾಶವಲ್ಲಿ ಸಂಚರಿಸುತ್ತಾರೆ; ಮನುಷ್ಯಾದಿಗಳು ಭೂಮಿಯಲ್ಲಿ ಸಂಚರಿಸುತ್ತಾರೆ; ತಮ್ಮ ತಮ್ಮ ಅಧಿಕಾರದಲ್ಲಿ ತಾವು ಇರಬೇಕೇ ಹೊರ್ತು ಅನ್ಯರನ್ನು ನಿಂದಿಸಬಾರದು ; ಅದು ಧರ್ಮಪುರುಷನನ್ನು ನಿಂದಿಸಿದಂತೆ ಆಗುವದು ; ರಾಗನಿಮಿತ್ತಕವೂ ಅಗ್ನಿಹೋತ್ರಾದಿ ರೂಪವೂ ಆದ ಪ್ರವೃತ್ತಿಕರ್ಮವು ವೈರಾಗ್ಯನಿಮಿತ್ತಕವಾದ ಶಮದಮಾದಿ ನಿವೃತ್ತಿಕರ್ಮವು ಇವೆರಡು ವೇದದಲ್ಲಿ ವಿಂಗಡಿಸಿ ನಿರೂಪಿಸಲ್ಪಟ್ಟವೆ; ಅವು ಸತ್ಯಗಳೇ ಸರಿ ; ಅವೆರಡಕ್ಕೂ ಒಬ್ಬನು ಅಧಿಕಾರಿಯಾಗುವದಿಲ್ಲ; ಇಂಥಾ ಕರ್ಮದ್ವಯವು ಸಾಕ್ಷಾತ್ ಪರಬ್ರಹ್ಮನಾದ ಸದಾಶಿವನಲ್ಲಿಲ್ಲವು! ಎಲೈ ತಂದೆಯೆ, ಆತ್ಮಜ್ಞರಿಂದ ಆಶ್ರಯಿಸಲ್ಪಟ್ಟ ಅಣಿಮಾದ್ಯಷ್ಟಸಿದ್ಧಿರೂಪಗಳಾದ ಮಾರ್ಗಗಳು ನಿನಗೆ ಬರಲಾರವು ; ನಿಮ್ಮ ವಿಭೂತಿಗಳಾದರೋ ಯಜ್ಞದಲ್ಲಿ ಉಂಟಾದ ಅನ್ನದಿಂದ ತೃಪ್ತವಾಗಿ ಧೂಮಮಾರ್ಗಪ್ರವೃತ್ತರಾದ ಜನರಿಂದ ಸ್ತುತಿಗೈಯಲ್ಪಡುವವಾಗಿ ಯಜ್ಞಶಾಲೆಗಳಲ್ಲಿರುವವು ; ನಮ್ಮ ಮಹಾವಿಭೂತಿಗಳು ಬ್ರಹ್ಮತತ್ವಜ್ಞರಾದ ಮಹಾತ್ಮರಿಂದ ಸೇವಿಸಲ್ಪಡುವವಾಗಿ ಇಚ್ಛಾಮಾತ್ರದಿಂದಲೆ ಕಲ್ಪಿತಗಳಾಗಿರುವವು ; ಅವರಿಂದ ಶ್ರೀ ಪರಮೇಶ್ವರನು ದರಿದ್ರನು ; ನಾನು ಮಹಾ ಧನವಂತನೆಂಬ ಗರ್ವವು ನಿನಗೆ ಬೇಡ ; ಶ್ರೀ ಪರಮೇಶ್ವರನಲ್ಲಿ ಅಪರಾಧವನ್ನು ಮಾಡಿದ ನಿನ್ನ ದೇಹದಿಂದ ಹುಟ್ಟಿದ ಕುತ್ಸಿತವಾದ ಈ ನನ್ನ ಶರೀರದಿಂದ ಫಲವಿಲ್ಲವು ; ಶಿವದ್ವೇಷಿಯಾದ ನಿನ್ನ ಸಂಬಂಧದಿಂದ ನನಗೆ ಮಹತ್ತಾದ ಲಜ್ಜೆಯುಂಟಾಯಿತು ; ಅದರಿಂದ ಮಹಾತ್ಮರಿಗೆ ದ್ರೋಹವನ್ನಾಚರಿಸಿದ ನಿನ್ನ ದೆಸೆಯಿಂದ ಉತ್ಪನ್ನವಾದ ಈ ದೇಹವು ಅಶ್ಲಾಘ್ಯವಾದದ್ದು; ವೃಷಭಧ್ವಜನೂ ಭಗವಂತನೂ ಆದ ಶ್ರೀ ಪರಮೇಶ್ವರನು ಪರಿಹಾಸಕಾಲದಲ್ಲಿ 'ಎಲೈ ದಾಕ್ಷಾಯಣೀದೇವಿಯೆ' ಎಂದು ನಿನ್ನ ನಾಮಧೇಯವನ್ನು ಯಾವಾಗ ಹೇಳುತ್ತಾನೋ ಆಗಲೇ ನಾನು ದುಃಖಿತವಾದ ಮನಸ್ಸುಳ್ಳವಳಾಗಿ ಮುಗುಳುನಗೆಯಿಂದ ರಹಿತವಾದ ಮುಖವುಳ್ಳವಳಾಗುತ್ತೇನೆ; ಅದುಕಾರಣ ನಿನ್ನ ದೇಹದಿಂದ ಜನಿಸಿದ ಈ ಶವದೇಹವನ್ನು ತ್ಯಜಿಸುತ್ತೇನೆಂದು ನುಡಿದಳು ! ಎಲೈ ವಿದುರನೆ, ಈಪ್ರಕಾರವಾಗಿ ಯಜ್ಞಶಾಲೆಯಲ್ಲಿ ಸತೀದೇವಿಯು ದಕ್ಷನನ್ನು ಕುರಿತು ನುಡಿದು ಉತ್ತರಮುಖವಾಗಿ ಕುಳಿತು ಆಚಮನಂಗೈದು ಮೌನವನ್ನು ಧರಿಸಿ ಪೀತಾಂಬರವನ್ನುಟ್ಟವಳಾಗಿ ಆ ವಸ್ತ್ರವನ್ನು ತುಂಬಾ ಹೊದ್ದುಕೊಂಡು ಕಣ್ಣುಗಳನ್ನು ಮುಚ್ಚಿಕೊಂಡು ಯೋಗಧಾರಣವನ್ನು ಮಾಡಿದಳು ; ಸತೀದೇವಿಯು ಯೋಗಾಸನದಲ್ಲಿ ಕುಳಿತವಳಾಗಿ ಪ್ರಾಣಾಪಾನ ವಾಯುಗಳನ್ನು ನಿರೋಧಿಸಿ ನಾಭೀಚಕ್ರದಲ್ಲಿ ನಿಲ್ಲಿಸಿ ಆ ನಾಭೀಚಕ್ರದಿಂದ ಉದಾನವಾಯುವನ್ನು ಎಬ್ಬಿಸಿ ಬುದ್ಧಿಯೊಡನೆ ಮೆಲ್ಲಗೆ ಹೃದಯದಲ್ಲಿ ನಿಲ್ಲಿಸಿ ಅಲ್ಲಿಂದ ಕಂಠಸ್ಥಾನಕ್ಕೆ ಸೇರಿಸಿ ಅಲ್ಲಿಂದ ಭ್ರೂಮಧ್ಯವನ್ನೈದಿಸಿದಳು! ಈಪ್ರಕಾರದಲ್ಲಿ ಮಹಾಪೂಜ್ಯರಾದವರಿಗೂ ಪೂಜ್ಯನಾದ ಪರಮೇಶ್ವರನಿಂದ ಆದರಪೂರ್ವಕವಾಗಿ ತನ್ನ ತೊಡೆಯಮೇಲೆ ಆರೋಪಿಸಲ್ಪಟ್ಟ ದೇಹವನ್ನು ದಕ್ಷನಲ್ಲಿ ಕೋಪದಿಂದ ಬಿಡಲಿಚ್ಛೆಯುಳ್ಳವಳಾಗಿ ಮಾನಶಾಲಿನಿಯಾದ ಸತೀದೇವಿಯು ತನ್ನ ಶರೀರಾವಯವಗಳಲ್ಲಿ ವಾಯು ಅಗ್ನಿಗಳನ್ನು ಧರಿಸಿದಳು. ಅನಂತರದಲ್ಲಿ ಆ ಸತೀದೇವಿಯು ಜಗದ್ಗುರುವಾಗಿ ತನ್ನ ಪತಿಯಾದ ಶ್ರೀ ಪರಮೇಶ್ವರನ ಚರಣಕಮಲವನ್ನು ಧ್ಯಾನಿಸುತ ಮತ್ತೊಬ್ಬರನ್ನು ನೋಡದೆ ಪತಿದೂಷಣ ಶ್ರವಣಜನ್ಯವಾದ ಪಾಪವನ್ನು ಪರಿಹರಿಸಿಕೊಂಡು ಸುಮ್ಮನಾದಳು ; ಆ ಸಮಯದಲ್ಲಿ ಅಂತರಿಕ್ಷದಲ್ಲಿ ದೇವತೆಗಳು ಭೂಮಿಯಲ್ಲಿ ಮನುಷ್ಯರು ಇದನ್ನು ನೋಡಿ ದೇವೋತ್ತಮನಾದ ಪರಮೇಶ್ವರನ ಪ್ರಾಣವಲ್ಲಭಳಾದ ಸತಿಯು ದಕ್ಷನಿಂದ ಅವಮಾನಿತಳಾಗಿ ಕೋಪದಿಂದ ದೇಹವನ್ನು ತ್ಯಜಿಸಿದಳು ; ಮಹಾ ಕಷ್ಟವು ; ಹಾಹಾ ಎಂದು ಶಬ್ದವನ್ನು ಮಾಡಿದರು ; ಈ ಸಮಸ್ತ ಚರಾಚರಾತ್ಮಕವಾದ ಪ್ರಪಂಚದಲ್ಲಿರುವ ಸಮಸ್ತ ಪ್ರಜೆಗಳು ಯಾವ ದಕ್ಷನ ಸಂತತಿಯೋ ಅಂಥಾ ಈ ದಕ್ಷನ ದುಷ್ಕೃತ್ಯವನ್ನು ನೋಡಿ! ಬಹುಮಾನಯೋಗ್ಯಳೂ ಮಗಳೂ ಮಾನಶಾಲಿನಿಯೂ ಆದ ಸತೀದೇವಿಯು ಈ ದಕ್ಷನಿಂದ ಅವಮಾನಿತಳಾಗಿ ಪ್ರಾಣಗಳನ್ನು ಬಿಟ್ಟಳು ; ಪರಮೇಶ್ವರ ದ್ವೇಷಿಯಾದ ಯಾವ ದಕ್ಷನು ತನ್ನಿಂದ ಮಾಡಲ್ಪಟ್ಟ ಶಿವದ್ರೋಹಾಪರಾಧದಿಂದ ಕುಪಿತಳಾಗಿ ದೇಹತ್ಯಾಗಾರ್ಥವಾಗಿ ಉದ್ಯುಕ್ತಳಾದ ಮಾನಪ್ರವೃತ್ತಿಯಾದ ಸತೀದೇವಿಯನ್ನು ತಡೆಯಲಿಲ್ಲವೋ—ಬ್ರಾಹ್ಮಣಾಧಮನೂ ಅಸೂಯಾಪರವಾದ ಚಿತ್ತವುಳ್ಳವನೂ ಆದ ಆ ದಕ್ಷನು ಲೋಕದಲ್ಲಿ ಅಪಕೀರ್ತಿಯನ್ನು ಐದುತ್ತಾನೆಂದು ಸರ್ವಜನರು ನುಡಿಯುತ್ತಿರಲಾಗಿ ಸತೀದೇವಿಯ ದೇಹ

ತ್ಯಾಗವನ್ನು ನೋಡಿ ಪ್ರಮಥಗಣೇಶ್ವರರು ಆಯುಧಧಾರಿಗಳಾಗಿ ದಕ್ಷನನ್ನು ಸಂಹರಿಸಲು ಎದ್ದು ಬರುತ್ತಲಿರುವ ಆ ಗಣೇಶ್ವರರ ವೇಗವನ್ನು ನೋಡಿ ಪ್ರಾಜ್ಞನಾದ ಭೃಗುಋಷಿಯು ಯಜ್ಞವಿಘ್ನಪರಿಹಾರಕವಾದ ಯಜುರ್ಮಂತ್ರಗಳಿಂದ ದಕ್ಷಿಣಾಗ್ನಿಯಲ್ಲಿ ಹೋಮಂಗೈದನು; ಅಧ್ವರ್ಯುವಾದ ಭೃಗುಋಷಿಯಿಂದ ಹೋಮವು ಮಾಡಲ್ಪಡುತ್ತಿರಲಾಗಿ ಆತನ ತಪಸ್ಸಿನಿಂದ ಯಾವ ದೇವತೆಗಳು ಸೋಮದ್ರವ್ಯವನ್ನು ಪಡೆದರೋ ಅವರು ಋಭುಗಳೆಂಬ ನಾಮಧೇಯವುಳ್ಳವರಾದ ದೇವತೆಗಳಾಗಿ ಎದ್ದರು; ಅನಂತರದಲ್ಲಿ ಬ್ರಹ್ಮತೇಜಸ್ಸಿನಿಂದ ಪ್ರಕಾಶಿಸುತ್ತಿರುವ ಆ ದೇವತೆಗಳಿಂದ ಕೊಳ್ಳಿಗಳಿಂದ ಪ್ರಹರಿಸಲ್ಪಡುವರಾಗಿ ಯಕ್ಷಸಹಿತರಾದ ಪ್ರಮಥಗಣಗಳು ದಿಕ್ಕುದಿಕ್ಕುಗಳಿಗೆ ಪಲಾಯನಂಗೈದರು.”

೫ನೇ ಅಧ್ಯಾಯ.

ಪರಮೇಶ್ವರನು ವೀರಭದ್ರನನ್ನು ಸೃಷ್ಟಿಸಿ ದಕ್ಷನನ್ನು ಸಂಹಾರಂಗೈಸಿದ್ದು.

“ಎಲೈ ವಿದುರನೆ, ಆ ಬಳಿಕ ಪರಮೇಶ್ವರನು ದಕ್ಷನಿಂದ ಅವಮಾನಿತಳಾದ ಸತೀದೇವಿಯು ದೇಹವನ್ನು ತ್ಯಜಿಸಿದಳೆಂಬುವದನ್ನೂ ಆ ಯಜ್ಞದಲ್ಲಿ ಹುಟ್ಟಿದ ಋಭುಗಳೆಂಬ ದೇವತೆಗಳಿಂದ ಪರಾಜಿತರಾಗಿ ಪಲಾಯನಂಗೈದ ತನ್ನ ಪಾರಿಷದರಾದ ಪ್ರಮಥಗಣಸಮೂಹದ ವೃತ್ತಾಂತವನ್ನೂ ನಾರದಋಷಿಯಿಂದ ಕೇಳಿ ಮಹಾ ಕೋಪವನ್ನು ಧರಿಸಿ ಕೋಪಿಷ್ಠನಾಗಿ ಹಲ್ಲುಮುಡಿಯನ್ನು ಕಚ್ಚಿಕೊಂಡು ರೌದ್ರಾಕಾರವುಳ್ಳವನಾಗಿ ಮಿಂಚು ಅಗ್ನಿಗಳ ಜ್ವಾಲಾಸಮೂಹದಂತೆ ಕ್ರೂರವಾದ ತೇಜಸ್ಸುಳ್ಳ ಜಟೆಯನ್ನು ಕಿತ್ತು ಎದ್ದು ಗಂಭೀರವಾದ ಮಹಾ ಅಟ್ಟಹಾಸಧ್ವನಿಯಿಂದ ಭೂಮಿಯಲ್ಲಿ ಆ ಜಟೆಯನ್ನು ಬಗದನು; ಆ ಜಟೆಯು ದೆಸೆಯಿಂದ ಸ್ಥೂಲವಾದ ಶರೀರವುಳ್ಳವನಾಗಿ ತನ್ನ ದೇಹದಿಂದ ಆಕಾಶವನ್ನು ವ್ಯಾಪಿಸುವವನಾಗಿ ಸಹಸ್ರಸಂಖ್ಯಾಕಗಳಾದ ಬಾಹುಗಳುಳ್ಳವನಾಗಿ ನೀಲಮೇಘಕಾಂತಿಗೆ ಸಮಾನವಾದ ಕಾಂತಿಯುಳ್ಳವನಾಗಿ ಸೂರ್ಯಬಿಂಬಗಳಂತೆ ಪ್ರಕಾಶಿಸುವ ಮೂರು ನೇತ್ರಗಳುಳ್ಳವನಾಗಿ ಭಯಂಕರಗಳಾದ ಕೋರದಾಡೆಗಳುಳ್ಳವನಾಗಿ ಜ್ವಲಿಸುತ್ತಿರುವ ಅಗ್ನಿಜ್ವಾಲೆಗಳಂತೆ ಕೆಂಪಾದ ಕೇಶಗಳುಳ್ಳವನಾಗಿ ಕಪಾಲಮಾಲೆಯನ್ನು ಧರಿಸಿದವನಾಗಿ ಅನೇಕ ಬಾಹುಗಳಿಂದೆತ್ತಲ್ಪಟ್ಟ ನಾನಾಪ್ರಕಾರಗಳಾದ ಆಯುಧಗಳುಳ್ಳವನಾಗಿ ವೀರಭದ್ರಸ್ವಾಮಿಯು ಅವತರಿಸಿ ಅಂಜಲೀಬಂಧಮಂ ಮಾಡಿ ನಿಂತುಕೊಂಡು—ಎಲೈ ಪರಮೇಶ್ವರನೆ, ನನಿಗೆ ಏನು ಅಪ್ಪಣೆ; ನಾನು ಯಾವ ಕೆಲಸವನ್ನು ಮಾಡಲೆಂದು ವಿಜ್ಞಾಪಿಸುತ್ತಿರಲು ಪರಮೇಶ್ವರನು ಆ ವೀರಭದ್ರಸ್ವಾಮಿಯನ್ನು ಕುರಿತು ‘ಎಲೈ ಶೂರನಾದ ವೀರಭದ್ರನೆ, ನನ್ನ ಭಟರಲ್ಲಿ ನೀನು ಅಗ್ರಗಣ್ಯನಾಗಿ ಹೋಗಿ ಯಜ್ಞಸಹಿತನಾದ ಆ ದಕ್ಷನನ್ನು ಸಂಹರಿಸು; ನೀನು ನನ್ನ ಅಂಶೋದ್ಭವನಾದ್ದರಿಂದ ಬ್ರಹ್ಮತೇಜಸ್ಸು ನಿನ್ನನ್ನು ಜಯಿಸಲಾರದು’ ಎಂದು ನುಡಿದನು.

“ಎಲೈ ವಿದುರನೆ, ಈಪ್ರಕಾರವಾಗಿ ಕೋಪಿಷ್ಠನಾದ ಶ್ರೀರುದ್ರಮೂರ್ತಿಯಿಂದ ಆಜ್ಞಾಪಿಸಲ್ಪಟ್ಟ ಆ ವೀರಭದ್ರನು ವ್ಯಾಪಕರಾದ ದೇವತೆಗಳಿಗೂ ದೇವನಾದ ಆ ಪರಮೇಶ್ವರನನ್ನು ಪ್ರದಕ್ಷಿಣಂಗೈದು ಅಪ್ರತಿಹತವಾದ ವೇಗದಿಂದ ಮಹಾ ಬಲಶಾಲಿಗಳಾದ ಶೂರರ ಬಲವನ್ನೆಲ್ಲವನ್ನು ಶೇರಿಸಿಕೊಂಡು ಎಲ್ಲರನ್ನು ಪರಾಜಿತರಾಗಿ ಮಾಡೇನೆಂಬ ಸಾಮರ್ಥ್ಯವುಳ್ಳವನಾಗಿ ಅಧಿಕವಾಗಿ ಗರ್ಜನಂಗೈಯುತಲಿರುವ ಪ್ರಮಥಗಣೇಶ್ವರರಿಂದ ಅನುಸರಿಸಲ್ಪಟ್ಟವನಾಗಿ ಜಗತ್ಸಂಹಾರಕನಾದ ಯಮನನ್ನು ಸಂಹರಿಸುವಂಥಾ ಮಹಾ ಶೂಲವನ್ನೆತ್ತಿಕೊಂಡು ಧ್ವನಿಸೈಯುತ್ತಿರುವ ಪಾದಾಭರಣಗಳ ಗಗ್ಗರಗಳಿಂದ ಯುಕ್ತಗಳಾದ ಪಾದಗಳುಳ್ಳವನಾಗಿ ಅತಿ ವೇಗದಿಂದ ಬಂದನು! ಆಗ ಋತ್ವಿಕ್ಕುಗಳು ಯಜಮಾನನಾದ ದಕ್ಷನ ಸಭೆಯಲ್ಲಿರುವ ಮಹರ್ಷಿಗಳು ಮೊದಲಾದವರು ಉತ್ತರದಿಕ್ಕಿನಲ್ಲಿ ಎದ್ದಂಥಾ ಕಂಧೂಳಿಯನ್ನು ನೋಡಿ ಈ ಅಂಧಕಾರವೇನು? ಈ ಧೂಳಿ ಏಳುವದಕ್ಕೆ ನಿಮಿತ್ತವೇನು? ಎಂದು ಅಲ್ಲಿನ ಬ್ರಾಹ್ಮಣರು ತಮ್ಮ ಪತ್ನಿಯರಸಹಿತವಾಗಿ ಚಿಂತಿಸಿದರು! ಔತ್ಪಾತಿಕಗಳಾದ ಪ್ರಚಂಡವಾಯುಗಳು ಬೀಸುವದಿಲ್ಲ;

ತೀಕ್ಷ್ಣದಂಡನಾದ ಪ್ರಾಚೀನಬರ್ಹಿರಾಯನು ರಾಜ್ಯಾಧಿಪತಿಯಾಗಿರುತ್ತಿರಲಾಗಿ ಶತ್ರುಗಳು ಇಲ್ಲ; ಪರರಾಯರು ಬಂದು ಗೋವುಗಳನ್ನು ಹಿಡಿಸಿಕೊಂಡು ಹೋಗುವರೆಂಬ ವಾರ್ತೆಯೇ ಇಲ್ಲ; ಹೀಗಿದ್ದಾಗ್ಯೂ ಈ ಮಹತ್ತಾದ ಕಂಧೂಳಿಯು ಎಲ್ಲಿಂದ ಬಂತು? ಈಗ ಲೋಕಕ್ಕೆ ಪ್ರಳಯವೇನಾದರು ಪ್ರಾಪ್ತವಾಗಿದೆಯೋ ಏನೋ? ಎಂದು ಆ ಸಭಾಜನರು ಚಿಂತಿಸುತ್ತಿರಲು ಪ್ರಸೂತಿದೇವಿ ಮೊದಲಾದ ಸ್ತ್ರೀಯರು ಈ ದಕ್ಷಪ್ರಜೇಶನು ತನ್ನ ಪುತ್ರಿಯರೆಲ್ಲರೂ ನೋಡುತ್ತಿರುವಾಗಲೇ ನಿರಪರಾಧಳಾದ ಪುತ್ರಿಯಾದ ಸತೀದೇವಿಯನ್ನು ಅವಮಾನಂಗೈದನು; ಆ ಪಾಪಕ್ಕೆ ಫಲಾನುಭವಕಾಲವೇ ಇದು; ಈ ದಕ್ಷನಿಗೆ ತನ್ನ ಪುತ್ರಿಯಾದ ಸತೀದೇವಿಯನ್ನು ಅವಮಾನಂಗೈದ ಪಾಪವು ಒಂದೇ ಅಲ್ಲ; ಶ್ರೀ ಪರಮೇಶ್ವರನಿಂದಾರೂಪವಾದ ಮಹಾ ಪಾಪವೂ ಸಂಭವಿಸಿದೆ; ಆದುದರಿಂದ ಈ ದಕ್ಷನಿಗೆ ಕ್ಷೇಮವುಂಟಾಗಲಾರದು! ಯಾವ ಪರಮೇಶ್ವರನು ಜಗತ್ತಿನ ಪ್ರಳಯಕಾಲದಲ್ಲಿ ಜಟಾಸಮೂಹವನ್ನು ಚದರಿಸಿಕೊಂಡು ತನ್ನ ಮಹಾಶೂಲದ ಅಗ್ರದಲ್ಲಿ ದಿಗ್ಗಜಗಳನ್ನು ಪೋಣಿಸಿಕೊಂಡು ಆಯುಧಧಾರಿಗಳಾದ ಧ್ವಜಗಳಂತೆ ಉನ್ನತಗಳಾದ ತನ್ನ ಅನೇಕ ಬಾಹುಗಳನ್ನು ಮೇಲಕ್ಕೆತ್ತಿ ವಿಸ್ತರಿಸಿಕೊಂಡು ಮಹತ್ತಾದ ಅಟ್ಟಹಾಸಧ್ವನಿಯಿಂದ ದಿಕ್ಕುಗಳನ್ನು ಭೇದಿಸುವವನಾಗಿ ನರ್ತನಂಗೈಯುತ್ತಾನೆಯೋ—ಸಹಿಸಲಶಕ್ಯವಾದ ತೇಜಸ್ಸುಳ್ಳವನಾಗಿ ಮಹಾ ಕ್ರೋಧದಿಂದ ವ್ಯಾಪ್ತನಾಗಿ ಕ್ರೂರವಾದ ಹುಬ್ಬುಗಂಟಿನಿಂದ ನೋಡಲಶಕ್ಯನಾಗಿ ಕರಾಳಗಳಾದ ಕೋರದಾಡೆಗಳಿಂದ ಎತ್ತಲ್ಪಟ್ಟ ನಕ್ಷತ್ರಸಮೂಹವುಳ್ಳ ಅಂಥಾ ಶ್ರೀ ರುದ್ರಮೂರ್ತಿಯನ್ನು ಅವಮಾನಪೂರ್ವಕವಾಗಿ ಕೋಪವಂತನಾಗಿ ಮಾಡಿದ ಬ್ರಹ್ಮನಿಗೂ ಕ್ಷೇಮವುಂಟಾಗಲಾರದು; ಹೀಗಿರುವಲ್ಲಿ ಮಿಕ್ಕಾದ ಜನರಿಗೆ ಕ್ಷೇಮವು ಹ್ಯಾಗೆ ಉಂಟಾದೀತು? ಎಂದು ನಾನಾಪ್ರಕಾರವಾಗಿ ಭಯವ್ಯಾಕುಲವಾದ ದೃಷ್ಟಿಯುಳ್ಳ ಸಭಾಜನ ಸಮೂಹದಿಂದ ಹೇಳಲ್ಪಡುತಿರಲಾಗಿ ಮಹಾತ್ಮನಾದ ದಕ್ಷನಿಗೂ ಕೂಡ ಭಯವನ್ನುಂಟುಮಾಡುವ ಮಹೋತ್ಪಾತಗಳು ಅಂತರಿಕ್ಷದಲ್ಲಿ ಭೂಮಿಯಲ್ಲಿ ಸಹ ಸಹಸ್ರಪ್ರಕಾರಗಳಾಗಿ ಉಂಟಾದವು! ಎಲೈ ವಿದುರನೆ, ಅಷ್ಟರೊಳಗೆ ನಾನಾವಿಧಗಳಾದ ಆಯುಧಗಳನ್ನು ಧರಿಸಿರುವ ವಾಮನರಾಗಿ ಹೊಂಬಣ್ಣಗಳಾದ ದೇಹಗಳು ಮೊಸಳೆಗಳಂತೆ ಉದರಗಳು ಮುಖಗಳು ಉಳ್ಳವರಾಗಿ ಮಹಾವೇಗಶಾಲಿಗಳಾದ ರುದ್ರಗಣಗಳಿಂದ ಮಹತ್ತಾದ ದಕ್ಷನ ಯಜ್ಞಶಾಲೆಯು ಮುತ್ತಿಕೊಳ್ಳಲ್ಪಟ್ಟಿತು; ಯಜ್ಞಶಾಲೆಯ ಪೂರ್ವ ಪಶ್ಚಿಮ ಸ್ತಂಭಗಳಲ್ಲಿ ಹಾಕಲ್ಪಟ್ಟ ಕಾಷ್ಠವೇ ಪ್ರಾಗ್ವಂಶವೆನಿಸಿಕೊಳ್ಳುವದು; ಆ ಪ್ರಾಗ್ವಂಶವನ್ನು ಕೆಲವರು ಗಣಗಳು ಮುರಿದರು; ಕೆಲವರು ಪತ್ನೀಶಾಲೆಯನ್ನು ಮುರಿದರು; ಕೆಲವರು ಯಜ್ಞಶಾಲೆಯ ಪೂರ್ವದಿಕ್ಕಿನಲ್ಲಿರುವ ಸವಸ್ಸೆಂಬ ಸ್ಥಾನವನ್ನು ಮುರಿದರು; ಅದಕ್ಕೂ ಪೂರ್ವಭಾಗದಲ್ಲಿರುವ ಹವಿರ್ಧಾನವನ್ನು ಕೆಲವರು ಮುರಿದರು; ಅದಕ್ಕೆ ಉತ್ತರಭಾಗದಲ್ಲಿರುವ ಆಗ್ನೀಧ್ರಶಾಲೆಯನ್ನು ಕೆಲವರು ಮುರಿದರು; ಕೆಲವರು ಯಜಮಾನಶಾಲೆಯನ್ನೂ ಪಾಕಶಾಲೆಯನ್ನೂ ಸಹ ಮುರಿದರು; ಕೆಲವರು ರುದ್ರಭಟರು ಯಜ್ಞಪಾತ್ರೆಗಳನ್ನು ಹೊಡದರು; ಕೆಲವರು ಅಗ್ನಿಗಳನ್ನು ಆರಿಸಿದರು; ಕೆಲವರು ಅಗ್ನಿಕುಂಡದಲ್ಲಿ ಮೂತ್ರೋತ್ಸರ್ಗವನ್ನು ಮಾಡಿದರು; ಕೆಲವರು ವೇದಿಕಗಳನ್ನಗದುಹಾಕಿದರು; ಕೆಲವರು ಋಷಿಗಳನ್ನ ಪ್ರಹರಿಸಿದರು; ಕೆಲವರು ಋಷಿಪತ್ನಿಗಳನ್ನು ಹೆದರಿಸಿದರು; ಕೆಲವರು ಪ್ರಮಥಗಣಗಳು ಓಡಿಹೋಗುತಲಿರುವ ದೇವತೆಗಳನ್ನು ಹಿಡಿದುಕೊಂಡರು; ಮಣಿಮಂತನೆಂಬ ಯಕ್ಷಪತಿಯು ಭೃಗುಋಷಿಯನ್ನು ಹಿಡಿದು ಕಟ್ಟಿದನು; ವೀರಭದ್ರನು ದಕ್ಷನನ್ನು ಹಿಡಿದು ಕಟ್ಟಿದನು; ಚಂಡೀಶನು ಪೂಷನೆಂಬ ಸೂರ್ಯನನ್ನು ಕಟ್ಟಿದನು; ಭಗನಾಮಕನಾದ ಸೂರ್ಯನನ್ನು ನಂದೀಶ್ವರನು ಹಿಡಿದು ಕಟ್ಟಿದನು; ಆ ಸಭೆಯಲ್ಲಿರುವ ಋತ್ವಿಕ್ಕುಗಳು ದೇವತೆಗಳು ಆ ಪ್ರಮಥಗಣಗಳ ಶಿಲೆಗಳಿಂದ ಪ್ರಹರಿಸಲ್ಪಟ್ಟವರಾಗಿ ನಾನಾದಿಕ್ಕುಗಳಿಗೂ ಪಲಾಯನಂಗೈದರು; ಆ ಯಜ್ಞಶಾಲೆಯಲ್ಲಿ ಯಾವ ಭೃಗುಋಷಿಯು ದಕ್ಷನಿಂದ ಶಿವದೂಷಣೆ ಮಾಡಲ್ಪಡುವಾಗ ಗಡ್ಡಮೀಸೆಗಳನ್ನು ತೋರಿಸುತ ನಕ್ಕನೋ—ಸ್ರುವವನ್ನು ಕೈಯಲ್ಲಿ ಹಿಡಿದು ಹೋಮಂಗೈಯುತಲಿರುವ ಆ ಭೃಗುಋಷಿಯ ಗಡ್ಡಮೀಸೆಗಳನ್ನು ವೀರಭದ್ರನು ಕಿತ್ತನು; ಭಗನಾಮಕನಾದ ಯಾವ ಸೂರ್ಯನು ಶಿವದೂಷಣವನ್ನು ಮಾಡುತಲಿರುವ ದಕ್ಷನನ್ನು ಕಣ್ಣುಸಂಜ್ಞೆಯಿಂದ ಚನ್ನಾಗಿ ದೂಷಿಸೆಂದು ಸೂಚಿಸಿದನೋ ಆ ಭಗನಾಮಕನಾದ ಸೂರ್ಯನನ್ನು ಕೆಳಕ್ಕೆ ಕೆಡಹಿ ವೀರಭದ್ರನು ಅವನ ಕಣ್ಣುಗಳನ್ನು ಕಿತ್ತನು; ದಕ್ಷನು ಶಿವನನ್ನು

ದೂಷಿಸುವಕಾಲದಲ್ಲಿ ಪೂಷನೆಂಬ ಯಾವ ಸೂರ್ಯನು ಹಲ್ಲುಗಳನ್ನು ತೆರಕೊಂಡು ನಕ್ಕನೋ ಆ ಪೂಷನೆಂಬ ಸೂರ್ಯನ ದಂತಗಳನ್ನು ಅನಿರುದ್ಧನ ವಿವಾಹಕಾಲದಲ್ಲಿ ಬಲರಾಮನು ಕಳಿಂಗದೇಶಾಧಿಪತಿಯಾದ ಕಳಿಂಗರಾಯನ ದಂತಗಳನ್ನು ಹ್ಯಾಗೆ ಕಳದನೋ ಹಾಗೆ ಕಳದನು; ಅನಂತರದಲ್ಲಿ ವೀರಭದ್ರನು ದಕ್ಷನನ್ನು ಕೆಡಹಿ ಅವನ ಎದೆಯಲ್ಲಿ ಕಾಲನ್ನಿರಿಸಿಕೊಂಡು ತೀಕ್ಷ್ಣವಾದ ಅಲಗುಳ್ಳ ಖಡ್ಗದಿಂದ ಅವನ ಶಿರಸ್ಸನ್ನು ಛೇದಿಸಿದಾಗ್ಯೂ ಆ ಶಿರಸ್ಸು ಛೇದಿಸಲ್ಪಡಲಿಲ್ಲ; ಆಗ ಪಶುಪತಿಯಾದ ಶ್ರೀ ವೀರಭದ್ರಸ್ವಾಮಿಯು ಮಂತ್ರರೂಪಗಳಾದ ಅಸ್ತ್ರಗಳಿಂದಲೂ ಶಸ್ತ್ರಗಳಿಂದಲೂ ಛೇದಿಸಲಶಕ್ಯವಾದ ಚರ್ಮವುಳ್ಳ ಆ ದಕ್ಷನನ್ನು ನೋಡಿ ಆಶ್ಚರ್ಯಯುಕ್ತನಾಗಿ ಬಹಳಹೊತ್ತು ಚಿಂತಿಸಿದನು; ಪಶುಪತಿಯಾದ ಆ ವೀರಭದ್ರಸ್ವಾಮಿಯು ಯಜ್ಞಗಳಲ್ಲಿ ಪಶುಗಳನ್ನು ವಿಶಸನ ಮಾಡಿ ಪ್ರಾಣವಿಯೋಗ ನವನ್ನು ಮಾಡುವ ಉಪಾಯವನ್ನಾಲೋಚಿಸಿ ಯಜಮಾನನಾದ ದಕ್ಷನೆಂಬ ಪಶುವಿನ ಶಿರಸ್ಸನ್ನಪಹರಿಸಿದನು; ಈ ಪ್ರಕಾರವಾಗಿ ಯಜ್ಞಧ್ವಂಸವನ್ನು ಮಾಡುತಲಿರುವ ವೀರಭದ್ರಸ್ವಾಮಿಯ ವ್ಯಾಪಾರವನ್ನು ಚನ್ನಾಯಿತೆಂದು ಸ್ತುತಿಸುತಲಿರುವ ಭೂತ ಪ್ರೇತ ಪಿಶಾಚಾದಿಗಳ ಸಾಧುವಾದವು ಉಂಟಾಯಿತು; ಇತರರಾದ ಬ್ರಾಹ್ಮಣಾದಿಗಳು ಈ ವೀರಭದ್ರನು ಹಿಂಸಾವ್ಯಾಪಾರವನ್ನು ಹೀಗೆ ಮಾಡಬಾರದೆಂದು ನುಡಿದರು; ಅನಂತರದಲ್ಲಿ ವೀರಭದ್ರನು ಕೋಪಿಷ್ಠನಾಗಿ ಆ ದಕ್ಷನ ಶಿರಸ್ಸನ್ನು ದಕ್ಷಿಣಾಗ್ನಿಯಲ್ಲಿ ಹೋಮಂಗೈದು ಆ ದೇವಯಾಗವನ್ನು ದಹಿಸಿ ಕೈಲಾಸವನ್ನು ಕುರಿತು ತೆರಳಿ ಹೋದನು" ಎಂದು ನುಡಿದನು.

೬ನೇ ಅಧ್ಯಾಯ.

ಬ್ರಹ್ಮನು ದೇವಸಹಿತನಾಗಿ ದಕ್ಷಾದಿಗಳನ್ನು ಬದುಕಿಸುವದಕ್ಕೋಸ್ಕರ ಪರಮೇಶ್ವರನನ್ನು ಪ್ರಾರ್ಥಿಸಿದ್ದು.

"ಎಲೈ ವಿದುರನೆ, ಆ ಬಳಿಕ ಸಮಸ್ತರಾದ ದೇವತೆಗಳು ಶೂಲಗಳು ಖಡ್ಗಗಳು ಕ್ಷುದ್ರಕತ್ತಿಗಳು ಗದೆಗಳು ಪರಿಘಗಳು ಮೊದಲಾದ ಆಯುಧಗಳನ್ನು ಧರಿಸಿರುವ ಶ್ರೀ ರುದ್ರಗಣಗಳಿಂದ ಪರಾಜಿತರಾಗಿ ಛಿನ್ನಭಿನ್ನಗಳಾದ ಸರ್ವಾಂಗಗಳುಳ್ಳ ಋತ್ವಿಕ್ಕರು ಸಭೆಯಲ್ಲಿ ಕೂಡಿದ್ದ ಮಹರ್ಷಿಗಳು ಭಯಾಕುಲರಾಗಿ ಬ್ರಹ್ಮದೇವನಿಗೆ ನಮಸ್ಕರಿಸಿ ಈ ವೃತ್ತಾಂತವನ್ನೆಲ್ಲವನ್ನು ವಿಸ್ತರದಿಂದ ವಿಜ್ಞಾಪಿಸಿದರು; ಹೀಗೆ ನಡೆಯುತ್ತೆಂಬ ಅರ್ಥವನ್ನು ಮೊದಲೇ ತಿಳಿದು ಭಗವಂತನಾದ ಬ್ರಹ್ಮದೇವನು ವಿಶ್ವಾತ್ಮಕನಾದ ನಾರಾಯಣನು ಆ ಯಜ್ಞಕ್ಕೆ ಬರಲಿಲ್ಲ; ಅನಂತರದಲ್ಲಿ ವಿಭುವಾದ ಬ್ರಹ್ಮನು ಆ ದೇವತೆಗಳ ವಾಕ್ಯವನ್ನು ಕೇಳಿ ಮಹಾ ತೇಜಸ್ವಿಯಾದ ಮಹಾಪುರುಷನಲ್ಲಿ ಅಪರಾಧವನ್ನು ಮಾಡಿ ಜೀವಿಸಲಿಚ್ಛೆಯುಳ್ಳವರಿಗೆ ಬಹಳವಾಗಿ ಕ್ಷೇಮವುಂಟಾಗಲಾರದು; ಆದಾಗ್ಯೂ ನೀವು ಯಜ್ಞಭಾಗಾರ್ಹನಾದ ಪರಮೇಶ್ವರನನ್ನು ದೂರವಾಗಿ ಬಿಟ್ಟವರಾದ್ದರಿಂದ ಶಿವನಿಗೆ ಅಪರಾಧಂಗೈದವರಾದಕಾರಣ ನೀವೇ ಹೋಗಿ ಕ್ಷಿಪ್ರಪ್ರಸಾದವುಳ್ಳ ಪರಮೇಶ್ವರನನ್ನು ಪರಿಶುದ್ಧವಾದ ಮನಸ್ಸಿನಿಂದ ಪ್ರಾರ್ಥಿಸಿ ಆತನ ಪಾದಗಳನ್ನು ಹಿಡಿದು ಒಡಂಬಡಿಸಿ ಕ್ಷಮಿಸುವಂತೆ ಮಾಡಿಕೊಳ್ಳಿ! ಎಲೈ ಲೋಕಪಾಲಕರಾದ ದೇವತೆಗಳಿರಾ, ಯಾವ ಶ್ರೀ ಪರಮೇಶ್ವರನು ಕುಪಿತನಾದರೆ ಯಜ್ಞವು ನಾಶವನ್ನೈದುವದೋ ಅದುಕಾರಣ ನಷ್ಟವಾದ ಯಜ್ಞವನ್ನು ಪುನಃ ಸಾಂಗವಾಗಿ ಮಾಡಿಸಲೋಸುಗ ಪತ್ನೀರಹಿತನಾಗಿ ದಕ್ಷನ ದುರ್ಭಾಷೆಗಳಿಂದ ಪೆಟ್ಟುಬಿದ್ದು ವ್ಯಸನಯುಕ್ತನಾಗಿರುವ ಆ ಪರಮೇಶ್ವರನನ್ನು ಪ್ರಾರ್ಥನೆಗಳಿಂದ ಕ್ಷಮೆಯುಳ್ಳವನನ್ನಾಗಿ ಮಾಡಿಕೊಳ್ಳಿ! ಎಲೈ ದೇವತೆಗಳಿರಾ, ನಾನು ಯಜ್ಞನಾಮಕನಾದ ಇಂದ್ರನು ನೀವು ಇನ್ನೂ ಇತರರಾದ ಪ್ರಾಣಿಗಳು ಮುನಿಗಳೂ ಸಹಾ ಯಾವ ಪರಮೇಶ್ವರನ ತತ್ವವನ್ನು ಬಲ ವೀರ್ಯ ಪ್ರಭಾವಗಳನ್ನು ಸಹಾ ತಿಳಿದವರಲ್ಲವೋ ಅಂಥಾ ಸ್ವತಂತ್ರನಾದ ಆ ಪರಮೇಶ್ವರನ ಪ್ರಸಾದಾರ್ಥವಾಗಿ ಹೋಗೋಣ ಎಂದು ದೇವತೆಗಳಿಗೆ ಆಜ್ಞಾಪಿಸಿ ಪ್ರಜೇಶರಿಂದಲೂ ಪಿತೃದೇವತೆಗಳಿಂದಲೂ ಸಹಿತನಾಗಿ ಬ್ರಹ್ಮದೇವನು ಪುರಾಂತಕನಾದ ಪರಮೇಶ್ವರನಿಗೆ ಪ್ರೀತಿಪಾತ್ರವಾಗಿ ಪರ್ವತಶ್ರೇಷ್ಠವಾದ ಕೈಲಾಸಪರ್ವತವನ್ನು ಕುರಿತು ತೆರಳಿಹೋದನು; ಆ ಕೈಲಾಸವು ಜನ್ಮಾದಿಗಳೆಂಬ ರೋಗಗಳಿಗೆ ಔಷಧಗಳಾದ ತಪಸ್ಸು ಯಾಗವು

ಮಂತ್ರಗಳು ಇವುಗಳಲ್ಲಿ ಸಿದ್ಧರಾದ ದೇವತೆಗಳಿಂದಲೂ ಕಿನ್ನರ ಗಂಧರ್ವರಿಂದಲೂ ಅಪ್ಸರಸ್ತ್ರೀಯರಿಂದಲೂ ಯುಕ್ತವಾಗಿರುವದು; ನಾನಾಪ್ರಕಾರಗಳಾದ ಗೈರಿಕಾದಿ ಧಾತುಗಳಿಂದ ವಿಚಿತ್ರಗಳಾಗಿ ನಾನಾವಿಧಗಳಾದ ವೃಕ್ಷಗಳು ಲತೆಗಳು ಹೊದರುಗಳು ಇವುಗಳಿಂದ ಪ್ರಕಾಶಿಸುತ ನಾನಾವಿಧಗಳಾದ ಮೃಗಸಮೂಹಗಳಿಂದ ಯುಕ್ತವಾಗಿ ನಿರ್ಮಲಗಳಾದ ಗಿರಿನದಿಗಳುಳ್ಳದ್ದಾಗಿ ಅನೇಕವಿಧಗಳಾದ ಗುಹೆಗಳು ತಪ್ಪಲುಗಳು ಉಳ್ಳ ನಾನಾರತ್ನಮಯಗಳಾದ ಶೃಂಗಗಳಿಂದ ಮನೋಹರವಾಗ ಪತಿಗಳೊಡನೆ ವಿಹರಿಸುವ ಸಿದ್ಧಸ್ತ್ರೀಯರಿಗೆ ವಿಹಾರಸ್ಥಾನವಾಗಿರುವದು; ನವಿಲುಗಳ ಕೇಕಾರವಧ್ವನಿಗಳಿಂದ ಯುಕ್ತವಾಗಿ ಮದಿಸಿರುವ ಭೃಂಗಗಳಿಂದ ನಾದಿತವಾಗಿ ದೀರ್ಘಸ್ವರಗಳುಳ್ಳ ಕೋಕಿಲೆಗಳ ಕಂಠನಾದಗಳಿಂದಲೂ ಇತರ ಪಕ್ಷಿಗಳ ನಾದಗಳಿಂದಲೂ ಯುಕ್ತವಾಗಿರುವದು; ಇಷ್ಟಾರ್ಥಗಳನ್ನು ಕೊಡುವ ಕಲ್ಪವೃಕ್ಷಗಳೆಂಬ ಊರ್ಧ್ವಬಾಹುಗಳಿಂದ ಪಕ್ಷಿಗಳನ್ನು ಕರೆಯುವಂತೆ ಪ್ರಕಾಶಿಸುವದಾಗಿ ಆನೆಗಳಿಂದ ನಡೆಯುವ ಗಿರಿ ನದೀ ಪ್ರವಾಹ ಶಬ್ದಗಳಿಂದ ಮಾತನಾಡುವಂತೆ ಇರುವದು; ಮಂದಾರ ವೃಕ್ಷಗಳಿಂದಲೂ ಪಾರಿಜಾತಗಳಿಂದಲೂ ದೇವದಾರುಗಳಿಂದಲೂ ಹೊಂಗೆಗಳಿಂದಲೂ ಸಾಲವೃಕ್ಷಗಳಿಂದಲೂ ತಾಳದ್ರುಮಗಳಿಂದಲೂ ಕೋವಿದಾರಗಳಿಂದಲೂ ಬಂಧೂಕಗಳಿಂದಲೂ ಮತ್ತೀಮರಗಳಿಂದಲೂ ಶೋಭಿತವಾಗಿರುವದು; ಚೂತವೃಕ್ಷಗಳಿಂದಲೂ ಕದಂಬಗಳಿಂದಲೂ ನಾಗಕೇಸರಗಳಿಂದಲೂ ಪುನ್ನಾಗಗಳಿಂದಲೂ ಸಂಪಿಗೆಗಳಿಂದಲೂ ಪಾದರಿಗಳಿಂದಲೂ ಅಶೋಕಗಳಿಂದಲೂ ಪಗಡೆ ವೃಕ್ಷಗಳಿಂದಲೂ ಮೊಲ್ಲೆಗಳಿಂದಲೂ ಗೋರಂಟೆಗಳಿಂದಲೂ ಸ್ವರ್ಣವೃಕ್ಷಗಳಿಂದಲೂ ಅರ್ಕಗಳಿಂದಲೂ ಯಾಲಕ್ಕಿ ಲತೆಗಳಿಂದಲೂ ಜಾಜಿಗಳಿಂದಲೂ ಮಲ್ಲಿಕಾ ಲತೆಗಳಿಂದಲೂ ಮಾಧವೀ ಲತೆಗಳಿಂದಲೂ ಪ್ರಕಾಶಿಸುವದು; ಹಲಸುಗಳಿಂದಲೂ ಅತ್ತೀಮರಗಳಿಂದಲೂ ಅಶ್ವತ್ಥಗಳಿಂದಲೂ ಬಸರಿಗಳಿಂದಲೂ ಆಲಗಳಿಂದಲೂ ಇಂಗಿನ ಮರಗಳಿಂದಲೂ ಭುಜಪತ್ರೆ, ಮರಗಳಿಂದಲೂ ಓಷಧಿಗಳಿಂದಲೂ ಅಡಿಕೆಮರಗಳಿಂದಲೂ ನೇರಳೆಗಳಿಂದಲೂ ಕಾಶ್ಮರಿಗಳಿಂದಲೂ ಆಮ್ರಾತಕಗಳಿಂದಲೂ ಪ್ರಿಯಾಳುಗಳಿಂದಲೂ ಇಪ್ಪೆ ಮರಗಳಿಂದಲೂ ಇಂಗಳದ ಮರಗಳಿಂದಲೂ ಶೋಭಿತವಾಗಿ ನಾನಾಪ್ರಕಾರಗಳಾದ ವೃಕ್ಷಜಾತಿಗಳಿಂದಲೂ ಪ್ರಕಾಶಮಾನವಾಗಿರುವದು; ಬಿಳೀ ನೈದಲೆಗಳಿಂದಲೂ ಕನ್ನೈದಲೆಗಳಿಂದಲೂ ಸೌಗಂಧಿಕಗಳಿಂದಲೂ ಕಮಲಗಳಿಂದಲೂ ಯುಕ್ತವಾಗಿ ಕಮಲಲತೆಗಳಲ್ಲಿ ಮಧುರವಾಗಿ ಧ್ವನಿಗೈವ ಹಂಸಾದಿ ಪಕ್ಷಿಗಳಿಂದ ಶೋಭಿತವಾಗಿರುವದು; ಮೃಗಗಳು ಕಪಿಗಳು ವರಾಹಗಳು ಸಿಂಹಗಳು ಕರಡಿಗಳು ಶಲ್ಯಮೃಗಗಳು ಗವಯಗಳು ಶರಭಗಳು ವ್ಯಾಘ್ರಗಳು ಖುಖುಗಳು ಮಹಿಷಗಳು ಖಡ್ಗಮೃಗಗಳು ಊರ್ಣಮೃಗಳು ಏಕಪಾದ ಮೃಗಗಳು ಕಸ್ತೂರೀಮೃಗಗಳು ಇವುಗಳಿಂದ ವ್ಯಾಪ್ತವಾಗಿ ಬಾಳೇಮರಗಳಿಂದ ಯುಕ್ತಗಳಾದ ಕಮಲ ಲತೆಗಳಿಂದ ವ್ಯಾಪ್ತವಾದ ಮಳಲುಳ್ಳದ್ದಾಗಿರುವದು; ಪಾರ್ವತೀದೇವಿಯು ಸ್ನಾನದಿಂದ ಪವಿತ್ರತರವಾದ ತೀರ್ಥೋದಕಗಳುಳ್ಳ ಗಂಗೆಯಿಂದ ಪವಿತ್ರವಾಗಿರುವದು; ಇಂಥಾ ಪರಮೇಶ್ವರನಿಗೆ ಆವಾಸಸ್ಥಾನವಾದ ಕೈಲಾಸ ಪರ್ವತವನ್ನು ನೋಡಿ ದೇವತೆಗಳು ಆಶ್ಚರ್ಯಪಟ್ಟರು; ಆ ಕೈಲಾಸಪರ್ವತದಲ್ಲಿ ದೇವತೆಗಳು ಅಲಕಾನಾಮಕವಾದ ಪುರವನ್ನು ನೋಡಿದರು; ಆ ಪುರದಲ್ಲಿ ಸೌಗಂಧಿಕಾ ಪುಷ್ಪಗಳ ಉದ್ಯಾನವನವಿರುವದು; ಆ ಅಲಕಾಪುರವೆಂಥಾದ್ದೆಂದರೆ: ತೀರ್ಥಪಾವನನಾದ ಶ್ರೀಹರಿಯ ಪಾದಧೂಳಿಯಿಂದ ಪವಿತ್ರಗಳಾದ ನಂದ ಅಲಕನಂದ ಎಂಬ ನಾಮಧೇಯಗಳುಳ್ಳ ಎರಡು ನದಿಗಳು ಆ ಪುರದ ಸುತ್ತಲೂ ಸುತ್ತಿಕೊಂಡಿರುವವು! ಎಲೈ ವಿದುರನೆ, ದೇವತಾಸ್ತ್ರೀಯರು ರತಿಶ್ರಾಂತರಾಗಿ ಸ್ವರ್ಗಲೋಕದಿಂದ ಇಳಿದುಬಂದು ಆ ನದಿಗಳಲ್ಲಿ ಇಳಿದು ಜಲಕ್ರೀಡೆಯನ್ನು ಮಾಡುತ ಪುರುಷರನ್ನು ನೀರುಗಳಿಂದ ಯರಚುತ ವಿಹರಿಸುವರು; ಪುರುಷಗಜಗಳು ಬಾಯಾರಿಕೆ ಇಲ್ಲದಿದ್ದಾಗ್ಯೂ ಅಪ್ಸರಸ್ತ್ರೀಯರ ಸ್ನಾನಗಳಿಂದ ಜಾರಿದ ನೂತನವಾದ ಕುಂಕುಮದಿಂದ ಹೊಂಬಣ್ಣಗಳಾದ ಆ ನದಿಗಳ ಉದಕಗಳನ್ನು ಪಾನಗೈದು ಹೆಣ್ಣಾನೆಗಳಿಗೆ ಪಾನಗೈಸುವವು; ರಜತ ಸುವರ್ಣ ರತ್ನಮಯಗಳಾದ ಅನೇಕ ಶತವಿಮಾನಗಳಿಂದ ಸಂಕುಲವಾಗಿ ದಿವ್ಯಸ್ತ್ರೀಯರಿಂದ ಯುಕ್ತವಾಗಿ ಆ ಪುರವು ಮಿಂಚುಗಳಿಂದಲೂ ಮೇಘಗಳಿಂದಲೂ ಯುಕ್ತವಾದ ಆಕಾಶದಂತೆ ಪ್ರಕಾಶಿಸುವದು; ಯಕ್ಷಪತಿಯಾದ ಕುಬೇರನ ಅಲಕಾಪುರವನ್ನು ಬಿಟ್ಟು ಇಷ್ಟಾರ್ಥ ಪ್ರದಗಳಾದ ಪುಷ್ಪಫಲಂಗಳುಳ್ಳ ಕಲ್ಪವೃಕ್ಷಗಳಿಂದ ಶೋಭಿತವಾದ ಆ ಉದ್ಯಾನವನವನ್ನು ದಾಟಿ ದೇವತೆಗಳು ಮುಂದಕ್ಕೆ ತೆರಳ

ದೂರದಲ್ಲಿ ರಾಗಯುಕ್ತವಾದ ಸ್ವರವುಳ್ಳ ಕೋಕಿಲೆಗಳು ಮೊದಲಾದ ಪಕ್ಷಿಗಳ ಸ್ವರದಿಂದ ಮಿಶ್ರವಾದ ಭೃಂಗನಾದದಿಂದ ಪ್ರಕಾಶಿತವಾಗಿ ಕಲಹಂಸಪಕ್ಷಿಗಳಿಗೆ ಪ್ರಿಯಸ್ಥಾನವಾಗಿ ಮದಯುಕ್ತಗಳಾದ ಆನೆಗಳಿಂದ ಉಜ್ಜಲ್ಪಟ್ಟ ಹರಿಚಂದನವೃಕ್ಷಗಳ ಪರಿಮಳಗಳಿಂದ ಯುಕ್ತವಾದ ವಾಯುವಿನಿಂದ ದೇವಸ್ತ್ರೀಯರಿಗೆ ಕಾಮೋದ್ದೀಪನವನ್ನುಂಟುಮಾಡುವ ವೈಡೂರ್ಯರತ್ನಮಯಗಳಾದ ಸೋಪಾನವುಳ್ಳವುಗಳಾಗಿ ಕಠಿನಗಳಾದ ದಂಡಗಳುಳ್ಳ ಪದ್ಮೋತ್ಪಲಗಳ ಸಮೂಹದಿಂದ ರಮ್ಯಗಳಾದ ಸರೋವರಗಳಿಂದ ಪರಿವೇಷ್ಟಿತವಾಗಿ ಕಿಂಪುರುಷರಿಂದ ವ್ಯಾಪ್ತವಾದ ಒಂದು ವಟವೃಕ್ಷವನ್ನು ಕಂಡರು; ಆ ವೃಕ್ಷವು ನೂರುಯೋಜನ ಪ್ರಮಾಣ ಔನ್ನತ್ಯವುಳ್ಳದ್ದು; ಇಪ್ಪತ್ತೈದುಯೋಜನ ಉದ್ದವುಳ್ಳ ಕೊಂಬೆಗಳಿಂದ ಯುಕ್ತವಾಗಿ ಎಲ್ಲಾಕಡೆಯಲ್ಲಿಯೂ ವಿಸ್ತಾರವಾದ ನೆರಳುಳ್ಳದ್ದಾಗಿ ಗೂಡುಗಳಿಂದ ರಹಿತವಾಗಿ ತಾಪಪರಿಹಾರಕವಾಗಿರುವದು; ಮೋಕ್ಷಾಪೇಕ್ಷಿಗಳಾದ ಮಹಾ ಯೋಗಿಗಳಿಗೆ ರಕ್ಷಕವಾಗಿ ಮಹಾಯೋಗಸ್ವರೂಪವಾದ ಆ ವಟವೃಕ್ಷದ ಮೂಲದಲ್ಲಿ ಸುಖಾಸೀನನಾಗಿ ಕೋಪರಹಿತನಾದ ಸಾಕ್ಷಾತ್ ಧರ್ಮಪುರುಷನಂತೆ ಕುಳಿತಿರುವವನಾಗಿ ಉಪಶಾಂತರಾದ ಸನಕಾದಿ ಮಹಾ ಸಿದ್ಧರಿಂದಲೂ ಯಕ್ಷರಾಕ್ಷಸಪತಿಯಾಗಿ ಮಿತ್ರನಾದ ಕುಬೇರನಿಂದಲೂ ಸಹ ಸೇವಿಸಲ್ಪಡುತಲಿರುವ ಶಾಂತವಿಗ್ರಹನಾಗಿರುವ ಪರಮೇಶ್ವರನನ್ನು ಕಂಡರು! ಆ ಮಹೇಶ್ವರನು ಉಪಾಸನೆಯು ತಪಸ್ಸು ಯೋಗವು ಇವುಗಳ ಮಾರ್ಗವನ್ನು ಉಪದೇಶಂಗೈವ ವ್ಯಾಜದಿಂದ ತಾನೆ ಆಚರಿಸುತಲಿರುವನು; ಸರ್ವಲೋಕಗಳಿಗೂ ಮಂಗಳಸ್ವರೂಪನು; ಸರ್ವಪ್ರಪಂಚಕ್ಕೂ ಸುಹೃತ್ತಾದವನು; ಸರ್ವಲೋಕಗಳಿಗೂ ಅಧೀಶ್ವರನಾಗಿ ಭಕ್ತವಾತ್ಸಲ್ಯದಿಂದ ಸಂಚರಿಸುವನು; ಸಂಧ್ಯಾಕಾಲಮೇಘದಂತೆ ಕೆಂಪಾದ ಕಾಂತಿಯುಳ್ಳ ಶರೀರದಿಂದ ಮಹರ್ಷಿಗಳಿಗೆ ಪ್ರೀತಿಪಾತ್ರವಾದ ಭಸ್ಮವನ್ನು ದಂಡವನ್ನು ಜಡೆಗಳನ್ನು ವ್ಯಾಘ್ರಾಜಿನವನ್ನು ಚಂದ್ರರೇಖೆಯನ್ನು ಸಹ ಚಿಹ್ನವನ್ನಾಗಿ ಧರಿಸಿರುವನು; ಮಹಾತ್ಮರಾದ ಯೋಗಿಗಳು ಶ್ರವಣಂಗೈಯುತಿರಲು ನಾರದನಿಗೋಸ್ಕರ ಸನಾತನವಾದ ಪರಬ್ರಹ್ಮಸ್ವರೂಪವನ್ನು ಉಪದೇಶಂಗೈಯುತ ದರ್ಭಮಯವಾದ ಶುದ್ಧಾಸನದಲ್ಲಿ ಕುಳಿತಿರುವನು; ಬಲದ ಜಾನುಸ್ಥಾನದಲ್ಲಿ ವಾಮಪಾದಪದ್ಮವನ್ನಿರಿಸಿಕೊಂಡು ಎಡದ ಮೊಳಕಾಲಮೇಲೆ ವಾಮಭುಜವನ್ನಿರಿಸಿಕೊಂಡು ದಕ್ಷಿಣ ಹಸ್ತದ ಮಣಿಕಟ್ಟಿನಲ್ಲಿ ಅಕ್ಷಮಾಲೆಯನ್ನೂ ಜ್ಞಾನಮುದ್ರೆಯನ್ನೂ ಧರಿಸಿಕೊಂಡಿರುವನು; ಬ್ರಹ್ಮಾನಂದರೂಪವಾದ ಸಮಾಧಿಯಲ್ಲಿ ಯೋಗಪಟ್ಟವನ್ನಾಶ್ರಯಿಸಿಕೊಂಡಿರುವ ಮನನಶೀಲರಾದ ಮಹಾ ಯೋಗಿಗಳಲ್ಲಿ ಪ್ರಥಮ ಮಹಾಯೋಗಿಯಾದ ಆ ಶ್ರೀಪರಮೇಶ್ವರನನ್ನು ಲೋಕಪಾಲಕಸಹಿತರಾದ ಮುನಿಗಳು ಅಂಜಲಿಬಂಧಂಗೈದವರಾಗಿ ನಮಸ್ಕರಿಸಿದರು! ಅನಂತರದಲ್ಲಿ ಸಮಸ್ತ ಸುರಾಸುರರಿಂದಲೂ ನಮಸ್ಕರಿಸಲ್ಪಟ್ಟ ಪಾದಗಳುಳ್ಳ ಆ ಪರಮೇಶ್ವರನು ಎದುರಾಗಿ ಬಂದ ಆ ಬ್ರಹ್ಮನನ್ನು ನೋಡಿ ಎದ್ದು ಪೂಜ್ಯನಾಗಿ ವಿಷ್ಣುವಾದ ವಾಮನಮೂರ್ತಿಯು ಕಶ್ಯಪಋಷಿಗೆ ನಮಸ್ಕರಿಸಿದಂತೆ ನಮಸ್ಕರಿಸಿದನು; ಅದೇಪ್ರಕಾರವಾಗಿ ಪರಮೇಶ್ವರನನ್ನನುಸರಿಸಿಕೊಂಡಿರುವ ಯಾವ ಸಿದ್ಧಗಣಗಳುಂಟೋ ಅವರೆಲ್ಲರೂ ಮಹರ್ಷಿಗಳ ಸಹಿತರಾಗಿ ಬ್ರಹ್ಮನಿಗೆ ನಮಸ್ಕರಿಸಿದರು; ಪರಮೇಶ್ವರನಿಂದಲೂ ಆತನ ಅನುವರ್ತಿಗಳಿಂದಲೂ ನಮಸ್ಕರಿಸಲ್ಪಟ್ಟ ಬ್ರಹ್ಮದೇವನು ಚಂದ್ರಶೇಖರನಾದ ಪರಮೇಶ್ವರನನ್ನು ಕುರಿತು ನಗುತ "ಎಲೈ ಪರಮೇಶ್ವರನೆ, ನೀನು ಅಪಕೃಷ್ಟನಂತೆ ನನಗೆ ನಮಸ್ಕರಿಸುತ್ತೀಯೆ; ಆದಾಗ್ಯೂ ನಿನ್ನ ಐಶ್ವರ್ಯಮಾಹಾತ್ಮ್ಯವನ್ನು ನಾನು ಬಲ್ಲೆನು; ನೀನು ಸರ್ವಪ್ರಪಂಚಕ್ಕೂ ಈಶ್ವರನು ಎಂದು ನಾನು ತಿಳಿಯುತ್ತೇನೆ; ಜಗತ್ತಿಗೆ ಯೋನಿಬೀಜರೂಪವಾದ ಪ್ರಕೃತಿ ಪುರುಷರಿಗೆ ಮೂಲಕಾರಣನಾಗಿ ಭೇದರಹಿತನೂ ನಿರ್ವಿಕಾರನೂ ಆದ ಪರಬ್ರಹ್ಮನೇ ನೀನೆಂದು ತಿಳಿಯುತ್ತೇನೆ! ಎಲೈ ಭಗವಂತನಾದ ಪರಮೇಶ್ವರನೇ, ನೀನೊಬ್ಬನೇ ಅವಿಭಕ್ತಗಳಾದ ಶಿವಶಕ್ತಿಗಳಲ್ಲಿ ಕ್ರೀಡಿಸುವವನಾಗಿ ಈ ಜಗತ್ತನ್ನು ಸೃಷ್ಟಿಸುತ್ತೀಯೆ; ರಕ್ಷಿಸುತ್ತೀಯೆ; ಸಂಹರಿಸುತ್ತೀಯೆ; ಊರ್ಣನಾಭಿಯೆಂಬ ಕ್ರಿಮಿಯು ಹ್ಯಾಗೆ ತನ್ನಿಂದ ರಚಿತವಾದ ತಂತುಜಾಲದಲ್ಲಿ ಕ್ರೀಡಿಸುತ ಆ ತಂತುಗಳನ್ನು ತಾನೇ ತಿರೋಧಾನಂಗೈವದೋ ಹಾಗೆ ಸೃಷ್ಟ್ಯಾದಿ ಕಾರ್ಯತ್ರಯವನ್ನು ನೀನೇ ಮಾಡುತ್ತೀಯೆ! ಎಲೈ ಪರಮೇಶ್ವರನೆ, ಧರ್ಮಾರ್ಥಗಳನ್ನುಂಟುಮಾಡುವ ವೇದವನ್ನು ರಕ್ಷಿಸಲೋಸುಗ ನೀನೇ ನಿಮಿತ್ತಮಾತ್ರನಾದ ದಕ್ಷನಿಂದ ಯಜ್ಞವನ್ನು ಸೃಷ್ಟಿಸಿದೆ; ಲೋಕದಲ್ಲಿ ಧರ್ಮಾಧರ್ಮ ಮರ್ಯಾದೆಗಳು ನಿನ್ನಿಂದಲೇ ಸ್ಥಾಪಿಸಲ್ಪಟ್ಟವೆ;

ಆ ಮರ್ಯಾದೆಗಳನ್ನು ಬ್ರಾಹ್ಮಣೋತ್ತಮರಾದ ಸಮಸ್ತರೂ ಅನುಸರಿಸಿ ನಡೆಯುತ್ತಾರೆ! ಎಲೈ ಮಂಗಳಸ್ವರೂಪನಾದ ಪರಮೇಶ್ವರನೇ, ಶುಭಕರಗಳಾದ ಸತ್ಕರ್ಮಗಳನ್ನು ಮಾಡುವ ಪುರುಷನಿಗೆ ಸ್ವರ್ಗಾದಿ ಪುಣ್ಯಲೋಕಗಳನ್ನೂ ಪರಮಪದವಾದ ಮುಕ್ತಿಯನ್ನೂ ನೀನೇ ಕೊಡುತ್ತೀಯೆ; ನಿಷಿದ್ಧಗಳಾದ ಪಾಪಕರ್ಮಗಳನ್ನು ಮಾಡುವ ಪುರುಷನಿಗೆ ಭಯಂಕರವಾದ ನರಕವನ್ನು ನೀನೇ ಕೊಡುತ್ತೀಯೆ; ಆ ಅರ್ಥವು ಯಾರಿಗಾದರೂ ಬಲ್ಲನಿಗೆ ಯಾವಕಾರಣದಿಂದ ವ್ಯತ್ಯಸ್ತವಾಗುತ್ತದೆ! ಎಲೈ ಸ್ವಾಮಿಯೆ, ನಿನ್ನ ಪಾದಗಳಲ್ಲಿ ಅರ್ಪಿಸಲ್ಪಟ್ಟ ಚಿತ್ತವುಳ್ಳವರಾಗಿ ಸರ್ವಪ್ರಾಣಿಗಳಲ್ಲಿಯೂ ನಿನ್ನನ್ನು ನೋಡುತಿರುವವರಾಗಿ ಸರ್ವಭೂತಗಳನ್ನು ಆತ್ಮನಲ್ಲಿ ಭೇದದೃಷ್ಟಿಯಿಲ್ಲದೆ ಅಭೇದದಿಂದಲೆ ನೋಡುವ ಸತ್ಪುರುಷರನ್ನು ರೋಷವು ಅಜ್ಞನನ್ನು ತಿರಸ್ಕರಿಸುವಂತೆ ತಿರಸ್ಕರಿಸಲಾರದು; ಯಾವ ಮೂಢಜನರು ಭೇದದೃಷ್ಟಿಯುಳ್ಳವರಾಗಿ ಕರ್ಮಮಾರ್ಗದಲ್ಲೇ ಆಸಕ್ತರಾಗಿ ದುಷ್ಟವಾದ ಚಿತ್ತವುಳ್ಳವರಾಗಿ ನಿರಂತರವು ಪರರ ಅಭ್ಯುದಯವನ್ನು ನೋಡಿ ದುಃಖಪಡುವವರಾಗಿ ಪರರ ಮರ್ಮವನ್ನೇ ಭೇದಿಸುವವರಾಗಿ ಅನ್ಯರಾದ ಮಹಾತ್ಮರನ್ನು ದುರ್ಭಾಷೆಗಳಿಂದ ವ್ಯಥೆಪಡಿಸುತ್ತಾರೋ—ದೈವದಿಂದಲೇ ಹತರಾದ ಅಂಥಾ ಮೂಢರನ್ನು ನೀನು ಸಂಹರಿಸಬೇಡ; ಯಾವ ಪ್ರದೇಶದಲ್ಲಿ ಯಾವ ಸಮಯದಲ್ಲಿ ಅತಿಕ್ರಮಿಸಲಶಕ್ಯವಾದ ಪದ್ಮನಾಭನ ಮಾಯೆಯಿಂದ ಅಪಹೃತವಾದ ವಿವೇಕವುಳ್ಳವರಾಗಿ ಭೇದಬುದ್ಧಿಯುಳ್ಳವರಾಗಿ ಮತ್ತರಾಗುತ್ತಾರೆಯೋ ಆಗ ಮಹಾತ್ಮರು ಅಂಥಾ ಮೂಢರಲ್ಲಿ ದಯೆಯನ್ನೇ ಮಾಡುತ್ತಾರೆ; ಪರಾಕ್ರಮವನ್ನು ಮಾಡುವದಿಲ್ಲ; ದೈವಪ್ರೇರಣೆಯಿಂದ ಆಗುವ ವಿವೇಕಾವಿವೇಕಗಳಿಗೆ ಯಾರಿಂದ ಏನಾದೀತು ಎಂದು ತಿಳಿದು ಅನುಗ್ರಹವನ್ನೇ ಮಾಡುತ್ತಾರೆ! ಎಲೈ ಪ್ರಭುವಾದ ಪರಮೇಶ್ವರನೆ, ನೀನು ಪರಮಪುರುಷನಾದ ಪರಮಾತ್ಮನನ್ನು ಅತಿಕ್ರಮಿಸಲಶಕ್ಯವಾದ ಮಾಯೆಯಿಂದ ಆವೃತವಲ್ಲದ ಬುದ್ಧಿಯುಳ್ಳವನಾದಕಾರಣ ಸರ್ವಜ್ಞನಾದವನು; ಅದುಕಾರಣ ಆ ಮಾಯೆಯಿಂದ ಮೋಹಿತಮನಸ್ಕರಾಗಿ ಕರ್ಮಮಾರ್ಗಾಸಕ್ತರಾದ ಮೂಢಜನರಲ್ಲಿ ಅನುಗ್ರಹವನ್ನೇ ಮಾಡುವವನಾಗು! ಎಲೈ ಪರಮೇಶ್ವರನೆ, ನಿನ್ನಿಂದ ಹತನಾದ ದಕ್ಷನ ಅಸಮಾಪ್ತವಾದ ಯೋಗವನ್ನು ಉದ್ಧಾರಂಗೈವವನಾಗು; ಯಜ್ಞಭಾಗಾರ್ಹನಾದ ನಿನಗೆ ಕುಯಾಜ್ಞಿಕರಾದ ಋತ್ವಿಕ್ಕುಗಳು ಹವಿರ್ಭಾಗವನ್ನು ಕೊಡದೇಹೋದರು; ಆದಾಗ್ಯು ನಿನ್ನಿಂದಲೇ ಯಜ್ಞವು ಪೂರ್ತಿಯನ್ನೈದಬೇಕು; ಅದುಕಾರಣ ಯಜ್ಞಕರ್ತೃವಾದ ದಕ್ಷನು ಜೀವಿಸಲಿ; ಭಗನೆಂಬ ಸೂರ್ಯನು ನೇತ್ರಗಳನ್ನು ಪಡೆಯಲಿ; ಭೃಗುಋಷಿಯ ಗಡ್ಡಮೀಸೆಗಳು ಪುನಶ್ಚ ಹುಟ್ಟಲಿ; ಪೂಷನೆಂಬ ಸೂರ್ಯನ ದಂತಗಳು ಮೊದಲಿನಂತೆ ಹುಟ್ಟಲಿ; ಶಿಲಾಪ್ರಹಾರಗಳಿಂದ ಭಗ್ನಗಳಾದ ಅಂಗಗಳುಳ್ಳ ದೇವತೆಗಳಿಗೂ ಋತ್ವಿಕ್ಕುಗಳಿಗೂ ನಿನ್ನ ಅನುಗ್ರಹದಿಂದ ಶೀಘ್ರವಾಗಿ ಆರೋಗ್ಯವುಂಟಾಗಲಿ! ಎಲೈ ಶ್ರೀರುದ್ರನೆ, ಯಜ್ಞದಲ್ಲಿ ಯಾವ ಯಾವ ಪದಾರ್ಥಗಳು ಎಷ್ಟೆಷ್ಟು ಮಿಗುತ್ತೆಯೊ ಆ ಪದಾರ್ಥವೆಲ್ಲವೂ ನಿನಗೆ ಭಾಗವಾಗಲಿ! ಎಲೈ ದಕ್ಷಯಜ್ಞಧ್ವಂಸಕನಾದ ಈಶ್ವರನೆ, ಈಗ ದಕ್ಷನ ಯಜ್ಞದಲ್ಲಿ ಅವಶಿಷ್ಟವಾದ ಸಮಸ್ತ ವಸ್ತುಗಳು ನಿನ್ನ ಭಾಗವಾದ್ದರಿಂದ ಆ ಯಜ್ಞವು ಸಾಂಗವಾಗಲಿ'' ಎಂದು ಬ್ರಹ್ಮದೇವನು ಶ್ರೀ ಪರಮೇಶ್ವರನನ್ನು ಕುರಿತು ನಿರೂಪಿಸಿದನು.

೭ನೇ ಅಧ್ಯಾಯ.

ದಕ್ಷ ಶಿವರಿಂದ ಸ್ತುತಿಗೈಯಲ್ಪಟ್ಟ ವಿಷ್ಣುವು ದಕ್ಷನಿಂದ ಯಜ್ಞವನ್ನು ಮಾಡಿಸಿದ್ದು.

"ಈಪ್ರಕಾರವಾಗಿ ಬ್ರಹ್ಮನಿಂದ ಪ್ರಾರ್ಥಿತನಾಗಿ ಸಂತುಷ್ಟನಾದ ಪರಮೇಶ್ವರನು ಬ್ರಹ್ಮನನ್ನು ಕುರಿತು 'ಎಲೈ ಬ್ರಹ್ಮನೆ, ನಾನು ದೇವಮಾಯೆಯಿಂದ ಮೂಢರಾದ ಬಾಲಕರ ಅಪರಾಧವನ್ನು ಹೇಳುವದೂ ಇಲ್ಲ; ಚಿಂತಿಸುವದೂ ಇಲ್ಲ: ಲೋಕದಲ್ಲಿ ವಿವೇಕಾರ್ಥವಾಗಿ ಶಿಕ್ಷೆಯನ್ನು ಮಾಡಿದೆನು; ದಗ್ಧವಾದ ಶಿರಸ್ಸುಳ್ಳ ದಕ್ಷನಿಗೆ ಆಡಿನ ಮುಖವೇ ಶಿರಸ್ಸಾಗಲಿ; ಭಗನೆಂಬ ಸೂರ್ಯನು ತನ್ನ ಯಜ್ಞಭಾಗವನ್ನು ಮಿತ್ರನಾಮಕನಾದ ಸೂರ್ಯನ ಚಕ್ಷುಸ್ಸಿನಿಂದ ನೋಡಲಿ; ಪೂಷನೆಂಬ ಸೂರ್ಯನು ಯಜಮಾನ ದಂತಗಳಿಂದ ಪಿಷ್ಟವನ್ನು ಭಕ್ಷಿಸಲಿ; ಯಾವ

ದೇವತೆಗಳು ನನಗೆ ಯಜ್ಞಶೇಷವನ್ನಿತ್ತರೋ ಅವರು ಪುನಃ ಉತ್ಪನ್ನಗಳಾದ ಸರ್ವಾಂಗಗಳುಳ್ಳವರಾಗಲಿ; ಯಾವ ದೇವತೆಗಳಿಗೆ ಅಂಗಗಳು ನಿಶ್ಶೇಷವಾಗಿ ಹೋದವೋ ಅವರು ಅಶ್ವಿನೀ ದೇವತೆಗಳ ಬಾಹುಗಳನ್ನು ಮಾಡಿಕೊಳ್ಳಲಿ; ಪೂಷನೆಂಬ ದೇವನ ಹಸ್ತಗಳನ್ನು ತಮ್ಮ ಹಸ್ತಗಳನ್ನಾಗಿ ಮಾಡಿಕೊಳ್ಳಲಿ; ಅಧ್ವರ್ಯುಗಳು ಮಿಗಲಾದ ಋತ್ವಿಕ್ಕುಗಳು ಆಡಿನ ಮೀಸೆಗಳುಳ್ಳವರಾಗಲಿ; ಭೃಗುಋಷಿಯೂ ಆಡಿನ ಮೀಸೆಯುಳ್ಳವನಾಗಲಿ' ಎಂದು ಪರಮೇಶ್ವರನಿಂದ ಹೇಳಲ್ಪಟ್ಟ ಅರ್ಥವನ್ನು ಕೇಳಿ ಸರ್ವಜನರೂ ಸಂತುಷ್ಟಚಿತ್ತರಾಗಿ ಚನ್ನಾಯಿತು-ಚನ್ನಾಯಿತು-ಎಂದು ನುಡಿದರು; ಇಂದ್ರಾದಿ ದೇವತೆಗಳು ಮಹರ್ಷಿಗಳ ಸಮೇತರಾಗಿ ಪರಮೇಶ್ವರನನ್ನು ಸಮ್ಮತಿಪಡಿಸಿಕೊಂಡು ಆ ಪರಮೇಶ್ವರನಿಂದಲೂ ಬ್ರಹ್ಮನಿಂದಲೂ ಸಹಿತರಾಗಿ ಆ ದಕ್ಷನ ಯಜ್ಞಶಾಲೆಗೆ ಬಂದರು! ಅನಂತರದಲ್ಲಿ ಇಂದ್ರಾದಿ ದೇವತೆಗಳು ಪರಮೇಶ್ವರನಿಂದ ಹೇಳಲ್ಪಟ್ಟಪ್ರಕಾರವಾಗಿ ಅಂಗಹೀನರಾದ ಸಮಸ್ತರಿಗೂ ಹಸ್ತಪಾದಾದಿ ಶರೀರಾವಯವಗಳನ್ನು ಸಂಧಾನಂಗೈದು ಸವನೀಯ ಪಶುವಿನ ಶಿರಸ್ಸನ್ನು ತಂದು ದಕ್ಷನ ಶಿರಸ್ಸನ್ನಾಗಿರಿಸಿ ಸಂಧಾನಂಗೈದರು; ಆಗ ದಕ್ಷನು ಪರಮೇಶ್ವರನಿಂದ ನೋಡಲ್ಪಟ್ಟವನಾಗಿ ನಿದ್ರೆಗೈಯುತ ಮಲಗಿದ್ದು ಎದ್ದವನಂತೆ ಆ ಕ್ಷಣದಲ್ಲಿದ್ದು ಪುರೋಭಾಗದಲ್ಲಿರುವ ಪರಮೇಶ್ವರನನ್ನು ಕಂಡನು; ಆ ಸಮಯದಲ್ಲಿ ಪರಮೇಶ್ವರ ದ್ವೇಷದಿಂದ ಕಲುಷವಾದ ಚಿತ್ತವೃತ್ತಿಯುಳ್ಳ ಆ ದಕ್ಷನು ಪರಮೇಶ್ವರನ ಕಟಾಕ್ಷಕ್ಕೆ ಪಾತ್ರನಾದಮೇಲೆ ಶರತ್ಕಾಲದ ಸರೋವರದಂತೆ ನಿರ್ಮಲಸ್ವಭಾವವುಳ್ಳವನಾದನು; ಆಗ ದಕ್ಷನು ಅನುರಾಗದಿಂದ ಪರಮೇಶ್ವರನನ್ನು ಸ್ತುತಿಸುವದಕ್ಕೆ ಉದ್ಯುಕ್ತನಾಗಿ ದೇಹತ್ಯಾಗವನ್ನು ಮಾಡಿದ ಪುತ್ರಿಯಾದ ಸತೀದೇವಿಯನ್ನು ಸ್ಮರಿಸಿಕೊಂಡವನಾಗಿ ಶೋಕದಿಂದ ಉಂಟಾದ ಬಾಷ್ಪಗಳಿಂದ ಗದ್ಗದವಾಕ್ಯದಿಂದ ಸ್ತುತಿಗೈಯಲು ಶಕ್ಯನಾಗಲಿಲ್ಲ; ಆಮೇಲೆ ದಕ್ಷಪ್ರಜೇಶನು ಅತಿ ಕಷ್ಟದಿಂದ ಮನಸ್ಸನ್ನು ಸ್ತಂಭೀಕರಿಸಿ ಪ್ರೇಮದಿಂದ ಪರವಶನಾಗಿ ಸುಬುದ್ಧಿಯುಳ್ಳವನಾಗಿ ಕಪಟರಹಿತವಾದ ಶುದ್ಧಭಾವದಿಂದ ಪರಮೇಶ್ವರನನ್ನು ಕುರಿತು 'ಎಲೈ ಪರಮೇಶ್ವರನೇ, ನಾನು ನಿನ್ನನ್ನು ಸರ್ವಥಾ ಅವಮಾನಂಗೈದೆನು; ಆದ್ದರಿಂದ ನಿನ್ನಿಂದ ನನಗೆ ಶಿಕ್ಷೆಯು ಮಾಡಲ್ಪಟ್ಟಿತು; ಆ ಶಿಕ್ಷೆಯು ನನಗೆ ಅನುಗ್ರಹವಾಯಿತೇ ಹೊರ್ತು ನಿಗ್ರಹವಾಗಲಿಲ್ಲ; ಇದು ಯುಕ್ತವೇಸರಿ; ಬ್ರಾಹ್ಮಣಾಭಾಸರಾದವರಲ್ಲಿಯು ನಿನಗೂ ನಾರಾಯಣನಿಗೂ ಉಪೇಕ್ಷೆಯುಂಟಾಗುವದಿಲ್ಲ; ವ್ರತನಿಯಮಸಂಪನ್ನರಾದ ಬ್ರಾಹ್ಮಣೋತ್ತಮರಲ್ಲಿ ನಿಮಗೆ ಸರ್ವಥಾ ಉಪೇಕ್ಷೆ ಇಲ್ಲವೆಂಬ ಅರ್ಥವನ್ನು ಹೇಳತಕ್ಕದ್ದೇನು! ಎಲೈ ಸರ್ವೋತ್ಕೃಷ್ಟನಾದ ಪರಮೇಶ್ವರನೇ, ನೀನು ಚತುರ್ಮುಖ ಬ್ರಹ್ಮನಾಗಿ ಪರಬ್ರಹ್ಮತತ್ವವನ್ನು ರಕ್ಷಿಸಕೋಸುಗ ವಿದ್ಯೆಯೂ ತಪಸ್ಸೂ ವ್ರತನಿಯಮಗಳೂ ಇವುಗಳನ್ನು ಧರಿಸಿರುವ ಬ್ರಾಹ್ಮಣರನ್ನು ಮುಖದಿಂದ ಸೃಷ್ಟಿಸಿದೆ; ಗೋಪಾಲಕನಾದ ಪುರುಷನು ದಂಡಧಾರಿಯಾಗಿ ಗೋವುಗಳನ್ನು ರಕ್ಷಿಸುವಂತೆ ಮಹಾವಿಪತ್ತುಗಳಲ್ಲಿಯೂ ಕೂಡ ಆ ಬ್ರಾಹ್ಮಣರನ್ನು ರಕ್ಷಿಸುತ್ತೀಯೆ! ಎಲೈ ಪರಮೇಶ್ವರನೆ, ನೀನು ತತ್ವಸ್ವರೂಪವನ್ನು ತಿಳಿದಿರುವ ನನ್ನಿಂದ ಸಭೆಯಲ್ಲಿ ದುರ್ಭಾಷೆಗಳೆಂಬ ಬಾಣಗಳಿಂದ ಧಿಕ್ಕರಿಸಲ್ಪಟ್ಟವನಾದೆ; ಭಗವಂತನಾದ ನೀನು ನನ್ನಿಂದ ಆಚರಿಸಲ್ಪಟ್ಟ ಅಪರಾಧವನ್ನು ಗಣನೆಮಾಡದೆ ಪರಮೇಶ್ವರ ನಿಂದೆಯಿಂದ ಅಧಃಪತನವನ್ನೈದುತಲಿರುವ ನನ್ನನ್ನು ದಯಾರ್ದ್ರದೃಷ್ಟಿಯಿಂದ ರಕ್ಷಿಸಿದೆ; ಭಗವಂತನಾದ ನೀನು ನನ್ನಲ್ಲಿ ಅಪರಾಧವನ್ನು ಸ್ಮರಿಸದೆ ಅನುಗ್ರಹವನ್ನು ಮಾಡಿ ಅದರಿಂದಲೇ ಸಂತೋಷಪಡುತ್ತೀ' ಎಂದು ಪರಮೇಶ್ವರನನ್ನು ಸ್ತುತಿಸಿ ಪ್ರಸನ್ನನನ್ನು ಮಾಡಿಕೊಂಡು ಬ್ರಹ್ಮನಿಂದ ಅನುಜ್ಞಾತನಾಗಿ ದಕ್ಷನು ಉಪಾಧ್ಯಾಯರಿಂದಲೂ ಋತ್ವಿಕ್ಕರಿಂದಲೂ ಯಜ್ಞವನ್ನು ನಡಿಸಿದನು! ಅನಂತರದಲ್ಲಿ ಬ್ರಾಹ್ಮಣೋತ್ತಮರಾದ ಋತ್ವಿಕ್ಕರು ವೀರರಾದ ಪ್ರಮಥಗಣಗಳ ಸಂಸರ್ಗದಿಂದ ಉಂಟಾದ ಯಜ್ಞವಿಚ್ಛೇದದೋಷ ಪ್ರಾಯಶ್ಚಿತ್ತಾರ್ಥವಾಗಿ ವಿಭಿನ್ನಯಜ್ಞಸಂಧಾನಾರ್ಥವಾಗಿ ಕಪಾಲತ್ರಯದಲ್ಲಿ ಸಂಸ್ಕೃತವಾಗಿ ವಿಷ್ಣುದೇವತಾಕವಾದ ಪುರೋಡಾಶವನ್ನು ನಿರ್ವಾಪಣಂಗೈದರು! ಎಲೈ ವಿದುರನೆ, ಉಪದ್ರಕಾರವಾಗಿ ಸ್ವೀಕರಿಸಲ್ಪಟ್ಟ ಹವಿರ್ದ್ರವ್ಯವುಳ್ಳ ಅಧ್ವರ್ಯುಸಹಿತನಾಗಿ ದಕ್ಷನು ವಿಶುದ್ಧಬುದ್ಧಿಯಿಂದ ಯಾವಾಗ ಹರಿಯನ್ನು ಧ್ಯಾನಂಗೈದನೋ ಆಗಲೇ ಶ್ರೀಹರಿಯು ಆವಿರ್ಭೂತನಾದನು; ಆಗ ದಶದಿಕ್ಕುಗಳನ್ನು ಹೊಳೆಯುವಂತೆ ಮಾಡುತಲಿರುವ ತನ್ನ ಪ್ರಭೆಯಿಂದ ಆ ಮಹರ್ಷಿಗಳ ತೇಜಸ್ಸನ್ನು ತಿರಸ್ಕರಿಸುವವನಾಗಿ ಶ್ರೀಹರಿಯು

ಬೃಹದ್ರಥಂತರ ಸಾಮಗಳೆಂಬ ರೆಕ್ಕೆಗಳುಳ್ಳ ಗರುಡನಿಂದ ಕರತರಲ್ಪಟ್ಟನು; ಆ ಹರಿಯು ಶ್ಯಾಮವರ್ಣವುಳ್ಳವನಾಗಿ ಸುವರ್ಣಮಯವಾದ ಉಡಿದಾರವುಳ್ಳವನಾಗಿ ಸೂರ್ಯನಂತೆ ಪ್ರಕಾಶಿಸುವ ಕಿರೀಟದಿಂದ ಶೋಭಿತನಾಗಿ ನೀಲಗಳಾದ ಕೇಶಗಳೆಂಬ ಭ್ರಮರಗಳಿಂದಲಂಕೃತವಾದ ಕುಂಡಲಯುಕ್ತವಾದ ಮುಖವುಳ್ಳವನಾಗಿ ಶಂಖವು ಪದ್ಮವು ಚಕ್ರವು ಧನುಸ್ಸು ಗದೆಯು ಬಾಣವು ಖಡ್ಗವು ಖೇಟವು ಎಂಬ ಈ ಎಂಟು ಆಯುಧಗಳಿಂದ ಪ್ರಕಾಶಿಸುವ ಸುವರ್ಣಭೂಷಿತಗಳಾಗಿ ಅಷ್ಟಭುಜಗಳಿಂದ ಪುಷ್ಪಿತಗಳಾದ ಶಾಖೆಗಳಿಂದ ಶೋಭಿಸುವ ಕರ್ಣಿಕಾರ ವೃಕ್ಷದಂತೆ ಪ್ರಕಾಶಿಸುವವನಾಗಿ ವಕ್ಷಸ್ಥಳದಲ್ಲಿ ಪ್ರಕಾಶಿಸುವ ಮಹಾಲಕ್ಷ್ಮಿಯುಳ್ಳವನಾಗಿ ವನಮಾಲಾಧಾರಿಯಾಗಿ ಉತ್ಕೃಷ್ಟವಾದ ಮುಗುಳುನಗೆಯಿಂದ್ವ್ಯಕ್ತವಾದ ನೋಟದಿಂದ ಪ್ರಪಂಚವನ್ನು ಸುಖಪಡಿಸುವವನಾಗಿ ಉಭಯಪಾರ್ಶ್ವಗಳಲ್ಲಿಯು ಚಲಿಸುತಲಿರುವ ಚಾಮರಗಳೆಂಬ ರಾಜಹಂಸಗಳುಳ್ಳವನಾಗಿ ಮೇಲಃಭಾಗದಲ್ಲಿ ಧರಿಸಲ್ಪಟ್ಟ ಶ್ವೇತಚ್ಛತ್ರವೆಂಬ ಚಂದ್ರಬಿಂಬದಿಂದ ಪ್ರಕಾಶಿಸುತಿದ್ದನು! ಈಪ್ರಕಾರವಾಗಿ ಆವಿರ್ಭೂತನಾದ ಶ್ರೀಹರಿಯನ್ನು ನೋಡಿ ಬ್ರಹ್ಮನು ಇಂದ್ರನು ರುದ್ರನು ಇವರೇ ಅಧಿಪತಿಗಳಾಗುಳ್ಳ ಸಮಸ್ತ ದೇವಸಮೂಹಗಳು ಶೀಘ್ರದಲ್ಲಿ ಎದ್ದು ನಮಸ್ಕರಿಸಿದರು; ಆ ಭಗವಂತನ ತೇಜಸ್ಸಿನಿಂದ ಪ್ರತಿಹತವಾದ ಪ್ರಭೆಯುಳ್ಳವರಾಗಿ ಗದ್ಗದವಾಕ್ಕುಗಳುಳ್ಳವರಾಗಿ ಭೀತರಾಗಿ ಶಿರಸ್ಸಿನಲ್ಲಿ ಅಂಜಲಿಬಂಧಂಗೈದವರಾಗಿ ಎಲ್ಲರೂ ಭಗವಂತನನ್ನು ಸ್ತುತಿಗೈದರು! ಯಾವ ಭಗವಂತನ ಮಹಿಮೆಯನ್ನು ವರ್ಣಿಸಲೋಸುಗ ಬ್ರಹ್ಮಾದಿಗಳೂ ಕೂಡ ಪರಾಙ್ಮುಖವಾದ ಬುದ್ಧಿಯುಳ್ಳವರೋ ಅಂಥಾ ಭಗವಂತನ ಅನುಗ್ರಹಾರ್ಥವಾಗಿ ದೇಹವನ್ನು ಧರಿಸಿರುವ ಭಗವಂತನನ್ನು ತಮ್ಮ ಬುದ್ಧ್ಯನುಸಾರವಾಗಿ ಆ ಬ್ರಹ್ಮಾದಿ ದೇವತೆಗಳು ಸ್ತುತಿಗೈದರು! ದಕ್ಷನು ಪರಿಶುದ್ಧನಾಗಿ ಅಂಜಲಿಬಂಧಂಗೈದು ಪೂಜಾಸಾಧನಗಳಾದ ಉತ್ತಮ ವಸ್ತುಗಳನ್ನು ಗ್ರಹಿಸಿಕೊಂಡು ಯಜ್ಞೇಶ್ವರನಾಗಿ ಪ್ರಜೇಶರಿಗೆ ಪರಮಗುರುವಾಗಿ ಸುನಂದ ನಂದಾದಿ ಪಾರಿಷದರಿಂದ ಪರಿವೃತನಾದ ಶ್ರೀಹರಿಯನ್ನು ಸಂತೋಷದಿಂದ ಸ್ತುತಿಗೈದವನಾಗಿ ಶರಣುಹೊಂದಿದನು!

ದಕ್ಷನು "ಎಲೈ ಭಗವಂತನೇ, ಸ್ವಸ್ವರೂಪದಲ್ಲಿರುವ ನೀನು ಜ್ಞಾನಘನನಾಗಿ ಶಾಂತಗಳಾದ ಸಮಸ್ತ ಬುದ್ಧ್ಯವಸ್ಥೆಗಳುಳ್ಳವನಾಗಿ ಭೇದಶೂನ್ಯನಾಗಿ ಭಯರಹಿತನಾಗಿ ಮಾಯೆಯನ್ನು ನಿರಾಕರಿಸಿ ಸ್ವತಂತ್ರನಾಗಿ ಆ ಮಾಯೆಯಿಂದ ಅವತಾರಭಾವಗಳನ್ನೈದಿ ರಾಗಾದಿಗಳಿಂದ ಕೂಡಿದವನಂತೆ ಇರುತ್ತೀಯೆ" ಎಂದು ಸ್ತುತಿಸಿದನು.

ಋತ್ವಿಕ್ಕುಗಳು "ಎಲೈ ಉಪಾಧಿಶೂನ್ಯನಾದ ಭಗವಂತನೆ, ನೀನೇ ರುದ್ರಾದಿ ದೇವತಾರೂಪನು; ಆದಾಗ್ಯು ನಂದೀಶ್ವರರೂಪದಿಂದ ಕರ್ಮಮಾರ್ಗದಲ್ಲಿ ಅಭಿನಿವೇಶವುಳ್ಳ ನಾವು ನಿನ್ನ ತತ್ವವನ್ನರಿಯೆವು; ಆದಾಗ್ಯೂ ಧರ್ಮಕ್ಕೆ ಮುಖ್ಯಸಾಧನವಾಗಿ ವೇದಪ್ರತಿಪಾದ್ಯವಾಗಿ ಯಜ್ಞನಾಮಕವಾದ ನಿನ್ನ ರೂಪವನ್ನು ಬಲ್ಲೆವು; ಯಾವ ಯಜ್ಞದಲ್ಲಿ ಇಂದ್ರಾಗ್ನಿ ವಾಯು ಮೊದಲಾದ ದೇವತಾವಿಶೇಷಗಳು ವ್ಯವಸ್ಥಾಪಿತಗಳಾಗಿವೆಯೋ ಅಂಥಾ ಯಜ್ಞರೂಪವಾದ ನಿನ್ನ ರೂಪವನ್ನು ಬಲ್ಲೆವು" ಎಂದು ಸ್ತುತಿಸಿದರು.

ಸದಸ್ಯರು "ಎಲೈ ಅಭಯಪ್ರದನಾದ ಭಗವಂತನೆ, ವಿಶ್ರಮಸ್ಥಾನರಹಿತವಾಗಿ ಅಧಿಕಕ್ಲೇಶಗಳೆಂಬ ದುರ್ಗಸ್ಥಳವುಳ್ಳದ್ದಾಗಿ ಯಮನೆಂಬ ಕರಾಳಸರ್ಪದಿಂದ ಹೊಂಚಿ ನೋಡಲ್ಪಡುವದಾಗಿ ಸುಖದುಃಖಗಳೆಂಬ ಹಳ್ಳಗಳುಳ್ಳದ್ದಾಗಿ ದುರ್ಜನರೆಂಬ ದುಷ್ಟಮೃಗಗಳ ಭಯವುಳ್ಳದ್ದಾಗಿ ಶೋಕವೆಂಬ ಕಾಡುಗಿಚ್ಚುಳ್ಳದ್ದಾಗಿರುವ ಸಂಸಾರಮಾರ್ಗದಲ್ಲಿ ಸಂಚರಿಸುತಲಿರುವ ತಾಪಪೀಡಿತರಾದ ನಮ್ಮಂಥಾ ಮೂಢಜನರ ಸಮೂಹವಿಷಯಗಳೆಂಬ ಮೃಗತೃಷ್ಣೆಗಳುಳ್ಳ ಅಹಂಕಾರಾಸ್ಪದವಾದ ಶರೀರವು ಮಮತಾಸ್ಪದವಾದ ಗೃಹಾದಿಗಳು ಎಂಬ ಮಹಾಭಾರವನ್ನು ಧರಿಸಿ ನಿನ್ನ ಪಾದವೆಂಬ ವಿಶ್ರಮಸ್ಥಾನವನ್ನು ಯಾವಾಗ ಐದುವದು" ಎಂದು ಸ್ತುತಿಸಿದರು.

ಶ್ರೀ ರುದ್ರನು "ಎಲೈ ವರಪ್ರದನಾದ ಭಗವಂತನೇ, ಸರ್ವರಿಂದಲೂ ಪೂಜಿಸುವದಕ್ಕೆ ಯೋಗ್ಯವಾಗಿದ್ದಾಗ್ಯು ನಿಷ್ಕಾಮರಾದ ಮುನಿಗಳಿಂದ ಆದರಪೂರ್ವಕವಾಗಿ ಆರಾಧಿಸಲು ಯೋಗ್ಯವಾದ ನಿನ್ನ ಶ್ರೇಷ್ಠವಾದ ಪಾದದಲ್ಲಿ ಆಸಕ್ತಿಯಿಂದ ನಿರ್ವಿಷ್ಟವಾದ ಬುದ್ಧಿಯುಳ್ಳ ನನ್ನನ್ನು ಅಜ್ಞಾನಿಗಳಾದ ಜನರು ಆಚಾರಭ್ರಷ್ಟನನ್ನಾಗಿ ಹೇಳಲಿ;

ನಿನ್ನ ಉತ್ಕೃಷ್ಟವಾದ ಅನುಗ್ರಹದಿಂದ ನಾನು ಅದನ್ನು ಗಣನೆಮಾಡುವದಿಲ್ಲ! ಎಲೈ ಪರಮಾತ್ಮನೆ, ಅಪರಿಹಾರಕವಾದ ನಿನ್ನ ಮಾಯೆಯಿಂದ ತಿರೋಹಿತವಾದ ಸ್ವರೂಪವಿಜ್ಞಾನವುಳ್ಳ ಬ್ರಹ್ಮಾದಿಗಳಾದ ಶರೀರಧಾರಿಗಳು ಅಜ್ಞಾನದಲ್ಲಿ ಮುಳಗಿದವರಾಗಿ ತಮ್ಮ ಹೃದಯದಲ್ಲಿ ಸ್ಥಿರವಾಗಿರುವ ನಿನ್ನ ಸ್ವರೂಪವನ್ನು ಅರಿಯರು; ಶರಣುಹೊಂದಿದವರಿಗೆ ಆತ್ಮರೂಪನೂ ಬಂಧುರೂಪನೂ ಆಗಿರುವ ನೀನು ನನಗೆ ಪ್ರಸನ್ನನಾಗು'' ಎಂದು ಸ್ತುತಿಸಿದನು.

ಬ್ರಹ್ಮನು ''ಎಲೈ ಭಗವಂತನೇ, ಪುರುಷನು ಪದಾರ್ಥಗಳಾದ ವಿಷಯಭೇದಗಳನ್ನು ಗ್ರಹಿಸುವ ಇಂದ್ರಿಯಗಳಿಂದ ಎಷ್ಟು ಪದಾರ್ಥಗಳನ್ನು ಗ್ರಹಿಸುತ್ತಾನೆಯೋ ಆ ವಸ್ತುಗಳೊಂದೂ ನಿನ್ನ ಸ್ವರೂಪವಲ್ಲ; ಮಾಯಾಮಯವಾಗಿ ಅಸದ್ರೂಪವಾದ ಜಗತ್ತಿಗೆ ಅನ್ಯನಾಗಿ ಜ್ಞಾನಕ್ಕೂ ಅರ್ಥಕ್ಕೂ ಗುಣಕ್ಕೂ ಅಧಿಷ್ಠಾನರೂಪನಾಗಿರುವೆ'' ಎಂದು ಸ್ತುತಿಸಿದನು.

ಇಂದ್ರನು ''ಎಲೈ ಅಚ್ಯುತನೆ, ಜಗತ್ತಿಗೆ ಭಾವನಾಯೋಗ್ಯನಾಗಿ ಜನರ ಮನಸ್ಸುಗಳಿಗೂ ನೇತ್ರಗಳಿಗೂ ಆನಂದಕರನಾಗಿ ದೇವದ್ವೇಷಿಗಳಾದ ಅಸುರರನ್ನು ನಿಗ್ರಹಿಸುವವನಾಗಿ ಆಯುಧಧಾರಿಯಾಗಿ ಎಂಟು ಭುಜಗಳಿಂದ ಶೋಭಿಸುವ ನಿನ್ನ ಈ ದಿವ್ಯಶರೀರವು ಸರ್ವಲೋಕಶ್ಲಾಘ್ಯವಾದದ್ದು'' ಎಂದು ಸ್ತುತಿಸಿದನು.

ಋತ್ವಿಕ್ಕುಗಳ ಪತ್ನಿಯರು ''ಎಲೈ ಯಜ್ಞಸ್ವರೂಪನಾದ ದೇವನೆ, ನಿನ್ನನ್ನು ಆರಾಧಿಸುವದಕ್ಕೋಸ್ಕರ ಈ ಯಜ್ಞವು ಬ್ರಹ್ಮನಿಂದ ಸೃಜಿಸಲ್ಪಟ್ಟಿತು; ಆ ಯಜ್ಞವು ಪರಮೇಶ್ವರನ ಕೋಪದಿಂದ ನಾಶಂಗೈಯಲ್ಪಟ್ಟಿತು; ಅದುಕಾರಣ ಸ್ಮಶಾನಸದೃಶವಾಗಿ ಶಾಂತವಾದ ಉತ್ಸವವುಳ್ಳದ್ದಾಗಿರುವ ನಮ್ಮ ಯಜ್ಞವನ್ನು ನೀನು ಪದ್ಮಕಾಂತಿಯುಳ್ಳ ದೃಷ್ಟಿಯಿಂದ ಪವಿತ್ರವಾಗಿ ಮಾಡು'' ಎಂದು ಸ್ತುತಿಸಿದರು.

ಋಷಿಗಳು ''ಎಲೈ ಭಗವಂತನೆ, ನಿನ್ನ ವ್ಯಾಪಾರವು ಅಸಂಭಾವಿತವಾಗಿ ತೋರುವದು; ನೀನು ಸ್ವತಃ ಕರ್ಮವನ್ನಾಚರಿಸುತ್ತೀಯೆ; ಅದರ ಲೋಪವು ನಿನಗಿಲ್ಲ; ಇತರರಾದವರು ಐಶ್ವರ್ಯನಿಮಿತ್ತವಾಗಿ ಯಾವ ಮಹಾಲಕ್ಷ್ಮಿಯನ್ನು ಉಪಾಸನಂಗೈಯುತ್ತಾರೆಯೋ ಅಂಥಾ ಲಕ್ಷ್ಮಿಯು ತಾನಾಗಿ ಬಂದು ನಿನ್ನನ್ನು ಅನುವರ್ತಿಸುವಳಾದಾಗ್ಯೂ ಆ ಲಕ್ಷ್ಮಿಯನ್ನು ನೀನು ಆದರಿಸುವದಿಲ್ಲ'' ಎಂದು ಸ್ತುತಿಸಿದರು.

ಸಿದ್ಧರು ''ಎಲೈ ಭಗವಂತನೆ, ಕ್ಲೇಶಗಳೆಂಬ ಕಾಡುಗಿಚ್ಚಿನಿಂದ ದಹಿಸಲ್ಪಟ್ಟ ಬಾಯಾರಿಕೆಯುಳ್ಳ ನಮ್ಮ ಮನಸ್ಸೆಂಬ ಆನೆಯು ನಿನ್ನ ಚರಿತ್ರೆಯೆಂಬ ಶುದ್ಧವಾದ ಅಮೃತನದಿಯಲ್ಲಿ ಮುಳುಗಿ ಸಂಸಾರವೆಂಬ ಮಹಾತಾಪವನ್ನು ಮರತು ಬ್ರಹ್ಮಭಾವವನ್ನೈದಿದಂತೆ ಆ ನದಿಯನ್ನು ಬಿಟ್ಟು ಈಚೆಗೆ ಬರುವದಿಲ್ಲ'' ಎಂದು ಸ್ತುತಿಸಿದರು.

ದಕ್ಷಪತ್ನಿಯು ''ಎಲೈ ಅಧೀಶ್ವರನಾದ ಭಗವಂತನೆ, ನಿನ್ನ ಆಗಮನವು ಶುಭಕರವಾಯಿತು; ಶಿರಸ್ಸಿನಿಂದ ರಹಿತವಾದ ಶರೀರವುಳ್ಳ ಪುರುಷನು ಕರಚರಣಾದಿಗಳಿಂದ ಯುಕ್ತನಾದಾಗ್ಯೂ ಹ್ಯಾಗೆ ಪ್ರಕಾಶಿಸುವದಿಲ್ಲವೋ ಹಾಗೆ ಪ್ರಯಾಜಾದಿ ಅಂಗಗಳಿಂದ ಯುಕ್ತವಾದಾಗ್ಯೂ ಈ ಯಜ್ಞವು ನಿನ್ನಹೊರ್ತು ಪ್ರಕಾಶಿಸುವದಿಲ್ಲ; ಆದಕಾರಣ ನಮ್ಮನ್ನು ಸಂಸಲ್ಲಕ್ಷ್ಮಿಯೊಡನೆ ರಕ್ಷಿಸು; ನನಗೆ ಪ್ರಸನ್ನನಾಗು; ನಿನಗೆ ನಮಸ್ಕಾರವು'' ಎಂದು ಸ್ತುತಿಸಿದಳು.

ಲೋಕಪಾಲಕರು ''ಎಲೈ ಸ್ವಾಮಿಯೆ, ದೃಶ್ಯವಾದ ಸರ್ವವು ಯಾವ ಇಂದ್ರಿಯಗಳಿಂದ ಗ್ರಹಿಸಲ್ಪಡುವದೋ ಆ ಸದ್ವಿಷಯಗಳನ್ನು ಗ್ರಹಿಸುವ ಆ ಇಂದ್ರಿಯಗಳಿಂದ ಪ್ರತ್ಯಗಾತ್ಮನಾಗಿ ಸಾಕ್ಷಿಯಾಗಿ ಸರ್ವದ್ರಷ್ಟೃವಾದ ನೀನು ಯಾವನಿಂದ ಗೋಚರಿಸಲ್ಪಡುತ್ತೀಯೆ! ಎಲೈ ಮಹಾತ್ಮನೆ, ನಿನ್ನ ಮಾಯೆಯು ಬಲಿಷ್ಠವಾದದ್ದು; ಆದಕಾರಣ ನೀನು ಪಂಚಭೂತವಿಶೇಷಗಳಿಂದ ಉಪಹಿತನಾದ ಜೀವನಂತೆ ನಮಗೆ ತೋರುತ್ತೀಯೇಹೊರ್ತು ನಿನ್ನ ತತ್ವಸ್ವರೂಪವನ್ನು ನಾವು ತಿಳಿಯಲಾರೆವು; ನಮ್ಮ ಜನ್ಮವು ವ್ಯರ್ಥವು'' ಎಂದು ಸ್ತುತಿಸಿದರು.

ಯೋಗೀಶ್ವರರು ''ಎಲೈ ಪ್ರಭುವಾದ ಸ್ವಾಮಿಯೆ, ವಿಶ್ವಾತ್ಮನಾಗಿ ಪರಬ್ರಹ್ಮನಾದ ನಿನ್ನಲ್ಲಿ ಯಾವ ಪುರುಷನು ತನ್ನ ದೆಸೆಯಿಂದ ಪೃಥಗ್ಭಾವವನ್ನು ನೋಡುವದಿಲ್ಲವೋ ಯಾವನು ತಾನು ಬೇರೆ ನೀನು ಬೇರೆ ಎಂಬ ಭೇದಬುದ್ಧಿಯನ್ನು ಮಾಡುವದಿಲ್ಲವೋ ಆ ಪುರುಷನಿಗಿಂತಲು ಪ್ರೇಮಾಸ್ಪದನಾದ ಪುರುಷನು ನಿನಗೆ ಯಾರೂ ಇಲ್ಲ!

ಎಲೈ ಭಕ್ತವತ್ಸಲನೆ, ಇತರ ವಿಷಯದಲ್ಲಿ ಪರಾಙ್ಮುಖವಾದ ಏಕಾಂತ ಭಕ್ತಿಯಿಂದ ಭಜಿಸುವ ನಮ್ಮನ್ನು ಅನುಗ್ರಹಿಸು; ಜಗತ್ತಿನ ಉತ್ಪತ್ತಿ ಸ್ಥಿತಿ ಲಯಗಳ ವಿಷಯದಲ್ಲಿ ಜೀವಾದೃಷ್ಟದಿಂದ ಬಹುಪ್ರಕಾರವಾಗಿ ಭೇದಿಸಿದ ಸತ್ವಾದಿ ಗುಣವುಳ್ಳ ಮಾಯೆಯಿಂದ ಉಂಟುಮಾಡಲ್ಪಟ್ಟ ಬ್ರಹ್ಮಾದಿ ತತ್ತದ್ದೇವತಾ ಬುದ್ಧಿಯುಳ್ಳವನಾಗಿ ಸ್ವಸ್ವರೂಪಸ್ಥಾನದಿಂದ ಹಿಂತಿರುಗಿಸಲ್ಪಟ್ಟ ಭೇದಭ್ರಾಂತಿಯೂ ಗುಣಗಳೂ ಉಳ್ಳ ಪರಮಾತ್ಮಸ್ವರೂಪನಾದ ನಿನಗೆ ನಮಸ್ಕಾರವು" ಎಂದು ಸ್ತುತಿಸಿದರು.

ಶಬ್ದಬ್ರಹ್ಮವು "ಎಲೈ ಭಗವಂತನೆ, ಸತ್ವಗುಣವನ್ನಾಶ್ರಯಿಸಿರುವವನಾಗಿ ಭಕ್ತರಿಗೆ ಧರ್ಮಾದಿ ಫಲಗಳನ್ನುಂಟುಮಾಡುವ ನಿರ್ಗುಣನಾಗಿ ಪರಮಾತ್ಮನಾದವನಿಗೆ ನಮಸ್ಕಾರವು! ಯಾವ ಪರಮಾತ್ಮನ ತತ್ವವನ್ನು ನಾನೂ ಇತರರಾದ ಬ್ರಹ್ಮಾದಿಗಳೂ ಅರಿಯರೋ ಅಂಥಾ ನಿನಗೆ ನಮಸ್ಕಾರವು" ಎಂದು ಸ್ತುತಿಸಿತು.

ಅಗ್ನಿಮೂರ್ತಿಯು "ಯಾವ ಭಗವಂತನ ತೇಜಸ್ಸಿನಿಂದ ಪ್ರಕಾಶಿತವಾದ ತೇಜಸ್ಸುಳ್ಳವನಾಗಿ ನಾನು ಯಜ್ಞದಲ್ಲಿ ಆಜ್ಯದಿಂದ ನೆನಸಲ್ಪಟ್ಟ ಹವಿರ್ದ್ರವ್ಯವನ್ನೇ ವಹಿಸುತ್ತೇನೆಯೋ ಯಜ್ಞಹಿತನಾಗಿ ಅಗ್ನಿಹೋತ್ರ ದರ್ಶಪೂರ್ಣಮಾಸ ಚಾತುರ್ಮಾಸ್ಯ ಪಶು ಸೋಮ ಎಂಬ ಐದುಪ್ರಕಾರವಾದ ಪಂಚಯಜುರ್ಮಂತ್ರಗಳಿಂದ ಆರಾಧಿತನಾಗಿ ಯಜ್ಞಮೂರ್ತಿಯಾದ ಆ ಭಗವಂತನನ್ನು ನಮಸ್ಕರಿಸುತ್ತೇನೆ" ಎಂದು ಸ್ತುತಿಸಿದನು.

ದೇವತೆಗಳು "ಎಲೈ ಪರಮಪುರುಷನೆ, ಪುರಾಣಪುರುಷನಾದ ನೀನು ಪೂರ್ವಕಾಲದಲ್ಲಿ ನಿನ್ನಿಂದ ರಚಿತವಾದ ಕಾರ್ಯಸಮಷ್ಟಿರೂಪವಾದ ಜಗತ್ತನ್ನು ನಿನ್ನಲ್ಲೇ ಉಪಸಂಹರಿಸಿದವನಾಗಿ ಮಹಾ ಪ್ರಳಯಕಾಲದಲ್ಲಿ ಶೇಷಶಯನದಲ್ಲಿ ಶಯನಂಗೈಯುತ್ತೀಯೋ; ನೀನೇ ಜನೋಲೋಕಾದಿಗಳಲ್ಲಿರುವ ಸಿದ್ಧರಿಂದ ಭಾವಿಸಲ್ಪಟ್ಟ ಸ್ವಸ್ವರೂಪವುಳ್ಳವನಾಗಿ ನಮ್ಮ ನೇತ್ರಗಳಿಗೆ ಗೋಚರನಾಗಿ ನಮ್ಮನ್ನು ರಕ್ಷಿಸುತ್ತ ಸಂಚರಿಸುತ್ತೀಯೆ" ಎಂದು ಸ್ತುತಿಸಿದರು.

ಗಂಧರ್ವಾಪ್ಸರಸ್ಸುಗಳು "ಎಲೈ ನಾಥನಾದ ಮಹಾತ್ಮನೆ, ಬ್ರಹ್ಮನೂ ಇಂದ್ರನೂ ರುದ್ರನು ಮೊದಲಾದ ದೇವಸಮೂಹಗಳು ಮರೀಚ್ಯಾದಿ ಪ್ರಜೇಶರು ಸಹಾ ಯಾವ ನಿನ್ನ ಅಂಶಭೂತರೋ ಯಾವ ನಿನಗೆ ಈ ಸಮಸ್ತಪ್ರಪಂಚವು ಕ್ರೀಡೋಪಕರಣವೋ ಅಂಥಾ ನಿನಗೋಸ್ಕರ ನಿತ್ಯದಲ್ಲಿಯೂ ನಮಸ್ಕಾರವನ್ನು ಮಾಡುವೆವು" ಎಂದು ಸ್ತುತಿಸಿದರು.

ವಿದ್ಯಾಧರರು "ಎಲೈ ಭಗವಂತನೆ, ದುಷ್ಟಬುದ್ಧಿಯುಳ್ಳವನಾದಾಗ್ಯೂ ಪುರುಷನು ಪುರುಷಾರ್ಥಸಾಧಕವಾದ ಶರೀರವನ್ನೈದಿ ನಿನ್ನ ಮಾಯೆಯಿಂದ ಆ ಶರೀರದಲ್ಲಿ ನಾನು—ನನ್ನದು ಎಂಬ ಅಹಂಕಾರ ಮಮಕಾರಗಳನ್ನು ಮಾಡಿ ತುಚ್ಛಗಳಾದ ವಿಷಯಗಳಲ್ಲಿ ಆಸಕ್ತನಾಗಿ ಉಚ್ಛೃಂಖಲ ವ್ಯಾಪಾರಗಳುಳ್ಳ ಪತ್ನೀ ಪುತ್ರಾದಿಗಳಿಂದ ತಿರಸ್ಕೃತನಾದಾಗ್ಯೂ ನಿನ್ನ ಸತ್ಕಥೆಗಳೆಂಬ ಅಮೃತವನ್ನು ಸೇವಿಸುವನಾದರೆ ದೇಹಾಭಿಮಾನರೂಪವಾದ ಅಜ್ಞಾನಮೋಹವನ್ನು ಪರಿಹರಿಸಿಕೊಳ್ಳುತ್ತಾನೆ" ಎಂದು ಸ್ತುತಿಸಿದರು.

ಬ್ರಾಹ್ಮಣರು "ಎಲೈ ನಾರಾಯಣನೆ, ನೀನೇ ಕ್ರತುಸ್ವರೂಪನು; ನೀನೇ ಹವಿಸ್ಸು; ನೀನೇ ಅಗ್ನಿಯು; ನೀನೇ ಮಂತ್ರವು; ಸಮಿತ್ತುಗಳು ದರ್ಭೆಗಳು ಪಾತ್ರೆಗಳೂ ಸಹ ನೀನೆ; ಸದಸ್ಯರು ಋತ್ವಿಕ್ಕುಗಳು ದಂಪತಿಗಳು ದೇವತೆಯು ಅಗ್ನಿಹೋತ್ರವು ಸ್ವಧೆಯು ಹೋಮದ್ರವ್ಯವು ಆಜ್ಯವು ಪಶುವು ಸಹ ನೀನೆ; ಪೂರ್ವದಲ್ಲಿ ನೀನು ಯಜ್ಞವರಾಹರೂಪನಾಗಿ ಮಹಾಗಜವು ಕಮಲಲತೆಯನ್ನು ಎತ್ತುವಹಾಗೆ ಕೋರೆದಾಡೆಯಿಂದ ಮಹಾಜಲದಲ್ಲಿ ಮುಳುಗಿದ್ದ ಭೂಮಿಯನ್ನು ಉದ್ಧಾರಂಗೈದೆ; ಯೋಗಿಗಳಿಂದ ಸ್ತುತಿಸಲ್ಪಡುವವನಾಗಿ ವೇದಗಳು ಕ್ರತುಗಳು ಯಜ್ಞಗಳೇ ಶರೀರವಾಗುಳ್ಳ ನೀನು ಲೀಲೆಯಿಂದಲೇ ಭೂಮಿಯನ್ನೆತ್ತಿದವನಾದೆ; ಅಂಥಾ ನೀನು ನಿನ್ನ ದರ್ಶನವನ್ನಪೇಕ್ಷಿಸುತಲಿರುವ ಸತ್ಕರ್ಮನಿರತರಾದ ನಮಗೆ ಪ್ರಸನ್ನನಾಗು! ಎಲೈ ಯಜ್ಞೇಶ್ವರನೆ, ನಿನ್ನ ನಾಮಧೇಯವು ಪುರುಷರಿಂದ ಕೀರ್ತನಂಗೈಯಲ್ಪಡುತಲಿರಲಾಗಿ ಯಜ್ಞವಿಘ್ನಗಳು ಕ್ಷಯವನ್ನೈದುವವು; ಅಂಥಾ ನಿನಗೆ ನಮಸ್ಕಾರವು" ಎಂದು ಸ್ತುತಿಸಿದರು.

"ಎಲೈ ವಿದುರನೆ, ಈ ರೀತಿಯಲ್ಲಿ ಯಜ್ಞಸ್ವರೂಪನಾದ ಭಗವಂತನು ಸಮಸ್ತರಿಂದಲೂ ಸ್ತುತಿಸ್ಯಲ್ಪಡುತ್ತಿರಲಾಗಿ ಪ್ರಾಜ್ಞನಾದ ಆ ದಕ್ಷನು ವೀರಭದ್ರನಿಂದ ಧ್ವಂಸಮಾಡಲ್ಪಟ್ಟ ಯಜ್ಞವನ್ನು ಪುನಃ ನಡೆಸಿದನು; ಭಗವಂತನು ಸರ್ವಾತ್ಮನಾದಕಾರಣ ಸರ್ವ ಯಜ್ಞಭಾಗ ಭೋಕ್ತೃವಾದಾಗ್ಯೂ ಸ್ವಕೀಯವಾದ ತ್ರಿಕಪಾಲ ಪುರೋಡಾಶದಿಂದ ಸಂತುಷ್ಟನಾದವನಂತೆ ದಕ್ಷನನ್ನು ಕುರಿತು 'ಎಲೈ ದಕ್ಷನೇ, ನಾನು ಬ್ರಹ್ಮನು ಪರಮೇಶ್ವರನು ಈ ಮೂರುಮಂದಿಯೂ ಜಗತ್ತಿಗೆ ಕಾರಣರೂಪರು; ಅಂತರಾತ್ಮರು; ನಿಯಾಮಕರು; ಉಪದ್ರಷ್ಟೃಗಳು; ಸಾಕ್ಷಿರೂಪರು; ಸ್ವಪ್ರಕಾಶರು; ಪರಮಾತ್ಮನಾದ ನಾನೇ ನನ್ನ ಮಾಯೆಯನ್ನಾಶ್ರಯಿಸಿ ಜಗತ್ತನ್ನು ಸೃಷ್ಟಿಸುವವನಾಗಿ ರಕ್ಷಿಸುವವನಾಗಿ ಸಂಹರಿಸುವವನಾಗಿ ಆಯಾ ವ್ಯಾಪಾರಕ್ಕೆ ಯೋಗ್ಯವಾದ ಹೆಸರನ್ನು ಧರಿಸುತ್ತೇನೆ; ಜ್ಞಾನಸ್ವರೂಪನಾಗಿ ಸಜಾತೀಯ ವಿಜಾತೀಯ ಸ್ವಗತಭೇದ ವಸ್ತ್ವಂತರ ರಹಿತನಾಗಿ ಪರಮಾತ್ಮನಾದ ಪರಬ್ರಹ್ಮನಲ್ಲಿ ಬ್ರಹ್ಮನೂ ರುದ್ರನೂ ಭೂತಗಳೂ ಎಂದು ಅಜ್ಞನು ಭೇದವನ್ನು ತಿಳಿಯುತ್ತಾನೆ; ಪುರುಷನು ಶಿರಸ್ಸು ಹಸ್ತಗಳು ಪಾದಗಳು ಮೊದಲಾದ ತನ್ನ ಅಂಗಗಳಲ್ಲಿ ಹ್ಯಾಗೆ ಪರಕೀಯತ್ವ ಬುದ್ಧಿಯನ್ನು ಮಾಡುವದಿಲ್ಲವೋ ಹಾಗೆ ನನ್ನ ಸ್ವರೂಪವನ್ನು ತಿಳಿದ ಜ್ಞಾನಿಯು ಸರ್ವಭೂತಗಳನ್ನು ನನ್ನ ಸ್ವರೂಪಗಳನ್ನಾಗಿ ನೋಡುವನು! ಎಲೈ ದಕ್ಷನೆ, ಸರ್ವಭೂತಾಂತರಾತ್ಮರಾಗಿ ಏಕರೂಪರಾಗಿ ಮೂರುಮಂದಿಯಾದ ನಮ್ಮಲ್ಲಿ ಯಾವ ಪುರುಷನು ಭೇದವನ್ನು ತಿಳಿಯುವದಿಲ್ಲವೋ ಆ ಪುರುಷನು ಮುಕ್ತಿಯನ್ನೈದುವನು' ಎಂದು ಭಗವಂತನಿಂದ ಆಜ್ಞಾಪಿಸಲ್ಪಟ್ಟ ದಕ್ಷಪ್ರಜೇಶನು ಭಗವತ್ಪ್ರೀತಿಕರವಾದ ತ್ರಿಕಪಾಲಪುರೋಡಾಶದಿಂದ ಹರಿಯನ್ನರ್ಚಿಸಿ ಅಂಗಯಾಗಗಳಿಂದಲೂ ಪ್ರಧಾನಯಾಗಗಳಿಂದಲೂ ದೇವತೆಗಳನ್ನಾರಾಧಿಸಿದನು; ಯಜ್ಞಾವಶಿಷ್ಟನಾದ ಭಾಗದಿಂದ ಶ್ರೀರುದ್ರನನ್ನಾರಾಧಿಸಿ ಯಾಗವನ್ನು ಪೂರ್ತಿಮಾಡುವ ಕರ್ಮದಿಂದ ಇತರರಾದ ಸೋಮಪರನ್ನು ಪೂಜಿಸಿದನು! ಅನಂತರದಲ್ಲಿ ಸ್ವಮಹಾತ್ಮ್ಯದಿಂದಲೇ ಸಮಸ್ತ ಸಿದ್ಧಿಗಳನ್ನು ಪಡದಿರುವ ಪರಮಾತ್ಮನಿಗೋಸ್ಕರ ಕ್ರತುವನ್ನರ್ಪಿಸಿ ಕರ್ಮಪೂರ್ತಿಯಾದಮೇಲೆ ಋತ್ವಿಕ್ಕುಗಳಸಹಿತನಾಗಿ ದಕ್ಷನು ಅವಭೃತಸ್ನಾನವನ್ನು ಮಾಡಿದನು; ಸಮಸ್ತ ದೇವತೆಗಳು ಧರ್ಮದಲ್ಲೇ ಬುದ್ಧಿಯನ್ನಿರಿಸಿ ಸ್ವರ್ಗವನ್ನೈದಿದರು! ಎಲೈ ವಿದುರನೆ, ದಕ್ಷಪುತ್ರಿಯಾದ ದಾಕ್ಷಾಯಣೀದೇವಿಯು ಈಪ್ರಕಾರವಾಗಿ ತನ್ನ ಪೂರ್ವಶರೀರವನ್ನು ತ್ಯಜಿಸಿ ಹಿಮವತ್ಪರ್ವತರಾಜನ ಪತ್ನಿಯಾದ ಮೇನಾದೇವಿಯ ಗರ್ಭದಲ್ಲಿ ಜನಿಸಿದಳು; ಆ ಪಾರ್ವತೀದೇವಿಯು ಆ ಪರಮೇಶ್ವರನನ್ನೇ ಪತಿಯಾಗಿ ಮಾಡಿಕೊಂಡಳು; ಅನ್ಯರನ್ನು ಭಜಿಸದೆ ಶರಣಾಗತರಾದ ಜನರಿಗೆ ಗತಿಪ್ರದನಾದ ಪರಮೇಶ್ವರನನ್ನು ಪ್ರಳಯಕಾಲದಲ್ಲಿ ಸುಪ್ತವಾದ ಮಾಯಾ ಶಕ್ತಿಯು ಪರಮಪುರುಷನನ್ನು ಭಜಿಸುವಂತೆ ಪಾರ್ವತಿಯು ಪರಮೇಶ್ವರನನ್ನು ಐದಿದಳು! ಎಲೈ ವಿದುರನೆ, ಬೃಹಸ್ಪತಿ ಶಿಷ್ಯನಾಗಿ ಭಾಗವತನಾದ ಉದ್ಧವನಿಂದ ಈ ಅರ್ಥವು ನನಗೆ ಹೇಳಲ್ಪಟ್ಟಿತು! ಪವಿತ್ರವಾಗಿ ಯಶಸ್ಕರವಾಗಿ ಪಾಪಸಮೂಹನಾಶಕವಾಗಿರುವ ಉತ್ತಮವಾದ ಪರಮೇಶ್ವರಚರಿತ್ರೆಯನ್ನು ಯಾವ ಪುರುಷನು ಭಕ್ತಿಯುಕ್ತನಾಗಿ ನಿತ್ಯದಲ್ಲಿಯೂ ಶ್ರವಣಗೈದು ಕೀರ್ತನಗೈವನೋ ಆ ಪುರುಷನು ಸಮಸ್ತ ಪಾಪಗಳನ್ನು ಪರಿಹರಿಸಿಕೊಳ್ಳುವನು" ಎಂದು ಮೈತ್ರೇಯ ಋಷಿಯು ವಿದುರನನ್ನು ಕುರಿತು ನುಡಿದನು.

೮ನೇ ಅಧ್ಯಾಯ.

ಧ್ರುವ ಚರಿತ್ರೆ.

ಆ ಬಳಿಕ ಮೈತ್ರೇಯಋಷಿಯು ವಿದುರನನ್ನು ಕುರಿತು "ಎಲೈ ವಿದುರನೆ, ಬ್ರಹ್ಮಪುತ್ರರಾದ ಸನಕಾದಿಗಳು ನಾರದನು ಋಭುವು ಹಂಸನು ಅರುಣಿಯು ಎತಿಯು ಇವರುಗಳು ಊರ್ಧ್ವರೇತಸ್ಕರಾಗಿ ಗಾರ್ಹಸ್ಥ್ಯಾಶ್ರಮವನ್ನು ಅಂಗೀಕರಿಸಲಿಲ್ಲ; ಬ್ರಹ್ಮಪುತ್ರನಾದ ಅಧರ್ಮಪುರುಷನಿಗೆ ಮೃಷಾ ಎಂಬ ಪತ್ನಿಯು ಉಂಟಾದಳು! ಎಲೈ ಶತೃಸಂಹಾರಕನಾದ ವಿದುರನೆ, ಆ ಮೃಷೆಯು ದಂಭನೆಂಬ ಪುತ್ರನನ್ನು ಮಾಯೆಯೆಂಬ ಪುತ್ರಿಯನ್ನು ಪಡೆದಳು;

ಅಪುತ್ರನಾದ ನಿಋಋತಿಯು ಆ ಈರ್ವರು ಮಕ್ಕಳನ್ನು ಗ್ರಹಿಸಿದನು; ದಾಂಪತ್ಯವನ್ನೈದಿದ ಆ ಈರ್ವರಿಗೆ ಲೋಭನು ನಿಕೃತಿಯರೆಂಬ ಇಬ್ಬರು ಸ್ತ್ರೀಯರು ಹುಟ್ಟಿದರು; ಶಠತ್ವವೇ ನಿಕೃತಿಯೆನಿಸುವದು! ಎಲೈ ಮಹಾ ಬುದ್ಧಿಶಾಲಿಯಾದ ವಿದುರನೇ, ದಾಂಪತ್ಯವನ್ನಾಶ್ರಯಿಸಿದ ನಿಕೃತಿ ಲೋಭರಿಗೆ ಕ್ರೋಧನೆಂಬ ಪುತ್ರನು ಹಿಂಸೆಯೆಂಬ ಸ್ತ್ರೀಯು ಹುಟ್ಟಿದರು; ದಂಪತಿಗಳಾದ ಆ ಈರ್ವರಿಗೂ ಕಲಿಯೆಂಬ ಪುರುಷನು ದುರುಕ್ತಿಯೆಂಬ ಕನ್ಯೆಯು ಹುಟ್ಟಿದರು; ಕಲಿಯು ದುರುಕ್ತಿಯೆಂಬ ತನ್ನ ಪತ್ನಿಯಲ್ಲಿ ಭಯವನ್ನು ಮೃತ್ಯುವನ್ನು ಹುಟ್ಟಿಸಿದನು; ಅವರೀರ್ವರಿಗೂ ಯಾತನೆಯು ನಿರಯವು ಎಂಬ ಈರ್ವರು ಪುತ್ರರು ಹುಟ್ಟಿದರು! ಎಲೈ ಪಾಪರಹಿತನಾದ ವಿದುರನೆ, ಈ ಅಧರ್ಮಸಂತತಿಯು ನಿನಗೆ ಹೇಳಲ್ಪಟ್ಟಿತು; ಈ ಸಂತತಿಯನ್ನು ಮೂರಾವರ್ತಿ ಕೇಳಿದರೆ ಪಾಪಪರಿಹಾರವಾಗುವದು! ಎಲೈ ವಿದುರನೆ, ಶ್ರೀಹರಿಯ ಅಂಶಾಂಶದಿಂದ ಜನಿಸಿದ ಪುಣ್ಯಕೀರ್ತಿಯುಳ್ಳ ಸ್ವಾಯಂಭುವಮನುವಿನ ವಂಶವನ್ನು ಹೇಳುವೆನು ಕೇಳು; ಶತರೂಪಾದೇವಿಗೆ ಪತಿಯಾದ ಸ್ವಾಯಂಭುವಮನುವಿನ ಪುತ್ರರಾದ ಪ್ರಿಯವ್ರತ ಉತ್ತಾನಪಾದರಾಯರೆಂಬ ಈರ್ವರು ಭಗವದಂಶಭೂತರಾಗಿ ಭೂರಕ್ಷಣಾವ್ಯಾಪಾರದಲ್ಲಿದ್ದರು; ಉತ್ತಾನಪಾದರಾಯನಿಗೆ ಸುನೀತಿ ಸುರುಚಿಯರೆಂಬ ಈರ್ವರು ಪತ್ನಿಯರು; ಅವರಲ್ಲಿ ಸುರುಚಿಯೆಂಬ ಪತ್ನಿಯು ಪತಿಗೆ ಪ್ರೀತಿಪಾತ್ರಳು; ಸುನೀತಿಯೆಂಬ ಜ್ಯೇಷ್ಠಪತ್ನಿಯು ಪತಿಗೆ ಪ್ರೀತಿಪಾತ್ರಳಲ್ಲ! ಎಲೈ ವಿದುರನೆ, ಒಂದು ಸಮಯದಲ್ಲಿ ಉತ್ತಾನಪಾದರಾಯನು ಸುರುಚಿ ಪುತ್ರನಾದ ಉತ್ತಮನನ್ನು ತನ್ನ ತೊಡೆಯಮೇಲೆ ಕುಳ್ಳಿರಿಸಿಕೊಂಡು ಲಾಲಿಸುತ್ತಿರುವ ಸಮಯದಲ್ಲಿ ಸುನೀತಿ ಪುತ್ರನಾದ ಧ್ರುವನು ತಾನು ತಂದೆಯ ತೊಡೆಯಮೇಲೆ ಹತ್ತಿ ಕುಳಿತುಕೊಳ್ಳಬೇಕೆಂಬ ಅಪೇಕ್ಷೆಯಿಂದ ಬಂದನು; ಅದನ್ನು ನೋಡಿ ಸುರುಚಿಯು ಅರಸು ನೋಡುತ್ತಿರುವಾಗಲೇ ಗರ್ವಿತಳಾಗಿ ಈರ್ಷ್ಯಾಪೂರ್ವಕವಾಗಿ ಧ್ರುವನನ್ನು ಕುರಿತು 'ಎಲೈ ಬಾಲಕನಾದ ಧ್ರುವನೆ, ನೀನು ತಂದೆಯ ತೊಡೆಯಮೇಲೆ ಕೂಡುವದಕ್ಕೆ ಯೋಗ್ಯನಲ್ಲ; ನೀನು ರಾಜಪುತ್ರನಾದಾಗ್ಯೂ ನನ್ನ ಗರ್ಭದಲ್ಲಿ ಹುಟ್ಟಿದ್ದರೆ ಯೋಗ್ಯನಾಗುತ್ತಿದ್ದೆ; ನೀನು ಅಜ್ಞನಾದ ಬಾಲಕನಾದಕಾರಣ ಅನ್ಯಸ್ತ್ರೀಗರ್ಭದಲ್ಲಿ ಹುಟ್ಟಿದವನಾಗಿ ತಿಳಿಯಲಿಲ್ಲ; ನನ್ನ ಗರ್ಭದಲ್ಲೇ ಹುಟ್ಟಿದವನಾಗಿ ತಿಳಿದು ಇದ್ದೀಯೆ; ದುರ್ಲಭವಾದ ಈ ಮನೋರಥವನ್ನು ಯಾಕೆ ಅಪೇಕ್ಷಿಸುತ್ತೀಯೆ! ಎಲೈ ಬಾಲಕನೇ, ನೀನು ತಂದೆಯ ತೊಡೆಯಮೇಲೆ ಕೂಡಬೇಕೆಂಬ ಇಚ್ಛೆಯುಳ್ಳವನಾದರೆ ತಪಸ್ಸಿನಿಂದ ಪರಮಪುರುಷನನ್ನು ಆರಾಧಿಸಿ ಅವನ ಅನುಗ್ರಹದಿಂದ ನನ್ನ ಗರ್ಭದಲ್ಲಿ ಜನಿಸು' ಎಂಬ ಸಪತ್ನೀ ಮಾತೃವಿನ ದುರುಕ್ತಿಗಳಿಂದ ಪೆಟ್ಟುಬಿದ್ದವನಾಗಿ ಕೊಳಲುಗಳಿಂದ ಪೆಟ್ಟುಬಿದ್ದ ಸರ್ಪದಂತೆ ಕೋಪದಿಂದ ನಿಟ್ಟುಸುರನ್ನು ಬಿಡುತ ಬಾಲಕನಾದ ಧ್ರುವನು ಮಾತನಾಡದೆ ಸುಮ್ಮನೆ ನೋಡುತಲಿರುವ ತಂದೆಯನ್ನು ಬಿಟ್ಟು ರೋದನಗೈಯುತ ತಾಯಿಯ ಸಮೀಪಕ್ಕೆ ಹೋದನು; ನಡುಗುತಲಿರುವ ಅಧರೋಷ್ಟವುಳ್ಳವನಾಗಿ ನಿಟ್ಟುಸುರನ್ನು ಬಿಡುತ ರೋದನಗೈಯುತಲಿರುವ ಬಾಲಕನನ್ನು ತೊಡೆಯಮೇಲೆ ಕೂಡಿಸಿಕೊಂಡು ತಾಯಿಯಾದ ಸುನೀತಿದೇವಿಯು ಸವತಿಯಿಂದ ಹೇಳಲ್ಪಟ್ಟ ಮರ್ಮೋಕ್ತಿಗಳನ್ನು ಅಂತಃಪುರದ ಜನರ ಮುಖದಿಂದ ಕೇಳಿ ವ್ಯಥೆಪಟ್ಟು ಸವತಿಯ ವಾಕ್ಯವನ್ನು ಸ್ಮರಿಸಿಕೊಂಡು ಪದ್ಮಸದೃಶಗಳಾದ ನೇತ್ರಗಳಿಂದ ಬಾಷ್ಪೋದಕವನ್ನು ಧರಿಸುತ ಕಾಡುಗಿಚ್ಚಿನಿಂದ ದಹಿಸಲ್ಪಡುವ ಬಾಲಲತೆಯಂತೆ ಶೋಕದಿಂದ ಪೀಡಿತಳಾಗಿ ಧೈರ್ಯವನ್ನು ಬಿಟ್ಟು ವಿಲಾಪಗೈದಳು; ದೀರ್ಘವಾಗಿ ನಿಟ್ಟುಸುರುಗಳನ್ನು ಬಿಡುತಲಿರುವ ಆ ಸುನೀತಿಯು ಈ ದುಃಖದ ಕಡೆಯನ್ನು ಕಾಣದಿರುವವಳಾಗಿ ಬಾಲಕನಾದ ಧ್ರುವನನ್ನು ಕುರಿತು 'ಎಲೈ ಮಗನೇ, ಪರರಲ್ಲಿ ಅಪರಾಧವನ್ನು ಎಣಿಸಬೇಡ; ತಾನು ಪರರಿಗೆ ದುಃಖವನ್ನು ಕೊಟ್ಟರೆ ಆ ದುಃಖವನ್ನು ತಾನು ಅನುಭವಿಸುವನು; ಸುರುಚಿಯಿಂದ ಹೇಳಲ್ಪಟ್ಟ ವಾಕ್ಯವು ಸತ್ಯವೇ ಸರಿ; ಭಾಗ್ಯಹೀನಳಾದ ನನ್ನ ಉದರದಲ್ಲಿ ನೀನು ಜನಿಸಿದವನಾದೆ; ನಿರ್ಭಾಗ್ಯಳಾದ ನನ್ನ ಸ್ತನ್ಯಕ್ಷೀರದಿಂದ ನೀನು ಬೆಳೆದವನು; ಅರಸಾದ ಉತ್ತಾನಪಾದರಾಯನು ನನ್ನನ್ನು ಪತ್ನಿಯನ್ನಾಗಿ ಭಾವಿಸಿ ಭಾಷಿಸುವದಕ್ಕೂ ಕೂಡ ಲಜ್ಜೆಪಡುತ್ತಾನೆ! ಎಲೈ ಬಾಲಕನೆ, ನೀನು ಉತ್ತಮನಂತೆ ತಂದೆಯ ತೊಡೆಯಮೇಲೆ ಬಹುಮಾನಿತನಾಗಬೇಕೆಂಬ ಇಚ್ಛೆಯುಳ್ಳವನಾದರೆ ನಿನ್ನ ಸಪತ್ನೀ ಮಾತೃವಿನಿಂದ ಹೇಳಲ್ಪಟ್ಟ ಸತ್ಯವಾಕ್ಯದಲ್ಲಿ ಮಾತ್ಸರ್ಯವನ್ನು ಬಿಟ್ಟು ಅದೇಪ್ರಕಾರ ಆಚರಿಸು; ಅಧೋಕ್ಷಜನ

ಪಾದಪದ್ಮವನ್ನಾರಾಧಿಸು ; ಚತುರ್ಮುಖನೂ ಕೂಡ ಜಗತ್ಪಾಲನಾರ್ಥವಾಗಿ ಸ್ವೀಕರಿಸಲ್ಪಟ್ಟ ಸತ್ವಗುಣಾಧಿಷ್ಠಾನನಾದ ಭಗವಂತನ ಸಂಬಂಧಿಗಳಿಂದ ಜಯಿಸಲ್ಪಟ್ಟ ಮನಸ್ಸುಳ್ಳ ಪ್ರಾಣಾದಿ ವಾಯುಗಳುಳ್ಳ ಮಹಾಯೋಗಿಗಳಿಂದ ನಮಸ್ಕರಿಸಲ್ಪಟ್ಟ ಪಾದಪದ್ಮವನ್ನಾರಾಧಿಸಿ ಪರಮೇಷ್ಠಿಪದವನ್ನೈದಿದನು ; ಅದೇಪ್ರಕಾರವಾಗಿ ನಿಮ್ಮ ಪಿತಾಮಹನಾಗಿ ಭಗವಂತನಾದ ಸ್ವಾಯಂಭುವಮನುವು ಭಗವಂತನನ್ನು ಸರ್ವಾಂತರ್ಯಾಮಿಯೆಂಬ ಬುದ್ಧಿಯಿಂದ ಅಧಿಕವಾದ ದಕ್ಷಿಣೆಯುಳ್ಳ ಕ್ರತುಗಳಿಂದ ಆರಾಧಿಸಿ ಅನ್ಯರಿಂದ ಪಡೆಯಲಶಕ್ಯವಾದ ಭೂಸಾಮ್ರಾಜ್ಯಾಧಿಪತ್ಯವನ್ನೂ ಮೋಕ್ಷಸುಖವನ್ನೂ ಐದಿದನು! ಎಲೈ ಬಾಲಕನೆ, ಮೋಕ್ಷೇಚ್ಛುಗಳಿಂದ ಹುಡುಕುವದಕ್ಕೆ ಯೋಗ್ಯವಾದ ಪಾದಾಬ್ಜವುಳ್ಳ ಭಕ್ತವತ್ಸಲನಾದ ಆ ಭಗವಂತನನ್ನೇ ಆಶ್ರಯಿಸು ; ಅನ್ಯವಸ್ತುಗಳಲ್ಲಿ ವ್ಯಾಪಿಸದೆ ಸ್ವಧರ್ಮಗಳಿಂದ ಶೋಧಿತವಾದ ಮನಸ್ಸಿನಲ್ಲಿ ಭಗವಂತನನ್ನು ಧ್ಯಾನಿಸುತ ಭಜಿಸುವನಾಗು! ಎಲೈ ಬಾಲಕನೆ, ಬ್ರಹ್ಮಾದಿಗಳಿಂದ ಧ್ಯಾನಿಸಲ್ಪಡುತ್ತಲಿರುವ ಪದ್ಮಹಸ್ತಳಾದ ಮಹಾಲಕ್ಷ್ಮಿಯಿಂದ ಯಾವ ಭಗವಂತನು ಹುಡುಕಲ್ಪಡುತ್ತಾನೆಯೊ ಪದ್ಮದಳನೇತ್ರನಾದ ಆ ಭಗವಂತನನ್ನು ಬಿಟ್ಟು ಮತ್ತೊಬ್ಬನನ್ನು ನಿನ್ನ ದುಃಖಪರಿಹಾರಕನನ್ನಾಗಿ ನಾನು ತಿಳಿಯುವದಿಲ್ಲ’ ಎಂದು ನುಡಿದಳು.

“ಎಲೈ ವಿದುರನೆ, ಈರೀತಿಯಲ್ಲಿ ಮಾತೃವಿನಿಂದ ಹೇಳಲ್ಪಟ್ಟ ಇಷ್ಟಾರ್ಥಪ್ರದವಾದ ವಾಕ್ಯವನ್ನು ಕೇಳಿ ಧ್ರುವನು ಚಿತ್ತವನ್ನು ದೃಢೀಕರಿಸಿಕೊಂಡು ತಂದೆಯ ಪುರದಿಂದ ತೆರಳಿಹೋದನು ; ನಾರದಋಷಿಯು ಆ ಅರ್ಥವನ್ನು ಕೇಳಿ ಈ ಧ್ರುವನ ಮನೋಗತಾರ್ಥವನ್ನು ತಿಳಿದು ಪಾಪಹರವಾದ ತನ್ನ ಹಸ್ತದಿಂದ ಶಿರಸ್ಸನ್ನು ತಡವರಿಸಿ ಆಶ್ಚರ್ಯಯುಕ್ತನಾಗಿ ಮಾನಭಂಗವನ್ನು ಸಹಿಸದಿರುವ ಕ್ಷತ್ರಿಯರ ತೇಜಸ್ಸು ಆಶ್ಚರ್ಯಕರವಾಗಿದೆ ; ಈ ಧ್ರುವನು ಬಾಲಕನಾದಾಗ್ಯೂ ಸಪತ್ನೀ ಮಾತೃವಿನ ದುರುಕ್ತಿಯನ್ನು ಚಿತ್ತದಲ್ಲಿರಿಸಿದನೆಂದು ಆಶ್ಚರ್ಯಪಟ್ಟು ಆ ಧ್ರುವನನ್ನು ಕುರಿತು ‘ಎಲೈ ಬಾಲಕನೆ, ಕ್ರೀಡಾಸಕ್ತನಾದ ನಿನ್ನಲ್ಲಿ ಈಗ ಮಾನಾವಮಾನಗಳ ಪ್ರಸಕ್ತಿಯನ್ನು ನಾನು ಕಾಣುವದಿಲ್ಲ ; ಮಾನಾವಮಾನಗಳ ವಿವೇಕವುಂಟಾದಾಗ್ಯೂ ಪುರುಷರಿಗೆ ಸ್ವಸ್ವಕರ್ಮಾನುಸಾರವಾಗಿ ಪ್ರಾಪ್ತಗಳಾಗುವ ಸುಖದುಃಖಾದಿಗಳಲ್ಲಿ ಹರ್ಷಶೋಕಗಳು ಮೋಹಕಲ್ಪಿತಗಳೇ ಹೊರ್ತು ಮತ್ತೊಂದಲ್ಲ! ಎಲೈ ಬಾಲಕನೆ, ಈಶ್ವರಾನುಕೂಲ್ಯವನ್ನು ತಿಳಿದು ಬುದ್ಧಿವಂತನು ದೈವದಿಂದ ಯಾವನ್ಮಾತ್ರವು ಉಂಟುಮಾಡಲ್ಪಡುತ್ತೆಯೋ ತಾವನ್ಮಾತ್ರದಿಂದ ಸಂತುಷ್ಟನಾಗಬೇಕು! ಮಾತೃವಿನಿಂದ ಉಪದಿಷ್ಟವಾದ ಉಪಾಯದಿಂದ ಯಾವ ಭಗವಂತನ ಅನುಗ್ರಹವನ್ನು ಸಂಪಾದಿಸಲಿಚ್ಛೈಸುತ್ತೀಯೋ ಆ ಭಗವಂತನು ಪುರುಷರಿಗೆ ಆರಾಧಿಸಲಶಕ್ಯನಾದವನೆಂದು ನಾನು ತಿಳಿಯುತ್ತೇನೆ ; ಮನನಶೀಲರಾದ ಮಹಾಮುನಿಗಳೂ ಸಂಗರಹಿತವಾಗಿ ತೀವ್ರಯೋಗಯುಕ್ತವಾದ ಸಮಾಧಿಯಿಂದ ಬಹುಜನ್ಮಗಳಿಂದ ಹುಡುಕುವವರಾದಾಗ್ಯೂ ಭಗವಂತನ ಮಾರ್ಗವನ್ನರಿಯರು ; ಆದಕಾರಣ ನಿರರ್ಥಕವಾದ ಈ ಯತ್ನವನ್ನು ಬಿಡು ; ಶ್ರೇಯಸ್ಸುಗಳಿಗೆ ಕಾಲವಾದ ಅಪರವಯಸ್ಸಿನಲ್ಲಿ ಈ ಪ್ರಯತ್ನವನ್ನು ಮಾಡು ; ಯಾವ ಪುರುಷನಿಗೆ ಯಾವ ಯಾವ ಸುಖದುಃಖಗಳು ಪ್ರಾಪ್ತಗಳಾಗುವವೋ ಆ ಪುರುಷನು ಹರ್ಷವಿಷಾದಗಳನ್ನು ಬಿಟ್ಟು ಆಯಾಯ ಸುಖದುಃಖಗಳನ್ನು ದೈವಕ್ಲಪ್ತಗಳನ್ನಾಗಿ ತಿಳಿದು ಅನುಭವಿಸುವನಾದರೆ ಪರಗತಿಯನ್ನೈದುವನು ; ಪ್ರಾಜ್ಞನಾದ ಪುರುಷನು ತನಗಿಂತಲೂ ಅಧಿಕಗುಣಗಳುಳ್ಳ ಪುರುಷನನ್ನು ನೋಡಿ ಸಂತೋಷಪಡಬೇಕು ; ತನಗಿಂತಲೂ ಕಡಿಮೆಯಾದ ಪುರುಷನನ್ನು ನೋಡಿ ಕೃಪೆಯನ್ನು ಮಾಡಬೇಕು ; ತನಗೆ ಸಮಾನನಾದ ಪುರುಷನನ್ನು ನೋಡಿದರೆ ಮಿತ್ರತ್ವವನ್ನು ಮಾಡಬೇಕು ; ಉತ್ಕೃಷ್ಟನಲ್ಲಿ ಅಸೂಯೆಯನ್ನು ಅಪಕೃಷ್ಟನಲ್ಲಿ ತಿರಸ್ಕಾರವನ್ನು ಸಮಾನನಲ್ಲಿ ಸ್ಪರ್ಧೆಯನ್ನು ಮಾಡಬಾರದು ; ಅಂಥಾ ಪುರುಷನಿಗೆ ಸಂತಾಪಾದಿಗಳು ಉಂಟಾಗುವದಿಲ್ಲ’ ಎಂಬ ನಾರದಋಷಿಯ ವಾಕ್ಯವನ್ನು ಕೇಳಿ ಧ್ರುವನು ‘ಎಲೈ ಪ್ರಾಜ್ಞನಾದ ಮಹರ್ಷಿಯೇ, ಅನೇಕಗಳಾದ ಸುಖದುಃಖಗಳಿಂದ ಪೀಡಿತವಾದ ಚಿತ್ತವುಳ್ಳವರಾಗಿ ನಿರ್ವಿಣ್ಣರಾದ ಪುರುಷರಿಗೆ ಯುಕ್ತವಾದ ಉಪಶಾಂತಿಮಾರ್ಗವು ನಿನ್ನ ಕೃಪೆಯಿಂದ ತೋರಿಸಲ್ಪಟ್ಟಿತು ; ನಮ್ಮಂಥಾ ಪಾಮರರಿಗೆ ಉಪಶಾಂತಿಮಾರ್ಗವು ಸ್ಮರಿಸುವದಕ್ಕೆ ಯೋಗ್ಯವಲ್ಲ ; ಆದಾಗ್ಯೂ ಕ್ಷತ್ರಿಯಸಂಬಂಧಿಯಾದ ಘೋರಸ್ವಭಾವವನ್ನೈದಿರುವ ಅವಿನೀತನಾದ ನನ್ನ ಸುರುಚಿಯ ದುರ್ವಾಕ್ಯಗಳೆಂಬ ಬಾಣ

ಗಳಿಂದ ಭೇದಿಸಲ್ಪಟ್ಟ ಶ್ರೋತ್ರದಲ್ಲಿ ನಿನ್ನಿಂದ ಉಪದಿಷ್ಟವಾದ ಉಪಶಾಂತಮಾರ್ಗವು ಪ್ರವೇಶಿಸುವದಿಲ್ಲ! ಎಲೈ ಬ್ರಾಹ್ಮಣೋತ್ತಮನಾದ ನಾರದಋಷಿಯೆ, ನಮ್ಮ ಪಿತೃಪಿತಾಮಹಾದಿಗಳಿಂದಲೂ ಅನ್ಯರಾದ ಮಹಾಪುರುಷರಿಂದಲೂ ಪೂರ್ವದಲ್ಲಿ ಐತಲ್ಪಡದಿರುವ ಲೋಕತ್ರಯಕ್ಕಿಂತಲೂ ಸರ್ವೋತ್ಕೃಷ್ಟವಾದ ಸ್ಥಾನವನ್ನು ಜಯಿಸಲಿಚ್ಛೆಯುಳ್ಳ ನನಗೆ ಅನುಕೂಲವಾದ ಉತ್ತಮಮಾರ್ಗವನ್ನು ಉಪದೇಶಿಸು; ಭಗವಂತನಾದ ಬ್ರಹ್ಮದೇವನ ಶರೀರದ ದೆಶೆಯಿಂದ ಆವಿರ್ಭವಿಸಿದ ನೀನು ವೀಣೆಯನ್ನು ಧ್ವನಿಗೈಸಿಕೊಂಡು ಲೋಕಹಿತಾರ್ಥವಾಗಿ ಸೂರ್ಯನಂತೆ ಸಂಚರಿಸುತ್ತೀ' ಎಂದು ಧ್ರುವನಿಂದ ಹೇಳಲ್ಪಟ್ಟ ವಾಕ್ಯವನ್ನು ಕೇಳಿ ಭಗವಂತನಾದ ನಾರದಋಷಿಯು ಸಂತುಷ್ಟನಾಗಿ ದಯೆಯಿಂದ ಆ ಬಾಲಕನನ್ನು ಕುರಿತು 'ಎಲೈ ಬಾಲಕನೆ, ನಿನ್ನ ಮಾತೃವಿನಿಂದ ಹೇಳಲ್ಪಟ್ಟ ಮಾರ್ಗವು ನಿನಗೆ ಶ್ರೇಯಸ್ಸಾಧನವಾಗುತ್ತದೆ; ಭಗವಂತನಾದ ವಾಸುದೇವನೇ ನಿನಗೆ ಶ್ರೇಯಃಪ್ರದನು; ಆ ಭಗವಂತನಲ್ಲಿರಿಸಲ್ಪಟ್ಟ ಚಿತ್ತದಿಂದ ಆತನನ್ನೇ ಭಜಿಸು; ಧರ್ಮಾರ್ಥಕಾಮಮೋಕ್ಷರೂಪವಾದ ಶ್ರೇಯಸ್ಸನ್ನು ಯಾವ ಪುರುಷನು ಅಪೇಕ್ಷಿಸುವನೋ ಆ ಶ್ರೇಯಃಪ್ರಾಪ್ತಿಯಲ್ಲಿ ಕಾರಣವಾದದ್ದು ಶ್ರೀಹರಿಯ ಪಾದಸೇವನವು! ಎಲೈ ಬಾಲಕನೆ, ಆದಕಾರಣ ನೀನು ಪರಿಶುದ್ಧವಾದ ಯಮುನಾತೀರವನ್ನೈದು; ಆ ತೀರದಲ್ಲಿ ಪುಣ್ಯಕರವಾದ ಮಧುವನವು ಇದೆ; ಆ ವನದಲ್ಲಿ ಭಗವಂತನು ಸರ್ವದಾ ಸಾನ್ನಿಧ್ಯವನ್ನೈದಿರುವನು; ಪುಣ್ಯಕರವಾದ ಆ ಯಮುನಾನದಿಯ ಉದಕದಲ್ಲಿ ಕಾಲತ್ರಯದಲ್ಲಿಯೂ ಸ್ನಾನಗೈದು ನಿನಗೆ ಯೋಗ್ಯಗಳಾದ ಕರ್ಮಗಳನ್ನಾಚರಿಸುತ ಪವಿತ್ರವಾದ ದರ್ಭಾಸನದಲ್ಲಿ ಕುಳಿತುಕೊಂಡು ಕಾಲತ್ರಯದಲ್ಲಿಯೂ ಪ್ರಾಣಾಯಾಮದಿಂದ ಪ್ರಾಣೇಂದ್ರಿಯ ಮನಸ್ಸುಗಳ ಕಲ್ಮಷವನ್ನು ಕ್ರಮವಾಗಿ ಪರಿಹರಿಸಿಕೊಂಡು ಶುದ್ಧವಾದ ಮನಸ್ಸಿನಿಂದ ಗುರುವಾದ ಭಗವಂತನನ್ನು ಧ್ಯಾನಗೈಯಬೇಕು; ಹ್ಯಾಗೆಂದರೆ: ಪ್ರಸನ್ನಗಳಾದ ಮುಖ ನೇತ್ರಗಳುಳ್ಳವನಾಗಿ ರಮ್ಯವಾದ ನಾಶಿಕವುಳ್ಳವನಾಗಿ ಸುಂದರಗಳಾದ ಹುಬ್ಬುಗಳುಳ್ಳವನಾಗಿ ರಮಣೀಯಗಳಾದ ಕಪೋಲಗಳುಳ್ಳವನಾಗಿ ದೇವತೆಗಳೊಳಗೆ ಪರಮ ಸುಂದರನಾದ ಭಗವಂತನನ್ನು ಪ್ರಸಾದಾಭಿಮುಖನನ್ನಾಗಿ ಧ್ಯಾನಗೈಯಬೇಕು; ಯವ್ವನಶಾಲಿಯಾಗಿ ಮನೋಹರವಾದ ವಸ್ತ್ರಗಳುಳ್ಳವನಾಗಿ ಕೆಂಪಾದ ಅಧರೋಷ್ಠವೂ ನೇತ್ರಗಳೂ ಉಳ್ಳವನಾಗಿ ಶರಣಾಗತ ರಕ್ಷಕನಾಗಿ ಸುಖಕರನಾಗಿ ದಯಾಸಮುದ್ರನಾಗಿ ಶ್ರೀವತ್ಸಾಂಕನಾಗಿ ನೀಲಮೇಘಶ್ಯಾಮನಾಗಿ ವನಮಾಲಾಧಾರಿಯಾಗಿ ಶಂಖ ಚಕ್ರ ಗದಾಪದ್ಮಗಳಿಂದ ಶೋಭಿತಗಳಾದ ಚತುರ್ಭುಜಗಳುಳ್ಳವನಾಗಿ ಕಿರೀಟಧಾರಿಯಾಗಿ ರತ್ನಕುಂಡಲಗಳಿಂದ ಶೋಭಿತನಾಗಿ ಭುಜಕೀರ್ತಿಗಳಿಂದಲೂ ಕಡಗಗಳಿಂದಲೂ ಅಲಂಕೃತನಾಗಿ ಕೌಸ್ತುಭದಿಂದ ಭೂಷಿತವಾದ ಕಂಠವುಳ್ಳವನಾಗಿ ಪೀತಾಂಬರಧಾರಿಯಾಗಿ ಕಟಸೂತ್ರದಿಂದ ಭೂಷಿತನಾಗಿ ಸ್ವರ್ಣಮಯಗಳಾದ ಪಾದಾಭರಣಗಳಿಂದ ಯುಕ್ತನಾಗಿ ನೋಡುವದಕ್ಕೆ ಅತಿಪ್ರಿಯನಾಗಿ ಮನಸ್ಸಿಗೂ ನೇತ್ರಗಳಿಗೂ ಆನಂದಕರನಾಗಿ ಶಾಂತನಾಗಿ ನಖಗಳೆಂಬ ರತ್ನಗಳ ಪಙ್ತಿಗಳಿಂದ ಪ್ರಕಾಶಿಸುವ ಪಾದಗಳಿಂದ ಪೂಜಿಸುವ ಭಕ್ತರ ಹೃತ್ಪದ್ಮಮಧ್ಯವನ್ನಾಶ್ರಯಿಸಿರುವವನಾಗಿ ಹಸನ್ಮುಖನಾಗಿ ಅನುರಾಗಯುಕ್ತವಾದ ನೋಟವುಳ್ಳವನಾಗಿ ವರದ ಶ್ರೇಷ್ಠನಾದ ಭಗವಂತನನ್ನು ಏಕಾಗ್ರಚಿತ್ತದಿಂದ ಧ್ಯಾನಗೈಯಬೇಕು; ಈ ರೀತಿಯಲ್ಲಿ ಪರಮ ಮಂಗಳಕರವಾದ ಭಗವಂತನ ರೂಪವನ್ನು ಧ್ಯಾನಗೈವ ಪುರುಷನ ಚಿತ್ತವು ಪರಮ ಸುಖಸಂಪನ್ನವಾಗುವದು! ಎಲೈ ರಾಜಪುತ್ರನೆ, ಯಾವ ಮಂತ್ರವನ್ನು ಏಳುರಾತ್ರಿಗಳಲ್ಲಿ ಪಠಿಸಿದರೆ ಪುರುಷನು ಖೇಚರರಾದ ದೇವತೆಗಳನ್ನು ಕಾಣುವನೋ ಅಂಥಾ ಜಪಿಸಲು ಯೋಗ್ಯವಾದ ರಹಸ್ಯವಾದ ಮಂತ್ರವನ್ನು ಹೇಳುತ್ತೇನೆ ಕೇಳು: ಈ ವಾಸುದೇವ ದ್ವಾದಶಾಕ್ಷರ ಮಂತ್ರದಿಂದ ಪೂಜಾದ್ರವ್ಯಗಳನ್ನು ಸಂಪಾದಿಸಿಕೊಂಡು ದೇಶ ಕಾಲಜ್ಞನಾಗಿ ಭಗವಂತನ ಪೂಜೆಯನ್ನು ಮಾಡಬೇಕು; ಪರಿಶುದ್ಧಗಳಾದ ಉದಕಗಳಿಂದಲೂ ಪುಷ್ಪ ಮಾಲ್ಯಗಳಿಂದಲೂ ವನದಲ್ಲಿ ಹುಟ್ಟಿದ ಕಂದಮೂಲಫಲಾದಿಗಳಿಂದಲೂ ಪ್ರಶಸ್ತಗಳಾದ ದೂರ್ವಾಂಕುರಾದಿಗಳಿಂದಲೂ ಭುಜಪತ್ರಗಳಿಂದಲೂ ಪ್ರೀತಿಪಾತ್ರವಾದ ತುಲಸಿಯಿಂದಲೂ ಭಗವಂತನನ್ನು ಪೂಜಿಸಬೇಕು; ಶಿಲಾದಿಗಳಿಂದ ನಿರ್ಮಿತವಾದ ಭಗವಂತನ ಮೂರ್ತಿಯನ್ನು ಸಂಪಾದಿಸಿಕೊಂಡು ಅದನ್ನು ಪೂಜಿಸಬೇಕು; ಸ್ಥಿರಚಿತ್ತನಾಗಿ ಶಾಂತನಾಗಿ ಮನನಶೀಲನಾಗಿ ವಾಙ್ನಿಯಮವುಳ್ಳವನಾಗಿ ಮಿತವಾದ ಕಂದಮೂಲಾಹಾರವುಳ್ಳವನಾಗಿ ಅಚಿಂತ್ಯವಾದ ತನ್ನ ಮಾಯೆಯಿಂದ ಸ್ವೇಚ್ಛಾವತಾರಗಳಿಂದ ಯಾವ

ಚರಿತ್ರೆಗಳನ್ನು ಮಾಡುತ್ತಾನೆಯೋ ಅವುಗಳನ್ನು ಮನಸ್ಸಿನಲ್ಲಿ ಭಾವಿಸುತ ದ್ವಾದಶಾಕ್ಷರ ಮಂತ್ರದಿಂದಲೇ ಭಗವಂತನನ್ನು ಪೂಜಿಸಬೇಕು; ಈ ರೀತಿಯಲ್ಲಿ ಮನೋವಾಕ್ಕಾಯಗಳಿಂದ ಭಕ್ತಿಪೂರ್ವಕವಾಗಿ ಪುರುಷರಿಂದ ಸೇವಿಸಲ್ಪಟ್ಟ ಭಗವಂತನು ಕಪಟರಹಿತನಾಗಿ ಚೆನ್ನಾಗಿ ಪೂಜಿಸುವ ಪುರುಷರಿಗೆ ಭಕ್ತಿಯನ್ನು ವೃದ್ಧಿಪಡಿಸುತ ಧರ್ಮಾದಿ ಪುರುಷಾರ್ಥಗಳಲ್ಲಿ ಯಾವುದು ಇಷ್ಟವಾದುದ್ದೋ ಅದನ್ನು ಕೊಡುವನು; ವಿಷಯಭೋಗದಲ್ಲಿ ವಿರಕ್ತನಾಗಿ ಅಧಿಕ ಭಕ್ತಿಯಿಂದಲೂ ಅವಿಚ್ಛಿನ್ನವಾದ ಧ್ಯಾನದಿಂದಲೂ ಮೋಕ್ಷನಿಮಿತ್ತವಾಗಿ ಭಜಿಸಬೇಕು' ಎಂದು ಉಪದೇಶಿಸಿದನು.

"ಈ ರೀತಿಯಲ್ಲಿ ನಾರದನಿಂದ ಉಪದಿಷ್ಟನಾಗಿ ರಾಜಪುತ್ರನಾದ ಧ್ರುವನು ಆ ನಾರದನಿಗೆ ಪ್ರದಕ್ಷಿಣ ನಮಸ್ಕಾರವನ್ನು ಮಾಡಿ ಭಗವಂತನ ಪಾದಗಳಿಂದ ಅಂಕಿತವಾದ ಪುಣ್ಯತಮವಾದ ಮಧುವನವನ್ನು ಕುರಿತು ತೆರಳಿದನು; ಆ ರಾಜಕುಮಾರನು ತಪೋವನವನ್ನು ಕುರಿತೈದಲಾಗಿ ನಾರದಋಷಿಯು ಅಂತಃಪುರವನ್ನು ಪ್ರವೇಶಿಸಿ ಅರಸಿನ ಉತ್ತಾನಪಾದರಾಯನಿಂದ ಪೂಜಿತನಾಗಿ ಕುಳಿತುಕೊಂಡು 'ಎಲೈ ಅರಸೆ, ಧರ್ಮಾರ್ಥಕಾಮಗಳು ಕ್ಷೇಮದಿಂದಿವೆಯೋ ಏನು? ಬಾಡಿರುವ ಮುಖದಿಂದ ಏನೋ ಧ್ಯಾನಗೈಯುತ್ತೀಯೆ?' ಎಂಬ ನಾರದನ ವಾಕ್ಯವನ್ನು ಕೇಳಿ ಅರಸು 'ಎಲೈ ಬ್ರಾಹ್ಮಣೋತ್ತಮನಾದ ನಾರದಋಷಿಯೆ, ನಿರ್ದಯಮನಸ್ಕನಾಗಿ ಸ್ತ್ರೀಪರವಶನಾದ ನನ್ನಿಂದ ಬಹು ಪ್ರಾಜ್ಞನಾದ ಐದುವರ್ಷದ ವಯಸ್ಸುಳ್ಳ ಬಾಲಕನಾದ ನನ್ನ ಪುತ್ರನು ತಾಯಿಯೊಡನೆ ಸಹಿತನಾಗಿ ದೇಶಾಂತರವನ್ನು ಕುರಿತು ಹೊರಡಿಸಲ್ಪಟ್ಟನು! ಎಲೈ ಬ್ರಾಹ್ಮಣನೆ, ರಕ್ಷಕರಿಲ್ಲಗೇ ಅನಾಥನಾಗಿ ವನದಲ್ಲಿ ಪರಿಶ್ರಾಂತನಾಗಿ ಕ್ಷುತ್ತೃಷ್ಣೆಗಳಿಂದ ಬಳಲಿದ ಮುಖವುಳ್ಳವನಾಗಿ ಮಲಗಿರುವ ನನ್ನ ಬಾಲಕನನ್ನು ತೋಳಗಳು ಭಕ್ಷಿಸಿಬಿಡುತ್ತೆಯೋ ಏನೋ? ಸ್ತ್ರೀಪರಾಜಿತನಾದ ನನ್ನ ದೌರಾತ್ಮ್ಯವು ನಿಂದಿತವಾದದ್ದು; ದುಷ್ಟನಾದ ನಾನು ಪ್ರೇಮೆಯಿಂದ ತೊಡೆಯಮೇಲೆ ಹತ್ತಿ ಕೂತುಕೊಳ್ಳಬೇಕೆಂದು ಬಂದ ಬಾಲಕನನ್ನು ಲಾಲಿಸದೆ ಉಪೇಕ್ಷಿಸಿದೆನು' ಎಂದು ದುಃಖಪಡುತಲಿರುವ ಅರಸನನ್ನು ಕುರಿತು ನಾರದನು 'ಎಲೈ ಅರಸೆ, ದೇವತೆಗಳಿಂದ ರಕ್ಷಿಸಲ್ಪಡುತಲಿರುವ ನಿನ್ನ ಪುತ್ರನನ್ನು ಕುರಿತು ಶೋಕಪಡಬೇಡ; ಅವನ ಪ್ರಭಾವವನ್ನು ನೀನರಿಯೆ, ತನ್ನ ಯಶಸ್ಸನ್ನು ಲೋಕಗಳಲ್ಲಿ ವ್ಯಾಪಿಸುವಂತೆ ಮಾಡುತ್ತಾನೆ; ಲೋಕಪಾಲಕರಿಂದಲೂ ಮಾಡಲಶಕ್ಯವಾದ ಸಾಹಸವ್ಯಾಪಾರವನ್ನು ಮಾಡಿ ನಿನ್ನ ಕೀರ್ತಿಯನ್ನು ವೃದ್ಧಿಪಡಿಸುವವನಾಗಿ ಶೀಘ್ರದಿಂದಲೇ ಬರುತ್ತಾನೆ' ಎಂದು ಹೇಳಲ್ಪಟ್ಟ ದೇವಋಷಿಯ ವಾಕ್ಯವನ್ನು ವಿಶ್ವಾಸದಿಂದ ಗ್ರಹಿಸಿ ಅರಸು ರಾಜ್ಯಲಕ್ಷ್ಮಿಯನ್ನು ಉಪೇಕ್ಷಿಸಿ ಪುತ್ರನನ್ನೇ ಚಿಂತಿಸುತಲಿದ್ದನು!

"ಎಲೈ ವಿದುರನೆ, ಅನಂತರದಲ್ಲಿ ಧ್ರುವನು ಮಧುವನಕ್ಕೆ ಹೋಗಿ ಆ ನದಿಯಲ್ಲಿ ಸ್ನಾನಗೈದು ಪರಿಶುದ್ಧನಾಗಿ ಆ ರಾತ್ರಿಯಲ್ಲಿ ಉಪವಾಸಗೈದು ಸ್ಥಿರಚಿತ್ತನಾಗಿ ಭಗವಂತನನ್ನು ಸೇವಿಸಿದನು; ಮೂರು ಮೂರು ದಿವಸಕ್ಕೆ ಒಂದಾವರ್ತಿ ಬೋರೆಹಣ್ಣು ಬಿಲ್ವಹಣ್ಣುಗಳಿಂದ ಆಹಾರವನ್ನು ಮಾಡಿಕೊಂಡು ಪ್ರಾಣಧಾರಣೆಯನ್ನು ಮಾಡಿಕೊಂಡು ಹರಿಯನ್ನು ಪೂಜಿಸುತ ಒಂದು ಮಾಸವನ್ನು ಕಳೆದನು! ಎರಡನೇ ಮಾಸದಲ್ಲಿ ಧ್ರುವನು ಆರಾರು ದಿವಸಗಳಿಗೆ ಒಂದಾವರ್ತಿ ಜೀರ್ಣಪರ್ಣಗಳಿಂದಲೂ ತೃಣಗಳಿಂದಲೂ ಜೀವನವನ್ನು ಮಾಡಿಕೊಂಡು ಭಗವಂತನನ್ನು ಪೂಜಿಸಿದನು; ಮೂರನೇ ಮಾಸದಲ್ಲಿ ಒಂಭತ್ತು ಒಂಭತ್ತು ದಿವಸಗಳಿಗೆ ಒಂದಾವರ್ತಿ ಜಲಪಾನವನ್ನು ಮಾಡಿಕೊಂಡು ಭಗವಂತನನ್ನಾರಾಧಿಸಿದನು! ನಾಲ್ಕನೇ ಮಾಸದಲ್ಲಿ ಹನ್ನೆರಡು ಹನ್ನೆರಡು ದಿವಸಗಳಿಗೆ ಒಂದಾವರ್ತಿ ವಾಯುವನ್ನು ಆಹಾರಮಾಡಿಕೊಂಡು ಶ್ವಾಸಧಾರಣೆಯನ್ನು ಮಾಡಿ ಭಗವಂತನನ್ನು ಪೂಜಿಸಿದನು! ಐದನೇ ಮಾಸದಲ್ಲಿ ರಾಜಪುತ್ರನು ಶ್ವಾಸನಿರೋಧಗೈಯುತ ಪರಬ್ರಹ್ಮವನ್ನು ಧ್ಯಾನಗೈಯುತ ಏಕಪಾದದಿಂದ ಚಲಿಸದೆ ನಿಂತು ಶಬ್ದಾದಿ ವಿಷಯಗಳಿಗೂ ಚಕ್ಷುರಾದಿ ಇಂದ್ರಿಯಗಳಿಗೂ ಪ್ರೇರಕವಾದ ಮನಸ್ಸನ್ನು ಹೃದಯದಲ್ಲಿ ನಿರೋಧಿಸಿ ಭಗವಂತನ ಸ್ವರೂಪವನ್ನೇ ಧ್ಯಾನಿಸುತ ಮತ್ತೇನನ್ನೂ ಕಾಣದೆ ಮಹತ್ತತ್ವಾದಿ ಸರ್ವಜಗತ್ತಿಗೂ ಆಧಾರನಾಗಿ ಪ್ರಧಾನಪುರುಷೇಶ್ವರನಾಗಿ ಬ್ರಹ್ಮನಾದ ಪರಮಾತ್ಮನನ್ನು ಧ್ಯಾನಿಸುತಿರುವ ಆ ಧ್ರುವನ ದೆಸೆಯಿಂದ ಮೂರು ಲೋಕಗಳೂ ಕಂಪಿಸಿದವು; ರಾಜಪುತ್ರನು ಯಾವಾಗ ಏಕಪಾದದಿಂದ ನಿಂತನೋ ಆಗ ಅವನ ಪಾದಾಂಗುಷ್ಠದಿಂದ ಪೀಡಿತವಾದ

ಭೂಮಿಯು ಮದಗಜದಿಂದಾಕ್ರಾಂತವಾದ ಹಡಗಿನಂತೆ ಎಡಕ್ಕೂ ಬಲಕ್ಕೂ ಬಾರಿಬಾರಿಗೂ ವ್ಯತ್ಯಸ್ತವಾಯಿತು, ಆ ಧ್ರುವನು ಪ್ರಾಣವನ್ನೂ ತದ್ದ್ವಾರವನ್ನೂ ಸಹಾ ನಿರೋಧಿಸಿ ಅನನ್ಯಭಾವದಿಂದ ತನಿಗೂ ಭಗವಂತನಿಗೂ ಐಕ್ಯಭಾವನೆಯಿಂದ ಜಗದಾತ್ಮನಾದ ಪರಮಪುರುಷನನ್ನು ಭಾವಿಸುತಲಿರಲು ಲೋಕಪಾಲಸಹಿತಗಳಾದ ಲೋಕಗಳು ಶ್ವಾಸಸಂಚಾರ ರಹಿತವಾಗಿ ಅತಿ ಪೀಡಿತವಾಗಿ ಹರಿಯನ್ನು ಮೊರೆಹೊಕ್ಕವು! ಎಲೈ ಭಗವಂತನೆ, ಚರಾಚರಾತ್ಮಕವಾದ ಸರ್ವಪ್ರಾಣಿ ಶರೀರಕ್ಕೆ ಈಪ್ರಕಾರವಾದ ವಾಯುನಿರೋಧವು ಯಾವಾಗಲೂ ನಾವು ಅರಿಯೆವು; ನಮ್ಮ ಈ ಕಷ್ಟವನ್ನು ಪರಿಹರಿಸು; ಶರಣ್ಯನಾದ ನಿನ್ನನ್ನು ನಾವು ಶರಣುಹೊಕ್ಕು ಇದ್ದೇವೆ—ಎಂಬ ದೇವತೆಗಳ ವಾಕ್ಯವನ್ನು ಕೇಳಿ ಭಗವಂತನು 'ಎಲೈ ದೇವತೆಗಳಿರಾ, ನೀವು ಅಂಜಬೇಡಿ; ನಿಮ್ಮ ಸ್ಥಾನಕ್ಕೆ ಹೋಗಿ; ಉತ್ತಾನಪಾದರಾಯನ ಪುತ್ರನಾದ ಧ್ರುವನು ನನ್ನಲ್ಲಿ ಐಕ್ಯಭಾವನೆಯಿಂದ ತಪಸ್ಸನ್ನುಗೈಯುತ್ತಾನೆ; ಅದರಿಂದ ಸರ್ವಲೋಕಗಳಿಗೂ ವಾಯುನಿರೋಧವುಂಟಾಗಿದೆ' ಎಂದು ಭಗವಂತನು ನುಡಿದನು—ಎಂದು ನಿರೂಪಿಸಿದನು"

೯ ನೇ ಅಧ್ಯಾಯ.

ಧ್ರುವನು ಶ್ರೀಹರಿಯನ್ನು ಸ್ತುತಿಸಿ ಆತನಿಂದ ವರಗಳನ್ನು ಪಡೆದು ತನ್ನ ಪುರಕ್ಕೆ ಬಂದದ್ದು.

"ಎಲೈ ವಿದುರನೆ, ದೇವತೆಗಳು ಈರೀತಿ ಹರಿವಾಕ್ಯದಿಂದ ಭಯವನ್ನು ಬಿಟ್ಟವರಾಗಿ ಭಗವಂತನಿಗೆ ನಮಸ್ಕರಿಸಿ ಸ್ವರ್ಗವನ್ನೈದಿದರು; ಅನಂತರದಲ್ಲಿ ಭಗವಂತನು ಗರುಡವಾಹನಾರೂಢನಾಗಿ ಭಕ್ತನಾದ ಧ್ರುವನನ್ನು ನೋಡಬೇಕೆಂಬ ಇಚ್ಛೆಯಿಂದ ಮಧುವನಕ್ಕೆ ಬಂದನು! ಆಗ ಧ್ರುವನು ಸಮಾಧಿದಾರ್ಢ್ಯದಿಂದ ನಿಶ್ಚಲವಾದ ಬುದ್ಧಿಯಿಂದ ಹೃದಯಕಮಲ ಕೋಶದಲ್ಲಿ ಮಿಂಚಿನಂತೆ ಹೊಳೆಯುತಲಿರುವ ಭಗವಂತನನ್ನು ಪುನಃ ತನ್ನ ಹೃದಯದಲ್ಲಿ ಕಾಣಲ್ಪಡದಿರುವದನ್ನು ನೋಡಿ ಕಣ್ಣು ತೆರದು ಹೊರಗೆ ಅದೇರೀತಿಯಲ್ಲಿ ಹೊಳೆಯುತ್ತಲಿರುವ ಆ ಭಗವಂತನನ್ನು ನೋಡಿ ಧ್ರುವನು ಆತನ ದರ್ಶನದಿಂದ ಭಯಪಡುವವನಾಗಿ ಭೂಮಿಯಲ್ಲಿ ತನ್ನ ಶರೀರವನ್ನು ನಮ್ರವನ್ನಾಗಿ ಮಾಡಿ ದಂಡಾಕಾರವಾಗಿ ನಮಸ್ಕರಿಸಿದನು! ನೇತ್ರಗಳಿಂದ ಪಾನಂಗೈವವನಂತೆಯೂ ಮುಖದಿಂದ ಚುಂಬನಂಗೈವವನಂತೆಯೂ ಭುಜಗಳಿಂದ ಆಲಿಂಗನಂಗೈವವನಂತೆಯೂ ನಮಸ್ಕರಿಸಿದನು! ಈ ಬಾಲಕನು ತನ್ನ ಹೃದಯದಲ್ಲಿಯೂ ಸರ್ವಭೂತ ಸಮುದಾಯ ಹೃದಯದಲ್ಲಿಯೂ ಇರುತ್ತಿರುವ ಸರ್ವಜ್ಞನಾದ ಭಗವಂತನನ್ನು ಸ್ತುತಿಸಲಿಚ್ಛೆಯುಳ್ಳವನಾದಾಗ್ಯೂ ಸ್ತುತಿಮಾಡುವ ಪ್ರಕಾರವನ್ನರಿಯದೆ ಸುಮ್ಮನೆ ಅಂಜಲಿಬಂಧಗೈದು ನಿಂತಿರುವ ಧ್ರುವನನ್ನು ತಿಳಿದು ಭಗವಂತನು ವೇದಸ್ವರೂಪವಾದ ತನ್ನ ಶಂಖದಿಂದ ಬಹು ದಯದಿಂದ ಆ ಬಾಲಕನನ್ನು ಕಪೋಲದಲ್ಲಿ ಸ್ಪರ್ಶಂಗೈದನು; ಉತ್ತರತ್ರ ಭೂಸಾಮ್ರಾಜ್ಯವನ್ನಾಳುವ ಆ ಧ್ರುವನು ಭಗವಂತನಿಂದ ಕೊಡಲ್ಪಟ್ಟ ವಾಕ್ಕನ್ನು ತಿಳಿದು ಜೀವೇಶ್ವರತ್ವವನ್ನು ತಿಳಿದವನಾಗಿ ಭಕ್ತಿಯುಕ್ತವಾದ ಚಿತ್ತವುಳ್ಳವನಾಗಿ ಸರ್ವತ್ರ ಪ್ರಖ್ಯಾತವಾಗಿ ಅಧಿಕವಾದ ಕೀರ್ತಿಯುಳ್ಳ ಆ ಭಗವಂತನನ್ನು ಸ್ಥಿರಚಿತ್ತದಿಂದ ಸ್ತುತಿಸಿದನು! ಚಕ್ಷುರಾದಿ ಸರ್ವೇಂದ್ರಿಯಗಳ ಜ್ಞಾನಕ್ರಿಯಾಶಕ್ತಿಗಳನ್ನು ಧರಿಸಿರುವ ಯಾವ ಪರಮಾತ್ಮನು ಅಂತಃಪ್ರವೇಶವನ್ನು ಮಾಡಿ ಲೀನವಾದ ನನ್ನ ಈ ವಾಕ್ಕನ್ನು ಅನ್ಯಗಳಾದ ಹಸ್ತ ಪಾದ ಶ್ರೋತ್ರ, ತ್ವಗಿಂದ್ರಿಯಗಳೇ ಮೊದಲಾಗುಳ್ಳ ಸರ್ವೇಂದ್ರಿಯಗಳನ್ನು ಪ್ರಾಣಗಳನ್ನು ಸಹ ತನ್ನ ಚಿಚ್ಛಕ್ತಿಯಿಂದ ಜೀವಿಸುವಂತೆ ಮಾಡುತ್ತಾನೆಯೋ ಅಂಥಾ ಭಗವಂತನಾಗಿ ಆದಿಪುರುಷನಾದ ನಿನಗೆ ನಮಸ್ಕಾರವು! ಎಲೈ ಭಗವಂತನೆ, ನೀನೊಬ್ಬನೇ ಅಧಿಕಗಳಾದ ಸತ್ವರಜಸ್ತಮೋಗುಣಗಳುಳ್ಳ ಮಾಯಾಖ್ಯವಾದ ಆತ್ಮಶಕ್ತಿಯಿಂದ ಮಹತ್ತತ್ವಾದಿ ಅಶೇಷಪ್ರಪಂಚವನ್ನು ಸೃಷ್ಟಿಸಿ ಆ ಪ್ರಪಂಚದಲ್ಲಿ ಪ್ರವೇಶಿಸಿ ಅಂತರ್ಯಾಮಿಯಾಗಿ ಅಸದ್ರೂಪಗಳಾದ ಇಂದ್ರಿಯಾದಿಗಳಲ್ಲಿ ಕಾಷ್ಠಗಳಲ್ಲಿ ಅಗ್ನಿಯಂತೆ ನಾನಾರೂಪನಾಗಿ ತೋರುತ್ತೀಯೆ! ಎಲೈ ನಾಥನಾದ ಸ್ವಾಮಿಯೇ, ನಿನ್ನಿಂದ ಕೊಡಲ್ಪಟ್ಟ ಜ್ಞಾನದಿಂದ ನಿನ್ನನ್ನೇ ಶರಣುಹೊಂದಿದ ಬ್ರಹ್ಮನು ಮಲಗಿದ್ದ ಪುರುಷನು ಎಚ್ಚತ್ತು ವಸ್ತುಗಳನ್ನು ಹ್ಯಾಗೆ ಕಾಣುವನೋ ಹಾಗೆ ಈ ಜಗತ್ತನ್ನು ಕಂಡನು! ಎಲೈ ದೀನಬಂಧುವಾದ

ಭಗವಂತನೆ, ಮುಕ್ತರಿಗೂ ಶರಣವಾದ ನಿನ್ನ ಪಾದಮೂಲವು ಕೃತಜ್ಞನಾದ ಪುರುಷನಿಂದ ಹ್ಯಾಗೆ ಮರೆಯಲ್ಪಡುತ್ತೆ! ಎಲೈ ಪುರುಷೋತ್ತಮನೆ, ಮೂಢರು ಜನನ ಮರಣರೂಪವಾದ ಸಂಸಾರಕ್ಲೇಶಪರಿಹಾರಕನಾದ ನಿನ್ನನ್ನು ಕಾಮಭೋಗೇಚ್ಛೆಯಿಂದ ಆರಾಧಿಸುತ ನಿನ್ನ ಮಾಯೆಯಿಂದ ವಂಚಿಸಲ್ಪಟ್ಟ ಚಿತ್ತವುಳ್ಳವರೇ ಸರಿ; ಮೋಕ್ಷಸಾಮ್ರಾಜ್ಯವನ್ನು ಕೊಡುವ ಕಲ್ಪವೃಕ್ಷರೂಪನಾದ ನಿನ್ನನ್ನಾರಾಧಿಸದೆ ನರಕದಲ್ಲಿ ಸಿದ್ಧವಾಗಿರುವ ಶವರೂಪವಾದ ದೇಹದಿಂದ ಅನುಭವಿಸುವದಕ್ಕೆ ಯೋಗ್ಯವಾದ ವಿಷಯಸುಖವನ್ನಪೇಕ್ಷಿಸುತ್ತಾರೆ! ಎಲೈ ಸ್ವಾಮಿಯೆ, ಪ್ರಾಣಿಗಳಿಗೆ ನಿನ್ನ ಪಾದಪದ್ಮಧ್ಯಾನದಿಂದಲೂ ನಿನ್ನ ಅವತಾರ ಕಥಾಶ್ರವಣದಿಂದಲೂ ಯಾವ ಸುಖವುಂಟಾಗುವದೋ ಆ ಸುಖವು ನಿಜಾನಂದರೂಪವಾದ ಪರಬ್ರಹ್ಮ ವಸ್ತುವಿನಲ್ಲಿಯೂ ಉಂಟಾಗಲಾರದು; ಮೃತ್ಯುವಿನ ಖಡ್ಗರೂಪವಾದ ಕಾಲದಿಂದ ಭೇದಿಸಲ್ಪಟ್ಟ ವಿಮಾನದದೆಶೆಯಿಂದ ಬೀಳುತಲಿರುವ ದೇವತೆಗಳಿಗೆ ಅಂಥಾ ಸುಖವಿಲ್ಲವೆಂಬ ಅರ್ಥವು ಹೇಳತಕ್ಕದ್ದೇನು! ಎಲೈ ಅನಂತನೆ, ನಿನ್ನಲ್ಲಿ ಅವಿಚ್ಛಿನ್ನವಾದ ಭಕ್ತಿಯನ್ನು ಮಾಡುವ ನಿರ್ಮಲಾಂತಃಕರಣರಾದ ಮಹಾತ್ಮರ ಸಂಗತಿಯು ನನಿಗೆ ಉಂಟಾಗಲಿ; ನಿನ್ನ ಗುಣಕಥೆಗಳೆಂಬ ಅಮೃತವನ್ನು ಪಾನಂಗೈದು ಮತ್ತನಾದ ನಾನು ಭಯಂಕರವಾದ ಬಹು ದುಃಖಾಸ್ಪದವಾದ ಸಂಸಾರಸಮುದ್ರವನ್ನು ಅಂಥಾ ಸತ್ಸಂಗದಿಂದ ಶೀಘ್ರವಾಗಿ ದಾಟುತ್ತೇನೆ! ಎಲೈ ಈಶ್ವರನಾದ ಪದ್ಮನಾಭನೆ, ಯಾವ ಪುರುಷರು ನಿನ್ನ ಪಾದಾರವಿಂದ ಸೌರಭ್ಯದಲ್ಲಿ ಆಸಕ್ತವಾದ ಹೃದಯವುಳ್ಳ ಪರಮಭಾಗವತರಲ್ಲಿ ಸಹವಾಸವನ್ನು ಮಾಡುತ್ತಾರೆಯೋ ಆ ಪುರುಷರು ಅತ್ಯಂತ ಪ್ರೀತಿಪಾತ್ರವಾದಾಗ್ಯೂ ಮರಣಧರ್ಮವುಳ್ಳ ಈ ದೇಹವನ್ನನುಸರಿಸಿರುವ ಪುತ್ರ, ಮಿತ್ರ, ಕಳತ್ರ, ಗೃಹಾದಿಗಳನ್ನು ಸ್ಮರಿಸುವದಿಲ್ಲ! ಎಲೈ ಪರಮೇಶ್ವರನೆ, ತಿರ್ಯಕ್ಪ್ರಾಣಿಗಳು ವೃಕ್ಷಗಳು ಪಕ್ಷಿಗಳು ಸರ್ಪಗಳು ದೇವತೆಗಳು ದೈತ್ಯರು ಮನುಷ್ಯರು ಮೊದಲಾದ ಚರಾಚರ ಭೂತಗಳಿಂದ ವ್ಯಾಪ್ತವಾಗಿ ಸದಸದ್ರೂಪಗಳಾದ ವಿಶೇಷಗಳುಳ್ಳ ಮಹದಹಂಕಾರಾದಿಜನ್ಯವಾದ ನಿನ್ನ ಈ ಸ್ಥೂಲರೂಪವನ್ನು ಮಾತ್ರವೇ ನಾನು ಬಲ್ಲೆನು; ಮನೋವಾಕ್ಕುಗಳಿಗೆ ಅಗೋಚರವಾದ ನಿನ್ನ ಅಖಂಡವಾದ ಬ್ರಹ್ಮಸ್ವರೂಪವನ್ನು ನಾನರಿಯೆನು; ಅದರಿಂದ ನನಿಗೆ ದೇಹಾಭಿಮಾನವು ತಪ್ಪಲಿಲ್ಲ; ಕಲ್ಪಾಂತದಲ್ಲಿ ಅಂತರ್ದೃಷ್ಟಿಯುಳ್ಳವನಾಗಿ ಯಾವ ಪುರುಷನು ಈ ಸಮಸ್ತ ಪ್ರಪಂಚವನ್ನು ತನ್ನ ಜಠರದಲ್ಲಿ ಉಪಸಂಹರಿಸಿಕೊಂಡು ಶೇಷಶಯನನಾಗಿರುತ್ತಾನೆಯೋ-ಯಾವ ಪರಮಪುರುಷನ ನಾಭಿಯಲ್ಲಿರುವ ಲೋಕತ್ರಯವೆಂಬ ಸುವರ್ಣಪದ್ಮದ ಮಧ್ಯದಲ್ಲಿ ಪ್ರಕಾಶಮಾನನಾಗಿ ಚತುರ್ಮುಖನಿರುವನೋ ಅಂಥಾ ಭಗವಂತನನ್ನು ನಮಸ್ಕರಿಸುವೆನು! ಎಲೈ ಭಗವಂತನೇ, ನೀನು ಯಾವಕಾರಣದಿಂದ ಬುದ್ಧಿಯ ಅವಸ್ಥಾಭೇದವನ್ನು ಚಿಚ್ಛಕ್ತಿಯಿಂದ ನೋಡುವನಾಗಿ ಯಜ್ಞಾಧಿಷ್ಠಾತೃವಾಗಿ ಜಗತ್ಪಾಲನಂಗೈಯುತ್ತ ವಿಲಕ್ಷಣನಾಗಿದ್ದೀಯೋ ಅದುಕಾರಣ ನೀನು ನಿತ್ಯಮುಕ್ತನು; ಪರಿಶುದ್ಧನು; ಸರ್ವಜ್ಞನು; ಅಂತರಾತ್ಮನು; ಆದಿಪುರುಷನು; ಭಗವಂತನು; ಗುಣತ್ರಯ ನಿಯಾಮಕನು; ಜ್ಞಾನಾದಿಗಳಾದ ನಾನಾಶಕ್ತಿಗಳು ಪರಿಶುದ್ಧವಾದ ಗತಿಯುಳ್ಳವಾಗಿ ಯಾವ ಪರಮಾತ್ಮನಲ್ಲಿ ಕ್ರಮವಾಗಿ ಆಕಸ್ಮಿಕವಾಗಿ ಹುಟ್ಟುತಲಿವೆಯೋ, ಜಗತ್ತಿಗೆ ಉತ್ಪತ್ತಿಸ್ಥಾನನಾಗಿ ಅನಂತರೂಪನಾಗಿ ಆದಿಪುರುಷನಾಗಿ ಆನಂದಮಾತ್ರಸ್ವರೂಪನಾಗಿ ಪರವಿಕಾರರಹಿತನಾಗಿ ಅದ್ವಿತೀಯನಾಗಿರುವ ಆ ಪರಬ್ರಹ್ಮನನ್ನು ನಾನು ಶರಣುಹೊಂದುವೆನು! ಎಲೈ ಭಗವಂತನೆ, ಮಪುರುಷಾರ್ಥವಾದ ನಿತ್ಯಾನಂದವೇ ಶರೀರವಾಗುಳ್ಳ ನಿನ್ನ ಪಾದಪದ್ಮವು ರಾಜ್ಯಲಕ್ಷ್ಮಿ ಮೊದಲಾದ ಕಾಮ್ಯಫಲಕ್ಕಿಂತಲೂ ಸತ್ಯವಾದ ಪರಮಫಲವೆಂದು ನಿಷ್ಕಾಮದಿಂದ ಭಜಿಸುವ ಪುರುಷನಿಗೆ ಕೃತಾರ್ಥತ್ವವು ಸಿದ್ಧವು; ಆದಾಗ್ಯೂ ಕಾಮ್ಯಫಲಾಪೇಕ್ಷಿಗಳಾದ ನಮ್ಮಂಥಾ ದೀನರನ್ನು ಗೋವು ತನ್ನ ಕರುವಿಗೆ ದುಷ್ಟಮೃಗಗಳ ಭಯವ ತಪ್ಪಿಸಿ ತನ್ನ ಕ್ಷೀರವನ್ನು ಪಾನಂಗೈಸಿ ರಕ್ಷಿಸುವಂತೆ ವಿಪತ್ತುಗಳನ್ನು ಪರಿಹರಿಸಿ ರಕ್ಷಿಸುತ್ತೀಯೆ' ಎಂದು ಸ್ತುತಿಸಿದನು.

"ಎಲೈ ವಿದುರನೆ, ಈರೀತಿಯಲ್ಲಿ ಸತ್ಯಸಂಕಲ್ಪನಾಗಿ ಬುದ್ಧಿಶಾಲಿಯಾದ ಧ್ರುವನಿಂದ ಸ್ತುತಿಗೈಯಲ್ಪಟ್ಟ ಭಕ್ತವತ್ಸಲನಾದ ಭಗವಂತನು ಬಾಲಕನನ್ನು ಶ್ಲಾಘಿಸಿ ನುಡಿಯುತ 'ಎಲೈ ರಾಜಕುಮಾರನೇ, ನಿನ್ನ ಮನೋಗತಾರ್ಥವನ್ನು ನಾನು ಬಲ್ಲೆನು! ಎಲೈ ಸುವ್ರತನೇ, ಅನ್ಯರಿಂದ ಪಡೆಯಲಶಕ್ಯವಾದ ವರವನ್ನು ನಿನಗೆ ಕೊಡುತ್ತೇನೆ!

ಎಲೈ ಮಂಗಳರೂಪನೆ, ಅನ್ಯರಿಂದ ಪೂರ್ವದಲ್ಲಿ ಪಡೆಯಲ್ಪಡದಿರುವ ಪ್ರಕಾಶಮಾನವಾದ ಶಾಶ್ವತಸ್ಥಾನವನ್ನು ಕೊಡುತ್ತೇನೆ; ಯಾವ ಸ್ಥಾನದಲ್ಲಿ ಗ್ರಹಗಳು ಅಶ್ವಿನ್ಯಾದಿ ನಕ್ಷತ್ರಗಳು ತಾರೆಗಳು ಇವುಗಳ ಚಕ್ರವು ಪ್ರತಿಷ್ಠಿತವಾಗಿರುವದೋ ಆ ಸ್ಥಾನವನ್ನು ಕೊಡುತ್ತೇನೆ; ಮೇಡಿಸ್ತಂಭದಲ್ಲಿ ಕಟ್ಟಲ್ಪಟ್ಟ ಎತ್ತುಗಳು ಹ್ಯಾಗೆ ಸುತ್ತುವವೋ ಆ ರೀತಿಯಿಂದ ಧರ್ಮನು ಅಗ್ನಿಯು ಕಶ್ಯಪನು ಇಂದ್ರನು ಸಪ್ತರ್ಷಿಗಳು ನಕ್ಷತ್ರಸಹಿತರಾಗಿ ಯಾವ ಸ್ಥಾನವನ್ನು ಪ್ರದಕ್ಷಿಣೀಕರಿಸುವರೋ ಅಂಥಾ ಲೋಕತ್ರಯಕ್ಕೂ ಉಪರಿಭಾಗದಲ್ಲಿರುವ ಕಲ್ಪಾಂತದಲ್ಲಿಯೂ ನಾಶವನ್ನೈದದೇ ಇರುವ ಸ್ಥಾನವನ್ನು ನಿನಗೆ ಕೊಡುತ್ತೇನೆ! ಎಲೈ ಬಾಲಕನೆ, ನಿನ್ನ ತಂದೆಯು ನಿನಗೆ ರಾಜ್ಯವನ್ನು ಕೊಟ್ಟು ವನವನ್ನು ಕುರಿತು ಹೋದಮೇಲೆ ನೀನು ಧರ್ಮರಕ್ಷಕನಾಗಿ ಅವ್ಯಾಹತೇಂದ್ರಿಯನಾಗಿ ಇಪ್ಪತ್ತಾರು ಸಹಸ್ರ ಸಂವತ್ಸರಗಳ ಪರ್ಯಂತವು ರಾಜ್ಯಾಧಿಪತ್ಯವನ್ನು ಮಾಡುತ್ತೀಯೆ; ನಿನ್ನ ಭ್ರಾತೃವಾದ ಉತ್ತಮನು ಬೇಟೆಯಲ್ಲಿ ಮೃತನಾಗಲು ಅವನ ಮಾತೃವಾದ ಸುರುಚಿಯು ಆ ಪುತ್ರನನ್ನು ಹುಡುಕಿಕೊಂಡು ಅರಣ್ಯವನ್ನೈದಿ ಕಾಡುಗಿಚ್ಚಿನಲ್ಲಿ ಪ್ರವೇಶಿಸಿ ಮೃತಳಾಗುತ್ತಾಳೆ; ಅಧಿಕವಾದ ದಕ್ಷಿಣೆಯುಳ್ಳ ಕ್ರತುಗಳಿಂದ ಯಜ್ಞಮೂರ್ತಿಯಾದ ನನ್ನನ್ನು ಆರಾಧಿಸಿ ಈ ಲೋಕದಲ್ಲಿ ಸರ್ವಭೋಗಗಳನ್ನನುಭವಿಸಿ ನನ್ನನ್ನು ಸ್ಮರಿಸುತ್ತೀಯೆ; ಅನಂತರದಲ್ಲಿ ಯಾವ ಸ್ಥಾನವನ್ನೈದಿದ ಯೋಗಿಯು ಪುನಶ್ಚ ಹಿಂದಿರಿಗಿ ಬರುವದಿಲ್ಲವೋ ಅಂಥಾ ಸರ್ವಲೋಕನಮಸ್ಕೃತವಾದ ಸಪ್ತಋಷಿಮಂಡಲಕ್ಕಿಂತಲೂ ಉನ್ನತವಾದ ನನ್ನ ಸ್ಥಾನವನ್ನೈದುವೆ' ಎಂದು ನುಡಿದನು.

"ಎಲೈ ವಿದುರನೆ, ಈಪ್ರಕಾರವಾಗಿ ಪೂಜ್ಯನಾದ ಭಗವಂತನು ವರಗಳನ್ನು ಕೊಟ್ಟು ಆ ಬಾಲಕನು ನೋಡುತ್ತಿರುವಾಗಲೇ ಗರುಡಾರೂಢನಾಗಿ ಸ್ವಲೋಕಕ್ಕೆ ತೆರಳಿಹೋದನು; ಆ ಧ್ರುವನು ಭಗವಂತನ ಪಾದಸೇವೆಯಿಂದ ಕೊಡಲ್ಪಟ್ಟ ಮನೋರಥವನ್ನೈದಿ ಅತ್ಯಂತ ಸಂತೋಷವನ್ನೈದದೇ ವ್ಯಸನಯುಕ್ತನಾಗಿ ತನ್ನ ಪಟ್ಟಣವನ್ನು ಕುರಿತು ಬಂದನು—ಎಂಬ ಮೈತ್ರೇಯನ ವಾಕ್ಯವನ್ನು ಕೇಳಿ ವಿದುರನು 'ಎಲೈ ಮೈತ್ರೇಯಋಷಿಯೆ, ಸಕಾಮನಿಗೆ ದುರ್ಲಭವಾದ ಶ್ರೀಹರಿಯ ಉತ್ಕೃಷ್ಟಸ್ಥಾನವನ್ನು ಭಗವಂತನ ಪಾದಸೇವೆಯಿಂದ ಒಂದು ಜನ್ಮದಿಂದಲೇ ಸಂಪಾದಿಸಿಯೂ ಕೂಡ ಕೃತಾರ್ಥನಲ್ಲದವನಂತೆ ತನ್ನನ್ನೇನುಕಾರಣ ತಿಳಿದುಕೊಂಡನು?' ಎಂದು ಕೇಳಿದನು.

ಆ ವಾಕ್ಯವನ್ನು ಕೇಳಿ ಮೈತ್ರೇಯಋಷಿಯು "ಎಲೈ ವಿದುರನೆ, ಸಪತ್ನೀಮಾತೃವಿನ ವಾಕ್ಯಗಳೆಂಬ ಬಾಣಗಳಿಂದ ಹೃದಯದಲ್ಲಿ ಪೆಟ್ಟುಬಿದ್ದವನಾಗಿ ಧ್ರುವನು ಆ ಮಾತುಗಳನ್ನೇ ಸ್ಮರಿಸಿಕೊಳ್ಳುತ್ತಾ ಮುಕ್ತಿಪತಿಯಾದ ಭಗವಂತನೆಡೆಯಿಂದ ಮುಕ್ತಿಯನ್ನಪೇಕ್ಷಿಸದೆ ಬಂದದ್ದಕ್ಕಾಗಿ ಪಶ್ಚಾತ್ತಪ್ತನಾಗಿ ಊರ್ಧ್ವರೇತಸ್ಕರಾದ ಸನಂದನಾದಿ ಯೋಗಿಗಳೂ ಕೂಡ ಅನೇಕ ಜನ್ಮಗಳಿಂದ ಮಾಡಲ್ಪಟ್ಟ ಸಮಾಧಿಯಿಂದ ಯಾವ ಭಗವಂತನ ಪದವನ್ನು ಕಾಣರೋ ಅಂಥಾ ಭಗವಂತನ ಪಾದಚ್ಛಾಯೆಯನ್ನು ಆರುಮಾಸಾದಿಗಳಲ್ಲೈದಿಯೂ ಕೂಡ ಭೇದಬುದ್ಧಿಯುಳ್ಳ ನಾನು ಮುಕ್ತಿಯನ್ನಪೇಕ್ಷಿಸದೆ ಬಂದೆನು; ನಿರ್ಭಾಗ್ಯನಾದ ನನ್ನ ದೌರಾತ್ಮ್ಯವು ಆಶ್ಚರ್ಯವಾಗಿದೆ; ಸಂಸಾರಪರಿಹಾರಕನಾದ ಭಗವಂತನ ಪಾದಮೂಲವನ್ನೈದಿಯೂ ನಾನು ಅಶಾಶ್ವತವಾದ ತುಚ್ಛಫಲವನ್ನು ಯಾಚಿಸಿದೆನು; ದುಷ್ಟಸ್ವಭಾವವುಳ್ಳ ನಾನು ನಾರದಋಷಿಯ ವಾಕ್ಕನ್ನು ಸತ್ಯವನ್ನಾಗಿ ತಿಳಿಯದೆ ಹೋದೆನು; ದೇವತೆಗಳಿಂದ ತಮಗೆ ಸ್ವಸ್ಥಾನಚ್ಯುತಿಯಾದೀತೆಂದು ಶಂಕಿಸಿ ನನ್ನ ಬುದ್ಧಿಯು ದೂಷಿತವಾಗಿ ಮಾಡಲ್ಪಟ್ಟಿತು; ದೇವಮಾಯೆಯಿಂದ ಬದ್ಧನಾಗಿ ಸುಪ್ತನಾದ ಪುರುಷನು ಸ್ವಪ್ನವನ್ನು ಕಾಣುವಂತೆ ಭೇದದೃಷ್ಟಿಯುಳ್ಳವನಾಗಿ ದ್ವಿತೀಯವಸ್ತುವಿಲ್ಲದಿದ್ದಾಗ್ಯೂ ಭ್ರಾತೃವನ್ನು ಶತ್ರುವನ್ನಾಗಿ ಭಾವಿಸಿ ಅದರಿಂದ ಹುಟ್ಟಿದ ಹೃದಯರೋಗದಿಂದ ತಪ್ತನಾಗಿ ಭ್ರಷ್ಟನಾದೆನು; ಬಹುಪ್ರಯಾಸದಿಂದಲೂ ಪ್ರಸನ್ನನಾಗದಿರುವ ಭಗವಂತನನ್ನು ತಪಸ್ಸಿನಿಂದ ಪ್ರಸನ್ನನಾಗಿ ಮಾಡಿಕೊಂಡೂ ನನ್ನಿಂದ ಪ್ರಾರ್ಥಿತವಾದ ಮನೋರಥವು ಆಯುಸ್ಸು ಇಲ್ಲದ ಪುರುಷನಿಗೆ ಚಿಕಿತ್ಸೆಯು ವ್ಯರ್ಥವಾಗುವಂತೆ ವ್ಯರ್ಥವಾಯಿತು; ನಿರ್ಭಾಗ್ಯನಾದ ಪುರುಷನು ಚಕ್ರವರ್ತಿಯಾದ ಮಹಾಪ್ರಭುವನ್ನು ಕುರಿತು ತೌಡು ಹೊಟ್ಟುಗಳನ್ನು ಯಾಚಿಸುವಹಾಗೆ ನಾನು ಮೋಕ್ಷಸಾಮ್ರಾಜ್ಯಪ್ರದನಾದ ಭಗವಂತನೆಡೆಯಿಂದ ಮೂಢಭಾವದಿಂದ ಬಹುಮಾನವನ್ನು ಯಾಚಿಸಿದೆ

ನು-ಎಂದು ಚಿಂತಿಸಿದನು! ಎಲೈ ವಿದುರನೆ, ಮುಕುಂದನ ಪಾದಾರವಿಂದಗಳ ಧೂಳಿಯನ್ನೈದಿರುವ ನಿನ್ನಂಥಾ ಪ್ರಾಜ್ಞರಾದ ಜನರು ಆ ಭಗವಂತನ ದಾಸಭಾವವನ್ನು ಹೊರತು ಮತ್ತೊಂದನ್ನು ಅಪೇಕ್ಷಿಸುವದಿಲ್ಲ; ಯದೃಚ್ಛೆಯಿಂದ ಲಬ್ಧವಾದ ವಸ್ತುವಿನಿಂದ ಮನಸ್ಸಂತೋಷವುಳ್ಳವರಾಗಿ ಭಗವತ್ಸೇವೆಯನ್ನೇ ಮಾಡುವರು!

" ಈಪ್ರಕಾರದಲ್ಲಿ ಉತ್ತಾನಪಾದರಾಯನು ವರಗಳನ್ನು ಪಡದು ಊರಿಗೆ ಬರುತ್ತಿರುವ ತನ್ನ ಮಗನಾದ ಧ್ರುವನ ವಾರ್ತೆಯನ್ನು ಚಾರರ ಮುಖದಿಂದ ಕೇಳಿ ಮೃತನಾದವನು ಬರುತ್ತಾನೆಂದರೆ ಆ ಮಾತಿನಲ್ಲಿ ಹ್ಯಾಗೆ ನಂಬಿಕೆಯಿಲ್ಲವೋ ಹಾಗೆ ನಿರ್ಭಾಗ್ಯನಾದ ನನಿಗೆ ಅಂಥಾ ಪುಣ್ಯವು ಹ್ಯಾಗೆ ಬಂದೀತೆಂದು ಚಾರನ ಮಾತಿನಲ್ಲಿ ನಂಬಿಕೆಯನ್ನಿಡದೆ ನಾರದನ ವಾಕ್ಯವನ್ನು ವಿಶ್ವಾಸದಿಂದ ಗ್ರಹಿಸಿ ನಂಬಿಕೆಯುಳ್ಳವನಾಗಿ ಈ ಸಮಾಚಾರವನ್ನು ಹೇಳಿದ ಚಾರನಿಗೆ ಸಂತೋಷದಿಂದ ಮುಕ್ತಾಹಾರವನ್ನಿತ್ತು ಸುವರ್ಣದಿಂದ ಅಲಂಕೃತವಾದ ಉತ್ತಮಾಶ್ವಗಳುಳ್ಳ ರಥವನ್ನಾರೂಢನಾಗಿ ಬ್ರಾಹ್ಮಣರಿಂದಲೂ ಕುಲವೃದ್ಧರಿಂದಲೂ ಮಾತ್ಯ ಬಂಧುಗಳಿಂದಲೂ ಪರಿವೃತನಾಗಿ ಶಂಖ ಭೇರಿಗಳ ನಾದದಿಂದಲೂ ವೇದಘೋಷಗಳಿಂದಲೂ ವೀಣಾವೇಣುಗಳ ಧ್ವನಿಯಿಂದಲೂ ಸಹಿತನಾಗಿ ಪುತ್ರನನ್ನು ನೋಡಲಿಚ್ಛೆಯುಳ್ಳವನಾಗಿ ಪುರದಿಂದ ಎದುರಾಗಿ ತೆರಳಿಹೋದನು; ಅರಸನ ಪಟ್ಟದ ಸ್ತ್ರೀಯರಾದ ಸುನೀತಿ ಸುರುಚಿಗಳೀರ್ವರೂ ಬಂದೇ ಪಾಲಕಿಯಲ್ಲಿ ಕುಳಿತುಕೊಂಡು ಉತ್ತಮನನ್ನು ಮಧ್ಯೆ ಕುಳ್ಳರಿಸಿಕೊಂಡು ಎದುರಾಗಿ ಹೋದರು; ಆಗ ಪುರದ ಉದ್ಯಾನದ ಸಮೀಪದಲ್ಲಿ ಬರುತಲಿರುವ ಬಾಲಕನಾದ ಧ್ರುವನನ್ನು ನೋಡಿ ಅರಸು ಪ್ರೇಮವಿಹ್ವಲನಾಗಿ ಶೀಘ್ರವಾಗಿ ರಥದಿಂದಿಳಿದು ಸಮೀಪಕ್ಕೆ ಹೋಗಿ ಬಹುದೀರ್ಘವಾದ ಪ್ರೀತಿಯುಳ್ಳವನಾಗಿ ನಿಟ್ಟುಸುರನ್ನು ಬಿಡುತ ಭಗವಂತನ ಪಾದಸ್ಪರ್ಶದಿಂದ ಪರಿಸ್ಪೃತ ಸಮಸ್ತ ಪಾಪಬಂಧನವುಳ್ಳ ಪುತ್ರನಾದ ಧ್ರುವನನ್ನು ಬಾಹುಗಳಿಂದ ಬಾಚಿ ತಬ್ಬಿಕೊಂಡು ಪುತ್ರದರ್ಶನವೆಂಬ ಮನೋರಥವನ್ನೈದಿದವನಾಗಿ ಬಾಲಕನ ಶಿರಸ್ಸನ್ನು ಬಾರಿಬಾರಿಗೂ ಆಘ್ರಾಣಿಸೈದನನಾಗಿ ಆನಂದಬಾಷ್ಪಗಳಿಂದ ಬಾಲಕನನ್ನು ನೆನೆಯಿಸಿದನು; ಆ ಬಾಲಕನು ತಂದೆಯ ಪಾದಗಳಿಗೆ ಶಿರಸ್ಸಿನಿಂದ ನಮಸ್ಕರಿಸಿ ತಂದೆಯಿಂದ ಆಶೀರ್ವಾದವನ್ನು ಮಾಡಿಸಿಕೊಂಡು ಬಹುಮಾನಿತನಾಗಿ ತಾಯಿಗಳಿಗೆ ಶಿರಸಾ ನಮಸ್ಕರಿಸಿದನು; ಮೈತ್ರ್ಯಾದಿಗುಣಗಳಿಂದ ಭಗವಂತನಾದ ಹರಿಯು ಯಾವ ಧ್ರುವನಿಗೆ ಪ್ರಸನ್ನನಾದನೋ ಅಂಥಾ ಮಹಾತ್ಮನಾದ ಧ್ರುವನಲ್ಲಿ ಸರ್ವಪ್ರಾಣಿಗಳೂ ಉದಕಗಳು ಹಳ್ಳವಾದ ಪ್ರದೇಶದಲ್ಲಿ ಹ್ಯಾಗೆ ನಮ್ರಗಳಾಗುವವೋ ಹಾಗೆ ನಮ್ರರಾಗುವರು; ಉತ್ತಮನು ಧ್ರುವನು ಈ ಈರ್ವರೂ ಪರಸ್ಪರ ಪ್ರೇಮಪರವಶರಾಗಿ ಆಲಿಂಗನವನ್ನು ಮಾಡಿಕೊಂಡು ರೋಮಾಂಚಿತರಾಗಿ ನೇತ್ರೋದಕಗಳನ್ನು ಬಿಟ್ಟರು; ಸುನೀತಿದೇವಿಯು ಪ್ರಾಣಗಳಿಗಿಂತಲೂ ಪ್ರೀತಿಪಾತ್ರನಾದ ಪುತ್ರನನ್ನು ಬಾಚಿ ತಬ್ಬಿಕೊಂಡವಳಾಗಿ ಮಗನ ಅಂಗಸ್ಪರ್ಶದಿಂದ ಸುಖಿತಳಾಗಿ ಮನೋವ್ಯಥೆಯನ್ನು ಬಿಟ್ಟಳು! ಎಲೈ ವೀರನಾದ ವಿದುರನೆ, ನೇತ್ರಗಳಿಂದ ಸ್ರವಿಸುತಲಿರುವ ಆನಂದಬಾಷ್ಪಗಳಿಂದ ನೆನಯಿಸಲ್ಪಟ್ಟ ಸುನೀತಿದೇವಿಯ ಸ್ತನಗಳಿಂದ ಕ್ಷೀರವು ಸ್ರವಿಸಿತು; ಆ ಪುರದ ಜನರು ಬಹುಕಾಲದಿಂದ ದೇಶಾಂತರಕ್ಕೆ ಹೋಗಿದ್ದ ನಿನ್ನ ಪುತ್ರನು ಬಂದು ನಿನ್ನ ವ್ಯಸನವನ್ನು ಪರಿಹರಿಸಿದನು; ಇದು ಬಹು ಶುಭವು; ಚಕ್ರವರ್ತಿಯಾದ ನಿನ್ನ ಮಗನು ರಾಜ್ಯವನ್ನಾಳುತ್ತಾನೆಂದು ಸುನೀತಿಯನ್ನು ಪ್ರಶಂಸೆಮಾಡಿದರು! ಎಲೈ ಸುನೀತಿದೇವಿಯೆ, ಆರ್ತಕ್ಲೇಶಪರಿಹಾರಕನಾದ ಭಗವಂತನು ನಿನ್ನಿಂದ ಚನ್ನಾಗಿ ಆರಾಧಿಸಲ್ಪಟ್ಟನು; ಯಾವ ಭಗವಂತನ ಅನುಗ್ರಹವನ್ನೈದಿದ ಪ್ರಾಜ್ಞರು ಮೃತ್ಯುವನ್ನು ಕೂಡಾ ಜಯಿಸುವರೋ ಅಂಥಾ ಭಗವಂತನನ್ನು ನಿನ್ನ ಮಗನು ಆರಾಧಿಸಿದನೆಂದು ಜನರಿಂದ ಶ್ಲಾಘಿಸಲ್ಪಡುತಲಿರುವ ಧ್ರುವನನ್ನೂ ಉತ್ತಮನನ್ನೂ ಉತ್ತಾನಪಾದರಾಯನು ಅಂಬಾರಿಯಲ್ಲಿ ಕುಳ್ಳರಿಸಿಕೊಂಡು ಜನರಿಂದ ಸ್ತುತಿಗೈಯಲ್ಪಡುತ ತನ್ನ ಪುರವನ್ನು ಪ್ರವೇಶಿಸಿದನು; ಆ ಪುರವು ಆಯಾ ಸ್ಥಳಗಳಲ್ಲಿ ಕಟ್ಟಲ್ಪಟ್ಟ ಮಕರತೋರಣಗಳಿಂದಲೂ ಕದಳೀಸ್ತಂಭಗಳಿಂದಲೂ ಅಡಿಕೇಮರಗಳಿಂದಲೂ ರಾಜಗೃಹದ್ವಾರಗಳಲ್ಲಿ ಎಲ್ಲಾಕಡೆಯಲ್ಲಿಯೂ ಮಾವಿನ ಚಿಗುರುಗಳಿಂದಲೂ ಶುಭ್ರವಸ್ತ್ರಗಳಿಂದಲೂ ಪುಷ್ಪಹಾರಗಳಿಂದಲೂ ಮುತ್ತಿನ ಕುಚ್ಚುಗಳಿಂದಲೂ ಉದಕುಂಭಗಳಿಂದಲೂ ದೀಪಗಳಿಂದಲೂ ಅಲಂಕೃತವಾಗಿರುವದು; ಸುವರ್ಣಭೂಷಿತಗಳಾದ ಪ್ರಾಕಾರಗಳಿಂದಲೂ ಪುರದ್ವಾರಗಳಿಂದಲೂ ವಿಮಾನಾಕಾರಗಳಾದ ಗೃಹಗಳಿಂದಲೂ ಎಲ್ಲಾಕಡೆಯಲ್ಲಿಯೂ

ಅಲಂಕೃತವಾಗಿರುವದು ; ರಾಜಬೀದಿಗಳು ಪಡಸಾಲೆಗಳು ಬಿಸಲುಮಾಳಿಗೆಗಳು ಅಂಗಳಗಳು ಇವುಗಳೆಲ್ಲವನ್ನು ಚನ್ನಾಗಿ ಗುಡಿಸಿ ಚಂದನೋದಕದಿಂದ ನೆನೆಯಿಸಿ ಆಯಾ ಸ್ಥಳಗಳಲ್ಲಿ ಲಾಜಗಳಿಂದಲೂ ತಂಡುಲಗಳಿಂದಲೂ ಬಲಿಗಳಿಂದಲೂ ಅಲಂಕೃತವಾಗಿರುವದು ! ಈರೀತಿಯಲ್ಲಿ ಅಲಂಕೃತವಾದ ಪುರದಲ್ಲಿ ಗಜಾರೂಢನಾಗಿ ಬರುವ ಧ್ರುವನ ಮೇಲೆ ಪುರಸ್ತ್ರೀಯರು ಅಲ್ಲಲ್ಲಿ ಗುಂಪಾಗಿ ನಿಂತು ಬಿಳೀಸಾಸುವೆಯನ್ನೂ ಅಕ್ಷತೆಗಳನ್ನೂ ದಧಿಖಂಡಗಳನ್ನೂ ಶುದ್ಧವಾದ ಉದಕವನ್ನೂ ದೂರ್ವೆಗಳನ್ನೂ ಪುಷ್ಪ ಫಲಗಳನ್ನೂ ಎರಚುತ ಆಶೀರ್ವಾದಗಳನ್ನು ಮಾಡುತ ನೋಡುತ್ತಿದ್ದರು ; ಈ ಧ್ರುವನು ಆ ಸ್ತ್ರೀಯರ ಮನೋಹರವಾದ ಗಾನವನ್ನು ಕೇಳುತ ಪುರವನ್ನು ಪ್ರವೇಶಿಸಿದನು ; ಮಹಾರತ್ನಖಚಿತವಾಗಿ ಉತ್ತಮವಾದ ರಾಜಗೃಹದಲ್ಲಿ ತಂದೆಯಿಂ ಪ್ರೇಮದಿಂದ ಲಾಲಿತನಾಗಿ ಧ್ರುವನು ಸ್ವರ್ಗದಲ್ಲಿ ದೇವಪುರುಷನಂತೆ ವಾಸಂಗೈದನು ; ಯಾವ ರಾಜಗೃಹದಲ್ಲಿ ಹಾಲಿನ ಕೆನೆಯಂತೆ ಶುಭ್ರವಾದ ಹಾಸಿಗೆಯು ಸುವರ್ಣಾಲಂಕೃತವಾಗಿ ಪ್ರಕಾಶಿಸುವದೊ—ಅನರ್ಘ್ಯಗಳಾದ ಸಿಂಹಾಸನಗಳೂ ಸುವರ್ಣಮಯಗಳಾದ ಸಾಮಗ್ರಿಗಳೂ ಮಹಾ ಮರಕತಮಯಗಳಾದ ಸ್ಫಟಿಕಕುಡ್ಯಗಳಲ್ಲಿ ಅನೇಕ ಸ್ತ್ರೀರತ್ನಗಳಿಂದ ಯುಕ್ತಗಳಾದ ರತ್ನಕಾಂತಿಗಳೂ ಪ್ರಕಾಶಿಸುವವೋ—ಧ್ವನಿಗೈವ ಪಕ್ಷಿಗಳ ಮಿಥುನಗಳುಳ್ಳ ಭ್ರಮರ ಝುಂಕಾರಯುಕ್ತಗಳಾಗಿ ಕಲ್ಪವೃಕ್ಷಗಳಿಂದ ರಮ್ಯವಾದ ಉದ್ಯಾನವನವೂ ಇರುವದೋ—ವೈಡೂರ್ಯ ರತ್ನಮಯಗಳಾದ ಸೋಪಾನಗಳುಳ್ಳವಾಗಿ ಪದ್ಮಗಳು ನೈದಿಲೆಗಳು ಬಿಳೀ ನೈದಿಲೆಗಳು ಉಳ್ಳವಾಗಿ ಹಂಸಗಳು ಕಾರಂಡವಗಳು ಚಕ್ರವಾಕಗಳು ಸಾರಸಪಕ್ಷಿಗಳು ಇವುಗಳಿಂದ ನಾದಿತಗಳಾದ ಸರೋವರಗಳೂ ಇರುವವೋ—ಅಂಥಾ ರಾಜಗೃಹದಲ್ಲಿರುವ ಆ ಪುತ್ರನ ಪ್ರಭಾವವನ್ನು ಕೇಳಿ ಪ್ರತ್ಯಕ್ಷವಾಗಿ ನೋಡಿ ರಾಜರ್ಷಿಯಾದ ಉತ್ತಾನಪಾದರಾಯನು ಪರಮಾಶ್ಚರ್ಯವನ್ನೈದಿದನು ; ಆ ಬಳಿಕ ಪ್ರಜೆಗಳಿಗೂ ತನಗೂ ಸಮ್ಮತನಾಗಿ ಯವ್ವನವಯಸ್ಸನ್ನೈದಿ ಪ್ರಜೆಗಳಿಗೆ ಅನುರಾಗಾಸ್ಪದನಾಗಿರುವ ಪುತ್ರನಾದ ಧ್ರುವನನ್ನು ರಾಜ್ಯಾಧಿಪತ್ಯದಲ್ಲಿ ಪಟ್ಟಾಭಿಷಿಕ್ತನನ್ನು ಮಾಡಿ ತನ್ನನ್ನು ವೃದ್ಧನನ್ನಾಗಿ ತಿಳಿದು ವಿರಕ್ತನಾಗಿ ತನ್ನ ಪರಗತಿಯನ್ನಾಲೋಚಿಸಿ ವನವನ್ನೈದಿದನು ” ಎಂದು ನುಡಿದನು.

೧೦ ನೇ ಅಧ್ಯಾಯ.

ಧ್ರುವನು ಭ್ರಾತೃವಾದ ಉತ್ತಮನನ್ನು ಸಂಹರಿಸಿದ ಯಕ್ಷರನ್ನು ಸಂಹರಿಸಿದ್ದು.

“ ಆ ಬಳಿಕ ಧ್ರುವರಾಯನು ಶಿಂಶುಮಾರಪ್ರಜೇಶನ ಪುತ್ರಿಯಾದ ಭ್ರಮಿದೇವಿಯನ್ನು ವಿವಾಹಮಾಡಿಕೊಂಡು ಆ ಪತ್ನಿಯಲ್ಲಿ ಕಲ್ಪನು ವತ್ಸರನು ಎಂಬ ಈರ್ವರು ಪುತ್ರರನ್ನು ಪಡೆದನು ; ಮಹಾ ಬಲಶಾಲಿಯಾದ ಧ್ರುವರಾಯನು ವಾಯುಪುತ್ರಿಯಾದ ಇಳಾದೇವಿಯಲ್ಲಿ ಉತ್ಕಲನೆಂಬ ಪುತ್ರನನ್ನೂ ಒಬ್ಬ ಕನ್ಯೆಯನ್ನೂ ಪಡೆದನು ; ಉತ್ತಮನು ವಿವಾಹಕ್ಕೆ ಪೂರ್ವದಲ್ಲೇ ಬೇಟೆಗೆ ಹೋಗಿ ಬಲಿಷ್ಠನಾದ ಯಕ್ಷನಿಂದ ಹಿಮವತ್ಪರ್ವತದಲ್ಲಿ ಸಂಹರಿಸಲ್ಪಟ್ಟನು ; ಅವನ ತಾಯಿಯಾದ ಸುರುಚಿಯು ಅವನನ್ನು ಹುಡಿಕಿಕೊಂಡುಹೋಗಿ ಕಾಡುಗಿಚ್ಚಿನಲ್ಲಿ ಮೃತಳಾದಳು ; ಧ್ರುವರಾಯನು ಭ್ರಾತೃವಾದ ಉತ್ತಮನ ವಧವನ್ನು ಕೇಳಿ ಕೋಪದಿಂದಲೂ ಶೋಕದಿಂದಲೂ ಪೀಡಿತಳಾಗಿ ಜಯಸಾಧನವಾದ ರಥವನ್ನಾರೂಢನಾಗಿ ಯಕ್ಷರಿಗೆ ಸ್ಥಾನವಾದ ಅಳಕಾಪುರವನ್ನು ಕುರಿತು ತೆರಳಿದನು ; ರುದ್ರಾನುಚರರಾದ ಪ್ರಮಥಗಣಗಳಿಂದ ಸೇವಿತವಾದ ಉತ್ತರದಿಕ್ಕಿಗೆ ಹೋಗಿ ಹಿಮವತ್ಪರ್ವತದ ದೊಣೆಯಲ್ಲಿ ಯಕ್ಷರಿಂದ ವ್ಯಾಪ್ತವಾದ ಅಳಕಾನಗರವನ್ನು ಕಂಡನು ; ಮಹಾಬಾಹುವಾದ ಧ್ರುವನು ಆಕಾಶವನ್ನೂ ದಿಕ್ಕುಗಳನ್ನೂ ವ್ಯಾಪಿಸುವಂತೆ ಶಂಖವನ್ನು ಧ್ವನಿಗೈದನು ; ಆ ಶಂಖಧ್ವನಿಯನ್ನು ಕೇಳಿ ಯಕ್ಷಸ್ತ್ರೀಯರು ವ್ಯಾಕುಲವಾದ ಚಿತ್ತವುಳ್ಳವರಾಗಿ ಭಯಪಟ್ಟರು ! ಎಲೈ ವಿದುರನೆ, ಅನಂತರದಲ್ಲಿ ಯಕ್ಷಭಟರು ಆ ಶಬ್ದವನ್ನು ಕೇಳಿ ಸಹಿಸಲಾರದೆ ಆಯುಧಧಾರಿಗಳಾಗಿ ಪುರದಿಂದ ಹೊರಟು ಎದುರಾಗಿಬಂದರು ; ಭಯಂಕರವಾದ ಧನುಸ್ಸುವುಳ್ಳ ಮಹಾ ರಥಿಕನಾಗಿ ವೀರನಾದ ಧ್ರುವನು ಎದುರಾಗಿ ಬರುತ್ತಿರುವ ಆ ಯಕ್ಷರನ್ನು ಒಬ್ಬೊಬ್ಬನನ್ನು ಮೂರು ಮೂರು ಬಾಣಗಳಿಂದ

ಎಲ್ಲರನ್ನು ಪ್ರಹರಿಸಿದನು; ಹಣೆಯಲ್ಲಿ ತಗಲಿ ನೆಟ್ಟುಕೊಂಡಿರುವ ಬಾಣಗಳಿಂದ ಅವರೆಲ್ಲರು ಪಿಟ್ಟುಬಿಟ್ಟವರಾಗಿ ಆ ಧ್ರುವನ ಕರಲಾಘವವನ್ನು ಶ್ಲಾಘಿಸಿದರು; ಆ ಯಕ್ಷರು ಕಾಲಿನಿಂದ ತುಳಿಯಲ್ಪಟ್ಟ ಸರ್ಪಗಳಂತೆ ರೋಷವುಳ್ಳವರಾಗಿ ಸಹಿ ಸಲಾರದೆ ತಾವು ಬದಲಾಗಿ ಹೊಡೆಯಬೇಕೆಂಬ ಇಚ್ಛೆಯುಳ್ಳವರಾಗಿ ಏಕಕಾಲದಲ್ಲಿ ಒಬ್ಬೊಬ್ಬರು ಆರಾರು ಬಾಣ ಗಳನ್ನು ಪ್ರಯೋಗಿಸಿ ಪ್ರಹರಿಸಿದರು; ಅನಂತರದಲ್ಲಿ ಪರಿಘಗಳಿಂದಲೂ ಶಕ್ತಿಗಳಿಂದಲೂ ದುರ್ಗ್ಣಿಗಳಿಂದಲೂ ಮು ಸುಂಡಿಗಳಿಂದಲೂ ವಿಚಿತ್ರಗಳಾದ ರೆಕ್ಕೆಗಳುಳ್ಳ ಬಾಣಗಳಿಂದಲೂ ಲಕ್ಷವು ಮೂವತ್ತುಸಾವಿರವಂದಿ ಯಕ್ಷರು ಕೋಪಿಷ್ಠರಾಗಿ ಪ್ರತೀಕಾರೇಚ್ಛೆಯಿಂದ ಸಾರಥಿಯಿಂದಲೂ ರಥದಿಂದಲೂ ಸಮೇತನಾದ ಆ ಧ್ರುವನನ್ನು ವರ್ಷಿಸಿ ದರು; ಉತ್ತಾನಪಾದರಾಯನ ಪುತ್ರನಾದ ಧ್ರುವನು ಆ ಯಕ್ಷರ ಬಾಣವೃಷ್ಟಿಗಳಿಂದ ಮರೆಮಾಡಲ್ಪಟ್ಟವನಾಗಿ ಮಹಾ ವರ್ಷಧಾರೆಗಳಿಂದ ಮರೆಮಾಡಲ್ಪಟ್ಟ ಪರ್ವತದಂತೆ ಕಾಣಲ್ಪಡಲಿಲ್ಲ; ಆಗ ಮನುವಂಶೋದ್ಭವನಾದ ಧ್ರುವ ನೆಂಬ ಸೂರ್ಯನು ಯಕ್ಷಸಮೂಹವೆಂಬ ಸಮುದ್ರದಲ್ಲಿ ಮುಳುಗಿದನೆಂದು ಅಂತರಿಕ್ಷದಲ್ಲಿ ನೋಡುತ್ತಿರುವ ಸಿದ್ಧರಿಗೆ ಹಾಹಾಕಾರವುಂಟಾಯಿತು; ಆಗ ಯಕ್ಷರು ನಾವು ಜಯಿಸಿದೆವೆಂದು ಅಟ್ಟಹಾಸಂಗೈಯುತಿರಲಾಗಿ ಹಿಮವನ್ನು ಪರಿ ಹರಿಸಿಕೊಂಡು ಸೂರ್ಯನು ಪ್ರಕಾಶಿಸುವಂತೆ ಯುದ್ಧದಲ್ಲಿ ಧ್ರುವನ ರಥವು ಪ್ರಕಾಶಿಸಿತು; ಆ ಧ್ರುವನು ಶತ್ರುಗಳಿಗೆ ದುಃಖವನ್ನುಂಟುಮಾಡುವವನಾಗಿ ಭಯಂಕರವಾದ ಧನುಸ್ಸನ್ನು ಟಂಕಾರಮಾಡುತ ಪ್ರಚಂಡವಾಯುವು ಮೇಘ ಸಮೂಹವನ್ನು ಓಡಿಸುವಹಾಗೆ ಆ ಯಕ್ಷರ ಶಸ್ತ್ರಾಸ್ತ್ರಸಮೂಹವನ್ನು ಚೂರ್ಣೀಕರಿಸಿದನು; ಧ್ರುವನ ಧನುಸ್ಸಿ ನಿಂದ ಹೊರಡುವ ಬಾಣಗಳು ಆ ಯಕ್ಷರ ಕವಚಗಳನ್ನು ಭೇದಿಸಿ ಸಿಡಿಲುಗಳು ಪರ್ವತಗಳನ್ನು ಭೇದಿಸುವಂತೆ ಅವರ ಶರೀರಗಳನ್ನು ಭೇದಿಸಿದವು; ಧ್ರುವರಾಯನ ಭಲ್ಲಾಯುಧಗಳಿಂದ ಭೇದಿಸಲ್ಪಟ್ಟ ಕುಂಡಲಯುಕ್ತಗಳಾದ ಶಿರ ಸ್ಸುಗಳು ತೊಡೆಗಳು ಸುವರ್ಣಸ್ತಂಭಗಳಂತಿರುವ ಕಡಗಗಳುಳ್ಳ ಬಾಹುಗಳು ಹಾರಗಳು ಭುಜಕೀರ್ತಿಗಳು ಕಿರೀ ಟಗಳು ಪಾಗುಗಳು ಇವುಗಳಿಂದ ಪರಿಹಲ್ಪಟ್ಟ ಆ ಯುದ್ಧಭೂಮಿಯು ಶೂರರಿಗೆ ಮನೋಹರವಾಗಿ ಪ್ರಕಾಶಿಸಿ ತು; ಹತರಾದವರು ಹೋಗಲಾಗಿ ಉಳಿದ ಯಕ್ಷರು ಧ್ರುವನ ಬಾಣಗಳಿಂದ ಛೇದಿಸಲ್ಪಟ್ಟ ಅಂಗಗಳುಳ್ಳವರಾಗಿ ಸಿಂಹ ಗಳಿಂದ ಪರಾಜಿತಗಳಾದ ಆನೆಗಳಂತೆ ಯುದ್ಧರಂಗದದೆಶೆಯಿಂದ ಪಲಾಯನಂಗೈದರು! ಅನಂತರದಲ್ಲಿ ಮಾನವೋತ್ತ ಮನಾದ ಧ್ರುವನು ಆ ಮಹಾಯುದ್ಧದಲ್ಲಿ ಶಸ್ತ್ರಪಾಣಿಯಾದ ಒಬ್ಬ ಮಹಾಪುರುಷನನ್ನು ಕಂಡು ಪುನಃ ಅವನನ್ನು ಕಾಣದೆ ಆ ಪುರವನ್ನು ನೋಡಲಿಚ್ಛೆಯುಳ್ಳವನಾದಾಗ್ಯೂ ಪ್ರವೇಶಿಸಲಿಲ್ಲ; ಮಾಯಾವಿಗಳಾದ ಈ ಯಕ್ಷರ ವ್ಯಾಪಾರ ವನ್ನು ಜನರು ಅರಿಯರೆಂದು ತನ್ನ ಸಾರಥಿಯನ್ನು ಕುರಿತು ಹೇಳುತ ವಿಚಿತ್ರವಾದ ರಥವುಳ್ಳ ಧ್ರುವನು ಶತ್ರುಗಳ ಮೇಲೆ ಸಾಹಸವನ್ನು ಮಾಡುವ ಯತ್ನವುಳ್ಳವನಾಗಿ ಸಮುದ್ರಧ್ವನಿಯಂತೆ ಮಹಾಶಬ್ದವನ್ನು ಕೇಳಿದನು; ಪ್ರಚಂ ಡವಾಯುವಿನಿಂದ ಮಹಾ ರಜೋಂಧಕಾರವು ಕಾಣಲ್ಪಟ್ಟಿತು; ಕ್ಷಣಮಾತ್ರದಲ್ಲಿ ಹೊಳೆಯುತಲಿರುವ ಮಿಂಚುಗ ಳುಳ್ಳ ಭಯಂಕರವಾದ ಘರ್ಜನೆಯುಳ್ಳ ಮೇಘಸಮೂಹದಿಂದ ಆಕಾಶವೆಲ್ಲವೂ ವ್ಯಾಪ್ತವಾಯಿತು; ರಕ್ತವು ಮೇಧ ಸ್ಸು ಕೀವು ಮೂತ್ರ ಪುರೀಷಗಳು ವರ್ಷಿಸಿದವು; ಧ್ರುವನ ಮುಂದುಗಡೆಯಲ್ಲಿ ಶಿರೋರಹಿತಗಳಾದ ಮುಂಡಗಳು ಬಿದ್ದವು; ಆಕಾಶದಲ್ಲಿ ಪರ್ವತವು ಕಾಣಲ್ಪಟ್ಟಿತು; ಗದೆಗಳು ಪರಿಘಗಳು ಖಡ್ಗಗಳು ಮುಸಲಗಳು ಶಿಲೆಗಳು ಆಕಾಶದಿಂದ ಬಿದ್ದವು; ಸಿಡಿಲುಗಳನ್ನೇ ಕಾರುತಲಿರುವ ಸರ್ಪಗಳು ನೇತ್ರಗಳಿಂದ ಅಗ್ನಿಯನ್ನು ಕಾರುತಲಿರುವ ವಾಗಿ ಬಂದವು; ಸಿಂಹಗಳು ವ್ಯಾಘ್ರಗಳು ದುಷ್ಟಮೃಗಗಳು ಕೊಬ್ಬಿದಂಥಾವಾಗಿ ಎದುರಾಗಿ ಅಟ್ಟಿಬಂದವು; ಭ ಯಂಕರವಾದ ಸಮುದ್ರವು ತರಂಗಗಳಿಂದ ಭೂಮಿಯನ್ನು ನೆನೆಯಿಸುತ ಪ್ರಳಯಕಾಲದಲ್ಲಿ ಬರುವಂತೆ ಭಯಂಕ ರವಾದ ಧ್ವನಿಯುಳ್ಳದ್ದಾಗಿ ಉಕ್ಕಿಬಂತು; ಆ ಯಕ್ಷರು ಅಧೈರ್ಯಶಾಲಿಗಳಿಗೆ ಭಯಂಕರವಾಗಿ ವಿಕಾರ್ಯಗಳಾದ ನಾನಾಕಪಟವಸ್ತುಗಳನ್ನು ಅಸುರಮಾಯೆಯಿಂದ ಸೃಷ್ಟಿಸಿದರು; ಯಕ್ಷರಿಂದ ಪ್ರಯೋಗಿಸಲ್ಪಟ್ಟ ಅತಿಕ್ರಮಿಸಲಶ ಕ್ಯವಾದ ಆ ಮಾಯೆಯನ್ನು ನೋಡಿ ಮುನಿಗಳು ಅಲ್ಲಿಗೆ ಬಂದು ಧ್ರುವರಾಯನಿಗೆ ಕ್ಷೇಮವನ್ನು ಪ್ರಾರ್ಥಿಸಿದರು! ಎಲೈ ಧ್ರುವರಾಯನೆ, ಯಾವ ಭಗವಂತನ ನಾಮಧೇಯವನ್ನು ಕೀರ್ತನಂಗೈದಾಗ್ಯೂ ಕೇಳಿದಾಗ್ಯೂ ಲೋಕವು

ಶೀಘ್ರವಾಗಿ ಮೃತ್ಯುವನ್ನು ದಾಟುವದೋ ಪ್ರಣತಾರ್ತಿಹರನಾಗಿ ಶಾರ್ಙ್ಗಧನುರ್ಧಾರಿಯಾಗಿ ಭಗವಂತನಾದ ಆ ಸ್ವಾಮಿಯು ನಿನ್ನ ಶತ್ರುಗಳನ್ನು ಸಂಹರಿಸಲಿ—ಎಂದು ಪ್ರಾರ್ಥಿಸಿದರು.”

೧೧ ನೇ ಅಧ್ಯಾಯ.

ಸ್ವಾಯಂಭುವಮನುವು ಧ್ರುವನಿಗೆ ತತ್ವೋಪದೇಶವನ್ನು ಮಾಡಿದ್ದು.

“ಈಪ್ರಕಾರವಾಗಿ ಪ್ರಾರ್ಥಿಸುತಲಿರುವ ಋಷಿಗಳ ವಾಕ್ಯವನ್ನು ಕೇಳಿ ಧ್ರುವನು ಆಚಮನಗೈದು ನಾರಾಯಣನಿಂದ ನಿರ್ಮಿತವಾದ ಅಸ್ತ್ರವನ್ನು ಧನುಸ್ಸಿನಲ್ಲಿ ಸಂಧಾನಗೈದನು! ಎಲೈ ವಿದುರನೆ, ನಾರಾಯಣಾಸ್ತ್ರವು ಸಂಧಾನಗೈಯಲ್ಪಡುತಲಿರಲಾಗಿ ಯಕ್ಷರಿಂದ ಕಲ್ಪಿತಗಳಾದ ಮಾಯೆಗಳು ತತ್ವಜ್ಞಾನೋದಯವಾದಮೇಲೆ ಕ್ಲೇಶಗಳು ನಷ್ಟಗಳಾಗುವಂತೆ ನಾಶವನ್ನೈದಿದವು; ಧ್ರುವನು ನಾರಾಯಣನಿಂದ ಹುಟ್ಟಿದ ಆ ಶಸ್ತ್ರವನ್ನು ಧನುಸ್ಸಿನಲ್ಲಿ ಸಂಧಾನಗೈಯುತಲಿರಲಾಗಿ ಸುವರ್ಣಮಯಗಳಾದ ಅಡಿಗಳುಳ್ಳ ಹಂಸಪಕ್ಷಿಗಳ ರೆಕ್ಕೆಗಳಂತೆ ರೆಕ್ಕೆಗಳುಳ್ಳ ಬಾಣಗಳು ಪರಂಪರೆಯಾಗಿ ಹೊರಡುವವಾಗಿ ಭಯಂಕರವಾದ ಶಬ್ದವುಳ್ಳ ನವಿಲುಗಳು ವನವನ್ನು ಪ್ರವೇಶಿಸುವಂತೆ ಶತೃಗಳ ಸೇನೆಯನ್ನು ಪ್ರವೇಶಿಸಿದವು; ಮಹಾಯುದ್ಧದಲ್ಲಿ ತೀಕ್ಷ್ಣಧಾರೆಗಳುಳ್ಳ ಆ ಬಾಣಗಳಿಂದ ಪ್ರಹರಿಸಲ್ಪಟ್ಟ ಯಕ್ಷರು ಕೋಪಿಷ್ಠರಾಗಿ ಆಯುಧಗಳನ್ನೆತ್ತಿಕೊಂಡು ಸರ್ಪಗಳು ಹೆಡೆಗಳನ್ನೆತ್ತಿಕೊಂಡು ಗರುಡನಮೇಲೆ ಬರುವಂತೆ ಧ್ರುವರಾಯನನ್ನು ಅಟ್ಟಿ ಎದುರಾಗಿ ಬಂದರು; ಧ್ರುವನು ಬರುತ್ತಿರುವ ಆ ಯಕ್ಷರನ್ನು ಯುದ್ಧದಲ್ಲಿ ಬಾಣಗಳಿಂದ ಛೇದಿಸಲ್ಪಟ್ಟ ಬಾಹುಗಳು ತೊಡೆಗಳು ಶಿರಸ್ಸುಗಳುಳ್ಳವರನ್ನಾಗಿ ಮಾಡಿ ಊರ್ಧ್ವರೇತಸ್ಕರಾದ ಯೋಗಿಗಳು ಸೂರ್ಯಮಂಡಲವನ್ನು ಭೇದಿಸಿಕೊಂಡು ಯಾವ ಲೋಕವನ್ನು ಕುರಿತು ಹೋಗುವರೋ ಆ ಲೋಕವನ್ನು ಕುರಿತೈದಿಸಿದನು; ವಿಚಿತ್ರವಾದ ರಥವುಳ್ಳ ಧ್ರುವರಾಯನಿಂದ ಸಂಹರಿಸಲ್ಪಡುತಲಿರುವ ನಿರಪರಾಧಿಗಳಾದ ಯಕ್ಷರನ್ನು ನೋಡಿ ಪಿತಾಮಹನಾದ ಸ್ವಾಯಂಭುವಮನುವು ಕೃಪೆಯಿಂದ ಋಷಿಗಳೊಡನೆ ಅಲ್ಲಿಗೆ ಬಂದು ಧ್ರುವನನ್ನು ಕುರಿತು ‘ಎಲೈ ಬಾಲಕನಾದ ಧ್ರುವನೆ, ಯಾವ ಕೋಪದಿಂದ ನೀನು ನಿರಪರಾಧಿಗಳಾದ ಯಕ್ಷರನ್ನು ಸಂಹರಿಸಿದೆಯೋ ನರಕಕ್ಕೆ ದ್ವಾರವಾದ ಪಾಪಸಂಪಾದಕವಾದ ಅಂಥಾ ರೋಷವನ್ನು ಬಿಡು; ನಿರಪರಾಧಿಗಳಾದ ಈ ಯಕ್ಷರ ಸಂಹಾರವು ನಿನ್ನಿಂದ ಮಾಡಲ್ಪಡುತ್ತೆ; ಈ ಕರ್ಮವು ಸತ್ಪುರುಷರಿಗೆ ನಿಂದಿತವಾದಕಾರಣ ನಮ್ಮ ಕುಲಕ್ಕೆ ಉಚಿತವಾದದ್ದಲ್ಲ! ಎಲೈ ಭ್ರಾತೃವತ್ಸಲನಾದ ಧ್ರುವನೇ, ಭ್ರಾತೃವಧದಿಂದ ತಪ್ತನಾದ ನಿನ್ನಿಂದ ಅಪರಾಧಿಯಾದ ಒಬ್ಬ ಯಕ್ಷನ ನಿಮಿತ್ತವಾಗಿ ಬಹುಮಂದಿ ಯಕ್ಷರು ನಿರಪರಾಧಿಗಳಾದಾಗ್ಯೂ ಸಂಹೃತರಾದರು; ದೇಹವನ್ನೇ ಆತ್ಮನಾಗಿ ತಿಳಿದಿರುವ ಪಶುಗಳಂತೆ ಪ್ರಾಣಿಗಳನ್ನು ಹಿಂಸೆಮಾಡುವದು ಭಗವಂತನನ್ನು ಅನುವರ್ತಿಸಿಕೊಂಡಿರುವ ಸಾಧುಗಳ ಮಾರ್ಗವಲ್ಲ! ಎಲೈ ಬಾಲಕನೆ, ನೀನು ಬಾಲ್ಯದಲ್ಲೇ ಸಮಸ್ತ ಜಗತ್ತಿಗೂ ಅಧಿಷ್ಠಾನನಾಗಿ ಆರಾಧಿಸಲಶಕ್ಯನಾದ ಶ್ರೀಹರಿಯನ್ನು ಸರ್ವಭೂತಾತ್ಮಭಾವದಿಂದ ಆರಾಧಿಸಿ ಉತ್ಕೃಷ್ಟವಾದ ಭಗವಂತನಾದ ಶ್ರೀಹರಿಯ ಸ್ಥಾನವನ್ನೈದಿದೆ; ಅಂಥಾ ಶ್ರೀಹರಿಯ ಚಿತ್ತದಲ್ಲಿ ಗ್ರಹಿಸಲ್ಪಟ್ಟವನಾಗಿ ಹರಿದಾಸರಿಗೆ ಸಮ್ಮತನಾಗಿ ಸತ್ಪುರುಷರ ವ್ರತವನ್ನನುಸರಿಸಿದ ನೀನು ನಿಂದಿತವಾದ ಈ ವ್ಯಾಪಾರವನ್ನು ಹ್ಯಾಗೆ ಮಾಡಿದೆ; ಮಹಾತ್ಮರಲ್ಲಿ ಕ್ಷಮೆಯಿಂದಲೂ ಅಧಮರಲ್ಲಿ ಕರುಣದಿಂದಲೂ ಸಮಾನರಲ್ಲಿ ಮೈತ್ರಿಯಿಂದಲೂ ಸಮಸ್ತ ಪ್ರಾಣಿಗಳಲ್ಲಿ ಸಮಬುದ್ಧಿಯಿಂದಲೂ ಇರುವವನಿಗೆ ಸರ್ವಾತ್ಮನಾದ ಭಗವಂತನು ಪ್ರಸನ್ನನಾಗುವನು; ಆತನು ಪ್ರಸನ್ನನಾದರೆ ಪುರುಷನು ಮಾಯಾಗುಣಗಳಿಂದಲೂ ಮತ್ತು ಮಾಯಾಕಾರ್ಯವಾದ ಲಿಂಗಶರೀರದಿಂದಲೂ ಮುಕ್ತನಾಗಿ ಬ್ರಹ್ಮಸಾಯುಜ್ಯವನ್ನೈದುವನು! ಎಲೈ ಬಾಲಕನೆ, ಪಂಚಭೂತಗಳು ದೇಹಾಕಾರವಾಗಿ ಪರಿಣಮಿಸಿ ಸ್ತ್ರೀಯೆಂತಲೂ ಪುರುಷನೆಂತಲೂ ಹುಟ್ಟಿ ಆ ಸ್ತ್ರೀ ಪುರುಷರಿಗೆ ಮೈಥುನ ವ್ಯಾಪಾರದಿಂದ ಪುನಶ್ಚ ಸ್ತ್ರೀ ಪುರುಷರೆಂದು ಎರಡುಪ್ರಕಾರವಾಗಿ ಉಂಟಾಗುವವು; ಈಪ್ರಕಾರವಾಗಿ ಸೃಷ್ಟಿಯೂ ಸ್ಥಿತಿಯೂ ಲಯವು ಎಂಬ ಪರಮಾತ್ಮನ ಮಾಯಾಗುಣಭೇದದಿಂದ ಜಗತ್ತು ಪ್ರವರ್ತಿಸುವದು; ಯಾವ ಈಶ್ವರ

ನಲ್ಲಿ ಕಾರ್ಯಕಾರಣಾತ್ಮಕವಾದ ಈ ಸಮಸ್ತ ಜಗತ್ತು ಸುತ್ತುತಲಿರ್ಧೆಯೋ ಅಂಥಾ ನಿರ್ಗುಣನಾದ ಪರಮಪುರುಷನು ಈ ಜಗತ್ತಿನ ಸೃಷ್ಟಿ ಸ್ಥಿತಿಲಯಗಳಲ್ಲಿ ನಿಮಿತ್ತಮಾತ್ರನಾಗಿರುವನು ; ಕಾಲಶಕ್ತಿಯಿಂದ ಕ್ರಮವಾಗಿ ಉಂಟಾಗುವ ಗುಣಗಳ ಕ್ಷೋಭೆಯಿಂದ ವ್ಯಕ್ತವಾದ ಸೃಷ್ಟ್ಯಾದಿವಿಷಯಕವಾದ ಸಾಮರ್ಥ್ಯವುಳ್ಳವನಾಗಿ ಆ ಭಗವಂತನು ಸ್ವತಃ ಅಕರ್ತೃವಾದಾಗ್ಯೂ ಕರ್ತೃವಾಗಿ ತೋರುವನು ; ಸಂಹಾರಕನಲ್ಲದಿದ್ದಾಗ್ಯೂ ಸಂಹಾರಕನಂತೆ ತೋರುವನು ; ಮಹಾತ್ಮನಾದ ಆ ಭಗವಂತನ ವ್ಯಾಪಾರವು ಊಹಿಸಲಶಕ್ಯವಾದದ್ದು; ಅನಂತನಾಗಿ ಕಾಲರೂಪನಾಗಿ ಅನಾದಿಯಾಗಿ ಅವ್ಯಯನಾಗಿರುವ ಆ ಭಗವಂತನು ಪಿತ್ರಾದಿರೂಪವಾದ ಜನರಿಂದ ಪುತ್ರಾದಿರೂಪವಾದ ಜನರನ್ನು ಸೃಷ್ಟಿಸುವನಾಗಿ ಜನಕನೆನಿಸಿಕೊಳ್ಳುವನು ; ಮೃತ್ಯುರೂಪವಾದ ಚೋರಾದಿ ಜನರನ್ನು ಸಂಹರಿಸುವನಾಗಿ ಅಂತಕನೆನಿಸಿಕೊಳ್ಳುವನು ; ಮೃತ್ಯುರೂಪನಾಗಿ ತತ್ತತ್ಕರ್ಮಾನುಸಾರವಾಗಿ ಸಮಸ್ತ ಪ್ರಾಣಿಗಳಲ್ಲಿ ಪ್ರವೇಶಿಸಿರುವ ಪರಮಪುರುಷನಿಗೆ ಸ್ವಪಕ್ಷವೂ ಇಲ್ಲ; ಪರಪಕ್ಷವೂ ಇಲ್ಲ; ಆ ಭಗವಂತನು ಯಾವ ಮಾರ್ಗದಲ್ಲಿ ಹೋಗುವನೋ ಆ ಮಾರ್ಗದಲ್ಲೇ ಕರ್ಮಾಧೀನಗಳಾದ ಸರ್ವಭೂತಗಳು ಅಸ್ವತಂತ್ರಗಳಾದ್ದರಿಂದ ಭೂಮಿಯ ಧೂಳಗಳು ವಾಯುವು ಹೋದಕಡೆಗೆ ಹ್ಯಾಗೆ ಹೋಗುವವೋ ಹಾಗೆ ಹೋಗುವವು; ಆಯುಸ್ಸಿನ ವೃದ್ಧಿಹ್ರಾಸಗಳಿಂದ ರಹಿತನಾಗಿ ಶಾಶ್ವತನಾದ ಭಗವಂತನು ಕರ್ಮಾಧೀನವಾದ ಪ್ರಾಣಿಸಮೂಹಕ್ಕೆ ಆಯುಸ್ಸಿನ ವೃದ್ಧಿ ಕ್ಷಯಗಳನ್ನುಂಟುಮಾಡುತ್ತಾನೆ; ,ಕೆಲವರು ಈ ಭಗವಂತನನ್ನು ಕರ್ಮವನ್ನಾಗಿ ಹೇಳುವರು; ಕೆಲವರು ಸ್ವಭಾವವನ್ನಾಗಿ ಹೇಳುವರು; ಕೆಲವರು ಕಾಲವನ್ನಾಗಿ ಹೇಳುವರು ; ಕೆಲವರು ದೈವವನ್ನಾಗಿ ಹೇಳುವರು ; ಅವ್ಯಕ್ತನಾಗಿ ಅಪ್ರಮೇಯನಾಗಿ ನಾನಾವಿಧಗಳಾದ ಶಕ್ತಿಗಳುಳ್ಳ ಪರಮಾತ್ಮನ ವ್ಯಾಪಾರವನ್ನು ಯಾವನು ಬಲ್ಲನು ; ಸ್ವಯಂಭುವಾದ ಆ ಪರಬ್ರಹ್ಮವನ್ಯಾರುಬಲ್ಲರು! ಎಲೈ ಬಾಲಕನಾದ ಧ್ರುವನೆ, ಕುಬೇರಾನುಚರರಾದ ಈ ಯಕ್ಷರು ನಿನ್ನ ಭ್ರಾತೃವನ್ನು ಸಂಹರಿಸಿದವರಲ್ಲ; ಪ್ರಾಣಿಗಳ ಉತ್ಪತ್ತಿ ಲಯಗಳಿಗೆ ದೈವವೇ ನಿಮಿತ್ತವು; ಆ ಪರಮಾತ್ಮನೇ ಜಗತ್ತನ್ನು ಸೃಜಿಸುತ್ತಾನೆ; ಅವನೇ ರಕ್ಷಿಸುತ್ತಾನೆ; ಅವನೇ ಸಂಹರಿಸುತ್ತಾನೆ; ಆದಾಗ್ಯೂ ಅಹಂಕಾರರಾಹಿತ್ಯದಿಂದ ಗುಣಕರ್ಮಗಳಿಂದ ಲಿಪ್ತನಾಗುವದಿಲ್ಲ; ಭೂತಾತ್ಮನಾಗಿ ಭೂತೇಶನಾಗಿ ಭೂತಭಾವನನಾದ ಈ ಭಗವಂತನು ಸ್ವಮಾಯಾಶಕ್ತಿಯಿಂದ ಯುಕ್ತನಾಗಿ ವಿಶ್ವವನ್ನು ಸೃಷ್ಟಿಸಿ ಪಾಲನಗೈದು ಸಂಹರಿಸುವನು! ಎಲೈ ಧ್ರುವನೆ, ಪ್ರಜೇಶರು ಮೂಗುದಾರದಿಂದ ಕಟ್ಟಲ್ಪಟ್ಟ ವೃಷಭಗಳಂತೆ ಯಾವ ಭಗವಂತನ ಆಜ್ಞಾಪಾಲನರೂಪವಾದ ಪೂಜೆಯನ್ನು ಮಾಡುತ್ತಾರೆಯೋ ಮೃತ್ಯುರೂಪನಾಗಿ ಅಮೃತರೂಪನಾಗಿ ಜಗನ್ನಿಯಾಮಕನಾಗಿ ದೈವರೂಪನಾದ ಆ ಭಗವಂತನನ್ನು ಸರ್ವಪ್ರಕಾರದಿಂದಲೂ ಶರಣು ಹೊಂದುವನಾಗು! ಎಲೈ ಬಾಲಕನೆ, ಐದುವರ್ಷದ ವಯಸ್ಸುಳ್ಳ ನೀನು ಸಪತ್ನೀ ಮಾತೃವಿನ ದುರುಕ್ತಿಗಳಿಂದ ಭೇದಿಸಲ್ಪಟ್ಟ ಮರ್ಮವುಳ್ಳವನಾಗಿ ತಾಯಿಯನ್ನು ಬಿಟ್ಟು ವನವನ್ನೈದಿ ಇಂದ್ರಿಯಗಳಿಗಗೋಚರನಾದ ಯಾವ ಪರಮಾತ್ಮನನ್ನಾರಾಧಿಸಿ ಲೋಕತ್ರಯದ ಶಿರಸ್ಸಿನಮೇಲಿರುವ ಉಚ್ಚಸ್ಥಾನವನ್ನೈದಿದೆಯೋ ಅಂಥಾ ಭಗವಂತನನ್ನು ಭಜಿಸು ; ಯಾವ ಪರಬ್ರಹ್ಮನಲ್ಲಿ ಅವಿದ್ಯಾರೂಪವಾದ ಭೇದವು ತೋರುವದೋ ವ್ಯಕ್ತವಾದ ವಿರೋಧವುಳ್ಳ ಮನಸ್ಸಿನಲ್ಲಿರುವವನಾಗಿ ನಿರ್ಗುಣನಾಗಿ ಅದ್ವಿತೀಯನಾಗಿ ನಾಶರಹಿತನಾಗಿ ಮಾಯಾಸಂಬಂಧರಹಿತನಾಗಿರುವ ಆ ಪರಮಾತ್ಮನನ್ನು ನೀನು ಅಂತರ್ದೃಷ್ಟಿಯುಳ್ಳವನಾಗಿ ಭಜಿಸು! ಎಲೈ ಬಾಲಕನೆ, ನೀನು ಪ್ರತ್ಯಗಾತ್ಮನಾಗಿ ಅನಂತನಾಗಿ ನಿತ್ಯಾನಂದರೂಪನಾಗಿ ಸಮಗ್ರಶಕ್ತಿಯುಕ್ತನಾದ ಭಗವಂತನಲ್ಲಿ ಉತ್ಕೃಷ್ಟವಾದ ಭಕ್ತಿಯನ್ನು ಮಾಡಿ ನಾನು-ನನ್ನದು ಎಂಬ ಅಹಂಕಾರ ಮಮಕಾರರೂಪವಾದ ಅವಿದ್ಯಾಗ್ರಂಥಿಯನ್ನು ಮೆಲ್ಲನೆ ಭೇದಿಸು! ಎಲೈ ಬಾಲಕನೆ, ನಿನಗೆ ಶುಭವಾಗಲಿ; ಔಷಧದಿಂದ ರೋಗವನ್ನು ನಿಗ್ರಹಿಸುವಂತೆ ಅಧಿಕವಾದ ಶಾಸ್ತ್ರಜನ್ಯವಿವೇಕದಿಂದ ಶ್ರೇಯಸ್ಸುಗಳಿಗೆ ವಿರುದ್ಧವಾದ ರೋಷವನ್ನು ನಿಗ್ರಹಿಸು ; ಯಾವ ಕೋಪದಿಂದ ವ್ಯಾಪ್ತನಾದ ಪುರುಷನ ದೆಸೆಯಿಂದ ಲೋಕವು ಭಯಪಡುವದೋ ಆತ್ಮಕ್ಷೇಮವನ್ನು ಅಪೇಕ್ಷಿಸುವ ಪ್ರಾಜ್ಞನು ಅಂಥಾ ಕೋಪಕ್ಕೆ ವಶನಾಗಬಾರದು ; ಭ್ರಾತೃವಾದ ಉತ್ತಮನನ್ನು ಸಂಹರಿಸಿದರೆಂಬ ಕ್ರೋಧದಿಂದ ಯಕ್ಷರನ್ನು ಸಂಹರಿಸಿದೆ ; ಪರಮೇಶ್ವರನಿಗೆ ಮಿತ್ರನಾದ ಕುಬೇರನಿಗೆ ಅವಮಾನವು ನಿನ್ನಿಂದ ಮಾಡಲ್ಪಟ್ಟಿತು; ಮಹಾತ್ಮರ ತೇಜಸ್ಸು ಸರ್ವತ್ರ ಕಾಲವ

ನ್ನು ಎಷ್ಟರೊಳಗೆ ತಿರಸ್ಕರಿಸುವದಿಲ್ಲವೋ ಅಷ್ಟರೊಳಗೆ ಶೀಘ್ರವಾಗಿ ವಿನಯಾದಿಗಳಿಂದಲೂ ನಮಸ್ಕಾರದಿಂದಲೂ ಕುಬೇರನನ್ನು ಪ್ರಾರ್ಥಿಸಿ ಪ್ರಸನ್ನನಾಗಿ ಮಾಡಿಕೊ—ಎಂದು ಸ್ವಾಯಂಭುವಮನುವು ಮೊಮ್ಮಗನಾದ ಧ್ರುವನನ್ನು ನುಶಾಸನಂಗೈದು ಆತನಿಂದ ನಮಸ್ಕರಿಸಲ್ಪಟ್ಟವನಾಗಿ ಋಷಿಗಳೊಡನೆ ತನ್ನ ಪುರವನ್ನು ಕುರಿತೈದಿದನು'' ಎಂದು ನುಡಿದನು.

೧೨ನೇ ಅಧ್ಯಾಯ.

ಧ್ರುವನು ಯಜ್ಞಗಳಿಂದ ಭಗವಂತನನ್ನಾರಾಧಿಸಿ ಶ್ರೀಹರಿಯ ಸ್ಥಾನವನ್ನೈದಿದ್ದು.

“ಎಲೈ ವಿದುರನೇ, ಆ ಬಳಿಕ ಭಗವಂತನಾದ ಕುಬೇರನು ಕೋಪವನ್ನು ಬಿಟ್ಟು ಹಿಂಸಾವ್ಯಾಪಾರದಿಂದ ನಿವೃತ್ತನಾದ ಧ್ರುವನನ್ನು ತಿಳಿದು ಚಾರಣ ಯಕ್ಷ ಕಿನ್ನರರಿಂದ ಸ್ತುತಿಗೈಯಲ್ಪಡುತ ಅಲ್ಲಿಗೆ ಬಂದು ಅಂಜಲಿಬಂಧಂಗೈದಿರುವ ಧ್ರುವನನ್ನು ಕುರಿತು ‘ಎಲೈ ಕ್ಷತ್ರಿಯಕುಮಾರನೆ, ನೀನು ಯಾವಕಾರಣದಿಂದ ಪಿತಾಮಹನಾದ ಸ್ವಾಯಂಭುವಮನುವಿನ ಆಜ್ಞೆಯಿಂದ ಬಿಡಲಶಕ್ಯವಾದ ವೈರವನ್ನು ಬಿಟ್ಟೆಯೋ ಅದುಕಾರಣ ನಿನ್ನಲ್ಲಿ ನಾನು ಸಂತುಷ್ಟನಾದೆನು; ಯಕ್ಷರನ್ನು ನೀನು ಸಂಹರಿಸಿದವನಲ್ಲ; ನಿನ್ನ ಭ್ರಾತೃವನ್ನು ಯಕ್ಷರು ಸಂಹರಿಸಿದವರಲ್ಲ; ಪ್ರಾಣಿಗಳ ಜನ್ಮ ಮರಣಗಳಿಗೆ ಕಾಲವೇ ನಿಯಾಮಕವಾದದ್ದು; ಪುರುಷನಿಗೆ ನಾನು ನೀನೆಂಬ ಮಿಥ್ಯಾಭೂತವಾದ ಬುದ್ಧಿಯು ಅಜ್ಞಾನದಿಂದ ಸ್ವಪ್ನದಂತೆ ಉಂಟಾಗುವದು; ದೇಹದಲ್ಲಿ ಆತ್ಮಾಧ್ಯಾಸದಿಂದ ಹುಟ್ಟುವ ಮಿಥ್ಯಾಜ್ಞಾನದಿಂದ ಬಂಧವು ದುಃಖಾದಿಗಳೂ ಉಂಟಾಗುವವು! ಎಲೈ ಧ್ರುವನೆ, ನಿನಗೆ ಶುಭವುಂಟಾಗಲಿ; ನಿನ್ನ ಪುರವನ್ನು ಕುರಿತು ತೆರಳಿ ಹೋಗು; ಭಗವಂತನಾಗಿ ಸರ್ವಭೂತಾತ್ಮಕವಾದ ಶರೀರವುಳ್ಳ ಅಧೋಕ್ಷಜನನ್ನು ಸರ್ವಭೂತಗಳಲ್ಲಿಯೂ ಆತ್ಮಭಾವದಿಂದ ಭಜಿಸುವದಕ್ಕೆ ಯೋಗ್ಯವಾದ ಪಾದಪದ್ಮವುಳ್ಳವನಾಗಿ ಗುಣಮಯವಾದ ಆತ್ಮಮಾಯಾಶಕ್ತಿಯಿಂದ ಯುಕ್ತನಾಗಿ ವಿರಹಿತನಾಗಿರುವವನಾಗಿ ಸಂಸಾರಪರಿಹಾರಕನಾದ ಭಗವಂತನನ್ನು ಮೋಕ್ಷಾರ್ಥವಾಗಿ ಭಜಿಸು! ಎಲೈ ಉತ್ತಾನಪಾದರಾಯನ ಪುತ್ರನಾದ ಧ್ರುವನೆ, ನೀನು ಶಂಕಾರಹಿತನಾಗಿ ಮನೋಗತವಾದ ವರವನ್ನು ನನ್ನಿಂದ ಕೇಳಿಕೊ; ಪದ್ಮನಾಭನ ಶ್ರೇಷ್ಠಗಳಾದ ಪಾದಗಳಲ್ಲಿ ಅವಿಚ್ಛಿನ್ನಭಕ್ತಿಯುಳ್ಳವನನ್ನಾಗಿ ನಿನ್ನನ್ನು ನಾವು ತಿಳಿಯುತ್ತೇವೆ’ ಎಂದು ಕುಬೇರನಿಂದ ಪ್ರೇರಿತನಾಗಿ ಪರಮಭಾಗವತನೂ ಮಹಾ ಬುದ್ಧಿಶಾಲಿಯೂ ಆದ ಧ್ರುವನು ಯಾವ ಹರಿಸ್ಮೃತಿಯಿಂದ ಅಪಾರವಾದ ಸಂಸಾರವು ದಾಟಲ್ಪಡುವದೋ ಅಂಥಾ ಹರಿಸ್ಮರಣೆಯು ಸರ್ವದಾ ತನಗೆ ಉಂಟಾಗುವಂತೆ ವರವನ್ನು ಪ್ರಾರ್ಥಿಸಿದನು; ಅನಂತರದಲ್ಲಿ ಕುಬೇರನು ಪ್ರೀತಿಮನಸ್ಕನಾಗಿ ಧ್ರುವನಿಗೆ ಆ ವರಗಳನ್ನು ಇತ್ತು ಅಂತರ್ಧಾನವನ್ನೈದಿದನು; ಆ ಬಳಿಕ ಧ್ರುವನು ಸ್ವಪುರಕ್ಕೆ ಬಂದು ದ್ರವ್ಯಕ್ರಿಯಾದೇವತೆಗಳ ಸಂಬಂಧಿಯಾಗಿ ಕರ್ಮಸ್ವರೂಪನಾಗಿ ಕರ್ಮಫಲಪ್ರದನಾಗಿ ಭಗವಂತನಾದ ಯಜ್ಞಪುರುಷನನ್ನು ಅಧಿಕದಕ್ಷಿಣೆಗಳುಳ್ಳ ಕ್ರತುಗಳಿಂದ ಆರಾಧಿಸಿ ಸರ್ವಾಂತರ್ಯಾಮಿಯಾಗಿ ಸರ್ವೋಪಾಧಿ ಮುಕ್ತನಾದ ಅಚ್ಯುತನಲ್ಲಿ ಅಧಿಕವಾದ ಭಕ್ತಿಯನ್ನು ಧರಿಸಿ ತನ್ನಲ್ಲಿಯೂ ಸಮಸ್ತಭೂತಗಳಲ್ಲಿಯೂ ಆ ಭಗವಂತನನ್ನೇ ನೋಡಿದನು; ಸಮಸ್ತ ಪ್ರಜೆಗಳೂ ಸಚ್ಚರಿತ್ರಗಳಿಂದ ಯುಕ್ತನಾದ ದೀನವತ್ಸಲನಾಗಿ ಬ್ರಾಹ್ಮಣಪ್ರಿಯನಾಗಿ ಧರ್ಮಾರ್ಥ ವ್ಯವಸ್ಥಾಪಕನಾದ ಆ ಧ್ರುವರಾಯನನ್ನು ತಂದೆಯನ್ನಾಗಿ ತಿಳಿದರು; ಆಗ ಧ್ರುವನು ವಿಷಯಭೋಗಗಳಿಂದ ಪುಣ್ಯಕ್ಷಯವನ್ನೂ ಯಜ್ಞಾದಿ ಕರ್ಮಾನುಷ್ಠಾನಗಳಿಂದ ಪಾಪಕ್ಷಯವನ್ನೂ ಮಾಡುತ ಇಪ್ಪತ್ತಾರುಸಹಸ್ರ ಸಂವತ್ಸರಗಳಪರಿಯಂತವು ರಾಜ್ಯವನ್ನಾಳಿದನು; ಈರೀತಿಯಲ್ಲಿ ಜಿತೇಂದ್ರಿಯನಾಗಿ ಮಹಾತ್ಮನಾದ ಧ್ರುವನು ಮಹತ್ತಾದ ಧರ್ಮಾರ್ಥ ಕಾಮಗಳಿಗೆ ಸಾಧನವನ್ನಾಗಿ ಮಾಡಿ ಪುತ್ರನಿಗೆ ರಾಜ್ಯವನ್ನು ಕೊಟ್ಟು ಆತ್ಮನಲ್ಲಿ ಮಾಯಾಕಲ್ಪಿತವಾದ ಈ ಸಮಸ್ತ ಪ್ರಪಂಚವನ್ನು ಅಜ್ಞಾನಜನ್ಯವಾದ ಸ್ವಪ್ನದಂತೆಯೂ ಭ್ರಾಂತಿಕಲ್ಪಿತವಾದ ಗಂಧರ್ವನಗರದಂತೆಯೂ ಮಿಥ್ಯಾಭೂತವನ್ನಾಗಿ ತಿಳಿದು ದೇಹವನ್ನೂ ಸ್ತ್ರೀಯರನ್ನೂ ಪುತ್ರರನ್ನೂ ಮಿತ್ರರನ್ನೂ ಬಲವನ್ನೂ ಅಭಿವೃದ್ಧಿಯನ್ನೈದಿದ ಬೊಕ್ಕಸ ಭಂಡಾರವನ್ನೂ

ಅಂತಃಪುರವನ್ನೂ ಮನೋಹರಗಳಾದ ಕ್ರೀಡಾಸ್ಥಾನಗಳನ್ನೂ ಸಮುದ್ರದಿಂದ ಸುತ್ತಲ್ಪಟ್ಟ ಭೂಮಂಡಲವನ್ನೂ ಸಹ ಕಾಲಾಧೀನವಾಗಿ ಅನಿತ್ಯವಾದುವೆಂದು ತಿಳಿದು ಬದರಿಕಾಶ್ರಮವನ್ನೈದಿದನು; ಆ ಆಶ್ರಮದಲ್ಲಿ ಧ್ರುವನು ಶುದ್ಧಾಂತಃಕರಣನಾಗಿ ದಿವ್ಯತೀರ್ಥದಲ್ಲಿ ಸ್ನಾನಂಗೈದು ಯೋಗಸಂಪೂರ್ಣನಾಗಿ ಶ್ವಾಸಧಾರಣೆಯನ್ನು ಮಾಡಿ ಮನಸ್ಸಿನಿಂದ ಇಂದ್ರಿಯಗಳನ್ನು ನಿಗ್ರಹಿಸಿ ಭಗವಂತನ ಸ್ಥೂಲರೂಪವಾದ ವಿರಾಟ್ಟನಲ್ಲಿ ಚಿತ್ತವನ್ನಿರಿಸಿ ಧ್ಯಾನಧ್ಯಾತೃಧ್ಯೇಯಭೇದವನ್ನಿಟ್ಟು ಸಮಾಧಿನಿಷ್ಠನಾಗಿ ಆ ಸ್ಥೂಲರೂಪವನ್ನು ಬಿಟ್ಟನು; ಈ ರೀತಿಯಲ್ಲಿ ಭಗವಂತನಾದ ಹರಿಯಲ್ಲಿ ನಿರಂತರ ಭಕ್ತಿಯನ್ನು ಮಾಡುವವನಾಗಿ ಆನಂದಬಾಷ್ಪಧಾರೆಯಿಂದ ಆರ್ದ್ರವಾದ ಹೃದಯವುಳ್ಳವನಾಗಿ ರೋಮಾಂಚಿತವಾದ ಶರೀರವುಳ್ಳವನಾಗಿ ದೇಹಾಭಿಮಾನವನ್ನು ಬಿಟ್ಟು ತನ್ನನ್ನೇ ಮರೆತನು; ಅನಂತರದಲ್ಲಿ ಆ ಧ್ರುವನು ದಶದಿಕ್ಕುಗಳನ್ನು ಬೆಳಗಿಸುತಲಿರುವ ಪೂರ್ಣಚಂದ್ರನ ಸಮಾನವಾದ ಕಾಂತಿಯುಳ್ಳದ್ದಾಗಿ ಆಕಾಶದಿಂದಿಳಿದು ಬರುತಲಿರುವ ದಿವ್ಯವಿಮಾನವನ್ನು ಕಂಡನು; ಆ ವಿಮಾನದಲ್ಲಿ ಚತುರ್ಭುಜರಾಗಿ ಯೌವನಸ್ಥರಾಗಿ ಕೆಂದಾವರೆಯಂತೆ ನೇತ್ರಗಳುಳ್ಳವರಾಗಿ ಗದಾಧಾರಿಗಳಾಗಿ ದಿವ್ಯವಸ್ತ್ರಧಾರಿಗಳಾಗಿ ಕಿರೀಟ ಹಾರ ಭುಜಕೀರ್ತಿಗಳಿಂದಲೂ ಕುಂಡಲಗಳಿಂದಲೂ ಅಲಂಕೃತರಾಗಿರುವ ಈರ್ವರು ದೇವಪುರುಷರನ್ನು ಕಂಡು ಅವರೀರ್ವರನ್ನೂ ಶ್ರೀ ನಾರಾಯಣ ಕಿಂಕರರೆಂದು ತಿಳಿದು ಭಯದಿಂದ ಪರಿಪೂಜೆಯನ್ನು ಮರೆತು ಇವರು ಭಗವಂತನ ಪಾರಿಷದರಲ್ಲಿ ಶ್ರೇಷ್ಠರೆಂಬ ಭಕ್ತಿಯಿಂದ ಅಂಜಲಿಬಂಧಂಗೈದು ಮಧುದ್ವೇಷಿಯಾದ ಭಗವಂತನ ನಾಮಗಳನ್ನು ಕೀರ್ತನಂಗೈಯುತ್ತ ನಮಸ್ಕರಿಸಿದನು; ಶ್ರೀಕೃಷ್ಣನ ಪಾದಗಳಲ್ಲಿ ನಿವಿಷ್ಟವಾದ ಚಿತ್ತವುಳ್ಳವನಾಗಿ ಅಂಜಲಿಬಂಧವನ್ನು ಮಾಡಿಕೊಂಡು ವಿನಯದಿಂದ ನಮ್ರವಾದ ಕಂಠವುಳ್ಳವನಾಗಿ ನಿಂತಿರುವ ಧ್ರುವನನ್ನು ನೋಡಿ ಭಗವಂತನಿಗೆ ಸಮ್ಮತರಾದ ಸುನಂದ ನಂದನರು ಸಮೀಪಕ್ಕೆ ಬಂದು ನಗುತ ಪ್ರೀತಿಯಿಂದ ‘ಎಲೈ ಅರಸೇ, ನಿನಗೆ ಶುಭವುಂಟಾಗಲಿ; ಸಾವಧಾನನಾಗಿ ನಮ್ಮ ಮಾತುಗಳನ್ನು ಕೇಳು: ನೀನು ಐದು ವರ್ಷದ ವಯಸ್ಸುಳ್ಳವನಾದಕಾಲದಲ್ಲೇ ತಪಸ್ಸಿನಿಂದ ಭಗವಂತನನ್ನು ಸಂತೋಷಪಡಿಸಿದೆ; ಸಮಸ್ತ ಜಗತ್ತಿನ ಸೃಷ್ಟಿಕರ್ತನಾಗಿ ದೇವದೇವನಾದ ಭಗವಂತನ ಕಿಂಕರರಾದ ನಾವೀರ್ವರು ನಿನ್ನನ್ನು ಭಗವಂತನ ಸ್ಥಾನಕ್ಕೆ ಕರೆದುಕೊಂಡು ಹೋಗುವದಕ್ಕೋಸ್ಕರ ಬಂದಿಧೇವೆ; ಸರ್ವಜ್ಞರಾದ ಸಪ್ತರ್ಷಿಗಳೂ ಯಾವ ಭಗವಂತನ ಸ್ಥಾನವನ್ನೈದಲಿಲ್ಲವೋ ಅಂಥಾ ಜಯಿಸಲಶಕ್ಯವಾದ ವಿಷ್ಣುವಿನ ಸ್ಥಾನವು ನಿನ್ನಿಂದ ಜಯಿಸಲ್ಪಟ್ಟಿತು; ಸೂರ್ಯಚಂದ್ರರು ಮೊದಲಾದ ಗ್ರಹ ನಕ್ಷತ್ರ, ತಾರೆಗಳು ಯಾವ ಸ್ಥಾನವನ್ನು ಪ್ರದಕ್ಷಿಣೆ ಮಾಡುತ ಸಂಚರಿಸುವವೋ ಅಂಥಾ ಸ್ಥಾನದಲ್ಲಿ ನೀನು ವಾಸಂಗೈವವನಾಗು! ಎಲೈ ಧ್ರುವನೇ, ನಿನ್ನ ಪಿತೃ ಪಿತಾಮಹಾದಿಗಳಿಂದಲೂ ಅನ್ಯರಾದವರಿಂದಲೂ ಒಂದು ಕಾಲದಲ್ಲಿಯೂ ಐದಲ್ಪಡದಿರುವ ಜಗದ್ವಂದ್ಯನಾದ ಶ್ರೀವಿಷ್ಣುವಿನ ಪರಮಪದವಾದ ಸ್ಥಾನವನ್ನು ನೀನೈದು! ಎಲೈ ಆಯುಷ್ಮಂತನಾದ ಧ್ರುವನೇ, ಈ ಶ್ರೇಷ್ಠವಾದ ವಿಮಾನವು ಭಗವಂತನಿಂದ ನಿನಿಗೋಸ್ಕರ ಕಳುಹಿಸಲ್ಪಟ್ಟಿದೆ; ಈ ವಿಮಾನವನ್ನಾರೋಹಣಂಗೈಯುವವನಾಗು’ ಎಂದು ನುಡಿದರು.

“ಶ್ರೀಹರಿ ಕಿಂಕರ ಶ್ರೇಷ್ಠರಾದ ಆ ಸುನಂದನಂದನರ ಅಮೃತವನ್ನು ಸ್ರವಿಸುತಲಿರುವ ವಾಕ್ಯಗಳನ್ನು ಕೇಳಿ ಶುಭಾರ್ಥವಾಗಿ ಸ್ನಾನವನ್ನು ಮಾಡಿ ಅಲಂಕೃತನಾಗಿ ಮಹರ್ಷಿಗಳಿಗೆ ನಮಸ್ಕರಿಸಿ ಅವರ ಆಶೀರ್ವಚನಗಳನ್ನಂಗೀಕರಿಸಿ ಆ ವಿಮಾನವನ್ನು ಪೂಜಿಸಿ ಹರಿಕಿಂಕರರಿಗೆ ನಮಸ್ಕರಿಸಿ ಹಿರಣ್ಮಯವಾದ ತೇಜೋರೂಪವನ್ನು ಧರಿಸಿ ಆ ವಿಮಾನವನ್ನಾರೋಹಣಂಗೈಯಲೋಸುಗ ಇಚ್ಛೈಸಿದನು; ಆ ಸಮಯದಲ್ಲಿ ದೇವದುಂದುಭಿಗಳು ಧ್ವನಿಗೈದವು; ಮೃದಂಗಪಣವಾದಿಗಳು ನಾದಂಗೈದವು; ಗಂಧರ್ವಶ್ರೇಷ್ಠರು ಗಾನಂಗೈದರು; ಪುಷ್ಪವೃಷ್ಟಿಗಳು ವರ್ಷಿಸಿದವು; ಆಗ ಧ್ರುವನು ಸ್ವರ್ಗಲೋಕವನ್ನು ಕುರಿತು ಆರೋಹಣಂಗೈವದಕ್ಕೆ ಉದ್ಯುಕ್ತನಾಗಿ ದೀನಳಾಗಿರುವ ತನ್ನ ತಾಯಿಯಾದ ಸುನೀತಿಯನ್ನು ಬಿಟ್ಟು ತಾನುಮಾತ್ರವೇ ಸ್ವರ್ಗವನ್ನು ಕುರಿತು ಹೋಗಲು ಸಮ್ಮತಿಸದೆ ತಾಯಿಯನ್ನು ಸ್ಮರಿಸಿ ವ್ಯಸನಪಡುತಲಿರುವ ಧ್ರುವನ ಮನೋಗತವನ್ನು ತಿಳಿದು ದೇವೋತ್ತಮರಾದ ಸುನಂದನ ನಂದನರು ಮುಂದುಗಡೆಯಲ್ಲಿ ವಿಮಾನಾರೂಢಳಾಗಿ ಹೋಗುತಲಿರುವ ಸುನೀತಿದೇವಿಯನ್ನು ಧ್ರುವನಿಗೆ ತೋರಿಸಿದರು; ಆಗ ಧ್ರುವನು ವಿಮಾನಾರೂಢನಾದ ದೇವತೆಗಳಿಂದ ಅಲ್ಲಲ್ಲಿ ಸ್ತುತಿಗೈಯಲ್ಪಡುವನಾಗಿ ಪುಷ್ಪವೃಷ್ಟಿಯು ವರ್ಷಿಸುತ್ತಿರಲು ಕ್ರಮ

ವಾಗಿ ಗ್ರಹಗಳನ್ನು ಕಂಡನು; ಆ ವಿಮಾನದಿಂದ ಲೋಕತ್ರಯವನ್ನೂ ಸಪ್ತಋಷಿಮಂಡಲವನ್ನೂ ಅತಿಕ್ರಮಿಸಿ ಶಾಶ್ವಿತವಾದ ಗತಿಯುಳ್ಳದ್ದಾಗಿ ತನ್ನ ಪ್ರಭೆಯಿಂದ ಪ್ರಕಾಶಮಾನವಾದ ಯಾವಸ್ಥಾನವು ಲೋಕತ್ರಯವನ್ನು ಪ್ರಕಾಶಿಸುವಂತೆ ಮಾಡುತಲಿದೆಯೋ ಭೂತದಯಾರಹಿತರಾದ ಜನರು ಯಾವ ಲೋಕವನ್ನೈದಲು ಅಸಮರ್ಥರೋ ಶಾಂತರಾಗಿ ಸಮದೃಷ್ಟಿಯುಳ್ಳವರಾಗಿ ಶುದ್ಧರಾಗಿ ಸರ್ವಭೂತದಯಾಪರರಾಗಿ ಭಗವದ್ಭಕ್ತರನ್ನೇ ಬಾಂಧವಗಳನ್ನಾಗಿ ಭಾವಿಸುವ ಮಹಾಯೋಗಿಗಳು ಯಾವ ಅಚ್ಯುತನ ಸ್ಥಾನವನ್ನು ಐದುವರೋ ಅಂಥಾ ಉತ್ತಮಸ್ಥಾನವನ್ನು ಧ್ರುವನು ಐದಿದನು"

"ಎಲೈ ವಿದುರನೆ, ಈಪ್ರಕಾರವಾಗಿ ಉತ್ತಾನಪಾದರಾಯನ ಪುತ್ರನಾಗಿ ಹರಿಭಕ್ತನಾದ ಧ್ರುವನು ಲೋಕತ್ರಯಕ್ಕೂ ಉಪರಿಭಾಗದಲ್ಲಿ ಶಿಖಾಮಣಿಯಂತೆ ನಿರ್ಮಲವಾಗಿ ಪ್ರಕಾಶಿಸಿದನು; ಯಾವ ಸ್ಥಾನದಲ್ಲಿ ಆಲಸ್ಯರಹಿತವಾಗಿ ಜ್ಯೋತಿಶ್ಚಕ್ರವು ಮೇಟಿಕಂಭವಲ್ಲಿ ವೃಷಭ ಸಮೂಹದಂತೆ ತಿರುಗುತ್ತಲಿದೆಯೋ ಆಸ್ಥಾನದಲ್ಲಿ ಧ್ರುವನು ಪ್ರಕಾಶಿಸಿದನು; ಅನಂತರದಲ್ಲಿ ನಾರದನು ಈ ಧ್ರುವರಾಯನ ಮಹಿಮೆಯನ್ನು ನೋಡಿ ವೀಣೆಯನ್ನು ಮಿಡಿಯುತ ಪ್ರಚೇತಸ್ಸುಗಳ ಸತ್ರಯಾಗದಲ್ಲಿ ಮೂರು ಶ್ಲೋಕಗಳನ್ನು ಗಾನಂಗೈದನು; ಅದೆಂತೆನೆ: ಪತಿಯೇ ದೇವತೆಯಾಗುಳ್ಳ ಸುನೀತಿದೇವಿಯ ಪುತ್ರನಾದ ಧ್ರುವನ ತಪಃಪ್ರಭಾವದ ಫಲವನ್ನು ಪಡೆಯಲು ವೇದವೇದಾರ್ಥಜ್ಞರಾದ ಬ್ರಹ್ಮಋಷಿಗಳೂ ಸಮರ್ಥರಾಗುವದಿಲ್ಲ; ಮಿಗಿಲಾದ ಅರಸುಗಳು ಏನುಬಲ್ಲರು; ಐದುವರ್ಷದ ವಯಸ್ಸುಳ್ಳ ಬಾಲಕನಾದ ಧ್ರುವನು ಸಪತ್ನೀ ಮಾತೃವಾದ ಸುರುಚಿಯ ವಾಕ್ಬಾಣಗಳಿಂದ ಭಿನ್ನವಾಗಿ ವ್ಯಥೆಪಡುತಲಿರುವ ಮನಸ್ಸಿನಿಂದ ಹೊರಟವನಾಗಿ ನನ್ನ ಆಜ್ಞೆಯನ್ನು ಶಿರಸ್ಸಿನಿಂದ ಗ್ರಹಿಸಿ ವನವನ್ನೈದಿ ಜಯಿಸಲಶಕ್ಯನಾದ ಭಗವಂತನನ್ನು ಜಯಿಸಿದನು; ಐದಾರು ವರ್ಷದ ಬಾಲಕನಾದ ಆ ಧ್ರುವನು ಸ್ವಲ್ಪದಿವಸಗಳಲ್ಲೇ ಭಗವಂತನನ್ನು ಪ್ರಸನ್ನನಾಗಿ ಮಾಡಿಕೊಂಡು ಯಾವ ಸ್ಥಾನವನ್ನೈದಿದನೋ ಅಂಥಾ ಸ್ಥಾನವನ್ನು ಮತ್ತಾವ ಕ್ಷತ್ರಿಯ ಶ್ರೇಷ್ಠನು ಅನೇಕ ವರ್ಷಗಳು ಯೋಗಿಯಾದಾಗ್ಯೂ ಐದುವದಕ್ಕೆ ಸಮರ್ಥನಾಗಲಾರನು—ಎಂದು ನಾರದಋಷಿಯು ಗಾನಂಗೈದನು!

ಆ ಬಳಿಕ ಮೈತ್ರೇಯಋಷಿಯು ವಿದುರನನ್ನು ಕುರಿತು "ಎಲೈ ವಿದುರನೆ, ನಿನ್ನಿಂದ ಪ್ರಶ್ನೆಮಾಡಲ್ಪಟ್ಟ ಅರ್ಥವು ನನ್ನಿಂದ ನಿರೂಪಿಸಲ್ಪಟ್ಟಿತು; ಅಧಿಕವಾದ ಕೀರ್ತಿಯುಳ್ಳ ಧ್ರುವರಾಯನ ಚರಿತ್ರೆಯು ಸತ್ಪುರುಷರಿಗೆ ಸಮ್ಮತವಾದದ್ದು; ಯಶಸ್ಕರವು; ಆಯುಷ್ಯಪ್ರದವು; ಪುಣ್ಯಪ್ರದವು; ಕ್ಷೇಮವನ್ನುಂಟುಮಾಡುವದು; ಸ್ವರ್ಗಸಾಧನವಾದದ್ದು; ಧ್ರುವಸ್ಥಾನಪ್ರಾಪಕವಾದದ್ದು; ಪುನಃ ಪ್ರಸಾದಕರವಾದದ್ದು; ಶ್ಲಾಘ್ಯವಾದದ್ದು; ಪಾಪಪರಿಹಾರಕವಾದದ್ದು; ಇಂಥಾ ಭಗವದ್ಭಕ್ತನ ಚರಿತ್ರೆಯನ್ನು ಶ್ರದ್ಧೆಯಿಂದ ಬಾರಿಬಾರಿಗೂ ಕೇಳುವ ಪುರುಷನಿಗೆ ಯಾವ ಭಗವಂತನ ಸ್ಮೃತಿಯಿಂದ ಕ್ಲೇಶಕ್ಷಯವಾಗುವದೋ ಅಂಥಾ ಭಗವಂತನ ಸ್ಮೃತಿಯನ್ನೈದುವನು! ಈ ಚರಿತ್ರವು ಮಾಹಾತ್ಮ್ಯವನ್ನಿಚ್ಛೈಸುವ ಜನರಿಗೆ ಮಾಹಾತ್ಮ್ಯಪ್ರದವಾದದ್ದು; ಕೇಳುವಂಥಾವರಿಗೆ ಸಚ್ಚರಿತ್ರಗಳು ಮುಂತಾದ ಸುಗುಣಗಳುಂಟಾಗುವವು; ಪರಾಕ್ರಮವನ್ನಿಚ್ಛೈಸುವ ಜನರಿಗೆ ಪರಾಕ್ರಮ ಸಂಪಾದಕವಾದದ್ದು; ಮಾನವನ್ನಪೇಕ್ಷಿಸುವ ಜನರಿಗೆ ಮಾನವನ್ನುಂಟುಮಾಡುವದು; ಪುಣ್ಯಶ್ಲೋಕನಾದ ಧ್ರುವನ ಚರಿತ್ರವನ್ನು ಪುರುಷನು ಪರಿಶುದ್ಧನಾಗಿ ಪ್ರಾತಃಕಾಲವಲ್ಲಿಯೂ ಸಾಯಂಕಾಲದಲ್ಲಿಯೂ ಬ್ರಾಹ್ಮಣ ಸಭಾಮಧ್ಯದಲ್ಲಿಯೂ ಪಠನಂಗೈಯಬೇಕು; ಪೌರ್ಣಮಿಯಲ್ಲಿ ಸಿನೀವಾಲಿಯಲ್ಲಿ ದ್ವಾದಶಿಯಲ್ಲಿ ಶ್ರವಣ ನಕ್ಷತ್ರದಲ್ಲಿ ಸಾಯಂಕಾಲದಲ್ಲಿ ವ್ಯತೀಪಾತದಲ್ಲಿ ಸಂಕ್ರಮಣವಲ್ಲಿ ಭಾನುವಾರದಲ್ಲಿ ತನ್ನಿಂದ ತಾನೇ ಸಂತುಷ್ಟನಾಗಿ ನಿಷ್ಕಾಮನಾಗಿ ಶ್ರದ್ಧಾವಂತರಾದ ಜನರಿಗೆ ಶ್ರವಣಂಗೈಸುವ ಪುರುಷನಿಗೆ ಭಗವಂತನ ಸ್ಥಾನ ಪ್ರಾಪ್ತಿಸಿದ್ಧಿಯುಂಟಾಗುವದು; ತತ್ವವನ್ನು ತಿಳಿಯದಿರುವ ಮೂಢರಿಗೆ ಭಗವಂತನ ಭಕ್ತಿಮಾರ್ಗದಲ್ಲಿ ಮೋಕ್ಷಸಾಧನವಾದ ಜ್ಞಾನವನ್ನು ಯಾರು ಉಪದೇಶಂಗೈವರೋ ಅಂಥಾ ದಯಾವಂತರಾಗಿ ದೀನಬಂಧುಗಳಾದ ಪುರುಷರಿಗೆ ದೇವತೆಗಳು ಪ್ರಸನ್ನರಾಗುವರು! ಎಲೈ ವಿದುರನೆ, ಯಾವ ಧ್ರುವನು ಬಾಲಕನಾಗಿರುವಾಗಲೇ ಆಟಗಳನ್ನು ಬಿಟ್ಟು ಮಾತೃಗೃಹವನ್ನು ಸಹಾ ಇಚ್ಛೈಸದೆ ವಿಷ್ಣುವನ್ನು ಶರಣುಹೊಂದಿದನೋ

ಅಂಥಾ ಪ್ರಸಿದ್ಧವಾಗಿ ಪರಿಶುದ್ಧ ಚರಿತ್ರೆಯುಳ್ಳ ಆ ಧ್ರುವನ ಚರಿತ್ರವು ನಿನಗೋಸ್ಕರ ನನ್ನಿಂದ ಹೇಳಲ್ಪಟ್ಟಿತು" ಎಂದು ಮೈತ್ರೇಯಋಷಿಯು ವಿದುರನನ್ನು ಕುರಿತು ನುಡಿದನು.

೧೩ನೇ ಅಧ್ಯಾಯ.

ಅಂಗರಾಯನ ಪುತ್ರನಾದ ವೇನನ ಚರಿತ್ರೆಯು.

"ಎಲೈ ಪರೀಕ್ಷಿದ್ರಾಯನೆ, ಈಪ್ರಕಾರವಾಗಿ ಮೈತ್ರೇಯಋಷಿಯಿಂದ ವರ್ಣಿಸಲ್ಪಟ್ಟ ಧ್ರುವರಾಯನ ವೈಕುಂಠದ ಪ್ರಾಪ್ತಿಯನ್ನು ಕೇಳಿ ವಿದುರನು ಭಗವಂತನಾದ ಅಧೋಕ್ಷಜನಲ್ಲಿ ಉತ್ಪನ್ನವಾದ ಭಕ್ತಿಯುಳ್ಳವನಾಗಿ ಪುನಃ ಮೈತ್ರೇಯಋಷಿಯನ್ನು ಕುರಿತು 'ಎಲೈ ಮೈತ್ರೇಯಋಷಿಯೆ, ಪ್ರಚೇತಸ್ಸುಗಳ ಸತ್ರಯಾಗದಲ್ಲಿ ನಾರದನು ಧ್ರುವರಾಯನ ಚರಿತ್ರವನ್ನು ಗಾನಂಗೈದನೆಂದು ನಿನ್ನಿಂದ ನಿರೂಪಿಸಲ್ಪಟ್ಟಿತು; ಆ ಪ್ರಚೇತಸ್ಸುಗಳು ಯಾರು? ಯಾರ ಮಕ್ಕಳು? ಯಾವ ವಂಶದಲ್ಲಿ ಪ್ರಖ್ಯಾತರು? ಯಾವ ಸ್ಥಳದಲ್ಲಿ ಸತ್ರಯಾಗವನ್ನು ಮಾಡಿದರು? ಯಾವ ನಾರದನಿಂದ ಶ್ರೀಹರಿ ಪೂಜಾವಿಧಿಯು ಪಾಂಚರಾತ್ರತಂತ್ರೋಕ್ತವಾದ ಕ್ರಿಯಾಯೋಗವು ಹೇಳಲ್ಪಟ್ಟಿತು? ದೇವದರ್ಶನವುಳ್ಳ ಆ ನಾರದಋಷಿಯನ್ನು ಪರಮಭಾಗವತನನ್ನಾಗಿ ನಾನು ತಿಳಿಯುತ್ತೇನೆ; ಸ್ವಧರ್ಮಶೀಲರಾದ ಪ್ರಚೇತಸ್ಸುಗಳಿಂದ ಯಜ್ಞಪುರುಷನಾದ ಭಗವಂತನು ಆರಾಧಿತನಾದನೆಂದು ನಾರದನಿಂದ ಹೇಳಲ್ಪಟ್ಟಿತು; ಆ ಸತ್ರಯಾಗದಲ್ಲಿ ದೇವರ್ಷಿಯಾದ ನಾರದನಿಂದ ವರ್ಣಿಸಲ್ಪಟ್ಟ ಭಗವತ್ಕಥೆಗಳನ್ನು ಕೇಳಲಿಚ್ಛೆಯುಳ್ಳ ನನಗೆ ನಿರೂಪಿಸು?" ಎಂದು ಪ್ರಶ್ನೆಗೈದನು.

ಮೈತ್ರೇಯಮುನಿಯು ವಿದುರನನ್ನು ಕುರಿತು "ಎಲೈ ವಿದುರನೇ, ಧ್ರುವರಾಯನ ಪುತ್ರನಾದ ಉತ್ಕಲನು ತಂದೆಯಾದ ಧ್ರುವನು ವನವನ್ನು ಕುರಿತು ತೆರಳಿ ಹೋದಮೇಲೆ ಸಾರ್ವಭೌಮಪದವನ್ನೂ ತಂದೆಯ ಸಿಂಹಾಸನವನ್ನೂ ಇಚ್ಛೈಸಲಿಲ್ಲ; ಅದೇನುಕಾರಣವೆಂದರೆ: ಆ ಉತ್ಕಲನು ಜನ್ಮ ಮೊದಲುಗೊಂಡು ಉಪಶಾಂತಚಿತ್ತನಾಗಿ ನಿಸ್ಸಂಗನಾಗಿ ಸಮಸ್ತ ಪ್ರಪಂಚಗಳಲ್ಲಿಯೂ ಸಮಸ್ತವನ್ನೂ ಆತ್ಮನನ್ನಾಗಿ ನೋಡುತ, ಅವಿಚ್ಛಿನ್ನವಾದ ಯೋಗಾಗ್ನಿಯಿಂದ ದಗ್ಧವಾದ ಕರ್ಮರೂಪವಾದ ಕಲ್ಮಷವುಳ್ಳ ಚಿತ್ತವುಳ್ಳವನಾಗಿ ಶಾಂತವಾದ ಅಖಂಡವಾದ ಜ್ಞಾನಸ್ವರೂಪವಾದ ಶಾಶ್ವತಾನಂದರೂಪವಾದ ಆತ್ಮಸ್ವರೂಪವನ್ನು ತಿಳಿಯುವನಾಗಿ ಮತ್ತೊಂದು ವಸ್ತುವನ್ನು ಬ್ರಹ್ಮವ್ಯತಿರಿಕ್ತವಾಗಿ ನೋಡಲಿಲ್ಲ; ಆ ಉತ್ಕಲನು ಜಡನಂತೆಯೂ ಅಂಧನಂತೆಯೂ ಕಿವುಡನಂತೆಯೂ ಉನ್ಮತ್ತನಂತೆಯೂ ಮೂಕನಂತೆಯೂ ಬಾಲಕನಂತೆಯೂ ಇರುವವನಾದಾಗ್ಯೂ ಆ ಜಡಾದಿಗಳ ಮಂದಬುದ್ಧಿಯಂತೆ ಮೂಢಬುದ್ಧಿಯುಳ್ಳವನಲ್ಲ; ಸರ್ವಜ್ಞನಾದ ಆ ಉತ್ಕಲನು ಶಾಂತವಾದ ಜ್ವಾಲೆಯುಳ್ಳ ಅಗ್ನಿಯಂತಿದ್ದನು; ಆಗ ಮಂತ್ರಿಸಹಿತರಾದ ಕುಲವೃದ್ಧರು ಆ ಉತ್ಕಲನನ್ನು ಜಡನನ್ನಾಗಿಯೂ ಉನ್ಮತ್ತನನ್ನಾಗಿಯೂ ತಿಳಿದು ಆತನ ತಮ್ಮನಾಗಿ ಭ್ರಮಿದೇವಿಗೆ ಕನಿಷ್ಠಪುತ್ರನಾದ ವತ್ಸರನನ್ನು ಅರಸನನ್ನಾಗಿ ಮಾಡಿದರು; ಆ ವತ್ಸರನ ಪ್ರಿಯಭಾರ್ಯೆಯಾದ ಸರ್ವರ್ಧಿಯು ಪುಷ್ಪಾರ್ಣನು ತಿಗ್ಮಕೇತುವು ಇಷನು ಊರ್ಜನು ವಸುವು ಜಯನು ಎಂಬ ಆರುಮಂದಿ ಪುತ್ರರನ್ನು ಹೆತ್ತಳು; ಪುಷ್ಪಾರ್ಣನಿಗೆ ಪ್ರಭಾ ದೋಷಾ ಎಂಬ ಈರ್ವರು ಪತ್ನಿಯರಾದರು; ಪ್ರಭಾದೇವಿಗೆ ಪ್ರಾತಃಕಾಲವು ಮಧ್ಯಾಹ್ನವು ಸಾಯಂಕಾಲವು ಎಂಬ ಮೂವರು ಪುತ್ರರಾದರು; ದೋಷಾದೇವಿಗೆ ಪ್ರದೋಷವು ನಿಶೀಥವು ವ್ಯುಷ್ಟನು ಎಂಬ ಮೂರುಮಂದಿ ಪುತ್ರರಾದರು; ವ್ಯುಷ್ಟನು ಪತ್ನಿಯಾದ ಪುಷ್ಕರಿಣಿಯಲ್ಲಿ ಚಕ್ಷುಸ್ಸು ಎಂಬ ಪುತ್ರನನ್ನು ಪಡೆದನು; ಆ ಚಕ್ಷುರಾಯನು ಪತ್ನಿಯಾದ ಆಕೂತಿಯಲ್ಲಿ ಮನುವೆಂಬ ಪುತ್ರನನ್ನು ಪಡೆದನು; ಮನು ಪತ್ನಿಯಾದ ನಡ್ವಲೆಯಲ್ಲಿ ದೋಷರಹಿತರಾದ ಪುರು ಕುರು ತ್ರಿತನು ದ್ಯುಮ್ನನು ಸತ್ಯನು

ಅಂತನು ವ್ರತವ್ರತನು ಅಗ್ನಿಷ್ಟೋಮನು ಅತಿರಾತ್ರನು ಸುದ್ಯುಮ್ನನು ಶಿಬಿಯು ಉಲ್ಮುಕನು ಎಂಬ ಹನ್ನೆರಡು ಮಂದಿ ಪುತ್ರರನ್ನು ಪಡೆದಳು ; ಉಲ್ಮುಕನು ಪುಷ್ಕರಣಿ ಎಂಬ ತನ್ನ ಪತ್ನಿಯಲ್ಲಿ ಅಂಗನು ಸುಮನಸ್ಸು ಖ್ಯಾತಿಯು ಕ್ರತುವು ಅಂಗಿರಸ್ಸು ಗಯನು ಎಂಬ ಉತ್ತಮರಾದ ಆರುಮಂದಿ ಪುತ್ರರನ್ನು ಪಡೆದನು ; ಅಂಗರಾಯನ ಪತ್ನಿಯಾದ ಸುನೀಥಾದೇವಿಯು ದುಷ್ಟನಾದ ವೇನನೆಂಬ ಪುತ್ರನನ್ನು ಹೆತ್ತಳು ; ಆ ಪುತ್ರನ ದುಷ್ಟವ್ಯಾಪಾರದಿಂದ ರಾಜಋಷಿಯಾದ ಅಂಗರಾಯನು ದುಃಖಿತನಾಗಿ ಪುರವನ್ನು ಬಿಟ್ಟು ಹೊರಟುಹೋಗಲು ಮುನಿಗಳು ಕುಪಿತರಾಗಿ ವಜ್ರಾಯುಧಕ್ಕೆ ಸಮಾನಗಳಾದ ವಾಕ್ಯಗಳಿಂದ ಆ ವೇನನನ್ನು ಶಪಿಸಿದರು ; ವೇನನು ಮೃತನಾದಮೇಲೆ ಅರಾಜಕವಾದ ದೇಶದಲ್ಲಿ ಚೋರಾದಿಗಳ ಉಪದ್ರವವು ಅಧಿಕವಾಗಲು ಋಷಿಗಳು ಆ ವೇನನ ಬಲದಭುಜವನ್ನು ಮಥಿಸಿದರು ; ಆಗ ಆದಿರಾಜನಾದ ಪೃಥುರಾಯನು ನಾರಾಯಣಾಂಶದಿಂದ ಅವತರಿಸಿದನು ” ಎಂದು ನುಡಿದನು.

ಆ ವಾಕ್ಯವನ್ನು ಕೇಳಿ ವಿದುರನು ‘ಎಲೈ ಮೈತ್ರೇಯ ಮುನಿಯೆ, ಸಚ್ಚರಿತ್ರನಿಧಿಯಾಗಿ ಸಾಧುವಾಗಿ ಬ್ರಾಹ್ಮಣಪ್ರಿಯನಾಗಿ ಮಹಾತ್ಮನಾದ ಅಂಗರಾಯನಿಗೆ ದುಷ್ಟನಾದ ಪುತ್ರನು ಏನುಕಾರಣ ಜನಿಸಿದನು ? ಆ ಪುತ್ರನ ನಿಮಿತ್ತವಾಗಿ ಪುನಃ ಕ್ಲೇಶವುಳ್ಳವನಾಗಿ ಅರಣ್ಯಕ್ಕೆ ಯಾಕೆ ಹೋದನು ? ಧರ್ಮಜ್ಞರಾದ ಮುನಿಗಳು ಯಾವದೋಷವನ್ನುದ್ದೇಶಿಸಿ ದುಷ್ಟನಿಗ್ರಹಪರನಾದ ಆ ವೇನನಲ್ಲಿ ಬ್ರಹ್ಮದಂಡರೂಪವಾದ ಶಾಪವನ್ನು ಪ್ರಯೋಗಿಸಿದರು ? ಅರಸಾದವನು ಅಷ್ಟದಿಕ್ಪಾಲಕರ ತೇಜಸ್ಸನ್ನು ಧರಿಸುವವನಾದಕಾರಣ ಪಾಪಿಷ್ಠನಾದಾಗ್ಯೂ ಪ್ರಜೆಗಳಿಂದ ಅವಮಾನವನ್ನು ಮಾಡಿಸಿಕೊಳ್ಳಲು ಯೋಗ್ಯನಲ್ಲವಲ್ಲ ! ಎಲೈ ಮೈತ್ರೇಯ ಋಷಿಯೇ, ನೀನು ಪರಾಪರವೇತೃಗಳಲ್ಲಿ ಶ್ರೇಷ್ಠನಾದಕಾರಣ ಶ್ರದ್ಧಾವಂತನಾಗಿ ಕೇಳಲಿಚ್ಛೆಯುಳ್ಳ ನನಗೆ ಸುನೀಥಾದೇವಿಯ ಪುತ್ರನಾದ ವೇನರಾಯನ ಚರಿತ್ರವನ್ನು ನಿರೂಪಿಸುವನಾಗು’ ಎಂದು ಕೇಳಿದನು.

“ಎಲೈ ವಿದುರನೆ, ಬಂದಾನೊಂದುಕಾಲದಲ್ಲಿ ಅಂಗರಾಯನು ಮಹಾಕ್ರತುವಾದ ಅಶ್ವಮೇಧ ಯಾಗವನ್ನು ಪಕ್ರಮಿಸಿ ಆ ಯಜ್ಞದಲ್ಲಿ ಬ್ರಹ್ಮವೇತೃಗಳಾದ ಮಹರ್ಷಿಗಳಿಂದ ಕರೆಯಲ್ಪಡಲು ದೇವತೆಗಳು ಬರಲಿಲ್ಲ ; ಅನಂತರದಲ್ಲಿ ಆ ಋತ್ವಿಕ್ಕುಗಳು ಆಶ್ಚರ್ಯಪಟ್ಟವರಾಗಿ ಯಜಮಾನನಾದ ಅಂಗರಾಯನನ್ನು ಕುರಿತು ‘ಎಲೈ ಅರಸೆ, ಹೋಮಂಗೈಯಲ್ಪಟ್ಟ ನಿನ್ನ ಹವಿರ್ಭಾಗಗಳನ್ನು ದೇವತೆಗಳು ಪರಿಗ್ರಹಿಸುವದಿಲ್ಲ ; ಹವಿಸ್ಸುಗಳು ನಿರ್ದೋಷಗಳಾಗಿ ಶ್ರದ್ಧಾಪೂರ್ವಕವಾಗಿ ನಮ್ಮಿಂದ ಸಂಸ್ಕೃತಗಳಾಗಿವೆ ; ವ್ರತನಿಯಮಸಂಪನ್ನರಾದ ನಮ್ಮಿಂದ ವೀರ್ಯವತ್ತುಗಳಾದ ಮಂತ್ರಗಳು ಪ್ರಯೋಗಿಸಲ್ಪಟ್ಟಿವೆ ; ನಾವು ದೇವತೆಗಳ ವಿಷಯದಲ್ಲಿ ಸ್ವಲ್ಪವಾದರೂ ಅಪರಾಧವನ್ನರಿಯೆವು ; ಆದಾಗ್ಯೂ ಕರ್ಮಸಾಕ್ಷಿಗಳಾದ ದೇವತೆಗಳು ತಮ್ಮ ತಮ್ಮ ಹವಿರ್ಭಾಗಗಳನ್ನು ಯಾಕೆ ಗ್ರಹಿಸುವದಿಲ್ಲ ?’ ಎಂದು ಪಶ್ಚಾತ್ತಾಪಪಟ್ಟರು.

“ಆ ಋತ್ವಿಕ್ಕುಗಳ ವಾಕ್ಯವನ್ನು ಕೇಳಿ ಅಂಗರಾಯನು ವ್ಯಸನಪಡುತ ಆ ನಿಮಿತ್ತವನ್ನು ಕೇಳಲೋಸುಗ ಸಭಾಜನರ ಅನುಜ್ಞೆಯಿಂದ ಮೌನವನ್ನುಬಿಟ್ಟು ಮಾತನಾಡಿದನು ! ‘ಎಲೈ ಸಭಾನಾಯಕರಾದ ಬ್ರಾಹ್ಮಣೋತ್ತಮರುಗಳಿರಾ, ಕರೆಯಲ್ಪಟ್ಟಾಗ್ಯೂ ದೇವತೆಗಳು ಯಾಕೆ ಬರುವದಿಲ್ಲ ? ಸೋಮಪಾತ್ರೆಗಳನ್ನು ಯಾಕೆ ಗ್ರಹಿಸುವದಿಲ್ಲ ? ನನ್ನಿಂದ ಏನು ಅಪರಾಧವು ಆಚರಿಸಲ್ಪಟ್ಟಿದೆ ; ಅದನ್ನುನನಗೆ ಹೇಳುವವರಾಗಿರಿ’ ಎಂಬ ರಾಜವಾಕ್ಯವನ್ನು ಕೇಳಿ ಬ್ರಾಹ್ಮಣರು ‘ಎಲೈ ಅರಸೆ, ಈ ಜನ್ಮದಲ್ಲಿ ನೀನು ಸ್ವಲ್ಪವಾದ ಪಾಪವನ್ನು ಮಾಡಿದವನಲ್ಲ ; ಪೂರ್ವಜನ್ಮದಲ್ಲಿ ಮಾಡಲ್ಪಟ್ಟ ಪಾಪವು ಸ್ವಲ್ಪವಿದೆ ; ನೀನು ಏತಾದೃಶ ಗುಣವಂತನಾದಾಗ್ಯೂ ಅಪುತ್ರನಾಗಿದ್ದೀಯೇ ; ಆ ದೋಷದಿಂದ ದೇವತೆಗಳು ಬರಲಿಲ್ಲ ! ಎಲೈ ಅರಸೆ, ನೀನು ಅದರಿಂದ ಪುತ್ರನನ್ನು ಪಡೆಯಲು ಭಗವಂತನನ್ನು ಆರಾಧಿಸು ; ಪುತ್ರಕಾಮನಾದ ನಿನ್ನಿಂದ ಆರಾಧಿತನಾದ ಭಗವಂತನು ನಿನಗೆ ಪುತ್ರನನ್ನು ಕೊಡುತ್ತಾನೆ ; ಸಾಕ್ಷಾದ್ಯಜ್ಞಪುರುಷನಾದ ಶ್ರೀಹರಿಯು ಪುತ್ರಾರ್ಥವಾಗಿ ನಿನ್ನಿಂದ ಆರಾಧಿಸಲ್ಪಟ್ಟರೆ ಪ್ರಸನ್ನನಾದ ಶ್ರೀಹರಿಯೊಡನೆ ಸಮಸ್ತ

ದೇವತೆಗಳು ಬಂದು ತಮ್ಮ ತಮ್ಮ ಹವಿರ್ಭಾಗಗಳನ್ನು ಸ್ವೀಕರಿಸುತ್ತಾರೆ ; ಪುರುಷನು ಯಾವ ಯಾವ ಇಷ್ಟಾರ್ಥಗಳನ್ನು ಅಪೇಕ್ಷಿಸುವನೋ ಆಯಾ ಇಷ್ಟಾರ್ಥಗಳನ್ನು ಶ್ರೀಹರಿಯ ಅನುಗ್ರಹದಿಂದ ಪಡೆಯುವನು' ಎಂದು ಬುದ್ಧಿಯಿಂದ ನಿಶ್ಚಯಿಸಿ ಋಷಿಗಳು ಅರಸಿಗೆ ಪುತ್ರೋತ್ಪತ್ತಿ ನಿಮಿತ್ತವಾಗಿ ಪಶುಗಳಲ್ಲಿ ಯಜ್ಞರೂಪದಿಂದಿರುವ ಶ್ರೀವಿಷ್ಣುವಿಗೋಸ್ಕರ ಪುರೋಡಾಶವನ್ನು ನಿರ್ವಾಪಣಮಾಡಿದರು ; ಆಗ ಸುವರ್ಣಾಲಂಕೃತನಾಗಿ ನಿರ್ಮಲವಾದ ವಸ್ತ್ರವುಳ್ಳ ದಿವ್ಯಪುರುಷನು ಸ್ವರ್ಣಮಯವಾದ ಪಾತ್ರೆಯಿಂದ ಸಿದ್ಧವಾದ ಪಾಯಸವನ್ನು ತೆಗೆದುಕೊಂಡು ಅಗ್ನಿಯ ದೆಸೆಯಿಂದ ಎದ್ದುಬಂದನು ; ಆಗ ಅಂಗರಾಯನು ಬ್ರಾಹ್ಮಣಾನುಮತಿಯಿಂದ ತನ್ನ ಅಂಜಲಿಯಿಂದ ಆ ಪಾಯಸವನ್ನು ಗ್ರಹಿಸಿ ಸಂತೋಷಯುಕ್ತನಾಗಿ ಆಘ್ರಾಣಮಾಡಿದು ಪತ್ನಿಗೆ ಕೊಟ್ಟನು ; ಆ ಪತ್ನಿಯು ಪುಂಪ್ರಜೋತ್ಪಾದಕವಾದ ಆ ಪಾಯಸವನ್ನು ಭಕ್ಷಿಸಿ ಗರ್ಭವನ್ನು ಧರಿಸಿ ಪ್ರಸವಕಾಲವು ಪ್ರಾಪ್ತವಾಗಲು ಒಬ್ಬ ಪುತ್ರನನ್ನು ಹೆತ್ತಳು ; ಆ ಕುಮಾರನು ಬಾಲ್ಯದಲ್ಲೇ ಕ್ರೂರನಾಗಿ ಅಧರ್ಮಾಂಶೋದ್ಭವನಾದ ಮಾತಾಮಹನಾದ ಮೃತ್ಯುವನ್ನೇ ಹೋಲುವನಾಗಿ ಅಧಾರ್ಮಿಕನಾದನು ; ಸುನೀಥಾದೇವಿಯು ಮೃತ್ಯುವಿನ ಪುತ್ರಿಯಾದ್ದರಿಂದ ಮೃತ್ಯುವು ಮಾತಾಮಹನು ; ವೇನನೆಂಬ ಆ ಕುಮಾರನು ದುಷ್ಟನಾಗಿ ಧನುಸ್ಸನ್ನು ಧರಿಸಿ ವನದಲ್ಲಿ ಬೇಟೆಗೆ ಹೋಗಿ ದೀನಗಳಾದ ಮೃಗಗಳನ್ನು ಸಂಹರಿಸುತ್ತಿದ್ದನು ; ಜನರು ಇವನನ್ನು ನೋಡಿ ಆಕ್ರೋಶಪಡುತ್ತಿದ್ದರು ; ಅತಿಕ್ರೂರನಾದ ಆ ವೇನನು ದಯಾರಹಿತನಾಗಿ ಸಂಗಡ ಆಡುತಲಿರುವ ಸಮಾನವಯಸ್ಕರಾದ ಮಿತ್ರರನ್ನು ಬಲಾತ್ಕಾರದಿಂದ ಹಿಡಿದು ಪಶುಗಳನ್ನು ಸಂಹರಿಸುವಂತೆ ಸಂಹರಿಸುತ್ತಿದ್ದನು ; ಅಂಗರಾಯನು ದುರ್ಜನನಾದ ಆ ಮಗನ ವ್ಯಾಪಾರವನ್ನು ನೋಡಿ ನಾನಾಪ್ರಕಾರಗಳಾದ ಶಿಕ್ಷೆಗಳಿಂದ ದಂಡಿಸಿದಾಗ್ಯೂ ಸ್ವಾಧೀನನಾಗದಿರಲು ಅತ್ಯಂತ ದುಃಖಿತಮನಸ್ಕನಾಗಿ ಯಾರು ದುಷ್ಪುತ್ರರಿಂದ ಉಂಟಾದ ದುಃಖವನ್ನರಿಯರೋ ಆ ಪುರುಷರು ಅಪುತ್ರರಾದಾಗ್ಯೂ ಅವರೇ ಈಶ್ವರಪೂಜೆಯನ್ನು ಮಾಡಿದವರು ; ಯಾವ ದುಷ್ಪುತ್ರರ ದೆಸೆಯಿಂದ ಅಪಕೀರ್ತಿಯೂ ಮಹತ್ತಾದ ಅಧರ್ಮವೂ ಸಂಭವಿಸುವದೋ ಅಂಥಾ ದುಷ್ಪುತ್ರರ ಸಂಗವು ಆಗಬಾರದು ; ಯಾವ ದುಷ್ಪುತ್ರರ ಸಂಗತಿಯಿಂದ ಗೃಹಸ್ಥಾಶ್ರಮಗಳು ಕ್ಲೇಶಪ್ರದಗಳೋ ಅಂಥಾ ಪುತ್ರನೆಂಬ ನಾಮಾಂತರವುಳ್ಳ ಮೋಹಬಂಧಸ್ವರೂಪನಾಗ ದುಷ್ಟಪ್ರಾಣಿಯನ್ನು ಪಂಡಿತನಾದವನು ಬಹುಮಾನಿಸಬಾರದು ; ಅಥವಾ ಒಂದುಪಕ್ಷದಲ್ಲಿ ದುಷ್ಟಪುತ್ರನನ್ನೇ ಉತ್ತಮನನ್ನಾಗಿ ತಿಳಿದರೆ ದುಃಖಾಸ್ಪದನಾದ ದುಷ್ಟಪುತ್ರನಿಂದ ನಿರ್ವಿಣ್ಣನಾಗಿ ದುಃಖಪ್ರದಗಳಾದ ಗೃಹಾದಿಗಳನ್ನು ತ್ಯಜಿಸಿ ಪುರುಷನು ಉಪಶಾಂತನಾಗುವನು—ಎಂದು ಆಲೋಚಿಸಿ ನಿರ್ವಿಣ್ಣಮನಸ್ಕನಾಗಿ ಅಂಗರಾಯನು ಸಮಸ್ತ ಸಂಪತ್ತುಗಳಿಗೂ ಆವಾಸಸ್ಥಾನವಾದ ತನ್ನ ಗೃಹವನ್ನು ಬಿಟ್ಟು ಅರ್ಧರಾತ್ರಿ ಸಮಯದಲ್ಲಿ ನಿದ್ರೆಯನ್ನು ತ್ಯಜಿಸಿ ಬೇರೆಯವರ ನೇತ್ರಗಳಿಗೂ ಗೋಚರನಾಗದೆ ಮಲಗಿರುವ ಪತ್ನಿಯಾದ ಸುನೀಥೆಯನ್ನು ಸಹಾ ಬಿಟ್ಟು ಹೊರಟು ಹೋದನು ; ಅನಂತರದಲ್ಲಿ ಪುರೋಹಿತರು ಮಂತ್ರಿಗಳು ಮಿತ್ರರು ಮುಂತಾದ ಪ್ರಜೆಗಳು ವ್ಯಸನಯುಕ್ತರಾಗಿ ಹೊರಟುಹೋದ ಪ್ರಭುವಾದ ಅಂಗರಾಯನನ್ನು ತಿಳಿದು ಶೋಕದಿಂದ ಪೀಡಿತರಾಗಿ ಭೂಮಿಯೆಲ್ಲವನ್ನು (ಕುಯೋಗಿಗಳು ಗೂಢನಾದ ಪರಮಾತ್ಮನನ್ನು ಕಾಣದೇ ಹ್ಯಾಗೆ ಹುಡುಕುವರೋ) ಹಾಗೆ ಹುಡುಕಿದರು ! ಎಲೈ ವಿದುರನೇ, ಸಮಸ್ತ ಪ್ರಜೆಗಳು ಅಂಗರಾಯನ ಮಾರ್ಗವನ್ನು ಕಾಣದೆ ವ್ಯರ್ಥವಾದ ಪ್ರಯತ್ನವುಳ್ಳವರಾಗಿ ಹಿಂದಿರಿಗಿ ಊರಿಗೆ ಬಂದು ಕೂಡಿರುವ ಋಷಿಗಳಿಗೆ ನಮಸ್ಕರಿಸಿ ರೋದನಮಾಡುತ್ತ ಅರಸು ಸಿಕ್ಕಲಿಲ್ಲವೆಂದು ವಿಜ್ಞಾಪಿಸಿದರು."

೧೪ನೇ ಅಧ್ಯಾಯ.

ಅಂಗರಾಯನು ಹೊರಟು ಹೋಗಲಾಗಿ ಅಭಿಷಿಕ್ತನಾದ ವೇನನ ದುಷ್ಕೃತ್ಯದಿಂದ ಬ್ರಾಹ್ಮಣರು ಶಪಿಸಿದ್ದು.

ಅನಂತರದಲ್ಲಿ ಭೃಗು ಮೊದಲಾದ ಋಷಿಗಳು ಲೋಕಗಳಿಗೆ ಕ್ಷೇಮವನ್ನಾಲೋಚಿಸಿ ಪ್ರಜಾಪಾಲಕನಾದ ಅಂಗರಾಯನಿಲ್ಲದ್ದರಿಂದ ಪ್ರಜೆಗಳು ಪಶುಗಳಂತೆ ವಾಮವರ್ತನೆಗಳಲ್ಲದೆ ಸಂಕರವ್ಯಾಪಾರವನ್ನು ಮಾಡುತ ಕೆಟ್ಟ

ಹೋಗುತ್ತಾರೆಂದು ತಿಳಿದು ಬ್ರಹ್ಮವಾದಿಗಳಾದ ಋಷಿಗಳು ವೇನನ ಮಾತೃವಾದ ಸುನೀಥಾದೇವಿಯನ್ನು ಕರದು ಪ್ರಜೆಗಳಿಗೆ ಅಸಮ್ಮತನಾದ ವೇನನನ್ನು ಭೂಪತಿಯನ್ನಾಗಿಮಾಡಿ ಪಟ್ಟಾಭಿಷೇಕಂಗೈದರು ; ಅತ್ಯುಗ್ರಶಾಸನನಾದ ವೇನನು ರಾಜ್ಯಾಧಿಪತಿಯಾದ ಅರ್ಥವನ್ನು ತಿಳಿದು ಚೋರಾದಿಗಳು ಸರ್ಪಗಳಿಂದ ಭಯಪಡುವ ಇಲಿಗಳಂತೆ ಅಲ್ಲಲ್ಲೇ ಅಡಗಿದರು ; ಆಗ ವೇನನು ಅಷ್ಟದಿಕ್ಪಾಲಕರ ಐಶ್ವರ್ಯಗಳಿಂದ ಕೊಬ್ಬಿದವನಾಗಿ ಸ್ತಬ್ಧನಾಗಿ ತಾನೇ ಈಶ್ವರನೆಂದು ತಿಳಿದು ಮಹಾತ್ಮರಾದ ಋಷಿಗಳನ್ನು ಅವಮಾನಂಗೈದನು ; ಈರೀತಿ ಮದಾಂಧನಾಗಿ ಕೊಬ್ಬಿ ಅಂಕುಶರಹಿತವಾದ ಆನೆಯಂತೆ ಸ್ವೇಚ್ಛಾವಿಹಾರಿಯಾಗಿ ರಥಾರೂಢನಾಗಿ ಭೂವ್ಯಾಕಾಶಗಳನ್ನು ತಪಿಸುವಂತೆ ಮಾಡುತ ತನ್ನ ರಾಜ್ಯದಲ್ಲಿ ಯಾಗಗಳನ್ನೂ ದಾನಗಳನ್ನೂ ಹೋಮಗಳನ್ನೂ ಮಾಡಕೆಲಸವಿಲ್ಲವೆಂದು ತುಡುಮು ಹಾಕಿಸಾರಿಸಿದನು ; ಆಗ ಮಹರ್ಷಿಗಳು ದುರ್ವೃತ್ತನಾದ ವೇನನ ದುಶ್ಚೇಷ್ಟೆಯನ್ನು ತಿಳಿದು ಲೋಕಕ್ಕೆ ಬಂದ ವ್ಯಸನವನ್ನಾಲೋಚಿಸಿ ಎಲ್ಲರೂ ಕೂಡಿ ಕೃಪೆಯಿಂದ ಉಭಯಭಾಗಗಳಲ್ಲಿಯೂ ಹತ್ತಿ ಉರಿಯುವ ಕಾಷ್ಠಮಧ್ಯದಲ್ಲಿ ಶೇರಿಕೊಂಡಿರುವ ಇರುವೆ ಮೊದಲಾದ ಪ್ರಾಣಿಗಳಿಗೆ ಬಂದ ಉಪದ್ರವದಂತೆ ಪ್ರಜೆಗಳಿಗೆ ಎರಡು ಪ್ರಕಾರದಿಂದಲೂ ಉಪದ್ರವ ಉಂಟಾಯಿತು ; ಅರಸು ಇಲ್ಲದಿದ್ದರೆ ಚೋರಾದಿಗಳಿಂದ ಉಪದ್ರವ ಉಂಟಾಗುವದು ; ಮತ್ತು ರಾಜ್ಯವು ಅರಾಜಕವಾಗುತ್ತೆಂಬ ಭಯದಿಂದ ರಾಜ್ಯಕ್ಕೆ ಯೋಗ್ಯನಲ್ಲದ ಈ ವೇನನನ್ನು ಅರಸನ್ನಾಗಿ ಮಾಡಿದೆವು ; ಅವನಿಂದಲೇ ಈಗ ಮಹೋಪದ್ರವ ಉಂಟಾಗಿದೆ ; ಹೀಗಾದರೆ ಪ್ರಜೆಗಳಿಗೆ ಹ್ಯಾಗೆ ಕ್ಷೇಮವುಂಟಾದೀತು ; ಸರ್ಪಕ್ಕೆ ಕ್ಷೀರವನ್ನು ಕೊಟ್ಟು ಪೋಷಿಸಿದರೆ ಪೋಷಕನಾದವನಿಗೆ ಹ್ಯಾಗೆ ಉಪದ್ರವ ಉಂಟಾಗುವದೋ ಹಾಗೆ ನಮ್ಮಿಂದ ರಾಜ್ಯದಲ್ಲಿ ಅಭಿಷಿಕ್ತನಾಗಿ ಸ್ವಭಾವದಿಂದಲೇ ದುಷ್ಟನಾದ ಈ ವೇನನಿಂದ ನಮಗೂ ಉಪದ್ರವವಾಗಿರುವದು ; ಪ್ರಜಾಪಾಲನಾರ್ಥವಾಗಿ ನಮ್ಮಿಂದ ನೇಮಿಸಲ್ಪಟ್ಟ ಈತನು ಪ್ರಜೆಗಳನ್ನು ಸಂಹರಿಸಲಿಚ್ಛೈಸುತ್ತಾನೆ; ಆದಾಗ್ಯೂ ನಾವು ಯುಕ್ತವಾದ ಅರ್ಥವನ್ನುಪದೇಶಿಸಿ ಇವನನ್ನು ಒಡಂಬಡಿಸೋಣ ; ನಾವು ಸುಮ್ಮನಿದ್ದರೆ ಆ ಪಾಪವು ನಮಗೆ ಬಂದೀತು ; ಇವನ ದುಷ್ಟಭಾವವನ್ನು ನಾವು ತಿಳಿದವರಾದಾಗ್ಯೂ ನೃಪನನ್ನಾಗಿ ಮಾಡಿದೆವು ; ಈಗ ನಮ್ಮ ಪ್ರಾರ್ಥನೆಯನ್ನು ಅಧರ್ಮಕಾರಿಯಾಗಿ ಲೋಕಧಿಕ್ಕಾರದಿಂದಲೇ ದಗ್ಧನಾದ ಈ ವೇನನು ಅಂಗೀಕರಿಸದೆ ಹೋದಪಕ್ಷದಲ್ಲಿ ಈತನನ್ನು ನಮ್ಮ ತೇಜಸ್ಸಿನಿಂದ ದಹಿಸಿಬಿಡೋಣವೆಂದು ನಿಶ್ಚಯಿಸಿ ಗೂಢವಾದ ಕೋಪವುಳ್ಳ ಋಷಿಗಳು ಆತನ ಸಮೀಪಕ್ಕೆ ಹೋಗಿ ಒಳ್ಳೇಮಾತುಗಳಿಂದ ಒಡಂಬಡಿಸುತ “ಎಲೈ ರಾಜಶ್ರೇಷ್ಠನೇ, ನಿನಗೆ ಆಯುಸ್ಸು ಬಲವು ಸಂಪತ್ತು ಕೀರ್ತಿಯು ಇವು ವೃದ್ಧಿಯನ್ನೈದಿಸುವ ಒಂದು ಅರ್ಥವನ್ನು ವಿಜ್ಞಾಪನಂಗೈಯ್ಯುತ್ತೇವೆ ಲಾಲಿಸು ; ಸಿಷ್ಟಾಮರಾದ ಪುರುಷರಿಂದ ಮನೋವಾಕ್ಕಾಯ ವೃತ್ತಿಗಳಿಂದ ಆಚರಿಸಲ್ಪಟ್ಟ ಧರ್ಮವು ಲೋಕಗಳನ್ನು ಸುಖಪಡಿಸುವದಲ್ಲದೆ ಮೋಕ್ಷಸಾಮ್ರಾಜ್ಯವನ್ನೂ ಕೊಡುವದು ! ಎಲೈ ವೀರನಾದ ಅರಸೇ, ಯಾವ ಧರ್ಮವು ನಷ್ಟವಾದರೆ ಅರಸು ಐಶ್ವರ್ಯದಿಂದ ಚ್ಯುತನಾಗುವನೋ ದುರ್ಮಂತ್ರಿಗಳ ದೆಶೆಯಿಂದಲೂ ಚೋರಾದಿಗಳ ದೆಶೆಯಿಂದಲೂ ಪ್ರಜೆಗಳು ಪೀಡಿತರಾಗುವರೋ ಅಂಥಾ ಧರ್ಮವನ್ನಾಚರಿಸಬೇಡ ; ಯಥಾಶಾಸ್ತ್ರವಾಗಿ ಪ್ರಜೆಗಳನ್ನು ರಕ್ಷಿಸುತ ಕಂದಾಯ ಕಾಣಿಕೆಗಳನ್ನು ನ್ಯಾಯಾನುಸಾರವಾಗಿ ಗ್ರಹಿಸುತ ಧರ್ಮವನ್ನತಿಕ್ರಮಿಸದಿರುವ ನೃಪನು ಇಹಲೋಕದಲ್ಲಿಯೂ ಪರಲೋಕದಲ್ಲಿಯೂ ಸಂತೋಷಪಡುವನು ! ಎಲೈ ಮಹಾರಾಜನೆ, ಯಾವ ಅರಸನ ದೇಶದಲ್ಲಿ ಭಗವಂತನಾಗಿ ಭೂತಭಾವನನಾದ ಪರಮಾತ್ಮನು ಸ್ವಸ್ವವರ್ಣಾಶ್ರಮಧರ್ಮಗಳನ್ನು ಅತಿಕ್ರಮಿಸದಿರುವ ಜನರಿಂದ ಆರಾಧಿಸಲ್ಪಡುವನೋ ಅಂಥಾ ಆಜ್ಞಾನುವರ್ತಿಯಾದ ಅರಸನ ವಿಷಯದಲ್ಲಿ ಭಗವಂತನೂ ಭೂತಭಾವನನೂ ವಿಶ್ವಾತ್ಮನೂ ಆದ ಶ್ರೀಹರಿಯು ಸಂತುಷ್ಟನಾಗುವನು ; ಜಗದೀಶ್ವರರಿಗೂ ಈಶ್ವರನಾದ ಭಗವಂತನು ಸಂತುಷ್ಟನಾದರೆ ಆ ಪುರುಷನಿಗೆ ಯಾವದುತಾನೇ ಅಸಾಧ್ಯವು ; ಲೋಕಗಳಲ್ಲಿರುವ ಸನಾಥರಾದ ಸಮಸ್ತರೂ ಆದರಪೂರ್ವಕವಾಗಿ ಆ ಪುರುಷನಿಗೆ ಕಾಣಿಕೆಗಳನ್ನು ಕೊಡುವರು ! ಎಲೈ ಅರಸೇ, ಸಮಸ್ತಲೋಕಗಳಿಗೂ ದೇವತೆಗಳಿಗೂ ಯಜ್ಞಗಳಿಗೂ ನಿಯಾಮಕನಾಗಿ ವೇದಮಯನಾಗಿ ದ್ರವ್ಯಮಯನಾಗಿ ತಪೋಮಯನಾಗಿರುವ ಆ ಭಗವಂತನನ್ನು ನಾನಾವಿಧಗಳಾದ ಯಜ್ಞಗಳಿಂದ ಆರಾಧಿಸುವ ನಿನ್ನ ದೇಶದಲ್ಲಿರುವ ಜನರನ್ನು ಶ್ರೇಯಸ್ಸಿಗೋಸ್ಕರ ಅನುಸರಿಸು ; ಬ್ರಾಹ್ಮ

೧ರಿಂದ ವಿಸ್ತರಿಸಲ್ಪಟ್ಟ ಯಜ್ಞದಿಂದ ಭಗವದಂಶಭೂತರಾದ ದೇವತೆಗಳು ಆರಾಧಿತರಾಗಿ ಸಂತುಷ್ಟರಾಗಿ ಇಷ್ಟಾರ್ಥಗಳನ್ನು ಕೊಡುವರು! ಎಲೈ ವೀರನಾದ ಅರಸೇ, ಅಂಥಾ ವೇದನಿಂದೆಯನ್ನು ಮಾಡಬೇಡ'' ಎಂದು ಮಹರ್ಷಿಗಳು ನುಡಿದರು.

''ಆ ವಚನವನ್ನು ಕೇಳಿ ಅರಸು 'ಎಲೈ ಋಷಿಗಳಿರಾ, ನೀವು ಅಧರ್ಮದಲ್ಲಿ ಧರ್ಮವೆಂಬ ಅಭಿಮಾನವುಳ್ಳವರು; ಜೀವನಪ್ರದನಾದ ಪತಿಯನ್ನು ಬಿಟ್ಟು ಮತ್ತ್ಯಾರನ್ನು ಆಶ್ರಯಿಸುತ್ತೀರಿ? ಯಾವ ಮೂಢರು ನೃಪರೂಪನಾದ ಈಶ್ವರನನ್ನು ಅವಮಾನಗೈಯುತ್ತಾರೆಯೋ ಅವರು ಇಹಲೋಕದಲ್ಲಿಯೂ ಪರಲೋಕದಲ್ಲಿಯೂ ಶುಭವನ್ನೈದುವದಿಲ್ಲ; ಯಾವ ಯಜ್ಞಪುರುಷನಲ್ಲಿ ನಿಮಗೆ ಇಂಥಾ ಭಕ್ತಿಯು ಉಂಟಾಗಿದೆಯೋ ಆ ಯಜ್ಞಪುರುಷನು ಯಾರು? ಪತಿಭಕ್ತಿರಹಿತರಾದ ದುಷ್ಟಸ್ತ್ರೀಯರಿಗೆ ಜಾರಪುರುಷನಲ್ಲಿ ಭಕ್ತಿಯುಂಟಾದ ರೀತಿಯಲ್ಲಿ ನಿಮಗೆ ಭಕ್ತಿಯುಂಟಾಗಿದೆ; ನಾರಾಯಣನು ಬ್ರಹ್ಮದೇವನು ಪರಮೇಶ್ವರನು ಇಂದ್ರನು ವಾಯುವು ಯಮನು ರವಿಯು ಪರ್ಜನ್ಯನು ಕುಬೇರನು ಚಂದ್ರನು ಭೂಮಿಯು ಅಗ್ನಿಯು ವರುಣನು ಶಾಪಾನುಗ್ರಹ ಸಮರ್ಥರಾದ ಈ ದೇವಪತಿಗಳು ಇನ್ನೂ ಇತರರಾದ ದೇವತೆಗಳು ಸಹಾ ಭೂಪತಿಯಾದ ಪುರುಷನ ದೇಹದಲ್ಲಿರುವರು; ಆದ್ದರಿಂದ ಅರಸಾದವನು ಸರ್ವದೇವತಾಸ್ವರೂಪನು! ಎಲೈ ಬ್ರಾಹ್ಮಣರುಗಳಿರಾ, ಅನುಕಾರಣ ನೀವು ಮತ್ಸರರಹಿತರಾಗಿ ಕ್ರತುಗಳಿಂದ ನನ್ನನ್ನೇ ಪೂಜಿಸುತ ಸಮಸ್ತ ಕಾಣಿಕೆಗಳನ್ನೂ ನನಗೆ ಒಪ್ಪಿಸಿ; ನನಗಿಂತಲೂ ಪ್ರಥಮ ಪೂಜ್ಯನಾದವನು ಮತ್ತ್ಯಾವನಿರ್ಧಾನೆ' ಎಂದು ಧರ್ಮಕ್ಕೆ ಪ್ರತಿಕೂಲವಾದ ಬುದ್ಧಿಯುಳ್ಳವನಾಗಿ ಪಾಪಿಷ್ಠನಾಗಿ ಉದ್ಧತವ್ಯಾಪಾರವುಳ್ಳವನಾಗಿ ಶ್ರೇಯಃಪರಾಙ್ಮುಖನಾದ ಆ ವೇನನು ಮಹರ್ಷಿಗಳಿಂದ ಬಿಡಂಬಿಡಿಸಲ್ಪಟ್ಟವನಾಗ್ಯೂ ಅವರ ಪ್ರಾರ್ಥನೆಯನ್ನಂಗೀಕರಿಸದೆ ತಾನೇ ಸರ್ವಜ್ಞನೆಂದು ದುರಭಿಮಾನಿಯಾದ ಆ ವೇನನಿಂದ ಅಪ್ರಕಾರವಾಗಿ ಅವಮಾನಿತರಾದ ಮಹರ್ಷಿಗಳು ಶುಭಕರವಾದ ತಮ್ಮ ಪ್ರಾರ್ಥನೆಯು ಭಗ್ನವಾಗಲು ಅವನಲ್ಲಿ ಕೋಪವನ್ನು ಮಾಡಿ ಸ್ವಭಾವದಿಂದಲೇ ಕ್ರೂರನಾಗಿ ಪಾಪಿಷ್ಠನಾದ ಈ ದುರಾತ್ಮನನ್ನು ಬೇಗ ಸಂಹರಿಸಬೇಕು; ಈ ದುಷ್ಟನು ಜೀವವಂತನಾಗಿದ್ದರೆ ಸಮಸ್ತ ಲೋಕವನ್ನೂ ಶೀಘ್ರವಾಗಿ ಭಸ್ಮೀಕರಿಸುವನು; ಇವನು ಲಜ್ಜಾರಹಿತನಾಗಿ ಯಜ್ಞಪತಿಯಾದ ವಿಷ್ಣುವನ್ನು ನಿಂದಿಸುತ್ತಾನಾದಕಾರಣ ದುರ್ವೃತ್ತನಾದ ಇವನು ರಾಜಸಿಂಹಾಸನಯೋಗ್ಯನಲ್ಲ; ಯಾವ ಭಗವಂತನ ಅನುಗ್ರಹದಿಂದ ಇಂಥಾ ಐಶ್ವರ್ಯವನ್ನು ಪಡೆದನೋ ಅಂಥಾ ಸಾಕ್ಷಾತ್ ಶ್ರೀ ನಾರಾಯಣನನ್ನು ಅಮಂಗಳರೂಪನಾದ ಈ ವೇನನು ಜೋರ್ತು ಮತ್ತ್ಯಾವನಾದಾಗ್ಯೂ ನಿಂದಿಸುವನೇ' ಎಂದು ನುಡಿದು ಈರೀತಿ ಅಭಿವೃದ್ಧವಾದ ಕೋಪವುಳ್ಳ ಆ ಋಷಿಗಳು ಭಗವಂತನ ನಿಂದೆಯಿಂದ ಮೃತಪ್ರಾಯನಾದ ಆ ವೇನನನ್ನು ಹುಂಕಾರಗಳಿಂದ ಸಂಹರಿಸಿ ತಮ್ಮ ಆಶ್ರಮಗಳನ್ನು ಕುರಿತು ತೆರಳಿಹೋದರು; ಆಮೇಲೆ ಸುನೀಥಾದೇವಿಯು ದುಃಖಿತಳಾಗಿ ಮಗನಾದ ವೇನನ ಶರೀರವನ್ನು ಮಂತ್ರಸಹಿತಳಾಗಿ ಯುಕ್ತಿಯಿಂದ ರಕ್ಷಿಸಿದಳು! ಎಲೈ ವಿದುರನೆ, ಒಂದು ಸಮಯದಲ್ಲಿ ಸಪ್ತಋಷಿಗಳು ಸರಸ್ವತೀ ನದಿಯಲ್ಲಿ ಸ್ನಾನಗೈದು ಸಂಧ್ಯಾದಿ ಕ್ರಿಯೆಗಳನ್ನು ಮಾಡಿ ಅಗ್ನಿಹೋತ್ರಗಳನ್ನು ನೆರವೇರಿಸಿ ನದೀತೀರದಲ್ಲಿ ಕುಳಿತು ಸತ್ಕಥೆಗಳನ್ನು ಶ್ರವಣಗೈಯುತ್ತಿದ್ದರು; ಆಗ ಋಷಿಗಳು ನಾನಾರೂಪಗಳಾಗಿ ಉತ್ಪನ್ನಗಳಾದ ಉತ್ಪಾತಗಳನ್ನು ನೋಡಿ ಲೋಕಕ್ಕೆ ಭಯವುಂಟಾಗುತ್ತದೆಂಬ ಭೀತಿಯಿಂದ ವ್ಯಸನಯುಕ್ತರಾಗಿ ಅನಾಯಕವಾದ ಈ ಭೂಮಂಡಲಕ್ಕೆ ವಿಪತ್ತಿಲ್ಲದೆ ಕ್ಷೇಮವಾಗಬೇಕೆಂದು ಚಿಂತಿಸುತ ಸರ್ವದಿಕ್ಕುಗಳಲ್ಲಿಯೂ ವೇಗದಿಂದ ಗ್ರಾಮ ಪುರಾದಿಗಳಲ್ಲಿರುವ ಪ್ರಜೆಗಳನ್ನು ಉಪದ್ರವಪಡಿಸಿ ಸೂರೆಯನ್ನು ಮಾಡಿ ಧನಗಳನ್ನು ಅಪಹರಿಸಿಕೊಂಡು ಓಡಿಬರುತಲಿರುವ ಚೋರರ ಸಂಮರ್ದದಿಂದ ಕೆಂಧೂಳಿಗಳು ವ್ಯಾಪಿಸಿಕೊಂಡಿರುವದನ್ನು ಕಂಡರು; ಪ್ರಭುವಾದ ವೇನನು ಮೃತನಾಗಲು ನಿರ್ದಯರಾಗಿ ದೇಶಗಳನ್ನು ಸೂರೆಗೈಯುತ ಪರಸ್ಪರವಾಗಿ ಹಿಂಸೆಪಡಿಸುತಲಿರುವ ಚೋರರ ಉಪದ್ರವವನ್ನು ತಿಳಿದು ಚೋರಭೂಯಿಷ್ಟವಾಗಿ ದುರ್ಬಲವಾಗಿ ಅರಾಜಕವಾಗಿ ದುಃಖಿತವಾದ ದೇಶವನ್ನು ನೋಡಿ ಕೆಲವು ಕ್ಷತ್ರಿಯರು ಸಮರ್ಥರಾದಾಗ್ಯೂ ಉಪೇಕ್ಷೆಯನ್ನು ಮಾಡಿದರೆ ದೋಷವೆಂದು ತಿಳಿದವರಾದಾಗ್ಯೂ ಚೋರರನ್ನು ನಿಗ್ರಹಿಸಲಿಲ್ಲ; ಆ ಅರ್ಥವನ್ನು ನೋಡಿ ಋಷಿಗಳು ಸಮದೃಷ್ಟಿಯುಳ್ಳ

ಶಾಂತನಾದ ಬ್ರಾಹ್ಮಣನು ಶಕ್ತನಾಗಿದ್ದು ದೀನರಾದ ಪ್ರಜೆಗಳ ಕಷ್ಟವನ್ನು ಪರಿಹರಿಸದೇ ಉಪೇಕ್ಷಿಸಿದರೆ ಆ ಬ್ರಾಹ್ಮಣನ ತಪಸ್ಸು ಕ್ಷಯಿಸುವದು ; ರಾಜರ್ಷಿಯಾದ ಅಂಗರಾಯನ ವಂಶವು ಈರೀತಿಯಾಗಿ ನಷ್ಟವಾಗಬಾರದು ; ಸಫಲವಾದ ಪರಾಕ್ರಮವುಳ್ಳ ಅಂಗವಂಶಸ್ಥರಾದ ಅರಸುಗಳು ಭಗವಂತನನ್ನು ಆಶ್ರಯಿಸಿದವರೆಂದು ನಿಶ್ಚಯಿಸಿ ಮಹರ್ಷಿಗಳು ಮೃತನಾದ ವೇನನ ಶರೀರದಲ್ಲಿ ಊರುಸ್ಥಾನವನ್ನು ಮಥಿಸಿದರು ; ಆಗ ಬಾಹುಕನೆಂಬೊಬ್ಬನು ಹುಟ್ಟಿದನು ; ಅವನು ಕಾಗೆಯಂತೆ ನೀಲವರ್ಣವೂ ಅತ್ಯಂತ ಕುಬ್ಜವಾದ ದೇಹವೂ ಹ್ರಸ್ವಗಳಾದ ಕಾಲುಗಳೂ ಹಳ್ಳವಾಗಿರುವ ನಾಶಿಕಾಗ್ರವೂ ಕೆಂಪಾದ ನೇತ್ರಗಳೂ ಕೆಂಗೂದಲುಗಳೂ ಉಳ್ಳವನು ; ಆ ಬಾಹುಕನು ನಮ್ರನಾಗಿ ದೀನನಾಗಿ ಎದ್ದುನಿಂತುಕೊಂಡು ನನಗೇನು ಅಪ್ಪಣೆ ಎಂದು ಕೈಮುಗಿದು ಕೇಳಿಕೊಳ್ಳಲು ಋಷಿಗಳು ‘ ನಿಷೀದ ’ (ಕೂತುಕೋ) ಎಂದು ನುಡಿದರು ; ಅದರಿಂದ ಆ ಬಾಹುಕನು ನಿಷಾದನಾದನು ; ಆ ನಿಷಾದನ ವಂಶಸ್ಥರು ನೈಷಾದರೆನಿಸಿಕೊಂಡು ಕಿರಾತರಾಗಿ ವನಗಳಲ್ಲಿಯೂ ಪರ್ವತಗಳಲ್ಲಿಯೂ ಸೇರಿಕೊಂಡರು ; ವೇನನ ಪಾಪವೆಲ್ಲವನ್ನ ಪಹರಿಸಿಕೊಂಡು ಹುಟ್ಟಿದವನಾದಕಾರಣ ಆ ಬಾಹುಕನು ಕುರೂಪಿಯಾಗಿ ಜನಿಸಿದನು ; ಆಗ ಋಷಿಗಳು ಅಪುತ್ರನಾದ ಆ ವೇನನ ಬಾಹುಗಳನ್ನುಮಥಿಸಲು ಒಬ್ಬ ಪುತ್ರನು ಒಬ್ಬ ಸ್ತ್ರೀಯು ಸಹ ಹುಟ್ಟಿದರು ; ಬ್ರಹ್ಮವಾದಿಗಳಾದ ಋಷಿಗಳು ಆ ಸ್ತ್ರೀಪುರುಷ ಯುಗ್ಮವನ್ನು ನೋಡಿ ಭಗವದಂಶವನ್ನಾಗಿ ತಿಳಿದು ಸಂತುಷ್ಟರಾದರು.”

೧೫ನೇ ಅಧ್ಯಾಯ.

ಪೃಥುರಾಯನ ಚರಿತ್ರೆಯು.

“ ಆ ಬಳಿಕ ಮಹಾ ಋಷಿಗಳು ಹೀಗೆ ಆವಿರ್ಭವಿಸಿದ ಸ್ತ್ರೀ ಪುರುಷ ಯುಗ್ಮದಲ್ಲಿ ಪುರುಷನಾದ ಈತನು ಲೋಕರಕ್ಷಕನಾದ ಭಗವದಂಶರೂಪನು ; ಈ ಕನ್ಯೆಯು ಸಾಕ್ಷಾತ್ ಲಕ್ಷ್ಮಿಯ ಅಂಶಭೂತಳು ; ಈ ಪುರುಷನು ಮಹಾ ಕೀರ್ತಿಶಾಲಿಯಾಗಿ ಪೃಥುರಾಯನೆಂಬ ನಾಮಧೇಯವುಳ್ಳವನಾಗಿ ಯಶಸ್ಸನ್ನು ವಿಸ್ತರಿಸುವನಾಗಿ ಆದಿರಾಜನೆನಿಸಿಕೊಂಡು ಮಹಾರಾಜನಾಗುತ್ತಾನೆ ; ಮನೋಹರವಾದ ದಂತಪಙ್ತಿಯುಳ್ಳ ಭೂಷಣಗಳಿಗೂ ಭೂಷಣರೂಪಳಾಗಿ ಸರ್ವಗುಣ ಸಂಪನ್ನೆಯಾಗಿ ಶ್ರೇಷ್ಠಗಳಾದ ನಿತಂಬಗಳುಳ್ಳ ಈ ಕನ್ಯೆಯು ‘ ಅರ್ಚಿ ’ ಎಂಬ ನಾಮಧೇಯವುಳ್ಳವಳಾಗಿ ಆ ಪೃಥುರಾಯನನ್ನೇ ಪತಿಯಾಗಿ ಐದುತ್ತಾಳೆ ; ಈ ಪೃಥುರಾಯನು ಲೋಕರಕ್ಷಣಾರ್ಥವಾಗಿ ಅವತರಿಸಿದ ಸಾಕ್ಷಾತ್ ವಿಷ್ಣುವಿನ ಅಂಶಭೂತನು ; ಆ ಭಗವಂತನನ್ನು ಎಡೆಬಿಡದಿರುವ ಸಾಕ್ಷಾತ್ ಲಕ್ಷ್ಮಿಯೇ ಅಂಶಾವತಾರದಿಂದ ಆವಿರ್ಭವಿಸಿ ಆ ಪೃಥುರಾಯನನ್ನೇ ಪತಿಯನ್ನಾಗಿ ಸಮ್ಮತಿಸಿದಳೆಂದು ಋಷಿಗಳು ಪೃಥುರಾಯನನ್ನು ಪ್ರಶಂಸೆ ಮಾಡಿದರು ; ಗಂಧರ್ವ ಶ್ರೇಷ್ಠರು ಗಾನಂಗೈದರು ; ಸಿದ್ಧರು ಪುಷ್ಪವೃಷ್ಟಿಗಳನ್ನು ಕರೆದರು ; ದೇವಸ್ತ್ರೀಯರು ನರ್ತನಂಗೈದರು ; ಅಂತರಿಕ್ಷದಲ್ಲಿ ಶಂಖ ತೂರ್ಯ ಮೃದಂಗಾದಿ ವಾದ್ಯಗಳು ಮೊಳಗಿದವು ; ಸಮಸ್ತರಾದ ದೇವಋಷಿ ಪಿತೃಸಮೂಹಗಳು ಅಲ್ಲಿಗೆ ಬಂದವು ; ಆಗ ಜಗದ್ಗುರುವಾದ ಬ್ರಹ್ಮನು ಸಮಸ್ತ ಸುರೇಶ್ವರರಿಂದ ಯುಕ್ತನಾಗಿ ಆ ಸ್ಥಾನಕ್ಕೆ ಬಂದು ವೇನನ ಪುತ್ರನಾದ ಪೃಥುರಾಯನ ದಕ್ಷಿಣಹಸ್ತದಲ್ಲಿ ಭಗವಂತನ ಚಿಹ್ನವಾಗಿ ರೇಖಾರೂಪವಾದ ಚಕ್ರವನ್ನೂ ಪಾದಗಳಲ್ಲಿ ಪದ್ಮರೇಖೆಯನ್ನೂ ನೋಡಿ ಯಾವ ಪುರುಷನಿಗೆ ಇತರ ರೇಖೆಗಳಿಂದ ಮಿಶ್ರವಾಗದೇ ಸ್ಪಷ್ಟವಾದ ಚಕ್ರವು ಇರುವದೋ ಆ ಪುರುಷನು ಭಗವಂತನ ಅಂಶವೇ ಸರಿ—ಎಂದು ತಿಳಿದನು ; ಬ್ರಾಹ್ಮಣೋತ್ತಮರಾದ ಸಪ್ತಋಷಿಗಳು ಆ ಪೃಥುರಾಯನಿಗೆ ಪಟ್ಟಾಭಿಷೇಕವನ್ನು ಮಾಡಲೋಸುಗ ಉದ್ಯುಕ್ತರಾಗಲು ಸಮಸ್ತಜನರೂ ಅಭಿಷೇಕಸಾಧನ ಸಾಮಗ್ರಿಗಳನ್ನು ತೆಗೆದುಕೊಂಡು ಬಂದರು ; ನದಿಗಳು ಸಮುದ್ರಗಳು ಪರ್ವತಗಳು ಸರ್ಪಗಳು ಗೋವುಗಳು ಪಕ್ಷಿಗಳು ಮೃಗಗಳು ಅಂತರಿಕ್ಷವು ಭೂಮಿಯು ಇವೆಲ್ಲವೂ ಕಾಣಿಕೆಗಳನ್ನು ತಂದು ಒಪ್ಪಿಸಿದವು ; ಮಹಾರಾಜನಾದ ಆ ಪೃಥುರಾಯನು ಪಟ್ಟಾಭಿಷಿಕ್ತನಾಗಿ ದಿವ್ಯವಸ್ತ್ರಗಳನ್ನು

ಧರಿಸಿದವನಾಗಿ ಭೂಷಣಗಳಿಂದ ಚನ್ನಾಗಿ ಅಲಂಕೃತನಾಗಿ ಸರ್ವಾಲಂಕಾರ ಭೂಷಿತಳಾದ ಪತ್ನಿಯಾದ ಅರ್ಚಿದೇವಿಯೊಡನೆ ಸಹಿತನಾಗಿ ಎರಡನೇ ಯಜ್ಞೇಶ್ವರನಂತೆ ಪ್ರಕಾಶಿಸಿದನು! ಎಲೈ ಶೂರನಾದ ವಿದುರನೇ, ಕುಬೇರನು ಪೃಥುರಾಯನಿಗೆ ಸುವರ್ಣಮಯವಾದ ಸಿಂಹಾಸನವನ್ನಿತ್ತನು; ವರುಣನು ಪೂರ್ಣಚಂದ್ರನಿಗೆ ಸಮಾನವಾದ ಸೂಕ್ಷ್ಮಗಳಾದ ಜಲಬಿಂದುಗಳನ್ನು ಸ್ರವಿಸುತಲಿರುವ ಶ್ವೇತಛತ್ರವನ್ನಿತ್ತನು; ವಾಯುವು ಚಾಮರಗಳನ್ನಿತ್ತನು; ಧರ್ಮಪುರುಷನು ಕೀರ್ತಿಮಯವಾದ ಮಾಲೆಯನ್ನಿತ್ತನು; ದೇವೇಂದ್ರನು ಉತ್ತಮವಾದ ಕಿರೀಟವನ್ನಿತ್ತನು; ಯಮನು ದುಷ್ಟನಿಗ್ರಹ ಸಾಧನವಾದ ದಂಡವನ್ನಿತ್ತನು; ಬ್ರಹ್ಮನು ವೇದಮಯವಾದ ಕವಚವನ್ನುಕೊಟ್ಟನು; ಸರಸ್ವತಿಯು ಉತ್ತಮವಾದ ಹಾರವನ್ನಿತ್ತಳು; ನಾರಾಯಣನು ಸುದರ್ಶನಚಕ್ರವನ್ನಿತ್ತನು; ಮಹಾಲಕ್ಷ್ಮಿಯು ಸ್ಥಿರವಾದ ಸಂಪತ್ತನ್ನಿತ್ತಳು; ಪರಮೇಶ್ವರನು ಹತ್ತು ಚಂದ್ರಾಕಾರಗಳಾದ ಬಿಂದುಗಳುಳ್ಳ ಖಡ್ಗವನ್ನಿತ್ತನು; ನೂರು ಚಂದ್ರಾಕಾರಗಳಾದ ಬೊಟ್ಟುಗಳುಳ್ಳ ಖೇಟ್ಯವನ್ನು ಪಾರ್ವತೀದೇವಿಯು ಇತ್ತಳು; ಸೋಮನು ಅಮೃತಮಯಗಳಾದ ಅಶ್ವಗಳನ್ನಿತ್ತನು; ತ್ವಷ್ಟ್ರಪ್ರಜೇಶನು ದಿವ್ಯರೂಪವುಳ್ಳ ರಥವನ್ನಿತ್ತನು; ಅಗ್ನಿಯು ಅಜದ ಶೃಂಗಗಳಿಂದಲೂ ಗೋಶೃಂಗಗಳಿಂದಲೂ ನಿರ್ಮಿತವಾದ ಧನುಸ್ಸನ್ನಿತ್ತನು; ಸೂರ್ಯನು ತನ್ನ ಕಿರಣರೂಪಗಳಾದ ಬಾಣಗಳನ್ನಿತ್ತನು; ಭೂದೇವಿಯು ಸರ್ವಲೋಕಗಮನಸಾಧನವಾದ ಸಿದ್ಧವಾದ ಪಾದುಕಗಳನ್ನಿತ್ತಳು; ಸ್ವರ್ಗವು ನಿತ್ಯದಲ್ಲಿಯು ಪುಷ್ಪಗಳನ್ನಿತ್ತಿತು; ಖೇಚರರಾದ ದೇವತೆಗಳು ನಾಟ್ಯವನ್ನೂ ಸಂಗೀತವನ್ನೂ ವಾದ್ಯ ಕೌಶಲ್ಯವನ್ನೂ ಅಂತರ್ಧಾನವಿದ್ಯೆಯನ್ನೂ ಸಹಾ ಇತ್ತರು; ಋಷಿಗಳು ಸತ್ಯಗಳಾದ ಆಶೀರ್ವಾದಗಳನ್ನಿತ್ತರು; ಸಮುದ್ರನು ತನ್ನಲ್ಲಿ ಹುಟ್ಟಿದ ಶಂಖವನ್ನಿತ್ತನು; ಸಮುದ್ರಗಳು ಪರ್ವತಗಳು ನದಿಗಳು ಸಹ ರಥಸಂಚಾರಮಾರ್ಗವನ್ನಿತ್ತವು; ಆಗ ಪೃಥುರಾಯನು ಪ್ರತಾಪಶಾಲಿಯಾದ ತನ್ನನ್ನು ಸ್ತುತಿಗೈಯಲೋಸುಗ ಬಂದು ನಿಂತಿರುವ ಸೂತ ಮಾಗಧ ವಂದಿಗಳನ್ನು ತಿಳಿದು ನಗುತ ಮೇಘಗಂಭೀರವಾದ ವಾಕ್ಯದಿಂದ 'ಎಲೈ ಸೂತನೇ, ಎಲೈ ಮಾಗಧನೇ, ಎಲೈ ಸೌಮ್ಯನಾದ ವಂದಿಯೇ, ಲೋಕದಲ್ಲಿ ಪ್ರಕಟಗಳಾದ ಗುಣಗಳುಳ್ಳ ನನಗೆ ನಿಮ್ಮಿಂದ ಮಾಡಲ್ಪಡುವ ಸ್ತುತಿಯು ಒಪ್ಪೀತು; ಈಗ ನನ್ನಲ್ಲಿ ಯಾವ ಗುಣಗಳನ್ನವಲಂಬಿಸಿ ನೀವು ಸ್ತುತಿಯನ್ನು ಮಾಡುತ್ತೀರಿ; ಸುಮ್ಮನೇ ಅನೃತವಾಕ್ಯಗಳುಳ್ಳವರಾಗಬೇಡಿ! ಎಲೈ ಮಧುರವಾಕ್ಯಗಳುಳ್ಳ ಪುರುಷರುಗಳಿರಾ, ಆದುಕಾರಣ ಕಾಲಾಂತರದಲ್ಲಿ ನನ್ನ ಯಶಸ್ಸು ಪ್ರಖ್ಯಾತವಾದಮೇಲೆ ನನ್ನನ್ನು ಸ್ತುತಿಸಿರಿ; ಉತ್ತಮಶ್ಲೋಕನಾದ ಮಹಾಪುರುಷನ ಗುಣವರ್ಣನೆಯು ಸಿದ್ಧವಾಗಿರುವಲ್ಲಿ ನನ್ನನ್ನು ಸ್ತುತಿಗೈಯಲೋಸುಗ ನಿಮ್ಮನ್ನು ಸಭಾಜನರು ಯಾಕೆ ಪ್ರೇರಿಸುತ್ತಾರೆ; ಮಹಾಪುರುಷರ ಗುಣಗಳನ್ನು ತಾನೂ ಕೂಡ ತನ್ನಲ್ಲೇ ಸಂಪಾದಿಸಲೋಸುಗ ಸಮರ್ಥನಾದ ಪುರುಷನು ಯಾವವನಾದಾಗ್ಯು ತನ್ನಲ್ಲಿರುವ ಗುಣಗಳಿಂದ ಸ್ತುತಿಯನ್ನು ಮಾಡಿಸಿಕೊಂಡಾನೆ; ಈ ಪುರುಷನು ವೇದಶಾಸ್ತ್ರಾಭ್ಯಾಸವನ್ನು ಮಾಡಿದರೆ ವಿದ್ಯಾದಿಗುಣಗಳುಳ್ಳವನಾಗುವನೆಂದು ಜನರಿಂದ ಹಾಸ್ಯಮಾಡಿಸಿಕೊಂಡು ಕುಬುದ್ಧಿಯುಳ್ಳವನು ಲಾಘವವನ್ನೈದುವನು; ಪರಮೋತ್ಕೃಷ್ಟರಾದ ಲಜ್ಜಾವಂತರಾದ ಅತಿಪ್ರಸಿದ್ಧರಾದ ಪುರುಷರು ಸಮರ್ಥರಾದಾಗ್ಯೂ ಪರರಿಂದ ಶ್ಲಾಘಿಸಲ್ಪಟ್ಟು ಸ್ತುತಿಗೈಸಿಕೊಳ್ಳುವರಾದಾಗ್ಯೂ ನಿಂದಿತ ಪೌರುಷವಾದ ಆ ಸ್ತುತಿಯನ್ನು ಸನ್ಮತಿಸುವದಿಲ್ಲ! ಎಲೈ ಸ್ತುತಿಪಾಠಕರುಗಳಿರಾ, ನಾನಾದರೋ ಈಗಲೂ ಶ್ರೇಷ್ಠಗಳಾದ ಪೌರುಷ ಸಾಹಸಾದಿ ವ್ಯಾಪಾರಗಳಿಂದ ಲೋಕಪ್ರಸಿದ್ಧಿಯನ್ನು ಪಡದವನಲ್ಲ; ಬಾಲಕನಂತೆ ಸುಮ್ಮನೇ ನಿಮ್ಮಿಂದ ಹ್ಯಾಗೆ ಸ್ತುತಿಮಾಡಿಸಿಕೊಂಡು ಸಂತೋಷಪಡಲಿ' ಎಂದು ಪೃಥುರಾಯನು ಸ್ತುತಿಪಾಠಕರನ್ನು ಕುರಿತು ನುಡಿದನು.''

೧೬ ನೇ ಅಧ್ಯಾಯ.

ಪೃಥುರಾಯನನ್ನು ಸ್ತುತಿಪಾಠಕರು ಸ್ತುತಿಗೈದದ್ದು.

" ಈಪ್ರಕಾರವಾಗಿ ಮಾತನಾಡುತಲಿರುವ ಭೂಪತಿಯಾದ ಪೃಥುರಾಯನನ್ನು ಋಷಿಗಳಿಂದ ಪ್ರೇರಿತರಾದ ಗಾಯಕರು ಆ ಪೃಥುರಾಯನ ವಾಕ್ಯಾಮೃತಸೇವನದಿಂದ ಸಂತುಷ್ಟರಾಗಿ ಸ್ತುತಿಯನ್ನುಮಾಡುತ ' ದೇವಶ್ರೇಷ್ಠನಾದ ಯಾವ ಭಗವಂತನು ಮಾಯೆಯಿಂದ ಭೂಲೋಕದಲ್ಲಿ ಅವತರಿಸಿದನೋ ಅಂಥಾ ಭಗವಂತನ ಅಂಶನಾದ ನಿನ್ನ ಮಹಾತ್ಮ್ಯವನ್ನು ವರ್ಣಿಸಲು ನಾವು ಸಮರ್ಥರಲ್ಲ ; ಅಂಗರಾಯನ ಶರೀರದಿಂದುದ್ಭವಿಸಿದ ನಿನ್ನ ಪೌರುಷಗಳನ್ನು ವರ್ಣಿಸಲು ವಾಕ್ಪತಿಗಳಾದ ಬ್ರಹ್ಮಾದಿಗಳ ಬುದ್ಧಿಗಳೂ ಸಹ ಭ್ರಾಂತಿಯನ್ನೈದುವವು ; ಆದಾಗ್ಯೂ ಉತ್ಕೃಷ್ಟಕೀರ್ತಿಯುಳ್ಳವನಾಗಿ ಭಗವಂತನ ಅಂಶಾವಿರ್ಭೂತನಾದ ಪೃಥುರಾಯನೆಂದು ಪ್ರಸಿದ್ಧನಾದ ನಿನ್ನ ಕಥಾಮೃತದಲ್ಲಿ ಆದರವುಳ್ಳ ನಾವು ಋಷಿಗಳಿಂದ ಪ್ರೇರಿತರಾಗಿ ಗುರೂಪದೇಶಾನುಸಾರವಾಗಿ ಶ್ಲಾಘ್ಯಗಳಾದ ನಿನ್ನ ಚರಿತ್ರಗಳನ್ನು ವಿಸ್ತರಿಸಿ ವರ್ಣಿಸುತ್ತೇವೆ ' ಎಂದು ಸ್ತುತಿಸಿದರು ! ಧಾರ್ಮಿಕರಲ್ಲಿ ಶ್ರೇಷ್ಠನಾದ ಈ ಪೃಥುರಾಯನು ಲೋಕವನ್ನು ಧರ್ಮಮಾರ್ಗದಲ್ಲಿ ಪ್ರವರ್ತಿಸುವಂತೆ ಮಾಡುತ ಧರ್ಮವ್ಯವಸ್ಥೆಗಳನ್ನು ರಕ್ಷಿಸುತ ಧರ್ಮವಿರುದ್ಧನಾದ ಮಾರ್ಗಗಳಲ್ಲಿ ನಡಿಯುವ ದುಷ್ಟರನ್ನು ನಿಗ್ರಹಿಸುವನಾಗಿ ಲೋಕರಕ್ಷಣೆಯನ್ನು ಮಾಡುತ್ತಾನೆ ; ಈ ಪೃಥುರಾಯನು ಲೋಕಪಾಲಕರ ಶರೀರಗಳನ್ನು ತನ್ನ ಶರೀರದಲ್ಲಿ ಕಾಲಕಾಲವಲ್ಲಿಯೂ ಧರಿಸುತ್ತಾನೆ ; ಪಾಲನ ಪೋಷಣ ಅನುರಂಜನರೂಪವಾದ ವ್ಯಾಪಾರಗಳಿಂದಲೂ ಯಜ್ಞಾದಿಗಳಿಂದಲೂ ಅನುಷ್ಠಾನಂಗೈಸುತ ಹವಿರ್ಭಾಗಗಳಿಂದ ದೇವತೆಗಳನ್ನು ಸಂತೋಷಪಡಿಸುವವನಾಗಿ ಲೋಕದ್ವಯಕ್ಕೂ ಹಿತವನ್ನು ಮಾಡುತ್ತಾನೆ ; ಸೂರ್ಯನು ಯಾವ ರೀತಿಯಲ್ಲಿ ಎಂಟು ಮಾಸಗಳು ಜಲವನ್ನು ಸ್ವೀಕರಿಸಿ ವರ್ಷಾಕಾಲ ನಾಲ್ಕು ತಿಂಗಳಲ್ಲಿ ವೃಷ್ಟಿರೂಪದಿಂದ ಜಲವನ್ನು ಕೊಡುವನೋ ಹಾಗೆ ಸರ್ವಭೂತಗಳಲ್ಲಿಯೂ ಸಮದೃಷ್ಟಿಯುಳ್ಳ ಈ ಪೃಥುರಾಯನು ವಿಹಿತಕಾಲದಲ್ಲಿ ಪ್ರಜೆಗಳ ದೆಶೆಯಿಂದ ರಾಜಗ್ರಾಹ್ಯವಾದ ಧನವನ್ನು ಗ್ರಹಿಸುತ್ತಾನೆ ; ದುರ್ಭಿಕ್ಷಕಾಲದಲ್ಲಿ ಆ ದ್ರವ್ಯವನ್ನು ಪ್ರಜಾಮುಖದಲ್ಲಿ ತ್ಯಾಗಂಗೈಯುತ್ತಾನೆ ; ಭೂಮಿಗೆ ಸಮಾನವಾದ ಕ್ಷಮೆಯುಳ್ಳ ದಯಾಶಾಲಿಯಾದ ಈ ಪೃಥುರಾಯನು ದೀನರಾದ ಪ್ರಜೆಗಳ ಜೀವನನಿಮಿತ್ತವಾಗಿ ಕಲಹವನ್ನು ಮಾಡಿ ಎದುರಿಸಿ ದುರುಕ್ತಿಗಳನ್ನು ನುಡಿಯುವವರಾದಾಗ್ಯೂ ಅವನ್ನು ಸಹಿಸುವನು ; ಈ ಪೃಥುರಾಯನು ರಾಜದೇಹಧಾರಿಯಾದ ಶ್ರೀಹರಿಯಾದಕಾರಣ ಪರ್ಜನ್ಯನು ವರ್ಷಿಸದೇ ಇದ್ದ ಸಮಯದಲ್ಲಿ ತಾನೇ ವೃಷ್ಟಿಯನ್ನುಂಟುಮಾಡಿ ದುರ್ಭಿಕ್ಷದಿಂದ ಕ್ಷುತ್ಪೀಡಿತರಾದ ಪ್ರಜೆಗಳನ್ನು ಇಂದ್ರನಂತೆ ರಕ್ಷಿಸುತ್ತಾನೆ ; ಈ ಪೃಥುರಾಯನು ಅನುರಾಗಪೂರ್ವಕವಾದ ಕಟಾಕ್ಷಪ್ರಸಾರವುಳ್ಳವನಾಗಿ ಶುಭಕರವಾದ ಮುಗುಳುನಗೆಯಿಂದ ಮನೋಹರವಾದ ತನ್ನ ಮುಖಚಂದ್ರನಿಂದ ಲೋಕವನ್ನು ಆಹ್ಲಾದಪಡಿಸುತ್ತಾನೆ ; ಈ ಪೃಥುರಾಯನು ತಿಳಿಯಲಶಕ್ಯವಾದ ಪ್ರವೇಶನಿರ್ಗಮ ಮಾರ್ಗವುಳ್ಳವನಾಗಿ ರಹಸ್ಯವಾದ ಕಾರ್ಯವುಳ್ಳವನಾಗಿ ಗಂಭೀರವಾಗಿ ಮಹಾರಾಜಕಾರ್ಯಗಳನ್ನು ಮಾಡುವನಾಗಿ ಧನಕೋಶವನ್ನು ರಕ್ಷಿಸುವನಾಗಿ ಅಪಾರಮಹಿಮೆಯುಳ್ಳವನಾಗಿ ಸಮಸ್ತ ಗುಣನಿಧಿಯಾಗಿ ವರುಣನಂತೆ ಪ್ರಕಾಶಿಸುವನು ; ವೇನನೆಂಬ ಅರಣಿಯಿಂದ ಉತ್ಪನ್ನನಾದ ಪೃಥುರಾಯನೆಂಬ ಯಜ್ಞೇಶ್ವರನು ಶತ್ರುಗಳಿಂದ ಪಡೆಯಲಶಕ್ಯನಾಗಿ ದೂರಸ್ಥನಾದಾಗ್ಯೂ ಸಮೀಪಸ್ಥನಂತೆ ಪರಾಕ್ರಮದಿಂದ ಜಯಿಸಲಶಕ್ಯನಾಗಿರುವನು ; ಘೋಟ ಹಸ್ತಿ ಹರಿಕಾರರ ಮುಖದಿಂದ ತನ್ನನ್ನು ಸ್ತುತಿಸುವವರನ್ನು ನಿಂದಿಸುವವರನ್ನು ಸಹಾ ತಿಳಿದಾಗ್ಯೂ ಉದಾಸೀನನಾಗಿ ತಿಳಿಯದವನಂತೆ ಇದ್ದುಕೊಂಡು ಅವರ ಕಷ್ಟಸುಖಗಳನ್ನು ವಿಚಾರಿಸುತ ಸಮಸ್ತ ಪ್ರಾಣಿಗಳಿಗೂ ಪ್ರಾಣರೂಪನಾದ ವಾಯುವಿನಂತೆ ಇರುವನು ; ಮತ್ತು ತನ್ನ ಶತ್ರುಗಳ ಪುತ್ರರನ್ನಾದರೂ ಅಪರಾಧವಿಲ್ಲದಿದ್ದರೆ ಶಿಕ್ಷಿಸುವದಿಲ್ಲ ; ಧರ್ಮಮಾರ್ಗಸ್ಥಿತನಾದ ಈ ಅರಸು ತನ್ನ ಔರಸಪುತ್ರನನ್ನಾದಾಗ್ಯೂ ಅಪರಾಧವಿದ್ದಲ್ಲಿ ದಂಡಿಸುವನು ; ಈ ರಾಯನ ಆಜ್ಞೆಯು ಮಾನಸೋತ್ತರಪರಿಯಂತವು ವ್ಯಾಪಿಸಿರುವದು ; ಭಗವಂತನಾದ ಸೂರ್ಯನು ತನ್ನ ಕಿರಣಸಮೂಹಗಳಿಂದ ಎಷ್ಟು ಪ್ರದೇಶವನ್ನು ಪ್ರಕಾಶಂಗೈಯುತ್ತಾನೆಯೋ ಅಷ್ಟು ಪ್ರದೇಶವ

ನ್ನು ರಕ್ಷಿಸುತ್ತಾನೆ; ಸರ್ವಪ್ರಾಣಿಗಳು ಮನೋರಂಜಕಗಳಾದ ಚರಿತ್ರೆಗಳಿಂದ ಈ ಪೃಥುರಾಯನನ್ನು ಆದಿರಾಜನನ್ನಾಗಿ ಹೇಳುವರು; ಈ ಅರಸು ದೃಢವ್ರತನಾದವನು; ಸತ್ಯಪ್ರತಿಜ್ಞೆಯುಳ್ಳವನು; ಬ್ರಾಹ್ಮಣಪ್ರಿಯನು; ವೃದ್ಧಸೇವಕನು; ಸರ್ವಭೂತಗಳಿಗೂ ಅಭಯಪ್ರದನು; ಮಾನಶಾಲಿಯು; ದೀನರಲ್ಲಿ ವಾತ್ಸಲ್ಯವುಳ್ಳವನು; ಪರಸ್ತ್ರೀಯರಲ್ಲಿ ಮಾತೃಭಕ್ತಿಯುಳ್ಳವನು; ಪತ್ನಿಯಲ್ಲಿ ಅರ್ಧದೇಹದೋಪಾದಿಯಲ್ಲಿ ಪ್ರೇಮವುಳ್ಳವನು; ಪ್ರಜೆಗಳಲ್ಲಿ ತಂದೆಯಂತೆ ವಾತ್ಸಲ್ಯವುಳ್ಳವನು; ಬ್ರಹ್ಮವಾದಿಗಳಾದ ಬ್ರಾಹ್ಮಣರಲ್ಲಿ ಭೃತ್ಯಭಾವವನ್ನಾಶ್ರಯಿಸಿದವನು; ಪ್ರಾಣಿಗಳಿಗೆ ತನ್ನ ಶರೀರದಂತೆ ಪ್ರೇಮಪಾತ್ರನು; ಮಿತ್ರರಿಗೆ ಸಂತೋಷವೃದ್ಧಿಕರನಾದವನು; ಅಸಂಗರಾದ ಆಧ್ಯಾತ್ಮನಿಷ್ಠರಾದವರಲ್ಲಿ ಸಹವಾಸವುಳ್ಳವನು; ದುರ್ಜನರ ವಿಷಯದಲ್ಲಿ ಯಮನಂತೆ ಶಿಕ್ಷಕನಾದವನು; ಗುಣತ್ರಯನಿಯಾಮಕನಾಗಿ ಕೂಟಸ್ಥನಾಗಿ ಷಡ್ಗುಣೈಶ್ವರ್ಯಯುಕ್ತನಾದ ಸಾಕ್ಷಾತ್ ಭಗವಂತನೇ ಪೃಥುರಾಯನಾಗಿ ಅವತರಿಸಿಧಾನೆ; ಯಾವ ಭಗವಂತನಲ್ಲಿ ಅವಿದ್ಯಾರಚಿತವಾದ ಈ ಪ್ರಪಂಚವು ಮಿಥ್ಯಾರೂಪವಾದಾಗ್ಯೂ ನಾನಾರೂಪವುಳ್ಳದ್ದಾಗಿದೆಯೆಂದು ಯೋಗಿಗಳು ತಿಳಿಯುವರೋ ಅಂಥಾ ಪರಮಾತ್ಮನೇ ಈ ಪೃಥುರಾಯನು; ರಾಜಾಧಿರಾಜನಾಗಿ ಏಕವೀರನಾದ ಈ ಪೃಥುರಾಯನು ಉದಯಾಸ್ತಮಯಪರ್ವತಪರ್ಯಂತವಾದ ಭೂಮಿಯನ್ನು ರಕ್ಷಿಸುತ್ತಾನೆ; ಧನುರ್ಧಾರಿಯಾಗಿ ಜಯಶೀಲವಾದ ರಥವನ್ನಾರೂಢನಾಗಿ ಸೂರ್ಯನಂತೆ ಪ್ರದಕ್ಷಿಣಾಕಾರವಾಗಿ ಭೂಮಂಡಲವನ್ನು ಸಂಚರಿಸುತ್ತಾನೆ; ಈ ಅರಸು ದಿಗ್ವಿಜಯಾರ್ಥವಾಗಿ ಹೊರಟು ಸಂಚರಿಸುವ ಕಾಲದಲ್ಲಿ ಆಯಾ ದೇಶಸ್ಥರಾದ ಅರಸುಗಳು ಲೋಕಪಾಲಕಸಮೇತರಾಗಿ ಬಂದು ಕಾಣಿಕೆಗಳನ್ನು ಒಪ್ಪಿಸುತ್ತಾರೆ; ಅವರ ಪತ್ನಿಯರು ಈ ಪೃಥುರಾಯನನ್ನು ಚಕ್ರಾಯುಧನಾದ ಭಗವಂತನನ್ನಾಗಿ ತಿಳಿಯುತ್ತಾರೆ; ಮಹಾರಾಯನಾದ ಈ ಪೃಥುರಾಯನು ಗೋರೂಪಧಾರಿಣಿಯಾದ ಭೂಮಿಯನ್ನು ಸಮಸ್ತ ವಸ್ತುಗಳನ್ನು ಕರದು ಸಮಸ್ತ ಪ್ರಜೆಗಳಿಗೂ ಜೀವನವನ್ನುಂಟುಮಾಡುವನು; ದೇವೇಂದ್ರನಂತೆ ಧನುಸ್ಸಿನ ಅಗ್ರದಿಂದ ಪರ್ವತಗಳನ್ನು ಉತ್ಪಾಟನಂಗೈದು ಲೀಲೆಯಿಂದಲೇ ಭೂಮಿಯನ್ನು ಸಮಸ್ಥಳವಾಗಿ ಮಾಡುವನು; ಮೃಗಪತಿಯಾದ ಸಿಂಹವು ಬಾಲವನ್ನೆತ್ತಿಕೊಂಡು ಅರಣ್ಯದಲ್ಲಿ ಸಂಚರಿಸುವಕಾಲದಲ್ಲಿ ಇತರಗಳಾದ ಕ್ಷುದ್ರಮೃಗಗಳು ಹ್ಯಾಗೆ ಅಲ್ಲಲ್ಲಿ ಅಡಗಿಕೊಳ್ಳುವವೋ ಹಾಗೆ ಈ ಪೃಥುರಾಯನು ಅಜಗವನಾಮಕವಾದ ಮಹಾಧನುಸ್ಸನ್ನು ಟಂಕಾರಂಗೈಯುತ ಯುದ್ಧದಲ್ಲಿ ಸಹಿಸಲಶಕ್ಯನಾಗಿ ಸಂಚರಿಸುತಿರಲು ದುಷ್ಟರಾದ ಶತ್ರುಗಳು ದಿಕ್ಕುದಿಕ್ಕುಗಳಲ್ಲಿಯೂ ಅಡಗುವರು; ಯಾವ ಸ್ಥಳದಲ್ಲಿ ಸರಸ್ವತೀನದಿಯು ಆವಿರ್ಭೂತನಾಯಿತೊ ಆ ಸ್ಥಳದಲ್ಲಿ ಈ ಪೃಥುರಾಯನು ನೂರು ಅಶ್ವಮೇಧ ಕ್ರತುಗಳನ್ನು ಮಾಡುವನು; ನೂರನೇ ಅಶ್ವಮೇಧವನ್ನು ಮಾಡುವ ಸಮಯದಲ್ಲಿ ಶತಕ್ರತುವಾಗಿ ಪುರಂದರನಾಮಕನಾದ ದೇವೇಂದ್ರನು ಯಜ್ಞಾರ್ಥವಾದ ಅಶ್ವವನ್ನು ಅಪಹರಿಸುವನು; ಈ ಅರಸು ತನ್ನ ಗೃಹದ ಉದ್ಯಾನವನದಲ್ಲಿ ಭಗವಂತನಾದ ಸನತ್ಕುಮಾರಮಹರ್ಷಿಯನ್ನಾರಾಧಿಸಿ ಪರಮಪದಪ್ರಾಪಕವಾಗಿ ನಿರ್ಮಲವಾದ ಆತ್ಮತತ್ವಜ್ಞಾನವನ್ನು ಪಡೆಯುವನು—ಎಂದು ಈರೀತಿಯಲ್ಲಿ ಅಲ್ಲಲ್ಲಿ ಜನರಿಂದ ವರ್ಣಿಸಲ್ಪಡುತಲಿರುವ ತನ್ನ ಚರಿತ್ರೆಗಳನ್ನು ಕೇಳುತ ಮಹಾಪರಾಕ್ರಮಶಾಲಿಯಾದ ಪೃಥುರಾಯನು ಸಂಚರಿಸುತ್ತಾನೆ; ಅಪ್ರತಿಹತವಾದ ಆಜ್ಞೆಯುಳ್ಳ ಈ ಪೃಥುರಾಯನು ತನ್ನ ಪ್ರತಾಪದಿಂದ ಲೋಕಕಂಟಕರಾದ ದುಷ್ಟರನ್ನು ನಿಗ್ರಹಿಸಿ ದಿಕ್ಕುಗಳನ್ನು ಜಯಿಸಿ ದೇವಾಸುರೇಂದ್ರರಿಂದ ಸ್ತುತಿಗೈಯಲ್ಪಡುವನಾಗಿ ಮಹಾಮಹಿಮಶಾಲಿಯಾಗಿ ಭೂಮಂಡಲಕ್ಕೆ ನಾಥನಾಗುತ್ತಾನೆ—ಎಂದು ಸ್ತುತಿಪಾಠಕರು ಸ್ತುತಿಸಿದರು" ಎಂದು ನುಡಿದನು.

೧೭ನೇ ಅಧ್ಯಾಯ.

ಭೂದೇವಿಯು ಪೃಥುರಾಯನನ್ನು ಸ್ತುತಿಸಿದ್ದು.

"ಆ ಬಳಿಕ ಮೈತ್ರೇಯಮಹರ್ಷಿಯು ವಿದುರನನ್ನು ಕುರಿತು 'ಎಲೈ ವಿದುರನೇ, ಭಗವಂತನಾದ ಪೃಥುರಾಯನು ಈ ಪ್ರಕಾರವಾಗಿ ಸ್ತುತಿಪಾಠಕರಿಂದ ತನ್ನ ಗುಣಕರ್ಮಗಳನ್ನು ಪ್ರಖ್ಯಾಪನಂಗೈಯಲ್ಪಟ್ಟವನಾಗಿ ಆ ಸ್ತುತಿಪಾ

ತಕರಿಗೆ ಭೂಷಣಾದಿಗಳನ್ನಿತ್ತು ಅವರನ್ನು ಸಂತೋಷಪಡಿಸಿ ಬ್ರಾಹ್ಮಣಾದಿ ಚಾತುರ್ವರ್ಣಗಳನ್ನು ಭೃತ್ಯರನ್ನು ಮಂತ್ರಿಗಳನ್ನು ಪುರೋಹಿತರನ್ನು ಪುರದಲ್ಲಿರುವ ಜನರನ್ನು ದೇಶದಲ್ಲಿರುವ ಜನರನ್ನು ಅಭ್ಯಂಜನ ತಾಂಬೂಲಾದಿಗಳಿಂದ ಉಪಚಾರಂಗೈವ ಜನರನ್ನು ನಿಯೋಗಿಗಳನ್ನೂ ಸಹ ಪೂಜಿಸಿದನು’ ಎಂದು ನುಡಿದನು.

“ಆ ವಾಕ್ಯವನ್ನು ಕೇಳಿ ವಿದುರನು ‘ಎಲೈ ಮೈತ್ರೇಯಋಷಿಯೆ, ನಾನಾರೂಪಧಾರಿಯಾದ ಭೂಮಿಯು ಯಾವ ನಿಮಿತ್ತವಾಗಿ ಗೋರೂಪವನ್ನು ಧರಿಸಿದಳು? ಪೃಥುರಾಯನು ಯಾವ ವಸ್ತುಗಳನ್ನು ಕರೆದನು? ಕರುವು ಯಾವದು? ಪಾತ್ರೆ, ಯಾವದು? ಸ್ವಭಾವದಿಂದಲೇ ವಿಷಮಳಾದ ಭೂದೇವಿಯು ಹ್ಯಾಗೆ ಪೃಥುರಾಯನಿಂದ ನಮ್ರವಾಗಿ ಮಾಡಲ್ಪಟ್ಟಳು? ಕ್ರತುಯೋಗ್ಯವಾಗಿ ಪವಿತ್ರವಾದ ಪೃಥುರಾಯನ ಅಶ್ವವನ್ನು ದೇವೇಂದ್ರನು ಯಾಕೆ ಅಪಹರಿಸಿದನು? ಎಲೈ ಬ್ರಾಹ್ಮಣೋತ್ತಮನೇ, ಬ್ರಹ್ಮವೇತ್ತೃಗಳಲ್ಲಿ ಉತ್ತಮನಾಗಿ ಭಗವಂತನಾದ ಸನತ್ಕುಮಾರ ಋಷಿಯ ದೆಸೆಯಿಂದ ಅಪರೋಕ್ಷಜ್ಞಾನಸಹಿತವಾದ ವೇದಾಂತಜ್ಞಾನದಿಂದ ರಾಜರ್ಷಿಯಾದ ಪೃಥುರಾಯನು ಯಾವ ಗತಿಯನ್ನೈದಿದನು? ಮನೋಹರವಾದ ಕೀರ್ತಿಯುಳ್ಳ ಪ್ರಭುವಾದ ಭಗವಂತನಾದ ಶ್ರೀಕೃಷ್ಣನ ಪ್ರಥಮಾವತಾರರೂಪನಾದ ಪೃಥುರಾಯನ ಕಥಾರೂಪವಾದ ಪುಣ್ಯಕರವಾದ ಯಶಸ್ಸು ಯಾವಯಾವದುಂಟೋ ಅದನ್ನು ನಿನಗೂ ಭಗವಂತನಿಗೂ ಪರಮಭಕ್ತನಾಗಿ ಅನುರಕ್ತನಾದ ನನಗೋಸ್ಕರ ಉಪದೇಶಂಗೈವವನಾಗು; ಭಗವಂತನು ಪೃಥುರೂಪದಿಂದ ಭೂಮಿಯನ್ನು ಕರೆದ ಪ್ರಕಾರವನ್ನೂ ನಿರೂಪಿಸು’ ಎಂದು ಪ್ರಶ್ನೆಗೈದನು.

ಮೈತ್ರೇಯಋಷಿಯು ಪ್ರೀತಿಮನಸ್ಕನಾಗಿ ವಿದುರನನ್ನು ಕುರಿತು “ಎಲೈ ವಿದುರನೇ, ಆ ಬಳಿಕ ಋಷಿಗಳಿಂದ ಪ್ರೇರಿತನಾದ ಪೃಥುರಾಯನು ಪಟ್ಟಾಭಿಷಿಕ್ತನಾಗಿ ಪ್ರಜಾರಕ್ಷಣೋದ್ಯುಕ್ತನಾಗಲು ಆಗ ಮಹತ್ತಾದ ಕ್ಷಾಮವು ಪ್ರಾಪ್ತವಾಗಿ ಭೂಮಂಡಲವು ಅನ್ನರಹಿತವಾಗಿರಲಾಗಿ ಪ್ರಜೆಗಳು ಕ್ಷುತ್ತಿನಿಂದ ಪೀಡಿತರಾಗಿ ಕೃಶರಾಗಿ ಭೂಪತಿಯಾದ ಪೃಥುರಾಯನನ್ನು ಕುರಿತು ‘ಎಲೈ ಅರಸೇ, ಗರ್ಭದಲ್ಲಿ ಜ್ವಲಿಸುವ ಅಗ್ನಿಯಿಂದ ವೃಕ್ಷಗಳು ದಹಿಸಲ್ಪಡುವಂತೆ ಜಠರಾಗ್ನಿಯಿಂದ ತಪ್ತರಾದ ನಾವು ರಕ್ಷಕನಾದ ನಿನ್ನನ್ನು ಶರಣುಹೊಂದಿದೇವೆ; ಋಷಿಗಳು ನಿನ್ನನ್ನು ನಮಗೆ ಜೀವನಪ್ರದನಾದ ಪತಿಯನ್ನಾಗಿ ನಿರ್ಮಿಸಿದರು; ನಾವು ಅನ್ನವನ್ನು ಕಾಣದೆ ಕ್ಷಯಿಸಿಹೋಗುವದಕ್ಕೆ ಮೊದಲೇ ಕ್ಷುತ್ಪೀಡಿತರಾದ ನಮಗೆ ಅನ್ನವನ್ನು ಕೊಡುವದಕ್ಕೆ ಯತ್ನವನ್ನು ಮಾಡು; ನಮಗೆ ಜೀವನಕಲ್ಪನೆಯಲ್ಲಿ ಸಮರ್ಥನಾದ ಲೋಕಪಾಲಕನು ನೀನೇಹೊರ್ತು ಮತ್ತ್ಯಾರೂ ಇಲ್ಲ’ ಎಂದು ಪ್ರಾರ್ಥಿಸುತಲಿರುವ ಪ್ರಜೆಗಳ ದೀನವಾದ ರೋದನವನ್ನು ಕೇಳಿ ಪೃಥುರಾಯನು ಬಹಳವಾಗಿ ಚಿಂತಿಸಿ ಕ್ಷಾಮನಿಮಿತ್ತವನ್ನು ಬುದ್ಧಿಯಿಂದ ಆಲೋಚಿಸಿ ತಿಳಿದು ಧನುಸ್ಸನ್ನು ತೆಗೆದುಕೊಂಡು ತ್ರಿಪುರಾಂತಕನಾದ ಪರಮೇಶ್ವರನಂತೆ ಕೋಪಿಷ್ಠನಾಗಿ ಭೂಮಿಯನ್ನು ಕುರಿತು ಬಾಣವನ್ನು ಸಂಧಾನಂಗೈದನು; ಆಗ ಧನುರ್ಧಾರಿಯಾದ ಪೃಥುರಾಯನನ್ನು ನೋಡಿ ಭೂಮಿಯು ಗೋರೂಪಧಾರಿಣಿಯಾಗಿ ಭಯದಿಂದ ನಡುಗುತ ಬೇಟೆಗಾರನಾದ ಕಿರಾತನಿಂದ ಅಟ್ಟಲ್ಪಟ್ಟ ಹೆಣ್ಣು ಹುಲ್ಲೆಯಂತೆ ಓಡಿಹೋಗಲು ಕೋಪದಿಂದ ಕೆಂಪಾದ ನೇತ್ರಗಳುಳ್ಳ ಪೃಥುರಾಯನು ಧನುಸ್ಸಿನಲ್ಲಿ ಬಾಣವನ್ನು ಸಂಧಾನಂಗೈದುಕೊಂಡು ಎಲ್ಲಿಹೋದರೂ ಬಿಡದೆ ಅಟ್ಟಿಕೊಂಡು ಹೋದನು; ಆ ಭೂದೇವಿಯು ದಿಕ್ಕುದಿಕ್ಕುಗಳನ್ನೂ ಭೂಮ್ಯಾಕಾಶಗಳನ್ನೂ ಅವರ ಮಧ್ಯವನ್ನೂ ಸುತ್ತುತ ಹಿಂದಿರುಗಿ ನೋಡಿದರೆ ಹಿಂದೆಯೇ ಧನುರ್ಧಾರಿಯಾಗಿ ಬರುತಲಿರುವ ಪೃಥುರಾಯನನ್ನು ಕಂಡು ಮೃತ್ಯುವಿನದೆಸೆಯಿಂದ ರಕ್ಷಕನನ್ನು ಪಡೆಯದ ಪ್ರಜೆಗಳಂತೆ ಪೃಥುರಾಯನ ದೆಸೆಯಿಂದ ರಕ್ಷಿಸುವ ಪುರುಷನನ್ನು ಕಾಣದೆ ಭಯಪಟ್ಟವಳಾಗಿ ದುಃಖಿತವಾದ ಹೃದಯದಿಂದ ಭೂದೇವಿಯು ಹಿಂತಿರುಗಿ ಪೃಥುರಾಯನನ್ನು ಕುರಿತು ‘ಎಲೈ ಮಹಾನುಭಾವನೇ, ಧರ್ಮಜ್ಞನೇ, ದೀನವತ್ಸಲನಾದ ಮಹಾಪುರುಷನೇ, ನೀನು ಸರ್ವಭೂತ ರಕ್ಷಕನಾದವನು; ನನ್ನನ್ನು ರಕ್ಷಿಸು; ನಿರಪರಾಧಳಾಗಿ ದೀನಳಾದ ನನ್ನನ್ನು ಧರ್ಮಾತ್ಮನಾದ ನೀನು ಯಾಕೆ ಸಂಹರಿಸಲಿಚ್ಛೈಸುತ್ತೀಯೆ; ಧರ್ಮಜ್ಞನೆಂದು ಹೆಸರುಪಡೆದ ಲೋಕಸಮ್ಮತನಾದ ಪುರುಷನು ಸ್ತ್ರೀಯನ್ನು ಹ್ಯಾಗೆ ಸಂಹರಿಸ್ಯನು; ಲೋಕದಲ್ಲಿ ಸಮಸ್ತ ಪ್ರಾಣಿಗಳೂ ಅಪರಾಧವನ್ನು ಮಾಡಿರುವ ಸ್ತ್ರೀಯರನ್ನು

ಸಂಹರಿಸುವದಿಲ್ಲ; ದಯಾಶಾಲಿಗಳಾಗಿ ದೀನವತ್ಸಲರಾದ ನಿನ್ನಂಥಾ ಮಹಾಪುರುಷರು ಸ್ತ್ರೀಯರ ವಿಷಯದಲ್ಲಿ ಸಂಹಾರಬುದ್ಧಿಯನ್ನು ಮಾಡುವದಿಲ್ಲವೆಂಬ ಅರ್ಥವನ್ನು ಹೇಳತಕ್ಕದ್ದೇನು; ಯಾವ ನನ್ನಲ್ಲಿ ಸಮಸ್ತ ಪ್ರಾಣಿಸಮೂಹವು ಇದೆಯೋ ದೃಢವಾದ ನಾವೆಯಂತೆ ಜಲದಲ್ಲಿ ತೇಲುತಲಿರುವ ಅಂಥಾ ನನ್ನನ್ನು ಸಂಹರಿಸಿ ನೀನೂ ನಿನ್ನ ಪ್ರಜೆಗಳೂ ಸಹ ಮಹಾಜಲದಲ್ಲಿ ಹ್ಯಾಗೆ ಇರುತ್ತೀರಿ' ಎಂದು ಪ್ರಾರ್ಥಿಸಿದಳು.

“ಆ ವಾಕ್ಯವನ್ನು ಕೇಳಿ ಪೃಥುರಾಯನು ‘ಎಲೈ ಭೂಮಿದೇವಿಯೇ, ನನ್ನ ಆಜ್ಞೆಯನ್ನುಲ್ಲಂಘಿಸಿದ ನಿನ್ನನ್ನು ಸಂಹರಿಸುತ್ತೇನೆ; ಯಜ್ಞದಲ್ಲಿ ದೇವತಾರೂಪದಿಂದ ಹವಿರ್ಭಾಗವನ್ನು ಗ್ರಹಿಸುತ್ತೀಯೆ; ಧಾನ್ಯಾದಿ ವಸ್ತುಗಳನ್ನು ಯಾಕೆ ನೀನು ಕೊಡುವದಿಲ್ಲ? ಪ್ರತಿದಿವಸದಲ್ಲಿಯೂ ಯಥೇಚ್ಛವಾಗಿ ಹುಲ್ಲನ್ನು ಮೇದುಕೊಂಡು ಕೆಚ್ಚಲಿನಲ್ಲಿರುವ ಕ್ಷೀರವನ್ನು ಕೊಡದೆ ವಂಚನೆಯನ್ನು ಮಾಡುವ ಗೋವನ್ನು ಶಿಕ್ಷಿಸಿದರೆ ಶಾಸ್ತ್ರವಿರುದ್ಧವಲ್ಲ! ಎಲೈ ಭೂಮಿಯೆ, ನೀನು ನನ್ನನ್ನು ಗಣನೆಮಾಡದೆ ಬ್ರಹ್ಮದೇವನಿಂದ ಪೂರ್ವದಲ್ಲಿ ಸೃಷ್ಟಿಸಲ್ಪಟ್ಟ ಓಷಧಿಗಳನ್ನು ಬಿತ್ತಿಸಿದಾಗ್ಯೂ ಆ ಬೀಜಗಳನ್ನು ಗರ್ಭದಲ್ಲೇ ಇರಿಸಿಕೊಂಡು ಫಲಗಳನ್ನು ತೋರಿಸದೆ ವಂಚನೆಮಾಡುತ್ತೀಯೆ; ಅದುಕಾರಣ ನನ್ನ ಬಾಣಗಳಿಂದ ಭೇದಿಸಲ್ಪಟ್ಟ ನಿನ್ನ ಶರೀರದ ಮಾಂಸದಿಂದ ಕ್ಷುತ್ಪೀಡಿತರಾದ ಈ ಪ್ರಜೆಗಳ ರೋದನವನ್ನು ಶಾಂತಿಮಾಡುತ್ತೇನೆ; ತನ್ನ ಶರೀರವನ್ನು ಮಾತ್ರ ಪೋಷಿಸಿಕೊಂಡು ಅಧಮರಾಗಿ ಪ್ರಾಣಿಗಳಲ್ಲಿ ದಯಾರಹಿತರಾದವರು ಪುರುಷರಾಗಲಿ ಸ್ತ್ರೀಯರಾಗಲಿ ನಪುಂಸಕರಾಗಲಿ ಅವರನ್ನು ಸಂಹರಿಸಿದರೆ ದೊರೆಗಳಿಗೆ ದೋಷವಿಲ್ಲ; ಸ್ತಬ್ಧಳಾಗಿ ದುಷ್ಟಳಾದ ಮದವುಳ್ಳವಳಾಗಿ ಕಪಟ ಗೋರೂಪಧಾರಿಣಿಯಾದ ನಿನ್ನನ್ನು ಬಾಣಗಳಿಂದ ತಿಲಪ್ರಮಾಣವುಳ್ಳ ಖಂಡಗಳನ್ನಾಗಿ ಮಾಡಿ ನನ್ನ ಯೋಗಸಾಮರ್ಥ್ಯ ಬಲದಿಂದ ಈ ಪ್ರಜೆಗಳನ್ನು ಪೋಷಿಸುತ್ತೇನೆಂದು ಕ್ರೋಧಮಯವಾದ ಶರೀರವನ್ನು ಧರಿಸಿ ಸಾಕ್ಷಾದ್ಯಮನಂತಿರುವ ಪೃಥುರಾಯನನ್ನು ನಮಸ್ಕರಿಸಿ ಭೂಮಿಯು ಭೀತಳಾಗಿ ಕೈಮುಗಿದು ಶುದ್ಧಸತ್ವಸ್ವರೂಪನಾದಾಗ್ಯೂ ಆಕಸ್ಮಿಕವಾದ ಕ್ರೋಧದಿಂದ ಭಯಂಕರನಾದ ಪೃಥುರಾಯನನ್ನು ನೋಡಿ ದೀನಗಳಾದ ವಾಕ್ಯಗಳಿಂದ ಸ್ತುತಿಗೈದಳು; ಮಾಯೆಯಿಂದ ರಚಿತಗಳಾದ ನಾನಾಪ್ರಕಾರಗಳಾದ ಘೋರಗಳಾದ ಶರೀರಗಳುಳ್ಳವನಾಗಿ ಗುಣತ್ರಯಮಯನಂತೆ ತೋರುತಲಿರುವ ಪರಮಪುರುಷನಿಗೋಸ್ಕರ ನಮಸ್ಕಾರವು! ನಿಜರೂಪಾನುಭವದಿಂದ ಪರಿಹರಿಸಲ್ಪಟ್ಟ ದ್ರವ್ಯಕ್ರಿಯಾಕಾರಕರೂಪಗಳಾದ ಅಧಿಭೂತ ಅಧ್ಯಾತ್ಮ ಅಧಿದೈವಗಳೆಂಬ ವಿಕಾರಗಳಲ್ಲಿ ಉಂಟಾದ ಅಹಂಕಾರದಿಂದ ಜನಿಸಿದ ರಾಗದ್ವೇಷಾದಿಗಳುಳ್ಳ ಪರಮಾತ್ಮನಿಗೋಸ್ಕರ ನಮಸ್ಕಾರವು! ಚತುರ್ವಿಧ ಭೂತಸಮುದಾಯವು ಯಾವನಲ್ಲಿ ಸ್ಥಿತಿಯನ್ನೈದಿದೆಯೋ ಅಂಥಾ ನಾನು ಯಾವ ಪರಮಪುರುಷನಿಂದ ಸರ್ವಜೀವಗಳಿಗೂ ಆಶ್ರಯಳಾಗಿ ಮಾಡಲ್ಪಟ್ಟೆನೋ ಸ್ವತಂತ್ರನಾದ ಆ ಪುರುಷನೇ ಧನುರ್ಧಾರಿಯಾಗಿ ನನ್ನನ್ನು ಸಂಹರಿಸಲೋಸುಗ ಬಂದರೆ ನಾನು ಮತ್ತೆ ಯಾರನ್ನು ಶರಣು ಹೊಂದೇನು; ಯಾವ ಪರಮಾತ್ಮನು ಜೀವೋಪಾಧಿರೂಪವಾಗಿ ಊಹಿಸಲಶಕ್ಯವಾದ ತನ್ನ ಮಾಯೆಯಿಂದಲೇ ಜಗತ್ತನ್ನು ರಕ್ಷಿಸಲೋಸುಗ ಉದ್ಯುಕ್ತನಾಗಿ ಪರನಾಗಿ ನನ್ನನ್ನು ಹ್ಯಾಗೆ ಸಂಹರಿಸಲಿಚ್ಛೈಸುತ್ತಾನೆ; ಆ ಈಶ್ವರನ ಮಾಯೆಯಿಂದ ಮೋಹಿತವಾದ ಬುದ್ಧಿಯುಳ್ಳ ಜನರಿಂದ ಆ ಈಶ್ವರನ ವ್ಯಾಪಾರವು ತಿಳಿಯಲಶಕ್ಯವು; ಇದು ನಿಶ್ಚಯವು; ಈಶ್ವರನು ಮೊದಲು ಬ್ರಹ್ಮನನ್ನು ಸೃಜಿಸಿ ಆತನಿಂದ ಮಹಾಸೃಷ್ಟಿಯನ್ನು ಮಾಡಿಸಿದನು; ತಾನು ಒಬ್ಬನೇ ಆದಾಗ್ಯೂ ಮಾಯೆಯಿಂದ ಅನೇಕರೂಪನಾಗಿರುವನು; ಯಾವ ಪರಮೇಶ್ವರನು ಪಂಚಮಹಾಭೂತಗಳು ಇಂದ್ರಿಯಗಳು ದೇವತೆಗಳು ಬುದ್ಧಿಯು ಅಹಂಕಾರವು ಇವುಗಳೆಂಬ ಶಕ್ತಿಗಳಿಂದ ಈ ಜಗತ್ತಿನ ಸೃಷ್ಟಿಸ್ಥಿತಿಸಂಹಾರಗಳನ್ನು ಅನುವರ್ತಿಸುತ್ತಾನೆಯೋ ಅಧಿಕಗಳಾಗಿ ಪರಸ್ಪರ ವಿರುದ್ಧಗಳಾದ ಶಕ್ತಿಗಳುಳ್ಳ ಜಗತ್ಪ್ರವರ್ತಕನಾದ ಅಂಥಾ ಮಹಾಪುರುಷನಿಗೋಸ್ಕರ ನಮಸ್ಕಾರವು! ಎಲೈ ಅನಾದ್ಯನಂತನಾದ ಪುರುಷನೆ, ಪಂಚಭೂತಗಳು ಇಂದ್ರಿಯಗಳು ಅಂತಃಕರಣವು ಏತದಾತ್ಮಕನಾಗಿ ನಿನ್ನಿಂದಲೇ ರಚಿಸಲ್ಪಟ್ಟ ಜಗತ್ತನ್ನು ಸ್ಥಿರವಾಗಿ ನಿಲ್ಲಿಸುವವನಾಗಿ ಆದಿವರಾಹರೂಪನಾಗಿ ಪ್ರಳಯೋದಕದಲ್ಲಿ ಮುಳುಗಿದ್ದ ನನ್ನನ್ನು ಪಾತಾಳದಿಂದ ಎತ್ತಿದವನಾದೆ; ಈಗ ಮಹಾಜಲದ ಮೇಲೆ

ನಾವೆಯಂತೆ ಸರ್ವಪ್ರಾಣಿಗಳಿಗೂ ಆಧಾರರೂಪಳಾದ ನನ್ನಲ್ಲಿರುವ ಪ್ರಜೆಗಳನ್ನು ರಕ್ಷಿಸಲಿಚ್ಛೆಯುಳ್ಳವನಾಗಿ ವೀರಮೂರ್ತಿಯಾದ ಪೃಥುರಾಯ ರೂಪನಾಗಿ ಅವತರಿಸಿ ತೀಕ್ಷ್ಣಗಳಾದ ಬಾಣಗಳುಳ್ಳವನಾಗಿ ಕ್ಷೀರನಿಮಿತ್ತವಾಗಿ ನನ್ನನ್ನು ಸಂಹರಿಸಲಿಚ್ಛೈಸುತ್ತೀಯೆ; ಈಶ್ವರಗುಣಪ್ರವಾಹರೂಪವಾದ ಮಾಯೆಯಿಂದ ಮೋಹಿತಚಿತ್ತರಾದ ನಮ್ಮಂಥಾ ಮೂಢರಿಂದ ಭಗವದ್ಭಕ್ತರ ವ್ಯಾಪಾರಗಳೇ ತಿಳಿಯಲ್ಪಡುವದಿಲ್ಲ; ಹಾಗಿರುವಲ್ಲಿ ಸಾಕ್ಷಾದ್ಭಗವಂತನ ವ್ಯಾಪಾರಗಳು ಹ್ಯಾಗೆ ತಿಳಿಯಲ್ಪಟ್ಟಾವು; ಆದರಿಂದ ವೀರಕೀರ್ತಿ ಸಂಪಾದಕರಾದ ಅಂಥಾ ಭಗವದ್ಭಕ್ತರಿಗೋಸ್ಕರ ನಮಸ್ಕಾರವು" ಎಂದು ಭೂದೇವಿಯು ಪ್ರಾರ್ಥಿಸಿದಳು.

೧೮ ನೇ ಅಧ್ಯಾಯ.

ಗೋರೂಪಧಾರಿಣಿಯಾದ ಭೂದೇವಿಯು ಕೆಚ್ಚಲಿನಲ್ಲಿ ಪೃಥುರಾಯನು ಬೇಕಾದ ಪದಾರ್ಥಗಳನ್ನು ಕರೆದುಕೊಂಡದ್ದು.

"ಆ ಬಳಿಕ ಭೂದೇವಿಯು ಕೋಪದಿಂದ ನಡುಗುವ ಅಧರೋಷ್ಠವುಳ್ಳ ಪೃಥುರಾಯನನ್ನು ಈ ಪ್ರಕಾರವಾಗಿ ಸ್ತುತಿಸಿ ಭೀತಳಾಗಿ ಧೈರ್ಯವನ್ನು ತಂದುಕೊಂಡು ಪುನಃ ಪೃಥುರಾಯನನ್ನು ಕುರಿತು 'ಎಲೈ ಅರಸೇ, ಕೋಪವನ್ನಿಗ್ರಹಿಸು; ನನ್ನಿಂದ ವಿಜ್ಞಾಪಿತವಾದ ಅರ್ಥವನ್ನು ಮನಸ್ಸಿಗೆ ತಂದುಕೊ; ಪ್ರಾಜ್ಞನಾದ ಪುರುಷನು ಭ್ರಮರದಂತೆ ಸಕಲ ವಸ್ತುಗಳ ದೆಶೆಯಿಂದಲೂ ಸಾರವನ್ನು ಸ್ವೀಕರಿಸುತ್ತಾನೆ; ಈ ಲೋಕದಲ್ಲಿಯೂ ಪರಲೋಕದಲ್ಲಿಯೂ ಸಹ ಪುರುಷನಿಗೆ ಶ್ರೇಯಸ್ಸಿದ್ಧಿಗೋಸ್ಕರ ವಸ್ತುಸ್ವರೂಪ ಜ್ಞಾನಿಗಳಾದ ಮುನಿಗಳಿಂದ ಉಪಾಯಗಳು ಚಿಂತಿಸಲ್ಪಟ್ಟಿವೆ; ಯಾವ ಪುರುಷನು ಪೂರ್ವಿಕರಿಂದ ನಿರ್ಣಯಿಸಲ್ಪಟ್ಟ ಆ ಉಪಾಯಗಳನ್ನು ಶ್ರದ್ಧಾವಂತನಾಗಿ ಆದರಿಸುತ್ತಾನೆಯೋ ಅವನು ಶೀಘ್ರವಾಗಿ ಫಲಸಿದ್ಧಿಯನ್ನೈದುತ್ತಾನೆ; ಅಪ್ರಾಜ್ಞನಾದ ಪುರುಷನು ಆ ಉಪಾಯಗಳನ್ನು ಆದರಿಸದೆ ಸ್ವಲ್ಪಬುದ್ಧಿಯಿಂದ ಕಾರ್ಯಗಳನ್ನಾರಂಭಿಸಿದರೆ ಆ ಪುರುಷನ ಪ್ರಯತ್ನಗಳು ಫಲಿಸುವದಿಲ್ಲ! ಎಲೈ ಅರಸೆ, ಪೂರ್ವದಲ್ಲಿ ಬ್ರಹ್ಮನಿಂದ ಸೃಷ್ಟಿಸಲ್ಪಟ್ಟ ಓಷಧಿಗಳು ವ್ರತನಿಯಮಾದಿರಹಿತರಾದ ಅಸತ್ಪುರುಷರಾದ ಅರಸುಗಳಿಂದ ಭುಂಜಿಸಲ್ಪಡುವವಾಗಿ ನನ್ನಿಂದ ಕಂಡಲ್ಪಟ್ಟವು; ಲೋಕಪಾಲಕರಾದ ನಿಮ್ಮಂಥಾ ಮಹಾಪುರುಷರಿಂದ ನಾನು ಆದರಿಸಲ್ಪಡಲಿಲ್ಲ; ರಕ್ಷಿಸಲ್ಪಡಲೂ ಇಲ್ಲ; ಚೋರಭೂಯಿಷ್ಟವಾದ ಈ ಲೋಕದಲ್ಲಿ ಯಜ್ಞಾರ್ಥವಾಗಿ ದೇವತಾಹವಿರ್ಭಾಗ ಯೋಗ್ಯಗಳಾದ ಶ್ಲಾಘ್ಯಪದಾರ್ಥಗಳು ವ್ಯರ್ಥವಾಗಿ ದುಷ್ಟರಪಾಲಾಗಿ ಹೋಗುತ್ತದೆಂದು ನಾನು ಸಮಸ್ತವಾದ ಓಷಧಿಗಳನ್ನು ನನ್ನಲ್ಲಿರಿಸಿಕೊಂಡೆನು; ಮಹಾಕಾಲವು ಅತಿಕ್ರಮಿಸಿ ಹೋದದ್ದರಿಂದ ಆ ಓಷಧಿಗಳು ಜೀರ್ಣಗಳಾಗಿ ಹೋದವು; ಅದುಕಾರಣ ಉಪಾಯದಿಂದ ನೀನು ಆ ಓಷಧಿಗಳ ಸಾರವನ್ನು ಸ್ವೀಕರಿಸುವನಾಗು! ಎಲೈ ವೀರನೆ, ನಾನು ನಿನಗೆ ಪ್ರೀತಿಪಾತ್ರಳಾಗಿ ಗೋರೂಪಿಣಿಯಾದ್ದರಿಂದ ಅನುರೂಪವಾದ ಕರುವನ್ನೂ ಯೋಗ್ಯವಾದ ಪಾತ್ರೆಯನ್ನೂ ಕಲ್ಪಿಸು; ಕ್ಷೀರಮಯವಾದ ಇಷ್ಟಾರ್ಥವನ್ನು ಕೊಡುತ್ತೇನೆ; ಭೂತಭಾವನನಾದ ಭಗವಂತನಾದ ನೀನು ಪ್ರಾಣಿಗಳಿಗೆ ಬಲವೃದ್ಧಿಕರವಾದ ಅನ್ನವನ್ನು ಕಲ್ಪಿಸಲಿಚ್ಛೆಯುಳ್ಳವನಾದರೆ ಕರೆಯುವ ಪುರುಷನನ್ನೂ ಸಹ ಕಲ್ಪಿಸು! ಎಲೈ ಪ್ರಭುವಾದ ಅರಸೆ, ನಿನಗೆ ಕ್ಷೇಮವಾಗಲಿ; ನನ್ನನ್ನು ಸಮಭೂಮಿಯನ್ನಾಗಿ ಮಾಡು; ವರ್ಷಾಕಾಲವನ್ನು ಹೊರತು ಇತರ ಕಾಲಗಳಲ್ಲಿಯೂ ಕೂಡ ನನಗೆ ಕ್ಷೀರವೃದ್ಧಿಯುಂಟಾಗುವಹಾಗೆ ಮಾಡು' ಎಂದು ಪ್ರಾರ್ಥಿಸಿದಳು.

"ಈರೀತಿ ಪ್ರಿಯಹಿತವಾದ ಭೂದೇವಿಯ ವಾಕ್ಯವನ್ನು ಗ್ರಹಿಸಿ ಪೃಥುರಾಯನು ಮನುವನ್ನು ಕರುವನ್ನಾಗಿ ಮಾಡಿ ತನ್ನ ಹಸ್ತವೆಂಬ ಪಾತ್ರೆಯಲ್ಲಿ ಓಷಧಿಯನ್ನು ಕರೆದನು; ಆಮೇಲೆ ಮತ್ತೆ ಕೆಲವರು ಪ್ರಾಜ್ಞರು ತಮಗೆ ಬೇಕಾದ ಸಾರವಸ್ತುಗಳನ್ನು ಕರೆದುಕೊಂಡರು! ಎಲೈ ವಿದುರನೇ, ಋಷಿಗಳು ಪೃಥುರಾಯನಿಂದ ವಶೀಕೃತಳಾದ

ಭೂದೇವಿಯಿಂದ ಬೃಹಸ್ಪತಿಯನ್ನು ಕರುವಾಗಿ ಮಾಡಿಕೊಂಡು ಇಂದ್ರಿಯಗಳೆಂಬ ಪಾತ್ರೆಯಲ್ಲಿ ವೇದಮಯವಾಗಿ ಪರಿಶುದ್ಧವಾದ ಕ್ಷೀರವನ್ನು ಕರೆದುಕೊಂಡರು; ದೇವಸಮೂಹಗಳು ಇಂದ್ರನನ್ನು ಕರುವಾಗಿ ಮಾಡಿಕೊಂಡು ಅಮೃತವನ್ನು ಮನಶ್ಶಕ್ತಿಯನ್ನು ಇಂದ್ರಿಯಶಕ್ತಿಯನ್ನು ದೇಹಬಲವನ್ನು ಸಹ ಸುವರ್ಣ ಪಾತ್ರೆಯಲ್ಲಿ ಕರೆದರು; ದೈತ್ಯದಾನವರು ಅಸುರೋತ್ತಮನಾದ ಪ್ರಹ್ಲಾದನನ್ನು ಕರುವಾಗಿಮಾಡಿಕೊಂಡು ಕಬ್ಬಿಣ ಪಾತ್ರೆಯಲ್ಲಿ ಸುರಾ ಮದ್ಯಗಳನ್ನು ಕರೆದರು; ಗಂಧರ್ವಾಪ್ಸರಸ್ಸುಗಳು ಗಂಧರ್ವರಾಜನಾದ ವಿಶ್ವಾವಸುವನ್ನು ಕರುವಾಗಿಮಾಡಿಕೊಂಡು ಪದ್ಮಪಾತ್ರೆಯಲ್ಲಿ ಗಂಧವನ್ನು ಮಾಜನ್ಮಾಧುರ್ಯವನ್ನು ಸೌಂದರ್ಯವನ್ನು ಸಹ ಕರೆದರು; ಪಿತೃದೇವತೆಗಳು ಅರ್ಯಮನೆಂಬ ಸೂರ್ಯನನ್ನು ಕರುವಾಗಿಮಾಡಿಕೊಂಡು ಅಪಕ್ವವಾದ ಮೃಣ್ಮಯಪಾತ್ರೆಯಲ್ಲಿ ಶ್ರದ್ಧಾಪೂರ್ವಕವಾಗಿ ಪಿತೃಯೋಗ್ಯವಾಗಿ ಕವ್ಯರೂಪವಾದ ಕ್ಷೀರವನ್ನು ಕರೆದರು; ಸಿದ್ಧರು ಕಪಿಲಋಷಿಯನ್ನು ಕರುವಾಗಿ ಮಾಡಿಕೊಂಡು ಅಣಿಮಾದಿ ಸಿದ್ಧಿಗಳನ್ನು ಕರೆದರು; ವಿದ್ಯಾಧರರು ಕಪಿಲಋಷಿಯನ್ನು ಕರುವಾಗಿ ಮಾಡಿಕೊಂಡು ಆಕಾಶವೆಂಬ ಪಾತ್ರೆಯಲ್ಲಿ ಆಕಾಶಗಮನ ವಿದ್ಯೆಯನ್ನು ಕರೆದರು; ಕಿಂಪುರುಷರಾದ ಮಾಯಾವಿಗಳು ಮಯನನ್ನು ಕರುವಾಗಿ ಮಾಡಿ ಅಂತರ್ಧಾನವಿದ್ಯೆಯನ್ನು ಸಂಕಲ್ಪಮಾತ್ರದಿಂದಲೇ ಉಂಟಾಗುವ ಮಾಯಾವಿದ್ಯೆಯನ್ನು ಕರೆದರು; ಯಕ್ಷ ರಾಕ್ಷಸ ಭೂತ ಪಿಶಾಚಗಳು ಮೊದಲಾದ ಮಾಂಸಾಹಾರಿಗಳು ರುದ್ರನನ್ನು ಕರುವಾಗಿ ಮಾಡಿಕೊಂಡು ಕಪಾಲಪಾತ್ರೆಯಲ್ಲಿ ರಕ್ತವೆಂಬ ಮದ್ಯವನ್ನು ಕರೆದರು; ಫಣಾರಹಿತಗಳಾದ ಸರ್ಪಜಾತಿವಿಶೇಷಗಳು ವೃಶ್ಚಿಕ ಮೊದಲಾದ ಜಂತುಗಳು ಹೆಡೆಗಳುಳ್ಳ ಸರ್ಪಗಳು ಕದ್ರುದೇವಿಯ ಸಂತತಿಯಲ್ಲಿ ಜನಿಸಿದ ಮಹಾಸರ್ಪಗಳು ಇವುಗಳೆಲ್ಲವೂ ತಕ್ಷಕನನ್ನು ಕರುವಾಗಿ ಮಾಡಿಕೊಂಡು ಬಿಲಪಾತ್ರದಲ್ಲಿ ವಿಷವನ್ನು ಕರೆದರು; ಪಶುಗಳು ರುದ್ರವಾಹನವಾದ ವೃಷಭವನ್ನು ಕರುವಾಗಿ ಮಾಡಿಕೊಂಡು ಅರಣ್ಯವೆಂಬ ಪಾತ್ರೆಯಲ್ಲಿ ಹುಲ್ಲುಗಳನ್ನು ಕರೆದವು; ಕೋರದಾಡೆಗಳುಳ್ಳ ದುಷ್ಟಮೃಗಗಳು ಸಿಂಹವನ್ನು ಕರುವಾಗಿ ಮಾಡಿಕೊಂಡು ಸ್ವಶರೀರವೆಂಬ ಪಾತ್ರೆಯಲ್ಲಿ ಮಾಂಸವನ್ನು ಕರೆದವು; ಪಕ್ಷಿಗಳು ಗರುಡನನ್ನು ಕರುವಾಗಿ ಮಾಡಿಕೊಂಡು ಕೀಟಾದಿ ಮಾಂಸವನ್ನು ಫಲರೂಪವಾದ ವಸ್ತುಗಳನ್ನೂ ಕರೆದವು; ವೃಕ್ಷಗಳು ವಟವನ್ನು ಕರುವಾಗಿ ಮಾಡಿಕೊಂಡು ನಾನಾರೂಪವಾದ ಗಂಧವನ್ನು ಕರೆದವು; ಪರ್ವತಗಳು ಹಿಮವಂತನನ್ನು ಕರುವಾಗಿ ಮಾಡಿಕೊಂಡು ನಾನಾರೂಪಗಳಾದ ಗೈರಿಕಾದಿ ಧಾತುಗಳನ್ನು ತಮ್ಮ ತಪ್ಪಲುಗಳೆಂಬ ಪಾತ್ರೆಗಳಲ್ಲಿ ಕರೆದವು; ಇದೇ ರೀತಿಯಲ್ಲಿ ಮಿಗಿಲಾದ ಜನರೂ ಸಹ ತಮ್ಮ ತಮ್ಮ ಜಾತಿಯಲ್ಲಿ ಯಾರು ಶ್ರೇಷ್ಠರೋ ಅವರನ್ನು ಕರುಗಳಾಗಿ ಮಾಡಿಕೊಂಡು ತಮ್ಮ ತಮ್ಮ ಇಷ್ಟಾರ್ಥಗಳನ್ನು ಸ್ವಸ್ವಪಾತ್ರೆಗಳಲ್ಲಿ ಕರೆದರು! ಈಪ್ರಕಾರವಾಗಿ ಅನ್ಯಾಪೇಕ್ಷಿಗಳಾದ ಪೃಥುರಾಯನು ಮೊದಲಾದವರು ಪಾತ್ರಭೇದದಿಂದಲೂ ವಸ್ತುಭೇದದಿಂದಲೂ ತಮತಮಗೆ ಬೇಕಾದ ಅನ್ನವನ್ನು ಕ್ಷೀರರೂಪದಿಂದ ಕರೆದುಕೊಂಡರು; ಅನಂತರದಲ್ಲಿ ಪುತ್ರವತ್ಸಲನಾದ ಪೃಥುರಾಯನು ಸಂತುಷ್ಟನಾಗಿ ಸರ್ವ ಇಷ್ಟಾರ್ಥಗಳನ್ನು ಕರೆಯುವ ಭೂಮಿಯನ್ನು ಪ್ರೇಮದಿಂದ ಪುತ್ರಿಯನ್ನಾಗಿ ಮಾಡಿಕೊಂಡನು; ರಾಜಾಧಿರಾಜನಾಗಿ ಪ್ರಭುವಾದ ಪೃಥುರಾಯನು ತನ್ನ ಧನುಸ್ಸಿನ ಅಗ್ರದಿಂದ ಪರ್ವತಗಳನ್ನು ಚೂರ್ಣೀಕರಿಸಿ ಈ ಭೂಮಂಡಲವನ್ನು ಸಮಸ್ಥಳವನ್ನಾಗಿ ಮಾಡಿದನು; ಅನಂತರದಲ್ಲಿ ಪ್ರಜೆಗಳಿಗೆ ಜೀವನಪ್ರದನಾಗಿ ಪಿತೃವಾಗಿ ಭಗವಂತನಾದ ಪೃಥುರಾಯನು ಈ ಭೂಮಂಡಲದಲ್ಲಿ ಆಯಾ ಪ್ರದೇಶಗಳಲ್ಲಿ ಆವಾಸಸ್ಥಾನಗಳನ್ನು ಕಲ್ಪಿಸಿದನು; ಗ್ರಾಮಗಳನ್ನು ಪುರಗಳನ್ನು ಪತ್ತನಗಳನ್ನು ನಾನಾಪ್ರಕಾರಗಳಾದ ದುರ್ಗಗಳನ್ನು ಗೊಲ್ಲರ ದೊಡ್ಡಿಗಳನ್ನು ಗೋಸ್ಥಾನಗಳನ್ನು ಸೇನಾನಿವೇಶಸ್ಥಾನಗಳನ್ನು ಸುವರ್ಣ ರಜತಸ್ಥಾನಗಳನ್ನು ಋಷಿಗಳುಳ್ಳ ಗ್ರಾಮಗಳನ್ನು ಬೆಟ್ಟದ ಕಿಬ್ಬೆಗಳಲ್ಲಿರುವ ಗ್ರಾಮಗಳನ್ನೂ ಕಲ್ಪಿಸಿದನು; ಪೃಥುರಾಯನಿಗಿಂತಲು ಪೂರ್ವದಲ್ಲಿ ಈ ಭೂಮಿಯಲ್ಲಿ ಪುರ ಗ್ರಾಮಾದಿ ಕಲ್ಪನೆಗಳು ಇರಲಿಲ್ಲ; ಈ ಸ್ಥಾನಗಳಲ್ಲಿ ಈಗ ಪ್ರಜೆಗಳು ಸುಖದಿಂದ ಭಯರಹಿತರಾಗಿ ವಾಸಂಗೈಯುತ್ತಾರೆ" ಎಂದು ನುಡಿದನು.

೧೯ ನೇ ಅಧ್ಯಾಯ.

ಪೃಥುರಾಯನು ನೂರು ಅಶ್ವಮೇಧಯಾಗಗಳನ್ನು ಮಾಡಿದ್ದು.

"ಎಲೈ ವಿದುರನೇ, ಆ ಬಳಿಕ ಪೃಥುರಾಯನು ಬ್ರಹ್ಮಾವರ್ತದಲ್ಲಿ ಪೂರ್ವವಾಹಿನಿಯಾದ ಸರಸ್ವತೀನದೀತೀರದಲ್ಲಿ ಮನುಕ್ಷೇತ್ರದಲ್ಲಿ ಶತಾಶ್ವಮೇಧ ಸಂಕಲ್ಪವನ್ನು ಮಾಡಿ ದೀಕ್ಷಿತನಾದನು ; ಆಗ ಭಗವಂತನಾದ ಇಂದ್ರನು ತನಗಿಂತಲೂ ಅತಿಶಯವಾದ ಪೃಥುರಾಯನ ಯಜ್ಞಮಹೋತ್ಸವವನ್ನು ನೋಡಿ ಸಹಿಸದಿದ್ದನು ; ಆ ಪೃಥುರಾಯನ ಯಜ್ಞಮಹೋತ್ಸವದಲ್ಲಿ ಯಜ್ಞಪತಿಯಾಗಿ ಸರ್ವಾತ್ಮನಾಗಿ ಸರ್ವಲೋಕ ಗುರುವಾಗಿ ಪ್ರಭುವಾಗಿ ಸಾಕ್ಷಾದ್ಭಗವಂತನಾಗಿ ಈಶ್ವರನಾದ ಹರಿಯು ಪ್ರತ್ಯಕ್ಷನಾಗಿ ಬಂದು ಪೂಜಿತನಾದನು ; ಭಗವಂತನು ಬ್ರಹ್ಮನಿಂದಲೂ ಪರಮೇಶ್ವರನಿಂದಲೂ ಅನುಚರ ಸಹಿತರಾದ ಲೋಕಪಾಲಕರಿಂದಲೂ ಸಹಿತನಾಗಿ ಗಂಧರ್ವರಿಂದಲೂ ಮುನಿಗಳಿಂದಲೂ ಅಪ್ಸರಸ್ತ್ರೀಸಮೂಹಗಳಿಂದಲೂ ಗಾನಸ್ತುತ್ಯಮಾನನಾಗಿ ಪ್ರತ್ಯಕ್ಷನಾದನು ; ಸಿದ್ಧರು ವಿದ್ಯಾಧರರು ದೈತ್ಯರು ದಾನವರು ಗುಹ್ಯಕರು ಯಕ್ಷರು ಮೊದಲಾದ ದೇವಯೋನಿ ವಿಶೇಷರು ಸುನಂದನಂದನರು ಮೊದಲಾದ ಶ್ರೀಹರಿಯ ಪಾರಿಷದರು ಕಪಿಲ ಋಷಿಯು ನಾರದನು ದತ್ತಾತ್ರೇಯನು ಸನಕಾದಿ ಮಹಾಯೋಗಿಗಳು ಅವರ ಸೇವಕರಾಗಿ ಪರಮಭಾಗವತರಾದ ಈ ಸಮಸ್ತ ಋಷಿಗಳು ಸಹ ಆ ಭಗವಂತನ ಸಂಗಡಲೇ ಬಂದರು ; ಹವಿರ್ದ್ರವ್ಯಗಳನ್ನು ಕೊಡುವ ಸಾಕ್ಷಾತ್ ಭೂಮಿದೇವಿಯು ಗೋರೂಪಧಾರಿಣಿಯಾಗಿ ಯಜ್ಞದೀಕ್ಷಿತನಾದ ಈ ಪೃಥುರಾಯನಿಗೆ ಸರ್ವ ಇಷ್ಟಾರ್ಥಗಳನ್ನು ಕೊಟ್ಟಳು ; ನದಿಗಳು ಕ್ಷೀರವನ್ನು ದಧಿಯನ್ನು ಅನ್ನವನ್ನು ಗೋರಸಗಳನ್ನು ಇತ್ಯಾದಿ ಸರ್ವರಸಗಳನ್ನು ಪ್ರವಹಿಸಿದವು ; ವೃಕ್ಷಗಳು ಸ್ಥೂಲಗಳಾಗಿ ಉನ್ನತಗಳಾಗಿ ಬೆಳೆದು ಮಕರಂದವನ್ನು ಸ್ರವಿಸುವ ಪುಷ್ಪಫಲಗಳನ್ನು ವಹಿಸಿದವು; ಸಮುದ್ರಗಳು ರತ್ನಸಮೂಹಗಳನ್ನು ಕೊಟ್ಟವು ; ಪರ್ವತಗಳು ಭಕ್ಷ್ಯ ಭೋಜ್ಯ ಲೇಹ್ಯ ಚೋಷ್ಯಗಳೆಂಬ ಚತುರ್ವಿಧಗಳಾದ ಅನ್ನಗಳನ್ನು ಕೊಟ್ಟವು; ತಮ್ಮ ತಮ್ಮ ಅಧಿಪತಿಗಳಿಂದ ಕೂಡಿದ ಸರ್ವಲೋಕಗಳು ಕಾಣಿಕೆಗಳನ್ನು ಒಪ್ಪಿಸಿದವು; ಈ ಪ್ರಕಾರವಾಗಿ ಭಗವಂತನೇ ಈಶ್ವರನಾಗುಳ್ಳ ಪೃಥುರಾಯನ ಮಹತ್ತಾದ ಅಭ್ಯುದಯವನ್ನು ನೋಡಿ ಭಗವಂತನಾದ ಇಂದ್ರನು ಸಹಿಸಲಾರದೆ ಅಸೂಯೆಪಟ್ಟು ವಿಘ್ನವನ್ನು ಮಾಡತೊಡಗಿ ಪೃಥುರಾಯನು ನೂರನೇ ಅಶ್ವಮೇಧ ಕ್ರತುವಿನಿಂದ ಯಜ್ಞಪತಿಯಾದ ಪರಮೇಶ್ವರನನ್ನಾರಾಧಿಸುತ್ತಿರಲಾಗಿ ಇಂದ್ರನು ಸ್ಪರ್ಧೆಯುಳ್ಳವನಾಗಿ ಅದೃಶ್ಯನಾಗಿ ಬಂದು ಯಜ್ಞಪಶುವಾದ ಅಶ್ವವನ್ನಪಹರಿಸಿದನು; ಅಧರ್ಮದಲ್ಲಿ ಧರ್ಮವೆಂಬ ಭ್ರಾಂತಿಯನ್ನುಂಟುಮಾಡುವನಾಗಿ ದೇವೇಂದ್ರನು ಪಾಷಂಡವೇಷವನ್ನು ಧರಿಸಿ ಅಶ್ವವನ್ನಪಹರಿಸಿಕೊಂಡು ತ್ವರೆಯಿಂದ ಆಕಾಶಮಾರ್ಗದಲ್ಲಿ ಹೋಗುತ್ತಿರುವ ಇಂದ್ರನನ್ನು ಅತ್ರಿಋಷಿಯು ಕಂಡು ಪೃಥುರಾಯನಿಗೆ ಸೂಚಿಸಲು ಪೃಥುಪುತ್ರನಾಗಿ ಮಹಾರಥಿಕನಾದ ವೀರನು ಆ ಇಂದ್ರನನ್ನು ಸಂಹರಿಸಲೋಸುಗ ಕ್ರುದ್ಧನಾಗಿ ಅಟ್ಟಿಕೊಂಡು ಹೋಗುತ 'ಎಲೈ ಇಂದ್ರನೇ, ನಿಲ್ಲು ನಿಲ್ಲು' ಎಂದು ನುಡಿದನು ; ಜಟಾಧಾರಿಯಾಗಿ ಭಸ್ಮೋದ್ಧೂಳಿತ ಶರೀರವುಳ್ಳವನಾಗಿ ಪಾಷಂಡ ರೂಪಧಾರಿಯಾದ ಇಂದ್ರನನ್ನು ನೋಡಿ ಪೃಥುರಾಯನ ಪುತ್ರನು ಧರ್ಮಶರೀರವುಳ್ಳವನನ್ನಾಗಿ ತಿಳಿದು ಬಾಣವನ್ನು ಪ್ರಯೋಗಿಸದೆ ಇಂದ್ರನನ್ನು ಸಂಹರಿಸುವದಕ್ಕೆ ಹಿಂತೆಗೆದು ಸುಮ್ಮನೇ ಇರುವ ಪೃಥುಪುತ್ರನನ್ನು ನೋಡಿ ಅತ್ರಿಋಷಿಯು 'ಎಲೈ ರಾಜಪುತ್ರನೇ, ಯಜ್ಞವಿಘಾತನಾಗಿ ದೇವಾಧಮನಾದ ಮಹೇಂದ್ರನನ್ನು ಸಂಹರಿಸು' ಎಂದು ಪ್ರೇರಿಸಿದನು.

"ಈ ರೀತಿಯಲ್ಲಿ ಅತ್ರಿಋಷಿಯಿಂದ ಪ್ರೇರಿತನಾದ ಪೃಥುಪುತ್ರನು ನಿಶ್ಚಯವುಳ್ಳವನಾಗಿ ಕೋಪಿಷ್ಠನಾಗಿ ಸಿಂಹವು ಮೃಗಜವನ್ನು ಅಟ್ಟಿಕೊಂಡು ಹೋಗುವಂತೆ ಆಕಾಶಮಾರ್ಗದಲ್ಲಿ ತ್ವರೆಯಿಂದ ಓಡಿಹೋಗುತಲಿರುವ ದೇವೇಂದ್ರನನ್ನು ಅಟ್ಟಿಕೊಂಡು ಹೋದನು ; ಆಗ ದೇವೇಂದ್ರನು ಆ ಪಾಷಂಡವೇಷವನ್ನು ಬಿಟ್ಟು ಆ ಅಶ್ವವನ್ನು ಸಹ ಅಲ್ಲೇ ಬಿಟ್ಟು ಅಂತರ್ಧಾನವನ್ನೈದಿದನು ; ಆಮೇಲೆ ಪೃಥುಪುತ್ರನು ಆ ಅಶ್ವವನ್ನು ತೆಗೆದುಕೊಂಡು ತಂದೆಯಾದ ಪೃಥುರಾಯನ ಸಮೀಪಕ್ಕೆ ಬಂದನು ; ಆಗ ಮಹರ್ಷಿಗಳು ಅದ್ಭುತವಾದ ಪೃಥುಪುತ್ರನ ಸಾಮರ್ಥ್ಯ

ವನ್ನು ನೋಡಿ ಆ ರಾಜಪುತ್ರನಿಗೆ ವಿಜಿತಾಶ್ವನೆಂದು ನಾಮಧೇಯವನ್ನಿತ್ತರು; ಆಗ ಇಂದ್ರನು ಮಹತ್ತಾದ ಅಂಧಕಾರವನ್ನು ಸೃಷ್ಟಿಸಿ ಪುನಶ್ಚ ಅಶ್ವವನ್ನಪಹರಿಸಬೇಕೆಂದು ಆಲೋಚಿಸಿ ಅದೃಶ್ಯನಾಗಿ ಬಂದು ಯೂಪಸ್ತಂಭಕ್ಕೆ ಕಾಷ್ಠಮಯವಾದ ಬಳೆಯನ್ನು ತಗಲಹಾಕಿರಲು ಚಷಾಲವೆಂಬ ನಾಮಧೇಯವುಳ್ಳ ಆ ಬಳೆಯೊಡನೆ ಸಹಿತವಾದ ಯೂಪಸ್ತಂಭಕ್ಕೆ ಸುವರ್ಣಮಯವಾದ ಹಗ್ಗದಿಂದ ಆ ಅಶ್ವವನ್ನು ಕಟ್ಟಿಹಾಕಿರಲು ಆ ಹಗ್ಗವನ್ನು ಬಿಚ್ಚುವದಕ್ಕೆ ಸಾವಕಾಶವಿಲ್ಲದ್ದರಿಂದ ಯೂಪಸ್ತಂಭ ಸಮೇತವಾಗಿ ಆ ಅಶ್ವವನ್ನಪಹರಿಸಿಕೊಂಡು ಹೋದನು, ಕಪಾಲ ಖಟ್ವಾಂಗಧಾರಿಯಾಗಿ ಆಕಾಶಮಾರ್ಗದಲ್ಲಿ ತ್ವರೆಯಿಂದ ಹೋಗುತಲಿರುವ ದೇವೇಂದ್ರನನ್ನು ಅತ್ರಿಋಷಿಯು ಪೃಥುಪುತ್ರನಾದ ವೀರನಿಗೆ ತೋರಿಸಿದನು; ಆ ವೀರನು ಇಂದ್ರನನ್ನು ಕಾಣದೆ ಅತ್ರಿಋಷಿಯಿಂದ ಬೋಧಿತನಾಗಿ ಕೋಪದಿಂದ ಬಾಣವನ್ನು ಪ್ರಯೋಗಿಸಿದನು; ಇಂದ್ರನು ಆ ರೂಪವನ್ನೂ ಅಶ್ವವನ್ನೂ ಸಹ ಬಿಟ್ಟು ಅಂತರ್ಧಾನವನ್ನೈದಿದನು; ಅನಂತರದಲ್ಲಿ ವೀರನು ತನ್ನ ಅಶ್ವವನ್ನು ತೆಗೆದುಕೊಂಡು ತಂದೆಯಾದ ಪೃಥುರಾಯನ ಯಜ್ಞಶಾಲೆಗೆ ಬಂದನು; ನಿಂದಿತವಾದ ಇಂದ್ರನ ಪಾಷಂಡರೂಪವನ್ನು ಅಜ್ಞಾನಿಗಳಾದವರು ಗ್ರಹಿಸಿದರು! ಎಲೈ ವಿದುರನೇ, ಇಂದ್ರನು ಅಶ್ವಾಪಹಾರಾರ್ಥವಾಗಿ ಯಾವಯಾವ ರೂಪಗಳನ್ನು ಧರಿಸಿದನೋ ಆ ರೂಪಗಳು ಪಾಪಿಷ್ಠನಾದ ಪುರುಷನಿಗೆ ಗುರುತುಗಳಾದಕಾರಣ ಪಾಷಂಡವೆನಿಸುವದು! ಈ ರೀತಿಯಲ್ಲಿ ಇಂದ್ರನು ಪೃಥುರಾಯನ ಅಶ್ವಾಪಹಾರಾರ್ಥವಾಗಿ ಯಾವಯಾವ ರೂಪಗಳನ್ನು ಧರಿಸಿ ಪುನಶ್ಚ ಬಿಟ್ಟನೋ ಆ ಪಾಷಂಡ ವೇಷಗಳಲ್ಲಿ ಅಜ್ಞರಿಗೆ ಬುದ್ಧಿಯುಂಟಾಗುವದು; ರಮ್ಯಗಳಾಗಿ ತೋರುತಲಿರುವವಾಗಿ ಕುಯುಕ್ತಿಗಳುಳ್ಳ ಮೂಢರನ್ನು ವಂಚಿಸುವದಕ್ಕೆ ಅನುಕೂಲಗಳಾಗಿ ಅವೈದಿಕಗಳಾದ ಜೈನ ಬೌದ್ಧ ಕಾಪಾಲಿಕಾದಿಗಳಿಂದ ಆಚರಿಸಲು ಯೋಗ್ಯಗಳಾದ ಆಭಾಸಧರ್ಮಗಳಲ್ಲಿ ಧರ್ಮವೆಂಬ ಭ್ರಾಂತಿಯಿಂದ ಮೂಢಜನರು ಆಸಕ್ತರಾಗುತ್ತಾರೆ; ಅಧಿಕವಾದ ಪರಾಕ್ರಮವುಳ್ಳ ಭಗವಂತನಾದ ಪೃಥುರಾಯನು ಇಂದ್ರನ ವ್ಯಾಪಾರವನ್ನು ತಿಳದು ಧನುರ್ಧಾರಿಯಾಗಿ ಕೋಪಿಷ್ಠನಾಗಿ ಇಂದ್ರನಿಗೆ ಬಾಣವನ್ನು ಪ್ರಯೋಗಿಸಲು ಉದ್ಯುಕ್ತನಾಗಿ ನೋಡುವದಕ್ಕೆ ಅಶಕ್ಯನಾಗಿ ಸಹಿಸಲಶಕ್ಯವಾದ ತೇಜಸ್ಸುಳ್ಳ ಆ ಪೃಥುರಾಯನನ್ನು ನೋಡಿ ಋತ್ವಿಕ್ಕುಗಳಾದ ಋಷಿಗಳು 'ಎಲೈ ಮಹಾರಾಜನೇ, ಮಹಾಬುದ್ಧಿಶಾಲಿಯಾದ ಅರಸೆ, ಯಜ್ಞದೀಕ್ಷಾಮಧ್ಯದಲ್ಲಿ ಶಾಸ್ತ್ರವಿಹಿತವಾದ ಪಶುವಧೆಯನ್ನು ಹೊರ್ತು ಅನ್ಯವಧವು ಯುಕ್ತವಲ್ಲ; ಇಂದ್ರನನ್ನು ನಾವೇ ನಿಗ್ರಹಿಸುತ್ತೇವೆ; ನಿನ್ನ ಪಶುವನ್ನಪಹರಿಸುವನಾಗಿ ನಿನ್ನ ಕೀರ್ತಿಯಿಂದಲೇ ಹತವಾದ ತೇಜಸ್ಸುಳ್ಳವನಾಗಿರುವ ಇಂದ್ರನನ್ನು ನಾವು ವೀರ್ಯವತ್ತಗಳಾದ ಆಹ್ವಾನಮಂತ್ರಗಳಿಂದ ಇಲ್ಲಿಗೆ ಕರೆಯುತ್ತೇವೆ! ಎಲೈ ಅರಸೆ, ನಿನಗೆ ಪ್ರತಿಕೂಲನಾದ ಆ ಇಂದ್ರನನ್ನು ಬಲಾತ್ಕರಿಸಿ ಅಗ್ನಿಯಲ್ಲಿ ಹೋಮಂಗೈಯುತ್ತೇವೆ' ಎಂದು ಕ್ರತುಪತಿಯಾದ ಪೃಥುರಾಯನನ್ನು ಸಮ್ಮತಿಪಡಿಸಿ ಕೋಪದಿಂದ ಸ್ರುಕ್ಕುಗಳನ್ನು ಹಸ್ತದಲ್ಲಿಧರಿಸಿ ಹೋಮಂಗೈಯಲುದ್ಯುಕ್ತರಾದ ಪೃಥುರಾಯನ ಋತ್ವಿಕ್ಕುಗಳನ್ನು ಕುರಿತು ಬ್ರಹ್ಮದೇವನು 'ಎಲೈ ಋಷಿಗಳಿರಾ, ಯಾವ ಇಂದ್ರನನ್ನು ಯಾಗದಿಂದ ಸಂಹರಿಸಲಿಚ್ಛೈಸುತ್ತೀರೋ ಈ ಸಮಸ್ತ ದೇವತೆಗಳೂ ಯಾವ ಭಗವಂತನ ಶರೀರಗಳೋ ಅಂಥಾ ಭಗವದವತಾರನಾಗಿ ಯಜ್ಞಾಂಶಭೂತನಾದ ಇಂದ್ರನು ನಿಮ್ಮಿಂದ ಸಂಹರಿಸಲು ಯೋಗ್ಯನಲ್ಲ! ಪೃಥುರಾಯನ ಯಜ್ಞವಿಘ್ನಾರ್ಥವಾಗಿ ಇಂದ್ರನಿಂದ ಮಾಡಲ್ಪಟ್ಟ ಪಾಷಂಡರೂಪವಾದ ಈ ಧರ್ಮವಿಪರ್ಯಯವನ್ನು ನೋಡಿರಿ; ಸ್ವತಂತ್ರನಾಗಿ ಯಜ್ಞನಾಮಕನಾದ ಇಂದ್ರನು ನಾನಾವಿಧಗಳಾದ ಪಾಷಂಡ ಮಾರ್ಗಗಳನ್ನು ಕಲ್ಪಿಸಿ ಸರ್ವರನ್ನು ಮೋಹಪಡಿಸ್ಯಾನು! ಅಧಿಕವಾದ ಕೀರ್ತಿಯುಳ್ಳ ಪೃಥುರಾಯನು ನೂರಕ್ಕೆ ಒಂದು ಕಡಮೆಯಾಗಿ ತೊಂಭತ್ತೊಂಭತ್ತು ಅಶ್ವಮೇಧ ಕ್ರತುಗಳುಳ್ಳವನಾಗಲಿ' ಎಂದು ನುಡಿದು ಪೃಥುರಾಯನನ್ನು ಕುರಿತು 'ಎಲೈ ಪೃಥುರಾಯನೆ, ಈಗ ಆಗಿರುವ ಯಜ್ಞಗಳೇ ಸಾಕು; ನೀನು ಮೋಕ್ಷಧರ್ಮಗಳನ್ನು ತಿಳದವನು; ಮಹೇಂದ್ರನಿಗೋಸ್ಕರ ಕೋಪವನ್ನು ಮಾಡಬೇಡ; ಆದ್ದರಿಂದ ನನ್ನ ವಾಕ್ಯವನ್ನು ಕೇಳು: ದೈವದಿಂದ ವಿಘ್ನವುಳ್ಳದ್ದಾಗಿ ಮಾಡಲ್ಪಟ್ಟ ಕಾರ್ಯವನ್ನು ಸಾಧಿಸಬೇಕೆಂದು ಅಭಿನಿವೇಶವುಳ್ಳ ಪುರುಷನ ಮನಸ್ಸು ಅತ್ಯಂತ ಕ್ರೋಧಾವಿಷ್ಟವಾಗಿ ಅಂಧಂತಮಸ್ಸನ್ನೈದು

ವದಲ್ಲದೆ ಉಪಶಾಂತಿಯನ್ನೈದುವದಿಲ್ಲ; ಆದಕಾರಣ ಈಕ್ರತುವು ಇಷ್ಟೇ ಸಾಕು; ಈ ಕ್ರತುನಿಮಿತ್ತವಾಗಿ ದೇವತೆಗಳ ವಿಷಯದಲ್ಲಿ ನಿನಗೆ ದುರಾಗ್ರಹ ಉಂಟಾಗುತ್ತದೆ; ಇಂದ್ರನಿಂದ ನಿರ್ಮಿತಗಳಾದ ಪಾಷಂಡಮಾರ್ಗಗಳಿಂದ ಧರ್ಮವಿಪರ್ಯಯವುಂಟಾಗುತ್ತದೆ; ನಿನ್ನ ಯಜ್ಞಕ್ಕೆ ವಿಘಾತಕನಾಗಿ ಅಶ್ವವನ್ನಪಹರಿಸಿದ ದೇವೇಂದ್ರನಿಂದ ಸೃಜಿಸಲ್ಪಟ್ಟ ಚಿತ್ತಾಕರ್ಷಣಗಳಾದ ಪಾಷಂಡಧರ್ಮಗಳಿಂದ ಮೋಹಿತರಾದ ಜನರನ್ನು ನೋಡು! ಎಲೈ ಪೃಥುರಾಯನೆ, ಸಾಂಖ್ಯಯೋಗಾದಿ ಸಿದ್ಧಾಂತಾನುಸಾರಿಯಾದ ಧರ್ಮಮಾರ್ಗವು ವೇನನ ಅಪಚಾರಮಾರ್ಗದಿಂದ ಲುಪ್ತವಾಯಿತು; ಅದುಕಾರಣ ಅಂಥಾ ಧರ್ಮಮಾರ್ಗವನ್ನು ರಕ್ಷಿಸಲೋಸುಗ ನೀನು ಸಾಕ್ಷಾದ್ಭಗವಂತನ ಅಂಶದಿಂದ ವೇನನ ಶರೀರದದೆಶೆಯಿಂದ ಅವತರಿಸಿದೆ! ಎಲೈ ಅರಸೆ, ಈ ಜಗತ್ತಿನ ಉತ್ಪತ್ತಿಯನ್ನು ವಿಚಾರಿಸಿ ಪ್ರಜೇಶರ ಸಂಕಲ್ಪವನ್ನು ಪೂರ್ಣಗೈದು ಉಪಧರ್ಮಗಳಿಗೆ ಕಾರಣವಾದ ಇಂದ್ರಮಾಯೆಯಾದ ಪಾಷಂಡಮಾರ್ಗವನ್ನು ನಿಗ್ರಹಿಸು' ಎಂದು ನುಡಿದನು.

"ಈ ರೀತಿಯಲ್ಲಿ ಲೋಕತ್ರಯ ಗುರುವಾದ ಬ್ರಹ್ಮನಿಂದ ಆಜ್ಞಪ್ತನಾದ ಪೃಥುರಾಯನು ಅದೇ ಪ್ರಾಮುಖ್ಯಮಾಡಿ ವಾತ್ಸಲ್ಯಪೂರ್ವಕವಾಗಿ ಇಂದ್ರನೊಡನೆ ಸಂಧಾನಗೈದು ಅವಭೃತಸ್ನಾನವನ್ನು ಮಾಡಿ ಕೃತಕೃತ್ಯನಾಗಿ ಯಜ್ಞದಲ್ಲಿ ತುಷ್ಟರಾದ ದೇವತೆಗಳಿಂದ ವರಗಳನ್ನು ಪಡೆದನು! ಎಲೈ ವಿದುರನೆ, ಯಜ್ಞದಲ್ಲಿ ದಕ್ಷಿಣೆಗಳನ್ನು ತೆಗೆದುಕೊಂಡು ಸಂತುಷ್ಟರಾದ ಬ್ರಾಹ್ಮಣರು ಸತ್ಯಸಂಕಲ್ಪನಾಗಿ ಆದಿರಾಜನಾದ ಆ ಪೃಥುರಾಯನಿಗೆ ಆಶೀರ್ವಾದಗಳನ್ನು ಮಾಡಿದರು; ಯಜ್ಞದಲ್ಲಿ ಸಂತುಷ್ಟರಾದ ಪಿತೃ ದೇವ ಋಷಿ ಮಾನವರು ಸಮಸ್ತರು ಪೃಥುರಾಯನನ್ನು ಕುರಿತು 'ಎಲೈ ಮಹಾ ಬಾಹುವಾದ ಪೃಥುರಾಯನೆ, ನಾವೆಲ್ಲರೂ ನಿನ್ನಿಂದ ದಾನ ಮಾನಗಳಿಂದ ಪೂಜಿತರಾಗಿ ಆದರಿಸಲ್ಪಟ್ಟವರಾದೆವು' ಎಂದು ಅಪ್ಪಣೆಯನ್ನು ತೆಗೆದುಕೊಂಡು ತಮ್ಮ ತಮ್ಮ ಸ್ಥಾನಗಳಿಗೆ ಹೊರಹೋದರು" ಎಂದು ನುಡಿದನು.

೨೦ ನೇ ಅಧ್ಯಾಯ.

ಭಗವಂತನು ಪೃಥುರಾಯನಿಗೆ ತತ್ವಜ್ಞಾನೋಪದೇಶ ಮಾಡಿದ್ದು.

ಅನಂತರದಲ್ಲಿ ಯಜ್ಞಭೋಕ್ತೃವಾಗಿ ಯಜ್ಞಪತಿಯಾದ ಸಾಕ್ಷಾದ್ವಿಷ್ಣುವು ಇಂದ್ರನೊಡನೆ ಸಹಿತನಾಗಿ ಬಂದು ಪೂಜಿತನಾಗಿ ಪೃಥುರಾಯನನ್ನು ಕುರಿತು "ಎಲೈ ಪೃಥುರಾಯನೆ, ಈ ಇಂದ್ರನು ನಿನ್ನ ಸಂಬಂಧಿಯಾದ ಅಶ್ವಮೇಧ ಶತಕ್ಕೆ ವಿಘ್ನವನ್ನು ಮಾಡಿದವನಾದ್ದರಿಂದ ಈಗ ಆ ಅಪರಾಧವನ್ನು ಕ್ಷಮಿಸುವಂತೆ ಮಾಡಲೋಸುಗ ಬಂದಿದ್ದಾನೆ! ಎಲೈ ಅರಸೆ, ಬುದ್ಧಿಶಾಲಿಗಳಾಗಿ ಸಾಧುಗಳಾದ ಪುರುಷಶ್ರೇಷ್ಠರು ಲೋಕದಲ್ಲಿ ಆತ್ಮಸ್ವರೂಪವೆಂದು ದೇಹದಲ್ಲಿಅಭಿಮಾನಿಗಳಾದ ಸರ್ವಭೂತಗಳಲ್ಲಿಯೂ ದ್ರೋಹಬುದ್ಧಿಯನ್ನು ಮಾಡುವದಿಲ್ಲ; ಪ್ರಾಜ್ಞರಾದ ನಿಮ್ಮಂಥಾ ಪುರುಷರು ದೇವಮಾಯೆಯಿಂದ ಮೋಹಿತರಾದರೆ ಬಹುಕಾಲಪರ್ಯಂತವು ಮಾಡಲ್ಪಟ್ಟ ದೀರ್ಘವಾದ ಗುರುಸೇವೆಯೂ ವಿದ್ಯಾಭ್ಯಾಸವು ವ್ಯರ್ಥಶ್ರಮವೇಆದೀತು; ಆದ್ದರಿಂದ ಕಾಮ್ಯಫಲವನ್ನಪೇಕ್ಷಿಸಿ ಪುರುಷನಿಂದ ಮಾಡಲ್ಪಡುವ ಕರ್ಮಗಳು ಅಜ್ಞಾನಜನ್ಯಗಳಾದ ಕಾಮಸಂಕಲ್ಪಗಳಿಂದ ಉಂಟಾಗುವದೆಂದು ತಿಳಿದು ಆತ್ಮಜ್ಞನಾಗಿ ಇಂಥಾ ಕಾರ್ಯ್ಯದಲ್ಲಿ ಇಂಥಾ ಶರೀರದಲ್ಲಿ ಆಸಕ್ತನಲ್ಲದ ಪುರುಷನು ಈ ದೇಹಾಭಿಮಾನದಿಂದ ಉಂಟುಮಾಡಲ್ಪಟ್ಟ ಗೃಹದಲ್ಲಿಯೂ ಪುತ್ರಾದಿಗಳಲ್ಲಿಯೂ ಧನಗಲ್ಲಿಯೂ ಮಮತೆಯನ್ನು ಮಾಡುವದಿಲ್ಲ! ಆತ್ಮನೆಂಥಾವನೆಂದರೆ: ಏಕವಸ್ತುವಾದವನು; ಶುದ್ಧನು, ಸ್ವಪ್ರಕಾಶನು; ಗುಣರಹಿತನು; ಗುಣಗಳಿಗೆ ಅಧಿಷ್ಠಾನನು; ಸರ್ವವ್ಯಾಪಕನು; ಆವರಣರಹಿತನು; ದ್ರಷ್ಟೃವಾದವನು; ಸ್ವಯಮೇವ ಆತ್ಮನು; ದೇಹಕ್ಕೆ ವ್ಯತಿರಿಕ್ತನು; ಶರೀರವಾದರೋ ಬಾಲ್ಯಾದಿ ಭೇದದಿಂದ ಅನೇಕಪ್ರಕಾರವಾದದ್ದು; ಮಲಿನವಾದದ್ದು; ಜಡವಾದದ್ದು; ಆತ್ಮಸಮೇತವಾದದ್ದು; ಆದಕಾರಣ ಆತ್ಮನು

ದೇಹಾದಿ ವ್ಯತಿರಿಕ್ತನಾದವನು; ಯಾವ ಪುರುಷನು ದೇಹಸ್ಥನಾದ ಇಂಥಾ ಆತ್ಮನನ್ನು ತಿಳಿಯುತ್ತಾನೆಯೋ ಆ ಪುರುಷನು ದೇಹಸ್ಥನಾದಾಗ್ಯೂ ದೇಹಧರ್ಮಗಳಾದ ವಿಕಾರಗಳಿಂದ ಲಿಪ್ತನಾಗುವದಿಲ್ಲ; ಬ್ರಹ್ಮನಿಷ್ಠನಾದಕಾರಣ ಆ ಪುರುಷನು ನಿರ್ಲಿಪ್ತನು; ಯಾವ ಪುರುಷನು ಕಾಮಭೋಗಗಳಲ್ಲಿ ನಿರಪೇಕ್ಷನಾಗಿ ಶ್ರದ್ಧಾವಂತನಾಗಿ ಸ್ವಧರ್ಮದಿಂದ ನನ್ನನ್ನಾರಾಧಿಸುತ್ತಾನೆಯೋ ಆ ಪುರುಷನ ಚಿತ್ತವು ಮೆಲ್ಲಗೆ ಪಕ್ವವಾಗುತ್ತದೆ; ಯಾವ ಪುರುಷನು ನಿರ್ಮಲಾಂತಃಕರಣನಾಗಿ ವಿಷಯಗಳನ್ನು ತ್ಯಜಿಸಿ ಚನ್ನಾಗಿ ಜ್ಞಾನವುಳ್ಳವನಾಗಿರುತ್ತಾನೆಯೋ ಆ ಪುರುಷನು ನನ್ನ ಸ್ಥಾನವಾದ ಬ್ರಹ್ಮಸಾಯುಜ್ಯವನ್ನೈದುವನು; ತಾನು ತಟಸ್ಥನಾದಾಗ್ಯೂ ದೇಹಜ್ಞಾನ ಕರ್ಮೇಂದ್ರಿಯ ಮನಸ್ಸುಗಳಿಗೆ ಅಧ್ಯಕ್ಷನಾಗಿರುವ ಕೂಟಸ್ಥನಾದ ಆತ್ಮನನ್ನು ಯಾವ ಪುರುಷನು ತಿಳಿಯುತ್ತಾನೆಯೋ ಆ ಪುರುಷನು ಮುಕ್ತಿಯನ್ನೈದುವನು; ಪಂಚಭೂತಗಳು ಕರ್ಮೇಂದ್ರಿಯಗಳು ಚಿದಾಭಾಸವು ಇವುಗಳ ಸಮಷ್ಟಿರೂಪವಾದ ಶರೀರವೇ ಸಂಸಾರವು; ಆದಕಾರಣ ಪ್ರಾಜ್ಞರು ಕಾಣಲ್ಪಡುವ ಸಂಪತ್ತುಗಳಲ್ಲಿಯೂ ವಿಪತ್ತುಗಳಲ್ಲಿಯೂ ಕೂಡ ಹರ್ಷಶೋಕಾದಿ ವಿಕಾರಗಳನ್ನೈದುವದಿಲ್ಲ! ಎಲೈ ವೀರನಾದ ಪೃಥುರಾಯನೇ, ಸುಖ ದುಃಖಗಳಲ್ಲಿ ಸಮಬುದ್ಧಿಯುಳ್ಳವನಾಗಿ ಜಿತೇಂದ್ರಿಯನಾಗಿ ಮನೋನಿಗ್ರಹವುಳ್ಳವನಾಗಿ ನೀನು ಮಂತ್ರಿಗಳು ಮೊದಲಾದ ಭೃತ್ಯಜನ ಸಮೇತನಾಗಿ ಸರ್ವಲೋಕ ಪರಿಪಾಲನವನ್ನು ಮಾಡು; ಕ್ಷತ್ರಿಯನಾದ ಭೂಪತಿಗೆ ಪ್ರಜಾರಕ್ಷಣವೇ ಲೋಕದಲ್ಲಿ ಶ್ರೇಯಃಪ್ರದವಾಗುವದು; ಪ್ರಜೆಗಳಿಂದ ಮಾಡಲ್ಪಟ್ಟ ಸುಕೃತದಲ್ಲಿ ಷಷ್ಠಭಾಗವು ಅರಸಿಗೆ ಬರುವದು; ಅದನ್ನು ಬಿಟ್ಟು ಪ್ರಜಾರಕ್ಷಣವನ್ನು ಮಾಡದೆ ಕಾಣಿಕೆ ಕಂದಾಯಗಳನ್ನು ಪ್ರಜೆಗಳಿಂದ ತೆಗೆದುಕೊಂಡು ಅವರನ್ನು ಉಪೇಕ್ಷಿಸಿದರೆ ಪುಣ್ಯಕ್ಷಯವನ್ನು ಮಾಡಿಕೊಂಡು ಪ್ರಜೆಗಳ ಪಾಪವನ್ನು ತಾನೇ ಐದುವನು! ಎಲೈ ಅರಸೆ, ಬ್ರಾಹ್ಮಣೋತ್ತಮರಾದ ಮಹರ್ಷಿಗಳಿಗೆ ಸಮ್ಮತನಾಗಿ ಅವರನ್ನನುವರ್ತಿಸುತ ಧರ್ಮವನ್ನೇ ಮುಖ್ಯವನ್ನಾಗಿ ಭಾವಿಸಿಕೊಂಡು ಧರ್ಮವಿರುದ್ಧಗಳಾಗದ ಅರ್ಥಕಾಮಗಳನ್ನು ಸಂಪಾದಿಸಿ ನೀನು ಪ್ರಜಾರಕ್ಷಣವನ್ನು ಮಾಡು; ಹಾಗಾದರೆ ಪ್ರಜಾನುರಾಗಕ್ಕೆ ಪಾತ್ರನಾಗಿ ಸ್ವಲ್ಪಕಾಲದಲ್ಲಿಯೇ ನಿನ್ನ ಮನೆಗೆ ಬಂದ ಸನಕಾದಿ ಮಹಾ ಯೋಗಿಗಳನ್ನು ಕಾಣುತ್ತೀಯೆ! ಎಲೈ ಮಾನವೇಂದ್ರನೇ, ನಿನ್ನ ಶಮಾದಿ ಗುಣಗಳಿಂದಲೂ ಸಚ್ಚರಿತ್ರೆಗಳಿಂದಲೂ ವಶೀಕೃತನಾದ ನನ್ನ ದೆಸೆಯಿಂದ ಒಂದು ವರವನ್ನು ಅಪೇಕ್ಷಿಸುವನಾಗು; ಸಮಚಿತ್ತರಾದ ಮಹಾ ಪುರುಷರಲ್ಲಿ ಸನ್ನಿಧಾನಗೈದಿರುವ ನಾನು ಮಹಾ ಕ್ರತುಗಳಿಂದಲೂ ತದನುಷ್ಠಾನಗಳಿಂದಲೂ ಸುಲಭನಾಗುವದಿಲ್ಲ!'' ಎಂದು ನುಡಿದನು.

'' ಎಲೈ ಪರೀಕ್ಷಿದ್ರಾಯನೆ, ಲೋಕೇಶ್ವರನಾದ ಆ ಪೃಥುರಾಯನು ಈರೀತಿಯಲ್ಲಿ ಲೋಕಗುರುವಾದ ನಾರಾಯಣನಿಂದ ಶಿಕ್ಷಿತನಾಗಿ ಶ್ರೀಹರಿಯ ಆಜ್ಞೆಯನ್ನು ಶಿರಸ್ಸಿನಲ್ಲಿ ಗ್ರಹಿಸಿದನು; ಅನಂತರದಲ್ಲಿ ತನ್ನಿಂದ ಮಾಡಲ್ಪಟ್ಟ ಅಶ್ವಾಪಹರಣದಿಂದ ಲಜ್ಜಿತನಾಗಿ ಪಾದಗಳನ್ನು ಗ್ರಹಿಸಿಕೊಳ್ಳುತಲಿರುವ ದೇವೇಂದ್ರನನ್ನು ಪೃಥುರಾಯನು ಪ್ರೇಮೆಯಿಂದ ಆಲಿಂಗನಂಗೈದು ದ್ವೇಷವನ್ನು ಬಿಟ್ಟನು; ವಿಶ್ವಾತ್ಮಕನಾದ ಭಗವಂತನು ಪೃಥುರಾಯನಿಂದ ಪೂಜಿತನಾಗಿ ವೃದ್ಧಿಯನ್ನೈದಿದ ಭಕ್ತಿಯಿಂದ ಆತನಿಂದ ಗ್ರಹಿಸಲ್ಪಟ್ಟ ಪಾದಗಳುಳ್ಳವನಾಗಿ ತೆರಳಹೋಗಲಿಚ್ಛೆಯುಳ್ಳವನಾದಾಗ್ಯೂ ಪೃಥುರಾಯನಲ್ಲಿ ಅನುಗ್ರಹಾರ್ಥವಾಗಿ ವಿಳಂಬನವನ್ನು ಮಾಡುತ ಸತ್ಪುರುಷರಿಗೆ ಮಿತ್ರನಾದ ಆ ಸ್ವಾಮಿಯು ಅರಸನನ್ನು ನೋಡುತ ನಿಂತನು; ಆಗ ಆದಿರಾಜನಾದ ಪೃಥುರಾಯನು ಅಂಜಲಿಬಂಧಗೈದು ಆನಂದಬಾಷ್ಪಪೂರ್ಣನೇತ್ರನಾಗಿ ಭಗವಂತನನ್ನು ನೋಡುವದಕ್ಕೆ ಸಮರ್ಥನಾಗದೆ ಗಂಟಲಶಲೆ ಬಿಗಿಯುವದರಿಂದ ಮಾತನಾಡುವದಕ್ಕೂ ಸಮರ್ಥನಾಗದೆ ಸುಮ್ಮನೇ ಆ ಭಗವಂತನನ್ನು ಮನಸ್ಸಿನಿಂದಲೇ ಆಲಿಂಗನಂಗೈದು ಆ ಸ್ವಾಮಿಯನ್ನು ಧ್ಯಾನಂಗೈಯುತ ಸ್ತಬ್ಧನಾಗಿ ಬಾಷ್ಪಪೂರ್ಣಗಳಾದ ನೇತ್ರಗಳನ್ನು ಒರಿಸಿಕೊಂಡು ತೃಪ್ತಿಯನ್ನೈದದೇ ನೇತ್ರಗಳಿಗೆ ಗೋಚರನಾಗಿ ಉನ್ನತವಾದ ಗರುಡನ ಭುಜದಲ್ಲಿ ಹಸ್ತವನ್ನಿರಿಸಿಕೊಂಡು ಭೂಮಿಯಲ್ಲಿ ನಿಂತಿರುವ ಪುರಾಣಪುರುಷನನ್ನು ಕುರಿತು ''ಎಲೈ ಪ್ರಭುವಾದ ಭಗವಂತನೇ, ವರಪ್ರದರಾದ ಬ್ರಹ್ಮಾದಿಗಳಿಗೂ ಈಶ್ವರನಾದ ನಿನ್ನ ದೆಸೆಯಿಂದ ಪ್ರಾಜ್ಞನಾದ ಪುರುಷನು ಅಹಂಕಾರಶಾಲಿಗಳಾದ ನರಕವಾಸಿಗಳಿಗೂ ಸುಲಭಗಳಾದ ಕಾಮಭೋಗವರಗ

ಳನ್ನು ಹ್ಯಾಗೆ ಅಪೇಕ್ಷಿಸ್ಯೇನು! ಎಲೈ ಮೋಕ್ಷಪತಿಯಾದ ಭಗವಂತನೇ, ಆ ವರಗಳನ್ನು ನಾನು ಅಪೇಕ್ಷಿಸುವದಿಲ್ಲ; ಮಹಾತ್ಮರ ಹೃದಯದಿಂದ ಮುಖಮಾರ್ಗವಾಗಿ ಹೊರಕ್ಕೆ ಬರುವ ನಿನ್ನ ಪಾದಪದ್ಮ ಮಕರಂದರೂಪವಾದ ಯಶಸ್ಸುಗಳ ಶ್ರವಣವು ಯಾವದರಲ್ಲಿ ಇಲ್ಲವೋ ಅಂಥಾ ಮೋಕ್ಷವನ್ನು ನಾನು ಅಪೇಕ್ಷಿಸುವದಿಲ್ಲ; ಯಶಸ್ಸಿನ ಶ್ರವಣಾರ್ಥವಾಗಿ ಹತ್ತುಸಾವಿರ ಕಿವಿಗಳನ್ನು ನಾನು ಅಪೇಕ್ಷಿಸುತ್ತೇನೆ; ಇದೇ ನನಿಗೆ ವರವು! ಎಲೈ ಉತ್ತಮಶ್ಲೋಕನಾದ ಭಗವಂತನೇ, ಮಹಾತ್ಮರ ಮುಖದಿಂದ ಹೊರಕ್ಕೆ ಬಂದ ನಿನ್ನ ಪಾದಾರವಿಂದ ಮಕರಂದಯುಕ್ತವಾದ ವಾಯುವು ತತ್ವಮಾರ್ಗಗಳನ್ನು ಮರತಿರುವ ಕುಯೋಗಿಗಳಿಗೂ ಕೂಡ ಪುನಃ ಜ್ಞಾನವನ್ನುಂಟುಮಾಡುತ್ತದೆಯಾದಕಾರಣ ಅದೇ ನಮಿಗೆ ಸಾಕು; ಮಿಕ್ಕಾದ ವರಗಳಿಂದೇನು ಪ್ರಯೋಜನವು! ಎಲೈ ಉತ್ತಮಕೀರ್ತಿಯುಳ್ಳ ಭಗವಂತನೇ, ಮಹಾತ್ಮರ ಸಹವಾಸ ವುಂಟಾದ ಸಮಯದಲ್ಲಿ ಶುಭಕರವಾದ ನಿನ್ನ ಯಶಸ್ಸನ್ನು ಯದೃಚ್ಛೆಯಿಂದ ಬಂದಾವರ್ತಿಯಾದಾಗ್ಯೂ ಕೇಳುವ ಪುರುಷನು ಗುಣಜ್ಞನಾದರೆ ಪಶುವನ್ನು ಹೊರ್ತು ಮತ್ಯಾವನಾದರೂ ಉಪೇಕ್ಷೆಯನ್ನು ಮಾಡ್ಯಾನೆ! ಸಾಕ್ಷಾಲ್ಲಕ್ಷ್ಮಿಯು ಕೂಡ ಸಮಸ್ತ ಪುರುಷಾರ್ಥ ಲಾಭಕ್ಕೋಸ್ಕರ ನಿನ್ನ ಯಶಸ್ಸನ್ನೇ ಅಪೇಕ್ಷಿಸಿದಳು; ಆದಕಾರಣ ಲಕ್ಷ್ಮಿದೇವಿಯಂತೆ ನಾನೂ ಕೂಡ ಸರ್ವಗುಣಾಶ್ರಯನಾಗಿ ಪುರುಷೋತ್ತಮನಾದ ನಿನ್ನನ್ನೇ ಭಜಿಸುತ್ತೇನೆ; ಪರಮಾತ್ಮನಾದ ನಿನ್ನನ್ನೇ ನಾಥನನ್ನಾಗಿ ತಿಳಿದು ನಿನ್ನ ಪಾದಪದ್ಮವನ್ನೇ ದೃಢವಾಗಿ ನಂಬಿರುವ ನಮ್ಮಿಬ್ಬರಿಗೂ ಸವತಿಯರಿಗೆ ಕಲಹವುಂಟಾಗುವಂತೆ ವಿರೋಧಮಾತ್ರ ಉಂಟಾಗಬೇಡ! ಎಲೈ ಜಗದೀಶ್ವರನೆ, ಯಾವ ಮಹಾ ಲಕ್ಷ್ಮಿಯೊಡನೆ ಸ್ಪರ್ಧೆಯುಳ್ಳವನಾಗಿ ನಿನ್ನನ್ನು ಭಜಿಸುತ್ತೇನೆಯೋ ಅಂಥಾ ಲೋಕಮಾತೃವಾದ ಲಕ್ಷ್ಮಿದೇವಿಗೆ ವಿರೋಧ ಉಂಟಾದೀತು; ಆದಾಗ್ಯೂ ದೀನವತ್ಸಲನಾದ ನೀನು ನನ್ನಿಂದ ಸ್ವಲ್ಪಮಾತ್ರ ಸೇವೆಯು ಮಾಡಲ್ಪಟ್ಟಾಗ್ಯೂ ಅದನ್ನೇ ಮಹತ್ತಾಗಿ ತಿಳಿಯುತ್ತೀಯೆ; ಸ್ವಾತ್ಮಾರಾಮನಾದ ನನಿಗೆ ಆ ಲಕ್ಷ್ಮಿದೇವಿಯಿಂದ ಆಗತಕ್ಕದ್ದೇನು! ಎಲೈ ಭಗವಂತನಾದ ಹರಿಯೇ, ಅದುಕಾರಣ ಸಾಧುಗಳಾದವರು ಮಾಯಾಗುಣವಿಲಾಸದಿಂದುಂಟಾದ ಅಜ್ಞಾನವನ್ನು ಪರಿಹರಿಸುವ ನಿನ್ನನ್ನೇ ಭಜಿಸುತ್ತಾರೆ; ಮಹಾತ್ಮರಿಗೆ ನಿನ್ನ ಪಾದಸ್ಮರಣವನ್ನು ಹೊರ್ತು ಬೇರೇ ಫಲವಿಲ್ಲವೆಂದು ನಾನು ತಿಳಿಯುತ್ತೇನೆ! ಎಲೈ ಭಗವಂತನೇ, ನೀನು ನಿನ್ನನ್ನು ಭಜಿಸುವ ಜನರನ್ನು ಕುರಿತು 'ಎಲೈ ಭಕ್ತರೇ, ವರಗಳನ್ನು ಕೇಳಿಕೊಳ್ಳಿ' ಎಂದು ಯಾವ ವಾಕ್ಯವನ್ನು ಹೇಳುತ್ತೀಯೊ ಆ ವಾಕ್ಯವು ಆ ಜನರನ್ನು ಮೋಹಪಡಿಸುವದಕ್ಕೋಸ್ಕರವೇ ಹೊರ್ತು ಅವರನ್ನನುಗ್ರಹಿಸುವದಕ್ಕಲ್ಲವೆಂದು ತಿಳಿಯುತ್ತೇನೆ; ನಿನ್ನ ವಾಗ್ರೂಪವಾದ ಹಗ್ಗದಿಂದ ಜನರು ಕಟ್ಟಲ್ಪಡದಿದ್ದರೆ ಆ ಜನರು ಕಾಮ್ಯಫಲಾರ್ಥವಾಗಿ ಪುನಃಪುನಃ ಕರ್ಮವನ್ನು ಹ್ಯಾಗೆ ಆಚರಿಸ್ಯಾರು! ಎಲೈ ಈಶ್ವರನೆ, ನಿನ್ನ ಮಾಯೆಯಿಂದ ಮೋಹಿತರಾದ ಜನರು ಭೇದದೃಷ್ಟಿಯಿಂದ ತಾನು ಬೇರೆ ಎಂದು ತಿಳಿದು ಪುತ್ರವಿತ್ತಾದಿಗಳನ್ನಪೇಕ್ಷಿಸುತ್ತಾರೆ; ಅದರಿಂದ ತಂದೆಯಾದವನು ಪುತ್ರನಿಗೆ ತಿಳಿಯದಂತೆ ಹಿತವನ್ನುಂತು ಮಾಡುವನೊ ಹಾಗೆ ನೀನು ಮೂಢರಾದ ನಮಿಗೆ ತಿಳಿಯದಂತೆ ಹಿತವನ್ನೇ ಮಾಡಬೇಕೇಹೊರ್ತು ನಮ್ಮನ್ನು ವಂಚಿಸಬಾರದು; ನಮಿಗೆ ಉತ್ತಮಜ್ಞಾನವನ್ನು ಅನುಗ್ರಹಿಸು ಎಂಬ ವೇನಪುತ್ರನಾದ ಪೃಥುರಾಯನ ಯಥಾರ್ಥವಾದ ವಾಕ್ಯವನ್ನು ಶ್ಲಾಘಿಸಿ ಆತನಿಂದ ಪೂಜಿತನಾಗಿ ಅವನನ್ನನುಗ್ರಹಿಸಿ ಭಗವಂತನು ತೆರಳಹೋಗುವದಕ್ಕೆ ಉದ್ಯುಕ್ತನಾದನು; ಆಗ ಭಗವಂತನ ಸಂಗಡ ಬಂದಿದ್ದ ದೇವತೆಗಳು ಋಷಿಗಳು ಪಿತೃಗಳು ಗಂಧರ್ವರು ಸಿದ್ಧರು ಚಾರಣರು ಸರ್ಪಗಳು ಕಿನ್ನರರು ಅಪ್ಸರಸ್ಸುಗಳು ಮನುಷ್ಯರು ಪಕ್ಷಿಗಳು ಭೂತಗಳು ಇನ್ನೂ ಅನೇಕರಾದ ಜನರು ಪೃಥುರಾಯನಿಂದ ಸಾಕ್ಷಾದ್ಭಗವಂತನು ಎಂಬ ಬುದ್ಧಿಯಿಂದ ಮನೋವಾಕ್ಕಾಯ ಕರ್ಮಗಳಿಂದ ಪೂಜಿತರಾಗಿ ತೆರಳಹೋದರು; ಭಗವಂತನೂ ಕೂಡ ರಾಜಋಷಿಯಾದ ಪೃಥುರಾಯನು ನೋಡುತ್ತಿರುವಾಗಲೇ ಆ ಅರಸಿನ ಮನಸ್ಸನ್ನಪಹರಿಸುವಂತೆ ತನ್ನ ಸ್ಥಾನವಾದ ವೈಕುಂಠಲೋಕವನ್ನೈದಿದನು; ಆ ಬಳಿಕ ಪೃಥುರಾಯನು ಸ್ವಸ್ವರೂಪವನ್ನು ತೋರಿಸಿ ಪ್ರತ್ಯಕ್ಷನಾಗಿ ಅನುಗ್ರಹವನ್ನು ಮಾಡಿ ಹೊರಟು ಹೋಗುತಲಿರುವ ಭಗವಂತನನ್ನು ದೃಷ್ಟಿಮಾರ್ಗದಲ್ಲಿ ಕಾಣಲ್ಪಡುವ ಪರ್ಯಂತವೂ ನೋಡುತಿದ್ದು ಕಣ್ಣಿಗೆ ಮರೆಯಾದವೇಳೆ ಭಗವಂತನಾಗಿ ದೇವದೇವನಾದ ಶ್ರೀ ವಾಸುದೇವನಿಗೆ ನಮಸ್ಕರಿಸಿ ತನ್ನ ಪುರಕ್ಕೆ

ಹೋದನು" ಎಂಬ ಅರ್ಥವನ್ನು ಮೈತ್ರೇಯಋಷಿಯು ವಿದುರನನ್ನು ಕುರಿತು ಹೇಳಿದನೆಂದು ಸೂತಪೌರಾಣಿಕನು ನೈಮಿಶಾರಣ್ಯವಾಸಿಗಳಾದ ಶೌನಕಾದಿ ಋಷಿಗಳನ್ನು ಕುರಿತು ನಿರೂಪಿಸಿದನು.

೨೧ನೇ ಅಧ್ಯಾಯ.

ಪೃಥುರಾಯನು ದೇವಾದಿಗಳ ಮಹಾಸತ್ರಯಾಗದಲ್ಲಿ ಪ್ರಜಾಪಾಲನ ಧರ್ಮವನ್ನು ಋಷಿಗಳನ್ನು ಕುರಿತು ಹೇಳಿದ್ದು.

"ಎಲೈ ವಿದುರನೆ, ಆ ಬಳಿಕ ಪೃಥುರಾಯನು ತನ್ನ ಪುರವನ್ನು ಕುರಿತು ತೆರಳಿಹೋಗಲು ಆ ಪುರವು ಮುತ್ತುಗಳ ಕುಚ್ಚುಗಳಿಂದಲೂ ಪುಷ್ಪಮಾಲೆಗಳಿಂದಲೂ ಸುವರ್ಣತೋರಣಗಳಿಂದಲೂ ಅಲ್ಲಲ್ಲಿ ಪ್ರಕಾಶಿತವಾಗಿ ಚಂದನಾಗರು ಗಂಧಗಳಿಂದ ಯುಕ್ತಗಳಾದ ಜಲಗಳಿಂದ ನೆನೆಯಿಸಲ್ಪಟ್ಟ ರಾಜಮಾರ್ಗಗಳಿಂದಲೂ ಶೀತಳವಾಗಿತ್ತು; ಪುಷ್ಪಗಳಿಂದಲೂ ಅಕ್ಷತೆಗಳಿಂದಲೂ ಹಸರು ಯವಗಳಿಂದಲೂ ಅರಳುಗಳಿಂದಲೂ ದೀಪಗಳಿಂದಲೂ ಅಲಂಕೃತವಾಗಿ ಸೋನೆಗಳಿಂದ ಯುಕ್ತಗಳಾದ ಬಾಳೇಸ್ತಂಭಗಳಿಂದಲೂ ಅಡಿಕೇ ತಾರುಗಳಿಂದಲೂ ಮಾವಿನ ಚಿಗುರು ಮೊದಲಾದವುಗಳಿಂದ ಮಾಡಲ್ಪಟ್ಟ ತೋರಣಗಳಿಂದಲೂ ಎಲ್ಲಾ ಕಡೆಯಲ್ಲಿಯೂ ಅಲಂಕೃತವಾಗಿತ್ತು; ಆಗ ದಿವ್ಯಾಲಂಕಾರ ಭೂಷಿತೆಯರಾದ ಕನ್ಯೆಯರು ನಾನಾಪ್ರಕಾರಗಳಾದ ಮಂಗಳದ್ರವ್ಯ ಸಹಿತರಾಗಿ ಪೃಥುರಾಯನ ಎದುರಿಗೆ ಹೋದರು; ಶಂಖ ದುಂದುಭಿ ಘೋಷಗಳಿಂದಲೂ ಋತ್ವಿಕ್ಕುಗಳ ಮಂತ್ರಘೋಷಗಳಿಂದಲೂ ಯುಕ್ತನಾಗಿ ನಿರಹಂಕಾರನಾಗಿ ವೀರನಾದ ಪೃಥುರಾಯನು ಪೂಜ್ಯರಾದ ಊರುಜನರನ್ನೂ ಸ್ವದೇಶಸ್ಥರಾದ ಜನರನ್ನೂ ಪೂಜಿಸಿ ಅವರಿಗೆ ಬೇಕಾದ ಇಷ್ಟಾರ್ಥಗಳನ್ನು ಕೊಟ್ಟು ಸಂತುಷ್ಟನಾದನು; ಮಹಾತ್ಮನಾಗಿ ಪೂಜ್ಯನಾಗಿ ದೋಷರಹಿತವಾದ ವ್ಯಾಪಾರವುಳ್ಳವನಾದ ಆ ಪೃಥುರಾಯನು ಈಪ್ರಕಾರವಾಗಿ ಮಹಾಕರ್ಮಗಳನ್ನು ಮಾಡುತ ಭೂಮಂಡಲವನ್ನು ರಕ್ಷಿಸಿ ಅನಂತರದಲ್ಲಿ ಪುತ್ರನಿಗೆ ರಾಜ್ಯಾಭಿಷೇಕವನ್ನು ಮಾಡಿ ಪರಗತಿಯನ್ನೈದಿದನು!"

"ಈ ರೀತಿಯಲ್ಲಿ ಸಮಸ್ತ ಗುಣಗಳಿಂದಲೂ ವಿಜೃಂಭಿತನಾಗಿ ಗುಣಜ್ಞರಿಂದ ಶ್ಲಾಘಿಸಲ್ಪಟ್ಟ ಪೃಥುರಾಯನ ಯಶಸ್ಸನ್ನು ವರ್ಣಿಸುತಲಿರುವ ಮೈತ್ರೇಯ ಋಷಿಯನ್ನು ಪೂಜಿಸಿ ವಿದುರನು 'ಎಲೈ ಮೈತ್ರೇಯ ಋಷಿಯೆ, ವೇನಪುತ್ರನಾದ ಆ ಪೃಥುರಾಯನು ಬ್ರಾಹ್ಮಣರಿಂದ ಅಭಿಷಿಕ್ತನಾಗಿ ಸಮಸ್ತ ದೇವತೆಗಳಿಂದಲೂ ಪೂಜಿತನಾಗಿ ಕ್ರತುಗಳಿಂದ ಸರ್ವದೇವತೆಗಳನ್ನಾರಾಧಿಸಿ ಭೂ ಗೋವನ್ನೂ ಸಮಸ್ತ ಪದಾರ್ಥಗಳನ್ನೂ ಕರೆದ ತನ್ನ ಭುಜಗಳಲ್ಲಿ ವಿಷ್ಣುಸಂಬಂಧಿಯಾದ ತೇಜಸ್ಸನ್ನು ಧರಿಸಿ ಏನುಮಾಡಿದನು? ಸಮಸ್ತರಾದ ಅರಸುಗಳು ತಮ್ಮ ತಮ್ಮ ಅಧಿಪತಿಗಳಿಂದ ಸಹಿತಗಳಾದ ಸಮಸ್ತ ಲೋಕಗಳೂ ಯಾವ ಪೃಥುರಾಯನ ಭೂಸಾರಗ್ರಹಣರೂಪವಾದ ಪರಾಕ್ರಮದ ಉಚ್ಛಿಷ್ಟರೂಪವಾದ ತಮ್ಮ ತಮ್ಮ ಇಷ್ಟಾರ್ಥಗಳನ್ನು ಸಂಪಾದಿಸಿಕೊಂಡು ಉಪಜೀವಿಸುತ್ತಾರೆಯೋ ಅಂಥಾ ಪೃಥುರಾಯನ ಕೀರ್ತಿಯನ್ನು ಅಭಿಜ್ಞನಾದ ಪುರುಷನು ಶ್ರವಣಂಗೈಯದವನಾಗುವದಿಲ್ಲ; ಆದಕಾರಣ ಪರಿಶುದ್ಧವಾದ ಆ ಅರಸನ ಚರಿತ್ರೆಯನ್ನು ಹೇಳುವವನಾಗು?' ಎಂದು ಕೇಳಿದನು.

ಆ ವಾಕ್ಯವನ್ನು ಕೇಳಿ ಮೈತ್ರೇಯ ಋಷಿಯು "ಎಲೈ ವಿದುರನೆ, ಆ ಬಳಿಕ ಪೃಥುರಾಯನು ಗಂಗಾ ಯಮುನಾ ಮಧ್ಯದಲ್ಲಿ ಶುದ್ಧವಾದ ಕ್ಷೇತ್ರದಲ್ಲಿ ವಾಸಂಗೈಯುತ ಜನ್ಮಾಂತರಾರ್ಜಿತವಾದ ಪುಣ್ಯದಿಂದ ಪ್ರಾರಬ್ಧಗಳಾದ ಭೋಗಗಳನ್ನು ಪುಣ್ಯಕ್ಷಯವಾಗಲೋಸುಗ ಅನುಭವಿಸಿದನೇಹೊರ್ತು ಸುಖಾಪೇಕ್ಷೆಯಿಂದ ಅನುಭವಿಸಲಿಲ್ಲ; ಸರ್ವತ್ರ ಅಪ್ರತಿಹತವಾದ ಆಜ್ಞಾಶಕ್ತಿಯುಳ್ಳವನಾಗಿ ಸಪ್ತದ್ವೀಪಗಳಿಗೂ ಏಕನಾಥನಾಗಿ ಬ್ರಾಹ್ಮಣ ಮತ್ತು ಭಗವದ್ಭಕ್ತರ ಕುಲವನ್ನು ಬಿಟ್ಟು ಅನ್ಯತ್ರ ದುಷ್ಟನಿಗ್ರಹವನ್ನು ಮಾಡಿ ಲೋಕರಕ್ಷಣವನ್ನು ಮಾಡಿದನು! ಹೀಗಿರುತ್ತಿರಲಾಗಿ ಆ ಪೃಥುರಾಯನಿಗೆ ಮಹಾಸತ್ರದೀಕ್ಷೆಯುಂಟಾಯಿತು; ಅಲ್ಲಿ ಪೂಜ್ಯರಾದ ದೇವಋಷಿಗಳು ಬ್ರಹ್ಮಋಷಿಗಳು ದೇವತೆಗಳು ಯಥಾಯೋಗ್ಯವಾಗಿ ಪೂಜಿಸಲ್ಪಟ್ಟವರಾದರು; ಅನಂತರದಲ್ಲಿ ಪೃಥುರಾಯನು ಸಭಾ

ಮಧ್ಯದಲ್ಲಿ ನಕ್ಷತ್ರ ಸಮೂಹಮಧ್ಯದಲ್ಲಿನ ಚಂದ್ರನಂತೆ ಎದ್ದುನಿಂತು ಉನ್ನತವಾಗಿ ಸ್ಥೂಲವಾಗಿ ದೀರ್ಘಗಳಾದ ಭುಜಗಳುಳ್ಳವನಾಗಿ ಹಳದೀವರ್ಣವಾದ ಶರೀರವೂ ಪದ್ಮಗಳಂತೆ ವಿಸ್ತಾರಗಳಾದ ನೇತ್ರಗಳೂ ಸುಂದರವಾದ ನಾಶಿಕವೂ ಮುಖವೂ ಸ್ಥೂಲಗಳಾದ ಭುಜ ಶಿರಸ್ಸುಗಳೂ ರಮಣೀಯಗಳಾದ ದಂತಗಳೂ ಮುಗುಳುನಗುವೂ ವಿಸ್ತೀರ್ಣವಾದ ವಕ್ಷಸ್ಥಳವೂ ವಿಶಾಲವಾದ ಕಟಿಪ್ರದೇಶವೂ ತ್ರಿವಳಿಗಳಿಂದ ರಮ್ಯವಾದ ಸೂಕ್ಷ್ಮವಾದ ಮಧ್ಯಭಾಗವೂ ಸುಳಿಯಂತೆ ಹಳ್ಳವಾದ ನಾಭಿಯೂ ಸುವರ್ಣಸ್ತಂಭಗಳಂತಿರುವ ತೊಡೆಗಳೂ ಉನ್ನತಾಗ್ರಪಾದಗಳೂ ಸೂಕ್ಷ್ಮಗಳಾಗಿ ವಕ್ರಗಳಾಗಿ ನೀಲಗಳಾಗಿ ಮೃದುಗಳಾದ ಕೇಶಗಳೂ ಶಂಖದಂತೆ ರೇಖಾತ್ರಯಯುಕ್ತವಾದ ಕಂಠವೂ ಉಳ್ಳವನಾಗಿ ಸೌಮ್ಯನಾಗಿ ಕಾಂತಿಶಾಲಿಯಾಗಿ ಅನರ್ಘ್ಯಗಳಾದ ದುಕೂಲಗಳನ್ನುಟ್ಟು ಹೊದ್ದುಕೊಂಡು ಯಜ್ಞದೀಕ್ಷಾನಿಮಿತ್ತವಾಗಿ ಆಭರಣಗಳನ್ನು ಧರಿಸದಿರುವವನಾದಾಗ್ಯು ಸ್ವಾಭಾವಿಕಗಳಾದ ದಿವ್ಯಕಾಂತಿ ಸೌಂದರ್ಯಗಳಿಂದ ಪ್ರಕಾಶಿಸುತ ಕೃಷ್ಣಾಜಿನವನ್ನು ಧರಿಸಿ ದರ್ಭಪವಿತ್ರಹಸ್ತನಾಗಿ ಉಚಿತಕರ್ಮಗಳನ್ನು ಮಾಡಿ ಪಾಪಪರಿಹಾರಕಗಳಾದ ಮಿಂಚುತಲಿರುವ ಕರಿಗುಡ್ಡುಗಳುಳ್ಳ ನೇತ್ರಗಳುಳ್ಳವನಾಗಿ ಎಲ್ಲಾ ಕಡೆಯಲ್ಲೂ ನೋಡಿ ಆ ಸಭೆಯನ್ನು ಸಂತೋಷಪಡಿಸುವನಂತೆ ಮನೋಹರವಾಗಿ ವಿಚಿತ್ರವಾದ ಪದಸಂದರ್ಭವುಳ್ಳದ್ದಾಗಿ ಮೃದುವಾಗಿ ಶುದ್ಧವಾಗಿ ಗಂಭೀರಾರ್ಥವುಳ್ಳದ್ದಾಗಿ ಅವ್ಯಾಕುಲವಾಗಿರುವ ಒಂದು ವಾಕ್ಕಿನಿಂದ ಆ ಸಭಾಜನರನ್ನು ಕುರಿತು ‘ ಎಲೈ ಸಾಧುಗಳಾದ ಸಭಾಜನರುಗಳಿರಾ, ನೀವೆಲ್ಲರೂ ಕೇಳಬೇಕು ; ನಿಮಗೆ ಮಂಗಳವಾಗಲಿ ; ಧರ್ಮವನ್ನು ತಿಳಿಯಲಿಚ್ಛೆಯುಳ್ಳ ಪುರುಷರಿಂದ ಸತ್ಪುರುಷರಲ್ಲಿ ಒಂದು ಮನೋಗತಾರ್ಥವು ವಿಜ್ಞಾಪನೆ ಮಾಡತಕ್ಕದ್ದು ; ನಾನು ಪ್ರಜೆಗಳಿಗೆ ಶಿಕ್ಷಕನಾಗಿ ಜೀವನಪ್ರದನಾಗಿ ರಕ್ಷಕನಾಗಿ ಸ್ವಧರ್ಮಮರ್ಯಾದೆಗಳಲ್ಲಿ ಪ್ರಜೆಗಳನ್ನು ನಿಲ್ಲಿಸುವನಾಗಿ ಬ್ರಹ್ಮದೇವನಿಂದ ನಿಯೋಜಿತನಾಗಿದ್ದೇನೆ ; ಸಕಲ ಕರ್ಮ ಸಾಕ್ಷಿಯಾದ ಪರಮಾತ್ಮನು ಯಾವ ವೇದವಾದಿಯಾದ ಮಹಾಪುರುಷನಲ್ಲಿ ಸಂತುಷ್ಟನಾಗುತ್ತಾನೆಯೋ ಆ ಮಹಾಪುರುಷನಿಗೆ ಯಾವ ಲೋಕಗಳುಂಟಾಗುವವೆಂದು ಮಹಾತ್ಮರು ಹೇಳುವರೋ ರಾಜಧರ್ಮಾನುಷ್ಠಾನವನ್ನು ಯಥಾಶಾಸ್ತ್ರವಾಗಿ ಮಾಡುತಿರುವ ನನಗೆ ಕಾಮಪ್ರದಗಳಾದ ಆ ಲೋಕಗಳುಂಟಾಗಲಿ ; ಯಾವ ಅರಸು ಪ್ರಜೆಗಳನ್ನು ಸ್ವಧರ್ಮಗಳಲ್ಲಿ ಚನ್ನಾಗಿ ಶಿಕ್ಷಿಸದೆ ರಾಜಗ್ರಾಹ್ಯಗಳಾದ ಕಾಣಿಕೆ ಕಂದಾಯಗಳನ್ನು ಗ್ರಹಿಸುವನೋ ಆ ಅರಸು ಪ್ರಜೆಗಳ ಪಾಪವನ್ನೇ ಗ್ರಹಿಸಿ ಅನುಭವಿಸುವನಲ್ಲದೆ ತನ್ನ ಐಶ್ವರ್ಯವನ್ನೂ ಹೋಗಲಾಡಿಸಿಕೊಳ್ಳುವನು ; ಆದಕಾರಣ ಪ್ರಜೆಗಳಾದ ನೀವು ಅರಸಾದ ನನಗೆ ಪರಲೋಕಾರ್ಥವಾಗಿ ಅಸೂಯಾರಹಿತರಾಗಿ ವಾಸುದೇವಾರ್ಪಣ ಬುದ್ಧಿಯಿಂದ ಸ್ವಧರ್ಮಗಳನ್ನೇ ಆಚರಿಸುವರಾಗಬೇಕು ; ಹಾಗಾದರೆ ಅದು ನನಗೆ ಪರಮಾನುಗ್ರಹವಾದೀತು ’ ಎಂದು ಪ್ರಜೆಗಳನ್ನು ಕುರಿತು ಬೇಡಿಕೊಂಡನು !

ಅನಂತರದಲ್ಲಿ ಪೃಥುರಾಯನು ದೇವತೆಗಳನ್ನು ಪಿತೃಗಳನ್ನು ಋಷಿಗಳನ್ನು ಕುರಿತು “ ಎಲೈ ಪೂಜ್ಯರಾದ ದೇವ ಋಷಿ ಪಿತೃಗಳಿರಾ, ನೀವು ನಿರ್ಮಲಾಂತಃಕರಣವುಳ್ಳವರಾದಕಾರಣ ಈ ಅರ್ಥವನ್ನನುಮೋದಿಸಗೈಯುವರಾಗಬೇಕು ; ಏನುಕಾರಣವೆಂದರೆ : ಸದ್ವ್ಯಾಪಾರಗಳನ್ನು ಮಾಡುವ ಪುರುಷನಿಗೆ ಪರಲೋಕಸುಖವು ಸಮವಾಗಿರುವದಾದಕಾರಣ ಈಶ್ವರಾರ್ಪಣಬುದ್ಧಿಯಿಂದ ಕರ್ಮಾನುಷ್ಠಾನವನ್ನು ಮಾಡಬೇಕೆಂಬ ಅರ್ಥವು ಕೇವಲ ಕರ್ಮವಾದಿಗಳಿಗೆ ಸಮ್ಮತವಲ್ಲ ; ಆದಾಗ್ಯು ಅವರುಕೂಡ ಈಶ್ವರನನ್ನು ಒಡಂಬಡಿಸಬೇಕು ! ಕೆಲವರು ಮಹಾತ್ಮರಿಗೆ ಯಜ್ಞಪತಿಯಾದ ಪರಮೇಶ್ವರನು ಒಬ್ಬನುಂಟು ಎಂದು ನಿಶ್ಚಯವುಂಟು ; ಅದು ಹ್ಯಾಗೆಂದರೆ : ಇಹಲೋಕ ಪರಲೋಕಗಳಲ್ಲಿ ಮಹಾಸಂಪದ್ಯುಕ್ತಗಳಾದ ಭೋಗಸ್ಥಾನಗಳು ಆ ಭೋಗಾನುಭವ ಯೋಗ್ಯಗಳಾದ ಶರೀರಗಳು ಸಹ ಕಾಣಲ್ಪಡುತಲಿವೆ ; ಈ ವೈಚಿತ್ರ್ಯವು ಈಶ್ವರನಿಲ್ಲದಿದ್ದರೆ ಸಿದ್ಧಿಸಲಾರದು ; ಈ ಅರ್ಥವು ಕರ್ಮವೈಚಿತ್ರ್ಯದಿಂದಲೇ ಸಿದ್ಧಿಸೀತು ; ಈಶ್ವರನಿಂದ ಕೆಲಸವೇನು ಎಂದಲ್ಲಿ ಮಹಾತ್ಮರಾದ ಮನ್ವಾದಿಗಳ ಅನುಭವದಿಂದ ಈಶ್ವರಸಿದ್ಧಿಯುಂಟಾಗುವದು ; ಸ್ವಾಯಂಭುವ ಮನುವಿಗೂ ಉತ್ತಾನಪಾದರಾಯನಿಗೂ ಮಹೀಪತಿಯಾದ ಧ್ರುವನಿಗೂ ರಾಜರ್ಷಿಯಾದ ಪ್ರಿಯವ್ರತರಾಯನಿಗೂ ನನ್ನ ಪಿತಾಮಹನಾದ ಅಂಗರಾಯನಿಗೂ ಬ್ರಹ್ಮನಿಗೂ ರುದ್ರನಿ

ಗೂ ಪ್ರಹ್ಲಾದನಿಗೂ ಬಲಿಗೂ ಇವರೇ ಮೊದಲಾಗಿ ಇನ್ನೂ ಮಹಾಪುರುಷರಿಗೂ ಭಗವಂತನಿಂದಲೇ ಇಷ್ಟಸಿದ್ಧಿಯುಂಟಾಗಿದೆ, ಮೃತ್ಯುದೇವಿಗೆ ದೌಹಿತ್ರನಾದ ವೇನನು ಮೊದಲಾದ ಧರ್ಮಮೂಢರಾಗಿ ದುರಹಂಕಾರಿಗಳಾದ ಕೆಲವರುಮಾತ್ರವೇ ಈಶ್ವರದ್ವೇಷದಿಂದ ಭ್ರಷ್ಟರಾದರೇ ಹೊರ್ತು ಮಿಗಿಲಾದ ಸತ್ಪುರುಷರಿಗೆ ಧರ್ಮಾರ್ಥ ಕಾಮಗಳಲ್ಲಿಯೂ ಸ್ವರ್ಗಫಲಗಳಲ್ಲಿಯೂ ಮೋಕ್ಷ ಪುರುಷಾರ್ಥದಲ್ಲಿಯೂ ಏಕರೂಪದಿಂದ ಅನುವರ್ತಿಸಿಕೊಂಡಿರುವ ಭಗವಂತನಿಂದಲೂ ಸರ್ವಸಿದ್ಧಿಗಳುಂಟಾಗಿವೆ, ಪ್ರತಿದಿವಸದಲ್ಲಿಯೂ ವೃದ್ಧಿಯನ್ನೈದುವದಾದ ಯಾವ ಭಗವಂತನ ಪಾದಸೇವಾ ವ್ಯಾಪಾರದಲ್ಲಿ ಅಭಿರುಚಿಯು ತಪಸ್ವಿಗಳಿಗೆ ಅನೇಕ ಜನ್ಮಾರ್ಜಿತಗಳಾದ ಬುದ್ಧಿಕಲ್ಮಷಗಳ ಸಮೂಹವನ್ನು ಭಗವಂತನ ಪಾದಾಂಗುಷ್ಠದಿಂದುದ್ಭವಿಸಿದ ಗಂಗೆಯಂತೆ ಆ ಕ್ಷಣವಲ್ಲೇ ಪರಿಹರಿಸುವದೋ ಆ ಭಗವಂತನನ್ನೇ ನೀವು ಭಜಿಸುವರಾಗಿ; ಯಾವ ಭಗವಂತನ ಪಾದಮೂಲವನ್ನಾಶ್ರಯಿಸಿದ ಪುರುಷನು ಸಕಲವಾದ ಚಿತ್ತಕಲ್ಮಷವನ್ನು ಪರಿಹರಿಸಿಕೊಂಡು ವೈರಾಗ್ಯದಿಂದ ಉನ್ನತವಾದ ವಿಜ್ಞಾನ ಸಾಕ್ಷಾತ್ಕಾರ ರೂಪವಾದ ಶಕ್ತಿಯುಳ್ಳವನಾಗಿ ಕ್ಲೇಶಸಂಪಾದಕವಾದ ಸಂಸಾರವನ್ನು ಪುನಃ ಪಡೆಯುವದಿಲ್ಲವೋ ಅಂಥಾ ಭಗವಂತನನ್ನಾರಾಧಿಸಿ! ಎಲೈ ಪ್ರಜೆಗಳಿರಾ, ನೀವು ಕಪಟರಹಿತರಾಗಿ ಅಧ್ಯಾಪನಾದಿಗಳಿಂದಲೂ ಮನೋವಾಕ್ಕಾಯಗಳಿಂದ ಸಾಧ್ಯಗಳಾದ ಧ್ಯಾನಸ್ತುತಿ ಪರಿಚರ್ಯಗಳಿಂದಲೂ ನಿಮ್ಮ ಅಧಿಕಾರಾನುರೂಪಗಳಾದ ಅರ್ಥಸಿದ್ಧಿಗಳಿಂದಲೂ ಇಷ್ಟಾರ್ಥಪ್ರದನಾದ ಆ ಭಗವಂತನನ್ನೇ ಭಜಿಸುವರಾಗಿ; ಭಗವಂತನು ವಿಶುದ್ಧವಿಜ್ಞಾನಘನನಾದಾಗ್ಯೂ ಗುಣರಹಿತನಾದಾಗ್ಯೂ ಕರ್ಮಮಾರ್ಗದಲ್ಲಿ ನಾನಾವಿಧಗಳಾದ ವ್ರೀಹ್ಯಾದಿ ದ್ರವ್ಯಗಳಿಂದಲೂ ಶುಕ್ಲಾದಿಗುಣಗಳಿಂದಲೂ ಪ್ರೋಕ್ಷಣಾದಿ ಕ್ರಿಯೆಗಳಿಂದಲೂ ವಿನಿಯೋಗ ಮಂತ್ರಗಳಿಂದಲೂ ಯಾಗಸಾಧ್ಯವಾದ ಉಪಕರಣಗಳಿಂದಲೂ ಸಂಕಲ್ಪದಿಂದಲೂ ಪದಾರ್ಥಶಕ್ತಿಯಿಂದಲೂ ಜ್ಯೋತಿಷ್ಟೋಮ ಅತಿರಾತ್ರಗಳೆಂಬ ನಾಮಧೇಯಗಳಿಂದಲೂ ನಾನಾಗುಣಗಳುಳ್ಳ ಕ್ರತುರೂಪನಾಗುತ್ತಾನೆ! ವ್ಯಾಪಕನಾದ ಈ ಭಗವಂತನು ಅವ್ಯಕ್ತವಾದ ಮೂಲಪ್ರಕೃತಿಯಿಂದಲೂ ಕ್ಷೋಭಕವಾದ ಕಾಲದಿಂದಲೂ ವಾಸನೆಗಳಿಂದಲೂ ಅದೃಷ್ಟದಿಂದಲೂ ಸಹ ನಿರ್ಮಿತವಾದ ಶರೀರದಲ್ಲಿ ವಿಷಯಾಕಾರಬುದ್ಧಿಯನ್ನು ಪಡೆದು ವಿಷಯಾನುಭವಜನ್ಯವಾದ ಆನಂದರೂಪನಾಗಿ ಕರ್ಮಫಲರೂಪನಾಗುತ್ತಾನೆ; ದಾರುಸ್ಥವಾದ ಅಗ್ನಿಯು ಹ್ಯಾಗೆ ಆ ಮರದ ದೀರ್ಘತ್ವ ಸ್ಥೂಲತ್ವ ಮೊದಲಾದ ವಿಕೃತಿಗಳನ್ನು ಪಡೆಯುವಂತೆ ತೋರುವದೋ ಆಪ್ರಕಾರವಾಗಿ ಭಗವಂತನು ವಿಷಯ ಸುಖರೂಪನಾಗಿ ತೋರುವನು; ಈ ಭೂಮಂಡಲದಲ್ಲಿ ದೃಢವ್ರತರಾಗಿ ನನ್ನ ಸಂಬಂಧಿಗಳಾದ ಸುಜನರು ಯಜ್ಞಭೋಕ್ತೃಗಳಿಗೆ ಅಧೀಶ್ವರನಾಗಿ ಗುರುವಾದ ಶ್ರೀಹರಿಯನ್ನು ಸ್ವಕರ್ಮಮಾರ್ಗದಿಂದ ಆರಾಧಿಸುತ ನನಗೆ ಅನುಗ್ರಹವನ್ನು ಮಾಡುತ್ತಾರೆ; ಅಧಿಕಗಳಾದ ಸಂಪತ್ತುಗಳಿಂದ ಪ್ರಕಾಶಿಸುವ ರಾಜಕುಲದ ತೇಜಸ್ಸು ಯಾವದುಂಟೋ ಅದು ಕ್ಷಮೆಯಿಂದಲೂ ತಪಸ್ಸಿನಿಂದಲೂ ವಿದ್ಯೆಯಿಂದಲೂ ಬಹು ಪ್ರಕಾಶಮಾನವಾದ ಬ್ರಾಹ್ಮಣರ ಕುಲದಲ್ಲಿ ಒಂದು ಸಮಯದಲ್ಲಿಯೂ ವ್ಯಾಪಿಸಬೇಡ; ಬ್ರಾಹ್ಮಣರ ವಿಷಯದಲ್ಲಿ ಭಯಭಕ್ತಿಯುಕ್ತವಾಗಿ ಕ್ಷತ್ರಿಯಕುಲವು ಇರಲಿ; ಬ್ರಾಹ್ಮಣಪ್ರಿಯನಾಗಿ ದೇವದೇವನಾಗಿ ಪುರಾಣಪುರುಷನಾಗಿ ನಿತ್ಯನಾದ ಶ್ರೀಹರಿಯು ಯಾವ ಬ್ರಾಹ್ಮಣಕುಲದ ಚರಣಾಭಿವಂದನದಿಂದ ಮಹಾತ್ಮರೊಳಗೆ ಅತಿ ಶ್ರೇಷ್ಠನಾಗಿ ಎಡೆಬಿಡದಿರುವ ಲಕ್ಷ್ಮಿಯನ್ನೂ ಜಗತ್ಪವಿತ್ರವಾದ ಕೀರ್ತಿಯನ್ನೂ ಪಡೆದನೋ ಅಂಥಾ ಬ್ರಾಹ್ಮಣ ಕುಲವನ್ನೇ ಸೇವಿಸಬೇಕು; ಸರ್ವಭೂತಹೃದಯವಾಸಿಯಾಗಿ ಸ್ವಪ್ರಕಾಶನಾಗಿ ಬ್ರಾಹ್ಮಣಪ್ರಿಯನಾಗಿ ಈಶ್ವರನು ಯಾವ ಬ್ರಾಹ್ಮಣಕುಲದ ಸೇವೆಯಿಂದ ಸಂತುಷ್ಟನಾಗುತ್ತಾನೆಯೋ ಅಂಥಾ ಭಗವದ್ಧರ್ಮನಿಷ್ಠರಾಗಿ ವಿನಯಗುಣ ಸಂಪನ್ನರಾದ ಪುರುಷರಿಂದ ಸರ್ವಪ್ರಕಾರದಿಂದಲೂ ಆ ಬ್ರಾಹ್ಮಣಕುಲವು ಸೇವಿಸಲ್ಪಡಬೇಕು; ಪುರುಷನು ಯಾವ ಬ್ರಾಹ್ಮಣಕುಲದ ನಿತ್ಯಸೇವೆಯಿಂದ ಶೀಘ್ರವಾಗಿ ಪ್ರಸನ್ನವಾದ ಚಿತ್ತದಿಂದ ಸ್ವತಃ ಏವ ಉಪಶಾಂತನಾಗಿ ಮೋಕ್ಷವನ್ನೈದುವನೋ ಅಂಥಾ ಬ್ರಾಹ್ಮಣಕುಲಕ್ಕಿಂತಲೂ ಶ್ರೇಷ್ಠವಾದದ್ದು ದೇವತೆಗಳಿಗೆ ಯಾವದೂ ಇಲ್ಲ; ಉಪನಿಷಚ್ಛ್ರುತಿಪಾದ್ಯನಾದ ಭಗವಂತನು ತತ್ವಜ್ಞರಾದ ಮಹಾಪುರುಷರಿಂದ ಶ್ರದ್ಧಾಪೂರ್ವಕವಾಗಿ ಇಂದ್ರಾದಿ ನಾಮಗಳಿಂದ ಯಾವ ಬ್ರಾಹ್ಮಣಕುಲದಮುಖದಲ್ಲಿ ಹೋಮಿಸಲ್ಪಟ್ಟ ಹವಿಸ್ಸುಗಳನ್ನು ಭಕ್ಷಿಸುವನೋ ಅಂಥಾ ಬ್ರಾಹ್ಮಣಕುಲವು ಸರ್ವಪೂಜ್ಯ

ವು ; ಅಗ್ನಿರೂಪವಾದಮುಖದಲ್ಲಿ ಈಶ್ವರನು ಹಾಗೆ ಗ್ರಹಿಸುವದಿಲ್ಲ ; ಯಾವ ವೇದದಲ್ಲಿ ಈ ಸಮಸ್ತ ಪ್ರಪಂಚವೂ ಕಾಣಲ್ಪಡುವಂತೆ ಚನ್ನಾಗಿ ತೋರುವದೋ ಪರಿಶುದ್ಧವಾಗಿ ಸನಾತನವಾದ ಅಂಥಾ ವೇದವನ್ನು ಯಾವ ಬ್ರಾಹ್ಮಣರು ಶ್ರದ್ಧೆಯಿಂದಲೂ ತಪಸ್ಸಿನಿಂದಲೂ ಹಿತಾಚರಣೆಯಿಂದಲೂ ನಿಷಿದ್ಧಪರಿತ್ಯಾಗದಿಂದಲೂ ಇಂದ್ರಿಯನಿಗ್ರಹದಿಂದಲೂ ಧ್ಯಾನಯೋಗದಿಂದಲೂ ತತ್ವಜ್ಞಾನಕ್ಕೋಸ್ಕರ ನಿತ್ಯದಲ್ಲಿಯೂ ಧರಿಸುತ್ತಾರೆಯೋ ಅಂಥಾ ನಾನು ಯಾವಜ್ಜೀವವು ಬ್ರಾಹ್ಮಣರ ಪಾದಪದ್ಮ ಧೂಳಿಯನ್ನು ಶಿರಸ್ಸಿನಮೇಲೆ ಧರಿಸುತ್ತೇನೆ; ಆ ಬ್ರಾಹ್ಮಣ ಪಾದರೇಣುವನ್ನು ನಿರಂತರದಲ್ಲಿಯೂ ಧರಿಸುವ ಪುರುಷನಿಗೆ ಸರ್ವಪಾಪವು ನಷ್ಟವಾಗುವದಲ್ಲದೆ ಸಮಸ್ತ ಗುಣಗಳೂ ಆ ಪುರುಷನನ್ನೇ ಪಡೆಯುವವು ; ಸರ್ವಗುಣಾಶ್ರಯನಾಗಿ ಸಚ್ಚರಿತ್ರವೇ ಧನವಾಗುಳ್ಳವನಾಗಿ ಕೃತಜ್ಞನಾಗಿ ವೃದ್ಧಸೇವಕನಾದ ಪುರುಷನನ್ನು ಸಂಪತ್ತುಗಳು ತಾವಾಗಿ ಬಂದು ಸೇರುವವು; ಆದುಕಾರಣ ಬ್ರಾಹ್ಮಣಕುಲವೂ ಗೋವುಗಳ ಕುಲವೂ ಭಗವಂತನೂ ಸಹ ಸಪರಿವಾರನಾದ ನನಗೆ ಪ್ರಸನ್ನರಾಗಲಿ' ಎಂದು ಪ್ರಾರ್ಥಿಸಿದನು.

" ಈಪ್ರಕಾರವಾಗಿ ನುಡಿಯುತಲಿರುವ ಪೃಥುರಾಯನನ್ನು ನೋಡಿ ' ಸಾಧುಗಳಾದ ಪಿತೃಗಳು ದೇವತೆಗಳು ಬ್ರಾಹ್ಮಣರೂ ಸಹ ಸಂತುಷ್ಟರಾಗಿ ಬ್ರಾಹ್ಮಣ ಶಾಪದಿಂದ ಹತನಾಗಿ ಪಾಪಿಷ್ಠನಾದ ವೇನನೂಕೂಡ ನರಕಬಾಧೆಗಳನ್ನು ತಪ್ಪಿಸಿಕೊಂಡು ಯಾವಕಾರಣ ಉತ್ತಮಲೋಕಗಳನ್ನೈದಿದನೋ ಆದುಕಾರಣ ಪುರುಷನು ಪುತ್ರನಿಂದ ಉತ್ತಮಲೋಕಗಳನ್ನೈದುತ್ತಾನೆಂಬ ಶೃತಿಯು ಸತ್ಯವಾಯಿತು ; ಹಿರಣ್ಯಾಕಶಿಪುವು ಭಗವನ್ನಿಂದೆಯಿಂದ ಮಹಾತಮಸ್ಸನ್ನು ಪ್ರವೇಶಿಸುವನಾಗಿ ಪುತ್ರನಾದ ಪ್ರಹ್ಲಾದನ ಮಹಿಮೆಯಿಂದ ಉತ್ತಾರಿತನಾದನು ; ಯಾವ ಪೃಥುರಾಯನಿಗೆ ಸರ್ವಲೋಕನಾಥನಾದ ಅಚ್ಯುತನಲ್ಲಿ ಇಂಥಾ ಭಕ್ತಿಯುಂಟಾಯಿತೋ ವೀರಶ್ರೇಷ್ಠನಾಗಿ ಪೃಥ್ವೀಪತಿಯಾದ ಆ ಪೃಥುರಾಯನು ಅನೇಕ ಸಂವತ್ಸರಗಳು ಜೀವಿಸಲಿ ' ಎಂದು ಸ್ತುತಿಗೈದು ಪೃಥುರಾಯನನ್ನು ಕುರಿತು 'ಎಲೈ ಮನೋಹರವಾಗಿ ಪವಿತ್ರವಾದ ಕೀರ್ತಿಯುಳ್ಳ ಪೃಥುರಾಯನೇ, ಯಾವ ನೀನು ಉತ್ತಮಶ್ಲೋಕನಾಗಿ ಬ್ರಹ್ಮಣ್ಯ ದೇವನಾದ ಶ್ರೀ ವಿಷ್ಣುವಿನ ಕಥೆಯನ್ನು ವಿಸ್ತರಿಸಿದೆಯೋ ಅಂಥಾ ಸ್ವಾಮಿಯಾದ ನಿನ್ನಿಂದಲೇ ಭಗವಂತನೇ ಸ್ವಾಮಿಯಾಗುಳ್ಳವರಾದೆವು ! ಎಲೈ ನಾಥನೇ, ನೀನು ಭೃತ್ಯ ಪರಿಪಾಲನವನ್ನು ಮಾಡೋಣವು ಆಶ್ಚರ್ಯವಲ್ಲ ; ದಯಾಶಾಲಿಗಳಾದ ಮಹಾತ್ಮರಿಗೆ ಪ್ರಜೆಗಳಲ್ಲಿ ಅನುರಾಗವು ಸ್ವಾಭಾವಿಕವು ; ದೇವಕ್ಲುಪ್ತಗಳಾದ ಕರ್ಮಗಳಿಂದ ಸುತ್ತುತಲಿರುವ ಜ್ಞಾನಶೂನ್ಯರಾದ ನಮಗೆ ಈಗ ನಿನ್ನಿಂದ ತಪಸ್ಸಿನ ಪಾರವು ಪಡೆಯಲ್ಪಟ್ಟಿತು ; ಯಾವ ಭಗವಂತನು ಬ್ರಾಹ್ಮಣಜಾತಿಯನ್ನು ಪ್ರವೇಶಿಸಿ ಕ್ಷತ್ರಿಯಜಾತಿಯನ್ನು ರಕ್ಷಿಸುತ್ತಾನೆಯೋ ಕ್ಷತ್ರಿಯಜಾತಿಯನ್ನು ಪ್ರವೇಶಿಸಿ ಬ್ರಾಹ್ಮಣಜಾತಿಯನ್ನು ರಕ್ಷಿಸುತ್ತಾನೆಯೋ ಬ್ರಾಹ್ಮಣ ಕ್ಷತ್ರಿಯ ಜಾತಿಗಳನ್ನೆರಡನ್ನೂ ಪ್ರವೇಶಿಸಿ ಈ ಸಮಸ್ತ ಜಗತ್ತನ್ನೂ ರಕ್ಷಿಸುತ್ತಾನೆಯೋ ಅಭಿವೃದ್ಧವಾದ ಸತ್ವವುಳ್ಳ ಮಹಾಪುರುಷನಾದ ಅಂಥಾ ಭಗವದ್ರೂಪನಾದ ನಿನಗೆ ನಮಸ್ಕಾರವು " ಎಂದು ಆ ಸಭೆಯಲ್ಲಿದ್ದ ಸಮಸ್ತ ಜನಗಳೂ ಪೃಥುರಾಯನನ್ನು ಕುರಿತು ನುಡಿದರು.

೨೨ನೇ ಅಧ್ಯಾಯ.

ಸನತ್ಕುಮಾರಋಷಿಯು ಪೃಥುರಾಯನಿಗೆ ತತ್ವಜ್ಞಾನವನ್ನುಪದೇಶಿಸಿದ್ದು.

" ಈ ರೀತಿಯಲ್ಲಿ ಸಮಸ್ತರಾದ ಜನರು ಮಹಾ ಪರಾಕ್ರಮಶಾಲಿಯಾದ ಪೃಥುರಾಯನನ್ನು ಶ್ಲಾಘಿಸುತಲಿರಲಾಗಿ ಸೂರ್ಯಸಮಾನರಾದ ನಾಲ್ಕುಮಂದಿ ಋಷಿಗಳು ಆಕಾಶದಿಂದಿಳಿದು ಬರುತಲಿರಲು ಸಿದ್ಧೇಶ್ವರರಾದ ಆ ನಾಲ್ವರು ಋಷಿಗಳನ್ನು ನೋಡಿ ಸಪರಿವಾರನಾದ ಪೃಥುರಾಯನು ಲೋಕಗಳನ್ನು ಪಾಪರಹಿತಗಳಾಗಿ ಮಾಡುತಲಿರುವ ಅವರುಗಳ ಮಹಾ ತೇಜಸ್ಸಿನಿಂದ ಇವರು ಸನಕಾದಿ ಮಹಾ ಯೋಗಿಗಳೆಂದು ತಿಳಿದು ಸಭಾಜನರಿಂದ ಪರಿವೃತನಾಗಿ ಅವರ ದರ್ಶನದಿಂದ ಎದ್ದು ಹೋಗುತಲಿರುವ ಪ್ರಾಣಗಳನ್ನು ಪುನಃ ಕರಕೊಂಡುಬರುವನೋ ಎಂಬಹಾಗೆ

ಶೀಘ್ರದಲ್ಲಿ ಎದ್ದವನಾದನು; ಇಂದ್ರಿಯಾಧಿಪತಿಯಾದ ಜೀವನು ಗಂಧಾದಿ ವಿಷಯಗಳನ್ನು ಕುರಿತು ಹ್ಯಾಗೆ ಏಳುವನೋ ಹಾಗೆ ಋಷಿಗಳನ್ನು ಕುರಿತು ಪ್ರತ್ಯುತ್ಥಾನಾರ್ಥವಾಗಿ ಎದ್ದನು; ಸಭಾಪೂಜ್ಯನಾದ ಪೃಥುರಾಯನು ಆ ಋಷಿಗಳಲ್ಲಿ ಗೌರವದಿಂದ ವಶೀಕೃತನಾಗಿ ವಿನಯದಿಂದ ನಮ್ರವಾದ ಕಾಂತವುಳ್ಳವನಾಗಿ ಅರ್ಘ್ಯ ಪಾದ್ಯಾಸನ ಪ್ರಧಾನಪೂರ್ವಕವಾಗಿ ಯಥಾಶಾಸ್ತ್ರವಾಗಿ ಆ ಋಷಿಗಳನ್ನು ಪೂಜಿಸಿ ಸಚ್ಚರಿತ್ರವುಳ್ಳ ಮಹಾ ಪುರುಷರ ಆಚಾರವನ್ನಾಚರಿಸುವನಾಗಿ ಬಹುಮಾನಂಗೈಯುತ ಆ ಋಷಿಗಳ ಪಾದಪ್ರಕ್ಷಾಳನೋದಕವನ್ನು ಶಿರಸ್ಸಿನಲ್ಲಿ ಧರಿಸಿ ಶ್ರದ್ಧಾನಿಯಮಯುಕ್ತನಾಗಿ ಸಂತುಷ್ಟನಾಗಿ ಸುವರ್ಣಮಯಗಳಾದ ಪೀಠಗಳಲ್ಲಿ ಕುಳಿತಿರುವ ಪರಮೇಶ್ವರನಿಗೂ ಜ್ಯೇಷ್ಠರಾದ ಆ ಸನಕಾದಿಗಳನ್ನು ತಮ್ಮ ತಮ್ಮ ವೇದಗಳಲ್ಲಿರುವ ಯಜ್ಞೇಶ್ವರರಿಗೆ ಸಮಾನರನ್ನಾಗಿ ನೋಡಿ 'ಎಲೈ ಬ್ರಾಹ್ಮಣಶ್ರೇಷ್ಠರುಗಳಿರಾ, ಶುಭನಿಧಿಗಳಾದ ಮಹಾ ಯೋಗಿಗಳಿಗೂ ಕೂಡ ದುರ್ಲಭವಾದ ದರ್ಶನವುಳ್ಳ ನಿಮ್ಮ ದರ್ಶನವು ನನಗೆ ಉಂಟಾಯಿತು; ನಾನು ಯಾವ ಶುಭಕರ್ಮವನ್ನಾಚರಿಸಿದೆನೋ ನನ್ನ ಪುಣ್ಯವು ಎಷ್ಟು ದೊಡ್ಡದೋ; ಯಾವ ಪುರುಷನಿಗೆ ಬ್ರಾಹ್ಮಣರು ಸಪರಿವಾರನಾದ ಪರಮೇಶ್ವರನು ವಿಷ್ಣುವು ಸಹಾ ಪ್ರಸನ್ನರಾಗುತ್ತಾರೆಯೋ ಆ ಪುರುಷನಿಗೆ ಇಹ ಪರಲೋಕಗಳಲ್ಲಿಯೂ ಕೂಡ ಯಾವದು ದುರ್ಲಭವಾದೀತು; ಈ ಜಗತ್ತಿಗೆ ಕಾರಣಭೂತವಾದ ಮಹತ್ತತ್ವಾದಿಗಳೂ ಕೂಡ ಸರ್ವಸಾಕ್ಷಿಯಾದ ಪರಮಾತ್ಮನನ್ನು ಹ್ಯಾಗೆ ಕಾಣುವದಿಲ್ಲವೋ ಹಾಗೆ ಲೋಕಗಳನ್ನು ಸಂಚರಿಸುತಲಿರುವ ನಿಮ್ಮನ್ನು ಜನರು ಕಾಣರು; ಯಾವ ಸಾಧುಗಳಾದ ಗೃಹಸ್ಥಾಶ್ರಮಿಗಳು ಗೃಹಗಳು ಪೂಜ್ಯರಾದ ಮಹಾಪುರುಷರಿಗೆ ಸ್ವೀಕಾರಯೋಗ್ಯಗಳಾದ ಉದಕವು ತೃಣವು ಭೂಮಿಯು ಗೃಹಪತಿಯು ಭೃತ್ಯರು ಸಹ ಉಳ್ಳವರೋ ಆ ಗೃಹಸ್ಥಾಶ್ರಮಿಗಳು ಸತ್ಪುರುಷರು; ಅವರೇ ಧನ್ಯರು; ಅಂಥಾ ಸತ್ಪುರುಷರಿಲ್ಲದ ಗೃಹಗಳು ಸಮಸ್ತ ಸಂಪತ್ತುಗಳಿಂದ ಯುಕ್ತಗಳಾದಾಗ್ಯೂ ಸರ್ಪಗಳಿಗೆ ಆವಾಸಸ್ಥಾನಗಳಾದ ವೃಕ್ಷಗಳೇ ಹೊರ್ತು ಬೇರೆಯಲ್ಲ! ಯಾವ ನೀವು ಬಾಲಕರಾದಾಗ್ಯೂ ಸರ್ವಶಾಸ್ತ್ರಜ್ಞರಾಗಿ ಮೋಕ್ಷೇಚ್ಛೆಯುಳ್ಳವರಾಗಿ ಶ್ರದ್ಧೆಯಿಂದ ಮಹಾ ವ್ರತಗಳನ್ನಾಚರಿಸುತ್ತೀರೋ ಅಂಥಾ ನಿಮಗೆ ಶುಭಾಗಮನವುಂಟಾಗಲಿ! ಎಲೈ ನಾಥರಾದ ಮಹರ್ಷಿಗಳಿರಾ, ವಿಷಯಭೋಗಗಳನ್ನೇ ಪರಮಪುರುಷಾರ್ಥವನ್ನಾಗಿ ತಿಳಿದು ದುಃಖಾಸ್ಪದವಾದ ಈ ಸಂಸಾರದಲ್ಲಿ ಸ್ವಕರ್ಮಗಳಿಂದ ಬಿದ್ದು ತೊಳಲುತಿರುವ ನಮಗೆ ಕ್ಷೇಮವುಂಟಾದೀತೆ; ಅಭ್ಯಾಗತರಾದವರ ಯೋಗಕ್ಷೇಮವನ್ನು ವಿಚಾರಿಸೋಣವು ಅಸಂಗತವು ಎಂದಲ್ಲಿ ಆತ್ಮಾರಾಮರಾದ ನಿಮ್ಮ ವಿಷಯದಲ್ಲಿ ಕುಶಲಪ್ರಶ್ನೆಯು ಏನುಮಾಡತಕ್ಕದ್ದು; ನಿಮ್ಮಲ್ಲಿ ಕುಶಲಾಕುಶಲ ರೂಪಗಳಾದ ಬುದ್ಧಿವೃತ್ತಿಗಳೇ ಹುಟ್ಟುವದಿಲ್ಲ; ಅದು ಕಾರಣ ನಿಮ್ಮಲ್ಲಿ ವಿಶ್ವಾಸವುಳ್ಳವನಾದ ನಾನು ದೀನರಾದ ಪ್ರಾಣಿಗಳಿಗೆ ಸುಹೃತ್ತುಗಳಾದ ನಿಮ್ಮನ್ನು ಪ್ರಶ್ನೆಗೈಯುತ್ತೇನೆ; ಈ ಸಂಸಾರದಲ್ಲಿ ನಮಗೆ ಕ್ಷೇಮವು ಶೀಘ್ರವಾಗಿ ಹ್ಯಾಗೆ ಆಗುವದು; ಮನಸ್ವಿಗಳಾದ ಪುರುಷರಿಗೆ ಅಂತರಾತ್ಮಸ್ವರೂಪನಾಗಿ ಸ್ವಸ್ವರೂಪ ಪ್ರಕಾಶಕನಾಗಿ ಅಜನಾದ ಭಗವಂತನೇ, ಸ್ವಭಕ್ತಾನುಗ್ರಹಾರ್ಥವಾಗಿ ಸಿದ್ಧರಾದ ನಿಮ್ಮ ರೂಪದಿಂದ ಸಂಚರಿಸುತ್ತಾನೆ' ಎಂದು ನುಡಿದನು.

"ಎಲೈ ವಿದುರನೆ, ಸಾರಭೂತವಾಗಿ ಸ್ಪಷ್ಟವಯುಕ್ತವಾಗಿ ಮಿತವಾಗಿ ಮಧುರವಾಗಿರುವ ಆ ಪೃಥುರಾಯನ ವಾಕ್ಯವನ್ನು ಕೇಳಿ ಸನತ್ಕುಮಾರನು ಪ್ರೀತಿಯಿಂದ ಮುಗುಳುನಗೆಯುಳ್ಳವನಾಗಿ 'ಎಲೈ ಸರ್ವಭೂತ ಹಿತಾತ್ಮನಾದ ಪೃಥುರಾಯನೇ, ನೀನು ಸರ್ವಾರ್ಥಗಳನ್ನು ತಿಳಿದಿರುವವನಾದಾಗ್ಯೂ ಚನ್ನಾಗಿ ಪ್ರಶ್ನೆಗೈದೆ; ಸತ್ಪುರುಷರ ಸ್ವಭಾವವೇ ಇಂಥಾದ್ದು; ಸಾಧುಗಳಾದ ನಿಮ್ಮಂಥಾ ಪುರುಷರ ಸಂಗತಿಯು ವಕ್ತೃಗಳಿಗೂ ಶ್ರೋತೃಗಳಿಗೂ ಉಭಯತ್ರರಿಗೂ ಸುಖಕರವಾದದ್ದು; ನಿಮ್ಮಂಥಾ ಮಹಾತ್ಮರೊಡನೆ ಪ್ರಶ್ನೋತ್ತರರೂಪವಾದ ಸಂಭಾಷಣವು ಸರ್ವಜನರಿಗೂ ಸುಖವನ್ನುಂಟುಮಾಡುವದು! ಎಲೈ ಅರಸೆ, ನಿನಗೆ ಭಗವಂತನ ಪಾದಾರವಿಂದಗಳ ಗುಣಕೀರ್ತನೆಯಲ್ಲಿ ಅಭಿಲಾಷೆಯು ಸಿದ್ಧವಾಗಿದೆ; ನಿಯತವಾದ ಆ ಭಗವತ್ಕಥಾಶ್ರವಣೇಚ್ಛೆಯು ಕಾಮಾತ್ಮಕವಾದ ಮನಃಕಲ್ಮಷವನ್ನೂ ರಾಗದ್ವೇಷಾದಿಗಳನ್ನೂ ಸಹ ಪರಿಹರಿಸುವದು; ಶಾಸ್ತ್ರಗಳು ಚನ್ನಾಗಿ ವಿಚಾರಣೆ ಮಾಡಲ್ಪಡ[ುವ]ಲ್ಲಿ ಪ್ರಾಣಿ

ಗಳಿಗೆ ಕ್ಷೇಮಕಾರಣಗಳಾದದ್ದು ಇಷ್ಟೇಸರಿ ; ಆತ್ಮಾತಿರಿಕ್ತವಸ್ತುಗಳಲ್ಲಿ ವೈರಾಗ್ಯವು ನಿರ್ಗುಣವಾದ ಪರಬ್ರಹ್ಮನಲ್ಲಿ ದೃಢವಾದ ಚಿತ್ತಸ್ಥೈರ್ಯವು ಇವೆರಡೂ ಮುಕ್ತಿಸಾಧನವಾದಂಥಾವುಗಳು ; ಚಿತ್ತಸ್ಥೈರ್ಯರೂಪವಾದ ಆ ಬ್ರಹ್ಮನಿಷ್ಠೆಯು ಶ್ರದ್ಧಾಪೂರ್ವಕವಾದ ಭಗವದ್ಧರ್ಮಾಚರಣದಿಂದಲೂ ಸ್ವರೂಪವಿಚಾರದಿಂದಲೂ ಅಧ್ಯಾತ್ಮಯೋಗನಿಷ್ಠೆಯಿಂದಲೂ ನಿತ್ಯವಾಗಿ ಯೋಗೇಶ್ವರನಾದ ಭಗವಂತನ ಉಪಾಸನೆಯಿಂದಲೂ ಪುಣ್ಯಕರವಾದ ಭಗವತ್ಕಥಾಶ್ರವಣದಿಂದಲೂ ಸಿದ್ಧಿಸುವದು ; ಅರ್ಥೈಕಪ್ರಧಾನರಾದ ತಾಮಸಜನರು ಕಾಮೈಕಪ್ರಧಾನರಾದ ರಾಜಸ ಪುರುಷರು ಇವರೊಡನೆ ಸಂಭಾಷಣಾದಿಗಳಲ್ಲಿ ಪರಾಙ್ಮುಖತ್ವದಿಂದಲೂ ಆ ಜನರಿಗೆ ಸಮ್ಮತಗಳಾದ ಅರ್ಥಕಾಮರೂಪಗಳಾದ ವಿಷಯಗಳನ್ನು ಪರಿಗ್ರಹಿಸದಿರೋಣದರಿಂದಲೂ ವಿಜನಸ್ಥಾನದಲ್ಲಿ ಅಭಿರುಚಿಯಿಂದಲೂ ಚಿತ್ತಪರಿತೋಷದಿಂದಲೂ ಶ್ರೀಹರಿ ಕಥಾರೂಪವಾದ ಅಮೃತಪಾನದಿಂದಲೂ ಅಹಿಂಸೆಯಿಂದಲೂ ಉಪಶಮಾದಿಪ್ರಧಾನವಾದ ವೃತ್ತಿಯಿಂದಲೂ ಆತ್ಮಹಿತಾನುಸಂಧಾನದಿಂದಲೂ ಮುಕುಂದನ ಉತ್ಕೃಷ್ಟವಾದ ಚರಿತವೆಂಬ ಅಮೃತದಿಂದಲೂ ನಿಷ್ಕಾಮನಿಯಮಗಳಿಂದಲೂ ಇಂದ್ರಿಯ ನಿಗ್ರಹದಿಂದಲೂ ಅನ್ಯಮಾರ್ಗಗಳನ್ನು ನಿಂದೆಮಾಡದಿರೋಣದರಿಂದಲೂ ಯೋಗಕ್ಷೇಮಾರ್ಥವಾದ ಕ್ರಿಯಾರಾಹಿತ್ಯದಿಂದಲೂ ಶೀತೋಷ್ಣಾದಿ ದ್ವಂದ್ವಸಹನದಿಂದಲೂ ಸಿದ್ಧಿಸುವದು ; ಹರಿಭಕ್ತರಾದ ಭಾಗವತರ ಶ್ರೋತ್ರಗಳಿಗೆ ಭೂಷಣರೂಪಗಳಾದ ಭಗವದ್ಗುಣ ಕೀರ್ತನದಿಂದ ಬಾರಿಬಾರಿಗೂ ವೃದ್ಧಿಯನ್ನು ಪಡೆಯುತ್ತಿರುವ ಭಕ್ತಿಯಿಂದ ಕಾರ್ಯಕಾರಣರೂಪವಾದ ಅನಾತ್ಮವಸ್ತುವಿನಲ್ಲಿ ವೈರಾಗ್ಯವು ನಿರ್ಗುಣವಾದ ಪರಬ್ರಹ್ಮನಲ್ಲಿ ಅಭಿರತಿಯು ಉಂಟಾಗುವದು ; ಬ್ರಹ್ಮನಲ್ಲಿ ಯಾವಾಗ ಅಭಿರತಿಯು ಸ್ಥಿರವಾಗುತ್ತದೆಯೋ ಆಗ ಆ ಪುರುಷನು ಆಚಾರ್ಯನನ್ನು ಪಡೆದವನಾಗಿ ಜ್ಞಾನವೈರಾಗ್ಯ ದಾರ್ಢ್ಯದಿಂದ ವಾಸನಾರಹಿತವಾಗಿ ಪಂಚಭೂತಪ್ರಧಾನವಾಗಿ ಜೀವೋಪಾಧಿಯಾದ ಲಿಂಗಶರೀರವನ್ನು ಮರದಲ್ಲಿ ಹುಟ್ಟಿದ ಅಗ್ನಿಯು ಮರವನ್ನು ದಹಿಸುವಂತೆ ದಹಿಸುವನು ; ಲಿಂಗಶರೀರ ನಾಶಾನಂತರದಲ್ಲಿ ದಗ್ಧವಾದ ಲಿಂಗಶರೀರವುಳ್ಳ ಪುರುಷನು ಅಂತಃಕರಣಧರ್ಮಗಳಾದ ಕರ್ತೃತ್ವಾದಿಗಳಿಂದ ರಹಿತನಾಗಿ ಬಾಹ್ಯಗಳಾದ ಘಟಾದಿವಸ್ತುಗಳನ್ನೂ ಅಂತರಾಳ ಸುಖದುಃಖಾದಿಗಳನ್ನೂ ಕಾಣುವದಿಲ್ಲ ; ದೃಶ್ಯವಾದ ಪ್ರಪಂಚಕ್ಕೂ ದ್ರಷ್ಟ್ರುವಾದ ಆತ್ಮನಿಗೂ ಭೇದಬುದ್ಧಿ ನಿಯಾಮಕವಾದ ಅಜ್ಞಾನಕ್ಕೆ ನಾಶವುಂಟಾದರೆ ತಾನೇ ಅಖಂಡಾಕಾರನಾಗುವನು ; ಅದು ಹ್ಯಾಗಂದರೆ : ಸ್ವಪ್ನಾವಸ್ಥೆಯನ್ನನುಭವಿಸುವ ಪುರುಷನು ತಾನು ಅರಸಾದ ರೀತಿಯಲ್ಲೂ ತನ್ನ ಸೇನೆಗಳು ಸಂಗಡ ಇದ್ದಂತೆಯೂ ಕಂಡು ಆ ಸ್ವಪ್ನಾವಸ್ಥೆ ಹೋದಮೇಲೆ ಎಲ್ಲಾ ಮಿಥ್ಯಾಭೂತವಾಗಿ ತಾನೊಬ್ಬನೇ ಮಲಗಿರುವನು ; ಅದೇರೀತಿಯಲ್ಲಿ ಉಪಾಧಿ ನಾಶವಾದಮೇಲೆ ಸ್ವಸ್ವರೂಪವೇ ಪ್ರಕಾಶಿಸುವದು ; ಜೀವನು ದ್ರಷ್ಟ್ರುವಾದ ತನ್ನನ್ನು ದೃಶ್ಯಗಳಾದ ವಿಷಯಗಳನ್ನು ಇವೆರಡರ ಸಂಬಂಧಕ್ಕೆ ಕಾರಣವಾದ ಅಹಂಕಾರವನ್ನು ಸಹಾ ಅಂತಃಕರಣವಿದ್ದರೆ ಜಾಗ್ರತ್ಸ್ವಪ್ನಗಳಲ್ಲಿ ನೋಡುವನು ; ಅಂತಃಕರಣ ನಾಶಾನಂತರದಲ್ಲಿ ಸ್ವಸ್ವರೂಪ ಒಂದೇ ತಿಳಿಯುವದು ; ಇದಕ್ಕೆ ಸುಷುಪ್ತಿಯೇ ದೃಷ್ಟಾಂತವು ; ಸುಷುಪ್ತಿಯಲ್ಲಿ ಯಾವದೂ ತೋರುವದಿಲ್ಲ ; ಕೇವಲ ಸುಖರೂಪವೇ ಇರುವದು ; ಲೋಕದಲ್ಲಿ ಎಲ್ಲಾಕಡೆಯಲ್ಲಿಯೂ ಉಪಾಧಿರೂಪವಾದ ಜಲವು ಕನ್ನಡಿಯು ಮೊದಲಾದ ವಸ್ತುಗಳು ಇದ್ದರೆ ಆ ಜಲಾದಿಗಳಲ್ಲಿ ತನ್ನನ್ನೂ ತನ್ನ ಪ್ರತಿಬಿಂಬವನ್ನೂ ಬೇರೆ ಬೇರೆಯಾಗಿ ಪುರುಷನು ಕಾಣುವನು ; ಆ ಉಪಾಧಿ ಇಲ್ಲದಿದ್ದರೆ ತಾನೊಬ್ಬನೇ ಕಾಣಲ್ಪಡುವನು ; ಎಂದು ಈ ರೀತಿಯಲ್ಲಿ ವೈರಾಗ್ಯಕ್ಕೂ ಆತ್ಮಾಭಿರತಿಗೂ ಮೋಕ್ಷಸಾಧನತ್ವವನ್ನು ಹೇಳಿ ಈಗ ಅನಾತ್ಮವಸ್ತುಗಳಲ್ಲಿ ಅಭಿರತಿಯು ಸಂಸಾರಬಂಧನಕ್ಕೆ ಕಾರಣವೆಂಬ ಅರ್ಥವನ್ನು ಹೇಳುವನು ; ವಿಷಯಗಳನ್ನು ಸ್ಮರಿಸುತಿರುವ ಪುರುಷರ ಇಂದ್ರಿಯಗಳು ಸ್ಮರಿಸಲ್ಪಡುವ ವಿಷಯಗಳಿಂದ ಆಕರ್ಷಿಸಲ್ಪಡುತ್ತಿವೆ ; ಆ ಇಂದ್ರಿಯಗಳು ಮನಸ್ಸನ್ನು ಚಲಿಸುವಂತೆ ಮಾಡುತ್ತಿವೆ ; ಚಂಚಲವಾದ ಆ ಮನಸ್ಸು ಬುದ್ಧಿಯ ಸಾಮರ್ಥ್ಯವನ್ನಪಹರಿಸುತ್ತದೆ ; ಅದು ಹ್ಯಾಗಂದರೆ : ನದೀತೀರದಲ್ಲಿ ಹುಟ್ಟಿನ ಕುಶಾದಿಗಳು ತಮ್ಮ ಬೇರುಗಳಿಂದ ಹ್ಯಾಗೆ ಆ ನದೀಜಲವನ್ನಾಕರ್ಷಿಸುವವೋ ಅದೇರೀತಿಯಾಗಿ ಚಿತ್ತವು ಬುದ್ಧಿಶಕ್ತಿಯನ್ನಪಹರಿಸುವದು ; ಬುದ್ಧಿನಿಷ್ಠವಾದ ಚೈತನ್ಯವು ಅಪಹೃತವಾದಮೇಲೆ ಪ್ರಾ

ಮಾನುಸಂಧಾನವು ಭ್ರಂಶವನ್ನೈದುವದು; ಅನಂತರದಲ್ಲಿ ಆತ್ಮನಿಗೆ ಸ್ವಜ್ಞಾನವು ನಷ್ಟವಾಗುವದು; ಆ ಜ್ಞಾನಾಭಾವವೇ ಆತ್ಮಾಪಲಾಪವೆನಿಸುವದು; ಯಾವ ಆತ್ಮನ ನಿಮಿತ್ತವಾಗಿ ಸರ್ವವೂ ಪ್ರಿಯವಾಗುವದೋ ಅಂಥಾ ಆತ್ಮನನ್ನರಿಯದೇ ಅನ್ಯವಾದ ವಿಷಯದಲ್ಲಿ ಲಗ್ನವಾಗುವದ್ಯಾವದುಂಟೋ ಅದಕ್ಕಿಂತಲೂ ಅಧಿಕವಾದ ಸ್ವಾರ್ಥಹಾನಿಯು ಯಾವದೂ ಇಲ್ಲ; ಯಾವ ಪರೋಕ್ಷಾಪರೋಕ್ಷಜ್ಞಾನದಿಂದ ಪುರುಷನು ಸ್ಥಿರತ್ವವನ್ನೈದುವನೋ ಅಂಥಾ ಜ್ಞಾನವಿಜ್ಞಾನದಿಂದ ಯಾವ ಪುರುಷನು ಭ್ರಂಶಿತನಾಗಿ ಅರ್ಥಾಭಿಧ್ಯಾನವನ್ನೂ ಕಾಮಾಭಿಧ್ಯಾನವನ್ನೂ ಮಾಡುವನೋ ಅಂಥಾ ಪುರುಷನಿಗೆ ಸರ್ವಪುರುಷಾರ್ಥ ಹಾನಿಯುಂಟಾಗುವದು; ಧರ್ಮಾರ್ಥ ಕಾಮ ಮೋಕ್ಷಗಳಿಗೆ ಯಾವದು ಅತ್ಯಂತ ವಿಘಾತವಾದದ್ದೋ ಸಂಸಾರತಮಸ್ಸನ್ನು ದಾಟಲಿಚ್ಛೆಯುಳ್ಳ ಪುರುಷನು ಅಂಥಾ ವಸ್ತುವಿನ ಸಂಗವನ್ನು ಬಿಡಬೇಕು; ಧರ್ಮಾದಿ ಪುರುಷಾರ್ಥಗಳೆಂಬ ನಾಲ್ಕರಲ್ಲಿ ಮೋಕ್ಷವೇ ಉತ್ತಮ ಪುರುಷಾರ್ಥವು; ಧರ್ಮಾರ್ಥ ಕಾಮಗಳು ಮೂರೂ ಯಮಭಯದಿಂದ ಪೀಡಿತಗಳಾಗಿ ಅನಿತ್ಯಗಳಾದಂಥಾವು; ಬ್ರಹ್ಮಾದಿ ಉತ್ಕೃಷ್ಟಪ್ರಾಣಿಗಳು ನಮ್ಮಂಥಾ ನಿಕೃಷ್ಟಪ್ರಾಣಿಗಳು ಈ ಸಮಸ್ತರೂ ಗುಣಗಳ ಕ್ಷೋಭೆಯಿಂದ ಹುಟ್ಟುತ್ತಾರಲ್ಲದೆ ಕಾಲದಿಂದ ಹೋಗಲಾಡಿಸಲ್ಪಟ್ಟ ಮನೋರಥವುಳ್ಳವರಾಗಿ ಕ್ಷೇಮವನ್ನೈದುವದಿಲ್ಲ! ಎಲೈ ಪೃಥುರಾಯನೆ, ನೀನು ದೇಹಗಳಿಂದಲೂ ಇಂದ್ರಿಯಗಳಿಂದಲೂ ಪ್ರಾಣಗಳಿಂದಲೂ ಬುದ್ಧಿಯಿಂದಲೂ ಅಹಂಕಾರದಿಂದಲೂ ಆವೃತಗಳಾದ ಸ್ಥಾವರ ಜಂಗಮ ಲೋಕಗಳ ಹೃದಯಗಳಲ್ಲಿ ದೇಹಾಭಿಮಾನಿಗಳಾದ ಜೀವರುಗಳಲ್ಲೇ ನಿಯಾಮಕನಾಗಿ ಸಾಕ್ಷಿಯಾಗಿ ಯಾವ ಭಗವಂತನು ಪ್ರಕಾಶಿಸುತ್ತಾನೆಯೋ ಆ ಭಗವಂತನೇ ನಾನೆಂದು ತಿಳಿ; ಉತ್ಕೃಷ್ಟ ನಿಕೃಷ್ಟರೂಪವಾದ ಈ ಮಾಯಾರೂಪವಾದ ಜಗತ್ತು ಯಾವ ಪರಬ್ರಹ್ಮನಲ್ಲಿ ರಜ್ಜುವಿನಲ್ಲಿನ ಸರ್ಪದಂತೆ ತೋರುವದೋ ವಿವೇಕದೃಷ್ಟಿಯಿಂದ ಭಾವಿಸಿದರೆ ತೋರುವದಿಲ್ಲವೋ ಅಂಥಾ ನಿತ್ಯಮುಕ್ತವಾಗಿ ಪರಿಶುದ್ಧವಾಗಿ ಸ್ವಪ್ರಕಾಶರೂಪವಾಗಿ ಸತ್ಯವಾದ ಕರ್ಮಗಳಿಂದ ಮಲಿನವಾದ ಪ್ರಕೃತಿಯನ್ನು ನಿರಾಕರಿಸುವ ಆ ಪರಬ್ರಹ್ಮ ವಸ್ತುವನ್ನು ಶರಣುಹೊಂದುತ್ತೇನೆ; ಸತ್ಪುರುಷರು ಯಾವ ಪರಮೇಶ್ವರನ ಪಾದಪದ್ಮಗಳ ಬೆರಳುಗಳ ಕಾಂತಿಯಲ್ಲಿ ಉಂಟಾದ ಭಕ್ತಿಯಿಂದ ಅಹಂಕಾರ ಗ್ರಂಥಿಯನ್ನು ಹ್ಯಾಗೆ ಶಿಥಿಲವನ್ನು ಮಾಡುತ್ತಾರೆಯೋ ಹಾಗೆ ಭಕ್ತಿರಹಿತರಾದ ಯತಿಗಳು ಇಂದ್ರಿಯ ನಿಗ್ರಹವನ್ನು ಮಾಡುವವರಾದಾಗ್ಯೂ ಅಜ್ಞಾನಗ್ರಂಥಿಯನ್ನು ಭೇದಿಸಲಾರರೋ ಅಂಥಾ ರಕ್ಷಕನಾಗಿ ವಾಸುದೇವನಾದ ಪರಮೇಶ್ವರನನ್ನು ಭಜಿಸರು; ಪರಮೇಶ್ವರನನ್ನು ಸಂಸಾರತಾರಕನನ್ನಾಗಿ ಭಜಿಸದಿರುವ ಪುರುಷರಿಗೆ ಸಂಸಾರಕಾರಣವು ಮಹಾಕ್ಲೇಶ ಸಾಧ್ಯವಾಗುವದು; ಮೂಢಪುರುಷರು ಕಾಮ ಕ್ರೋಧಾದಿಗಳೆಂಬ ಮೊಸಳೆಗಳು ಮಹಾಮತ್ಸ್ಯಗಳುಳ್ಳ ಸಮುದ್ರವನ್ನು ಕಷ್ಟದಿಂದ ದಾಟಲಿಚ್ಛೈಸುತ್ತಾರೆ! ಎಲೈ ಅರಸೆ, ನೀನು ಭಜಿಸುವದಕ್ಕೆ ಯೋಗ್ಯವಾದ ಭಗವಂತನಪಾದವನ್ನು ತೆಪ್ಪವನ್ನಾಗಿ ಮಾಡಿಕೊಂಡು ದಾಟಲಶಕ್ಯವಾದ ವ್ಯಸನಸಮುದ್ರವನ್ನು ದಾಟು' ಎಂದು ಈ ರೀತಿಯಲ್ಲಿ ಬ್ರಹ್ಮಪುತ್ರನಾಗಿ ಬ್ರಹ್ಮಜ್ಞನಾದ ಸನತ್ಕುಮಾರ ಋಷಿಯಿಂದ ತೋರಿಸಲ್ಪಟ್ಟ ಬ್ರಹ್ಮಸ್ವರೂಪವುಳ್ಳವನಾಗಿ ಪೃಥುರಾಯನು ಆ ಋಷಿಯನ್ನು ಕುರಿತು ಪ್ರಶ್ನೆ ಮಾಡಿದನು!

"ಎಲೈ ಬ್ರಾಹ್ಮಣೋತ್ತಮನಾದ ಸನತ್ಕುಮಾರ ಋಷಿಯೆ, ದೀನದಯಾಪರನಾದ ಶ್ರೀಹರಿಯಿಂದ ಪೂರ್ವದಲ್ಲಿಯೇ ನನ್ನಲ್ಲಿ ಅನುಗ್ರಹವು ಮಾಡಲ್ಪಟ್ಟಿತು; ಆ ಅನುಗ್ರಹವನ್ನು ದೃಢೀಕರಿಸುವದಕ್ಕೆ ನೀವು ದಯಮಾಡಿ ಬಂದಿರಿ; ದಯಾಶಾಲಿಗಳಾದ ನಿಮ್ಮಿಂದ ನನಿಗೆ ಚನ್ನಾಗಿ ಬುದ್ಧಿ ವಿವೇಕ ಶಿಕ್ಷೆಯು ಮಾಡಲ್ಪಟ್ಟಿತು; ನನ್ನ ದೇಹದೊಡನೆ ಸಹಿತವಾದ ಈ ಸಮಸ್ತ ರಾಜ್ಯ ಕೋಶಾದಿ ವಸ್ತುಗಳು ಮಹಾತ್ಮರಾದ ಋಷಿಗಳ ಪ್ರಸಾದರೂಪದಿಂದ ನನಿಗೆ ಕೊಡಲ್ಪಟ್ಟಿದೆ; ನನ್ನ ಸ್ವತ್ತು ಯಾವದೂ ಇಲ್ಲವಾದ್ದರಿಂದ ನಿಮಿಗೆ ಗುರುದಕ್ಷಿಣಾರ್ಥವಾಗಿ ಏನನ್ನು ಕೊಡುವೆನು! ಎಲೈ ಬ್ರಾಹ್ಮಣೋತ್ತಮನಾದ ಸನತ್ಕುಮಾರ ಋಷಿಯೆ, ನನ್ನ ಪ್ರಾಣಗಳು ಸ್ತ್ರೀಯರು ಪುತ್ರರು ಸಾಮಗ್ರಿ ಸಹಿತಗಳಾದ ಗೃಹಗಳು ರಾಜ್ಯವು ಭೂಮಿಯು ಬಲವು ಕೋಶವು ಮೊದಲಾದ ಸಮಸ್ತವೂ ನಿಮಗೆ ಅರ್ಪಿಸಲ್ಪಟ್ಟಿದೆ; ಸೇನಾಧಿಪತ್ಯವು ನಿಗ್ರಹಾನುಗ್ರಹ ಕರ್ತೃತ್ವವು ಸರ್ವಲೋಕಾಧಿಪತ್ಯವು ಈ ಸಮಸ್ತವು ವೇದಶಾಸ್ತ್ರ

ಜ್ಞನಾದ ಬ್ರಾಹ್ಮಣನಿಗೆ ಸಲ್ಲುವದು ; ಈ ಲೋಕದಲ್ಲಿ ಸಮಸ್ತವು ಬ್ರಾಹ್ಮಣನ ಸ್ವತ್ತಾದಕಾರಣ ಬ್ರಾಹ್ಮಣನು ತನ್ನ ಅನ್ನವನ್ನೇ ತಾನು ಭೋಜನಂಗೈಯುತ್ತಾನೆ ; ಆ ಬ್ರಾಹ್ಮಣನ ಅನುಗ್ರಹದಿಂದಲೇ ಕ್ಷತ್ರಿಯಾದಿಗಳು ಭೋಗಗಳನ್ನನುಭವಿಸುತ್ತಾರೆ ; ವೇದಜ್ಞರಾದ ಯಾವ ಮಹರ್ಷಿಗಳಿಂದ ಏಕಾದೃಶವಾದ ಭಗವಂತನ ಸ್ವರೂಪವು ನನಗೆ ನಿರೂಪಿಸಲ್ಪಟ್ಟಿತೋ ಮಹಾಕರುಣಾಶಾಲಿಗಳಾದ ಮಹಾತ್ಮರು ತಮ್ಮಿಂದ ಮಾಡಲ್ಪಟ್ಟ ಶಿಷ್ಯಾನುಗ್ರಹ ವ್ಯಾಪಾರದಿಂದಲೇ ಸಂತೋಷಪಡಲೀ; ಅದರಿಂದ ಮಾಡಲ್ಪಟ್ಟ ಉಪಕಾರಕ್ಕೆ ಪ್ರತ್ಯುಪಕಾರವನ್ನು ಯಾರು ಮಾಡುವದಕ್ಕೆ ಸಮರ್ಥರಾದಾರು ; ಅಥವಾ ಪ್ರತ್ಯುಪಕಾರವನ್ನು ಮಾಡಲಿಚ್ಛೈಸಿದ ಪುರುಷನು ಪರಿಹಾಸಾಸ್ಪದನಾಗುವನು ' ಎಂದು ಈಪ್ರಕಾರವಾಗಿ ಉಪಚಾರೋಕ್ತಿಪೂರ್ವಕವಾಗಿ ಪೃಥುರಾಯನಿಂದ ಪೂಜಿತರಾದ ಆತ್ಮಯೋಗಪತಿಗಳಾದ ಸನಕಾದಿ ಋಷಿಗಳು ಆ ಪೃಥುರಾಯನ ಶೀಲಸ್ವಭಾವವನ್ನು ಪ್ರಶಂಸೆಯುಂಗೈಯುವರಾಗಿ ಸಮಸ್ತರೂ ನೋಡುತ್ತಿರುವಾಗಲೇ ಆಕಾಶಮಾರ್ಗದಲ್ಲಿ ತೆರಳಿದರು ; ಮಹಾತ್ಮರಲ್ಲಿ ಮುಖ್ಯನಾದ ಪೃಥುರಾಯನು ತತ್ವಜ್ಞಾನ ಶಿಕ್ಷೆಯಿಂದುಂಟಾದ ಚಿತ್ತೈಕಾಗ್ರತೆಯಿಂದ ಸ್ವರೂಪಾನುಸಂಧಾನದಲ್ಲಿರುವವನಾಗಿ ತನ್ನನ್ನು ಕೃತಾರ್ಥನನ್ನಾಗಿ ತಿಳಿದು ವಿಹಿತಕಾಲಗಳಲ್ಲಿ ವಿಹಿತದೇಶಗಳಲ್ಲಿ ಯಥೋಚಿತವಾಗಿ ತನ್ನ ಶಕ್ತ್ಯಾನುಸಾರವಾಗಿ ವಿತ್ತಾನುಸಾರವಾಗಿ ಸತ್ಕರ್ಮಗಳನ್ನಾಚರಿಸುತ ಬ್ರಾಹ್ಮಣಾರ್ಪಣವನ್ನು ಮಾಡುತ್ತಿದ್ದನು ; ಪೃಥುರಾಯನು ನಿಸ್ಸಂಗನಾಗಿ ಸ್ಥಿರಚಿತ್ತನಾಗಿ ಜೀವನಿಗೂ ಪ್ರಕೃತಿಗೂ ಅತಿರಿಕ್ತನಾದ ಪರಮಾತ್ಮನನ್ನು ಕರ್ಮಸಾಕ್ಷಿಯನ್ನಾಗಿ ತಿಳಿದು ಫಲವನ್ನು ಬ್ರಹ್ಮನಲ್ಲಿ ಸಮರ್ಪಿಸಿ ಸಾಮ್ರಾಜ್ಯಲಕ್ಷ್ಮಿಯಿಂದ ಯುಕ್ತನಾಗಿ ಗೃಹಾದಿಗಳಲ್ಲಿರುವವನಾದಾಗ್ಯು ಅಹಂಕಾರಗಳನ್ನು ಬಿಟ್ಟವನಾಗಿ ಗೃಹಾದಿಗಳಲ್ಲಿ ಆಸಕ್ತನಾಗದೆ ಸೂರ್ಯನಂತೆ ಸಾಕ್ಷಿರೂಪದಿಂದಿದ್ದನು ; ಈ ಪ್ರಕಾರವಾಗಿ ಜ್ಞಾನನಿಷ್ಠೆಯಿಂದ ಕರ್ಮಗಳನ್ನಾಚರಿಸುತ ಪತ್ನಿಯಾದ ಅರ್ಚಿದೇವಿಯಲ್ಲಿ ತನಿಗೆ ಸಮ್ಮತರಾದ ವಿಜಿತಾಶ್ವನು ಧೂಮ್ರಕೇಶನು ಹರ್ಯಕ್ಷನು ದ್ರವಿಣನು ವೃಕನು ಎಂಬ ಐದುಮಂದಿ ಪುತ್ರರನ್ನು ಪಡೆದನು; ಆ ಬಳಿಕ ಸಮಸ್ತ ಲೋಕಪಾಲಕರ ಪ್ರತ್ಯೇಕ ಪ್ರತ್ಯೇಕವಾದ ಗುಣಸಮೂಹವನ್ನು ತಾನೊಬ್ಬನೇ ಧರಿಸಿದನು ; ಭಗವದ್ರೂಪನಾದ ಆ ರಾಯನು ಸ್ವಸ್ವಕಾಲದಲ್ಲಿ ಜಗತ್ಪರಿಪಾಲನಾರ್ಥವಾಗಿ ಮನೋವಾಕ್ಕಾಯಗಳಿಂದಲೂ ಸಾಮಾನ್ಯಗಳಾದ ಗುಣಗಳಿಂದಲೂ ಪ್ರಜೆಗಳನ್ನು ಸಂತೋಷಪಡಿಸುತ ಸೋಮರಾಜನಂತೆ ರಾಜನೆಂಬ ನಾಮಧೇಯವನ್ನು ಧರಿಸಿದನು ; ಸೂರ್ಯನಂತೆ ಪ್ರತಾಪಶಾಲಿಯಾಗಿ ದ್ರವ್ಯಗಳನ್ನು ಕೊಡುವಾಗ ಕೊಟ್ಟು ಗ್ರಹಿಸುವಾಗ ಗ್ರಹಿಸುತ ಪ್ರಕಾಶಿಸಿದನು ; ತೇಜಸ್ಸಿನಿಂದ ಅಗ್ನಿಯಂತೆ ಸಹಿಸಲಶಕ್ಯನಾಗಿ ಭೂಮಿಯಂತೆ ಕ್ಷಮಾವಂತನಾಗಿ ಸ್ವರ್ಗದಂತೆ ಇಷ್ಟಾರ್ಥಪ್ರದನಾಗಿ ಪರ್ಜನ್ಯನಂತೆ ವರ್ಷಿಸುತ ಲೋಕವನ್ನು ಶೀತಳವನ್ನಾಗಿ ಮಾಡಿ ಸಮುದ್ರನಂತೆ ಗಂಭೀರನಾಗಿ ಸತ್ವದಿಂದ ಮೇರುವಿನಂತೆಯೂ ದುಷ್ಟನಿಗ್ರಹದಲ್ಲಿ ಯಮನಂತೆಯೂ ಆಧಿಪತ್ಯದಲ್ಲಿ ಹಿಮವಂತನಂತೆಯೂ ಕುಬೇರನಂತೆ ಕೋಶಸಂಪನ್ನನಾಗಿ ವರುಣನಂತೆ ಗೂಢನಾದ ಅರ್ಥವುಳ್ಳವನಾಗಿ ಬಲದಿಂದಲೂ ಓಜಸ್ಸಿನಿಂದಲೂ ವಾಯುವಿನಂತೆ ಸರ್ವಾತ್ಮನಾಗಿ ಭಯಂಕರತ್ವದಲ್ಲಿ ಭಗವಂತನಾದ ಪರಮೇಶ್ವರನಂತೆಯೂ ಸೌಂದರ್ಯದಲ್ಲಿ ಮನ್ಮಥನಂತೆಯೂ ಸಿಂಹದಂತೆ ಧೈರ್ಯಶಾಲಿಯಾಗಿ ವಾತ್ಸಲ್ಯದಲ್ಲಿ ಸ್ವಾಯಂಭುವ ಮನುವಿನಂತೆಯೂ ಪ್ರಭುತ್ವದಲ್ಲಿ ಭಗವಂತನಾದ ಬ್ರಹ್ಮನಂತೆಯೂ ಬ್ರಹ್ಮವಾದದಲ್ಲಿ ಬೃಹಸ್ಪತಿಯಂತೆಯೂ ಜಿತೇಂದ್ರಿಯತ್ವದಲ್ಲಿ ಸಾಕ್ಷಾದ್ಧರಿಯಂತೆಯೂ ಗೋವುಗಳಲ್ಲಿ ಗುರುಗಳಲ್ಲಿ ಬ್ರಾಹ್ಮಣರಲ್ಲಿ ಭಗವದ್ಭಕ್ತರಲ್ಲಿಯೂ ಭಕ್ತಿಯಿಂದಿದ್ದನು; ಲಜ್ಜೆಯಿಂದಲೂ ವಿನಯದಿಂದಲೂ ಸಚ್ಛೀಲದಿಂದಲೂ ಶತ್ರುಪರಾಜಯದಲ್ಲಿ ಅಸದೃಶನಾಗಿ ಪರಕಾರ್ಯಸಾಧನದಲ್ಲಿ ಉತ್ಸಾಹವಂತನಾಗಿ ಲೋಕತ್ರಯದಲ್ಲಿ ಜನರಿಂದ ಗಾನಂಗೈಯಲ್ಪಟ್ಟ ಕೀರ್ತಿಯುಳ್ಳವನಾಗಿ ಶ್ರೀರಾಮನಂತೆ ಮಹಾಕೀರ್ತಿಸಂಪನ್ನನಾಗಿ ಮಹಾತ್ಮರ ಶ್ರೋತ್ರಗಳಲ್ಲಿ ಪ್ರಖ್ಯಾತನಾಗಿ ರಾಜ್ಯವನ್ನಾಳಿದನು " ಎಂದು ನುಡಿದನು.

೨೩ನೇ ಅಧ್ಯಾಯ.

ಪೃಥುರಾಯನು ಸಪತ್ನೀಕನಾಗಿ ವೈಕುಂಠವನ್ನೈದಿದ್ದು

"ಎಲೈ ವಿದುರನೇ, ಆ ಬಳಿಕ ಪೃಥುರಾಯನು ಒಂದು ಸಮಯದಲ್ಲಿ ತನ್ನನ್ನು ವೃದ್ಧನನ್ನಾಗಿ ತಿಳಿದು ವಖಾ ಮನಸ್ವಿಯಾವಕಾರಿಣಿ ತನ್ನಿಂದ ಕಲ್ಪಿತಗಳಾದ ಪುರಗ್ರಾಮಾದಿ ಸ್ಥಾನಗಳಲ್ಲಿ ತನ್ನಿಂದಲೇ ಕಲ್ಪಿಸಲ್ಪಟ್ಟ ಜೀವನಪಾನದಿಂದ ಪೋಷಿತರಾದ ಪ್ರಜೆಗಳನ್ನು ವೃದ್ಧಿಪಡಿಸುವನಾಗಿ ಸ್ಥಾವರ ಜಂಗಮಪ್ರಾಣಿಗಳೆಲ್ಲರಿಗೂ ಜೀವನಪ್ರದನಾಗಿ ಸತ್ಪುರುಷರ ಧರ್ಮವನ್ನಾಚರಿಸುತ ಈಶ್ವರಾಜ್ಞೆಯಿಂದ ತಾನು ಯಾವ ಕಾರ್ಯಾರ್ಥವಾಗಿ ಅವತರಿಸಿದನೋ ಆ ಕಾರ್ಯವನ್ನು ಮಾಡಿ ವಿಯೋಗದುಃಖದಿಂದ ರೋದನಗೈಯ್ಯುತಲಿರುವ ತನ್ನ ಪುತ್ರಿಯಾದ ಭೂಮಿಯನ್ನು ಪುತ್ರರ ವಶಮಾಡಿ ಪ್ರಜೆಗಳು ವ್ಯಸನಪಡುತಲಿರಲು ಸಪತ್ನೀಕನಾಗಿ ಅರಣ್ಯವನ್ನು ಕುರಿತು ತೆರಳಿ ಹೋದನು; ಆ ಅರಣ್ಯದಲ್ಲಿಯೂ ಕೂಡ ವಾನಪ್ರಸ್ಥಋಷಿಗಳಿಗೆ ಸಮ್ಮತವಾದ ಉಗ್ರತಪಸ್ಸಿನಲ್ಲಿ ಸ್ಥಿರವಾದ ನಿಯಮವುಳ್ಳವನಾಗಿ ಪೂರ್ವದಲ್ಲಿ ದಿಗ್ವಿಜಯಕಾಲದಲ್ಲಿ ಎಂಥಾ ಪ್ರಯತ್ನವುಳ್ಳವನಾದನೋ ಅಂಥಾ ಮಹಾ ಪ್ರಯತ್ನವುಳ್ಳವನಾಗಿ ಉಗ್ರತಪಸ್ಸನ್ನಾಚರಿಸಿದನು; ಕೆಲವು ದಿವಸಗಳು ಕಂದಮೂಲ ಫಲಾಹಾರನಾಗಿ ಕೆಲವು ದಿವಸಗಳು ತೃಣಪರ್ಣಾಶನನಾಗಿ ಕೆಲವು ಪಕ್ಷಗಳಲ್ಲಿ ಜಲಪಾನವನ್ನು ಮಾಡಿ ಕೆಲವು ದಿವಸಗಳು ವಾಯು ಭಕ್ಷಕನಾಗಿ ಗ್ರೀಷ್ಮಕಾಲದಲ್ಲಿ ಪಂಚಾಗ್ನಿಮಧ್ಯದಲ್ಲಿ ತಪವಂಗೈದವನಾಗಿ ವರ್ಷಾಕಾಲದಲ್ಲಿ ಮಹಾ ಮಳೆಗಳಲ್ಲಿ ನೆನೆಯುತ ಶಿಶಿರಋತುವಿನಲ್ಲಿ ಕಂಠಪರ್ಯಂತವು ಉದಕದಲ್ಲಿ ನಿಂತು ತಪವಂಗೈಯುತ ಭೂಮಿಯಮೇಲೆ ಶಯನಂಗೈದು ಕ್ಷಮಾವಂತನಾಗಿ ಮೌನವುಳ್ಳವನಾಗಿ ಚಿತ್ತನಿಗ್ರಹಶಾಲಿಯಾಗಿ ಊರ್ಧ್ವರೇತಸ್ಕನಾಗಿ ಶ್ವಾಸಧಾರಣೆಯಂಗೈದು ಶ್ರೀಕೃಷ್ಣನನ್ನಾರಾಧಿಸಲಿಚ್ಛೆಯುಳ್ಳವನಾಗಿ ಉತ್ತಮ ತಪಸ್ಸಂಗೈದನು; ಕ್ರಮವಾಗಿ ಆಚರಿಸಲ್ಪಟ್ಟ ಆ ತಪಸ್ಸಿನಿಂದ ನಿರಸ್ತವಾದ ಕರ್ಮವಾಸನೆಗಳುಳ್ಳವನಾಗಿ ನಿರ್ಮಲಚಿತ್ತನಾಗಿ ಪ್ರಾಣಾಯಾಮಗಳಿಂದ ಅರಿಷಡ್ವರ್ಗವನ್ನು ಜಯಿಸಿ ಛಿನ್ನವಾದ ಬಂಧವುಳ್ಳವನಾಗಿ ಭಗವಂತನಾದ ಸನತ್ಕುಮಾರಋಷಿಯು ಹ್ಯಾಗೆ ಉಪದೇಶಂಗೈದನೋ ಅದೇಪ್ರಕಾರವಾಗಿ ಪುರುಷಶ್ರೇಷ್ಠನಾದ ಪೃಥುರಾಯನು ಪರಮಪುರುಷನನ್ನು ಭಜಿಸಿದನು; ಭಗವದ್ಧರ್ಮನಿಷ್ಠನಾಗಿ ಸಾಧುವಾಗಿ ಶ್ರದ್ಧಾಪೂರ್ವಕವಾಗಿ ಭಗವಂತನಾದ ಪರಬ್ರಹ್ಮನಲ್ಲಿ ವಿಷಯಾಂತರ ವಿಮುಖವಾದ ದೃಢಭಕ್ತಿಯುಂಟಾಯಿತು; ಆ ಭಗವಂತನ ಸೇವೆಯಿಂದ ಪರಿಶುದ್ಧವಾದ ಸತ್ವವುಳ್ಳ ಚಿತ್ತವುಳ್ಳವನಾದ ಆ ಪೃಥುರಾಯನಿಗೆ ಭಗವದ್ಧ್ಯಾನಾನುವೃತ್ತಿ ರೂಪವಾದ ಭಕ್ತಿಯಿಂದ ವೈರಾಗ್ಯಯುಕ್ತವಾದ ಜ್ಞಾನವುಂಟಾಯಿತು; ತೀಕ್ಷ್ಣವಾದ ಆ ಜ್ಞಾನದಿಂದ ಸಂಶಯಾಸ್ಪದವಾಗಿ ಸ್ವಕೀಯವಾದ ಅಜ್ಞಾನಗ್ರಂಥಿಯನ್ನೂ ದೇಹಾತ್ಮಬುದ್ಧಿಯನ್ನೂ ಛೇದಿಸಿ ಆತ್ಮಜ್ಞಾನವನ್ನೈದಿದವನಾಗಿ ನಿಸ್ಪೃಹನಾಗಿ ಯಾವ ಜ್ಞಾನದಿಂದ ಸಂಶಯಾಸ್ಪದವಾದ ಅಜ್ಞಾನಗ್ರಂಥಿಯನ್ನು ಛೇದಿಸಿದನೋ ಆ ಜ್ಞಾನವನ್ನು ಬಿಟ್ಟನು; ಪುರುಷನು ಎಷ್ಟುಪರ್ಯಂತವು ಭಗವತ್ಕಥೆಗಳಲ್ಲಿ ಆಸಕ್ತಿಯನ್ನು ಮಾಡುವದಿಲ್ಲವೋ ಅಷ್ಟುಪರ್ಯಂತವು ಸಮಾಧಿಯೋಗಗಳಿಂದ ಪ್ರಮತ್ತನಾಗಿರುವನು; ಭಗವತ್ಕಥಾಶ್ರವಣಾಸಕ್ತಿಯು ಸ್ಥಿರವಾದಮೇಲೆ ಪ್ರಮತ್ತನಾಗುವದಿಲ್ಲ; ಈ ರೀತಿಯಲ್ಲಿ ವೀರಾಗ್ರಗಣ್ಯನಾದ ಪೃಥುರಾಯನು ಜೀವಾತ್ಮನನ್ನು ಪರಮಾತ್ಮನಲ್ಲಿ ಸೇರಿಸಿ ಬ್ರಹ್ಮಸ್ವರೂಪನಾಗಿ ಚರಮಕಾಲದಲ್ಲಿ ತನ್ನ ಶರೀರವನ್ನು ತ್ಯಜಿಸಿದನು; ಕಾಲುಗಳ ಹಿಮ್ಮಡಿಗಳಿಂದ ಮೂಲಾಧಾರಸ್ಥಾನವನ್ನು ಅಮುಕಿಕೊಂಡು ಆ ಮೂಲಾಧಾರದ ಚಕ್ರದದೆಶೆಯಿಂದ ಪ್ರಾಣವಾಯುವನ್ನೆಬ್ಬಿಸಿ ನಾಭೀಚಕ್ರದಲ್ಲಿ ನಿಲ್ಲಿಸಿ ಅಲ್ಲಿಂದ ಮೆಲ್ಲನೆ ಕ್ರಮವಾಗಿ ಹೃದಯಸ್ಥಾನಕ್ಕೆ ಸೇರಿಸಿ ಅಲ್ಲಿಂದ ಉರಸ್ಥಾನಕ್ಕೆ ಸಾಗಿಸಿ ಅಲ್ಲಿಂದ ಕಂಠಸ್ಥಾನಕ್ಕೆ ಸೇರಿಸಿ ಅಲ್ಲಿಂದ ಭ್ರೂಮಧ್ಯಕ್ಕೆ ಹತ್ತಿಸಿದನು; ಅಲ್ಲಿಂದ ಕ್ರಮವಾಗಿ ಮೂರ್ಧಸ್ಥಾನಕ್ಕೆ ಸೇರಿಸಿ ನಿಸ್ಪೃಹನಾಗಿ ವಾಯುವನ್ನು ವಾಯುವಿನಲ್ಲಿ ಸೇರಿಸಿ ಪೃಥಿವಿಯಲ್ಲಿ ಶರೀರವನ್ನು ಸೇರಿಸಿ ತೇಜಸ್ಸಿನಲ್ಲಿ ತೇಜಸ್ಸನ್ನು ಸೇರಿಸಿ ಆಕಾಶದಲ್ಲಿ ಇಂದ್ರಿಯಗಳನ್ನು ಸೇರಿಸಿ ದ್ರವಾಂಶವನ್ನು ಜಲದಲ್ಲಿ ಸೇರಿಸಿ ಅನಂತರದಲ್ಲಿ ಪೃಥ್ವಿಯನ್ನು ಜಲದಲ್ಲಿ ಸೇರಿಸಿ ಜಲವನ್ನು ತೇಜಸ್ಸಿನಲ್ಲಿ ಸೇರಿಸಿ ತೇಜಸ್ಸನ್ನು ವಾಯುವಿನಲ್ಲಿ ಸೇರಿಸಿ ವಾಯುವನ್ನು ಆಕಾಶದಲ್ಲಿ ಸೇರಿಸಿದನು; ಮನಸ್ಸನ್ನು ಇಂದ್ರಿಯ

ಗಳಲ್ಲಿ ಸೇರಿಸಿ ಇಂದ್ರಿಯಗಳನ್ನು ತನ್ಮಾತ್ರೆಗಳಲ್ಲಿ ಸೇರಿಸಿ ಅವುಗಳನ್ನು ಅಹಂತತ್ವದಲ್ಲಿ ಸೇರಿಸಿ ಅಹಂತತ್ವವನ್ನು ಮಹತ್ತತ್ವದಲ್ಲಿ ಸೇರಿಸಿ ಜ್ಞಾನವೈರಾಗ್ಯಬಲದಿಂದ ಸ್ವಸ್ವರೂಪದಲ್ಲಿರುವ ಜಗತ್ಪ್ರಭುವಾದ ಪೃಥುರಾಯನು ಆ ಮಹತ್ತತ್ವವನ್ನು ಮಾಯೋಪಾಧಿಕನಾದ ಜೀವನಲ್ಲಿ ಸೇರಿಸಿ ಪರಮಾತ್ಮಸ್ಥಾನವಾದ ಆ ಜೀವನನ್ನು ಪರಬ್ರಹ್ಮನಲ್ಲಿ ಸೇರಿಸಿದನು! ಎಲೈ ವಿದುರನೇ, ಆ ಪೃಥುರಾಯನ ಪತ್ನಿಯಾದ ಅರ್ಚಿದೇವಿಯು ಪತಿಯ ಸಂಗಡ ವನವನ್ನು ಕುರಿತು ತೆರಳಿದಳು; ಅತಿ ಕೋಮಲಶರೀರವುಳ್ಳ ಆ ಅರ್ಚಿದೇವಿಯು ವನಸಂಚಾರಕ್ಕೆ ಯೋಗ್ಯಳಲ್ಲದವಳಾದಾಗ್ಯೂ ಪಾದಗಳಿಂದಲೇ ನಡದು ಹೋದಳು; ಅತ್ಯಂತವಾಗಿ ಪತಿಗೆ ಅನುಸಾರವಾದ ಭೂಶಯನಾದಿ ವ್ರತನಿಷ್ಠೆಯಿಂದಲೂ ಕಂದಮೂಲಾದಿ ವನ್ಯಾಹಾರದಿಂದಲೂ ಕೃಶಳಾಗಿ ಪತಿಯ ಹಸ್ತಸ್ಪರ್ಶ ಸುಖದಿಂದ ಆಯಾಸವನ್ನು ಗಣನೆಮಾಡದೆ ಸಂತುಷ್ಟಳಾಗಿ ಪೃಥ್ವೀಪತಿಯಾಗಿ ತನಗೆ ಪತಿಯಾದ ಪೃಥುರಾಯನ ನಷ್ಟವಾದ ಚೈತನ್ಯಾದಿಗಳುಳ್ಳ ಪ್ರಾಣರಹಿತವಾದ ಶರೀರವನ್ನು ನೋಡಿ ಸ್ವಲ್ಪ ವಿಲಾಪಂಗೈದು ಮಂದರ ಪರ್ವತದ ತಪ್ಪಲಿನಲ್ಲಿ ಚಿತಿಯನ್ನು ಕಲ್ಪಿಸಿ ಅದರಮೇಲೆ ಪತಿಯ ಶರೀರವನ್ನಿರಿಸಿದಳು! ಅನಂತರದಲ್ಲಿ ಹ್ರಾದಿನೀಯೆಂಬ ನದಿಯ ಜಲದಲ್ಲಿ ಸ್ನಾನಂಗೈದು ಉತ್ಕೃಷ್ಟ ವ್ಯಾಪಾರವುಳ್ಳ ಪತಿಯಾದ ಪೃಥುರಾಯನಿಗೆ ತತ್ಕಾಲೋಚಿತವಾದ ಕೃತ್ಯವನ್ನು ಮಾಡಿ ತಿಲೋದಕವನ್ನು ಕೊಟ್ಟು ಸ್ವರ್ಗದಲ್ಲಿರುವ ದೇವತೆಗಳನ್ನು ನಮಸ್ಕರಿಸಿ ಮೂರಾವರ್ತಿ ಅಗ್ನಿಗೆ ಪ್ರದಕ್ಷಿಣವನ್ನು ಮಾಡಿ ಪತಿಯ ಪಾದಾರವಿಂದವನ್ನೇ ಧ್ಯಾನಿಸುತ ಅಗ್ನಿಯನ್ನು ಪ್ರವೇಶಿಸಿದಳು! ಮಹಾ ವೀರನಾಗಿ ಪತಿಯಾದ ಪೃಥುರಾಯನನ್ನು ಕುರಿತು ಸಹಗಮನವನ್ನು ಮಾಡಿದ ಪತಿವ್ರತೆಯಾದ ಅರ್ಚಿದೇವಿಯನ್ನು ನೋಡಿ ದೇವತೆಗಳೊಡನೆ ದೇವಪತ್ನಿಯರು ಅನೇಕ ಸಹಸ್ರ ಜನರು ವರಪ್ರದರಾಗಿ ಆ ಮಂದರ ಪರ್ವತದ ತಪ್ಪಲಿನಲ್ಲಿ ಪುಷ್ಪವೃಷ್ಟಿಯನ್ನು ವರ್ಷಿಸುತ ದೇವವಾದ್ಯಗಳು ಮೊಳಗುತ್ತಿರಲಾಗಿ 'ಈ ಸ್ತ್ರೀಯು ಧನ್ಯಳಾದವಳು; ರಾಜಾಧಿರಾಜನಾಗಿ ಪತಿಯಾದ ಪೃಥುರಾಯನನ್ನು ಶ್ರೀದೇವಿಯು ಯಜ್ಞಪತಿಯಾದ ಭಗವಂತನನ್ನನುಸರಿಸುವಂತೆ ಸರ್ವಪ್ರಕಾರದಿಂದಲೂ ಭಜಿಸಿದಳು; ಈ ಅರ್ಚಿದೇವಿಯು ಪ್ರಜಾನಾಥನಾದ ಪೃಥುರಾಯನ ಸಂಗಡಲೇ ಭಾವಿಸಲಶಕ್ಯವಾದ ಪಾತಿವ್ರತ್ಯ ತಪಸ್ಸಿನಿಂದ ನಮ್ಮ ಲೋಕವನ್ನೂ ಸಹಾ ಅತಿಕ್ರಮಿಸಿ ಊರ್ಧ್ವಲೋಕವನ್ನೈದುತ್ತಾಳೆ! ಯಾವ ಪುರುಷರು ಭೂಮಿಯಲ್ಲಿ ಅಸ್ಥಿರವಾದ ಆಯುಸ್ಸುಳ್ಳವರಾದಾಗ್ಯೂ ಭಗವತ್ಪದಪ್ರದವಾದ ಪರಮಾತ್ಮಜ್ಞಾನವನ್ನು ಸಾಧಿಸುತ್ತಾರೆಯೋ ಆ ಪುರುಷರಿಗೆ ಇತರವಾದ ಸ್ವರ್ಗಾದಿಫಲವು ದುರ್ಲಭವಾಗುವದಿಲ್ಲ; ಯಾವ ಪುರುಷನು ಮೋಕ್ಷಸಾಧನವಾದ ಮಾನುಷಜನ್ಮವನ್ನೈದಿದಾಗ್ಯೂ ವಿಷಯಾಸಕ್ತನಾಗಿ ಹೋಗುತ್ತಾನೆಯೋ ಆ ಪುರುಷನು ಆತ್ಮದ್ರೋಹಿಯಾಗಿ ಮಹಾಕಷ್ಟಕ್ಕೆ ಶಿಕ್ಕಿ ದೈವದಿಂದ ವಂಚಿತನಾಗುವನು!' ಎಂದು ಸ್ತುತಿಗೈದರು.

"ಎಲೈ ವಿದುರನೇ, ಈ ರೀತಿಯಲ್ಲಿ ಆತ್ಮಜ್ಞರೊಳಗೆ ಶ್ರೇಷ್ಠನಾಗಿ ಭಗವದ್ಭಕ್ತನಾದ ಪೃಥುರಾಯನು ಯಾವ ಲೋಕಕ್ಕೆ ಹೋದನೋ ಅದೇ ಲೋಕವನ್ನು ಕುರಿತು ಪತ್ನಿಯಾದ ಅರ್ಚಿದೇವಿಯು ತೆರಳಿಹೋದಳು! ಭಗವದಂಶಭೂತನಾದ ಪೃಥುರಾಯನು ಮಹಾ ಮಹಿಮೆಯುಳ್ಳವನು; ಉತ್ಕೃಷ್ಟಚರಿತ್ರವುಳ್ಳ ಆ ರಾಯನ ಚರಿತ್ರವು ನಿನಗೋಸ್ಕರ ವರ್ಣಿಸಲ್ಪಟ್ಟಿತು; ಮಹಾ ಪುಣ್ಯಕರವಾದ ಈ ಪೃಥುಚರಿತ್ರೋಪಾಖ್ಯಾನವನ್ನು ಯಾವ ಪುರುಷನು ಶ್ರದ್ಧಾಪೂರ್ವಕವಾಗಿ ಏಕಾಗ್ರಚಿತ್ತನಾಗಿ ಪಠನಂಗೈವನೋ ಶ್ರವಣಂಗೈಸುವನೋ ಆ ಪುರುಷನು ಪೃಥುರಾಯನ ಗತಿಯನ್ನೈದುವನು; ಬ್ರಾಹ್ಮಣನು ಪಠನವನ್ನು ಮಾಡಿದರೆ ಬ್ರಹ್ಮವರ್ಚಸ್ವಿಯಾಗುವನು; ಕ್ಷತ್ರಿಯನು ಭೂಪತಿಯಾಗುವನು; ವೈಶ್ಯನು ಧನವಂತನಾಗುವನು; ಶೂದ್ರನು ಸುಖವನ್ನು ಹೊಂದುವನು; ಸ್ತ್ರೀಯರಾಗಲೀ ಪುರುಷರಾಗಲೀ ಭಕ್ತಿಪೂರ್ವಕವಾಗಿ ಮೂರಾವರ್ತಿ ಈ ಉಪಾಖ್ಯಾನವನ್ನು ಶ್ರವಣಂಗೈದರೆ ಅವರು ಅಪುತ್ರರಾದರೆ ಪುತ್ರವಂತರಾಗುವರು; ನಿರ್ಧನರಾದರೆ ಧನವಂತರಾಗುವರು; ಕೀರ್ತಿ ಹೀನರಾದರೆ ಕೀರ್ತಿವಂತರಾಗುವರು; ಮೂಢರಾದವರು ಪಂಡಿತರಾಗುವರು; ಈ ಉಪಾಖ್ಯಾನವು ಮಂಗಳಪ್ರದವಾದದ್ದು; ಅಶುಭ ಹರವಾದದ್ದು; ಸ್ವರ್ಗಪ್ರದವಾದದ್ದು; ಯಶಸ್ಕರವಾದದ್ದು; ಆಯುಷ್ಕರವಾದದ್ದು; ಧನಪ್ರದವಾದದ್ದು; ಕಲಿದೋಷ ಹರ

ವಾದದ್ದು; ಸಿದ್ಧಿಕಾಮರಾದ ಪುರುಷರಿಗೆ ಧರ್ಮಾರ್ಥ ಕಾಮ ಮೋಕ್ಷಗಳೆಂಬ ಪುರುಷಾರ್ಥ ಸಾಧನವಾದದ್ದು; ಶ್ರದ್ಧಾಪೂರ್ವಕವಾಗಿ ಇದನ್ನು ಶ್ರವಣಂಗೈವವರಿಗೆ ನಾಲ್ಕು ಪುರುಷಾರ್ಥಗಳು ಸಿದ್ಧಿಸುವವು; ಕ್ಷತ್ರಿಯನು ಈ ಉಪಾಖ್ಯಾನವನ್ನು ಶ್ರವಣಮಾಡಿ ಯುದ್ಧಾರ್ಥವಾಗಿ ತೆರಳಹೋದರೆ ಆ ಅರಸಿಗೆ ಸರ್ವ ಭೂಪತಿಗಳು ಕಾಣಿಕೆಗಳನ್ನು ಪೃಥುರಾಯನಿಗೆ ಒಪ್ಪಿಸಿದಂತೆ ಒಪ್ಪಿಸುವರು; ಕಾರ್ಯಾಂತರ ವ್ಯಾಸಂಗವನ್ನು ಬಿಟ್ಟು ಭಗವಂತನಲ್ಲಿ ನಿರ್ಮಲವಾದ ಭಕ್ತಿಯನ್ನು ಮಾಡುವ ಪುರುಷನು ಪೃಥುರಾಯನ ಚರಿತವನ್ನು ಪಠನಂಗೈಯಬೇಕು! ಎಲೈ ವಿದುರನೇ, ಮಹಾಪುರುಷನ ಮಾಹಾತ್ಮ್ಯಸೂಚಕವಾದ ಶ್ರೇಷ್ಠವಾದ ಈ ಉಪಾಖ್ಯಾನದಲ್ಲಿ ಭಕ್ತಿಯುಳ್ಳವನಾಗಿರುವ ಪುರುಷನು ಪೃಥುರಾಯನ ಗತಿಯನ್ನು ಪಡೆಯುವನು; ಮುಕ್ತಸಂಗನಾಗಿ ಸಂಸಾರ ತಾರಕವಾದ ಭಗವತ್ಪಾದಾರವಿಂದದಲ್ಲಿ ಚಿತ್ತವುಳ್ಳವನಾಗಿ ಪ್ರತಿದಿನದಲ್ಲಿಯೂ ಆದರದಿಂದ ಈ ಪೃಥುರಾಯನ ಚರಿತವನ್ನು ಪಠಿಸುತ ಶ್ರವಣಂಗೈಸುವ ಪುರುಷನು ಉತ್ಕೃಷ್ಟಗತಿಯನ್ನೈದುವನು'' ಎಂದು ನುಡಿದನು.

೨೪ನೇ ಅಧ್ಯಾಯ.

ಪ್ರಚೇತಸ್ಕರಿಗೆ ಶ್ರೀರುದ್ರನು ರುದ್ರಗೀತೆಗಳನ್ನು ಉಪದೇಶಂಗೈದದ್ದು.

''ಎಲೈ ವಿದುರನೇ, ಆ ಬಳಿಕ ಮಹಾ ಕೀರ್ತಿಶಾಲಿಯಾದ ವಿಜಿತಾಶ್ವನೆಂಬ ಪೃಥುರಾಯನ ಜ್ಯೇಷ್ಠಪುತ್ರನು ಭೂಪತಿಯಾದನು; ಆ ವಿಜಿತಾಶ್ವನು ಭ್ರಾತೃವತ್ಸಲನಾದ್ದರಿಂದ ಕನಿಷ್ಠ ಭ್ರಾತೃಗಳಾದ ನಾಲ್ವರಿಗೂ ನಾಲ್ಕು ದಿಕ್ಕುಗಳನ್ನು ಕೊಟ್ಟನು; ಹರ್ಯಕ್ಷನೆಂಬ ತಮ್ಮನಿಗೆ ಪೂರ್ವದಿಕ್ಕನ್ನು ಕೊಟ್ಟನು; ಧೂಮ್ರಕೇಶನಿಗೆ ದಕ್ಷಿಣ ದಿಕ್ಕನ್ನು ಕೊಟ್ಟನು; ವೃಕನಿಗೆ ಪಶ್ಚಿಮದಿಕ್ಕನ್ನು ಕೊಟ್ಟನು; ದ್ರವಿಳನು ಎಂಬ ತಮ್ಮನಿಗೆ ಉತ್ತರದಿಕ್ಕನ್ನು ಕೊಟ್ಟನು; ಆ ವಿಜಿತಾಶ್ವನು ಇಂದ್ರನದೆಸೆಯಿಂದ ಅಂತರ್ಧಾನ ವಿದ್ಯೆಯನ್ನು ಪಡದು ಅಂತರ್ಧಾನನೆಂಬ ಹೆಸರನ್ನು ಪಡದು ಶಿಖಂಡಿನಿಯೆಂಬ ತನ್ನ ಪತ್ನಿಯಲ್ಲಿ ಸತ್ಪುರುಷರಿಗೆ ಸಮ್ಮತರಾದ ಪಾವಕನು ಪವಮಾನನು ಶುಚಿಯು ಎಂಬ ಮೂರುಮಂದಿ ಪುತ್ರರನ್ನು ಪಡದನು; ಈ ಮೂರುಮಂದಿಯೂ ಅಗ್ನಿಗಳು; ಇವರು ಪೂರ್ವದಲ್ಲಿ ವಶಿಷ್ಠ ಶಾಪದಿಂದ ಮಾನುಷತ್ವವನ್ನು ಪಡದವರಾಗಿ ಪುನಶ್ಚ ಅಗ್ನಿತ್ವವನ್ನೇ ಪಡದರು; ಅಂತರ್ಧಾನರಾಯನು ನಭಸ್ವತೀಯೆಂಬ ಎರಡನೇ ಪತ್ನಿಯಲ್ಲಿ ಹವಿರ್ಧಾನನೆಂಬ ಪುತ್ರನನ್ನು ಪಡದನು; ಆ ಅಂತರ್ಧಾನನು ತಂದೆಯಾದ ಪೃಥುರಾಯನ ಅಶ್ವಮೇಧಕ್ರತುವಿನಲ್ಲಿ ಅಶ್ವವನ್ನಪಹರಿಸಿ ಇಂದ್ರನನ್ನು ತಿಳಿದಾಗ್ಯು ಇಂದ್ರನನ್ನು ಪ್ರಹರಿಸಲಿಲ್ಲವಾದ್ದರಿಂದ ಪ್ರಸನ್ನನಾದ ಇಂದ್ರನು ಅವನಿಗೆ ಅಂತರ್ಧಾನ ವಿದ್ಯೆಯನ್ನಿತ್ತನು; ಅಂತರ್ಧಾನರಾಯನು ಪ್ರಜಾಪೀಡನದಿಂದ ಕಂದಾಯಗಳನ್ನು ಗ್ರಹಿಸೋಣವು ಅಕಾರ್ಯಗಳನ್ನು ಮಾಡುವವರನ್ನು ಶಿಕ್ಷಿಸೋಣವು ಅಧಿಕಾರಿಗಳನ್ನು ಶಿಕ್ಷಿಸಿ ಅವರಿಂದ ಧನವನ್ನು ಬಲಾತ್ಕಾರದಿಂದ ಗ್ರಹಿಸೋಣವು ಇವು ಮೊದಲಾದ ರಾಜಧರ್ಮಗಳನ್ನು ಪರಪೀಡನರೂಪಗಳಾದ ಹಿಂಸಾಕೃತ್ಯಗಳನ್ನಾಗಿ ತಿಳಿದು ಅಂತರ್ಧಾನಗತನಾಗಿ ದೀರ್ಘಸತ್ರವ್ಯಾಜದಿಂದ ಕ್ಷತ್ರಿಯವೃತ್ತಿಯನ್ನು ತ್ಯಜಿಸಿದನು; ಆತ್ಮಜ್ಞನಾದ ಅಂತರ್ಧಾನರಾಯನು ಪರಮಹಂಸಸ್ವರೂಪನಾಗಿ ಪರಮಪುರುಷನಾದ ಪರಮಾತ್ಮನನ್ನು ಪುಣ್ಯಾಕರವಾದ ಸಮಾಧಿಯೋಗದಿಂದ ಆರಾಧಿಸಿ ಪರಬ್ರಹ್ಮಲೋಕವನ್ನೈದಿದನು; ಹವಿರ್ಧಾನನ ಪತ್ನಿಯಾದ ಹವಿರ್ಧಾನಿಯು ಬರ್ಹಿಷದನು ಗಯನು ಶುಕ್ಲನು ಕೃಷ್ಣನು ಸತ್ಯನು ಜಿತವ್ರತನು ಎಂಬ ಆರುಮಂದಿ ಪುತ್ರರನ್ನು ಪೆತ್ತಳು! ಎಲೈ ವಿದುರನೇ, ಹವಿರ್ಧಾನನ ಪುತ್ರನಾದ ಬರ್ಹಿಷದನೆಂಬ ಪ್ರಜಾನಾಥನು ಕ್ರಿಯಾಕಾಂಡಗಳಲ್ಲಿಯೂ ಯೋಗಗಳಲ್ಲಿಯೂ ಅತಿ ಕುಶಲನಾದನು; ಆ ಬರ್ಹಿಷದರಾಯನು ಅಸಂಖ್ಯಾತಗಳಾದ ಯಜ್ಞಗಳ ಪರಂಪರೆಯನ್ನಾಚರಿಸುವನಾಗಿ ಪ್ರಾಗಗ್ರಗಳಾದ ದರ್ಭೆಗಳನ್ನು ವಿಸ್ತರಣಾರ್ಥವಾಗಿ ಭೂಮಿಯಲ್ಲಿ ಹರಡಲಾಗಿ ಈ ಭೂಮಂಡಲವೆಲ್ಲವೂ ಯಜ್ಞವಾಟವೇ ಆಯಿತು; ಅದರಿಂದ ಆ ಬರ್ಹಿಷದನು ಪ್ರಾಚೀನಬರ್ಹಿ

ಯೆಂಬ ನಾಮಧೇಯವನ್ನು ಪಡೆದನು ; ಸಮುದ್ರನ ಮಗಳಾದ ಶತಧೃತಿಯೆಂಬ ಕನ್ಯೆಯನ್ನು ಬ್ರಹ್ಮನ ಆಜ್ಞೆಯಿಂದ ಪ್ರಾಚೀನಬರ್ಹಿಯು ವಿವಾಹವನ್ನು ಮಾಡಿಕೊಂಡು ಮನೋಹರಗಳಾದ ಸರ್ವಾಂಗಗಳುಳ್ಳವಳಾಗಿ ಭೂಷಣಗಳಿಂದ ಅಲಂಕೃತಳಾಗಿ ಬಾಲೆಯಾಗಿ ವಿವಾಹಮಂಟಪದಲ್ಲಿ ಸಂಚರಿಸುತಲಿರುವ ಆ ಶತಧೃತಿದೇವಿಯನ್ನು ನೋಡಿ ಅಗ್ನಿಯು ಸ್ವಲ್ಪಸ್ವಲ್ಪವಾಗಿ ಬೀಳುತಲಿರುವ ಘೃತಧಾರೆಯಲ್ಲಿ ಹ್ಯಾಗೆ ಅಪೇಕ್ಷೆಯನ್ನು ಮಾಡುವನೋ ಅದೇರೀತಿ ಅಪೇಕ್ಷೆಯನ್ನು ಮಾಡಿದನು ; ಶತಧೃತಿದೇವಿಯು ಪಾದಾಭರಣಗಳ ಧ್ವನಿಯಿಂದಲೇ ದೇವತೆಗಳು ಅಸುರರು ಗಂಧರ್ವರು ಮುನಿಗಳು ಸಿದ್ಧರು ಮನುಷ್ಯರು ಸರ್ಪಗಳು ಮೊದಲಾದವರೆಲ್ಲರನ್ನೂ ಮೋಹಯುಕ್ತರನ್ನಾಗಿ ಮಾಡುವಳು ; ಆ ಪ್ರಾಚೀನಬರ್ಹಿರಾಯನಿಗೆ ಶತಧೃತಿಯಲ್ಲಿ ಹತ್ತುಮಂದಿಪುತ್ರರು ಸಮಾನವಾದ ನಾಮಧೇಯವುಳ್ಳವರಾಗಿ ಹುಟ್ಟಿ ಪ್ರಚೇತಸ್ಸುಗಳೆನಿಸಿಕೊಂಡು ಸಮಾನ ವ್ರತವುಳ್ಳವರಾಗಿ ಧರ್ಮಪಾರಂಗತರಾಗಿ ಪ್ರಜಾಸೃಷ್ಟ್ಯರ್ಥವಾಗಿ ಪಿತೃವಿನಿಂದ ಆಜ್ಞಪ್ತರಾಗಿ ತಪಸ್ಸಿಗೋಸ್ಕರ ಸಮುದ್ರವನ್ನು ಪ್ರವೇಶಿಸಿ ಸಾವಿರ ವರುಷಗಳು ತಪಸ್ಸಿನಿಂದ ಭಗವಂತನನ್ನಾರಾಧಿಸಿದರು , ಮಾರ್ಗದಲ್ಲಿ ಹೋಗುವರಾಗಿ ಪ್ರಸನ್ನನಾಗಿ ಪ್ರತ್ಯಕ್ಷನಾದ ಪರಮೇಶ್ವರನಿಂದ ಮಾಡಲ್ಪಟ್ಟ ಉಪದೇಶಾನುಸಾರವಾಗಿ ಧ್ಯಾನಂಗೈಯುವವರಾಗಿ ಜಪಿಸುವರಾಗಿ ಆರಾಧನಂಗೈಯುವವರಾಗಿ ತಪವಂಗೈದರು '' ಎಂದು ನುಡಿದನು.

ಆ ವಾಕ್ಯವನ್ನು ಕೇಳಿ ವಿದುರನು ''ಎಲೈ ಮೈತ್ರೇಯ ಋಷಿಯೇ, ಪ್ರಚೇತಸ್ಸುಗಳಿಗೆ ಪೂರ್ವದಲ್ಲಿ ಪರಮೇಶ್ವರನ ದರ್ಶನವು ಹ್ಯಾಗೆ ಆಯಿತು ? ಆ ಪರಮೇಶ್ವರನು ಸಂತುಷ್ಟನಾಗಿ ಯಾವ ಅರ್ಥವನ್ನು ಹೇಳಿದನೋ ಅದನ್ನು ನನಿಗೆ ನಿರೂಪಿಸಬೇಕು ? ಎಲೈ ಬ್ರಹ್ಮಋಷಿಯೆ, ಪ್ರಾಣಿಗಳಿಗೆ ಪರಮೇಶ್ವರನ ಸಂದರ್ಶನವು ಅತಿದುರ್ಲಭವಾದದ್ದು ; ಮಹಾ ಮುನಿಗಳೂ ಕೂಡ ಪರಮೇಶ್ವರನನ್ನು ಕಾಣಲೋಸುಗ ವೈರಾಗ್ಯಾದಿಸಾಧನಗಳಿಂದ ಧ್ಯಾನಂಗೈದರೇ ಹೊರ್ತು ಕಾಣಲಿಲ್ಲ ; ಆತ್ಮಾರಾಮನಾದಾಗ್ಯು ಪರಮೇಶ್ವರನು ತನ್ನಿಂದ ಸೃಷ್ಟಿಸಲ್ಪಟ್ಟ ಜಗತ್ತಿನ ಪಾಲನಾರ್ಥವಾಗಿ ಘೋರವಾದ ಸ್ವಶಕ್ತಿಯೊಡನೆ ಸಂಚರಿಸುತ್ತಾನೆ '' ಎಂದು ಪ್ರಶ್ನೆಗೈದನು.

ಆ ವಿದುರನ ವಾಕ್ಯವನ್ನು ಕೇಳಿ ಮೈತ್ರೇಯನು ''ಎಲೈ ವಿದುರನೆ, ಗುರುಗಳ ಆಜ್ಞಾನುವರ್ತಿಗಳಾದ ಪುರುಷರಿಗೆ ಶಿವದರ್ಶನವು ಸುಲಭವಾಗಿ ಆಗುವದು ; ಸಾಧುಗಳಾದ ಆ ಪ್ರಚೇತಸ್ಸುಗಳು ಪಿತೃವಾಕ್ಯವನ್ನು ಶಿರಸ್ಸಿನಿಂದ ಧರಿಸಿದವರಾಗಿ ತಪಸ್ಸಿನಲ್ಲಿ ಅಪೇಕ್ಷೆಯುಳ್ಳವರಾಗಿ ಪಶ್ಚಿಮದಿಕ್ಕಿಗೆ ತೆರಳಿಹೋದರು ; ಅಲ್ಲಿ ಸಮುದ್ರಕ್ಕೆ ಸಮಾನವಾಗಿ ವಿಸ್ತೀರ್ಣವಾದ ಪ್ರಸನ್ನಗಳಾದ ಜಲಜಂತುಗಳುಳ್ಳ ಮಹಾತ್ಮರ ಮನಸ್ಸಿನಂತೆ ಸ್ವಚ್ಛವಾದ ಒಂದು ಸರೋವರವನ್ನು ಕಂಡರು ; ನೀಲಗಳಾಗಿಯೂ ರಕ್ತಗಳಾಗಿಯೂ ಇರುವ ನೈದಲೆಗಳಿಂದಲೂ ಪದ್ಮಗಳಿಂದಲೂ ಸೌಗಂಧಿಕಗಳಿಂದಲೂ ಯುಕ್ತವಾಗಿ ಹಂಸಗಳಿಂದಲೂ ಸಾರಸಪಕ್ಷಿಗಳಿಂದಲೂ ಚಕ್ರವಾಕಗಳಿಂದಲೂ ಕಾರಂಡಗಳಿಂದಲೂ ಧ್ವನಿಗೈಯುತ್ತಿರುವ ಮದಯುಕ್ತಗಳಾದ ಭ್ರಮರಗಳ ಸುಸ್ವರಗಳಿಂದ ಯುಕ್ತಗಳಾದ ಲತೆಗಳು ವೃಕ್ಷಗಳು ಸಹಾ ಉಳ್ಳದ್ದಾಗಿ ಕಮಲಗಳ ಪರಾಗಗಳನ್ನು ದಿಕ್ಕುಗಳಲ್ಲಿ ವ್ಯಾಪಿಸುವಂತೆ ಮಾಡುತ್ತಿರುವ ಮಂದಮಾರುತವುಳ್ಳ ಆ ಸ್ಥಳದಲ್ಲಿ ದಿವ್ಯಸ್ವರಗಳಿಂದ ರಮ್ಯವಾಗಿ ಮೃದಂಗ ತಾಳಾದಿಗಳ ನಾದದಿಂದ ಮಿಶ್ರವಾದ ಗಂಧರ್ವ ಗಾನವನ್ನು ಕೇಳಿ ರಾಜಪುತ್ರರಾದ ಪ್ರಚೇತಸ್ಕರು ಆಶ್ಚರ್ಯವನ್ನೈದಿ ಆ ಸರೋವರದ ದೆಶೆಯಿಂದ ಹೊರಟುಬರುತ್ತಿರುವ ಸಪರಿವಾರನಾದ ಪರಮೇಶ್ವರನನ್ನು ಕಂಡರು ! ಆ ಪರಮೇಶ್ವರನು ಗಂಧರ್ವರಿಂದ ಗಾನಂಗೈಯಲ್ಪಡುವನಾಗಿ ಸಮಸ್ತ ದೇವತಾಶ್ರೇಷ್ಠನಾದನು ; ಶುದ್ಧಸ್ಫಟಿಕ ವರ್ಣಕ್ಕೆ ಸಮಾನವಾದ ಕಾಂತಿಯುಳ್ಳವನಾಗಿ ನೀಲವಾದ ಕಂಠವುಳ್ಳವನಾಗಿ ತ್ರಿಲೋಚನನಾಗಿ ಪ್ರಸಾದಾಭಿಮುಖನಾಗಿ ಪ್ರತ್ಯಕ್ಷನಾದ ಪರಮೇಶ್ವರನನ್ನು ನೋಡಿ ಬಹುಸಂತೋಷವುಳ್ಳವರಾಗಿ ಪ್ರಚೇತಸ್ಸುಗಳು ನಮಸ್ಕರಿಸಿದರು ! ಧರ್ಮವತ್ಸಲನಾಗಿ ಭಗವಂತನಾದ ಪರಮೇಶ್ವರನು ಶರಣಾಗತರಾಗಿ ಧರ್ಮಜ್ಞರಾಗಿ ಶೀಲಸಂಪನ್ನರಾಗಿ ಪ್ರೀತರಾದ ಆ ಪ್ರಚೇತಸ್ಸುಗಳನ್ನು ಕುರಿತು ಸಂತುಷ್ಟನಾಗಿ 'ಎಲೈ ರಾಜಪುತ್ರರುಗಳಿರಾ, ನೀವು ಬರ್ಹಿಷದನ ಪುತ್ರರು ; ನಿಮ್ಮ ಮನೋಗತಾರ್ಥವನ್ನು ನಾನು ಬಲ್ಲೆನು ; ನಿಮ್ಮಲ್ಲಿ ಅನುಗ್ರಹಾ

ರ್ಥವಾಗಿ ನಾನು ನಿಮಗೆ ಪ್ರತ್ಯಕ್ಷನಾದೆನು ; ಯಾವ ಪುರುಷನು ಗುಣತ್ರಯಾತ್ಮಕವಾದ ಮಾಯೆಯ ದೆಸೆಯಿಂದಲೂ ಜೀವಸಂಜ್ಞೆಯುಳ್ಳ ಪುರುಷನ ದೆಸೆಯಿಂದಲೂ ಪರನಾಗಿ ಭಗವಂತನಾದ ಶ್ರೀವಾಸುದೇವನನ್ನು ಶರಣಹೊಂದುತ್ತಾನೆಯೋ ಆ ಪುರುಷನು ನಿನಗೆ ಪ್ರಿಯನು; ಶತಜನ್ಮಗಳಲ್ಲಿ ಸ್ವಧರ್ಮನಿಷ್ಠನಾದ ಪುರುಷನು ಬ್ರಹ್ಮತ್ವವನ್ನು ಪಡೆಯುವನು ; ಅನಂತರದಲ್ಲಿ ಪುಣ್ಯಾತಿಶಯದಿಂದ ನನ್ನ ಸ್ವರೂಪವನ್ನೈದುವನು ; ಮತ್ತು ಪುಣ್ಯಾಧಿಕ್ಯದಿಂದ ದೇಹಾಂತರದಲ್ಲಿ ಪ್ರಪಂಚಾತೀತವಾದ ವೈಷ್ಣವಪದವನ್ನು ಪಡೆಯುವನು ; ನಾನು ಮಿಗಿಲಾದ ಇಂದ್ರಾದಿ ದೇವತೆಗಳು ನಮ್ಮ ನಮ್ಮ ಅಧಿಕಾರಗಳು ಹೋದಮೇಲೆ ಆ ವೈಷ್ಣವಪದಕ್ಕೆ ಹೋಗುತ್ತೇವೆ ; ಆದ್ದರಿಂದ ಭಗವದ್ಭಕ್ತರಾದ ನೀವು ನನಗೆ ಅತಿಪ್ರಿಯರು ; ನನಗೆ ಭಗವಂತನು ಹ್ಯಾಗೆ ಪ್ರಿಯನೋ ಹಾಗೆ ಭಾಗವತರಾದವರಿಗೆ ನನಗಿಂತಲೂ ಅನ್ಯನೂ ಪ್ರೀತಿಪಾತ್ರನೂ ಇಲ್ಲ ; ಅದುಕಾರಣ ಮಂಗಳಕರವಾಗಿ ಮೋಕ್ಷಪ್ರದವಾಗಿರುವ ಈ ಸ್ತೋತ್ರವನ್ನು ಸಂಪೂರ್ಣವಾಗಿ ಜಪಿಸತಕ್ಕದ್ದು ; ಇದನ್ನು ನಿಮಗೆ ಹೇಳುತ್ತೇನೆಂದು ದಯಾಶಾಲಿಯಾದ ಭಗವಂತನಾದ ಪರಮೇಶ್ವರನು ಪೂರ್ವದಲ್ಲಿ ಸೃಷ್ಟ್ಯಾದಿಯಲ್ಲಿ ಬ್ರಹ್ಮದೇವನಿಂದ ಪ್ರಜೇಶರಿಗೆ ಉಪದೇಶಿಸಲ್ಪಟ್ಟ ಇಷ್ಟಾರ್ಥಪ್ರದವಾದ ಆ ಸ್ತೋತ್ರವನ್ನು ಪ್ರಚೇತಸ್ಸುಗಳಿಗೆ ದಯೆಯಿಂದ ಉಪದೇಶಿಸಿದನು ! ಎಲೈ ಪರಮಾತ್ಮನೇ, ನಿನ್ನ ಉತ್ಕರ್ಷವು ಆತ್ಮಜ್ಞರಾದ ಮಹಾಪುರುಷರಿಗೆ ಕ್ಷೇಮಪ್ರದವಾದದ್ದು ; ಆದ್ದರಿಂದ ನನಗೂ ಕ್ಷೇಮವುಂಟಾಗಲಿ ; ನೀನು ಸ್ವಾನಂದರೂಪನಾಗಿದ್ದೀಯೆ ; ಸರ್ವಾತ್ಮನಾದ ನಿನಗೆ ನಮಸ್ಕಾರವು ! ಲೋಕಾತ್ಮಕವಾದ ಪದ್ಮವೇ ನಾಭಿಯಲ್ಲಿ ಉಳ್ಳವನಾಗಿ ಪಂಚಭೂತಗಳಿಗೂ ತನ್ಮಾತ್ರೆಗಳಿಗೂ ಇಂದ್ರಿಯಗಳಿಗೂ ನಿಯಾಮಕನಾಗಿ ವಾಸುದೇವರೂಪದಿಂದ ಚಿತ್ತಾಧಿಷ್ಠಾತೃವಾಗಿ ನಿರ್ವಿಕಾರನಾಗಿ ಕೂಟಸ್ಥನಾಗಿ ಸ್ವಪ್ರಕಾಶರೂಪನಾಗಿರುವ ನಿನಗೆ ನಮಸ್ಕಾರವು ! ಸಂಕರ್ಷಣರೂಪದಿಂದ ಅಹಂಕಾರಾಧಿಷ್ಠಾತೃವಾಗಿ ಅವ್ಯಕ್ತನಾಗಿ ಅಂತರಹಿತನಾಗಿ ಕಾಲಾಂತರದಲ್ಲಿ ಲೋಕಗಳನ್ನು ದಹಿಸುವವನಾಗಿ ಜಗತ್ಪ್ರಕಾಶಕನಾಗಿ ಬುದ್ಧ್ಯಧಿಷ್ಠಾತೃವಾಗಿ ಅಂತರಾತ್ಮನಾಗಿ ಪ್ರದ್ಯುಮ್ನರೂಪನಾಗಿರುವ ನಿನಗೆ ನಮಸ್ಕಾರವು ! ಅನಿರುದ್ಧರೂಪನಾಗಿ ಇಂದ್ರಿಯ ಮನಸ್ಸುಗಳಿಗೆ ಪ್ರೇರಕನಾಗಿ ಪರಮಹಂಸರೂಪನಾಗಿ ಪರಿಪೂರ್ಣನಾಗಿ ಕ್ಷಯವೃದ್ಧಿರಹಿತನಾಗಿರುವ ನಿನಗೆ ನಮಸ್ಕಾರವು ! ಸ್ವರ್ಗ ಮೋಕ್ಷಗಳಿಗೆ ದ್ವಾರರೂಪನಾಗಿ ಪರಿಶುದ್ಧನಾಗಿ ಯೋಗಿಹೃದಯದಲ್ಲಿ ವಾಸಂಗೈವವನಾಗಿ ಹಿರಣ್ಯರೇತಸ್ಕನಾಗಿ ದರ್ಶಪೂರ್ಣಮಾಸಾದಿ ಕ್ರತುಪ್ರವರ್ತಕನಾಗಿ ಯಜ್ಞರೂಪನಾಗಿರುವ ನಿನಗೆ ನಮಸ್ಕಾರವು ! ದೇವತೆಗಳಿಗೂ ಪಿತೃಗಳಿಗೂ ಅನಂತರೂಪನಾಗಿ ವೇದಪತಿಯಾಗಿ ಯಜ್ಞಫಲರೂಪನಾಗಿ ಸರ್ವರಸಾತ್ಮಕನಾಗಿ ಸರ್ವಪ್ರಾಣಿಗಳಿಗೂ ತೃಪ್ತಿಕರನಾದ ನಿನಗೆ ನಮಸ್ಕಾರವು ! ಪೃಥ್ವೀರೂಪನಾಗಿ ಸರ್ವಪ್ರಾಣಿಗಳ ಆತ್ಮಗಳ ದೇಹರೂಪನಾಗಿ ವಿರಾಟ್ಸ್ವರೂಪನಾಗಿ ಲೋಕತ್ರಯಪಾಲಕನಾಗಿ ಓಜಸ್ಸು ಬಲವು ಸಹ ಉಳ್ಳ ನಿನಗೆ ನಮಸ್ಕಾರವು ! ಸರ್ವಾರ್ಥಗಳನ್ನು ಜ್ಞಾಪಿಸುವ ಆಕಾಶರೂಪನಾಗಿ ಬಾಹ್ಯಾಭ್ಯಂತರ ವ್ಯಾಪ್ತನಾಗಿ ಪುಣ್ಯಾತ್ಮವಾದ ಸ್ವರ್ಗಲೋಕ ಸ್ವರೂಪನಾಗಿ ಅಧಿಕವಾದ ತೇಜಸ್ಸುಳ್ಳ ನಿನಗೆ ನಮಸ್ಕಾರವು ! ಕರ್ಮಗಳಲ್ಲಿ ಪ್ರವೃತ್ತನೂ ನಿವೃತ್ತನೂ ಆಗಿ ಪಿತೃ ದೇವಲೋಕ ಪ್ರಾಪ್ತಿಸಾಧನವಾದ ಕರ್ಮರೂಪನಾಗಿ ಅಧರ್ಮಸ್ವರೂಪವಾದ ಮೃತ್ಯುವಿಗೆ ನಿಯಾಮಕನಾಗಿ ದುಃಖಪ್ರದನಾದ ನಿನಗೆ ನಮಸ್ಕಾರವು ! ಸರ್ವಕರ್ಮಫಲಪ್ರದನಾಗಿ ಸರ್ವಜ್ಞನಾಗಿ ಕಾರಣಸ್ವರೂಪನಾಗಿ ಮಹಾಧರ್ಮಸ್ವರೂಪನಾಗಿ ಅಪ್ರತಿಹತಜ್ಞಾನವುಳ್ಳ ಶ್ರೀಕೃಷ್ಣನೇ ನಿನಗೆ ನಮಸ್ಕಾರವು ! ಪುರಾಣಪುರುಷನಾಗಿ ಸಾಂಖ್ಯ ಯೋಗೇಶ್ವರನಾಗಿ ಕರ್ತೃಕರ್ಮಕರಣಶಕ್ತಿತ್ರಯದಿಂದ ಯುಕ್ತವಾದ ಅಹಂಕಾರಕ್ಕೆ ಅಧಿಷ್ಠಾತೃವಾಗಿ ಶ್ರೀರುದ್ರರೂಪನಾದ ನಿನಗೆ ನಮಸ್ಕಾರವು ! ಜ್ಞಾನಕ್ರಿಯಾರೂಪನಾಗಿ ವಾಗ್ವ್ಯುತಿಯುಳ್ಳ ಬ್ರಹ್ಮನಾದ ನಿನಗೆ ನಮಸ್ಕಾರವು ! ಎಲೈ ಪರಮಾತ್ಮನೇ, ನೋಡಲಿಚ್ಛೆಯುಳ್ಳ ನಮಗೆ ಭಾಗವತರಿಂದ ಪೂಜಿತವಾದ ನಿನ್ನ ದರ್ಶನವನ್ನು ಕೊಡುವನಾಗು ; ಸರ್ವೇಂದ್ರಿಯ ಪ್ರೀತಿಕರವಾಗಿ ಭಕ್ತರಿಗೆ ಪ್ರೀತಿಕರವಾದ ನಿನ್ನ ರೂಪವನ್ನು ತೋರಿಸು ; ನಿನ್ನ ರೂಪವು ವರ್ಷಾಕಾಲದ ನೀಲಮೇಘದಂತೆ ಕಾಂತಿಯುಳ್ಳದ್ದು ; ಸಮಸ್ತಸೌಂದರ್ಯನಿಧಿಯಾದದ್ದು ; ಮನೋಹರಗಳಾಗಿ ದೀರ್ಘಗಳಾದ ಚತುರ್ಭುಜಗಳುಳ್ಳದ್ದಾಗಿ ಸುಂದರವಾದ ಮುಖವುಳ್ಳದ್ದಾಗಿರುವದು ; ಪದ್ಮಗ

ಳಂತೆ ನೇತ್ರಗಳುಳ್ಳದ್ದಾಗಿ ಸುಂದರಗಳಾದ ಹುಬ್ಬುಗಳುಳ್ಳದ್ದಾಗಿ ಸುನಾಶಿಕವುಳ್ಳದ್ದಾಗಿ ರಮ್ಯವಾದ ದಂತಪಙ್ಕ್ತಿಯು
ಳ್ಳದ್ದಾಗಿ ಮನೋಹರಗಳಾದ ಕಪೋಲಗಳುಳ್ಳ ಮುಖಯುಕ್ತವಾಗಿ ಕರ್ಣಾಭರಣ ವಿಶಿಷ್ಟವಾಗಿ ಪ್ರೀತಿಯಿಂದ ವಿಕ-
ಸಿತಗಳಾದ ನೇತ್ರಗಳುಳ್ಳದ್ದಾಗಿ ಕೇಶಗಳಿಂದ ಅಲಂಕೃತವಾಗಿ ಪದ್ಮಕೇಸರಗಳಂತೆ ಹೊಂಬಣ್ಣವಾದ ಪೀತಾಂಬರ
ಯುಕ್ತವಾಗಿ ಹೊಳೆಯುತ್ತಿರುವ ಕರ್ಣಕುಂಡಲಗಳುಳ್ಳದ್ದಾಗಿ ಕಿರೀಟದಿಂದಲೂ ಕಡಗಗಳಿಂದಲೂ ಹಾರಗಳಿಂದಲೂ
ಪಾದಾಭರಣಗಳಿಂದಲೂ ಒಡ್ಯಾಣದಿಂದಲೂ ಶೋಭಿಸುವದಾಗಿ ಶಂಖ ಚಕ್ರ ಗದಾ ಪದ್ಮಗಳಿಂದಲೂ ವನಮಾಲೆ
ಯಿಂದಲೂ ಕೌಸ್ತುಭಮಣಿಯಿಂದಲೂ ದಿವ್ಯಕಾಂತಿ ಯುಕ್ತವಾಗಿರುವದು ; ಸಿಂಹದಂತೆ ಭುಜಶಿರಸ್ಸುಳ್ಳದ್ದಾಗಿ
ಮನೋಹರವಾದ ಕೌಸ್ತುಭದಿಂದ ರಂಜಿಪ ಕಂಠವುಳ್ಳದ್ದಾಗಿ ಇಂದ್ರನೀಲದಲ್ಲಿ ಸುವರ್ಣರೇಖೆಯಂತೆ ವಿಶಾಲ
ವಕ್ಷಸ್ಥಳದಲ್ಲಿ ನಿತ್ಯದಲ್ಲಿಯೂ ಎಡಬಿಡದಿರುವ ಮಹಾಲಕ್ಷ್ಮಿಯಿಂದ ಪ್ರಕಾಶಿಸುವದಾಗಿ ಶ್ವಾಸೋಚ್ಛ್ವಾಸಗಳಿಂದ
ಚಲಿಸುವ ತ್ರಿವಳಿಗಳಿಂದ ಮನೋಹರವಾದ ಅಶ್ವತ್ಥಪತ್ರಾಕೃತಿಯುಳ್ಳ ಉದರಪ್ರದೇಶವುಳ್ಳದ್ದಾಗಿ ಸಮುದ್ರದ ಸುಳಿ
ಯಂತೆ ಗಂಭೀರವಾದ ನಾಭಿಮಾರ್ಗದಿಂದ ಸಮಸ್ತ ಜಗತ್ತನ್ನು ಪುನಶ್ಚ ಪ್ರವೇಶಿಸುವಂತೆ ಮಾಡುತ್ತದೆಂಬಹಾಗಿರುವ
ದಾಗಿ ಶ್ಯಾಮವರ್ಣವಾದ ಕಟಿಪ್ರದೇಶದಲ್ಲಿ ಶೋಭಿಸುವ ಪೀತಾಂಬರದಮೇಲೆ ಕಟ್ಟಲ್ಪಟ್ಟ ಸುವರ್ಣಮಯವಾದ
ಒಡ್ಯಾಣದಿಂದ ಪ್ರಕಾಶಿಸುವದಾಗಿ ಸಮಗಳಾದ ತೊಡೆಗಳು ಮೊಳಕಾಲುಗಳು ಜಂಘೆಗಳು ಶರತ್ಕಾಲ ಪದ್ಮದಳದಂತೆ
ಕಾಂತಿಯುಳ್ಳ ನಖಕಾಂತಿಯಿಂದ ಅಜ್ಞಾನರೂಪವಾದ ಪಾಪವನ್ನು ಪರಿಹರಿಸುವ ಪಾದಗಳುಳ್ಳದ್ದಾಗಿ ಭಕ್ತಭಯಾ
ಪಹಾರಕವಾಗಿ ಸುಂದರವಾಗಿರುವದು! ಎಲೈ ಜಗದ್ಗುರುವೇ, ಅಜ್ಞಾನಿಗಳಿಗೆ ಜ್ಞಾನಪ್ರದನಾದ ಗುರುವಾದ ನೀನು
ಏಕಾವೃಶವಾದ ನಿನ್ನ ರೂಪವನ್ನು ನಮಗೆ ರಕ್ಷಕವನ್ನಾಗಿ ತೋರಿಸು ; ಚಿತ್ತಶುದ್ಧಿಯನ್ನಪೇಕ್ಷಿಸುವ ಏಕಾದೃಶ
ವಾದ ನಿನ್ನ ರೂಪವು ಧ್ಯಾನಂಗೈಯುವದಕ್ಕೆ ಯೋಗ್ಯವಾದದ್ದು ; ಸ್ವಧರ್ಮಾಚರಣವನ್ನು ಮಾಡುವ ಪುರುಷರಿಗೆ
ಈ ಭಕ್ತಿಯೋಗವು ಅಭಯಪ್ರದವಾದದ್ದು ! ಎಲೈ ಪರಮೇಶ್ವರನೇ, ನೀನು ಸರ್ವಪ್ರಾಣಿಗಳಿಗೂ ದುರ್ಲಭನಾ
ದವನು ; ಭಕ್ತಿಯುಳ್ಳ ಪುರುಷನಿಗೆ ಲಭ್ಯನು ; ಸ್ವರ್ಗಾಧಿಪತಿಗಳಿಗೂ ಅಪೇಕ್ಷಿತನಾದವನು ; ಏಕಾಂತಭಕ್ತಿಜ್ಞಾನ
ವುಳ್ಳವರಿಗೆ ಪರಮಗತಿಯಾದವನು ; ಸತ್ಪುರುಷರಿಗೂ ಆರಾಧಿಸಲಶಕ್ಯನಾದ ನಿನ್ನನ್ನು ಏಕಾಂತಭಕ್ತಿಯಿಂದ ಆರಾ
ಧಿಸುವ ಯಾವ ಪುರುಷನಾದಾಗ್ಯೂ ನಿನ್ನ ಪಾದಮೂಲವನ್ನು ಬಿಟ್ಟು ಇತರವಾದ ಸ್ವರ್ಗಾದಿ ತುಚ್ಛಫಲವನ್ನಪೇ
ಕ್ಷಿಸ್ಯಾನೆ; ಪ್ರಭಾವೋತ್ಸಾಹಗಳಿಂದ ಭಯಂಕರವಾದ ಹುಬ್ಬುಗಂಟಿನಿಂದ ಲೋಕಗಳನ್ನು ಸಂಹರಿಸುವ ಯಮ
ನೂ ಕೂಡ ನಿನ್ನ ಪಾದವನ್ನು ಶರಣುಹೊಂದಿದ ಪುರುಷನನ್ನು ಕಂಡರೆ ಭಯಪಡುವನು; ಸ್ವರ್ಗವು ಮೋಕ್ಷವು
ಇವೆರಡೂ ಭಗವಂತನಾದ ನಿನ್ನ ಭಕ್ತರ ಸಮಾಗಮಕ್ಕೆ ಅರ್ಧಕ್ಷಣವೂ ಸಮಾನವಾಗಲಾರದೆಂಬಲ್ಲಿ ರಾಜ್ಯಾಧಿಪತ್ಯ
ಮೊದಲಾದ ತುಚ್ಛಫಲಗಳು ಸರ್ವಥಾ ಸಮಾನಗಳಾಗಲಾರವು! ಎಲೈ ಭಗವಂತನೆ, ಪಾಪಹರಗಳಾದ ಪಾದಗಳುಳ್ಳ
ನಿನ್ನ ಕೀರ್ತಿಯೆಂಬ ತೀರ್ಥದಲ್ಲಿಯೂ ನಿನ್ನ ಪಾದೋದಕವಾದ ಗಂಗಾತೀರ್ಥದಲ್ಲಿಯೂ ಸಹಾ ಕ್ರಮವಾಗಿ ಚಿತ್ತ
ವನ್ನು ಶರೀರವನ್ನು ಸಹಾ ಸ್ನಾನಂಗೈಸಿ ನಿಷ್ಕಲ್ಮಷರಾಗಿ ಪ್ರಾಣಿದಯಾಪರರಾಗಿ ಸಾತ್ವಿಕ ಸ್ವಭಾವಶಾಲಿಗಳಾದ
ಮಹಾಪುರುಷರ ಸಂಗವು ನಮಗೆ ಉಂಟಾಗಲಿ ; ಇದೇ ನಮಗೆ ಅನುಗ್ರಹವು; ಯಾವ ಪುರುಷನು ಭಗವದ್ಭಕ್ತ
ರಲ್ಲಿ ಉಂಟಾದ ಭಕ್ತಿಯಿಂದ ಅನುಗ್ರಹಿಸಲ್ಪಟ್ಟ ಪರಿಶುದ್ಧವಾದ ಚಿತ್ತವುಳ್ಳವನಾಗಿ ವಿಷಯಭೋಗಗಳನ್ನಪೇಕ್ಷಿ
ಸದೆ ಅಜ್ಞಾನತಮಸ್ಸನ್ನು ಪ್ರವೇಶಿಸದೆ ಶೀಘ್ರವಾಗಿ ನಿನ್ನ ಸ್ವರೂಪವನ್ನು ಕಾಣುವನೋ ಅಂಥಾ ಭಾಗವತರ
ಸಹವಾಸವು ನಮಗಿರಲಿ; ಈ ಸಮಸ್ತ ಜಗತ್ತು ಯಾವ ನಿನ್ನಲ್ಲಿ ತೋರುವದೋ ಯಾವ ನಿನ್ನ ಸ್ವರೂಪ
ವು ಸರ್ವಪ್ರಪಂಚದಲ್ಲಿಯೂ ಪ್ರಕಾಶಿಸುತ್ತದೆಯೋ ಆಕಾಶದಂತೆ ವಿಸ್ತೃತವಾಗಿರುವ ಪರಂಜ್ಯೋತಿಯಾದ ಆ
ಸ್ವರೂಪವೇ ಪರಬ್ರಹ್ಮವೆನಿಸುವದು ; ಯಾವ ಪರಮಾತ್ಮನು ನಾನಾರೂಪವಾದ ಮಾಯೆಯಿಂದ ಈ ದೃಶ್ಯಪ್ರ
ಪಂಚವನ್ನು ಸೃಷ್ಟಿಸಿ ತಾನು ವಿಕ್ರಿಯಾರಹಿತನಾಗಿ ಪಾಲನಂಗೈಯುತ ಸಂಹರಿಸುತ್ತಾನೆಯೋ ಯಾವ ನಿನ್ನಲ್ಲಿ
ಅಸ್ವತಂತ್ರಗಳಾಗಿರುವ ಆ ಮಾಯೆಯಿಂದ ಭೇದಬುದ್ಧಿಯುಂಟಾಗುವದೋ ಸ್ವತಂತ್ರನಾದ ಅಂಥಾ ಭಗವಂ
ತನಾದ ನಿನ್ನನ್ನು ಭೇದರಹಿತನನ್ನಾಗಿ ತಿಳಿಯುತ್ತೇನೆ! ಎಲೈ ಭಗವಂತನೆ, ಯಾವ ನಿನ್ನನ್ನು ವೇದಗಳಲ್ಲಿಯೂ

'ಆಗಮಗಳಲ್ಲಿಯೂ ಪ್ರಸಿದ್ಧನಾಗಿ ಭೂತೇಂದ್ರಿಯಾಂತಃಕರಣಗಳಿಂದ ಆರಾಧಿಸುತ್ತಾರೆಯೋ ಅವರೇ ಪ್ರಾಜ್ಞರು! ಎಲೈ ಭಗವಂತನೆ, ಲೀನವಾದ ಮಾಯಾಶಕ್ತಿಯುಳ್ಳ ನೀನೊಬ್ಬನೇ ಪುರಾಣನಾದ ಆದಿಪುರುಷನು ; ಅನಂತರದಲ್ಲಿ ಗುಣತ್ರಯ ಕ್ಷೋಭೆಯುಳ್ಳ ಆ ಮಾಯೆಯಿಂದ ಮಹತ್ತತ್ವವು ಅಹಂಕಾರವು ಆಕಾಶವು ವಾಯುವು ತೇಜಸ್ಸು ಜಲವು ಪೃಥಿವಿಯು ದೇವ ಋಷಿಗಳು ಪ್ರಾಣಿಸಮೂಹಗಳು ಈ ರೂಪದಿಂದ ನೀನೇ ತೋರುತ್ತೀಯೆ ; ಜರಾಯುಜಾಂಡಜ ಸ್ವೇದಜೋದ್ಭಿಜ್ಜಗಳೆಂಬ ಚತುರ್ವಿಧವುಳ್ಳದ್ದಾಗಿ ನಿನ್ನ ಶಕ್ತಿಯಿಂದಲೇ ಸೃಷ್ಟಿಸಲ್ಪಟ್ಟ ಶರೀರ ಸಮೂಹದಲ್ಲಿ ಸ್ವಾಂಶದಿಂದ ಪ್ರವೇಶಿಸಿ ಜೇನುಹುಳುಗಳು ಮಕರಂದವನ್ನು ಭುಂಜಿಸುವ ರೀತಿಯಲ್ಲಿ ಇಂದ್ರಿಯಗಳಿಂದ ವಿಷಯಗಳನ್ನನುಭವಿಸುತ ಜೀವರೂಪನಾಗುತ್ತೀಯೆ ; ನೀನು ಮೇಘಸಮೂಹಗಳನ್ನು ಪ್ರಚಂಡವಾಯುವು ಓಡಿಸಿಕೊಂಡು ಹೋಗುವ ರೀತಿಯಲ್ಲಿ ಅದೃಶ್ಯನಾಗಿ ಪ್ರಚಂಡವಾದ ಕಾಲವೇಗದಿಂದ ಸರ್ವಭೂತಗಳನ್ನು ಓಡಿಸಿಕೊಂಡು ಹೋಗುತ್ತೀಯೆ ; ಅಧಿಕವಾದ ಮನೋರಥ ಪರಂಪರೆಯಿಂದ ಈ ಕೆಲಸವನ್ನು ಹೀಗೆ ಮಾಡಬೇಕೆಂಬ ಚಿಂತೆಯಿಂದ ಪ್ರಮತ್ತನಾಗಿ ವಿಷಯಭೋಗ ಭ್ರಾಂತನಾಗಿರುವ ಪುರುಷನನ್ನು ನೀನು ಅಪ್ರಮತ್ತನಾಗಿ ಸರ್ಪವು ಕ್ಷುತ್ತಿನಿಂದ ತುಟಿಗಳನ್ನು ನಾಲಿಗೆಗಳಿಂದ ಸವರುತ ಇಲಿಯನ್ನು ಹ್ಯಾಗೆ ಗ್ರಹಿಸುವದೋ ಹಾಗೆ ಆಕರ್ಷಿಸುತ್ತೀಯೆ ; ಪ್ರಾಜ್ಞನಾದ ಪುರುಷನು ಯಾವನಾದರೂ ನಿನ್ನ ಪಾದಾಬ್ಜ ಭಜನೆಯನ್ನು ಬಿಟ್ಟು ಭಗವದ್ಭಕ್ತಿರಹಿತನಾಗಿ ದೇಹವನ್ನು ವ್ಯರ್ಥಮಾಡಿಕೊಂಡಾನೆ; ನಿನ್ನ ಪಾದಾಬ್ಜವನ್ನು ನಮ್ಮ ಗುರುವಾದ ಬ್ರಹ್ಮನೂ ಕೂಡ, ಶಂಕಾರಹಿತನಾಗಿ ದೃಢಭಕ್ತಿಯಿಂದ ಪೂಜಿಸಿದನೆಂದು ಹದಿನಾಲ್ಕು ಮನುಗಳೂ ನಿನ್ನ ಪಾದಪದ್ಮವನ್ನು ಭಜಿಸಿದರು! ಎಲೈ ಭಗವಂತನೇ, ಪ್ರಾಜ್ಞರಾದ ಯೋಗಿಗಳಿಗೆ ಪರಮಾತ್ಮನಾದ ನೀನು ನಮಗೆ ಭಯರಹಿತವಾದ ಪರಮಗತಿಯಾಗು ; ಈ ಸಮಸ್ತ ಪ್ರಪಂಚವು ರುದ್ರಭಯದಿಂದ ಗ್ರಸ್ತವಾದದ್ದು ; ಅದುಕಾರಣ ನೀನೇ ನಮಗೆ ಗತಿಯಾದವನು' ಎಂದು ಸ್ತೋತ್ರವನ್ನು ಮಾಡಿದರು.

ಅನಂತರದಲ್ಲಿ ಪರಮೇಶ್ವರನು ಪ್ರಚೇತಸ್ಸುಗಳನ್ನು ಕುರಿತು "ಎಲೈ ಪ್ರಚೇತಸ್ಸುಗಳಿರಾ, ನಿಮಗೆ ಕ್ಷೇಮವಾಗಲಿ ; ವಿಶ್ವಾಸವುಳ್ಳವರಾಗಿ ಸ್ವಧರ್ಮವನ್ನಾಚರಿಸುತ ಭಗವಂತನಲ್ಲಿ ಚಿತ್ತವನ್ನು ನಿಲ್ಲಿಸಿ ಈ ಸ್ತೋತ್ರವನ್ನು ಜಪಿಸುವರಾಗಿ ; ಸರ್ವಭೂತಗಳಲ್ಲಿರುವ ಪರಮಾತ್ಮನಾಗಿ ಭಗವಂತನಾದ ಆ ಹರಿಯನ್ನೇ ಚಿತ್ತದಲ್ಲಿರಿಸಿ ಪೂಜಿಸಿ ಸ್ತುತಿಸಿ ಧ್ಯಾನಂಗೈಯ್ಯುವರಾಗಿ! ಎಲೈ ಪ್ರಚೇತಸ್ಸುಗಳಿರಾ, ಮುನಿವ್ರತಧರರಾಗಿ ಏಕಾಗ್ರಚಿತ್ತರಾಗಿ ಆದರಪೂರ್ವಕವಾಗಿ ಯೋಗಾದೇಶವೆಂಬ ನಾಮಧೇಯವುಳ್ಳ ಈ ಸ್ತೋತ್ರವನ್ನು ಧಾರಣೆಯನ್ನುಮಾಡಿ ಜಪಿಸುತ ಭಗವಂತನಾದ ಬ್ರಹ್ಮದೇವನು ಪೂರ್ವದಲ್ಲಿ ಲೋಕಸೃಷ್ಟಿಯಲ್ಲಿ ಉದ್ಯುಕ್ತನಾಗಿ ಲೋಕಸೃಷ್ಟ್ಯರ್ಥವಾಗಿ ಉದ್ಯುಕ್ತರಾದ ಭೃಗ್ವಾದಿಗಳಾದ ನಮಗೆ ಈ ಸ್ತೋತ್ರವನ್ನು ಹೇಳಿದನು; ಆ ಬಳಿಕ ಪ್ರಜೇಶ್ವರರಾದ ನಾವು ಬ್ರಹ್ಮದೇವನಿಂದ ಪ್ರಜಾಸೃಷ್ಟಿಯಲ್ಲಿ ಬೋಧಿತರಾಗಿ ಈ ಸ್ತೋತ್ರದಿಂದ ಪಾಪರಹಿತರಾಗಿ ನಾನಾರೂಪಗಳಾದ ಪ್ರಜೆಗಳನ್ನು ಸೃಷ್ಟಿಸಿದೆವು ; ಅದುಕಾರಣ ಪುರುಷನು ಏಕಾಗ್ರಚಿತ್ತನಾಗಿ ವಾಸುದೇವ ಪರಾಯಣನಾಗಿ ನಿತ್ಯದಲ್ಲಿಯೂ ಈ ಸ್ತೋತ್ರವನ್ನು ಜಪಿಸುವನಾದರೆ ಯಶಸ್ಸನ್ನು ಪಡೆಯುವನು ; ಸಮಸ್ತ ಶ್ರೇಯಸ್ಸುಗಳಲ್ಲಿಯೂ ಜ್ಞಾನವೇ ಸರ್ವೋತ್ತಮವಾದ ಶ್ರೇಯಸ್ಸು ; ಆದಕಾರಣ ಜ್ಞಾನವೆಂಬ ತೆಪ್ಪದಿಂದ ಸಂಸಾರ ಸಮುದ್ರವನ್ನು ದಾಟುವನು ; ನನ್ನಿಂದ ಗಾನಂಗೈಯಲ್ಪಟ್ಟ ಭಗವಂತನ ಸ್ತೋತ್ರವನ್ನು ಯಾವ ಪುರುಷನು ಶ್ರದ್ಧಾಯುಕ್ತನಾಗಿ ಪಾರಾಯಣವನ್ನು ಮಾಡುತ ಆರಾಧಿಸಲಶಕ್ಯನಾದ ಶ್ರೀಹರಿಯನ್ನಾರಾಧಿಸುವನೋ ಆ ಪುರುಷನು ಪ್ರೀತನಾಗಿ ಶ್ರೇಯಸ್ಸುಗಳಿಗೆ ಕಾರಣನಾದ ಭಗವಂತನಡೆಯಿಂದ ಬೇಕಾದ ಅರ್ಥವನ್ನೈದುವನು ; ಯಾವ ಪುರುಷನು ಪ್ರಾತಃಕಾಲದಲ್ಲಿ ಎದ್ದು ಅಂಜಲಿಬಂಧಂಗೈದು ಶ್ರದ್ಧಾವಂತನಾಗಿ ಈ ಸ್ತೋತ್ರವನ್ನು ಗಾನಂಗೈಯುತ್ತಾನೆಯೋ ಆ ಪುರುಷನು ಸಂಸಾರಬಂಧದಿಂದ ಮುಕ್ತನಾಗುವನು! ಎಲೈ ರಾಜಪುತ್ರರಾದ ಪ್ರಚೇತಸ್ಸುಗಳಿರಾ, ನನ್ನಿಂದ ಗಾನಂಗೈಯಲ್ಪಟ್ಟ ಪರಮಪುರುಷನಾದ ಪರಮಾತ್ಮನ ಸ್ತೋತ್ರವನ್ನು ಜಪಿಸುತ ಏಕಾಗ್ರಚಿತ್ತರಾಗಿ ಮಹತ್ತಾದ ತಪಸ್ಸನ್ನಾಚರಿಸಿದರೆ ನಿಮ್ಮ ಇಷ್ಟಾರ್ಥವು ಸಿದ್ಧಿಸುತ್ತದೆ" ಎಂದು ಶ್ರೀ ಪರಮೇಶ್ವರನು ಪ್ರಚೇತಸ್ಸುಗಳನ್ನು ಕುರಿತು ನುಡಿದನು.

೨೫ ನೇ ಅಧ್ಯಾಯ.

ಪುರಂಜನೋಪಾಖ್ಯಾನ.

ಆ ಬಳಿಕ ಮೈತ್ರೇಯನು ವಿದುರನನ್ನು ಕುರಿತು “ಎಲೈ ವಿದುರನೆ, ಭಗವಂತನಾದ ಪರಮೇಶ್ವರನು ಪ್ರಚೇತಸ್ಸುಗಳಿಗೆ ಈ ಅರ್ಥವನ್ನು ಉಪದೇಶಂಗೈದು ಅವರಿಂದ ಪೂಜಿತನಾಗಿ ಆ ಪ್ರಚೇತಸ್ಸುಗಳು ನೋಡುತ್ತಿರುವಾಗಲೇ ಅಂತರ್ಧಾನಂಗೈದನು; ಅನಂತರದಲ್ಲಿ ಆ ಪ್ರಚೇತಸ್ಸುಗಳು ರುದ್ರಗೀತವಾದ ಭಗವಂತನ ಸ್ತೋತ್ರವನ್ನು ಜಪಿಸುತ ಹತ್ತು ಸಹಸ್ರ ವರ್ಷಗಳು ಜಲದಲ್ಲಿ ತಪಸ್ಸನ್ನು ಮಾಡುತ್ತಿರಲಾಗಿ ಅಧ್ಯಾತ್ಮತತ್ವಜ್ಞನಾಗಿ ದಯಾಳುವಾದ ನಾರದಋಷಿಯು ಕರ್ಮಮಾರ್ಗಾಸಕ್ತನಾದ ಪ್ರಾಚೀನಬರ್ಹಿರಾಯನಿಗೆ ತತ್ವವನ್ನು ಬೋಧಿಸಿ ಆ ರಾಯನನ್ನು ಕುರಿತು ‘ಎಲೈ ಅರಸೆ, ಈ ಕರ್ಮಗಳಿಂದ ನೀನು ಯಾವ ಶ್ರೇಯಸ್ಸನ್ನಪೇಕ್ಷಿಸುತ್ತೀಯೆ; ದುಃಖನಾಶವು ಸುಖಪ್ರಾಪ್ತಿಯು ಇವೆರಡೂ ಶ್ರೇಯಸ್ಸುಗಳೆನಿಸುವವು; ಈ ಕರ್ಮಗಳಿಂದ ಅವೆರಡೂ ಸಿದ್ಧಿಸುವದಿಲ್ಲ’ ಎಂದು ನುಡಿದನು.

ಆ ವಾಕ್ಯವನ್ನು ಕೇಳಿ ಪ್ರಾಚೀನಬರ್ಹಿರಾಯನು “ಎಲೈ ಮಹಾ ಭಾಗವತನಾದ ನಾರದಋಷಿಯೆ, ಕೇವಲ ಕರ್ಮಾಸಕ್ತಿ ಬುದ್ಧಿಯುಳ್ಳ ನಾನು ಏನನ್ನೂ ಅರಿಯೆನು; ಯಾವ ಜ್ಞಾನದಿಂದ ಸಂಸಾರಬಂಧ ಮುಕ್ತನಾಗುವೆನೋ ನಿರ್ಮಲವಾದ ಅಂಥಾ ಜ್ಞಾನವನ್ನು ನನಿಗೆ ಹೇಳುವನಾಗು; ಕಪಟಧರ್ಮಗಳುಳ್ಳ ಗೃಹಗಳಲ್ಲಿ ಪತ್ನೀ ಪುತ್ರ ಧನಾದಿಗಳಲ್ಲಿ ಪುರುಷಾರ್ಥ ಬುದ್ಧಿಯಿಂದ ಮೋಹಿತನಾಗಿ ಸಂಸಾರ ಮಾರ್ಗಗಳಲ್ಲಿ ಸುತ್ತುತ ಮೂಢನಾಗಿ ಪರಮಪುರುಷಾರ್ಥವಾದ ಮೋಕ್ಷವನ್ನರಿಯದೆ ಪುರುಷನು ಶ್ರಮಪಡುವನು’ ಎಂದು ನುಡಿದನು.

“ಆ ರಾಜವಾಕ್ಯವನ್ನು ಕೇಳಿ ನಾರದ ಋಷಿಯು ಕರ್ಮಗಳಲ್ಲಿ ವೈರಾಗ್ಯವನ್ನು ಹುಟ್ಟಿಸುವದಕ್ಕೋಸ್ಕರ ಬ್ರಹ್ಮವಿದ್ಯೆಯನ್ನು ಪದೇಶಿಸುವದಕ್ಕೆ ತನ್ನ ಯೋಗಶಕ್ತಿಯಿಂದ ಯಜ್ಞಪಶುಗಳನ್ನು ತೋರಿಸಿ ಅರಸನನ್ನು ಕುರಿತು ‘ಎಲೈ ಪ್ರಜಾನಾಥನಾದ ಅರಸೆ, ನಿರ್ದಯನಾದ ನಿನ್ನಿಂದ ಯಜ್ಞಗಳಲ್ಲಿ ಪಾಪಸ್ವೀಕಾರಾರ್ಥವಾಗಿ ಸಂಹರಿಸಲ್ಪಟ್ಟ ಅನೇಕ ಸಹಸ್ರ ಸಂಖ್ಯಾತಗಳಾದ ಪಶುಗಳನ್ನು ನೋಡು; ಈ ಪಶುಗಳೆಲ್ಲವು ನಿನ್ನಿಂದ ಮಾಡಲ್ಪಟ್ಟ ಹಿಂಸೆಯನ್ನು ಸ್ಮರಿಸುತ ಮಹಾಕೋಪವುಳ್ಳವಾಗಿ ಉಕ್ಕಿನಂತೆ ಕಠಿನಗಳಾದ ಶೃಂಗಗಳಿಂದ ಮೃತನಾಗಿ ಯಮಲೋಕಕ್ಕೆ ತೆರಳಹೋಗುತಲಿರುವ ನಿನ್ನನ್ನು ತಿವಿಯಲೋಸುಗ ಕಾದುಕೊಂಡಿವೆ; ಈ ಅರ್ಥದಲ್ಲಿ ಜೀವನಿಗೆ ವಿಷಯಾಸಕ್ತಿಯಿಂದ ಸಂಸಾರವುಂಟಾಗಿರುವದು; ಈಶ್ವರಾನುಗ್ರಹದಿಂದ ಆ ಸಂಸಾರಬಂಧಕ್ಕೆ ನಿವೃತ್ತಿಯುಂಟಾಗುವದು; ಈ ಅರ್ಥವನ್ನು ವಿಪರೀತವಾಗಿ ತಿಳಿಯುವ ಪುರುಷನಿಗೆ ತತ್ವಾರ್ಥವು ಪ್ರತ್ಯಕ್ಷವಾಗಿ ಬೋಧಿಸಲಶಕ್ಯವಾದದ್ದು’ ಎಂದು ನುಡಿದು ನಾರದಋಷಿಯು ಆ ರಾಯನನ್ನು ಕುರಿತು ‘ಎಲೈ ಪ್ರಾಚೀನಬರ್ಹಿರಾಯನೆ, ಈ ಅರ್ಥದಲ್ಲಿ ಪುರಂಜನೋಪಾಖ್ಯಾನರೂಪವಾದ ಪುರಾತನವಾದ ಒಂದು ಇತಿಹಾಸವನ್ನು ನಿನಿಗೆ ಹೇಳುತ್ತೇನೆ ಕೇಳು; ಮಹಾಕೀರ್ತಿಶಾಲಿಯಾದ ಪುರಂಜನನೆಂಬ ಹೆಸರುಳ್ಳ ಒಬ್ಬ ಅರಸು ಇದ್ದನು; ಆತನಿಗೆ ಯಾರಿಂದಲೂ ತಿಳಿಯಲ್ಪಡದಿರುವ ನಾಮಧೇಯವೂ ವ್ಯಾಪಾರವೂ ಉಳ್ಳ ಒಬ್ಬ ಸ್ನೇಹಿತನಿದ್ದನು; ಇದರ ತಾತ್ಪರ್ಯವೇನೆಂದರೆ: ಸ್ವಕರ್ಮಗಳಿಂದ ಶರೀರವನ್ನು ನಿರ್ಮಿಸುವನಾದಕಾರಣ ಜೀವನು ಪುರಂಜನನೆಂದು ಹೇಳಲ್ಪಡುವನು; ಯಾರಿಂದಲೂ ತಿಳಿಯಲಶಕ್ಯನಾದ ನಾಮಧೇಯವೂ ವ್ಯಾಪಾರವೂ ಉಳ್ಳ ಒಬ್ಬ ಮಿತ್ರನು ಯಾರೆಂದರೆ: ಅವನೇ ಪರಮೇಶ್ವರನು; ಆ ಪುರಂಜನನು ತನಗೆ ಇರುವದಕ್ಕೆ ಒಂದು ಸ್ಥಾನವನ್ನು ಹುಡುಕುತ ಭೂಮಿಯನ್ನು ಸುತ್ತಿದನು; ಎಲ್ಲಿ ಹುಡಿಕಿದಾಗ್ಯೂ ತನಗೆ ಯೋಗ್ಯವಾದ ಸ್ಥಾನವನ್ನು ಪಡೆಯದೆ ವ್ಯಸನಯುಕ್ತನಾದನು; ಅಂದರೆ: ಆ ಜೀವನು ತನಿಗೆ ಸಕಲ ಭೋಗಗಳಿಗೂ ಅನುಕೂಲವಾದ ಶರೀರವನ್ನು ಪಡೆಯುವದಕ್ಕೋಸ್ಕರ ಬ್ರಹ್ಮಾಂಡವನ್ನೆಲ್ಲ

ಆ ಪುರಂಜನನು ಭೂಮಿಯಲ್ಲಿ ಎಷ್ಟು ಪುರಗಳಿದ್ದವೋ ಅವೆಲ್ಲವನ್ನು ತನಗೆ ಉಪಭೋಗಕ್ಕೆ ಅನುಕೂಲಗಳಲ್ಲವೆಂದು ಒಂದನ್ನೂ ಸಮ್ಮತಿಸಲಿಲ್ಲ; ಅಂದರೆ: ಕಾಮಭೋಗಗಳನ್ನಪೇಕ್ಷಿಸುವ ಆ ಜೀವನು ಆಯಾ ಭೋಗಾನುಭವ ಸಿದ್ಧಿಗೆ ಗೋದೇಹ ಅಶ್ವದೇಹ ಮೊದಲಾಗುಳ್ಳ ಸಮಸ್ತ ದೇಹಗಳೂ ಅನುಕೂಲಗಳಾಗುವದಿಲ್ಲವೆಂದು ಯಾವ ದೇಹಗಳನ್ನೂ ಸಮ್ಮತಿಸಲಿಲ್ಲವೆಂಬ ತಾತ್ಪರ್ಯವು; ಹೀಗೆ ಹುಡುಕಿಕೊಂಡು ಹೋಗುವಾಗ ಹಿಮವತ್ಪರ್ವತದ ದಕ್ಷಿಣದಿಕ್ಕಿನಲ್ಲಿರುವ ತಪ್ಪಲುಗಳಲ್ಲಿ ಒಂಭತ್ತು ಬಾಗಿಲುಗಳಿಂದ ಯುಕ್ತವಾಗಿ ಲಕ್ಷಣಯುಕ್ತವಾಗಿರುವ ಒಂದು ಪುರವನ್ನು ಕಂಡನು; ಅಂದರೆ: ಹಿಮವತ್ಪರ್ವತದ ದಕ್ಷಿಣಭಾಗದಲ್ಲಿ ಕರ್ಮಕ್ಷೇತ್ರದಲ್ಲಿ ಭಾರತವರ್ಷದಲ್ಲಿ ಲಕ್ಷಣಯುಕ್ತವಾದ ಅಂಧತ್ವ ಪಂಗುತ್ವಾದಿ ದೋಷರಹಿತವಾಗಿ ನವದ್ವಾರಯುಕ್ತವಾದ ಮನುಷ್ಯಶರೀರವನ್ನು ಆ ಜೀವನು ಕಂಡನೆಂಬ ತಾತ್ಪರ್ಯವು; ಆ ಪುರವೆಂಥಾದ್ದೆಂದರೆ: ಪ್ರಾಕಾರಗಳಿಂದಲೂ ಉದ್ಯಾನಗಳಿಂದಲೂ ಮಾಳಿಗೆಗಳಿಂದಲೂ ಅಗಳತೆಗಳಿಂದಲೂ ಗವಾಕ್ಷಗಳಿಂದಲೂ ತೋರಣಗಳಿಂದಲೂ ಶೋಭಿತವಾಗಿ ಸುವರ್ಣ ಕಲಶಗಳಿಂದಲೂ ಬೆಳ್ಳೀಕಲಶಗಳಿಂದಲೂ ಕಬ್ಬಿಣದ ಕಲಶಗಳಿಂದಲೂ ಯುಕ್ತಗಳಾದ ಉಪ್ಪರಿಗೆಗಳಿಂದ ಯುಕ್ತವಾಗಿರುವದು; ಇಂದ್ರನೀಲಮಣಿಗಳಿಂದಲೂ ಸ್ಫಟಿಕಗಳಿಂದಲೂ ವೈಡೂರ್ಯಗಳಿಂದಲೂ ಮುತ್ತುಗಳಿಂದಲೂ ಮರಕತಗಳಿಂದಲೂ ಪದ್ಮರಾಗಗಳಿಂದಲೂ ನಿರ್ಮಿತಗಳಾದ ಉಪ್ಪರಿಗೆಗಳಿಂದ ಯುಕ್ತವಾದ ಕಾಂತಿಯಿಂದ ಭೋಗವತಿಯಂತೆ ಪ್ರಕಾಶಿಸುವದು; ಹಜಾರಗಳಿಂದಲೂ ಅಂಗಳಗಳಿಂದಲೂ ರಾಜಬೀದಿಗಳಿಂದಲೂ ಗೃಹೋಪವನಗಳಿಂದಲೂ ಅಂಗಡಿಗಳಿಂದಲೂ ಧರ್ಮಶಾಲೆಗಳಿಂದಲೂ ಹವಳಗಳ ಜಗುಲಿಗಳಿಂದಲೂ ಧ್ವಜಪತಾಕಗಳಿಂದಲೂ ಅಲಂಕೃತವಾಗಿರುವದು; ಆ ಪುರದ ಬಾಹ್ಯೋಪವನವು ದಿವ್ಯಗಳಾದ ವೃಕ್ಷಗಳಿಂದಲೂ ಲತೆಗಳಿಂದಲೂ ಸರೋವರಗಳಿಂದಲೂ ಧ್ವನಿಗೈಯುತಲಿರುವ ಪಕ್ಷಿಗಳು ಭ್ರಮರಗಳು ಮೊದಲಾದವುಗಳಿಂದ ಯುಕ್ತವಾಗಿ ಶೀತಳಗಳಾದ ಗಿರಿನದಿಗಳ ಬಿಂದುಗಳುಳ್ಳ ವಸಂತವಾಯುವಿನಿಂದ ಕಂಪಿಸಲ್ಪಟ್ಟ ಚಿಗುರುಗಳೂ ಕೊಂಬೆಗಳೂ ಉಳ್ಳ ವೃಕ್ಷಗಳಿಂದ ಶೋಭಿತವಾಗಿ ಕಮಲಲತೆಗಳಿಂದ ರಮ್ಯವಾಗಿ ಹಿಂಸಾಬುದ್ಧಿರಹಿತಗಳಾದ ನಾನಾರೂಪುಳ್ಳ ಮೃಗಗಳಿಂದ ಯುಕ್ತವಾಗಿ ಕೋಕಿಲ ಧ್ವನಿಗಳಿಂದ ವಿರಹಿಗಳನ್ನು ಕರೆಯುವಂತಿತ್ತು; ಅಲ್ಲಿ ದೈವಗತಿಯಿಂದ ಬಂದಿರುವ ಒಬ್ಬ ಉತ್ತಮಸ್ತ್ರೀಯನ್ನು ಕಂಡನು; ಅಂದರೆ: ಜೀವನು ಆ ಮಾನುಷದೇಹದಲ್ಲಿ ವಿವೇಕಯುಕ್ತವಾದ ಬುದ್ಧಿಯನ್ನು ಕಂಡನೆಂಬ ತಾತ್ಪರ್ಯವು; ಆ ಸ್ತ್ರೀಯು ನೂರುನೂರು ಜನಕ್ಕೆ ಗೊತ್ತುಗಾರರಾದ ಹತ್ತುಮಂದಿ ಭೃತ್ಯರಿಂದ ಯುಕ್ತಳಾಗಿ ಐದು ಮುಖಗಳುಳ್ಳ ಸರ್ಪದಿಂತಿರುವ ದ್ವಾರಪಾಲಕರಿಂದ ಯುಕ್ತಳಾಗಿ ಪತಿಯನ್ನು ಹುಡುಕುತಲಿರುವವಳಾಗಿ ದೃಢಾಂಗಿಯಾಗಿ ಕಾಮರೂಪಿಣಿಯಾಗಿ ಸುಂದರವಾದ ನಾಶಿಕವು ಮನೋಹರವಾದ ಮುಖವು ರಮ್ಯವಾದ ದಂತಪಙ್ತಿಗಳೂ ಉಳ್ಳವಳಾಗಿ ಬಾಲೆಯಾಗಿ ಸುಂದರಕಪೋಲಗಳು ಸಮಪ್ರಮಾಣಗಳಾದ ಶ್ರೋತ್ರಗಳಲ್ಲಿ ಅಲಂಕರಿಸಲ್ಪಟ್ಟ ಕುಂಡಲಗಳಿಂದ ಯುಕ್ತಳಾಗಿ ಹೊಂಬಣ್ಣವಾದ ವಸ್ತ್ರಗ್ರಂಥಿವುಳ್ಳವಳಾಗಿ ಯೌವನಯುಕ್ತಳಾಗಿ ಸುವರ್ಣದ ಒಡ್ಯಾಣವುಳ್ಳವಳಾಗಿ ಆಭರಣಯುಕ್ತಳಾಗಿ ಚಲಿಸುತಲಿರುವ ಪಾದಗಳಿಂದ ದೇವತಾಸ್ತ್ರೀಯಂತೆ ಸಂಚರಿಸುತ ಸಮಗಳಾಗಿ ಬಟುಗಳಾಗಿ ಯೌವನವ್ಯಂಜಕಗಳಾಗಿ ಕಿಕ್ಕಿರಿಸುತಲಿರುವ ಸ್ತನಗಳನ್ನು ಶರಗಿನಿಂದ ಬಾರಿಬಾರಿಗೂ ಆಚ್ಛಾದಿಸುತ ಲಜ್ಜೆಯಿಂದ ಗಜಗಮನವುಳ್ಳವಳಾಗಿ ಮುಗುಳುನಗೆಯಿಂದ ಮನೋಹರವಾದ ಮುಖವುಳ್ಳವಳಾಗಿದ್ದಳು; ಆಕೆಯನ್ನು ನೋಡಿ ಪುರಂಜನನು ಮೃದುವಾಗಿ ಮಾತನಾಡಿದನು; ಅಂದರೆ: ಅನೇಕ ಶತಸಂಖ್ಯಾತಗಳಾದ ವೃತ್ತಿಜ್ಞಾನಗಳಿಗೆ ಅಧಿಪತಿಗಳಾದ ಜ್ಞಾನೇಂದ್ರಿಯಗಳೈದು ಕರ್ಮೇಂದ್ರಿಯಗಳೈದು ಈ ಹತ್ತು ಇಂದ್ರಿಯಗಳಿಂದ ಯುಕ್ತವಾಗಿ ಹೃದಯಾದಿ ಪಂಚಸ್ಥಾನಗಳಲ್ಲಿ ಸ್ಥಿತಿಯುಳ್ಳ ದ್ವಾರಪಾಲಕರೂಪವಾದ ಪ್ರಾಣಗಳಿಂದ ಯುಕ್ತವಾದ ಆ ಬುದ್ಧಿಗೂ ಜೀವನಿಗೂ ಮಾಯಾಕಲ್ಪಿತವಾದ ಸಂಬಂಧವುಂಟಾಯಿತು ಎಂಬ ತಾತ್ಪರ್ಯವು; ಪ್ರೇಮೆಯಿಂದ ಚಲಿಸುವ ಹುಬ್ಬುಗಳುಳ್ಳ ಸಾನುರಾಗಕಟಾಕ್ಷಪ್ರಸಾರದಿಂದ ನೋಡಲ್ಪಟ್ಟವನಾಗಿ ಪುರಂಜನನು ಆ ಸ್ತ್ರೀಯನ್ನು ಕುರಿತು 'ಎಲೈ ಕಮಲನೇತ್ರೆಯೆ, ನೀನು ಯಾರು? ಯಾವನ ಸಂಬಂಧಿಯು? ಎಲ್ಲಿಂದ ಬಂದಿದ್ದೀಯೆ? ಈ ಪುರದ ಸಮೀಪದಲ್ಲಿರುವ ಈ ಉದ್ಯಾನವನ

ದಲ್ಲಿ ಏನು ಮಾಡಬೇಕೆಂದು ಯೋಚಿಸುತ್ತೀಯೆ? ಈ ಹನ್ನೊಂದು ಜನ ಮಹಾಭೃತ್ಯರು ಯಾರು? ಪತಿಯಾದ ಧರ್ಮನನ್ನು ಹುಡುಕಿಕೊಂಡು ಬಂದಿರುವ ಹ್ರೀದೇವಿಯೋ? ಅಥವಾ ಪರಮೇಶ್ವರನನ್ನು ಹುಡುಕಿಕೊಂಡು ಬಂದಿರುವ ಪಾರ್ವತೀದೇವಿಯೊ? ಬ್ರಹ್ಮನನ್ನರಸಿಕೊಂಡು ಬಂದ ಸರಸ್ವತೀದೇವಿಯೋ? ವಿಷ್ಣುವನ್ನು ಹುಡುಕಿಕೊಂಡು ಬಂದ ಲಕ್ಷ್ಮೀದೇವಿಯೋ? ನೀನು ಲಕ್ಷ್ಮಿಯೇ ಆದರೆ ಪದ್ಮಕೋಶಗಳು ಹಸ್ತಾಗ್ರಗಳಿಂದ ಎಲ್ಲಿ ಬಿದ್ದವು? ಎಲೈ ಸುಂದರಿಯೆ, ನೀನು ಭೂಮಿಯಲ್ಲಿರುವಳಾದಕಾರಣ ಈ ಸ್ತ್ರೀಯರುಗಳಲ್ಲಿ ಒಬ್ಬಳೂ ನೀನಲ್ಲವಾದಕಾರಣ ಅಧಿಕವಾದ ಕರ್ಮಸಾಮರ್ಥ್ಯವುಳ್ಳ ಪರಾಕ್ರಮಿಯಾದ ನನ್ನೊಡನೆ ಮಹಾಲಕ್ಷ್ಮಿಯು ನಾರಾಯಣನೊಡನೆ ವೈಕುಂಠವನ್ನಲಂಕರಿಸುವಂತೆ ಈ ಪುರವನ್ನಲಂಕರಿಸು! ಎಲೈ ಶೋಭನಾಂಗಿಯೆ, ನಿನ್ನ ಕಟಾಕ್ಷಪ್ರಸಾರದಿಂದ ಕ್ಷೋಭಿತವಾದ ಮನಸ್ಸುಳ್ಳ ನನ್ನನ್ನು ಲಜ್ಜಾಪೂರ್ವಕವಾಗಿ ಮನೋಭಾವವನ್ನು ಪ್ರಕಾಶಂಗೈವ ಮುಗುಳ್ನಗೆಯು ವಿಲಾಸವು ಹುಬ್ಬುಗಳೂ ಉಳ್ಳ ನಿನ್ನಿಂದ ಪ್ರೇರಿತನಾದ ಮನ್ಮಥನು ನನ್ನನ್ನು ಬಾಧಿಸುತ್ತಾನೆ; ನನ್ನನ್ನನುಗ್ರಹಿಸು! ಎಲೈ ಸುಂದರಿಯೆ, ರಮ್ಯಗಳಾದ ಕರೀಗುಡ್ಡಗಳುಳ್ಳ ಚದರಿ ಜೋಲುವ ನೀಲಗಳಾದ ಮುಂಗುರುಳುಗಳಿಂದ ಸಂವೃತವಾಗಿ ಮನೋಹರವಾಗಿ ಮಾತನಾಡುವ ನಿನ್ನ ಮುಖವನ್ನು ನನಿಗೆ ತೋರಿಸು; ಲಜ್ಜೆಯಿಂದ ಮುಖವನ್ನು ಬಾಗಿಸಿಕೊಂಡು ಯಾಕೆ ಇದ್ದೀಯೆ' ಎಂದು ದೀನನಾಗಿ ಯಾಚಿಸುತ್ತಿರುವ ವೀರನಾದ ಪುರಂಜನನನ್ನು ಮೋಹಿಸುವಂತೆ ಮಾಡುವ ಆ ಸ್ತ್ರೀಯು ಸಮ್ಮತಿಸಿದಳು! ಅನಂತರದಲ್ಲಿ ನೀನು ಯಾರು? ಯಾವವನ ಮಗಳು? ಎಂದು ಪುರಂಜನನಿಂದ ಮಾಡಲ್ಪಟ್ಟ ಪ್ರಶ್ನೆಗೆ ಆ ಸ್ತ್ರೀಯು 'ಎಲೈ ಪುರುಷಶ್ರೇಷ್ಠನೆ, ನನ್ನ ತಂದೆಯನ್ನು ನಾನರಿಯೆನು; ನನ್ನ ನಾಮಧೇಯವೇನೋ ಅದನ್ನೂ ನಾನರಿಯೆನು; ನೀನು ಯಾರೋ ನಿನ್ನ ನಾಮಧೇಯವೇನೋ ಅದನ್ನೂ ನಾನರಿಯೆನು; ಈಗ ಈ ಪುರದಲ್ಲಿ ಇಧೇನೆ ಎಂಬದು ಒಂದನ್ನೇ ನಾನು ಬಲ್ಲೆನು; ಈ ಪುರವನ್ನು ಸ್ವಾರ್ಥವಾಗಿ ಯಾವವನು ನಿರ್ಮಾಣವನ್ನು ಮಾಡಿದನೋ ಅದನ್ನೂ ನಾನರಿಯೆನು' ಅಂದರೆ: ಬುದ್ಧಿಯು ಜೀವನು ದೇಹವು ಈ ಮೂರು ಪೂರ್ವಕರ್ಮಾರ್ಜಿತಗಳಾಗಿ ಮಾಯಾಕಲ್ಪಿತಗಳಾದ್ದರಿಂದ ಇವುಗಳ ಮೂಲವನ್ನು ಯಾರೂ ಅರಿಯರು ಎಂಬ ತಾತ್ಪರ್ಯವು; ಈ ಭೃತ್ಯರು ಯಾರು ಎಂಬುವದಕ್ಕೆ ಉತ್ತರವನ್ನಿತ್ತಳು: ಈ ಪುರುಷರು ಸ್ತ್ರೀಯರು ನನಿಗೆ ಮಿತ್ರರು; ಸಖೀರು ಪಂಚಮುಖಗಳುಳ್ಳ ಈ ಸರ್ಪವು ನಾನು ಮಲಗಿರುವಾಗ ನನ್ನ ಪುರವನ್ನು ಜಾಗ್ರತೆಯಾಗಿ ಕಾದುಕೊಂಡಿರುತ್ತೆ; ಅಂದರೆ: ಪ್ರಾಣವು ಈ ದೇಹದಲ್ಲಿ ಸರ್ವದಾ ಜಾಗ್ರತೆಯಿಂದಿರುವದೆಂಬ ತಾತ್ಪರ್ಯವು; ಈ ಮಾತು ಹಾಗೆ ಇರಲಿ; ನೀನು ಇಲ್ಲಿಗೆ ಬಂದದ್ದು ಚನ್ನಾಯಿತು; ನೀನು ಯಾವ ಭೋಗಗಳನ್ನನುಭವಿಸಲಿಚ್ಛೈಸುತ್ತೀಯೊ ಆ ಭೋಗಗಳನ್ನು ನಾನು ನನಿಗೆ ಭೃತ್ಯರಾದ ಈ ಬಂಧುಗಳಿಂದ ಸಂಪಾದಿಸಿ ಅನುಕೂಲವನ್ನು ಮಾಡುತ್ತೇನೆ! ಎಲೈ ಅರಸೆ, ನನ್ನಿಂದ ಸಂಪಾದಿಸಲ್ಪಟ್ಟ ಕಾಮಭೋಗಗಳನ್ನು ಗ್ರಹಿಸುವನಾಗಿ ನೀನು ಒಂಭತ್ತು ಬಾಗಿಲುಗಳುಳ್ಳ ಈ ಪಟ್ಟಣದಲ್ಲಿ ವಾಸವನ್ನು ಮಾಡಿಕೊಂಡು ನೂರು ವರ್ಷ ಸುಖವಾಗಿರು; ನಾನು ನಿನ್ನನ್ನು ಬಿಟ್ಟು ಮತ್ತೆ ಯಾರನ್ನೂ ಅಪೇಕ್ಷಿಸುವದಿಲ್ಲ; ಏನು ಕಾರಣವೆಂದರೆ: ರತಿಜ್ಞನಲ್ಲದೆ ಅಪ್ರೌಢನಾಗಿ ಪರಲೋಕ ಚಿಂತಾರಹಿತನಾಗಿ ಭಾವಿಕಾರ್ಯಾಲೋಚನೆಯನ್ನರಿಯದ ಪಶುಸಮಾನನಾದ ಪುರುಷನನ್ನು ನಾನು ಅಪೇಕ್ಷಿಸುವದಿಲ್ಲ; ಈ ಗೃಹಸ್ಥಾಶ್ರಮದಲ್ಲಿ ಧರ್ಮಾರ್ಥ ಕಾಮಸಿದ್ಧಿಯು ಪುತ್ರಾನಂದವು ಯಶಸ್ಸು ಮೋಕ್ಷವು ಉಂಟು; ಶೋಕರಹಿತರಾಗಿ ಪಾಪರಹಿತರಾಗಿ ಗೃಹಸ್ಥಾಶ್ರಮಿಗಳಿರುವರು; ಯತಿಗಳು ಈ ಸುಖವನ್ನೇನು ಬಲ್ಲರು; ಈ ಭೂಲೋಕದಲ್ಲಿ ಗೃಹಸ್ಥಾಶ್ರಮವು ದೇವ ಋಷಿ ಪಿತೃ ಮನುಷ್ಯರಿಗೂ ಭೂತಗಳಿಗೂ ತನಿಗೂ ಸಹಾ ಕ್ಷೇಮಪ್ರದವಾದ ಆಶ್ರಮವು—ಎಂದು ಮಹಾತ್ಮರು ಹೇಳುವರು! ಎಲೈ ವೀರನಾದ ಅರಸೆ, ಬುದ್ಧಿಮತಿಯಾದ ನನ್ನಂಥಾವಳು ಯಾವವಳಾದಾಗ್ಯೂ ಪ್ರಖ್ಯಾತನಾಗಿ ತ್ಯಾಗಶೀಲನಾಗಿ ಪ್ರಿಯದರ್ಶನನಾಗಿ ತನ್ನಿಂದ ತಾನೇ ಪ್ರಾಪ್ತನಾದ ನಿನ್ನಂಥಾ ಪತಿಯನ್ನಪೇಕ್ಷಿಸದೆ ಇದ್ದಾಳೇ! ಎಲೈ ಮಹಾಬಾಹುವಾದ ಅರಸೇ, ಸರ್ಪಶರೀರಗಳಂತೆ ದೀರ್ಘಗಳಾದ ನಿನ್ನ ಭುಜಗಳಲ್ಲಿ ಯಾವ ಸ್ತ್ರೀಯ ಚಿತ್ತವು ಲಗ್ನವಾಗದೆ ಇದ್ದೀತು; ನೀನು ದೀನರಾದ ಜನರ ಮನೋವ್ಯಥೆಯನ್ನು ದಯಾಪೂರ್ವಕವಾದ ಮುಗುಳ್ನಗೆ

ಬಿಂದಮುಕ್ತವಾದ ಕಟಾಕ್ಷದಿಂದ ಪರಿಹರಿಸಲೋಸುಗ ಸಂಚರಿಸುತ್ತೀಯೆ–ಎಂದು ಈಪ್ರಕಾರವಾಗಿ ಅನ್ಯೋನ್ಯ ಸಂಮತಿಯಿಂದ ಸಮಯಬಂಧವನ್ನು ಮಾಡಿಕೊಂಡು ದಂಪತಿಗಳಾಗಿ ಆ ಪುರವನ್ನು ಪ್ರವೇಶಿಸಿ ನೂರು ವರ್ಷಗಳು ಸಂತೋಷದಲ್ಲಿದ್ದರು; ಅಂದರೆ: ಈ ಮಾನುಷದೇಹದಲ್ಲಿ ಬುದ್ಧಿಯು ಜೀವನು ಅನ್ಯೋನ್ಯವಾಗಿ ಈ ದೇಹಪತನ ಪರ್ಯಂತವು ಕೂಡಲೇ ಇರುವರು ಎಂಬ ತಾತ್ಪರ್ಯವು! ಎಲೈ ಪ್ರಾಚೀನಬರ್ಹಿರಾಯನೆ, ಈರೀತಿಯಲ್ಲಿ ಪುರಂಜನನು ಅಲ್ಲಲ್ಲಿ ಗಾಯಕರಿಂದ ಗಾಯನಂಗೈಸಿಕೊಳ್ಳುತ ಸ್ತ್ರೀಯರಿಂದ ಪರಿವೃತನಾಗಿ ಗ್ರೀಷ್ಮಕಾಲದಲ್ಲಿ ಹ್ರಾದಿನೀ ಎಂಬ ನದಿಯಲ್ಲಿ ಪ್ರವೇಶಿಸಿವನು; ಆ ಪುರಕ್ಕೆ ಊರ್ಧ್ವಭಾಗದಲ್ಲಿ ಏಳು ಬಾಗಿಲುಗಳು ಬೇರೆಬೇರೆ ವಿಷಯಗಳ ಗಮನಾಗಮನಕ್ಕೋಸ್ಕರ ಮಾಡಲ್ಪಟ್ಟಿರುವವು; ಆ ಪುರಕ್ಕೆ ತಾನು ಒಬ್ಬ ಅಧಿಪತಿಯಾಗಿದ್ದನು; ಅಂದರೆ: ಈ ದೇಹದಲ್ಲಿ ಚಕ್ಷುಸ್ಸುಗಳು ಎರಡು; ಶ್ರೋತ್ರಗಳು ಎರಡು; ನಾಸಿಕಾರಂಧ್ರಗಳು ಎರಡು; ಬಾಯಿ ಒಂದು; ಈ ಏಳೂ ಊರ್ಧ್ವಭಾಗ ರಂಧ್ರಗಳು; ಅಧೋಭಾಗದಲ್ಲಿ ಗುದವು ಉಪಸ್ಥವು ಎಂದು ಎರಡು ರಂಧ್ರಗಳು ಇರುವವು; ಈ ದೇಹಕ್ಕೆ ಜೀವನು ಅಭಿಮಾನಿ ಎಂಬ ತಾತ್ಪರ್ಯವು; ಪೂರ್ವದಿಕ್ಕಿನಲ್ಲಿ ಐದು ಬಾಗಿಲುಗಳು ದಕ್ಷಿಣದಲ್ಲಿ ಒಂದು ಉತ್ತರದಲ್ಲಿ ಒಂದು ಹಿಂಭಾಗದಲ್ಲಿ ಎರಡು ಅಂತು ಒಂಭತ್ತು ಬಾಗಿಲುಗಳು; ಈ ಒಂಭತ್ತು ಬಾಗಿಲುಗಳಿಗೂ ಹೆಸರನ್ನು ಹೇಳುತ್ತೇನೆ; ಪೂರ್ವದ್ವಾರಗಳಲ್ಲಿ ಎರಡು ಬಾಗಿಲುಗಳು ಜೊತೆಯಾಗಿರುವವು; ಅವುಗಳಲ್ಲಿ ಸ್ವಲ್ಪಪ್ರಕಾಶವುಳ್ಳ ವಾಮಭಾಗದ ಬಾಗಿಲು ಖದ್ಯೋತವೆನಿಸುವದು; ದಕ್ಷಿಣಭಾಗದಲ್ಲಿರುವ ಬಾಗಿಲು ಆವಿರ್ಮುಖಿ ಆವಿಸ್ರಕಾವೆನಿಸುವದು; ದ್ಯುಮಂತನಿಗೆ ಮಿತ್ರನಾದ ಪುರಂಜನನು ಆ ಬಾಗಿಲುಗಳಿಂದ ಸಂಚರಿಸುತ ದೇಶವನ್ನು ನೋಡುವನು; ಅಂದರೆ: ದೇಹಾಭಿಮಾನಿಯಾದ ಜೀವನು ಸೂರ್ಯಚಂದ್ರಾಂಶ ಭೂತಗಳಾದ ದಕ್ಷಿಣ ವಾಮ ನೇತ್ರಗಳಿಂದ ಶುಕ್ಲಾದಿರೂಪವನ್ನು ತಿಳಿಯುವನು; ನಳಿನೀ ನಾಳಿನೀ ಎಂದು ಎರಡು ಬಾಗಿಲುಗಳು ಒಂದೇಕಡೆಯಲ್ಲಿ ಜೊತೆಯಾಗಿರುವವು; ಪುರಂಜನನು ಅವಧೂತ ಸಹಾಯನಾಗಿ ಸೌರಭ ವಿಷಯವನ್ನೈದುವನು; ಅಂದರೆ: ಚಂದ್ರ ಸೂರ್ಯ ಸ್ವರ ಸಂಚಾರಸ್ಥಾನಗಳಾದ ನಾಶಿಕಾರಂಧ್ರಗಳಿಂದ ಜೀವನು ವಾಯುವಧಿಷ್ಠಿತವಾದ ಘ್ರಾಣೇಂದ್ರಿಯವನ್ನು ಸಹಾಯಮಾಡಿಕೊಂಡು ಸುಗಂಧ ದುರ್ಗಂಧಗಳನ್ನನುಭವಿಸುವನು ಎಂಬ ತಾತ್ಪರ್ಯವು; ಪೂರ್ವದಿಕ್ಕಿನಲ್ಲಿ ಐದನೆ ಬಾಗಿಲು ಮುಖವೆಂಬ ನಾಮಧೇಯವುಳ್ಳದ್ದು; ರಸಜ್ಞವಿಪಣರೆಂಬ ಮಿತ್ರರಿಂದ ಯುಕ್ತನಾಗಿ ಪುರಂಜನನು ಆಪಣ ಬಹೂದನಗಳೆಂಬ ವಿಷಯಗಳನ್ನು ಆ ಬಾಗಿಲಿನಿಂದೈದುವನು; ಅಂದರೆ: ಜೀವನು ವಾಗೀಂದ್ರಿಯ ರಸನೇಂದ್ರಿಯಗಳನ್ನು ಸಹಾಯಮಾಡಿಕೊಂಡು ಮುಖರಂಧ್ರದಿಂದ ಭಾಷಾರೂಪವಾದ ವ್ಯವಹಾರವನ್ನು ಚತುರ್ವಿಧವಾದ ಅನ್ನದ ಭಕ್ಷಣೆಯನ್ನನುಭವಿಸುವನು ಎಂಬ ತಾತ್ಪರ್ಯವು; ಪಿತೃಹೂ ಎಂಬ ನಾಮಧೇಯವುಳ್ಳ ದಕ್ಷಿಣ ಬಾಗಿಲಿನಲ್ಲಿ ಶೃತಧರನೆಂಬ ಮಿತ್ರನೊಡನೆ ಪುರಂಜನನು ದಕ್ಷಿಣ ಪಾಂಚಾಲ ದೇಶಗಳನ್ನೈದುವನು; ಇದೇ ರೀತಿಯಲ್ಲಿ ಉತ್ತರದ್ವಾರವು ದೇವಹೂ ಎಂಬ ನಾಮಧೇಯವುಳ್ಳದ್ದು; ಆ ಬಾಗಿಲುಗಳಿಂದ ಉತ್ತರ ಪಾಂಚಾಲ ದೇಶಗಳನ್ನೈದುವನು; ಅಂದರೆ: ಜೀವನು ಶಬ್ದಗ್ರಾಹಕವಾದ ಶ್ರೋತ್ರೇಂದ್ರಿಯದೊಡಗೂಡಿ ದಕ್ಷಿಣ ವಾಮ ಕರ್ಣರಂಧ್ರಗಳಿಂದ ಅಲೌಕಿಕಗಳಾದ ವೇದಶಾಸ್ತ್ರ ಶಬ್ದಗಳನ್ನು ಲೌಕಿಕಗಳಾದ ಭೇರ್ಯಾದಿ ಶಬ್ದಗಳನ್ನು ಸಹ ಅನುಭವಿಸುವನು; ಆಸುರೀನಾಮಕವಾದ ಪಶ್ಚಿಮ ಬಾಗಿಲಿನಲ್ಲಿ ಪುರಂಜನನು ದುರ್ಮದನೆಂಬ ಮಿತ್ರನಿಂದ ಯುಕ್ತನಾಗಿ ಗ್ರಾಮನಾಮಕವಾದ ವಿಷಯವನ್ನೈದುವನು; ಅಂದರೆ: ಜೀವನು ಗುಹ್ಯೇಂದ್ರಿಯಯುಕ್ತನಾಗಿ ಮತ್ತನಾಗಿ ಯೋನಿದ್ವಾರಗಳಿಂದ ಸಂಭೋಗ ವ್ಯಾಪಾರವನ್ನನುಭವಿಸುವನು; ನಿಋುತಿನಾಮಕವಾದ ಮತ್ತೊಂದು ಪಶ್ಚಿಮಬಾಗಿಲಿನಲ್ಲಿ ಪುರಂಜನನು ಲುಬ್ಧನೆಂಬ ಮಿತ್ರನಿಂದ ಯುಕ್ತನಾಗಿ ವೈಶಸನಾಮಕವಾದ ವಿಷಯವನ್ನೈದುವನು; ಅಂದರೆ: ಜೀವನು ಪಾಯುವೆಂಬ ಇಂದ್ರಿಯದೊಡಗೂಡಿ ಗುದದ್ವಾರದಿಂದ ಮಲವಿಸರ್ಜನವ್ಯಾಪಾರವನ್ನನುಭವಿಸುತ್ತಾನೆಂಬ ತಾತ್ಪರ್ಯವು; ಆ ಪುರದಲ್ಲಿರುವ ಜನರಲ್ಲಿ ನಿರ್ವಾಕ್ ಪೇಶಸ್ಕೃತ್ ಎಂಬ ಇಬ್ಬರು ಅಂಧರು ಇರುವರು; ಪುರಂಜನನು ನಿರ್ವಾಕ್ಕೆಂಬ ಅಂಧನನ್ನು ಜೊತೆಮಾಡಿಕೊಂಡು ಸಂಚರಿಸುವನು; ಪೇಶಸ್ಕೃತ್ ಎಂಬ ಅಂಧನನ್ನು ಸಹಾಯಮಾಡಿಕೊಂಡು ಕಾರ್ಯಗಳನ್ನು ಮಾಡುವನು; ಅಂದರೆ: ಜೀವನು ಪಾದ

ಗಳಿಂದ ಸಂಚರಿಸುವನು ; ಹಸ್ತಗಳಿಂದ ವ್ಯಾಪಾರವನ್ನು ಮಾಡುವನೆಂಬ ತಾತ್ಪರ್ಯವು ; ಆ ಪುರಂಜನನು ವಿಷೂಚೀನನೆಂಬ ಮಿತ್ರನೊಡಗೂಡಿ ಯಾವಾಗ ಅಂತಃಪುರಕ್ಕೆ ಹೋಗುವನೋ ಆಗ ಪುತ್ರ ಪತ್ನೀಯರುಗಳಿಂದ ಹುಟ್ಟಿದ ಮೋಹವನ್ನೂ ಪ್ರಸಾದವನ್ನೂ ಹರ್ಷವನ್ನೂ ಸಹಾ ಪಡೆಯುವನು ; ಅಂದರೆ: ಜೀವನು ಮನದೊಡಗೂಡಿ ಯಾವಾಗ ಹೃದಯವನ್ನು ಪ್ರವೇಶಿಸುವನೋ ಆಗ ಬುದ್ಧಿಯಿಂದಲೂ ಇಂದ್ರಿಯ ಪರಿಣಾಮಗಳಿಂದಲೂ ಹುಟ್ಟುವ ಮೋಹವನ್ನೂ ಪ್ರಸಾದವನ್ನೂ ಹರ್ಷವನ್ನೂ ಸಹಾ ಕಾಲಾನುಸಾರವಾಗಿ ಅನುಭವಿಸುವನು ; ಈಪ್ರಕಾರವಾಗಿ ಪುರಂಜನನು ಕರ್ಮಗಳಲ್ಲಿ ಆಸಕ್ತನಾಗಿ ಕಾಮುಕನಾಗಿ ಪತ್ನೀವಶನಾಗಿ ಪತ್ನಿಯು ಹ್ಯಾಗೆ ಹ್ಯಾಗೆ ಅಪೇಕ್ಷಿಸುವಳೋ ಹ್ಯಾಗೆಹ್ಯಾಗೆ ವ್ಯಾಪಾರವನ್ನು ಮಾಡುವಳೋ ಹಾಗೆಹಾಗೆ ತಾನೂ ಮಾಡಿಕೊಂಡು ಅವಳನ್ನೇ ಅನುವರ್ತಿಸಿಕೊಂಡಿರುವನು ; ಈ ಪುರಂಜನನು ಬಂದುವೇಳೆ ಪತ್ನಿಯು ಮಧುಪಾನವನ್ನು ಮಾಡಿದರೆ ತಾನೂ ಮದವಿಹ್ವಲನಾಗಿ ಮಧುಪಾನವನ್ನು ಮಾಡುವನು ; ಅವಳು ಭೋಜನವನ್ನು ಮಾಡಿದರೆ ತಾನೂ ಭೋಜನವನ್ನು ಮಾಡುವನು ; ಅವಳು ಭಕ್ಷಿಸಿದರೆ ತಾನೂ ಭಕ್ಷಿಸುವನು ; ಅವಳು ಗಾನಂಗೈದರೆ ತಾನೂ ಗಾನಂಗೈವನು ; ಅವಳು ರೋದನಂಗೈದರೆ ತಾನೂ ರೋದನಂಗೈವನು ; ಬಂದುವೇಳೆ ಅವಳು ನಕ್ಕರೆ ತಾನೂ ನಗುವನು ; ಅವಳು ಮಾತನಾಡಿದರೆ ತಾನೂ ಮಾತನಾಡುವನು ; ಅವಳು ಓಡಿದರೆ ತಾನೂ ಓಡುವನು ; ಅವಳು ನಿಂತರೆ ತಾನೂ ನಿಲ್ಲುವನು ; ಅವಳು ಮಲಗಿದರೆ ತಾನೂ ಮಲಗುವನು ; ಅವಳು ಕುಳಿತಿದ್ದರೆ ತಾನೂ ಕುಳಿತಿರುವನು ; ಅವಳು ಕೇಳುತಿದ್ದರೆ ತಾನೂ ಕೇಳುವನು ; ಅವಳು ನೋಡುತಿದ್ದರೆ ತಾನೂ ನೋಡುವನು ; ಅವಳು ಘ್ರಾಣಂಗೈದರೆ ತಾನೂ ಘ್ರಾಣಂಗೈಯುವನು ; ಅವಳು ಸ್ಪೃಶಿಸಿದರೆ ತಾನೂ ಸ್ಪೃಶಿಸುವನು ; ಅವಳು ದುಃಖಪಟ್ಟರೆ ತಾನೂ ದುಃಖಪಡುವನು ; ಅವಳು ಹರ್ಷಯುಕ್ತಳಾದರೆ ತಾನೂ ಹರ್ಷಯುಕ್ತನಾಗುವನು ; ಅವಳು ಆನಂದವನ್ನೈದಿದರೆ ತಾನೂ ಆನಂದವನ್ನೈದುವನು ; ಅಂದರೆ : ಜೀವನು ಅಸ್ವತಂತ್ರನಾದ್ದರಿಂದ ಬುದ್ಧಿವೃತ್ತಿ ಹ್ಯಾಗೆ ಹ್ಯಾಗೆ ಪ್ರವರ್ತಿಸುವದೊ ಆಯಾ ರೀತಿಯಿಂದ ಪ್ರವರ್ತಿಸುವನು ಎಂಬ ತಾತ್ಪರ್ಯವು ; ಈರೀತಿಯಲ್ಲಿ ಪತ್ನಿಯಿಂದ ಸರ್ವಪ್ರಕಾರದಿಂದಲೂ ವಂಚಿತನಾಗಿ ತಾನು ಇಚ್ಛೈಸದೆ ಇರುವವನಾದಾಗ್ಯೂ ಕ್ರೀಡಾಮೃಗದಂತೆ ಕುಣಿಸಲ್ಪಟ್ಟವನಾಗಿ ಪರವಶನಾಗಿ ಆ ಬುದ್ಧಿಯು ಆಡುವಹಾಗೆ ಆಡುವನು " ಎಂದು ನುಡಿದನು.

೨೬ ನೇ ಅಧ್ಯಾಯ.

ಸ್ವಪ್ನ ಜಾಗರಣಗಳೆಂಬ ಬೇಟೆಯಿಂದ ಜೀವನಿಗೆ ಸಂಸಾರ ಉಂಟಾಗುವದು.

"ಎಲೈ ಅರಸೇ, ಆ ಪುರಂಜನನು ಬಂದು ಸಮಯದಲ್ಲಿ ಮಹಾ ಧನುರ್ಧಾರಿಯಾಗಿ ರಥಾರೂಢನಾಗಿ ಪಂಚಪ್ರಸ್ಥವೆಂಬ ವನವನ್ನು ಕುರಿತು ತೆರಳಿದನು ; ರಥವೆಂಥಾದ್ದೆಂದರೆ : ಐದು ಕುದುರೆಗಳುಳ್ಳದ್ದಾಗಿ ಶೀಘ್ರಗಾಮಿಯಾಗಿ ಎರಡು ನೊಗಗಳು ಎರಡು ಭಂಡಿಗಳು ಬಂದು ಅಚ್ಚು ಮೂರು ಧ್ವಜಗಳು ಐದು ಕಟ್ಟುಗಳು ಬಂದು ಹಗ್ಗವು ಬಬ್ಬ ಸಾರಥಿಯು ಬಬ್ಬ ರಥಿಕನಿಗೆ ಕುಳಿತುಕೊಳ್ಳುವದಕ್ಕೆ ಸ್ಥಾನವು ಎರಡು ನೊಗಗಳ ಬಂಧಸ್ಥಾನವು ಐದು ಆಯುಧಗಳು ಐದು ಗಮನವಿಶೇಷಗಳೂ ಉಳ್ಳದ್ದಾಗಿ ಸುವರ್ಣಮಯವಾದ ಸಾಮಗ್ರಿಯುಳ್ಳದ್ದಾಗಿರುವ ರಥವನ್ನಾರೋಹಣಂಗೈದು ಸುವರ್ಣಮಯವಾದ ಕವಚವನ್ನು ತೊಟ್ಟು ಅಕ್ಷಯಬಾಣಗಳುಳ್ಳ ಬತ್ತಳಿಕೆಗಳನ್ನು ಧರಿಸಿ ಹತ್ತು ಮಂದಿ ಸೇನಾಪತಿಗಳಿಗೆ ಮುಖ್ಯನಾದ ಮಹಾ ಸೇನಾನಾಯಕಸಮೇತನಾಗಿ ಪಂಚಪ್ರಸ್ಥವನವನ್ನು ಕುರಿತು ತೆರಳಿದನು ; ಅಂದರೆ : ಜೀವನು ಕರ್ತೃತ್ವ ಭೋಕ್ತೃತ್ವಾದ್ಯಭಿಮಾನವುಳ್ಳವನಾಗಿ ಶ್ರೋತ್ರಾದಿ ಪಂಚಜ್ಞಾನೇಂದ್ರಿಯಯುಕ್ತನಾಗಿ ಶೀಘ್ರ ಗಮನವುಳ್ಳದ್ದಾಗಿ ಅಹಂಕಾರ ಮಮಕಾರಗಳಿಂದ ಯುಕ್ತವಾಗಿ ಪುಣ್ಯಪಾಪಕಾರಣವಾಗಿ ಸತ್ವ ರಜಸ್ತಮೋಗುಣಮಯವಾಗಿ ಪಂಚಪ್ರಾಣಗಳಿಂದ ಸಮೇತವಾಗಿ ಮನಸ್ಸಿನಿಂದ ಯುಕ್ತವಾಗಿ ಬುದ್ಧಿಸಮೇತವಾಗಿ

ಹೃದಯವುಳ್ಳವನಾಗಿ ಶೋಕಮೋಹ ಸಮೇತವಾಗಿ ಪಂಚಕರ್ಮೇಂದ್ರಿಯ ಯುಕ್ತವಾಗಿರುವ ಸ್ವಪ್ನದೇಹವನ್ನವ ಲಂಬಿಸಿ ರಜೋಗುಣಯುಕ್ತನಾಗಿ ಅನೇಕ ವಾಸನೋಪಾಧಿಯುಳ್ಳವನಾಗಿ ಮನಸ್ಸೇ ಸಹಾಯವಾಗುಳ್ಳವನಾಗಿ ಮಿಥ್ಯಾರೂಪಗಳಾದ ಭೋಗಗಳನ್ನನುಭವಿಸಿದನು ಎಂಬ ತಾತ್ಪರ್ಯವು; ಆ ವನದಲ್ಲಿ ಪುರಂಜನನು ಮೃಗಗಳ ಸಂಹಾರದಲ್ಲಿ ಆಸಕ್ತನಾಗಿ ಉತ್ತಮಳಾದ ಆ ಪತ್ನಿಯನ್ನು ಬಿಟ್ಟು ಬೃಹದ್ಬಲನೆಂಬ ಸೇನಾಪತಿಯೊಡಗೂಡಿ ಬೇಟೆಯನ್ನಾಡಿದನು; ಅಂದರೆ: ಜೀವನು ಮನಸ್ಸಿನಿಂದ ಸಮೇತನಾಗಿ ವಿವೇಕಯುಕ್ತವಾದ ಬುದ್ಧಿಯಿಂದ ರಹಿತನಾಗಿ ವಿಷಯಾಸಕ್ತನಾದನು ಎಂಬ ತಾತ್ಪರ್ಯವು; ಕ್ರೂರವಾದ ಚಿತ್ತವುಳ್ಳವನಾಗಿ ನಿರ್ದಯನಾಗಿ ಅಸುರವೃತ್ತಿಯನ್ನವಲಂಬಿಸಿ ತೀಕ್ಷ್ಣಬಾಣಗಳಿಂದ ವನಮೃಗಗಳನ್ನು ಸಂಹರಿಸಿದನು; ಅಂದರೆ; ರಾಗದ್ವೇಷಾದಿಗಳಿಂದ ವಿಷಯಭೋಗಗಳನ್ನವಲಂಬಿಸಿದನು ಎಂಬ ತಾತ್ಪರ್ಯವು; ಮೃಗಯಾ ವ್ಯಾಪಾರವು ಕ್ಷತ್ರಿಯನಿಗೆ ವಿಹಿತವಷ್ಟೆ; ಆಸುರವೃತ್ತಿಯೆಂದು ಹೇಳೋಣ ಹ್ಯಾಗೆ ಅಂದಲ್ಲಿ: ಪ್ರಸಿದ್ಧಗಳಾದ ನಿತ್ಯಶ್ರಾದ್ಧಾದಿಗಳಲ್ಲಿ ಎಷ್ಟು ಉಪಯುಕ್ತವೋ ಅಷ್ಟುಮಾತ್ರ ಮೃಗಗಳನ್ನು ಸಂಹರಿಸಬೇಕು; ಹವಿಯೋಗ್ಯಗಳಾಗಿ ಪವಿತ್ರಗಳಾದ ಮೃಗಗಳನ್ನು ಸಂಹರಿಸಬೇಕು; ಕ್ಷತ್ರಿಯನಿಗೆ ಇದು ವಿಹಿತವು; ಆದುಕಾರಣ ಈರೀತಿಯಲ್ಲಿ ನಿಯಮಿಸಲ್ಪಟ್ಟ ಕರ್ಮವನ್ನು ತಿಳಿದು ಯಾವ ಮಹಾಬುದ್ಧಿಶಾಲಿಯು ಆಚರಿಸುತ್ತಾನೆಯೋ ಆ ಪುರುಷನು ಆ ಕರ್ಮಜನ್ಯಜ್ಞಾನದಿಂದ ಲಿಪ್ತನಾಗುವದಿಲ್ಲ; ಅಂಥಾ ಕರ್ಮವನ್ನು ಮಾಡದಿದ್ದಾಗ್ಯೂ ಬಾಧಕವಿಲ್ಲ; ನಿಯಮೋಲ್ಲಂಘನವನ್ನು ಮಾಡಿ ಕರ್ತೃತ್ವಾಭಿಮಾನಯುಕ್ತನಾಗಿ ಯಾವನು ಅವಿಹಿತಕರ್ಮಗಳನ್ನು ಮಾಡುತ್ತಾನೆಯೋ ಅವನು ಗುಣಪ್ರವಾಹರೂಪವಾದ ಸಂಸಾರದಲ್ಲಿ ಬಿದ್ದು ಅಧೋಗತಿಯನ್ನೈದುವನು; ಆ ವನದಲ್ಲಿ ಚಿತ್ರವರ್ಣಗಳಾದ ರೆಕ್ಕೆಗಳುಳ್ಳ ತೀಕ್ಷ್ಣಬಾಣಗಳಿಂದ ಭೇದಿಸಲ್ಪಟ್ಟ ಶರೀರವುಳ್ಳ ದುಃಖಿತಗಳಾದ ಮೃಗಗಳ ನಾಶವನ್ನು ನೋಡಲು ದಯಾವಂತರಿಗೆ ಸಹಿಸಲಶಕ್ಯವಾಯಿತು; ಈರೀತಿಯಲ್ಲಿ ಪುರಂಜನನು ವರಾಹಗಳನ್ನೂ ಮಹಿಷಗಳನ್ನೂ ಸಂಹರಿಸುತ ಬಹು ಶ್ರಾಂತನಾಗಿ ಹಿಂದಿರಿಗಿ ಪುರಕ್ಕೆ ಬಂದು ಸ್ನಾನಾದಿ ವ್ಯಾಪಾರಾನಂತರದಲ್ಲಿ ಭೋಜನವನ್ನು ಮಾಡಿ ವಿಶ್ರಾಂತನಾಗಿ ಕುಳಿತುಕೊಂಡನು; ಆಮೇಲೆ ದೂಪದೀಪಗಳಿಂದಲೂ ಗಂಧಲೇಪನದಿಂದಲೂ ಪುಷ್ಪಮಾಲ್ಯಗಳಿಂದಲೂ ಚನ್ನಾಗಿ ಅಲಂಕೃತನಾಗಿ ಪತ್ನಿಯಲ್ಲಿ ಮನವನ್ನು ಮಾಡಿ ತೃಪ್ತನಾಗಿ ಭ್ರಷ್ಟನಾಗಿ ಮದಿಸಿ ಕಾಮದರವಶನಾಗಿ ಪತ್ನಿಯಾದ ತನ್ನ ಸ್ತ್ರೀಯನ್ನು ಕಾಣಲಿಲ್ಲ; ಅಂದರೆ: ಜೀವನು ಕಲ್ಪಿತಗಳಾದ ಮಿಥ್ಯಾಭೋಗಗಳನ್ನನುಭವಿಸಿ ಎಚ್ಚರಿತು ವಿವೇಕಯುಕ್ತವಾದ ಬುದ್ಧಿಯನ್ನು ಕಾಣಲಿಲ್ಲ; ಆಗ ವ್ಯಸನಯುಕ್ತವಾದ ಚಿತ್ತವುಳ್ಳವನಾಗಿ ಅಂತಃಪುರದ ಸ್ತ್ರೀಯರನ್ನು ಕುರಿತು 'ಎಲೈ ಸ್ತ್ರೀಯರುಗಳಿರಾ, ನೀವು ಕ್ಷೇಮದಲ್ಲಿದ್ದೀರೆ; ನಿಮ್ಮ ಯಜಮಾನತಿಯು ಕ್ಷೇಮದಲ್ಲಿದ್ದಾಳೆಯೇ; ಯಾತಕ್ಕೋ ನಮ್ಮ ಮನೆಗಳಲ್ಲಿ ಈಗ ಪೂರ್ವದಂತೆ ಸಂಪತ್ತುಗಳು ಕಾಣಲ್ಪಡುವದಿಲ್ಲ; ಮನೆಯಲ್ಲಿ ತಾಯಾಗಲೀ ಪತಿವ್ರತೆಯಾದ ಪತ್ನಿಯಾಗಲೀ ಇಲ್ಲದರೆ ಆ ಮನೆಯಲ್ಲಿ ಪ್ರಾಜ್ಞನಾದವನು ಶಿಥಿಲವಾದ ರಥದಲ್ಲಿದ್ದ ರೀತಿಯಲ್ಲಿ ದೀನನಾಗಿ ಹ್ಯಾಗಿದ್ದಾನು; ಯಾವ ಪತ್ನಿಯು ಬಾರಿಬಾರಿಗೂ ನನಿಗೆ ವಿವೇಕವನ್ನು ಹೇಳುತಿದ್ದಳೋ ಆ ಪತ್ನಿಯನ್ನು ಕಾಣೆನು' ಎಂಬ ರಾಜನ ವಾಕ್ಯವನ್ನು ಕೇಳಿ ಆ ಸ್ತ್ರೀಯರು 'ಎಲೈ ಪುರಂಜನನೇ, ನಿನ್ನ ಪತ್ನಿಯು ಮನಸ್ಸಿನಲ್ಲಿ ಏನನ್ನಾಲೋಚಿಸಿದ್ದಾಳೆಯೋ ನಾವು ಅರಿಯೆವು! ಎಲೈ ಶತ್ರುಸಂಹಾರಕನಾದ ಅರಸೇ, ಹಾಸಿಗೆಯಿಂದ ರಹಿತವಾದ ಭೂಮಿಯಲ್ಲಿ ಮಲಗಿದ್ದಾಳೆ ನೋಡು' ಎಂದು ನುಡಿದರು; ಆ ವಾಕ್ಯವನ್ನು ಕೇಳಿ ಪುರಂಜನನು ದೇಹಾಭಿಮಾನರಹಿತಳಾಗಿ ಭೂಮಿಯಲ್ಲಿ ಮಲಗಿರುವ ಪತ್ನಿಯನ್ನು ನೋಡಿ ವ್ಯಾಕುಲಚಿತ್ತನಾಗಿ ದುಃಖಿಸುತ ವ್ಯಸನಪಡುವ ಚಿತ್ತವುಳ್ಳವನಾಗಿ ಮೃದುವಾಕ್ಯಿನಿಂದ ಸಮಾಧಾನಗೈಯುತ ಆ ಪತ್ನಿಗೆ ಪ್ರಣಯಕೋಪಚಿನ್ಹಗಳನ್ನು ಕಾಣದೆ ಒಡಂಬಡಿಕೆಮಾಡುವದರಲ್ಲಿ ಚತುರನಾಗಿ ಒಡಂಬಡಿಸಿ ಅವಳ ಪಾದಗಳನ್ನು ಒತ್ತುತ ತನ್ನ ತೊಡೆಯಮೇಲೆ ಕುಳ್ಳಿರಿಸಿಕೊಂಡು ಲಾಲಿಸುತ 'ಎಲೈ ಶುಭಕರಳಾದ ಪತ್ನಿಯೆ, ಅಪರಾಧಿಗಳಾದ ಯಾವ ಭೃತ್ಯರು ತಮ್ಮ ಪ್ರಭುಗಳಿಂದ ಶಿಕ್ಷಾದಂಡವನ್ನು ಮಾಡಿಸಿಕೊಳ್ಳುವದಿಲ್ಲವೋ ಆ ಭೃತ್ಯರು ಪುಣ್ಯವಂತರಲ್ಲ; ಲೋಕಗಳಲ್ಲಿ ಅಪರಾಧಿಗಳಾದ ಭೃತ್ಯರು ಪ್ರಭುವಿನಿಂದ ಅಪರಾಧಾನುರೂಪವಾಗಿ ಶಿಕ್ಷೆಯನ್ನು ಮಾಡಿಸಿಕೊಂಡರೆ ಅದು ಭೃತ್ಯರಿಗೆ ಪರಮಾನುಗ್ರಹವು; ಪ್ರಭುವಿನಿಂದ ಮಾಡಲ್ಪಟ್ಟ ಶಿಕ್ಷೆಯನ್ನು

ಯಾವವನು ಸಹಿಸುವದಿಲ್ಲವೋ ಆ ಭೃತ್ಯನು ಬಂಧುಕೃತ್ಯವನ್ನು ಅರಿಯದ ಬಾಲಕನೇ ಹೊರ್ತು ಬುದ್ಧಿವಂತನಲ್ಲ! ಅದುಕಾರಣ ಎಲ್ಯೆ ಶೋಭನವಾದ ದಂತಪಙ್ತಿಯೂ ಸುಂದರವಾದ ಹುಬ್ಬುಗಳೂ ಉಳ್ಳ ಮನಸ್ವಿಯಾದ ಪತ್ನಿಯೇ, ಮನೆಗೆ ನಾಯಕಿಯಾದ ನೀನು ಅಧಿಕವಾದ ಅನುರಾಗದಿಂದಲೂ ಲಜ್ಜೆಯಿಂದಲೂ ಸ್ವಲ್ಪ ಮಂದವಾಗಿ ಪ್ರಕಾಶಿಸುವ ಮುಗುಳುನಗುವಿನಿಂದ ರಮ್ಯವಾದ ನೋಟಗಳುಳ್ಳದ್ದಾಗಿ ನೀಲಗಳಾದ ಮುಂಗುರುಳುಗಳಿಂದ ಅಲಂಕೃತವಾಗಿ ಉನ್ನತವಾದ ನಾಶಿಕವುಳ್ಳದ್ದಾಗಿ ಮಧುರವಾದ ವಾಕ್ಯಗಳುಳ್ಳ ನಿನ್ನ ಮುಖವನ್ನು ನಿನ್ನ ಸ್ವಜನರಾದ ನಮಗೆ ತೋರಿಸು! ಎಲ್ಯೆ ವೀರಪತ್ನಿಯಾದ ಸ್ತ್ರೀಯೆ, ಬ್ರಾಹ್ಮಣರು ಹರಿದಾಸರು ಹೊರ್ತು ನಿನ್ನಾದ ನನಿಗೆ ಅಪರಾಧಿಯಾವವನು ಯಾವನಾದರೂ ಸರಿಯೆ ಅವನನ್ನು ಶಿಕ್ಷಿಸುತ್ತೇನೆ; ಮತ್ತು ಲೋಕತ್ರಯದಲ್ಲಿಯೂ ನನ್ನ ದೆಸೆಯಿಂದ ಭಯವಿಲ್ಲದೆ ಮದಿಸಿರುವ ಪುರುಷನನ್ನು ನಾನು ಕಾಣೆನು; ಈ ಪ್ರಕಾರವಾಗಿ ತಿಲಕರಹಿತವಾದ ನಿನ್ನ ಮುಖವನ್ನು ಪೂರ್ವದಲ್ಲಿ ಯಾವಾಗಲೂ ನಾನು ನೋಡಲಿಲ್ಲ; ಮಲಿನವಾಗಿ ಸಂತೋಷರಹಿತವಾಗಿ ಕೋಪದಿಂದ ಭಯಂಕರವಾಗಿ ಅನುರಾಗ ರಹಿತವಾಗಿ ಹರಿದ್ರಾಲೇಪ ರಹಿತವಾಗಿರುವ ನಿನ್ನ ಮುಖವನ್ನು ಈಗ ನೋಡುತ್ತೇನೆ; ಮನೋಹರಗಳಾದ ನಿನ್ನ ಕುಚಗಳನ್ನು ಶೋಕೋದಕಗಳಿಂದ ನೆನೆಯಲ್ಪಟ್ಟದ್ದನ್ನಾಗಿ ನೋಡುತ್ತೇನೆ; ಬಿಂಬಫಲದಂತೆ ಸ್ವಭಾವವಾಗಿ ನಿನ್ನ ಅಧರೋಷ್ಟವನ್ನು ಕುಂಕುಮರಾಗ ರಹಿತವನ್ನಾಗಿ ನೋಡುತ್ತೇನೆ! ಎಲ್ಯೆ ಪತ್ನಿಯೇ, ಅದುಕಾರಣ ನಿನ್ನನ್ನು ಕೇಳದೆ ಸ್ವತಂತ್ರಭಾವದಿಂದಲೇ ಬೇಟೆಗೆ ಹೋಗಿ ಅಪರಾಧಿಯಾಗಿ ವ್ಯಸನಯುಕ್ತನಾಗಿ ಭಯಪಡುತಲಿರುವ ಮಿತ್ರನಾದ ನನಿಗೆ ನೀನು ಪ್ರಸನ್ನಳಾಗು; ಲೋಕದಲ್ಲಿ ಯಾವ ಸ್ತ್ರೀಯಾದಾಗ್ಯೂ ಮನ್ಮಥಬಾಣ ಪ್ರಹಾರಗಳಿಂದ ಧೈರ್ಯಹೀನನಾಗಿ ಸ್ವಾಧೀನನಾಗಿರುವ ನಾಯಕನನ್ನಪೇಕ್ಷಿಸುವಳಾಗಿ ಮಾಡತಕ್ಕ ವ್ಯಾಪಾರದಲ್ಲಿ ಉದ್ಯುಕ್ತಳಾಗದೆ ಉಪೇಕ್ಷಿಸ್ಯಾಳೆ' ಎಂದು ನುಡಿದನು; ಅಂದರೆ: ಜೀವನು ವಿವೇಕಯುಕ್ತವಾದ ಬುದ್ಧಿಯನ್ನು ಬಿಟ್ಟು ಅಜ್ಞಾನಾವೃತನಾಗಿ ವಿಷಯಾನುಭವಗಳನ್ನು ಮಾಡಿ ನಿರ್ವಿಣ್ಣನಾಗಿ ಆಮೇಲೆ ವಿವೇಕಯುಕ್ತವಾದ ಬುದ್ಧಿಯಿಂದ ರಹಿತನಾಗಿ ಭ್ರಷ್ಟನಾದೆನೆಂದು ಪಶ್ಚಾತ್ತಪ್ತನಾದನು ಎಂದು ತಾತ್ಪರ್ಯವು."

---

೨೭ ನೇ ಅಧ್ಯಾಯ.

ನಾರದನು ಪ್ರಾಚೀನಬರ್ಹಿರಾಜನಿಗೆ ಪುರಂಜನ ಕಾಲಕನ್ಯೋಪಾಖ್ಯಾನವನ್ನು ಹೇಳಿದ್ದು.

"ಎಲೈ ಪ್ರಾಚೀನಬರ್ಹಿರಾಯನೆ, ಆ ಪುರಂಜನನಪತ್ನಿಯು ಈ ರೀತಿಯಿಂದ ಒಡಂಬಡಿಸಲ್ಪಟ್ಟವಳಾಗಿ ತನ್ನ ವಿಲಾಸಗಳಿಂದ ಪತಿಯನ್ನು ವಶಮಾಡಿಕೊಂಡು ಅವನ ಸಂಗಡ ರಮಿಸಿದಳು; ಅಂದರೆ: ಜೀವನು ಈಪ್ರಕಾರ ಪಶ್ಚಾತಪ್ತನಾಗಿ ಪುನಃ ಬುದ್ಧಿಸಂಬಂಧವನ್ನೈದಿದನು ಎಂಬ ತಾತ್ಪರ್ಯವು; ಆ ಪುರಂಜನನು ಅಭ್ಯಂಜನಸ್ನಾನವನ್ನು ಮಾಡಿ ದಿವ್ಯ ವಸ್ತ್ರವನ್ನು ಧರಿಸಿ ಕುಂಕುಮ ಗಂಧ ಸಿಂಧೂರಾದಿಗಳಿಂದ ಅಲಂಕೃತಳಾಗಿ ಭೋಜನಾದಿಗಳಿಂದ ತೃಪ್ತಳಾಗಿ ಬಂದಂಥಾ ಆ ಪತ್ನಿಯನ್ನು ನೋಡಿ ಸಂತೋಷಪಟ್ಟು ಆಕೆಯಿಂದ ಆಲಿಂಗಿತನಾಗಿ ಕಂಠದಲ್ಲಿ ಸೇರಿಸಲ್ಪಟ್ಟ ಪತ್ನಿ ಭುಜವುಳ್ಳವನಾಗಿ ಏಕಾಂತದಲ್ಲಿ ರಹಸ್ಯಾಲೋಚನೆಗಳಿಂದಲೂ ಇಷ್ಟಾಲಾಭಗಳಿಂದಲೂ ಪರವಶನಾಗಿ ಸ್ತ್ರೀವಶನಾಗಿ ರಾತ್ರಿ, ಹಗಲೆಂಬ ಕಾಲವೇಗವನ್ನು ತಿಳಿಯಲಿಲ್ಲ; ಈಪ್ರಕಾರ ಪುರಂಜನನು ಉತ್ತಮವಾದ ಹಾಸಿಗೆಯಲ್ಲಿ ಪತ್ನಿಯ ಭುಜವನ್ನೇ ತಲೆದಿಂಬುಮಾಡಿಕೊಂಡು ಮದಿಸಿ ಮಲಗಿ ಮಹಾ ಉತ್ಸಾಹವುಳ್ಳವನಾಗಿ ತಮೋಗುಣಾವೃತನಾಗಿ ಆ ಸ್ತ್ರೀ ಸಂಭೋಗಸೌಖ್ಯವನ್ನೇ ಪರಮಪುರುಷಾರ್ಥವನ್ನಾಗಿ ತಿಳಿದು ನಿಜಸ್ವರೂಪವನ್ನು ಮರೆತು ಕಾಮಪರವಶವಾದ ಚಿತ್ತವುಳ್ಳವನಾಗಿ ಆ ಪತ್ನಿಯೊಡನೆ ರಮಿಸುತಿರುವ ಆ ಪುರಂಜನನಿಗೆ ಯೌವನವಯಸ್ಸು ಅರಕ್ಷಣದಂತೆ ಕಳೆದುಹೋಯಿತು! ಎಲೈ ಪ್ರಾಚೀನಬರ್ಹಿರಾಯನೆ, ಆ ಪುರಂಜನನು ಆ ಪತ್ನಿಯಲ್ಲಿ ಸಾವಿರದ ನೂರುಮಂದಿ ಪುತ್ರರನ್ನು ಪಡೆದನು; ಆಗ್ಯೆ ಅರ್ಧಾಯುಸ್ಸು ಸಂದುಹೋಯಿತು; ಮಾತಾಪಿತೃಗಳಿಗೆ

ಕೀರ್ತಿಸಂಪಾದಕರಾಗಿ ಶೀಲಸ್ವಭಾವ ಔದಾರ್ಯಗಳಿಂದ ಯುಕ್ತರಾದ ನೂರಹತ್ತುಮಂದಿ ಕನ್ಯೆಯರನ್ನು ಪಡೆದನು; ಅಂದರೆ; ಬುದ್ಧಿಯುಕ್ತನಾದ ಜೀವನಿಗೆ ಅನೇಕಗಳಾದ ವೃತ್ತಿಜ್ಞಾನಗಳುಂಟಾದವೆಂಬ ತಾತ್ಪರ್ಯವು; ಪಾಂಚಾಲಪತಿಯಾದ ಆ ಪುರಂಜನನು ಪಿತೃವಂಶ ವೃದ್ಧಿಕರರಾದ ಆ ಪುತ್ರರಿಗೆ ವಿವಾಹಪ್ರಸ್ತುತಗಳನ್ನು ಮಾಡಿ ಪುತ್ರಿಯರಿಗೂ ಅನುರೂಪರಾದ ಪತಿಗಳನ್ನು ವಿವಾಹವನ್ನು ಮಾಡಿದನು; ಆ ಪುತ್ರರೊಬ್ಬರೊಬ್ಬರಿಗೆ ನೂರು ನೂರು ಮಂದಿ ಪುತ್ರರಾದರು; ಆ ಪುತ್ರ ಪೌತ್ರಾದಿಗಳಿಂದ ಪಾಂಚಾಲ ದೇಶಗಳಲ್ಲಿ ಪುರಂಜನನ ವಂಶವು ವೃದ್ಧಿಪಡಿಸಲ್ಪಟ್ಟಿತು; ಆ ಪುರಂಜನನು ಪಿತೃಧನಭೋಕ್ತೃಗಳಾದ ಆ ಪುತ್ರಾದಿಗಳಲ್ಲಿಯೂ ಗೃಹಗಳನ್ನೂ ಭಂಡಾರಗಳನ್ನೂ ರಕ್ಷಿಸಿಕೊಂಡಿರುವ ಭೃತ್ಯರಲ್ಲಿಯೂ ಅತ್ಯಂತ ಮಮತೆಯಿಂದ ವಿಷಯಾಸಕ್ತನಾದನು! ಎಲೈ ಪ್ರಾಚೀನಬರ್ಹಿರಾಯನೇ, ಈರೀತಿ ಪುರಂಜನನು ಪಶುಹಿಂಸೆಗೆ ನಿಮಿತ್ತಗಳಾದ ಕ್ರತುಗಳಿಂದ ದೀಕ್ಷಿತನಾಗಿ ನೀನು ಹ್ಯಾಗೆ ಮಾಡಿದೆಯೋ ಹಾಗೆ ದೇವತೆಗಳನ್ನೂ ಭೂತಪತಿಗಳನ್ನೂ ಆರಾಧಿಸಿ ಕಾವ್ಯಫಲಾಪೇಕ್ಷೆಯಿಂದ ಕರ್ಮಗಳನ್ನಾಚರಿಸಿದನು; ಈಪ್ರಕಾರವಾಗಿ ಆತ್ಮಹಿತಗಳಾದ ವ್ಯಾಪಾರಗಳಲ್ಲಿ ಆಸಕ್ತನಾಗಿ ಪ್ರಮತ್ತನಾಗಿ ಕುಟುಂಬಾಸಕ್ತವಾದ ಮನಸ್ಸುಳ್ಳ ಪುರಂಜನನ ಬಳಿಗೆ ಸ್ತ್ರೀಯರಿಗೆ ಪ್ರತಿಕೂಲನಾದ ಕಾಲರೂಪನಾದ ಬಬ್ಬ ಪುರುಷನು ಬಂದನು; ಅಂದರೆ; ಜೀವನು ಪರಮಪುರುಷಾರ್ಥವಾದ ಮೋಕ್ಷಕ್ಕೆ ಪ್ರತಿಕೂಲಗಳಾದ ಪಶುಹಿಂಸಾತ್ಮಕಗಳಾದ ಕಾಮ್ಯಕರ್ಮಗಳನ್ನು ಮಾಡುತ ತತ್ವದೃಷ್ಟಿರಹಿತನಾದನೆಂಬ ತಾತ್ಪರ್ಯವು; ಆತನು ಚಂಡವೇಗನೆಂಬ ನಾಮಧೇಯವುಳ್ಳ ಗಂಧರ್ವರಾಜನು; ಆ ಗಂಧರ್ವರಾಜನಿಗೆ ಮುನ್ನೂರು ಅರವತ್ತುಮಂದಿ ಗಂಧರ್ವರು ಬಲಿಷ್ಠರಾದ ಭೃತ್ಯರು; ಅದೇಪ್ರಕಾರ ಮುನ್ನೂರು ಅರವತ್ತುಮಂದಿ ಸ್ತ್ರೀಯರು; ಅರೆವಾಸಿ ಶುಕ್ಲವರ್ಣವುಳ್ಳವರು; ಅರೆವಾಸಿ ಕೃಷ್ಣವರ್ಣವುಳ್ಳವರು; ಅರೆವಾಸಿ ಗಂಧರ್ವಪತ್ನಿಯರು ಚಂಡವೇಗನಿಗೆ ಅನುಚರರಾದ ಆ ಸ್ತ್ರೀಪುರುಷರು ಸಹಿತವಾಗಿ ಬಂದು ಸರ್ವಕಾಮಗಳಿಂದಲೂ ನಿರ್ಮಿತವಾದ ಪುರಂಜನನ ಪುರವನ್ನು ಮುತ್ತಿಕೊಂಡು ಧ್ವಂಸವನ್ನು ಮಾಡಲೋಸುಗ ಉಪಕ್ರಮಿಸಿದರು; ಆ ಪುರಾಧ್ಯಕ್ಷನಾದ ಪ್ರಜಾಗರನೆಂಬ ಪುರುಷನು ಅವರಿಗೆ ಅವಕಾಶವನ್ನು ಕೊಡದೆ ತಡೆದನು; ಅಂದರೆ: ಜೀವನು ಬುದ್ಧಿಯುಕ್ತನಾಗಿ ಕಾಮ್ಯಕರ್ಮಗಳಾದ ಯಾಗಾದಿಗಳನ್ನು ಮಾಡಿ ಆ ದೇಹದಲ್ಲಿ ಸುಖದಿಂದಿರುತಿರಲಾಗಿ ನೂರೆಂಭತ್ತು ಶುಕ್ಲಪಕ್ಷ ರಾತ್ರಿಗಳು ನೂರೆಂಭತ್ತು ಕೃಷ್ಣಪಕ್ಷ ರಾತ್ರಿಗಳು ಒಟ್ಟು ಮುನ್ನೂರು ಅರವತ್ತು ರಾತ್ರಿಗಳೊಡನೆ ಕೂಡಿದ ಮುನ್ನೂರು ಅರವತ್ತು ದಿವಸಗಳ ಪರಿವೃತ್ತಿರೂಪವಾದ ಸಂವತ್ಸರ ಸಮೂಹ ರೂಪವಾದ ವಾರ್ಧಿಕ್ಯವಯಸ್ಸು ದೇಹವನ್ನೈದಿ ಉಪದ್ರವನ್ನು ಮಾಡುತಲಿದ್ದಾಗ್ಯೂ ಪ್ರಾಣವು ಒಂದೇ ಆ ದೇಹದಲ್ಲಿ ಇತ್ತು ಎಂಬ ತಾತ್ಪರ್ಯವು; ಆ ಪುರಾಧ್ಯಕ್ಷನಾದ ಪ್ರಜಾಗರನು ಏಳನೂರ ಇಪ್ಪತ್ತುಮಂದಿ ಗಂಧರ್ವಸ್ತ್ರೀಪುರುಷರೊಡನೆ ನೂರು ವರ್ಷಪರ್ಯಂತವು ಬಲಿಷ್ಠನಾದಕಾರಣ ಒಬ್ಬನೇ ಯುದ್ಧವನ್ನು ಮಾಡಿ ಕ್ಷೀಣವಾದ ಬಲವುಳ್ಳವನಾಗಲಾಗಿ ರಾಷ್ಟ್ರಬಲ ವಾಹನಸಮೇತನಾದ ಪುರಂಜನನು ದೀನನಾಗಿ ಬಹು ಚಿಂತೆಯನ್ನೈದಿ ಒಬ್ಬನೇ ತನ್ನ ಭೃತ್ಯರಿಂದ ಯುಕ್ತನಾಗಿ ಪಾಂಚಾಲದೇಶಗಳಲ್ಲಿ ಕ್ಷುದ್ರಸುಖಗಳನ್ನನುಭವಿಸುತ ತನ್ನ ಭೃತ್ಯರಿಂದ ತಂದುಕೊಡಲ್ಪಟ್ಟ ಪದಾರ್ಥವನ್ನು ಭೋಗಿಸಿಕೊಂಡು ತನಿಗೆ ಬರುವ ಭಯವನ್ನರಿಯಲಿಲ್ಲ; ಅಂದರೆ: ಆ ಪ್ರಾಣವೂ ಕೂಡ ಕ್ರಮವಾಗಿ ಬಲಹೀನವಾಯಿತು; ಆಮೇಲೆ ಆ ಜೀವನು ಕಷ್ಟವನ್ನನುಭವಿಸುತಲಿದ್ದನು ಎಂಬ ತಾತ್ಪರ್ಯವು; ಹೀಗಿರುವಾಗ ಕಾಲಪುರುಷನ ಪುತ್ರಿಯೊಬ್ಬಳು ತನಿಗೆ ಅನುರೂಪನಾದ ವರನನ್ನು ಹುಡುಕಿಕೊಂಡು ಲೋಕತ್ರಯವನ್ನು ಸಂಚರಿಸಿದಾಗ್ಯೂ ಯಾವ ಪುರುಷನೂ ಇವಳನ್ನು ಸಮ್ಮತಿಸಲಿಲ್ಲ; ಅಂದರೆ: ಆ ಕನ್ಯೆಯು ತನ್ನ ದುರ್ಭಗತ್ವದಿಂದ ಇವಳು ದುರ್ಭಗೆಯೆಂದು ತಿಳಿದು ಒಬ್ಬರೂ ವಲ್ಲದೆ ಹೋದರು: ಅವಳು ಪೂರ್ವದಲ್ಲಿ ಯಯಾತಿಪುತ್ರನಾದ ಪೂರುರಾಯನಿಗೆ ರಾಜ್ಯಪ್ರಾಪ್ತಿರೂಪವಾದ ವರವನ್ನಿತ್ತಳು; ಅನಂತರದಲ್ಲಿ ಕಾಮಮೋಹಿತಳಾದ ಆ ಕಾಲಕನ್ಯೆಯು ಮಹಾವ್ರತವುಳ್ಳ ನನ್ನನ್ನು ಪತಿಯಾಗೆಂದು ಯಾಚಿಸಿದಳು! ಎಲೈ ಪ್ರಾಚೀನಬರ್ಹಿರಾಯನೆ, ಆ ಬಳಿಕ ನನ್ನಿಂದ ನಿರಾಕೃತಳಾದ ಆ ಕನ್ಯೆಯು ನನ್ನಲ್ಲಿ ಕೋಪವನ್ನು ಮಾಡಿ 'ಎಲೈ ನಾರ

ದಮುಷಿಯೇ, ನೀನು ನನ್ನ ಆಜ್ಞಾವಿಮುಖನಾದಕಾರಣ ನೀನು ನಿಂತ ಸ್ಥಳದಲ್ಲಿ ನಿಲ್ಲಬೇಡ' ಎಂದು ನನಗೆ ಶಾಪವನ್ನಿತ್ತಳು; ಅನಂತರದಲ್ಲಿ ನಿರಾಶೆಯನ್ನು ಮಾಡಿಕೊಂಡು ವ್ಯಸನಪಡುತಲಿರುವ ಆ ಕನ್ಯೆಯು ನನ್ನಿಂದ ಉಪದಿಷ್ಟಳಾಗಿ ಯವನೇಶ್ವರನಾದ ಭಯನೆಂಬ ಪುರುಷನನ್ನು ಪತಿಯನ್ನಾಗಿವರಿಸಿ ಆತನನ್ನು ಕುರಿತು 'ಎಲೈ ವೀರನಾದ ಭಯರಾಯನೆ, ಯವನರಿಗೆ ಅಧಿಪತಿಯಾಗಿ ಮಹಾ ವೀರನಾದ ನಿನ್ನನ್ನು ನಾನು ಪತಿಯನ್ನಾಗಿ ಅಪೇಕ್ಷಿಸುತ್ತೇನೆ; ನಿನ್ನ ವಿಷಯದಲ್ಲಿ ಮಾಡಲ್ಪಟ್ಟ ಸಂಕಲ್ಪವು ವ್ಯರ್ಥವಾಗುವದಿಲ್ಲ; ವೇದಗಳಿಂದ ಯಾವ ವಸ್ತುವು ಕೊಡತಕ್ಕದ್ದಾಗಿಯೂ ಗ್ರಹಿಸತಕ್ಕದ್ದಾಗಿಯೂ ಲೋಕಸಮ್ಮತವಾಗಿರುವದೋ ಆ ವಸ್ತುವನ್ನು ತಿಳಿದಾಗ್ಯೂ ಕೊಡದಿರುವವನು ಕೊಟ್ಟಾಗ್ಯೂ ಗ್ರಹಿಸದಿರುವವನು ಇವರಿಬ್ಬರೂ ಮೂಢರು; ಇವರನ್ನು ಕುರಿತು ಮಹಾತ್ಮರು ವ್ಯಸನಪಡುವರು! ಅದುಕಾರಣ ಎಲೈ ಮಂಗಳಕರನಾದ ಭಯರಾಯನೆ, ದೀನರಾದ ಜನರನ್ನು ಸಂರಕ್ಷಣೆ ಮಾಡುವದೇ ಪುರುಷಧರ್ಮವು' ಎಂಬ ಕಾಲಕನ್ಯೆಯ ವಾಕ್ಯವನ್ನು ಕೇಳಿ ಯವನೇಶ್ವರನಾದ ಭಯರಾಯನು ದೇವರಹಸ್ಯವಾದ ಒಂದು ಕಾರ್ಯವನ್ನು ಮಾಡಲಿಚ್ಛೆಯುಳ್ಳವನಾಗಿ ನಗುತ 'ಎಲೈ ಕಾಲಪುತ್ರಿಯೆ, ಅಮಂಗಳರೂಪಳಾಗಿ ಅಸಮ್ಮತಳಾದ ನಿನ್ನನ್ನು ಲೋಕವು ಸಮ್ಮತಿಸುವದಿಲ್ಲ; ಆದ್ದರಿಂದ ನಾನು ಜ್ಞಾನದೃಷ್ಟಿಯಿಂದ ಆಲೋಚಿಸಿ ನಿನಗೆ ಪತಿಯನ್ನು ಹೇಳುತ್ತೇನೆ; ನೀನು ಅವ್ಯಕ್ತವಾದ ವ್ಯಾಪಾರವುಳ್ಳವಳಾಗಿ ಒಬ್ಬರಿಗೂ ತಿಳಿಯಲ್ಪಡದೆ ಕರ್ಮಗಳಿಂದ ನಿರ್ಮಿತವಾದ ಈ ಲೋಕತ್ರಯವನ್ನನುಭವಿಸು; ಸರ್ವಲೋಕಗಳು ನಿನ್ನ ಪತಿಗಳಾಗುತಲಿವೆ; ನಿನ್ನ ಸಂಬಂಧಿಯಾದವನ ಸೇನೆಯೊಡನೆ ಸಹಿತಳಾಗಿ ಪ್ರಜೆಗಳನ್ನು ನಾಶಗೈವವಳಾಗು; ಪ್ರಜ್ವಾರನೆಂಬ ಈ ಪುರುಷನು ನಿನ್ನ ಭ್ರಾತೃವಾದವನು; ನೀನು ನನಗೆ ತಂಗಿಯು; ನಿಮ್ಮಿಬ್ಬರಿಂದಲೂ ಯುಕ್ತನಾಗಿ ನಾನು ಭಯಂಕರವಾದ ಸೇನೆಯುಳ್ಳವನಾಗಿ ಒಬ್ಬರಿಗೂ ಗೋಚರನಾಗದೆ ಲೋಕದಲ್ಲಿ ಸಂಚರಿಸುತ್ತೇನೆ' ಎಂದು ಭಯರಾಯನು ಕಾಲಕನ್ಯೆಯನ್ನು ಕುರಿತು ನುಡಿದನು."

೨೮ ನೇ ಅಧ್ಯಾಯ.

ಪುರಂಜನನಿಗೆ ವೈದರ್ಭೀಭಾವ ಪೂರ್ವಕವಾಗಿ ಮುಕ್ತಿಯುಂಟಾದದ್ದು.

"ಎಲೈ ಪ್ರಾಚೀನಬರ್ಹಿರಾಯನೆ, ಭಯರಾಯನ ಸೇನಾಜನರು ದೈವಪ್ರೇರಿತರಾಗಿ ಪ್ರಜ್ವಾರನಿಂದಲೂ ಕಾಲಕನ್ಯೆಯಿಂದಲೂ ಸಹಿತರಾಗಿ ಭೂಮಿಯಲ್ಲಿ ಸಂಚರಿಸುತ ಬಂದು ಸಮಯದಲ್ಲಿ ಪಾರ್ಥಿವ ಭೋಗಗಳಿಂದ ಯುಕ್ತವಾಗಿ ಮುದಿ ಸರ್ಪದಿಂದ ರಕ್ಷಿತವಾದ ಪುರಂಜನನ ಪುರವನ್ನಾಕ್ರಮಿಸಲೋಸುಗ ಬಂದರು; ಆಗ ಕಾಲಕನ್ಯೆಯು ಬಲಾತ್ಕಾರದಿಂದ ಪುರಂಜನನ ಪುರವನ್ನಾಕ್ರಮಿಸಿದಳು; ಅವಳಿಂದ ಆಕ್ರಮಿಸಲ್ಪಟ್ಟ ಪುರುಷನು ಆಕ್ಷಣದಲ್ಲೇ ನಿಸ್ಸಾರನಾಗುವನು! ಎಲೈ ಪ್ರಾಚೀನಬರ್ಹಿರಾಯನೆ, ಆ ಕಾಲಕನ್ಯೆಯಿಂದ ಆಕ್ರಮಿಸಲ್ಪಟ್ಟ ಆ ಪುರವನ್ನು ಯವನರು ಗುಂಪಾಗಿ ಒಂಭತ್ತು ಬಾಗಿಲುಗಳಲ್ಲಿಯೂ ಪ್ರವೇಶಿಸಿ ಪುರವನ್ನೆಲ್ಲವನ್ನೂ ಪೀಡಿಸಿದರು; ಆ ಪುರವು ಈರೀತಿ ಪೀಡಿತವಾಗುತಿರಲಾಗಿ ಅಭಿಮಾನಿಯಾದ ಪುರಂಜನನು ಬಹು ಕುಟುಂಬಿಯಾದ ಕಾರಣ ಮಮತಾನುಕೂಲನಾಗಿ ನಾನಾವಿಧ ತಾಪಗಳನ್ನೈದಿ ಕಾಲಕನ್ಯೆಯಿಂದ ಆಲಿಂಗಿತನಾಗಿ ದೀನನಾಗಿ ವಿಷಯಾಪೇಕ್ಷನಾಗಿ ಪ್ರಜ್ಞಾಹೀನನಾಗಿ ಗಂಧರ್ವರಿಂದಲೂ ಯವನರಿಂದಲೂ ಬಲಾತ್ಕಾರದಿಂದ ಪೀಡಿತನಾಗಿ ಸಾಮರ್ಥ್ಯರಹಿತನಾಗಿ ತನ್ನ ಪುರವು ಶಿಥಿಲವಾಗಿ ಪುತ್ರರು ಪೌತ್ರರು ಭೃತ್ಯರು ಮಂತ್ರಿಗಳು ಸ್ನೇಹಹೀನಳಾದ ಪತ್ನಿಯು ಇವರೆಲ್ಲರೂ ಉಪೇಕ್ಷಿಸಲಾಗಿ ಕಾಲಕನ್ಯೆಯಿಂದ ಗ್ರಸ್ತವಾದ ದೇಹವುಳ್ಳವನಾಗಿ ಶತ್ರುಗಳಿಂದ ಆಕ್ರಮಿಸಲ್ಪಟ್ಟ ಪಾಂಚಾಲದೇಶಗಳನ್ನು ನೋಡಿ ಅಪಾರವಾದ ಚಿಂತೆಯನ್ನು ಪಡದು ಅದಕ್ಕೆ ಪ್ರತೀಕಾರವನ್ನರಿಯದೆ ದೀನನಾಗಿ ನಿಸ್ಸಾರಗಳಾದ ವಿಷಯಗಳನ್ನಪೇಕ್ಷಿಸುತ ಪರಗತಿಯಲ್ಲಿ ವೈಕಲ್ಯವುಳ್ಳವನಾಗಿ ಪುತ್ರಸ್ನೇಹದಿಂದ ಪತ್ನೀ ಪುತ್ರಾದಿಗಳನ್ನು ಲಾಲಿಸುತ ಗಂಧರ್ವರಿಂದಲೂ ಯವನರಿಂದಲೂ ಆಕ್ರಾಂತನಾಗಿ ಜೀರ್ಣವಾದ ಆ ಪುರವನ್ನು ಬಿಡಲಾರದವನಾದಾಗ್ಯೂ ಬಿಡುವದಕ್ಕೆ ಯತ್ನವನ್ನು ಮಾಡಿ

ದನು; ಭಯರಾಯನಿಗೆ ಅಣ್ಣನಾದ ಪ್ರಜ್ವಾರನು ಮೊದಲೇ ಆ ಪುರವನ್ನು ಪ್ರವೇಶಿಸಿ ತಮ್ಮನಾದ ಭಯನಿಗೆ ಹಿತವನ್ನು ಮಾಡಲಿಚ್ಛೆಯಿಂದ ಆ ಪುರವನ್ನೆಲ್ಲವನ್ನು ದಹಿಸಿದನು; ಆಗ ಆ ಪುರಂಜನನು ಸಪರಿವಾರನಾಗಿ ಸ್ವಜನಸಹಿತನಾಗಿ ಪತ್ನಿಯೊಡನೆ ಕೂಡಿ ಸಂತಾಪವನ್ನೈದಿ ಯವನರಿಂದ ಆಕ್ರಮಿಸಲ್ಪಟ್ಟ ಅವಾಸಸ್ಥಾನವೂ ಕಾಲಕನ್ಯೆಯಿಂದ ಗ್ರಸ್ತವಾದ ದೇಹವೂ ಉಳ್ಳವನಾಗಿ ಪ್ರಂದಜ್ಞಿ ಪ್ರಜ್ವಾರನಿಂದ ತಪಿಸಲ್ಪಟ್ಟ ಅತಿ ಕಷ್ಟವೂ ಮಹಾ ಕಂಪವೂ ಉಳ್ಳವನಾಗಿ ಅಲ್ಲಿರುವದಕ್ಕೆ ನಿರ್ವಾಹವಿಲ್ಲದೆ ಅಗ್ನಿಯುಕ್ತವಾದ ವೃಕ್ಷದ ಕೋಟರಗ್ರಹೆಯಿಂದ ಸರ್ಪವು ಹೊರಟುಹೋಗುವಂತೆ ಆ ಪುರವನ್ನು ಬಿಟ್ಟು ಹೊರಟನು; ಯಾವಾಗ ಗಂಧರ್ವರಿಂದ ಅಪಹರಿಸಲ್ಪಟ್ಟ ಸಾಮರ್ಥ್ಯವುಳ್ಳವನಾದನೋ ಆಗ ಶಿಥಿಲಾಂಗನಾಗಿ ಬಲಿಷ್ಠರಾದ ಯವನರಿಂದ ಬಾಧಿತನಾಗಿ ರೋದನಗೈದನು; ಆ ಪುರಂಜನನು ಹೆಣ್ಣುಮಕ್ಕಳನ್ನೂ ಪುತ್ರಪೌತ್ರರನ್ನೂ ಸೊಸೆಯರನ್ನೂ ಅಳಿಯಂದಿರನ್ನೂ ಸಮಾಜಿಕರನ್ನೂ ಹೋದದ್ದು ಹೋಗಲಾಗಿ ಉಳಿದಿರುವ ತನ್ನ ಸ್ವತ್ತುಗಳನ್ನೂ ಗೃಹ ಕೋಶಾದಿಗಳನ್ನೂ ಚಿಂತಿಸುತ ನಾನು-ನನ್ನದು ಎಂಬ ದುರಭಿಮಾನದಿಂದ ದುರ್ಬುದ್ಧಿಯುಳ್ಳವನಾಗಿ ಪತ್ನಿವಿಯೋಗವು ಪ್ರಾಪ್ತವಾಗುತಿರಲು ದೀನನಾಗಿ ವ್ಯಸನಪಡುತ ನಾನು ಲೋಕಾಂತರವನ್ನೈದಿದರೆ ನನ್ನ ಪತ್ನಿಯು ಪುತ್ರ ಪೌತ್ರಾದಿ ಕುಟುಂಬ ಸಹಿತಳಾಗಿ ಅನಾಥಳಾಗಿ ಬಾಲಿಕೆಯಾದ ಒಬ್ಬಳೇ ಬಾಲಕರನ್ನು ಕುರಿತು ಶೋಕಪಡುತ ಹ್ಯಾಗಿದ್ದಾಳು; ನನ್ನಲ್ಲಿ ಪರಮ ಭಕ್ತಿ ವಿಶ್ವಾಸ ಪ್ರೇಮೆಗಳಿಂದ ಯುಕ್ತಳಾದ ನನ್ನ ಪತ್ನಿಯು ನಾನು ಭೋಜನಗೈಯದಿದ್ದರೆ ತಾನು ಭೋಜನಗೈಯುವದಿಲ್ಲ; ನಾನು ಸ್ನಾನವನ್ನು ಮಾಡಿದರೆ ತಾನೂ ಸ್ನಾನವನ್ನು ಮಾಡುವಳು; ನಾನು ಕೋಪಿಸಿಕೊಂಡರೆ ತಾನು ಭಯಪಡುವಳು; ನಾನು ಗದರಿಸಿದರೆ ಭಯದಿಂದ ಪ್ರತ್ಯುತ್ತರವನ್ನು ಕೊಡದೆ ಮೌನದಿಂದಿರುವಳು; ನನಿಗೆ ಕದಾಚಿತ್ತು ಅವಿವೇಕಬಂದಲ್ಲಿ ವಿವೇಕವನ್ನು ಬೋಧಿಸುವಳು; ನಾನು ಮನೆಯನ್ನು ಬಿಟ್ಟು ಗ್ರಾಮಾಂತರಕ್ಕೆ ಹೋಗಿದ್ದಾಗ ಬಹುಶೋಕಪಡುವಳು; ವೀರರಾದ ಪುತ್ರರನ್ನು ಹೆತ್ತವಳಾದಾಗ್ಯೂ ಗೃಹಸ್ಥಾಶ್ರಮವನ್ನನುವರ್ತಿಸಿಕೊಂಡಿರುವಳು; ಇಂಥಾ ನನ್ನ ಪತ್ನಿಯು ನಾನು ಲೋಕಾಂತರಗತನಾದರೆ ನನ್ನ ವಿರಹವನ್ನು ಸಹಿಸಲಾರದೆ ತಾನೂ ಮರಣವನ್ನೈದುವಳೋ ಏನೋ? ನಾನು ಹೋದಮೇಲೆ ನನ್ನ ಬಾಲಕರಾದ ಹೆಣ್ಣುಮಕ್ಕಳು ಗಂಡುಮಕ್ಕಳು ದೀನರಾಗಿ ದಿಕ್ಕಿಲ್ಲದೆ ಒಡೆದುಹೋದ ನಾವೆಯುಳ್ಳ ಸಮುದ್ರಮಧ್ಯದಲ್ಲಿ ತಗಲಿಕೊಂಡಿರುವ ಜನರಂತೆ ಹ್ಯಾಗೆ ಬದುಕ್ಯಾರು; ಅಂದರೆ: ಜೀವನು ಇಂದ್ರಿಯಬಲಗಳು ತಪ್ಪಿ ಪ್ರಾಣಶಕ್ತಿಯು ಮಟ್ಟಾಗಿ ಶಿಥಿಲವಾಗಿ ಶರೀರದಲ್ಲಿದ್ದುಕೊಂಡು ಕಷ್ಟಪಡುತಲಿರಲಾಗಿ ಜರೆಯು ಭಯವನ್ನು ಸಹಾಯಮಾಡಿಕೊಂಡು ವೈಷ್ಣವಜ್ವರವನ್ನು ಕರದುಕೊಂಡು ಆ ದೇಹವನ್ನು ಪ್ರವೇಶಿಸಲು ಬಿಟ್ಟುಹೋಗುವದಕ್ಕೆ ಮನಸ್ಸು ಬಾರದೆ ಪ್ರಯಾಸವಾಗಿ ಕಷ್ಟಪಟ್ಟನು ಎಂಬ ತಾತ್ಪರ್ಯವು; ಯವನರು ಬಂದು ಈ ಪುರಂಜನನನ್ನು ತಮ್ಮ ಸ್ಥಾನಕ್ಕೆ ಕರದುಕೊಂಡು ಹೋಗುತ್ತಿರಲಾಗಿ ಭೃತ್ಯರು ಅಳುತ ಸಂಗಡಲೇ ಹೋದರು; ಅಂದರೆ: ಈರೀತಿಯಲ್ಲಿ ಕಷ್ಟಪಡುತಲಿರುವ ಜೀವನು ಜರೆಯಿಂದಲೂ ಜ್ವರದಿಂದಲೂ ಭಯದಿಂದಲೂ ಅತಿ ವ್ಯಾಧಿಗಳಿಂದಲೂ ಪೀಡಿತನಾಗಿ ಆ ದೇಹವನ್ನು ಬಿಟ್ಟು ಹೊರಟುಹೋದನು; ಕರ್ಮೇಂದ್ರಿಯಗಳೈದು ಜ್ಞಾನೇಂದ್ರಿಯಗಳೈದು ಪಂಚಪ್ರಾಣಗಳು ಆ ಜೀವನ ಸಂಗಡಲೇ ಹೋದವು; ಇವಕ್ಕೆ ಪ್ರಧಾನವಾದ ಮನಸ್ಸೂ ಸಹ ಹೋಯಿತು ಎಂಬ ತಾತ್ಪರ್ಯವು; ಆ ಪುರಕ್ಕೆ ರಕ್ಷಕವಾದ ಸರ್ಪವು ಯವನರಿಂದ ಪೀಡಿತವಾಗಿ ಆ ಪುರವನ್ನು ಬಿಟ್ಟುಹೋಗಲಾಗಿ ಆ ಪುರವು ಶಿಥಿಲವಾಗಿ ನೆಲಸಮವಾಯಿತು; ಅಂದರೆ: ಪ್ರಾಣವಾಯುವಿನ ನಿರ್ಗಮನಾನಂತರದಲ್ಲಿ ಆ ದೇಹವು ದಹನಖನನಾದಿ ವ್ಯಾಪಾರಗಳಿಗೆ ಯೋಗ್ಯವಾಯಿತು ಎಂಬ ತಾತ್ಪರ್ಯವು; ಪುರಂಜನನು ಬಲಿಷ್ಠನಾದ ಯವನನಿಂದ ಎಳಕೊಂಡು ಹೋಗಲ್ಪಡುವವನಾಗಿ ಅಜ್ಞಾನಾವೃತನಾಗಿ ತನ್ನ ಮಿತ್ರನನ್ನು ಸಹಾಮರತನು; ಈ ಪುರಂಜನನಿಂದ ಯಾಗಗಳಲ್ಲಿ ಪೂರ್ವದಲ್ಲಿ ಸಂಹರಿಸಲ್ಪಟ್ಟ ಯಜ್ಞಪಶುಗಳು ಕೋಪಿಷ್ಠಗಳಾಗಿ ಇವನಿಂದ ಮಾಡಲ್ಪಟ್ಟ ಹಿಂಸೆಯನ್ನು ಸ್ಮರಿಸುತ ಕತ್ತರಿಗಳಿಂದ ಇವನನ್ನು ಛೇದಿಸಿದವು; ಆ ಪುರಂಜನನು ಸ್ತ್ರೀಸಂಗದಿಂದ ಚಪಲಚಿತ್ತನಾಗಿ ಅಪಾರವಾದ ತಮಸ್ಸಿನಲ್ಲಿ ಮುಳುಗಿ ಅನೇಕ ಸಂವತ್ಸರಗಳು ಮಹಾ ದುಃಖವನ್ನನುಭವಿಸಿ ಆ ಪತ್ನಿಯನ್ನೇ ಧ್ಯಾನಿಸುತ ವಿದರ್ಭದೇಶಪತಿಯಾದ ರಾಜಶ್ರೇಷ್ಠನ ಮನೆಯಲ್ಲಿ ಉತ್ತಮ ಸ್ತ್ರೀಯಾಗಿ ಹುಟ್ಟಿ

ದನು ; ಆ ಬಳಿಕ ಶತ್ರುಸಂಹಾರಕನಾದ ಪಾಂಡ್ಯದೇಶಾಧಿಪತಿಯಾದ ಮಲಯಧ್ವಜನು ಯುದ್ಧದಲ್ಲಿ ಅರಸುಗಳನ್ನು ಜಯಿಸಿ ಪರಾಕ್ರಮವೇ ಶುಲ್ಕದ್ರವ್ಯವಾಗುಳ್ಳ ಆ ವೈದರ್ಭಿಯನ್ನು ವಿವಾಹ ಮಾಡಿಕೊಂಡನು ; ಅಂದರೆ : ಆ ಜೀವನು ಪೂರ್ವಶರೀರವನ್ನು ತ್ಯಾಗಂಗೈದು ತನ್ನಿಂದ ಮಾಡಲ್ಪಟ್ಟ ಪಾಪ ಪುಣ್ಯಾನುಸಾರವಾಗಿ ಪಾಪ ಪುಣ್ಯಗಳನ್ನನುಭವಿಸಿ ಕಾಮ್ಯಕರ್ಮಗಳಾದ ಯಾಗಾದ್ಯನುಷ್ಠಾನಗಳನ್ನು ಮಾಡಿದ್ದರಿಂದ ಉಂಟಾದ ಪುಣ್ಯಶೇಷದಿಂದ ಕರ್ಮಭೂಮಿಯಲ್ಲಿ ಉತ್ತಮವಾದ ಮತ್ತೊಂದು ದೇಹವನ್ನು ಪಡೆದು ಪೂರ್ವ ವಾಸನಾಫಲದಿಂದ ಭಗವದ್ಭಕ್ತರ ಸಂಗವನ್ನೈದಿದನು ಎಂಬ ತಾತ್ಪರ್ಯವು ; ಆ ಸ್ತ್ರೀಯಲ್ಲಿ ಮಲಯಧ್ವಜನು ಒಂದು ಹೆಣ್ಣುಮಗಳನ್ನು ಕನಿಷ್ಠರಾದ ಏಳುಮಂದಿ ಗಂಡುಮಕ್ಕಳನ್ನು ಪಡೆದನು ; ಅಂದರೆ : ಜೀವನು ಭಗವದ್ಭಕ್ತಿಯನ್ನೈದಿ ಭಗವಂತನ ಕಥಾಶ್ರವಣವು ಭಗವಂತನ ನಾಮಸಂಕೀರ್ತನವು ಭಗವಂತನ ಸ್ಮರಣವು ಭಗವಂತನ ಪಾದಸೇವನವು ಭಗವಂತನ ಅರ್ಚನವು ಭಗವಂತನ ವಂದನವು ಭಗವಂತನ ದಾಸ್ಯವು ಎಂಬ ಸಪ್ತವಿಧ ಭಕ್ತಿಭೇದಗಳನ್ನೈದಿದನೆಂಬ ತಾತ್ಪರ್ಯವು ; ಅವರು ಏಳುಮಂದಿಯು ದ್ರಾವಿಡದೇಶಪತಿಗಳಾದರು ; ಆ ಏಳುಮಂದಿಗೂ ಒಬ್ಬೊಬ್ಬನಿಗೆ ಕೋಟಿ ಕೋಟಿಮಂದಿ ಪುತ್ರರು ಜನಿಸಿದರು ; ಅವರಿಂದ ಭೂಮಂಡಲವು ಮನ್ವಂತರವು ಸಹಾ ಅನುಭವಿಸಲ್ಪಡುತ್ತೆ ; ಅಂದರೆ : ಜೀವನು ಈ ಪ್ರಕಾರದಿಂದ ಭಕ್ತಿಮಾರ್ಗಗಳ ಭೇದವನ್ನೆಲ್ಲವನ್ನು ಸಂಪಾದಿಸಿದನು ಎಂಬ ತಾತ್ಪರ್ಯವು ; ಮೊದಲೇ ಹುಟ್ಟಿದ ಪತಿವ್ರತೆಯಾದ ಮಲಯಧ್ವಜನ ಮಗಳನ್ನು ಅಗಸ್ತ್ಯನು ವಿವಾಹಮಾಡಿಕೊಳ್ಳಲು ಆ ಸ್ತ್ರೀಯಲ್ಲಿ ದೃಢಚ್ಯುತನೆಂಬ ಮುನಿಯು ಹುಟ್ಟಿದನು ; ಆ ಮುನಿಗೆ ಪದ್ಮವಾಹನನೆಂಬ ಋಷಿಯು ಹುಟ್ಟಿದನು ; ರಾಜರ್ಷಿಯಾದ ಆ ಮಲಯಧ್ವಜನು ಭೂಮಿಯನ್ನು ಮಕ್ಕಳಿಗೆ ಹಂಚಿಕೊಟ್ಟು ಶ್ರೀಕೃಷ್ಣನನ್ನಾರಾಧಿಸಲಿಚ್ಛೆಯುಳ್ಳವನಾಗಿ ಕುಲಾಚಲಕ್ಕೆ ಹೋದನು ; ವಿದರ್ಭರಾಜ ಪುತ್ರಿಯಾದ ಮಲಯಧ್ವಜರಾಜ ಪತ್ನಿಯು ಪುತ್ರರನ್ನು ಗೃಹಗಳನ್ನು ಭೋಗಗಳನ್ನು ಸಹ ಬಿಟ್ಟು ಪತಿಯಾದ ಪಾಂಡ್ಯರಾಯನನ್ನನುಸರಿಸಿ ಚಂದ್ರಿಕೆ ಚಂದ್ರನಂತೆ ಸಂಗಡಲೇ ಹೋದಳು ; ಆ ಬಳಿಕ ಪಾಂಡ್ಯರಾಯನು ಆ ಕುಲಾಚಲದಲ್ಲಿ ಚಂದ್ರವಶಾ ಎಂಬ ನಾಮಧೇಯವುಳ್ಳ ತಾಮ್ರಪರ್ಣಿಯ ಪುಣ್ಯೋದಕಗಳಿಂದ ಬಾಹ್ಯಾಭ್ಯಂತರ ಪಾಪಗಳನ್ನು ಪರಿಹರಿಸಿ ಕಂದಮೂಲ ಫಲಗಳಿಂದಲೂ ಪುಷ್ಪಗಳಿಂದಲೂ ಪರ್ಣಗಳಿಂದಲೂ ತೃಣಗಳಿಂದಲೂ ಉದಕಗಳಿಂದಲೂ ಪ್ರಾಣಧಾರಣೆಯನ್ನು ಮಾಡಿಕೊಂಡು ಕೃಶದೇಹನಾಗಿ ತಪವಂಗೈದನು ; ಸಮದೃಷ್ಟಿಯುಳ್ಳವನಾಗಿ ಶೀತೋಷ್ಣಗಳು ವಾಯುವರ್ಷಗಳು ಕ್ಷುತ್ತೃಷ್ಣೆಗಳು ಪ್ರಿಯಾಪ್ರಿಯಗಳು ಸುಖದುಃಖಗಳು ಮೊದಲಾದ ದ್ವಂದ್ವಗಳನ್ನು ಸಹಿಸಿ ಇಂದ್ರಿಯಗಳನ್ನು ಪ್ರಾಣವಾಯುಗಳನ್ನು ಚಿತ್ತವನ್ನು ಸಹ ನಿಗ್ರಹಿಸಿ ತಪಸ್ಸಿನಿಂದಲೂ ಉಪಾಸನೆಯಿಂದಲೂ ಯಮನಿಯಮಗಳಿಂದಲೂ ಕಾಮಾದಿ ವಾಸನೆಗಳನ್ನು ದಹಿಸಿ ಬ್ರಹ್ಮನಲ್ಲಿ ಚಿತ್ತವನ್ನು ಸ್ಥಿರೀಕರಿಸಿ ಭಗವಂತನಾದ ವಾಸುದೇವನಲ್ಲಿ ಭಕ್ತಿಯನ್ನಿಟ್ಟು ದೇಹಾದಿಗಳಲ್ಲಿ ದೃಷ್ಟಿಯನ್ನಿರಿಸದೆ ದೇವಮಾನದಲ್ಲಿ ನೂರುವರುಷ ಪರ್ಯಂತವು ಒಂದೇಕಡೆಯಲ್ಲಿ ಮೋಟುಮರದಂತೆ ಚಲಿಸದಿದ್ದನು ; ಆ ಪಾಂಡ್ಯರಾಯನು ದೇಹಾದಿ ಪ್ರಕಾಶನಾಗಿ ಸಾಕ್ಷಿಯಾಗಿ ದೇಹಾದಿಗಳಿಗೆ ವ್ಯತಿರಿಕ್ತನಾದ ಪರಮಾತ್ಮನನ್ನು ತನ್ನಲ್ಲೀ ಅಭೇದದಿಂದ ಭಾವಿಸುತ ಸ್ವಪ್ನದಲ್ಲಿ ತನ್ನ ಶಿರಚ್ಛೇದನವನ್ನು ತಾನೇ ನೋಡುವಂತೆ ತನ್ನನ್ನು ತಾನೇ ನೋಡುತ ಶಾಂತನಾದನು ; ಸಾಕ್ಷಾದ್ಗುರುವಾಗಿ ಭಗವಂತನಾದ ಶ್ರೀಹರಿಯಿಂದ ಹೇಳಲ್ಪಟ್ಟದ್ದಾಗಿ ಎಲ್ಲಾಕಡೆಯಲ್ಲೂ ಪ್ರಕಾಶಿಸುವ ಶುದ್ಧವಿಜ್ಞಾನ ದೀಪದಿಂದ ಸ್ವಸ್ವರೂಪವನ್ನು ತಿಳಿದವನಾಗಿ ತನ್ನನ್ನು ಪರಬ್ರಹ್ಮನಲ್ಲಿ ಸೇರಿಸಿ ಪರಬ್ರಹ್ಮನನ್ನು ತನ್ನಲ್ಲಿ ಸಂಯೋಜಿಸಿ ಅಭೇದದಿಂದ ನೋಡುತ ಆ ದೃಷ್ಟಿಯನ್ನು ಲಯವನ್ನು ಮಾಡಿ ಸಂಸಾರವನ್ನು ತಪ್ಪಿಸಿಕೊಂಡು ಮುಕ್ತನಾದನು ; ವೈದರ್ಭಿಯಾದ ಪಾಂಡ್ಯರಾಯನ ಪತ್ನಿಯು ಭೋಗಗಳನ್ನು ಬಿಟ್ಟು ಪತಿಯನ್ನೇ ದೇವತೆಯನ್ನಾಗಿ ಭಾವಿಸಿ ಪರಮ ಧರ್ಮಜ್ಞನಾದ ಪಾಂಡ್ಯರಾಯನನ್ನು ಪೂಜಿಸಿದಳು ; ನಾರುವಸ್ತ್ರಧಾರಿಣಿಯಾಗಿ ಉಪವಾಸವ್ರತದಿಂದ ಕೃಶಳಾಗಿ ಜಡೆಗಟ್ಟಿದ ಕೇಶಪಾಶವುಳ್ಳವಳಾಗಿ ಪತಿಯ ಸಮೀಪದಲ್ಲಿ ಉಪಶಾಂತಳಾಗಿ ಶಾಂತವಾದ ಅಗ್ನಿಯಂತೆ ಪ್ರಕಾಶಿಸಿದಳು ; ಸ್ಥಿರಾಸನವನ್ನೈದಿರುವ ಪತಿಯನ್ನು ಪೂರ್ವದಂತೆ ಉಪಚರಿಸುವಳಾಗಿ ಪತಿಯ ಪಾದಗಳನ್ನೊತ್ತುತ್ತ ಆ ಪಾದಗಳಲ್ಲಿ ಉಷ್ಣವನ್ನು ಯಾವಾಗ ಕಾಣಲಿಲ್ಲವೋ ಆಗ ವೈದರ್ಭಿಯು ತನ್ನ ಗುಂಪಿ

ನಿಂದ ತಪ್ಪಿಸಿಕೊಂಡು ಬಂದ ಹೆಣ್ಣು ಹುಲ್ಲೆಯಂತೆ ದುಃಖಿತಳಾಗಿ ಬಾಷ್ಪಪೂರ್ಣನಯನೆಯಾಗಿ ಬಂಧುರಹಿತಳಾಗಿ ದೀನಳಾದ ತನ್ನನ್ನು ಕುರಿತು ಶೋಕಪಡುತ್ತ ಅರಣ್ಯಮಧ್ಯದಲ್ಲಿ ಕಣ್ಣೀರುಗಳಿಂದ ಸ್ತನಗಳನ್ನು ನೆನೆಯಿಸುತ್ತ ಘಟ್ಟಿಯಾಗಿ ರೋದನಂಗೈದಳು. 'ಎಲೈ ರಾಜರ್ಷಿಯೇ, ಏಳು ಏಳು ; ಸಮುದ್ರವೇ ಒಡ್ಯಾಣವಾಗುಳ್ಳ ಭೂಮಿಯು ಶತ್ರುಗಳಾದ ಕ್ಷತ್ರಿಯಾಧಮರಿಂದ ಭಯಪಡುತ್ತಾಳೆ; ಈ ಭೂಮಿಯನ್ನು ರಕ್ಷಿಸು' ಎಂದು ಪ್ರಲಾಪಂಗೈಯ್ಯುತ್ತ ಅರಣ್ಯದಲ್ಲಿ ಪತಿಯನ್ನನುವರ್ತಿಸುತ್ತ ಪತಿಯ ಪಾದಗಳಲ್ಲಿ ಬಿದ್ದು ಅಳುತ್ತ ಕಣ್ಣೀರುಗಳನ್ನು ಸುರಿಸುತ್ತ ಕಾಷ್ಠಗಳಿಂದ ಚಿತಿಯನ್ನು ಮಾಡಿ ಅದರಮೇಲೆ ಪತಿಯ ಶರೀರವನ್ನಿರಿಸಿ ಅಗ್ನಿಯಿಂದ ದಹಿಸಲು ಆಲೋಚಿಸಿ ಸಹಗಮನಕ್ಕೆ ಪ್ರಯತ್ನಂಗೈದಳು ; ಆಗ ಆಕೆಗೆ ಪೂರ್ವಸ್ನೇಹಿತನಾದ ಜ್ಞಾನನಿಷ್ಠನಾದ ಒಬ್ಬ ಬ್ರಾಹ್ಮಣನು ಬಂದನು ; ಅಂದರೆ : ಆ ಜೀವನು ಈಪ್ರಕಾರದಿಂದ ಭಕ್ತಿಮಾರ್ಗಗಳನ್ನೈದಿ ವಿರಕ್ತನಾಗಿ ಪೂರ್ಣಜ್ಞಾನನಾದ ಸದ್ಗುರುವನ್ನೈದಿ ಧ್ಯಾನಧಾರಣಾದಿಗಳಿಂದ ಅಜ್ಞಾನವನ್ನು ಪರಿಹರಿಸಿಕೊಂಡು ಸ್ವಸ್ವರೂಪಾನುಸಂಧಾನವನ್ನು ಬಹುತರವಾಗಿ ಅಭ್ಯಾಸಂಗೈಯುತ್ತಿರಲು ಆಗ ಅವಿದ್ಯಾನಿವೃತ್ತಿಪೂರ್ವಕವಾಗಿ ಪರಬ್ರಹ್ಮ ಸಾಕ್ಷಾತ್ಕಾರವನ್ನು ಪಡೆದನು ಎಂದು ತಾತ್ಪರ್ಯವು! ಎಲೈ ಪ್ರಾಚೀನಬರ್ಹಿರಾಯನೇ, ಆಗ ಆ ಬ್ರಾಹ್ಮಣನು ಮೃದುವಾದ ಸಮಾಧಾನೋಕ್ತಿಗಳಿಂದ ಆ ವೈದರ್ಭಿಯನ್ನು ಕುರಿತು 'ಎಲೈ ಸ್ತ್ರೀಯೇ, ನೀನು ಯಾರು ? ಯಾರ ಮಗಳು ? ಇಲ್ಲಿ ಮಲಗಿರುವವನ್ಯಾರು ? ಯಾರನ್ನು ಕುರಿತು ಶೋಕಪಡುತ್ತೀಯೆ ? ನಿನ್ನ ಮಿತ್ರನಾದ ನನ್ನನ್ನು ನೀನು ಬಲ್ಲೆಯಾ ? ಪೂರ್ವದಲ್ಲಿ ನನ್ನ ಸ್ನೇಹದಿಂದ ನೀನು ಸಮಸ್ತ ಸುಖಗಳನ್ನನುಭವಿಸಲಿಲ್ಲವೆ? ಈಗಲಾದರೂ ನನಿಗೆ ಒಬ್ಬ ಮಿತ್ರನಿದ್ದನೆಂಬ ಅರ್ಥವನ್ನು ಬಲ್ಲೆಯೋ ಮರೆತುಬಿಟ್ಟೆಯೊ ? ನೀನು ನನ್ನನ್ನು ಬಿಟ್ಟು ಒಂದು ಸ್ಥಾನವನ್ನಪೇಕ್ಷಿಸಿ ಭೂಸಂಬಂಧಿಗಳಾದ ಭೋಗಗಳಲ್ಲಿ ಆಸಕ್ತಳಾಗಿ ಹೊರಟುಹೋದೆ; ನಾನು ನೀನು ಮಾನಸಸರೋವರದಲ್ಲಿ ಹಂಸಪಕ್ಷಿಗಳಾಗಿ ಅನೇಕಸಹಸ್ರ ಸಂವತ್ಸರಗಳು ಸ್ಥಾನವಿಲ್ಲದೆ ಇದ್ದೆವು ; ಆಗ ನೀನು ನನ್ನನ್ನು ಬಿಟ್ಟು ಗ್ರಾಮಸುಖೇಚ್ಛೆಯಿಂದ ಭೂಮಿಗೆ ಹೋಗಿ ಸ್ಥಾನವನ್ನು ಹುಡುಕುತ್ತ ಒಂದು ಸಮಯದಲ್ಲಿ ಸ್ತ್ರೀಯಿಂದ ನಿರ್ಮಾಣಂಗೈಯಲ್ಪಟ್ಟದ್ದಾಗಿ ಐದು ಉದ್ಯಾನಗಳು ಒಂಭತ್ತು ಬಾಗಿಲುಗಳು ಒಬ್ಬ ಪಾಲಕನು ಉಳ್ಳದ್ದಾಗಿ ಮೂರು ಪ್ರಾಕಾರಗಳುಳ್ಳ ಒಂದು ಸ್ಥಾನವನ್ನು ಕಂಡೆ ; ಆ ಸ್ಥಾನವು ಆರು ಕುಲಗಳುಳ್ಳದ್ದು; ಐದು ಅಂಗಡಿಗಳುಳ್ಳದ್ದು; ಅಂದರೆ : ಶಬ್ದ ಸ್ಪರ್ಶ ರೂಪ ರಸಗಂಧಗಳೆಂಬ ಪಂಚೇಂದ್ರಿಯಾರ್ಥಗಳೇ ಉದ್ಯಾನಗಳು ; ಪ್ರಾಣವಾಯುಸಂಚಾರಯೋಗ್ಯಗಳಾದ ನವರಂಧ್ರವೇ ಬಾಗಿಲುಗಳು ; ಕುಲಗಳೆಂದರೆ ಜ್ಞಾನೇಂದ್ರಿಯಪಂಚಕಯುಕ್ತವಾದ ಮನಸ್ಸು ಇವು ಆರು ಕುಲಗಳು ; ಕರ್ಮೇಂದ್ರಿಯಗಳು ಐದು ಅಂಗಡಿಗಳು ; ಪಂಚಭೂತಗಳೇ ಮೂಲಕಾರಣವು ; ಸ್ತ್ರೀಯೇ ಮಾಯೆಯು ಬುದ್ಧಿಯೆನಿಸುವದು ; ಆ ಬುದ್ಧಿಯೇ ಪುರಕ್ಕೆ ಅಧಿಪತಿಯಾದವಳು ; ಪುರವೇ ಶರೀರವು ; ತೇಜೋ ಜಲ ಪೃಥ್ವಿಗಳು ಪ್ರಾಕಾರಗಳು ; ಶಕ್ತ್ಯಾಧೀನನಾಗಿ ಪುರುಷನು ಈ ಶರೀರವೆಂಬ ಪುರದಲ್ಲಿ ಪ್ರವೇಶಿಸಿ ಮೂಢನಾಗುವನು ; ಆದುಕಾರಣ ನೀನು ಪೂರ್ವಜನ್ಮದಲ್ಲಿ ಪುರಂಜನನೆಂಬ ಪುರುಷನು ; ಆ ಪುರವನ್ನು ಪ್ರವೇಶಿಸಿ ಸ್ತ್ರೀವಶನಾಗಿ ಬ್ರಹ್ಮಸ್ಮರಣವನ್ನು ಕೂಡ ಬಿಟ್ಟು ಸ್ತ್ರೀಸಹಿತನಾಗಿ ರಮಿಸುತ್ತ ಆ ಸ್ತ್ರೀಸಂಘದಿಂದ ಇಂಥಾ ಪಾಪಿಷ್ಠವಾದ ಅವಸ್ಥೆಯನ್ನೈದಿದೆ ; ನೀನು ವಿದರ್ಭರಾಜನ ಪುತ್ರಿಯೂ ಅಲ್ಲ ; ಪಾಂಡ್ಯರಾಯನು ನಿನ್ನ ಸುಹೃತ್ತೂ ಅಲ್ಲ ; ಪೂರ್ವಜನ್ಮದಲ್ಲಿ ಪುರಂಜನಿಯೆಂಬ ಸ್ತ್ರೀಗೆ ಪತಿಯೂ ಅಲ್ಲ ; ಆ ಪುರಂಜನಿಯು ನಿನ್ನ ನವದ್ವಾರಗಳುಳ್ಳ ಪುರದಲ್ಲಿ ತಡೆಕೊಂಡಿದ್ದಳು , ಪೂರ್ವಜನ್ಮದಲ್ಲಿ ಪುರಂಜನನೆಂಬ ಪುರುಷನು ಈ ಜನ್ಮದಲ್ಲಿ ವಿದರ್ಭರಾಯನ ಮಗಳಾದ ಸ್ತ್ರೀಯೆಂದು ನಿನ್ನನ್ನು ನೀನು ತಿಳಿದುಕೊಂಡಿದ್ದೀಯೆ ; ಅವೆರಡೂ ಅಲ್ಲ ; ನನ್ನಿಂದ ಸೃಷ್ಟಿಸಲ್ಪಟ್ಟ ಮಾಯೆಯು ನಾವಿಬ್ಬರೂ ಹಂಸಗಳು ; ನಮ್ಮ ಸ್ವರೂಪವನ್ನು ನೋಡು ; ನಾನೇ ನೀನು ; ನನಿಗಿಂತಲೂ ಬೇರೆ ಇಲ್ಲ ; ನೀನು ನನ್ನನ್ನು ಚನ್ನಾಗಿ ನೋಡು ; ವಿದ್ವಾಂಸರಾದ ಯೋಗಿಗಳು ನನಗೂ ನಿನಗೂ ಸ್ವಲ್ಪವಾದರೂ ಭೇದವನ್ನು ನೋಡುವದಿಲ್ಲ ; ಹಾಗಾದರೆ ಸರ್ವಜ್ಞತ್ವ ಕಿಂಚಿಜ್ಞತ್ವಗಳು ಭಿನ್ನಗಳಾಗಿ ಹ್ಯಾಗಿರುವವೆಂದರೆ : ಪುರುಷನು ತನ್ನ ದೇಹವನ್ನು ಕನ್ನಡಿಯಲ್ಲಿಯೂ ಚಕ್ಷುಸ್ಸಿನಲ್ಲಿಯೂ ಎರಡು ಪ್ರಕಾರವಾಗಿ ಹ್ಯಾಗೆ ನೋಡುವನೋ ಹಾಗೆ ಚಿದಾತ್ಮ ಪರಮಾತ್ಮರಿಗೆ ಭೇದ ತೋರುವದು

ಉಪಾಧಿಯಿಂದಲೇಹೊರತು ಸ್ವಾಭಾವಿಕವಲ್ಲ' ಎಂದು ಈ ರೀತಿಯಲ್ಲಿ ಹಂಸನಿಂದ ಬೋಧಿಸಲ್ಪಟ್ಟ ಹಂಸವು ಮಹಾಹಂಸ ವಿಯೋಗದಿಂದ ನಷ್ಟವಾದ ಪ್ರಜ್ಞೆಯನ್ನು ಪುನಃ ಪಡೆದು ಸ್ವಸ್ಥನಾದನು ; ಅಂದರೆ : ಜೀವನು ಈಪ್ರಕಾರ ಗುರೂಪದೇಶದಿಂದ ಸ್ವಸ್ವರೂಪವನ್ನರಿದು ತನಗೂ ಪರಬ್ರಹ್ಮನಿಗೂ ಅಭೇದವನ್ನು ದೃಢವಾಗಿ ನಿಶ್ಚಯಿಸಿ ತಾನೇ ಪರಬ್ರಹ್ಮನೆಂದು ದೃಢವಾಗಿ ತಿಳಿದು ಮುಕ್ತಿಯನ್ನೈದಿದನೆಂಬ ತಾತ್ಪರ್ಯವು! ಎಲೈ ಪ್ರಾಚೀನಬರ್ಹಿರಾಯನೆ, ಈ ಅಧ್ಯಾತ್ಮ ರಹಸ್ಯವು ಪರೋಕ್ಷಭಾವದಿಂದ ನಿನಗೆ ತೋರಿಸಲ್ಪಟ್ಟಿತು ; ರಾಜಕಥಾವ್ಯಾಜದಿಂದ ಗೂಢಾರ್ಥವಾಗಿ ಯಾಕೆ ಹೇಳಬೇಕೆಂದರೆ : ಭಗವಂತನು ಪರೋಕ್ಷಪ್ರಿಯನಾದಕಾರಣ ನಿನಗೂ ಪರೋಕ್ಷವಾಗಿ ನನ್ನಿಂದ ನಿರೂಪಿಸಲ್ಪಟ್ಟಿತು " ಎಂದು ನಾರದ ಋಷಿಯು ಪ್ರಾಚೀನಬರ್ಹಿರಾಯನಿಗೆ ನಿರೂಪಿಸಿದನು.

೨೯ನೇ ಅಧ್ಯಾಯ.

ಅಧ್ಯಾತ್ಮ ರಹಸ್ಯವು.

"ಎಲೈ ವಿದುರನೆ, ಆ ಬಳಿಕ ಪ್ರಾಚೀನಬರ್ಹಿರಾಯನು ನಾರದನನ್ನು ಕುರಿತು 'ಎಲೈ ನಾರದ ಋಷಿಯೆ, ನಿನ್ನಿಂದ ನಿರೂಪಿಸಲ್ಪಟ್ಟ ಅರ್ಥವು ನನಗೆ ಚನ್ನಾಗಿ ತಿಳಿಯಲಿಲ್ಲ; ಪ್ರಾಜ್ಞರಾದ ಯೋಗಿಗಳು ಆ ಅರ್ಥವನ್ನು ತಿಳಿಯುತ್ತಾರೆ; ಕರ್ಮಮೋಹಿತರಾದ ನಾವು ತಿಳಿಯಲಾರೆವು' ಎಂಬ ರಾಜನ ವಾಕ್ಯವನ್ನು ಕೇಳಿ ನಾರದ ಋಷಿಯು 'ಎಲೈ ಪ್ರಾಚೀನಬರ್ಹಿರಾಯನೆ, ಪುರಂಜನನೆಂದರೆ ಜೀವನು ; ಯಾವಕಾರಣದಿಂದ ಸ್ವಕರ್ಮವಶದಿಂದ ಏಕಪಾದ ದ್ವಿಪಾದ ಚತುಷ್ಪಾದ ಬಹುಪಾದಗಳುಳ್ಳ ಶರೀರಗಳು ಪಾದರಹಿತಗಳಾದ ಶರೀರಗಳು ಇವುಗಳನ್ನುಂಟುಮಾಡುತ್ತಾನೆಯೋ ಅದರಿಂದ ಪುರಂಜನನೆಂಬ ಹೆಸರು ಜೀವನಿಗೆ ಹೇಳಲ್ಪಟ್ಟಿತು ; ಆ ಜೀವನಿಗೆ ಅವಿಜ್ಞಾತನಾಮವುಳ್ಳ ಮಿತ್ರನು ಈಶ್ವರನು; ಹ್ಯಾಗೆಂದರೆ : ಆ ಈಶ್ವರನು ನಾಮರೂಪಕ್ರಿಯೆಗಳಿಂದ ಪುರುಷರಿಂದ ತಿಳಿಯಲ್ಪಡುವನಲ್ಲ; ಜೀವನು ಯಾವಾಗ ಮಾಯಾಗುಣಗಳನ್ನು ಸಾಕಲ್ಯದಿಂದ ಗ್ರಹಿಸಲಿಚ್ಛೈಸಿದನೋ ಆಗ ನವರಂಧ್ರಗಳು ಎರಡು ಹಸ್ತಗಳು ಎರಡು ಪಾದಗಳೂ ಉಳ್ಳ ಶರೀರವನ್ನು ತನಗೆ ಸಮ್ಮತವಾದದ್ದನ್ನಾಗಿ ತಿಳಿದನು ; ನಾನು—ನನ್ನದು ಎಂಬ ಅಹಂಕಾರ ಮಮಕಾರಗಳಿಗೆ ನಿಯಾಮಕವಾದ ಬುದ್ಧಿಯೇ ಸ್ತ್ರೀಯು ; ಜೀವನು ಆ ಬುದ್ಧಿಯನ್ನವಲಂಬಿಸಿ ಈ ದೇಹದಲ್ಲಿ ಇಂದ್ರಿಯಗಳಿಂದ ವಿಷಯಗಳನ್ನನುಭವಿಸುತ್ತಾನೆ ; ಜ್ಞಾನೇಂದ್ರಿಯ ಕರ್ಮೇಂದ್ರಿಯಗಳು ಆ ಜೀವನಿಗೆ ಮಿತ್ರರು ; ಆ ಇಂದ್ರಿಯಜನ್ಯ ವೃತ್ತಿಗಳೇ ಸಖೀರು ; ಪ್ರಾಣವಾಯುವೇ ಶರೀರಕ್ಕೆ ರಕ್ಷಕವಾದ ಸರ್ಪವು ; ಪಂಚವೃತ್ತಿಗಳುಳ್ಳದ್ದಾದಕಾರಣ ಪಂಚಮುಖಗಳುಳ್ಳದ್ದೆಂದು ಹೇಳಲ್ಪಟ್ಟಿತು ; ಬೃಹದ್ಬಲನೆಂಬ ಸೇನಾಪತಿಯು ಅಂದರೆ ; ದಶೇಂದ್ರಿಯಗಳಿಗೂ ಪ್ರಭುವಾದದ್ದು ಮನಸ್ಸೆಂದು ತಿಳಿಯಬೇಕು ; ಪಾಂಚಾಲದೇಶ ಅಂದರೆ : ಪಂಚವಿಷಯಗಳು ಅದರ ಮಧ್ಯದಲ್ಲೇ ನವರಂಧ್ರಗಳುಳ್ಳ ಶರೀರವು ಪುರವೆನಿಸಿಕೊಳ್ಳುವದು ; ನೇತ್ರಗಳೆರಡು ನಾಸಿಕಗಳೆರಡು ಕರ್ಣಗಳೆರಡು ಶಿಶ್ನ ಗುದಗಳು ಎರಡು ಇವುಗಳು ದ್ವಾರಗಳು ; ಆಯಾಯ ಇಂದ್ರಿಯಗಳೊಡನೆ ಯುಕ್ತನಾಗಿ ಜೀವನು ಆಯಾಯ ದ್ವಾರಗಳಿಂದ ಸಂಚರಿಸುವನು ; ನೇತ್ರಗಳು ನಾಸಿಕಗಳು ಮುಖವು ಈ ಐದು ಪೂರ್ವದ್ವಾರಗಳು ; ದಕ್ಷಿಣ ಕರ್ಣವೇ ದಕ್ಷಿಣದ್ವಾರವು ; ವಾಮ ಕರ್ಣವೇ ಉತ್ತರದ್ವಾರವೆನಿಸುವದು ; ಶಿಶ್ನ ಗುದಗಳೆರಡು ಪಶ್ಚಿಮಬಾಗಿಲುಗಳು ; ಖದ್ಯೋತವು ಆವಿರ್ಮುಖಿಯು ಎಂದು ಇವೆರಡು ವಾಮ ದಕ್ಷಿಣ ನೇತ್ರಗಳು ; ಅವುಗಳಿಂದ ಶುಕ್ಲಾದಿ ರೂಪಪ್ರಕಾಶವುಂಟಾಗುವದು ; ಜೀವನು ಅವೆರಡರಿಂದಲೇ ರೂಪವನ್ನು ನೋಡುವನು ; ನಳಿನೀ ನಾಳಿನೀ ಎಂಬ ಎರಡು ನಾಶಿಕಾರಂಧ್ರಗಳು ; ಗಂಧವೇ ಅವೆರಡಕ್ಕೂ ವಿಷಯವು ; ನಾಶಿಕಾರಂಧ್ರದಲ್ಲಿ ಉಚ್ಛ್ವಾಸ ನಿಶ್ವಾಸ ವಾಯುವೇ ಅವಧೂತನೆಂಬ ಹೆಸರುಳ್ಳದ್ದು ; ಮುಖವೇ ಮುಖ್ಯವೆಂಬ ದ್ವಾರವು ; ವಿಪಣವೆಂದರೆ ವಾಕ್ಕು ; ರಸಜ್ಞವೆಂದರೆ ರಸನೇಂದ್ರಿಯವು ; ಮಧುರಾದಿ ರಸವೇ ವಿಷಯವು ; ಜನಪದವೆಂದರೆ ಅನ್ನವು ; ಪಿತೃಹೂಯೆಂದರೆ ದಕ್ಷಿಣಕರ್ಣವು ; ದೇವಹೂಯೆಂದರೆ ಉತ್ತರ ಕರ್ಣವು ; ಪ್ರವೃತ್ತಿ

ನಿವೃತ್ತಿಮಾರ್ಗಪ್ರತಿಪಾದಕವಾದ ಶಾಸ್ತ್ರವೇ ಪಾಂಚಾಲವೆನಿಸುವದು ; ಶೃತಧನ್ವನೆಂದರೆ ಶ್ರೋತ್ರೇಂದ್ರಿಯವು ; ಪಿತೃಲೋಕಗಮನವೂ ದೇವಲೋಕಗಮನವೂ ಶ್ರೋತ್ರೇಂದ್ರಿಯದಿಂದುಂಟಾಗುವದು ; ಆಸುರೀಯೆಂಬ ಅಧೋದ್ವಾರವೇ ಮೇಢ್ರವು ; ವ್ಯವಾಯುವೆಂದರೆ ಸ್ತ್ರೀರತಿಯು ; ದುರ್ಮದವೆಂದರೆ ಉಪಸ್ಥೇಂದ್ರಿಯವು ; ನಿಋತಿಯೆಂದರೆ ಗುದವು ; ವೈಶಸವೆಂದರೆ ನರಕವು ; ಅಂಧಗಳು ಅಂದರೆ ಹಸ್ತಪಾದಗಳು ; ಹಸ್ತಗಳಿಂದ ಪುರುಷನು ಕೆಲಸಗಳನ್ನು ಮಾಡುವನು ; ಪಾದಗಳಿಂದ ಸಂಚರಿಸುವನು ; ಅಂತಃಪುರವೆಂದರೆ ಹೃದಯವು ; ವಿಷೂಚಿಯೆಂದರೆ ಮನಸ್ಸು ; ಆ ಮನಸ್ಸಿನ ಗುಣಗಳಾದ ತಮಸ್ಸತ್ವ ರಜಸ್ಸುಗಳಿಂದ ಕ್ರಮವಾಗಿ ಪುರುಷನು ಮೋಹವನ್ನೂ ಪ್ರಸನ್ನತ್ವವನ್ನೂ ಹರ್ಷವನ್ನು ಐದುವನು ; ಬುದ್ಧಿಯು ಸ್ವಪ್ನಜಾಗರಗಳಲ್ಲಿ ಹ್ಯಾಗೆ ಹ್ಯಾಗೆ ವಿಕಾರವನ್ನೈದುತ್ತಿಯೋ ಹಾಗೆ ಹಾಗೆ ಇಂದ್ರಿಯಗಳನ್ನು ಪ್ರೇರಿಸಿದರೆ ಪುರುಷನು ಆ ಬುದ್ಧಿಗುಣಗಳಿಂದ ಅನುರಕ್ತನಾಗುತ್ತಾನೆ ; ದೇಹವೇ ರಥವು ; ಇಂದ್ರಿಯಗಳೇ ಅಶ್ವಗಳು ; ಸಂವತ್ಸರಗತಿಯೇ ವೇಗವು ; ಸಂವತ್ಸರವು ಅದರಿಂದಾಗುವ ವಯಸ್ಸು ಇವೆರಡು ನೊಗಗಳು ; ಪುಣ್ಯಪಾಪಗಳೇ ಭಂಡಿಗಳು ; ಮೂರು ಗುಣಗಳೇ ಧ್ವಜಗಳು ; ಪಂಚಪ್ರಾಣಗಳೇ ಕಟ್ಟುಗಳು ; ಮನಸ್ಸೇ ಹಗ್ಗವು ; ಬುದ್ಧಿಯೇ ಸಾರಥಿಯು ; ಹೃದಯವೇ ಕುಳಿತುಕೊಳ್ಳುವ ಸ್ಥಾನವು ; ದ್ವಂದ್ವಗಳೇ ನೊಗಗಳ ಬಂಧನ ಸ್ಥಾನಗಳು ; ಶಬ್ದಾದಿ ಪಂಚವಿಷಯಗಳೇ ಆಯುಧಗಳನ್ನಿರಿಸುವ ಸ್ಥಾನಗಳು ; ಸಪ್ತಧಾತುಗಳೇ ಗೌಸುಗಳು ; ಪಂಚಕರ್ಮೇಂದ್ರಿಯಗಳೇ ಗತಿವಿಶೇಷಗಳು ; ವಿಷಯಾಭಿನಿವೇಶವೇ ವಿಕ್ರಮವು ; ಮೃಗತೃಷ್ಣೆಯಂತೆ ಮಿಥ್ಯಾಭೂತ ವಿಷಯಗಳಲ್ಲಿ ಸಂಚಾರವು ; ಮನಸ್ಸೇ ಸೇನಾಪತಿಯು ; ಪಂಚವಿಷಯಭೋಗಗಳೆಂಬ ವಿಷಯಗಳಲ್ಲಿ ಆಸಕ್ತವಾಗಿರುವದು ; ಗಂಧರ್ವರು ಅಂದರೆ ಹಗಲುಗಳು ; ಗಂಧರ್ವಸ್ತ್ರೀಯರುಗಳೇ ರಾತ್ರಿಗಳು ; ಈ ಅಹೋರಾತ್ರಿಗಳು ಮುನ್ನೂರು ಅರವತ್ತು ಪರಿಭ್ರಮಣದಿಂದ ಆಯುಸ್ಸನ್ನಪಹರಿಸುವದು ; ಕಾಲಕನ್ಯೆಯೆಂದರೆ ಸಾಕ್ಷಾಜ್ಜರೆಯು ; ಯಾವ ಜನರೂ ಆ ಜರೆಯನ್ನು ಸಮ್ಮತಿಸುವದಿಲ್ಲ ; ಯವನೇಶ್ವರನಾದ ಮೃತ್ಯುವು ಆ ಜರೆಯನ್ನು ಲೋಕಕ್ಷಯಾರ್ಥವಾಗಿ ತಂಗಿಯನ್ನು ಮಾಡಿಕೊಂಡನು ; ಯವನಪತಿಯ ಭೃತ್ಯರು ಆಧಿವ್ಯಾಧಿಗಳು ಪ್ರಾಣಿಗಳನ್ನು ಪೀಡಿಸುವದರಲ್ಲಿ ಶೀಘ್ರವೇಗವುಳ್ಳ ಶೀತೋಷ್ಣರೂಪದಿಂದ ಎರಡುಪ್ರಕಾರವಾದ ಜ್ವರವೇ ಪ್ರಜ್ವಾರವೆನಿಸುವದು ' ಎಂದು ನಾರದನು ಪೂರ್ವೋಕ್ತವಾದ ಪುರಂಜನನ ಕಥೆಗೆ ರಹಸ್ಯಾರ್ಥವನ್ನು ವಿವರಿಸಿ ಅನಂತರದಲ್ಲಿ ಜೀವನು ಕ್ಲೇಶಪಡುವ ಪ್ರಕಾರವನ್ನು ವಿವರಿಸುತ 'ಎಲೈ ಪ್ರಾಚೀನಬರ್ಹಿರಾಯನೆ, ಈಪ್ರಕಾರವಾಗಿ ಜೀವನು ಆಧ್ಯಾತ್ಮಿಕಾದಿ ತಾಪತ್ರಯದಿಂದ ಕ್ಲೇಶಪಡುತ ತಮೋವೃತನಾಗಿ ನೂರುವರ್ಷಪರ್ಯಂತವು ದೇಹದಲ್ಲಿ ಅಹಂಮಮತೆಗಳಿಂದ ಪ್ರಾಣಧರ್ಮಗಳಾದ ಕ್ಷುತ್ತೃಷ್ಣೆಗಳನ್ನು ಇಂದ್ರಿಯಧರ್ಮಗಳಾದ ಅಂಧತ್ವ ಬಧಿರತ್ವಾದಿಗಳನ್ನು ಕಾಮಾದಿ ಮನೋಧರ್ಮಗಳನ್ನು ಸಹ ನಿರ್ಗುಣನಾದ ಆತ್ಮನಲ್ಲಿ ಆರೋಪಿಸಿ ವಿಷಯಸುಖಲೇಶಗಳನ್ನು ಧ್ಯಾನಿಸುತ ಕರ್ಮಾಸಕ್ತನಾಗಿ ಶರೀರದಲ್ಲಿ ಮಲಗಿರುತ್ತಾನೆ ; ಜೀವನು ಸ್ವಪ್ರಕಾಶಪ್ರಭಾವವುಳ್ಳವನಾದಾಗ್ಯೂ ತಮೋವೃತನಾಗಿ ಪರಮಗುರುವಾದ ಭಗವಂತನನ್ನರಿಯದೆ ಮಾಯಾಗುಣಗಳಾದ ವಿಷಯಗಳಲ್ಲಿ ಯಾವಾಗ ಆಸಕ್ತನಾಗುತ್ತಾನೆಯೋ ಆಗ ಜೀವನು ಗುಣಾಭಿಮಾನಿಯಾಗಿ ಪೂರ್ವಕರ್ಮವಾಸನಾರೂಪವಾಗಿ ಸಾತ್ವಿಕ ರಾಜಸ ತಾಮಸ ಕರ್ಮಗಳನ್ನು ಮಾಡುತ್ತಾನೆ ; ಸಾತ್ವೀಕ ಕರ್ಮದಿಂದ ಪ್ರಕಾಶಾಧಿಕ್ಯವುಳ್ಳ ಲೋಕಗಳನ್ನೈದುವನು ; ದುಃಖವೇ ಪರ್ಯವಸಾನದಲ್ಲಿ ಉಳಿಯುವ ಕ್ರಿಯಾಯಾಸವುಳ್ಳ ಲೋಕಗಳನ್ನು ರಾಜಸ ತಾಮಸಗಳಿಂದ ಐದುವನು ; ಅತಿ ದುಃಖರೂಪಗಳಾದ ಲೋಕಗಳನ್ನು ತಾಮಸಕರ್ಮಗಳಿಂದ ಪಡೆಯುವನು ; ಒಂದು ಕಡೆಯಲ್ಲಿ ಪುರುಷನು ಒಂದು ಕಡೆಯಲ್ಲಿ ಸ್ತ್ರೀಯು ಒಂದು ಸಮಯದಲ್ಲಿ ನಪುಂಸಕನು ದೇವನು ಮನುಷ್ಯನು ಪಶುಜಾತಿಯು ಎಂಬದಾಗಿ ಕರ್ಮತಾರತಮ್ಯದಿಂದ ಉತ್ಪತ್ತಿಯು ಜೀವನಿಗೆ ಉಂಟಾಗುವದು ; ಹಾಗೆ ಕ್ಷುತ್ತಿನಿಂದ ಪೀಡಿತವಾದ ಶ್ವಾನವು ದೀನವಾಗಿ ಮನೆಮನೆಗೂ ಹೋಗಿ ಸುತ್ತುತಿರಲು ಪ್ರಾರಬ್ಧಾಧೀನವಾಗಿ ಅನ್ನವನ್ನೇ ಪಡೆಯುವದೋ ಇಲ್ಲದೆ ದಂಡಪ್ರಹಾರವನ್ನೇ ಐದುವದೊ ಹಾಗೆ ಜೀವನು ಕಾಮಾಸಕ್ತನಾಗಿ ನಾನಾಪ್ರಕಾರವಾದ ಮಾರ್ಗದಲ್ಲಿ ಸುತ್ತುತ ಉಪರಿಲೋಕದಲ್ಲಾಗಲಿ ಮಧ್ಯಲೋಕದಲ್ಲಾಗಲಿ ಆ ಪ್ರಾರಬ್ಧಾನುಸಾರವಾಗಿ ಸುಖದುಃಖಗಳನ್ನನುಭವಿಸುವನು ; ಆಧ್ಯಾತ್ಮಿಕ ಆಧಿದೈವಿಕ

ಆಧಿಭೌತಿಕಗಳೆಂಬ ದುಃಖಗಳಲ್ಲಿ ಯಾವದಾದರೂ ಒಂದು ದುಃಖವು ಜೀವನಿಗೆ ತಪ್ಪುವದಿಲ್ಲ ; ಪ್ರತೀಕಾರವು ಮಾಡ
ಲ್ಪಟ್ಟಾಗ್ಯೂ ಒಂದು ದುಃಖವು ಸಿದ್ಧವಾಗಿರುವದು ; ಪುರುಷನು ಮಹತ್ತಾದ ಭಾರವನ್ನು ತಲೆಯಮೇಲೆ ಹೊತ್ತು
ಕೊಂಡು ಹೊರಲಾರದೆ ಆ ಭಾರವನ್ನು ಹೆಗಲಮೇಲೆ ಇಳಿಸಿಕೊಂಡರೆ ತಲೆಯಮೇಲಿನ ಭಾರವು ತಪ್ಪಿದಾಗ್ಯೂ
ಭುಜದಮೇಲಿನ ಭಾರವು ತಪ್ಪುವದಿಲ್ಲ ; ಆ ದುಃಖಕ್ಕೆ ಪ್ರತೀಕಾರವನ್ನು ಮಾಡಿಕೊಂಡರೆ ಆ ದುಃಖವು ಇದ್ದೇ
ಇರುತ್ತದೆ ; ದುಃಖಕ್ಕೆ ಮೂಲಭೂತಗಳಾದ ಕರ್ಮಗಳನ್ನು ಪ್ರತಿಕ್ರಿಯಾಭೂತಗಳಾದ ಕರ್ಮಗಳನ್ನು ಪ್ರತಿಕ್ರಿ
ಯಾರೂಪಗಳಾದ ಕರ್ಮಗಳಿಂದ ತಪ್ಪಿಸುವದಕ್ಕೆ ಆಗುವದಿಲ್ಲ ; ಆ ಕರ್ಮಗಳೆರಡು ಅಜ್ಞಾನಕೃತಗಳಾದಕಾರಣ ಒಂ
ದರಿಂದೊಂದಕ್ಕೆ ಪರಿಹಾರವಿಲ್ಲ ; ಸ್ವಪ್ನವನ್ನನುಭವಿಸುವಕಾಲದಲ್ಲಿ ಸ್ವಪ್ನದಲ್ಲಿ ಸ್ವಪ್ನವಾದರೆ ಆ ಸ್ವಪ್ನದಿಂದ ಪೂರ್ವ
ಸ್ವಪ್ನಕ್ಕೆ ನಿವೃತ್ತಿಯುಂಟಾಗುವದಿಲ್ಲ ; ಅವೆರಡು ಅಜ್ಞಾನಜನ್ಯಗಳಾದಕಾರಣ ಎಚ್ಚರಿತರೆ ಅವೆರಡು ನಿವೃತ್ತಿ
ಗಳಾಗುವವು ; ಮಿಥ್ಯಾರೂಪಗಳಾದ ವಸ್ತುಗಳು ಇಲ್ಲದದ್ದಾಗ್ಯೂ ಜೀವನಿಗೆ ಸಂಸಾರವು ನಿವೃತ್ತವಾಗುವದಿಲ್ಲ ;
ಉಪಾಧಿಭೂತವಾದ ಮನಸ್ಸಿನಿಂದ ಸ್ವಪ್ನದಲ್ಲಿ ಸಂಚರಿಸುವ ಪುರುಷನಿಗೆ ವಸ್ತುಗಳು ಇಲ್ಲದಿದ್ದಾಗ್ಯೂ ಹ್ಯಾಗೆ ತೋ
ರುವದೋ ಹಾಗೆ ತೋರುವವು ; ಅದುಕಾರಣ ಪುರುಷಾರ್ಥಸ್ವರೂಪನಾದ ಆತ್ಮನಿಗೆ ಯಾವ ಜ್ಞಾನದಿಂದ ವಿಪತ್ಪರಂ
ಪರಾರೂಪವಾದಸಂಸಾರವು ಪ್ರಾಪ್ತವಾಗುತ್ತದೆಯೋ ಅಂಥಾ ಅಜ್ಞಾನಕ್ಕೆ ನಿವೃತ್ತಿಯು ಪರಮಗುರುವಾದ ವಾಸುದೇ
ವನ ಭಕ್ತಿಯಿಂದಲೇ ಉಂಟಾಗಬೇಕು ; ಭಗವಂತನಾದ ವಾಸುದೇವನಲ್ಲಿ ಮಾಡಲ್ಪಟ್ಟ ಭಕ್ತಿಯೋಗವು ಚನ್ನಾಗಿ
ವೈರಾಗ್ಯವನ್ನು ಜ್ಞಾನವನ್ನು ಸಹ ಉಂಟುಮಾಡುತ್ತದೆ ! ಎಲೈ ಅರಸೇ, ಅಚ್ಯುತನ ಕಥೆಗಳು ನಿರಂತರದಲ್ಲಿಯೂ
ಶ್ರವಣಂಗೈಯುತ ಅಧ್ಯಯನಂಗೈಯುತಲಿರುವ ಪುರುಷನಿಗೆ ಭಕ್ತಿಯೋಗವು ಶೀಘ್ರದಲ್ಲುಂಟಾಗುವದು ; ನಿರ್ಮ
ಲಚಿತ್ತರಾಗಿ ಭಗವದ್ಭಕ್ತರಾದ ಸಜ್ಜನರು ಭಗವಂತನ ಗುಣಕೀರ್ತನೆಯಲ್ಲಿ ಆಸಕ್ತವಾದ ಚಿತ್ತವುಳ್ಳವರಾಗಿ ಎಲ್ಲಿ
ರುತ್ತಾರೆಯೋ ಅಲ್ಲಿ ಮಹಾತ್ಮರಿಂದ ಗಾನಂಗೈಯಲ್ಪಡುವ ಭಗವಂತನ ಚರಿತ್ರಗಳೆಂಬ ಅಮೃತನದಿಗಳು ಎಲ್ಲಾ
ಕಡೆಯಲ್ಲಿಯೂ ಪ್ರವಹಿಸುತಲಿರುತಲಿವೆ ; ಯಾವ ಪುರುಷರು ಶ್ರೋತ್ರಗಳಿಂದ ಆ ನದಿಗಳನ್ನು ನೋಡಿ ತೃಪ್ತ
ರಲ್ಲದೆ ಅಧಿಕವಾಗಿ ಪಾನಂಗೈಯುತ್ತಾರೆಯೋ ಆ ಪುರುಷರಿಗೆ ಕ್ಷುತ್ತೃಷ್ಣೆಯು ಭಯವು ಶೋಕವು ಅಜ್ಞಾನವು
ಉಂಟಾಗುವದಿಲ್ಲ ; ಪ್ರಾಣಿಸಮೂಹವು ಸ್ವಭಾವಜನ್ಯಗಳಾದ ಕ್ಷುತ್ತೃಷ್ಣಾದಿಗಳಿಂದ ಪೀಡಿತವಾಗಿ ಭಗವಂತನ
ಕಥಾಮೃತಪ್ರವಾಹದಲ್ಲಿ ಆಸಕ್ತಿಯನ್ನು ಮಾಡುವದಿಲ್ಲ ! ಎಲೈ ಪ್ರಾಚೀನಬರ್ಹಿರಾಯನೇ, ಚತುರ್ಮುಖನು
ಭಗವಂತನಾದ ಪರಮೇಶ್ವರನು ಮನುವು ದಕ್ಷಾದಿಪ್ರಜೇಶರು ಸನಕಾದಿಗಳು ಮರೀಚಿಯು ಅತ್ರಿಯು ಅಂಗಿರಸ್ಸು
ಪುಲಸ್ತ್ಯನು ಪುಲಹನು ಕ್ರತುವು ಭೃಗುವು ವಶಿಷ್ಠನು ನಾನೂ ಕಾಣೆನು ; ಇವರೆಲ್ಲರೂ ವಾಕ್ಪತಿಗಳಾದಾಗ್ಯೂ
ತಪೋವಿದ್ಯಾ ಸಮಾಧಿಗಳಿಂದ ನೋಡುವವರಾದಾಗ್ಯೂ ಸರ್ವಸಾಕ್ಷಿಯಾಗಿರುವ ಪರಮೇಶ್ವರನನ್ನು ಕಾಣರು ; ಅದೇ
ನುಕಾರಣವೆಂದರೆ ; ಮಹಾ ವಿಸ್ತಾರವುಳ್ಳ ಅಪಾರವಾದ ಶಬ್ದಬ್ರಹ್ಮರೂಪವಾದ ವೇದದಲ್ಲಿ ಸಂಚರಿಸುವವರಾಗಿ
ಇಂದ್ರಾದಿ ತತ್ತದ್ದೇವತಾಪ್ರತಿಪಾದಕಗಳಾದ ಮಂತ್ರ ಅಂಗಗಳಿಂದ ಪರಿಚ್ಛಿನ್ನವಾದ ಆಯಾ ದೇವತಾರೂಪದಿಂದ
ಭಜಿಸುವರಾದಾಗ್ಯೂ ಪರಮೇಶ್ವರನನ್ನರಿಯರು ; ಭಗವಂತನು ಯಾವಾಗ ಯಾವವನಲ್ಲಿ ಅನುಗ್ರಹವನ್ನು ಮಾಡು
ತ್ತಾನೆಯೋ ಆಗ ಆ ಭಗವಂತನಿಂದ ಭಾವಿಸಲ್ಪಟ್ಟ ಪುರುಷನು ಲೋಕವೇದಗೋಚರವಾದ ಕಾವ್ಯಬುದ್ಧಿಯನ್ನು
ಬಿಡುವನು ! ಎಲೈ ಅರಸೇ, ಅದುಕಾರಣ ನೀನು ಪರಮಾರ್ಥದಂತೆ ಪ್ರಕಾಶಿಸುವ ಫಲಶ್ರವಣಾದಿಗಳಿಂದ ಶ್ರೋತ್ರ
ಗಳಿಗೆ ಇಂಪಾಗಿರುವ ಬ್ರಹ್ಮಸ್ವರೂಪಕ್ಕೆ ದೂರಗಳಾದ ಕರ್ಮಗಳಲ್ಲಿ ಅಜ್ಞಾನದಿಂದ ಪುರುಷಾರ್ಥ ಬುದ್ಧಿಯನ್ನು
ಮಾಡಬೇಡ ; ಮಲಿನಬುದ್ಧಿಯುಳ್ಳವರು ವೇದವನ್ನು ಕರ್ಮಪ್ರತಿಪಾದಕವನ್ನಾಗಿ ಹೇಳುತ್ತಾರೆ ; ಅವರು ವೇದ
ಜ್ಞರಲ್ಲ ; ಅವರು ಸ್ವರೂಪಭೂತನಾಗಿ ಪರಮಾತ್ಮನಾದ ಜನಾರ್ದನನನ್ನು ಅರಿತವರಲ್ಲ ; ನೀನು ಅತಿಮೂರ್ಖ
ನು ; ಪೂರ್ವಾಗ್ರಗಳಾದ ದರ್ಭೆಗಳಿಂದ ಭೂಮಿಯಲ್ಲವನ್ನು ಹರಡಿ ಬಹುಪಶುಗಳನ್ನು ಸಂಹರಿಸಿ ನಾನು ಆಹಿತಾ
ಗ್ನಿಶ್ರೇಷ್ಠನೆಂಬ ದುರಭಿಮಾನಾಹಂಕಾರಗಳಿಂದ ಸ್ತಬ್ಧನಾಗಿ ಪರಮಪುರುಷಾರ್ಥಪ್ರದವಾದ ಉತ್ಕೃಷ್ಟಕರ್ಮವ
ನ್ನು ತಿಳಿಯಲಿಲ್ಲ ; ಯಾವದು ಶ್ರೀಹರಿತೋಷಕರವಾದದ್ದೋ ಅದೇ ಕರ್ಮವು ; ಆ ಭಗವಂತನಲ್ಲಿ ನಿಲ್ಲಿಸಲ್ಪಟ್ಟ

ಬುದ್ಧಿಯು ಯಾವದುಂಟೋ ಅದೇ ವಿದ್ಯೆಯು; ಹರಿಯು ಪ್ರಾಣಿಗಳಿಗೆ ಆತ್ಮನು; ಈಶ್ವರನು ಜಗತ್ತಿಗೆ ಕಾರಣನು; ಆ ಭಗವಂತನ ಪಾದಮೂಲವೇ ದೇಹಿಗಳಿಗೆ ರಕ್ಷಕವು; ಆ ಹರಿಚರಣವೇ ಪ್ರಾಣಿಗಳಿಗೆ ಕ್ಷೇಮಪ್ರದವಾದದ್ದು; ಆ ಭಗವಂತನು ಭಜಿಸುವ ಭಕ್ತನಿಗೆ ಪ್ರಿಯತಮನು; ಅವನಿಗೆ ಸ್ವಲ್ಪವೂ ಭಯವಿಲ್ಲ; ಈ ಅರ್ಥವನ್ನು ಯಾವವನು ತಿಳಿಯುತ್ತಾನೆಯೋ ಅವನೇ ಪ್ರಾಜ್ಞನು; ಅವನೇ ಗುರುವು; ಅವನೇ ಶ್ರೀಹರಿಯು! ಎಲೈ ಪುರುಷಶ್ರೇಷ್ಠನೇ, ನಿನ್ನಿಂದ ಮಾಡಲ್ಪಟ್ಟ ಪ್ರಶ್ನೆಗೆ ಉತ್ತರವನ್ನು ಹೇಳಿದೆನು; ಇನ್ನು ರಹಸ್ಯವಾದ ಒಂದು ಅರ್ಥವನ್ನು ಹೇಳುತ್ತೇನೆ ಕೇಳು: 'ಎಲೈ ಪ್ರಾಚೀನಬರ್ಹಿರಾಯನೇ, ಪುಷ್ಪಗಳಿಗೆ ಆಶ್ರಯವಾದ ವನದಲ್ಲಿ ತುಚ್ಛವಾದ ತೃಣವನ್ನು ಭಕ್ಷಿಸುತ ಸ್ತ್ರೀಮೃಗದಿಂದ ಮಿಳಿತವಾಗಿ ಭ್ರಮರಗಳ ಗಾನದಲ್ಲಿ ಆಸಕ್ತವಾದ ಶ್ರೋತ್ರವುಳ್ಳದ್ದಾಗಿ ಮಾಂಸವನ್ನು ಭಕ್ಷಿಸುವ ತೋಳಗಳನ್ನು ಗಣನೆಮಾಡದೆ ಹಿಂಭಾಗದಲ್ಲಿ ಕಿರಾತನ ಬಾಣಗಳಿಂದ ಪೆಟ್ಟಿ ಬಿದ್ದು ಹೋಗುತಲಿರುವ ಹುಲ್ಲೆಯನ್ನು ನೋಡು; ಇದರ ಪ್ರಕೃತಾರ್ಥವೇನಂದರೆ: ಪುಷ್ಪಗಳಂತೆ ನೇತ್ರಗಳಿಗೆ ಇಂಪಾಗಿರುವ ಸ್ತ್ರೀಯರ ಗೋಷ್ಠಿಯಲ್ಲಿ ಪುಷ್ಪ ಮಧುರ ಗಂಧಗಳಂತೆ ತುಚ್ಛಗಳಾದ ಕಾಮ್ಯಕರ್ಮಫಲಗಳಾದ ಕಾಮಸುಖವನ್ನು ಹುಡುಕುತ್ತಿರುವವನಾಗಿ ಸ್ತ್ರೀಯುಕ್ತನಾಗಿ ಕಿವಿಗಳಿಗೆ ನಿಪುಣಗಳಾದ ಜನರ ಬೆಲ್ಲದಂಥ ಮಾತುಗಳಲ್ಲಿ ಬೆರಗಾಗಿ ಆಯುಸ್ಸನ್ನು ಕ್ಷಯಮಾಡುವ ಅಹೋರಾತ್ರಿಗಳನ್ನು ಗಣನೆಮಾಡದೆ ಹಿಂದೆ ಹೊಂಚುಹಾಕಿಕೊಂಡು ಕಾದಿರುವ ಮೃತ್ಯುವಿನಿಂದ ಪೀಡಿತನಾಗಿರುವ ನಿನ್ನನ್ನು ಭಾವಿಸು! ಎಲೈ ಅರಸೇ, ಅದುಕಾರಣ ನೀನು ಮೃತ್ಯುಬೇಟೆಯನ್ನು ವಿಚಾರಿಸಿ ಹೃದಯದಲ್ಲಿ ಚಿತ್ತವನ್ನು ನಿಲ್ಲಿಸು; ಬಾಹ್ಯವೃತ್ತಿಗಳನ್ನೂ ದುರಾಲಾಪ ಶ್ರವಣಾದಿಗಳನ್ನೂ ಅಸತ್ಪುರುಷ ಸಮೂಹಕ್ಕೆ ಯೋಗ್ಯವಾದ ಸ್ತ್ರೀಭ್ರಮೆಯನ್ನೂ ಬಿಡು; ಭಗವಂತನನ್ನು ಸಂತೋಷಪಡಿಸಿ ಕ್ರಮವಾಗಿ ಉಪಶಾಂತನಾಗು' ಎಂದು ನಾರದನಿಂದ ಹೇಳಲ್ಪಟ್ಟ ಅರ್ಥವನ್ನು ಕೇಳಿ ಪ್ರಾಚೀನಬರ್ಹಿರಾಯನು ಪುನಶ್ಚ ನಾರದನನ್ನು ಕುರಿತು 'ಎಲೈ ನಾರದ ಋಷಿಯೇ, ನಿನ್ನಿಂದ ನಿರೂಪಿಸಲ್ಪಟ್ಟ ಅರ್ಥವನ್ನು ಕೇಳಿ ನನ್ನ ಮನಸ್ಸು ಚನ್ನಾಗಿ ತೃಪ್ತಿಯನ್ನೈದಿತು; ಈ ಅರ್ಥವನ್ನು ನನ್ನ ಉಪಾಧ್ಯಾಯರು ಅರಿಯರು; ಅರಿತಿದ್ದರೆ ಹೇಳದೇಹೋಗರು! ಎಲೈ ಬ್ರಾಹ್ಮಣನೇ, ಕರ್ಮೋಪದೇಶಕರ್ತೃಗಳಾದ ಆಚಾರ್ಯರಿಂದುಂಟಾದ ಸಂಶಯವು ಛೇದಿಸಲ್ಪಟ್ಟ ಇಂದ್ರಿಯವೃತ್ತಿಗಳಾದ ಋಷಿಗಳೂಕೂಡ ಯಾವ ವಿಷಯದಲ್ಲಿ ಮೂಢರಾಗುತ್ತಾರೆಯೋ ಅಂಥಾ ಸಂಶಯವು ಇದೆ; ಈ ಲೋಕದಲ್ಲಿ ಯಾವ ಶರೀರಗಳಿಂದ ಕರ್ಮಗಳನ್ನು ಮಾಡುತ್ತಾನೆಯೋ ಆ ಶರೀರವನ್ನು ಇಲ್ಲೇ ತ್ಯಜಿಸಿ ಅನ್ಯದೇಹಗಳಿಂದ ಯುಕ್ತಗಳಾದ ಭೋಗಗಳನ್ನು ಪರಲೋಕದಲ್ಲಿ ಅನುಭವಿಸುತ್ತಾನೆಂದು ವೇದಜ್ಞರಾದ ಪುರುಷರ ವಾದವು ಅಲ್ಲಲ್ಲಿ ಕೇಳಲ್ಪಡುತ್ತದೆ; ಈಲೋಕದಲ್ಲಿ ವಿಹಿತವಾದ ಕರ್ಮವು ಮಾಡಲ್ಪಟ್ಟರೂ ಆ ಕರ್ಮವು ಶೀಘ್ರವಾಗಿ ಪರೋಕ್ಷವಾಗಿ ನಷ್ಟವಾಗುತ್ತದೆ' ಎಂದು ಸಂಶಯಪಡಲು ನಾರದ ಋಷಿಯು 'ಎಲೈ ಅರಸೇ, ಪುರುಷನು ಈ ಲೋಕದಲ್ಲಿ ಯಾವ ದೇಹದಿಂದ ಕರ್ಮವನ್ನು ಮಾಡುತ್ತಾನೆಯೋ ಆ ಶರೀರವು ನಷ್ಟವಾದಾಗ್ಯೂ ಪ್ರಧಾನವಾದ ಲಿಂಗದೇಹದಿಂದಲೂ ಮನಸ್ಸಿನಿಂದಲೂ ಸಹ ಸ್ವಕರ್ಮಫಲವನ್ನು ವ್ಯವಧಾನವಿಲ್ಲದೆ ಅನುಭವಿಸುವನು; ಲೋಕದಲ್ಲಿ ಪುರುಷನು ಶಯನಗೈದು ನಿದ್ರೆಯನ್ನು ಮಾಡುವಾಗ ಸ್ಥೂಲದೇಹವು ನಿಶ್ಚಲವಾಗಿ ಮಲಗಿದ್ದ ಸ್ಥಳದಲ್ಲೇ ಇದ್ದಾಗ್ಯೂ ಸ್ವಪ್ನಾನುಭವ ಲಿಂಗದೇಹದಿಂದ ಮಾಡುವನು; ಜೀವನಿಗೆ ದೇಹದ್ವಯದಲ್ಲಿಯೂ ಅಭಿಮಾನ ಸಮಾನವಾಗಿರುವದು; ಈ ಮಂತ್ರಾದಿಗಳು ನನ್ನವರು—ನಾನು ಬ್ರಾಹ್ಮಣನು ಎಂಬದಾಗಿ ಹೇಳುತ ಮನಸ್ಸಿನಿಂದ ಯಾವ ಯಾವ ದೇಹವನ್ನು ಗ್ರಹಿಸುತ್ತಾನೆಯೋ ಆ ದೇಹದಿಂದ ಸಿದ್ಧವಾದ ಕರ್ಮವನ್ನು ಗ್ರಹಿಸುವನು; ಆ ಕರ್ಮದಿಂದಲೇ ಸಂಸಾರವೂ ಕರ್ಮಗಳೂ ನಷ್ಟಗಳಾದಮೇಲೆ ಅದರ ಫಲಾನುಭವ ಹ್ಯಾಗೆ ಉಂಟಾಗುವದೆಂಬ ಸಂಶಯಕ್ಕೆ ಉತ್ತರವನ್ನು ಹೇಳುತ್ತಾನೆ; ಹ್ಯಾಗೆ ಜ್ಞಾನಕರ್ಮೇಂದ್ರಿಯ ವ್ಯಾಪಾರಗತಿಗಳಿಂದ ಚಿತ್ತವು ಊಹಿಸಲ್ಪಡುತ್ತದೆ; ಹಾಗೆ ಚಿತ್ತವೃತ್ತಿಗಳಿಂದ ಪೂರ್ವದೇಹಜನ್ಯವಾದ ಕರ್ಮವು ಊಹಿಸಲ್ಪಡುತ್ತದೆ; ಈ ವರ್ತಮಾನದೇಹದಿಂದ ಒಂದು ಕಾಲದಲ್ಲಿಯೂ ಯಾವದು ಅನುಭೂತವಿಲ್ಲವೊ ಅಂಥಾ ವಸ್ತುವೂಕೂಡ ಒಂದುಸಮಯದಲ್ಲಿ ಸ್ವಪ್ನ ಮನೋರಥಾದಿಗಳಲ್ಲಿ ತೋರುವದು! ಎಲೈ ಅರಸೆ, ಅದುಕಾರಣ ವಾಸನಾಶ್ರಯವಾದ ಲಿಂಗದೇಹಾಭಿಮಾನವುಳ್ಳ ಜೀವನಿಗೆ

ತಾದೃಶವಸ್ತುಗಳ ಅನುಭವಕ್ಕೆ ಯೋಗ್ಯವಾದ ದೇಹವು ಪೂರ್ವದಲ್ಲಿತ್ತು ಎಂಬದಾಗಿ ನಿಶ್ಚಯಿಸು; ಅನುಭೂತವಲ್ಲದ ಅರ್ಥವು ಮನಸ್ಸಿಗೆ ಗೋಚರವಾಗುವದಿಲ್ಲ; ಮನಸ್ಸೇ ಮನುಷ್ಯನಿಗೆ ಪೂರ್ವದೇಹಗಳನ್ನು ಹೇಳುತ್ತದೆ; ಮುಂದೆ ಬರುವ ದೇಹಗಳನ್ನು ಉತ್ಕೃಷ್ಟಶರೀರಗಳನ್ನು ನೀಚಶರೀರಗಳನ್ನೂ ಸಹ ಜ್ಞಾಪಿಸಿಕೊಡುತ್ತದೆ; ಕಾಣಲ್ಪಡದಿರುವದು ಕೇಳಲ್ಪಡದಿರುವದು ಯಾವ ವಸ್ತುವುಂಟೋ ಅಂಥಾ ವಸ್ತುವು ದೇಶಕಾಲ ಭೇದದಿಂದ ಸ್ವಪ್ನದಲ್ಲಿ ತೋರುವದು; ಅದು ರೋಗಾದಿದೋಷದಿಂದ ಉಂಟಾಗುವದೆಂದು ತಿಳಿಯಬೇಕು; ಕ್ರಮವಾಗಿ ಇಂದ್ರಿಯ ಗೋಚರಗಳಾದ ಸರ್ವಾರ್ಥಗಳು ಸ್ವಪ್ನದಲ್ಲಿ ಬರುತಲಿವೆ; ಅದು ಮನೋಧರ್ಮವು; ಸತ್ವಪ್ರಧಾನವಾಗಿ ಭಗವಧ್ಯಾನಾಸಕ್ತವಾದ ಮನಸ್ಸಿನಲ್ಲಿ ಚಂದ್ರನಲ್ಲಿ ರಾಹುಶೇರಿದಂತೆ ಸಮಸ್ತವಿಷಯವು ಶೇರಿ ತೋರಲ್ಪಡುತ್ತದೆ; ಇದು ಯೋಗಿಪ್ರತ್ಯಕ್ಷವೆನಿಸುವದು; ಎಷ್ಟುಪರ್ಯಂತವು ಬುದ್ಧಿಯು ಮನಸ್ಸು ಇಂದ್ರಿಯಗಳು ವಿಷಯಗಳು ಗುಣಗಳು ಇವುಗಳ ಸಮಷ್ಟಿಯು ಅನಾದಿಯಾಗಿರುವದೊ ಅಷ್ಟುಪರ್ಯಂತವು ನಾನು—ನನ್ನದು ಎಂಬ ಅಹಂಭಾವ ಮಮಭಾವಗಳು ಹೋಗುವದಿಲ್ಲ; ಗಾಢನಿದ್ರೆಯಲ್ಲಿಯೂ ಮೂರ್ಛೆಯಲ್ಲಿಯೂ ವಿಯೋಗದುಃಖದಲ್ಲಿಯೂ ಮರಣಕಾಲದಲ್ಲಿಯೂ ಸನ್ನಿಪಾತಜ್ವರದಲ್ಲಿಯೂ ಪ್ರಾಣಕ್ಕೆ ಆಧಾರಭೂತಗಳಾದ ಇಂದ್ರಿಯಗಳು ಲೀನಗಳಾದಕಾರಣ ಅಹಂಕಾರವು ಮಮಕಾರವು ಸ್ಫುರಿಸುವದಿಲ್ಲ; ಯೌವನವಂತನಾದ ಪುರುಷನಿಗೆ ಏಕಾದಶೇಂದ್ರಿಯಗಳಿಂದ ಸ್ಫುಟವಾದ ಅಹಂಕಾರವು ಗರ್ಭದಲ್ಲಿರುವ ಪ್ರಾಣಿಗೂ ಬಾಲ್ಯಾವಸ್ಥೆಯಲ್ಲಿರುವ ಪ್ರಾಣಿಗೂ ಇಂದ್ರಿಯಬಲವಿಲ್ಲದ ಕಾರಣ ಅಮಾವಾಸ್ಯೆಯಲ್ಲಿ ಚಂದ್ರಕಾಂತಿಯು ಹ್ಯಾಗೆ ಕಾಣಿಸುವದಿಲ್ಲವೋ ಆಪ್ರಕಾರ ತೋರುವದಿಲ್ಲ; ವಸ್ತುಗಳು ಇಲ್ಲದಿದ್ದಾಗ್ಯೂ ವಿಷಯಗಳನ್ನೇ ಚಿಂತಿಸುತಲಿರುವ ಪುರುಷನಿಗೆ ಸ್ವಪ್ನದಲ್ಲಿ ವಿಪತ್ತುಗಳು ಎಂತು ತೋರುವವೋ ಅಂತು ಸಂಸಾರದುಃಖಗಳು ತಪ್ಪುವದಿಲ್ಲ; ಈರೀತಿಯಲ್ಲಿ ಪಂಚತನ್ಮಾತ್ರರೂಪವಾಗಿ ಗುಣತ್ರಯಾತ್ಮಕವಾಗಿ ಷೋಡಶವಿಕಾರಗಳಿಂದ ವಿಸ್ತರಿಸಲ್ಪಟ್ಟ ಈ ಲಿಂಗದೇಹವು ಚೇತನಾಯುಕ್ತವಾದರೆ ಜೀವನೆನಿಸಿಕೊಳ್ಳುವದು; ಪುರುಷನು ಈ ಲಿಂಗದೇಹದಿಂದಲೇ ಸ್ಥೂಲದೇಹಗಳನ್ನು ಗ್ರಹಿಸಿ ತ್ಯಜಿಸುವನು; ಹರ್ಷವನ್ನು ಶೋಕವನ್ನು ಭಯವನ್ನು ದುಃಖವನ್ನು ಸುಖವನ್ನು ಸಹ ಈ ಲಿಂಗದೇಹದಿಂದಲೇ ಐದುವನು; ಯಾವಪ್ರಕಾರವಾಗಿ ತೃಣದ ಮೇಲೆ ಸಂಚರಿಸುವ ಕ್ರಿಮಿವಿಶೇಷವು ಮುಂಚೆ ತಾನಿದ್ದ ತೃಣದಿಂದ ಮತ್ತೊಂದು ತೃಣದಮೇಲೆ ಹತ್ತಬೇಕಾದರೆ ಮುಂದಣ ತೃಣವನ್ನು ಭದ್ರವಾಗಿ ಹಿಡಿದುಕೊಂಡು ಮೊದಲಿದ್ದ ತೃಣವನ್ನು ಹ್ಯಾಗೆ ಬಿಡುವದೋ ಹಾಗೆ ಜೀವನು ಮತ್ತೊಂದು ದೇಹವನ್ನಾಶ್ರಯಿಸುವ ಪರ್ಯಂತವು ಪೂರ್ವದೇಹಾಭಿಮಾನವನ್ನು ಬಿಡನು! ಎಲೈ ಅರಸೆ, ಮನಸ್ಸೇ ಪ್ರಾಣಿಗಳಿಗೆ ಸಂಸಾರಕಾರಣವು; ಇಂದ್ರಿಯಗಳಿಂದ ಅನುಭೂತಗಳಾದ ವಿಷಯಗಳನ್ನು ಧ್ಯಾನಿಸುತ ಕರ್ಮಗಳನ್ನು ಮಾಡುತ್ತಾನೆ; ಆದಕಾರಣ ಆ ಕರ್ಮಗಳೇ ದೇಹಪ್ರಾಪ್ತಿಗೆ ಕಾರಣಭೂತಗಳು; ಅವಿದ್ಯೆಯು ಇರುವಾಗ ಅನಾತ್ಮಗಳಾದ ದೇಹಾದಿಗಳಿಗೆ ಕರ್ಮಗಳುಂಟಾಗುತಲಿವೆ; ಆ ಕರ್ಮಗಳಿಂದ ಬಂಧವುಂಟಾಗುತ್ತದೆ; ಅದುಕಾರಣ ಆ ಅವಿದ್ಯಾದಿಗಳ ನಾಶಾರ್ಥವಾಗಿ ಸರ್ವಪ್ರಕಾರದಿಂದಲೂ ಶ್ರೀಹರಿಯನ್ನು ಭಜಿಸು; ಯಾವಭಗವಂತನಿಂದ ಜಗತ್ತಿನ ಸೃಷ್ಟಿಸ್ಥಿತಿಲಯಗಳು ಉಂಟಾಗುವವೋ ಈ ಸಮಸ್ತ ಪ್ರಪಂಚವನ್ನು ಅಂಥಾ ಭಗವತ್ಸ್ವರೂಪವನ್ನಾಗಿ ಭಾವಿಸುತ ಭಜಿಸುವನಾಗು' ಎಂದು ಭಾಗವತಶ್ರೇಷ್ಠನಾದ ನಾರದನು ಪ್ರಾಚೀನಬರ್ಹಿರಾಯನಿಗೆ ಜೀವಬ್ರಹ್ಮಸ್ವರೂಪವನ್ನು ತಿಳಿಯಪಡಿಸಿ ಅರಸಿನಿಂದ ಅಪ್ಪಣೆಯನ್ನು ತೆಗೆದುಕೊಂಡು ಸಿದ್ಧಲೋಕವನ್ನು ಕುರಿತು ತೆರಳಿದನು! ಎಲೈ ವಿದುರನೆ, ಅನಂತರದಲ್ಲಿ ಪ್ರಾಚೀನಬರ್ಹಿರಾಯನು ಪ್ರಜಾಸೃಷ್ಟಿಯಲ್ಲಿ ಪುತ್ರರನ್ನಾಜ್ಞಾಪಿಸಿ ತಪಸ್ಸಿಗೋಸ್ಕರ ಕಪಿಲಾಶ್ರಮವನ್ನು ಕುರಿತು ತೆರಳಿದನು; ಆ ಆಶ್ರಮದಲ್ಲಿ ಏಕಾಗ್ರಚಿತ್ತನಾಗಿ ಸಂಗರಹಿತನಾಗಿ ಗೋವಿಂದನ ಚರಣಾಂಬುಜವನ್ನು ಭಕ್ತಿಯಿಂದ ಭಜಿಸಿ ಭಗವಂತನ ಸಾಯುಜ್ಯವನ್ನು ಪಡೆದನು! ಎಲೈ ವಿದುರನೇ, ದೇವ ಋಷಿಯಿಂದ ಹೇಳಲ್ಪಟ್ಟ ಪರೋಕ್ಷವೇದಾಂತವನ್ನು ಯಾವ ಪುರುಷನು ಶ್ರವಣಂಗೈಯ್ಯುವನೋ ಆ ಪುರುಷನು ಲಿಂಗದೇಹದಿಂದ ಮುಕ್ತನಾಗುತ್ತಾನೆ; ಮುಕುಂದನ ಯಶಸ್ಸಿನಿಂದ ಭುವನವನ್ನು ಪವಿತ್ರಮಾಡುವ ದೇವ

ಋಷಿವರನಾದ ನಾರದನ ಮುಖದಿಂದ ಹೊರಕ್ಕೆ ಬಂದ ಚಿತ್ತಶುದ್ಧಿಕರವಾದ ಪರಮಪದಪ್ರದವಾದ ಈ ಪರೋಕ್ಷವೇದಾಂತವನ್ನು ಯಾವ ಪುರುಷನು ಕೇಳುತ್ತಾನೆಯೋ ಆ ಪುರುಷನು ಸಮಸ್ತ ಬಂಧಮುಕ್ತನಾಗಿ ಈ ಸಂಸಾರದಲ್ಲಿ ಸುತ್ತುವದಿಲ್ಲ! ಎಲೈ ವಿದುರನೆ, ಈ ಪ್ರಕಾರವಾದ ಪರೋಕ್ಷಾಧ್ಯಾತ್ಮಶಾಸ್ತ್ರವು ನನ್ನಿಂದ ಹೇಳಲ್ಪಟ್ಟಿತು; ಇದರಿಂದ ಬುದ್ಧಿಸಹಿತವಾದ ಅಹಂಕಾರವು ಪರಲೋಕದಲ್ಲಿ ಕರ್ಮಫಲಭೋಗ ಹ್ಯಾಗೆಂಬ ಸಂಶಯವು ಛೇದಿಸಲ್ಪಡುತ್ತದೆ'' ಎಂದು ನುಡಿದನು.

೩೦ನೇ ಅಧ್ಯಾಯ.

ಪ್ರಚೇತಸ್ಸುಗಳು ಶ್ರೀಹರಿಯಿಂದ ವರವನ್ನು ಪಡೆದು ವಾರ್ಕ್ಷೀಯೆಂಬ ಕನ್ಯೆಯನ್ನು ವಿವಾಹವಾದದ್ದು.

“ಆಬಳಿಕ ವಿದುರನು ಮೈತ್ರೇಯ ಋಷಿಯನ್ನು ಕುರಿತು ‘ಎಲೈ ಮೈತ್ರೇಯ ಋಷಿಯೇ, ಪ್ರಾಚೀನಬರ್ಹಿರಾಯನ ಪುತ್ರರಾದ ಪ್ರಚೇತಸ್ಸುಗಳು ರುದ್ರಗೀತಾಸ್ತುತಿಯಿಂದ ಶ್ರೀಹರಿಯನ್ನು ಸಂತೋಷಪಡಿಸಿ ಯಾವ ಸಿದ್ಧಿಯನ್ನು ಪಡೆದರು? ಆ ಪ್ರಚೇತಸ್ಸುಗಳು ಕೈವಲ್ಯನಾಥನಾದ ಪರಮೇಶ್ವರನ ಪಾರ್ಶ್ವವರ್ತಿಗಳಾಗಿ ಗಿರೀಶನಾದ ಪರಮೇಶ್ವರನಿಗೆ ನಮಸ್ಕರಿಸಿ ಆ ಶಿವನಿಂದ ಅನುಗ್ರಹಿತರಾಗಿ ಇಹಲೋಕದಲ್ಲಿಯೂ ಪರಲೋಕದಲ್ಲಿಯೂ ಯಾವ ಸಿದ್ಧಿಯನ್ನು ಪಡೆದರು? ನಿಶ್ಚಯವಾಗಿ ಮೋಕ್ಷವನ್ನೇ ಪಡೆದು ಇದ್ದಾರು? ಸಂಶಯವಿಲ್ಲ’ ಎಂದು ಪ್ರಶ್ನೆಗೈದನು.

“ಆ ವಾಕ್ಯವನ್ನು ಕೇಳಿ ಮೈತ್ರೇಯನು ‘ಎಲೈ ವಿದುರನೇ, ಆ ಪ್ರಚೇತಸ್ಸುಗಳು ತಂದೆಯ ಆಜ್ಞೆಯನ್ನನುವರ್ತಿಸಿ ಸಮುದ್ರಮಧ್ಯದಲ್ಲಿ ಜಪಯಜ್ಞಗಳಿಂದಲೂ ತಪಸ್ಸಿನಿಂದಲೂ ಭಗವಂತನನ್ನು ಸಂತೋಷಪಡಿಸಲು ಹತ್ತುಸಾವಿರ ವರ್ಷಗಳಮೇಲೆ ಪುರಾಣಪುರುಷನಾದ ಶ್ರೀಹರಿಯು ಸ್ವಕಾಂತಿಯಿಂದ ಅವರ ತಪಸ್ಸಿನಿಂದುಂಟಾದ ಕ್ಲೇಶವನ್ನು ಪರಿಹರಿಸಿ ಸತ್ತ್ವರೂಪದಿಂದ ಅವರಿಗೆದುರಾಗಿ ಆವಿರ್ಭವಿಸಿ ಮೇರುಶೃಂಗವನ್ನೇರಿದ ಮೇಘದಂತೆ ಗರುಡನ ಹೆಗಲಿನಲ್ಲಿ ಕುಳಿತು ಪೀತಾಂಬರಧಾರಿಯಾಗಿ ಕೌಸ್ತುಭಭೂಷಿತನಾಗಿ ತನ್ನ ಕಾಂತಿಯಿಂದ ಸಮಸ್ತದಿಕ್ಕುಗಳನ್ನು ಅಂಧಕಾರರಹಿತಗಳನ್ನಾಗಿ ಮಾಡುತ ಪ್ರಕಾಶಮಾನಗಳಾದ ಸುವರ್ಣಭೂಷಣ ಜಾಲಗಳಿಂದ ಹೊಳೆಯುವ ಕಪೋಲಗಳು ಮುಖವು ಸಹಾ ಉಳ್ಳವನಾಗಿ ಕಿರೀಟದಿಂದ ಶೋಭಿಸುತ ಸಮೀಪದಲ್ಲಿ ಕಾದಿರುವ ಎಂಟು ಆಯುಧಗಳಿಂದಲೂ ಮುನಿಗಳಿಂದಲೂ ದೇವತೆಗಳಿಂದಲೂ ಸೇವಿಸಲ್ಪಡುವವನಾಗಿ ಗರುಡನ ಪಕ್ಷಧ್ವನಿಗಳಿಂದ ಗಾನಗೈಯಲ್ಪಟ್ಟ ಕೀರ್ತಿಯುಳ್ಳವನಾಗಿ ಸ್ಥೂಲಗಳಾಗಿ ದೀರ್ಘಗಳಾದ ಅಷ್ಟಭುಜಗಳ ಮಧ್ಯದಲ್ಲಿ ಪ್ರಕಾಶಿಸುವ ಮಹಾಲಕ್ಷ್ಮಿಯೊಡನೆ ಸ್ಪರ್ಧೆಯನ್ನು ಮಾಡುವ ಕಾಂತಿಯುಳ್ಳ ವನಮಾಲೆಯಿಂದ ಅಲಂಕೃತನಾಗಿ ಆದಿಪುರುಷನಾದ ಭಗವಂತನು ಕರುಣಾರ್ದ್ರದೃಷ್ಟಿಯುಳ್ಳವನಾಗಿ ಶರಣಾಗತರಾದ ಪ್ರಾಚೀನಬರ್ಹಿರಾಯನ ಪುತ್ರರಾದ ಪ್ರಚೇತಸ್ಸುಗಳನ್ನು ಕುರಿತು ಮೇಘಗಂಭೀರವಾದ ವಾಕ್ಕಿನಿಂದ ಎಲೈ ಭಗವದ್ಧರ್ಮನಿರತರಾದ ರಾಜಪುತ್ರರುಗಳಿರಾ, ನಿಮಗೆ ಕ್ಷೇಮವಾಗಲಿ; ನೀವು ನನ್ನ ದೆಸೆಯಿಂದ ವರಗಳನ್ನು ಕೇಳಿಕೊಳ್ಳಿ; ನಿಮ್ಮಲ್ಲಿ ವಿಶ್ವಾಸದಿಂದ ನಾನು ವರಗಳನ್ನು ಕೊಡುತ್ತೇನೆ; ನಿಮ್ಮ ಪರಸ್ಪರ ಸೌಭ್ರಾತ್ರದಿಂದ ನಾನು ಸಂತುಷ್ಟನಾದೆನು; ಯಾವ ಪುರುಷನು ಹಾಸಿಗೆಯಿಂದೆದ್ದು ಪ್ರಾತಃಕಾಲದಲ್ಲಿ ಪ್ರತಿದಿವಸದಲ್ಲಿಯೂ ನಿಮ್ಮನ್ನು ಸ್ಮರಿಸುತ್ತಾನೆಯೋ ಆ ಪುರುಷನಿಗೆ ಭ್ರಾತೃಗಳಲ್ಲಿ ಸ್ನೇಹವುಂಟಾಗಿ ಪ್ರಾಣಿಗಳಲ್ಲಿ ದಯೆಯುಂಟಾಗುವದು; ಯಾವ ಪುರುಷರು ಸ್ಥಿರಚಿತ್ತರಾಗಿ ಸಾಯಂಪ್ರಾತಃಕಾಲಗಳಲ್ಲಿ ರುದ್ರಗೀತ ಸ್ತೋತ್ರಗಳಿಂದ ನನ್ನನ್ನು ಸ್ತುತಿಸುತ್ತಾರೆಯೋ ಆ ಪುರುಷರಿಗೆ ನಾನು ಬೇಕಾದ ವರಗಳನ್ನು ಶುಭವಾದ ಪ್ರಜ್ಞೆಯನ್ನು ಸಹ ಕೊಡುತ್ತೇನೆ; ನೀವು ಯಾವಕಾರಣ ತಂದೆಯ ಆಜ್ಞೆಯನ್ನು ಸಂತೋಷಯುಕ್ತರಾಗಿ ಗ್ರಹಿಸಿದಿರೋ ಅದುಕಾರಣ ನಿಮ್ಮ ಕೀರ್ತಿಯು ಪ್ರಕಾಶಮಾನವಾಗಿ ಲೋಕಗಳನ್ನು ವ್ಯಾಪಿಸುತ್ತದೆ! ಎಲೈ ರಾಜಪುತ್ರರುಗಳಿರಾ, ಗುಣಗಳಿಂದ ಬ್ರಹ್ಮನಿಗೆ ಸಮಾನನಾಗಿ ಪ್ರಸಿದ್ಧನಾದ ಪುತ್ರನು ನಿಮಗೆ ಉಂಟಾಗುತ್ತಾನೆ; ಆ ಪುತ್ರನು ತನ್ನ ಸಂ

ತತಿಯಿಂದ ಈ ಮೂರು ಲೋಕಗಳನ್ನು ಪೂರಣೆಯನ್ನು ಮಾಡುತ್ತಾನೆ! ಎಲೈ ರಾಜಪುತ್ರರೇ, ಕಂಡು ಋಷಿಯು ತಪಸ್ಸನ್ನು ಮಾಡುತ್ತಿರಲಾಗಿ ತಪೋವಿಘ್ನಾರ್ಥವಾಗಿ ದೇವತೆಗಳಿಂದ ಕಳುಹಿಸಲ್ಪಟ್ಟ ಪ್ರಮ್ಲೋಚಾನಾಮಕಳಾದ ಅಪ್ಸರಸ್ತ್ರೀಯೊಡನೆ ಆ ಕಂಡುಋಷಿಯು ಬಹುಕಾಲವು ರಮಿಸಲಾಗಿ ಆ ಪ್ರಮ್ಲೋಚೆಯು ಗರ್ಭವನ್ನು ಧರಿಸಿ ಆ ಗರ್ಭವನ್ನು ವೃಕ್ಷಗಳಿಗೆ ಒಪ್ಪಿಸಿ ತಾನು ಸ್ವರ್ಗಕ್ಕೆ ಹೋದಳು; ಆ ಗರ್ಭವನ್ನು ವೃಕ್ಷಗಳು ಪೋಷಿಸಿದವು; ವೃಕ್ಷಗಳಿಗೆ ರಾಜನಾದ ಚಂದ್ರನು ದಯಾಯುಕ್ತನಾಗಿ ಹಸಿವಿನಿಂದ ಕೃಶಳಾಗಿ ರೋದನಂಗೈಯುತಲಿರುವ ಆ ಕನ್ಯೆಯ ಮುಖದಲ್ಲಿ ಅಮೃತವನ್ನು ಸ್ರವಿಸುತಲಿರುವ ತನ್ನ ತರ್ಜನಿಯೆಂಬ ಬೆರಳನ್ನಿರಿಸಿದನು; ನನ್ನನ್ನನುಸರಿಸಿಕೊಂಡಿರುವ ನಿಮ್ಮ ತಂದೆಯಿಂದ ಪ್ರಜಾಸೃಷ್ಟಿಯಲ್ಲಿ ಆಜ್ಞಪ್ತರಾದ ನೀವು ಸುಧೆಯಾದ ಆ ಕನ್ಯೆಯನ್ನು ಶೀಘ್ರದಿಂದ ಸಂತಾನಾರ್ಥವಾಗಿ ವಿವಾಹವನ್ನು ಮಾಡಿಕೊಳ್ಳಿ; ಬಹುಮಂದಿಗೆ ಒಬ್ಬಳು ಪತ್ನಿಯಾಗುವ ಪ್ರಕಾರ ಹ್ಯಾಗಂದರೆ: ಏಕಧರ್ಮಶೀಲರಾದ ನಿಮಿಗೆಲ್ಲರಿಗೂ ಸೂಕ್ಷ್ಮಮಧ್ಯಳಾದ ಆ ಸ್ತ್ರೀಯು ಏಕಧರ್ಮಶೀಲೆಯಾದ್ದರಿಂದ ನಿಮ್ಮಲ್ಲಿ ಅನುರಕ್ತವಾದ ಚಿತ್ತವುಳ್ಳವಳಾಗಿ ಪತ್ನಿಯಾಗುತ್ತಾಳೆ; ಆ ಪತ್ನಿಯೊಡನೆ ನೀವು ಅಪ್ರತಿಹತತೇಜಸ್ಕರಾಗಿ ದೇವಮಾನದಿಂದ ಹತ್ತುಲಕ್ಷ ವರ್ಷಗಳ ಪರ್ಯಂತವೂ ನನ್ನ ಅನುಗ್ರಹದಿಂದ ಭೂಸಮ್ಬಂಧಗಳಾದ ಭೋಗಗಳನ್ನೂ ದಿವ್ಯಭೋಗಗಳನ್ನೂ ಅನುಭವಿಸಿ ಅನಂತರದಲ್ಲಿ ನನ್ನಲ್ಲಿ ಅವಿಚ್ಛಿನ್ನವಾದ ಭಕ್ತಿಯಿಂದ ದಗ್ಧವಾದ ಕಾಮವುಳ್ಳ ನಿರ್ಮಲವಾದ ಅಂತಃಕರಣವುಳ್ಳವರಾಗಿ ನನ್ನ ಸ್ಥಾನವನ್ನೈದುತ್ತೀರಿ; ನಿಷ್ಕಾಮಕರ್ಮಗಳನ್ನು ಆಚರಿಸಿಕೊಂಡು ನನ್ನ ಸಂಕೀರ್ತನ ಧ್ಯಾನಾದಿಗಳಿಂದ ಕಾಲವನ್ನು ಸಾರ್ಥಕ ಮಾಡಿಕೊಂಡಿರುವ ಪ್ರಾಜ್ಞರು ಗೃಹಗಳಲ್ಲಿ ಇದ್ದಾಗ್ಯೂ ಅವರಿಗೆ ಮಮತಾಹಂಕಾರಾದಿ ಬಂಧವುಂಟಾಗುವದಿಲ್ಲ; ಸರ್ವಜ್ಞನಾದ ಪರಬ್ರಹ್ಮನು ಬ್ರಹ್ಮವಾದಿಗಳಿಂದ ಹೇಳಲ್ಪಟ್ಟ ನನ್ನ ಕಥಾಶ್ರವಣದಿಂದ ಶ್ರೋತೃಗಳಾದ ಭಕ್ತರ ಹೃದಯದಲ್ಲಿ ನೂತನವಾದಂತೆ ಪ್ರಕಾಶಿಸುವನು; ಯಾವ ಬ್ರಹ್ಮನನ್ನೈದಿರುವ ಪುರುಷರು ಮೋಹವನ್ನೂ ದುಃಖವನ್ನೂ ಸಂತೋಷವನ್ನೂ ಐದುವದಿಲ್ಲವೋ ಅಂಥಾ ಪರಬ್ರಹ್ಮನೇ ನಾನು; ಆದಕಾರಣ ನನ್ನ ಕಥಾಶ್ರವಣಂಗೈವ ಪುರುಷರಿಗೆ ಬಂಧವಿಲ್ಲ! ಎಲೈ ವಿದುರನೇ, ಈಪ್ರಕಾರವಾಗಿ ಮಾತನಾಡುತಲಿರುವ ಪುರುಷಾರ್ಥಪ್ರದನಾಗಿ ಸುಹೃತ್ತಾದ ಭಗವಂತನನ್ನು ಕುರಿತು ಪ್ರಚೇತಸ್ಸುಗಳು ಅಂಜಲಿಬಂಧವುಳ್ಳವರಾಗಿ ಆ ಭಗವಂತನ ದರ್ಶನದಿಂದ ಧ್ವಸ್ತವಾದ ರಜಸ್ತಮೋಜನ್ಯವಾದ ಕಲ್ಮಷವುಳ್ಳವರಾಗಿ ಗದ್ಗದವಾಕ್ಯದಿಂದ ಸ್ತುತಿಗೈಯುತ ಕ್ಲೇಶಪರಿಹಾರಕನಾಗಿ ಶ್ರೇಯಸ್ಸಾಧನಗಳಾದ ಉತ್ಕೃಷ್ಟಗುಣಗಳು ನಾಮಧೇಯಗಳೂ ಸಹ ಉಳ್ಳವನಾಗಿ ಮನೋವಚನಗಳ ವೇಗಕ್ಕೆ ಶಿಕ್ಕದಿರುವ ಸಮಸ್ತಗಳಾದ ಇಂದ್ರಿಯಗಳ ಮಾರ್ಗಗಳಿಂದ ಐದಲ್ಪಡದಿರುವ ನಿನಗೋಸ್ಕರ ನಮಸ್ಕಾರವು! ಸ್ವಸ್ವರೂಪಾವಸ್ಥಾನದಿಂದ ಶುದ್ಧನಾಗಿ ಶಾಂತನಾಗಿ ಮನಸ್ಸೆಂಬ ಉಪಾಧಿಯಿಂದ ದ್ವೈತರೂಪನಾಗಿ ತೋರಲ್ಪಡುವ ಜಗತ್ಸೃಷ್ಟಿಸ್ಥಿತಿಲಯಗಳ ನಿಮಿತ್ತವಾಗಿ ಮಾಯಾಗುಣಗಳುಳ್ಳ ದೇಹಗಳನ್ನು ಗ್ರಹಿಸುತಿರುವ ನಿನಗೋಸ್ಕರ ನಮಸ್ಕಾರವು! ಶುದ್ಧಸತ್ವಸ್ವರೂಪನಾಗಿ ಪಾಪಪರಿಹಾರಕನಾಗಿ ಸಂಸಾರಪರಿಹಾರಕವಾದ ಜ್ಞಾನವುಳ್ಳ ಸರ್ವ ಯಾದವರಿಗೂ ಪ್ರಭುವಾದ ವಾಸುದೇವನಾದ ಶ್ರೀಕೃಷ್ಣನೇ ನಿನಗೆ ನಮಸ್ಕಾರವು! ಪದ್ಮನಾಭನಾಗಿ ಪದ್ಮಮಾಲಾಧಾರಿಯಾಗಿ ಪದ್ಮಗಳಿಗೆ ಸಮಾನಗಳಾದ ಪಾದಗಳುಳ್ಳ ಪದ್ಮಲೋಚನನಾದ ನಿನಗೆ ನಮಸ್ಕಾರವು! ಪದ್ಮಕೇಸರಗಳಂತೆ ಹೊಂಬಣ್ಣವಾದ ಪೀತಾಂಬರವುಳ್ಳವನಾಗಿ ಸರ್ವಪ್ರಾಣಿಗಳಿಗೂ ಅಧಿಷ್ಠಾನನಾಗಿ ಸರ್ವಸಾಕ್ಷಿಯಾದ ಭಗವಂತನೇ ನಿನಗೆ ನಮಸ್ಕಾರವನ್ನು ಮಾಡುತ್ತೇವೆ! ಎಲೈ ಸ್ವಾಮಿಯೆ, ಸಮಸ್ತಕ್ಲೇಶ ಪರಿಹಾರಕವಾದ ನಿನ್ನ ಈ ದಿವ್ಯರೂಪವು ಖಿನ್ನರಾದ ನಮಿಗೆ ಭಗವಂತನಾದ ನಿನ್ನಿಂದ ತೋರಿಸಲ್ಪಟ್ಟತೆಂಬದ್ಯಾವದುಂಟೋ ಅದಕ್ಕಿಂತಲೂ ನಮಿಗೆ ವರವು ಯಾವದು! ಎಲೈ ಅಮಂಗಳ ಪರಿಹಾರಕನಾದ ಶ್ರೀಹರಿಯೆ, ಇವರು ನನ್ನನ್ನು ನಂಬಿದವರೆಂದು ಬುದ್ಧಿಯಿಂದ ಪ್ರಕೃತಕಾಲದಲ್ಲಿ ಸ್ಮರಿಸೋಣವೆಂಬದ್ಯಾವದುಂಟೊ ಅಷ್ಟುಮಾತ್ರವೇ ಪ್ರಭುಗಳಿಂದ ದೀನರಾದ ಭಕ್ತರ ವಿಷಯದಲ್ಲಿ ವಾತ್ಸಲ್ಯದಿಂದ ಮಾಡತಕ್ಕ ಕಾರ್ಯವು; ಭಕ್ತರನ್ನು ನೀವು ಸ್ಮರಿಸೋಣವು ಭಕ್ತರಿಗೆ ಸರ್ವ ಇಷ್ಟಾರ್ಥಗಳನ್ನು ಕೊಡಬೇಕೋಸುಗವೇ ಹೊರ್ತು ಸುಮ್ಮನೆ ಅಲ್ಲ; ಪಿಪೀಲಿಕಾದಿ ಕ್ಷುದ್ರಪ್ರಾಣಿಗಳ ಹೃದಯದಲ್ಲಿಯೂ ಕೂಡ ಅಂತರ್ಯಾಮಿಯಾಗಿರುವ ನೀನು ನಮ್ಮ

ಮನೋಗತಾರ್ಥವನ್ನು ಏನುಕಾರಣ ತಿಳಿಯುವದಿಲ್ಲ ; ಅಥವಾ ತಿಳಿದೇ ಇದ್ದೀಯೊ ? ಮೋಕ್ಷಗುರುವಾದವರಿಗೂ
ಗತಿಯಾದ ನೀನು ನಮಗೆ ಪ್ರಸನ್ನನಾದೆ! ಎಲೈ ಜಗತ್ಪತಿಯಾದ ಶ್ರೀಹರಿಯೆ, ಅಂಥಾ ನಮಗೆ ನಿನ್ನ ಪ್ರಸಾ
ದವೇ ವರವು ! ಎಲೈ ನಾಥನೆ, ಆದಾಗ್ಯೂ ಪರಾತ್ಪರನಾದ ನಿನ್ನ ದೆಶೆಯಿಂದ ನಾವು ವರವನ್ನು ಯಾಚಿಸುತ್ತೇವೆ ;
ನಿನ್ನ ವಿಭೂತಿಗಳಿಗೆ ಆದ್ಯಂತಗಳಿಲ್ಲವಾದಕಾರಣ ನೀನು ಅನಂತನೆಂದು ಹೇಳಿಸಿಕೊಳ್ಳುತ್ತೀಯೆ ; ಭ್ರಮರವು ಪಾರಿ
ಜಾತಪುಷ್ಪರಸವನ್ನು ಅನುಭವಿಸಿದ್ದಾದಮೇಲೆ ಹ್ಯಾಗೆ ಮತ್ತೊಂದನ್ನು ಸೇವಿಸುವದಿಲ್ಲವೋ ಹಾಗೆ ನಾವು ನಿನ್ನ ಪಾದ
ಮೂಲವನ್ನೈದಿಯೂ ಕೂಡ ಮತ್ತೇನನ್ನು ಯಾಚಿಸೇವು ; ಆದಾಗ್ಯೂ ಇಷ್ಟುಮಾತ್ರ ನಾವು ನಿನ್ನ ಮಾಯೆಯಿಂದ
ಆವೃತರಾಗಿ ಎಷ್ಟುಪರ್ಯಂತವು ಕರ್ಮಗಳಿಂದ ಸುತ್ತುತ್ತೇವೆಯೋ ಅಷ್ಟುಪರ್ಯಂತವು ಪ್ರತಿಜನ್ಮದಲ್ಲಿಯೂ ನಿನ್ನ
ಭಕ್ತರ ಸಂಗವು ನಮಗೆ ಇರಲಿ ; ಸ್ವರ್ಗವು ಮೋಕ್ಷವು ಸಹಾ ಭಗವದ್ಭಕ್ತರ ಸಂಗದ ಲೇಶವನ್ನಾದರೂ ಹೋಲು
ವದಕ್ಕೆ ಯೋಗ್ಯವಲ್ಲವೆಂಬಲ್ಲಿ ಮಾನುಷ ಭೋಗಗಳು ಹೇಳತಕ್ಕದ್ದೇನು ; ಯಾವ ಭಗವದ್ಭಕ್ತರಲ್ಲಿ ಶುದ್ಧಗಳಾದ
ಭಗವಂತನ ಕಥೆಗಳುಂಟಾಗುವವೋ ಯಾವ ಕಥೆಗಳ ದೆಶೆಯಿಂದ ತೃಷ್ಣಾಶಾಂತಿಯುಂಟಾಗುವವೋ ಯಾವ ಉಪ
ಶಾಂತಿಯಿಂದ ಸರ್ವಭೂತಗಳಲ್ಲಿಯೂ ವೈರಾಭಾವ ಉಂಟಾಗುವದೋ ಯಾವ ನಿರ್ವೈರದಿಂದ ದುಃಖಾದಿಗಳಿಲ್ಲವೋ
ಮುಕ್ತಸಂಗರಾದ ಯಾವ ಭಗವದ್ಭಕ್ತರಿಂದ ಬಾರಿಬಾರಿಗೂ ಸತ್ಕಥೆಗಳಲ್ಲಿ ಯೋಗಿಗಳಿಗೆ ಪರಮಗತಿಯಾದ ಭಗ
ವಂತನಾದ ಸಾಕ್ಷಾತ್ ನಾರಾಯಣನು ಪ್ರಸ್ತಾಪವಂಗೈಯಲ್ಪಡುತ್ತಾನೆಯೋ ಪ್ರಪಂಚವನ್ನು ಪವಿತ್ರವನ್ನು ಮಾಡಲಿ
ಚ್ಛೆಯಿಂದ ಪಾದಗಳಿಂದ ಸಂಚರಿಸುವ ತೀರ್ಥರೂಪವಾದ ನಿನ್ನ ಭಕ್ತರ ಸಂಗವು ಸಂಸಾರಭೀತನಾದ ಯಾವ ಪುರು
ಷನಿಗೆತಾನೇ ರುಚಿಸದೆ ಹೋದೀತು ! ಎಲೈ ಭಗವಂತನೆ, ನಾವು ನಿನಗೆ ಪ್ರಿಯಸಖನಾದ ಸಾಕ್ಷಾತ್ಪರಮೇಶ್ವರನ
ಕ್ಷಣಸಮಾಗಮದಿಂದಲೇ ಚಿಕಿತ್ಸೆಗೆ ಅಸಾಧ್ಯವಾದ ಮೃತ್ಯುರೂಪವಾದ ಸಂಸಾರವೆಂಬ ಮಹಾರೋಗಕ್ಕೆ ಉತ್ತಮ
ವೈದ್ಯನಾದ ಪರಮಗತಿಸ್ವರೂಪನಾದ ನಿನ್ನನ್ನು ಪಡದವರಾದೆವು ! ಎಲೈ ಶ್ರೀಭಗವಂತನೆ, ನಮ್ಮಿಂದ ವೇದಶಾಸ್ತ್ರ
ಗಳು ಯಥಾವಿಧಿಯಾಗಿ ಅಧ್ಯಯನಂಗೈಯಲ್ಪಟ್ಟವೆಂಬದ್ಯಾವದುಂಟೋ ಗುರುಗಳೂ ಬ್ರಾಹ್ಮಣರೂ ವೃದ್ಧರೂ
ಇವರೆಲ್ಲರು ಸದಾಸೇವೆಯಿಂದ ಸಂತೋಷಪಡಿಸಲ್ಪಟ್ಟರೆಂಬದ್ಯಾವದುಂಟೋ ಜ್ಯೇಷ್ಠರಾದವರು ಸುಹೃತ್ತುಗಳು
ಭ್ರಾತೃಗಳು ಯಥಾಯೋಗ್ಯವಾಗಿ ನಮಸ್ಕಾರಾದಿಗಳಿಂದ ಪೂಜಿತರಾದರೆಂಬದ್ಯಾವದುಂಟೋ ಸರ್ವಭೂತಗಳು
ಅಸೂಯಾರಹಿತವಾಗಿ ನಮ್ಮಿಂದ ನೋಡಲ್ಪಟ್ಟವೆಂಬದ್ಯಾವದುಂಟೊ ಎಲೈ ಈಶ್ವರನೆ, ಅನಶನವ್ರತಪೂರ್ವಕವಾಗಿ
ಬಹುಕಾಲವು ನಮ್ಮಿಂದ ತಪಸ್ಸು ಚನ್ನಾಗಿ ಆಚರಿಸಲ್ಪಟ್ಟಿತೆಂಬದ್ಯಾವದುಂಟೋ ಇದೆಲ್ಲವೂ ಪುರಾಣಪುರುಷನಾದ
ನಿನ್ನ ಪರಿತೋಷಕ್ಕೋಸ್ಕರ ಆಗಲಿ ! ಎಲೈ ಪರಮೇಶ್ವರನೆ, ಸ್ವಾಯಂಭುವಮನುವು ಭಗವಂತನಾದ ಬ್ರಹ್ಮನು
ಸಾಕ್ಷಾತ್ಪರಮೇಶ್ವರನು ತಪೋಜ್ಞಾನಗಳಿಂದ ಶುದ್ಧವಾದ ಅಂತಃಕರಣಗಳುಳ್ಳ ಮಹಾಯೋಗಿಗಳು ಇವರೆಲ್ಲರೂ
ಯಾವ ನಿನ್ನ ಮಹಿಮೆಯ ಪಾರವನ್ನರಿಯದೆ ತಮ್ಮ ಬುಧ್ಯನುಸಾರವಾಗಿ ಸ್ತುತಿಗೈಯ್ಯುತ್ತಾರೆಯೋ ಅದುಕಾರಣ
ನಾವು ಅಲ್ಪಬುದ್ಧಿಯುಳ್ಳವರಾದಾಗ್ಯೂ ನಮ್ಮ ಬುದ್ಧ್ಯನುಸಾರವಾಗಿ ಸ್ತುತಿಗೈಯ್ಯುತ್ತೇವೆ ; ವೈಷಮ್ಯರಹಿತನಾಗಿ
ಶುದ್ಧನಾಗಿ ಪರಮಪುರುಷನಾಗಿ ವಾಸುದೇವನಾಗಿ ಸತ್ವಸ್ವರೂಪನಾಗಿ ಭಗವಂತನಾದ ನಿನಗೋಸ್ಕರ ನಮಸ್ಕಾರವು !
ಎಂದು ಪ್ರಚೇತಸ್ಸುಗಳಿಂದ ಸ್ತುತಿಗೈಯ್ಯಲ್ಪಟ್ಟ ಶ್ರೀಹರಿಯು ಶರಣಾಗತವತ್ಸಲನಾದಕಾರಣ ಪ್ರೀತನಾಗಿ ಹಾ
ಗೆ ಆಗಲೀ ಎಂದು ವರವನ್ನಿತ್ತು ಆ ಪ್ರಚೇತಸ್ಸುಗಳು ತೃಪ್ತಿಯನ್ನೈದಿದ ಚಕ್ಷುಸ್ಸುಗಳುಳ್ಳವರಾಗಿ ಶ್ರೀಹರಿ
ಯು ನಿರ್ಗಮನವನ್ನಪೇಕ್ಷಿಸದಿರುತ್ತಿರಲಾಗಿ ಸ್ವಲೋಕಕ್ಕೆ ತೆರಳಿಹೋದನು ; ಅನಂತರದಲ್ಲಿ ಪ್ರಚೇತಸ್ಸುಗ
ಳು ಸಮುದ್ರಜಲದಿಂದ ಮೇಲಕ್ಕೆ ಎದ್ದುಬಂದು ಸ್ವರ್ಗವನ್ನು ವ್ಯಾಪಿಸುವಂತಿರುವ ಮಹಾವೃಕ್ಷಗಳಿಂದ ವ್ಯಾಪ್ತ
ವಾದ ಭೂಮಿಯನ್ನು ನೋಡಿ ಕೋಪಿಸಿ ಭೂಮಿಯನ್ನು ಲತಾವೃಕ್ಷರಹಿತವನ್ನಾಗಿ ಮಾಡಲೋಸುಗ ಪ್ರಳಯಕಾ
ಲದಲ್ಲಿ ಕಾಲಾಗ್ನಿರುದ್ರನಂತೆ ಮುಖದಿಂದ ಅಗ್ನಿವಾಯುಗಳನ್ನು ಬಿಟ್ಟರು ; ಆಗ ಅಗ್ನಿಮಾರುತಗಳಿಂದ ದಗ್ಧಗಳಾ
ಗಿ ಭಸ್ಮೀಭೂತಗಳಾಗುತಿರುವ ವೃಕ್ಷಗಳನ್ನು ನೋಡಿ ಬ್ರಹ್ಮದೇವನು ಪ್ರಚೇತಸ್ಸುಗಳ ಸಮೀಪಕ್ಕೆ ಬಂದು ನೀತಿ
ಗಳಿಂದ ಅವರನ್ನು ಸಮಾಧಾನಂಗೈಯಲು ಉಳಿದ ವೃಕ್ಷಗಳು ಬ್ರಹ್ಮದೇವನಿಂದ ಆಜ್ಞಪ್ತಗಳಾಗಿ ಭಯದಿಂದ ತ

ವಿನ್ನಿಂದ ಪೋಷಿತಳಾದ 'ವಾರ್ಕ್ಷೀ' ಎಂಬ ಕನ್ಯೆಯನ್ನು ಪ್ರಚೇತಸ್ಸುಗಳಿಗೆ ಕೊಟ್ಟವು; ಆ ಪ್ರಚೇತಸ್ಸುಗಳು ಬ್ರಹ್ಮನ ಆಜ್ಞೆಯಿಂದ ಮರೀಚಿ ನಾಮಕಳಾದ ಆ ಕನ್ಯೆಯನ್ನು ವಿವಾಹ ಮಾಡಿಕೊಂಡರು; ದಕ್ಷಪ್ರಜೇಶ್ವರನು ಪರಮೇಶ್ವರನನ್ನವಮಾನಂಗೈದ ಪಾಪದಿಂದ ಆ ವಾರ್ಕ್ಷೀದೇವಿಯಲ್ಲಿ ಕ್ಷತ್ರಿಯನಾಗಿ ಜನಿಸಿ ಚಾಕ್ಷುಷ ಮನ್ವಂತರವು ಪ್ರಾಪ್ತವಾಗುತ್ತಿರಲಾಗಿ ಪೂರ್ವಸೃಷ್ಟವಾದ ದೇಹಸಮೂಹವು ಕಾಲಾಧೀನವಾದಮೇಲೆ ಈಶ್ವರಪ್ರೇರಿತನಾಗಿ ಆ ದಕ್ಷನು ಇಷ್ಟಗಳಾದ ಪ್ರಜೆಗಳನ್ನು ಸೃಷ್ಟಿಸಿದನು; ಈ ದಕ್ಷನು ಹುಟ್ಟುವಾಗಲೇ ತೇಜಸ್ಸನ್ನು ಸ್ವಪ್ರಭೆಯಿಂದ ಪರಾಭೂತವನ್ನು ಮಾಡಿ ಕರ್ಮಗಳ ಆಚರಣೆಯಲ್ಲಿ ಸಮರ್ಥನಾದಕಾರಣ ದಕ್ಷನು ಎಂದು ಆತನನ್ನು ಹೇಳಿದರು! ಎಲೈ ವಿದುರನೆ, ಅನಾದಿಯಾದ ಬ್ರಹ್ಮನು ಪ್ರಜಾಸೃಷ್ಟಿಪರಿಪಾಲನಗಳಲ್ಲಿ ಆ ದಕ್ಷನನ್ನು ಅಜ್ಞಾಪಿಸಲು ಆ ದಕ್ಷನು ಸಮಸ್ತ ಪ್ರಜೇಶ್ವರರನ್ನು ಪ್ರಜಾಸೃಷ್ಟಿಯಲ್ಲಿ ಆಜ್ಞಾಪಿಸಿದನು ಎಂದು ನುಡಿದನು."

೩೧ನೇ ಅಧ್ಯಾಯ.

ಪ್ರಚೇತಸ್ಸುಗಳು ನಾರದೋಪದೇಶದಿಂದ ಮುಕ್ತಿಹೊಂದಿದ್ದು.

"ಎಲೈ ವಿದುರನೆ, ಆ ಬಳಿಕ ಪ್ರಚೇತಸ್ಸುಗಳು ಭಗವದ್ವಾಕ್ಯವನ್ನು ಸ್ಮರಿಸಿಕೊಂಡು ಶೀಘ್ರದಲ್ಲಿ ಉತ್ಪನ್ನವಾದ ಜ್ಞಾನವುಳ್ಳವರಾಗಿ ಪತ್ನಿಯಾದ ವಾರ್ಕ್ಷೀಯನ್ನು ಪುತ್ರನ ವಶದಲ್ಲಿರಿಸಿ ಗೃಹವನ್ನು ಬಿಟ್ಟು ಹೊರಟು ಹೋಗಿ ಪಶ್ಚಿಮ ಸಮುದ್ರತೀರದೊಳು ಜಾಬಾಲಿ ಋಷಿಯ ಆಶ್ರಮದಲ್ಲಿ ಸರ್ವಭೂತಾತ್ಮಭಾವದಿಂದ ಅಧ್ಯಾತ್ಮವಿಚಾರರೂಪವಾದ ಬ್ರಹ್ಮಸತ್ರದಲ್ಲಿ ದೀಕ್ಷಿತರಾದರು; ಆಮೇಲೆ ಪ್ರಾಣಗಳನ್ನು ಮನಸ್ಸನ್ನು ವಾಕ್ಕನ್ನು ದೃಷ್ಟಿಯನ್ನು ಸಹ ಜಯಿಸಿ ಯೋಗಶಾಸ್ತ್ರಪ್ರಸಿದ್ಧಗಳಾದ ಸಮಸ್ತಾಸನಗಳನ್ನು ಸ್ವಾಧೀನ ಮಾಡಿಕೊಂಡು ಶಾಂತಗಳಾದ ಸಮಾನ ಶರೀರಗಳುಳ್ಳವರಾಗಿ ಶುದ್ಧವಾದ ಪರಬ್ರಹ್ಮವಸ್ತುವಿನಲ್ಲಿ ಸೇರಿಸಲ್ಪಟ್ಟ ಚಿತ್ತವುಳ್ಳ ಸಮಾಧಿನಿಷ್ಠೆಯಲ್ಲಿರುವ ಪ್ರಚೇತಸ್ಸುಗಳನ್ನು ದೇವಾಸುರರಿಂದ ಸ್ತುತಿಗೈಯಲ್ಪಡುತ್ತಿರುವ ನಾರದ ಋಷಿಯು ಕಂಡನು; ಆ ಪ್ರಚೇತಸ್ಸುಗಳು ಆ ಋಷಿಯನ್ನು ನೋಡಿ ಶೀಘ್ರವಾಗಿ ಎದ್ದು ನಮಸ್ಕರಿಸಿ ಅಭಿವಾದನಂಗೈದು ಅರ್ಘ್ಯಾದಿಗಳಿಂದ ಪೂಜಿಸಿ ಆತನು ಪೀಠದ ಮೇಲೆ ಸುಖಾಸೀನನಾಗಿ ಕುಳಿತಮೇಲೆ ಆತನನ್ನು ಕುರಿತು 'ಎಲೈ ದೇವ ಋಷಿಯಾದ ನಾರದನೆ, ನಿನಗೆ ಸುಖಾಗಮನವುಂಟಾಯಿತೆ; ನಮಗೆ ನಿನ್ನ ದರ್ಶನವುಂಟಾಯಿತೆಂಬುದು ಮಹಾಶುಭವು; ನಿನ್ನ ಸಂಚಾರವು ಸೂರ್ಯನ ಸಂಚಾರದಂತೆ ಲೋಕಕ್ಷೇಮಾರ್ಥವಾಗಿಯೇ ಹೊರ್ತು ಸುಮ್ಮನೆ ಅಲ್ಲ; ಭಗವಂತನಾದ ಪರಮೇಶ್ವರನಿಂದಲೂ, ಶ್ರೀಹರಿಯಿಂದಲೂ ಯಾವ ಬ್ರಹ್ಮತತ್ವವು ನಮಗೆ ಉಪದಿಷ್ಟವಾಯಿತೋ ಎಲೈ ಪ್ರಭುವಾದ ನಾರದ ಋಷಿಯೆ! ಗೃಹಾದಿಗಳಲ್ಲಿ ಆಸಕ್ತರಾದ ನಮಗೆ ಆ ಬ್ರಹ್ಮತತ್ವರೂಪವು ವಿಸ್ಮೃತವಾಯಿತು; ಅದುಕಾರಣ ಯಾವ ಅಧ್ಯಾತ್ಮಜ್ಞಾನದಿಂದ ದಾಟಲಶಕ್ಯವಾದ ಸಂಸಾರ ಸಾಗರವನ್ನು ಶೀಘ್ರವಾಗಿ ದಾಟುತ್ತೇವೆಯೋ ಅಂಥಾ ಆ ಬ್ರಹ್ಮತತ್ವಸ್ವರೂಪವನ್ನು ನಮಗೆ ಪುನಃ ನೀನು ಉಪದೇಶಂಗೈದು ನಮ್ಮನ್ನು ಅನುಗ್ರಹಿಸು' ಎಂದು ಪ್ರಾರ್ಥನಂಗೈಯಲು ಭಗವಂತನಾದ ನಾರದ ಋಷಿಯು ಉತ್ತಮಶ್ಲೋಕನಾದ ಭಗವಂತನಲ್ಲಿ ಚಿತ್ತವನ್ನಿರಿಸಿ ಪ್ರಚೇತಸ್ಸುಗಳನ್ನು ಕುರಿತು 'ಎಲೈ ಪ್ರಚೇತಸ್ಸುಗಳಿರಾ, ಈಶ್ವರನಾದ ಶ್ರೀಹರಿಯು ಯಾತರಿಂದ ಸೇವಿಸಲ್ಪಡುತ್ತಾನೆಯೋ ಆ ಜನ್ಮವೇ ಜನ್ಮವು; ಆ ಕರ್ಮಗಳೇ ಕರ್ಮಗಳು; ಆ ಆಯುಸ್ಸೇ ಆಯುಸ್ಸು; ಆ ಚಿತ್ತವೇ ಚಿತ್ತವು; ಆ ವಾಕ್ಕೇ ವಾಕ್ಕು; ದೇವತೆಗಳಂತೆ ದೀರ್ಘಾಯುಸ್ಸುಳ್ಳವರಾದಾಗ್ಯೂ ಯಾರು ಭಗವಂತನಲ್ಲಿ ವಿಮುಖರೋ ಅವರಿಗೆ ಬ್ರಾಹ್ಮಣಕುಲದಲ್ಲಿ ಉತ್ಪತ್ತಿಯಿಂದ ಏನು ಫಲವು? ಉಪನಯನಾದಿ ಸಂಸ್ಕಾರಗಳಿಂದೇನು? ಯಜ್ಞದೀಕ್ಷೆಗಳಿಂದೇನು? ವೇದೋಕ್ತಗಳಾದ ಕರ್ಮಗಳಿಂದೇನು? ವೇದಶಾಸ್ತ್ರಶ್ರವಣದಿಂದೇನು? ತಪಸ್ಸಿನಿಂದೇನು? ವಾಕ್ಚಾತುರ್ಯಗಳಿಂದೇನು? ಮನೋವೃತ್ತಿಗಳಿಂದೇನು? ಕುಶಲಬುದ್ಧಿಯಿಂದೇನು? ಬಲದಿಂದೇನು? ಇಂದ್ರಿಯಪಟುತ್ವದಿಂದೇನು? ಪ್ರಾಣಾಯಾಮಾದಿ ಯೋಗದಿಂದೇನು? ಪ್ರಕೃತಿಪುರುಷವಿವೇಚನರೂಪವಾದ ಸಾಂಖ್ಯದಿಂ

ದೇನು ? ಸನ್ಯಾಸದಿಂದೇನು ? ವೇದಾಧ್ಯಯನದಿಂದೇನು ? ಇನ್ನೂ ಇತರಗಳಾದ ವ್ರತನಿಯಮಾದಿಗಳಿಂದೇನು ಫಲವು ; ಸ್ವರೂಪಜ್ಞಾನೋಪದೇಶದಿಂದ ಬಂಧಪರಿಹಾರಕನಾದ ಶ್ರೀಹರಿಯು ಸಂತೋಷರಹಿತನಾದಮೇಲೆ ಸರ್ವವು ವ್ಯರ್ಥವೇಸರಿ ; ಸಮಸ್ತ ಶ್ರೇಯಸ್ಸುಗಳಿಗೂ ಉತ್ತಮವಾದದ್ದು ಆತ್ಮಲಾಭವು ; ಆತ್ಮಲಾಭಕ್ಕಿಂತಲೂ ಅಧಿಕವಾದ ಶ್ರೇಯಸ್ಸು ಯಾವದೂ ಇಲ್ಲ ; ಸರ್ವಭೂತಗಳಿಗೂ ಅಂತರಾತ್ಮನಾದ ಶ್ರೀಹರಿಯು ಪ್ರಿಯನು ; ಸ್ವರೂಪಜ್ಞಾನೋಪದೇಶದಿಂದ ಆತ್ಮಪ್ರದನು ಶ್ರೀಹರಿಯೇಸರಿ ; ಯಾವ ರೀತಿಯಲ್ಲಿ ವೃಕ್ಷಕ್ಕೂ ಬೇರುಗಳಿಗೂ ತೃಪ್ತ್ಯರ್ಥವಾಗಿ ಮೂಲಕ್ಕೆ ಉದಕಸೇಚನೆಯನ್ನು ಮಾಡಿದರೆ ಸ್ಕಂಧಗಳು ಶಾಖೆಗಳು ಉಪಶಾಖೆಗಳು ಪತ್ರಗಳು ಪುಷ್ಪಗಳು ಫಲಗಳು ಇವೆಲ್ಲವೂ ತೃಪ್ತಗಳಾಗುವವೋ ಪ್ರಾಣಿಗಳಿಗೆ ಆಹಾರವನ್ನಿತ್ತರೆ ಸರ್ವೇಂದ್ರಿಯಗಳೂ ಹ್ಯಾಗೆ ತೃಪ್ತಿಹೊಂದುವವೋ ಹಾಗೆ ಭಗವಂತನಾದ ಶ್ರೀಹರಿಯು ಆರಾಧಿತನಾದರೆ ಸರ್ವದೇವತೆಗಳೂ ಆರಾಧಿಸಲ್ಪಟ್ಟವರಾಗುವರು ; ಯಾವ ರೀತಿಯಲ್ಲಿ ವರ್ಷಾಕಾಲದಲ್ಲಿ ಸೂರ್ಯನ ದೆಶೆಯಿಂದ ಉದಕಗಳು ಹುಟ್ಟಿ ಪುನಃ ಗ್ರೀಷ್ಮಕಾಲದಲ್ಲಿ ಆ ಉದಕಗಳು ಸೂರ್ಯನಲ್ಲೇ ಪ್ರವೇಶಿಸುವವೋ ಯಾವ ರೀತಿಯಲ್ಲಿ ಸ್ಥಾವರ ಜಂಗಮಪ್ರಾಣಿಗಳು ಪೃಥಿವೀದೆಶೆಯಿಂದ ಉನ್ನತಗಳಾಗಿ ಪುನಃ ಕಾಲವಶದಿಂದ ಆ ಪೃಥಿವಿಯಲ್ಲಿಯೇ ಪ್ರವೇಶಿಸುವವೋ ಹಾಗೆ ಗುಣಪ್ರವಾಹರೂಪವಾದ ಈ ಪ್ರಪಂಚವು ಶ್ರೀಹರಿಯಲ್ಲಿ ಅಭಿವ್ಯಕ್ತವಾಗುವದು ; ಹರಿಯಲ್ಲೇ ಲೀನವಾಗುವದು ! ಎಲೈ ಪ್ರಚೇತಸ್ಸುಗಳಿರಾ, ಯಾವ ರೀತಿಯಲ್ಲಿ ಆಕಾಶದಲ್ಲಿ ಮೇಘಜನ್ಯಗಳಾದ ಕೆಂಪು ತಮಸ್ಸು ಪ್ರಕಾಶ ಮೊದಲಾದವುಗಳುಂಟಾಗಿ ಪುನಃ ಲಯವನ್ನೈದುವವೋ ಹಾಗೆ ರಜಸ್ತಮಸ್ಸತ್ವಗುಣ ಪ್ರವಾಹರೂಪವಾದ ಪ್ರಪಂಚವು ಆಯಾಶಕ್ತಿಗಳಿಂದ ಬ್ರಹ್ಮನಲ್ಲಿ ಅಭಿವ್ಯಕ್ತವಾಗಿ ಲಯವನ್ನೈದುವದು ! ಎಲೈ ಪ್ರಚೇತಸ್ಸುಗಳಿರಾ, ಅದುಕಾರಣ ಸಮಸ್ತಪ್ರಾಣಿಗಳಿಗೂ ಏಕಾತ್ಮನಾಗಿ ಕಾಲರೂಪನಾಗಿ ಪ್ರಧಾನರೂಪನಾಗಿ ಪುರುಷನಾಗಿ ಪರಮೇಶ್ವರನಾಗಿ ಸ್ವರೂಪಪ್ರಕಾಶದಿಂದ ಪರಿಹರಿಸಲ್ಪಟ್ಟ ಮಾಯಾಗುಣಗಳುಳ್ಳ ಭಗವಂತನನ್ನು ಏಕಾತ್ಮಭಾವದಿಂದಲೂ ಅಭೇದರೂಪದಿಂದಲೂ ಭಜಿಸುವರಾಗಿ ; ಸರ್ವಭೂತದಯೆಯಿಂದಲೂ ಯದೃಚ್ಛೆಯಿಂದ ಲಭ್ಯವಾದ ವಸ್ತುವಿನಿಂದ ಸಂತೋಷಪಡುವದರಿಂದಲೂ ಸರ್ವೇಂದ್ರಿಯ ನಿಗ್ರಹದಿಂದಲೂ ಭಗವಂತನು ಶೀಘ್ರವಾಗಿ ಸಂತುಷ್ಟನಾಗುವನು ; ಸಮಸ್ತಕಾಮವಾಸನೆಗಳನ್ನು ನಿಶ್ಶೇಷವಾಗಿ ಪರಿಹರಿಸಿಕೊಂಡು ಶುದ್ಧವಾದ ಸತ್ಪುರುಷರ ಮನಸ್ಸಿನಲ್ಲಿ ನಿರಂತರ ಭಾವನೆಯಿಂದ ಸ್ಥಿರವಾಗಿ ನಿಲ್ಲಿಸಲ್ಪಟ್ಟ ಭಗವಂತನು ಭಕ್ತಪರಾಧೀನನು ಎಂಬ ಅರ್ಥವನ್ನು ಪ್ರಕಟ ಮಾಡುವನಾಗಿ ನಾಶರಹಿತನಾಗಿ ಸ್ಥಿರವಾಗಿರುವನು ; ಯಾವ ಪುರುಷಾಧಮರು ವಿದ್ಯಾಮದದಿಂದಲೂ ಧನಮದದಿಂದಲೂ ಸತ್ಕುಲದಲ್ಲಿ ಹುಟ್ಟಿದ ಮದದಿಂದಲೂ ಸಮಸ್ತ ಕರ್ಮಗಳನ್ನೂ ಮಾಡುತ್ತೇವೆಂಬ ಮದದಿಂದಲೂ ದರಿದ್ರರಾದ ಸಜ್ಜನರಲ್ಲಿ ಪಾಪವನ್ನು ಮಾಡುತ್ತಾರೆಯೋ ಪಾಪಿಷ್ಠರಾದ ಅಂಥಾ ಪುರುಷಾಧಮರಿಂದ ಮಾಡಲ್ಪಟ್ಟ ಪೂಜೆಯನ್ನು ನಿರ್ಧನರಾಗಿ ಶ್ರೀಹರಿಯನ್ನೇ ಧನವನ್ನಾಗಿ ನಂಬಿರುವ ವಿರಕ್ತಭಕ್ತರಿಗೆ ಪ್ರಿಯನಾದ ಶ್ರೀಹರಿಯು ಗ್ರಹಿಸುವದಿಲ್ಲ ; ಸ್ವತಃ ಪರಿಪೂರ್ಣನಾದ ಯಾವ ಶ್ರೀಹರಿಯು ನಿರಂತರದಲ್ಲಿಯೂ ಅನುವರ್ತಿಸಿಕೊಂಡಿರುವ ಲಕ್ಷ್ಮಿಯನ್ನೂ ಐಶ್ವರ್ಯಾಪೇಕ್ಷಿಗಳಾದ ಅರಸುಗಳನ್ನೂ ದೇವತೆಗಳನ್ನೂ ಕೂಡ ಅನುವರ್ತಿಸುವದಿಲ್ಲವೋ ತನ್ನ ಭಕ್ತರಿಗೆ ಮಾತ್ರವೇ ಸ್ವಾಧೀನನಾಗಿರುವಂಥಾ ಅಂಥ ಭಗವಂತನನ್ನು ಕೃತಜ್ಞನಾದ ಪುರುಷನು ಯಾವವನುತಾನೇ ಬಿಟ್ಟಾನು ; ಆ ಭಗವಂತನನ್ನೇ ಭಜಿಸುವನು ; ಎಂದು ಪ್ರಚೇತಸ್ಸುಗಳಿಗೆ ತತ್ವೋಪದೇಶವನ್ನು ಮಾಡಿ ಮತ್ತೂ ಕೆಲವು ಭಗವಂತನ ಚರಿತ್ರಗಳನ್ನು ಉಪದೇಶಂಗೈದು ಬ್ರಹ್ಮಪುತ್ರನಾದ ನಾರದ ಋಷಿಯು ಬ್ರಹ್ಮಲೋಕಕ್ಕೆ ತೆರಳಿಹೋದನು ! ಎಲೈ ವಿದುರನೆ, ಆ ಪ್ರಚೇತಸ್ಸುಗಳು ಆ ನಾರದನ ಮುಖದಿಂದ ಹೊರಕ್ಕೆಬಂದ ಸರ್ವಲೋಕ ಪಾಪಕ್ಷಯಕರವಾದ ಶ್ರೀಹರಿಯ ಯಶಸ್ಸನ್ನು ಕೇಳಿ ಆ ಭಗವಂತನ ಪಾದಪದ್ಮವನ್ನು ಸ್ಮರಿಸುತ ಆ ಪರಮಾತ್ಮನ ಸಾಯುಜ್ಯವನ್ನೈದಿದರು ! ಎಲೈ ವಿದುರನೆ, ನೀನು ನನ್ನನ್ನು ಪ್ರಶ್ನೆಗೈದೆಯಾದ್ದರಿಂದ ನಾರದ ಪ್ರಚೇತಸ್ಸುಗಳ ಸಂವಾದರೂಪವಾದ ಈ ಉಪಾಖ್ಯಾನವು ಶ್ರೀಹರಿಕೀರ್ತನವು ನಿನಗೆ ನನ್ನಿಂದ ಹೇಳಲ್ಪಟ್ಟಿತು" ಎಂದು ಮೈತ್ರೇಯನು ವಿದುರನನ್ನು ಕುರಿತು ನಿರೂಪಿಸಿದನು.

“ಎಲೈ ಪರೀಕ್ಷಿದ್ರಾಯನೆ, ಮನು ಪುತ್ರನಾದ ಉತ್ತಾನಪಾದರಾಯನ ವಂಶವು ವರ್ಣಿಸಲ್ಪಟ್ಟಿತು ; ಇನ್ನು ಯಾವ ಪ್ರಿಯವ್ರತರಾಯನು ನಾರದನಿಂದ ಆತ್ಮವಿದ್ಯೆಯನ್ನು ಪಡದು ಪುನಶ್ಚ ಭೂಮಂಡಲಾಧಿಪತ್ಯವನ್ನು ಮಾಡಿ ಪುತ್ರರಿಗೆ ಭೂಮಿಯನ್ನು ವಿಭಾಗಿಸಿ ಕೊಟ್ಟು ಪರಮಪದವನ್ನೈದಿದನೋ ಆ ಪ್ರಿಯವ್ರತರಾಯನ ವಂಶವನ್ನು ಕೇಳು ; ಎಲೈ ಪರೀಕ್ಷಿದ್ರಾಯನೆ, ಮೈತ್ರೇಯನಿಂದ ವರ್ಣಿಸಲ್ಪಟ್ಟ ಭಗವತ್ಕಥಾರೂಪವಾದ ಉಪಾಖ್ಯಾನವನ್ನು ಕೇಳಿ ವಿದುರನು ಅಭಿಹೃಷ್ಟವಾದ ಚಿತ್ತವುಳ್ಳವನಾಗಿ ಆನಂದಬಾಷ್ಪ ಪೂರ್ಣನೇತ್ರನಾಗಿ ಶಿರಸ್ಸಿನಿಂದ ಮೈತ್ರೇಯ ಮುನಿಯ ಪಾದವನ್ನೂ ಚಿತ್ತದಿಂದ ಶ್ರೀಹರಿಯ ಪಾದವನ್ನೂ ಸಹಾ ಧರಿಸಿ ಆತನನ್ನು ಕುರಿತು ‘ಎಲೈ ಮಹಾಯೋಗಿಯಾದ ಮೈತ್ರೇಯ ಋಷಿಯೆ, ದಯಾಶಾಲಿಯಾದ ನಿನ್ನಿಂದ ದೀನವತ್ಸಲನಾದ ಶ್ರೀಹರಿಯ ಸ್ವರೂಪಪರಿಜ್ಞಾನಕ್ಕೆ ಆವರಣವಾದ ಅಜ್ಞಾನದ ಪಾರವು ನನಗೆ ತೋರಿಸಲ್ಪಟ್ಟಿತು.’ ಎಂದು ಮೈತ್ರೇಯ ಋಷಿಗೆ ನಮಸ್ಕರಿಸಿ ಆ ಋಷಿಯಿಂದ ಅಪ್ಪಣೆಯನ್ನು ತೆಗೆದುಕೊಂಡು ಹಸ್ತಿನಾಪುರಿಗೆ ತೆರಳಿಹೋದನು ; ಎಲೈ ಪರೀಕ್ಷದ್ರಾಯನೆ, ಶ್ರೀಹರಿಯಲ್ಲಿ ಅರ್ಪಿತಚಿತ್ತರಾದ ಅರಸುಗಳ ಚರಿತರೂಪವಾದ ಈ ಉಪಾಖ್ಯಾನವನ್ನು ಯಾವ ಪುರುಷನು ಕೇಳುವನೋ ಆ ಪುರುಷನು ಆಯುಸ್ಸನ್ನೂ ಧನವನ್ನೂ ಕೀರ್ತಿಯನ್ನೂ ಕ್ಷೇಮವನ್ನೂ ಐಶ್ವರ್ಯವನ್ನೂ ಪರಮಗತಿಯನ್ನೂ ಸಹಾ ಐದುವನು.” ಎಂದು ಶ್ರೀಶುಕಮುನಿಯು ಪರಿಕ್ಷಿದ್ರಾಯನನ್ನ ಕುರಿತು ನಿರೂಪಿಸಿದ ಅರ್ಥವನ್ನು ಸೂತಪೌರಾಣಿಕನು ನೈಮಿಶಾರಣ್ಯ ವಾಸಿಗಳಾದ ಶೌನಕಾದಿ ಋಷಿಗಳನ್ನು ಕುರಿತು ನಿರೂಪಿಸಿದನು.

ಚತುರ್ಥಸ್ಕಂಧ ಸಮಾಪ್ತಿ.







ಶ್ರೀಬಾದರಾಯಣ ಸಮಾಕಲಿತಂ ರಸಾರ್ದ್ರಂ ವೇದಾಮರದ್ರುಮಫಲಂ ಶುಕವಕ್ತ್ರಮುಕ್ತಂ ।
ಕೃಷ್ಣಾವತಾರಚರಿತಾಮೃತಪೂರಪೂರ್ಣಂ ಭೋ ಭಾವುಕಾಃ ಪಿಬತ ಭಾಗವತಂ ರಸಮಾತ್ಮಬೋಧಂ ॥

ಶ್ರೀ ಕೃಷ್ಣರಾಜ ವಾಣೀವಿಲಾಸ

ಎಂಬ

ಶ್ರೀಮದ್ಭಾಗವತದ ಕನ್ನಡ ಟೀಕು

ಪಂಚಮ ಸ್ಕಂಧ.

೧ನೇ ಅಧ್ಯಾಯ.

ಪ್ರಿಯವ್ರತಮಹಾರಾಯನು ಪರಮಪದವನ್ನೈದಿದ್ದು.

ಪೂರ್ವಸ್ಕಂಧಾಂತ್ಯಭಾಗದಲ್ಲಿ ಪ್ರಿಯವ್ರತಮಹಾರಾಯನು ನಾರದಮುನಿಯಿಂದ ಅಧ್ಯಾತ್ಮಶಾಸ್ತ್ರವನ್ನು ಉಪದೇಶಂಗೈದುಕೊಂಡು ಪುನಃ ಅಖಂಡಭೂಮಂಡಲಾಧಿಪತ್ಯವನ್ನು ಮಾಡಿ ಅನಂತರದಲ್ಲಿ ಭೂಮಂಡಲವನ್ನು ವಿಭಾಗಿಸಿ ಪುತ್ರರಿಗಿತ್ತು ಪರಮಪದವನ್ನೈದಿದನೆಂದು ಶ್ರೀಶುಕಮುನಿಯು ಪರಿಕ್ಷಿದ್ರಾಯನನ್ನು ಕುರಿತು ನಿರೂಪಿಸಿದನು; ಆತನು ಆಶ್ಚರ್ಯದಿಂದ "ಎಲೈ ಶ್ರೀಶುಕಾಚಾರ್ಯನೆ, ಪರಮಭಾಗವತನಾದ್ದರಿಂದ ಪರಮಾತ್ಮನಲ್ಲಿ ವಿಹರಿಸುತಲಿರುವ ಪ್ರಿಯವ್ರತರಾಯನು ಯಾವ ಗೃಹವಾಸದಿಂದ ಕರ್ಮಬಂಧವೂ ಆತ್ಮಸ್ವರೂಪಕ್ಕೆ ತಿರಸ್ಕಾರವೂ ಉಂಟಾಗುವದೋ ಅಂಥಾ ಗೃಹದಲ್ಲಿ ಎಂತು ರಮಿಸಿದನು; ಅಂಥಾ ಸಂಗರಹಿತರಾದ ಭಗವದ್ಭಕ್ತರಿಗೆ ಗೃಹದಲ್ಲಿ ಇಂಥಾ ಆಸಕ್ತಿಯು ನಿಶ್ಚಯವಾಗಿ ಹುಟ್ಟಲರಿಯದು; ಪ್ರಾಣಿಸಂತಾಪವನ್ನು ಪರಿಹರಿಸುವ ಶ್ರೀಹರಿಯ ಚರಣಾರವಿಂದಗಳ ಛಾಯೆಯಿಂದ ಸುಖಯುಕ್ತವಾದ ಚಿತ್ತವುಳ್ಳ ಮಹಾತ್ಮರಿಗೆ ತಮ್ಮ ಕುಟುಂಬದಲ್ಲಿ ಇಚ್ಛಾಪೂರ್ವಕವಾದ ಬುದ್ಧಿಯು ಪುಟ್ಟಲರಿಯದು; ಹೀಗಿರುವಲ್ಲಿ ಪತ್ನೀಪುತ್ರ, ಗೃಹಾದಿಗಳಿಂದ ಆಸಕ್ತನಾದ ಆತನಿಗೆ ಮುಕ್ತಿಯು ಶ್ರೀಕೃಷ್ಣನಲ್ಲಿ ನಿಶ್ಚಯವಾದ ಬುದ್ಧಿಯು ಕೂಡ ಉಂಟಾದವೆಂದು ಹೇಳಿದ್ದರಿಂದ ನನಗೆ ಮಹಾಸಂಶಯವಾಗಿದೆ" ಎಂದು ಪ್ರಶ್ನೆಗೈಯಲು ಶುಕಮುನಿಯು ಆತನನ್ನು ಕುರಿತು 'ಎಲೈ ಅರಸೆ, ಅಂಥಾ ಭಗವದ್ಭಕ್ತರ ಚಿತ್ತವನ್ನು ಗೃಹಾಸಕ್ತಿ ಮೊದಲಾದ ವಿಕಾರಗಳು ಹೊಂದದೆಂಬದು ಸತ್ಯವೇ ಸರಿ; ಆದಾಗ್ಯೂ ಉತ್ತಮಪುರುಷರಿಂದ ಶ್ಲಾಘನೆ ಮಾಡತಕ್ಕ ಕೀರ್ತಿಯುಳ್ಳ ಭಗವಂತನ ಪಾದಾರವಿಂದ ಮಕರಂದರಸಾಸ್ವಾದನೆಯಲ್ಲಿ ಸಮರ್ಪಿಸಲ್ಪಟ್ಟ ಚಿತ್ತವುಳ್ಳ ಮಹಾತ್ಮರು ಯಾ

ವದಾದರು ಬಂದು ವಿಘ್ನದಿಂದ ತಮ್ಮ ಮಾರ್ಗವು ಖಿಲವಾಗಿದ್ದರೂ ಭಾಗವತರೆಂಬ ಪರಮಹಂಸರಿಗೆ ಅತಿಪ್ರಿಯನಾದ ಶ್ರೀಹರಿ ಕಥೆಯೆಂಬ ಅತಿಶುಭಕರವಾದ ಆ ಮಾರ್ಗವನ್ನು ಬಿಡಲಾರರು ; ಈ ಪ್ರಿಯವ್ರತರಾಯನು ಬ್ರಹ್ಮವಿದ್ಯಾವಿಚಾರಂಗೈಯ್ಯುವದಕ್ಕೆ ಚತುರ್ಮುಖನ ಆಜ್ಞೆಯೇ ವಿಘ್ನವಾಯಿತು ; ಅದು ಹ್ಯಾಗೆಂದರೆ : ಎಲೈ ರಾಜಶೇಖರನೆ ಕೇಳು ! ನಾರದಮುನಿಯ ಚರಣಾರವಿಂದಗಳ ಸೇವೆಯಿಂದ ಶೀಘ್ರವಾಗಿ ಪರಮತತ್ವಸ್ವರೂಪವನ್ನು ತಿಳಿದು ಪರಮಾತ್ಮಸಮಾಧಿಯಲ್ಲಿ ನಿಯಮವನ್ನು ಗ್ರಹಿಸುತಲಿರುವ ಪರಮಭಾಗವತನಾದ ಆ ಪ್ರಿಯವ್ರತರಾಯನು ಭೂಮಂಡಲದ ಪರಿಪಾಲನಕ್ಕೋಸುಗ ರಾಜಶಾಸ್ತ್ರೋಕ್ತಗಳಾದ ಉತ್ಕೃಷ್ಟಗುಣಸಮೂಹಗಳಿಗೆ ಮುಖಪ್ರದನಾದ್ದರಿಂದ ತನ್ನ ತಂದೆಯಾದ ಸ್ವಾಯಂಭುವಮನುವಿನಿಂದ ಆಜ್ಞಾಪಿಸಲ್ಪಟ್ಟವನಾದಾಗ್ಯೂ ಭಗವಂತನಾದ ಶ್ರೀವಾಸುದೇವನಲ್ಲಿಯೇ ನಿರಂತರ ಸಮಾಧಿಯೋಗದಿಂದ ನಿಲ್ಲಿಸಲ್ಪಟ್ಟ ಸಮಸ್ತೇಂದ್ರಿಯ ವ್ಯಾಪಾರವುಳ್ಳವನಾಗಿ ಆ ಪಿತೃವಾಕ್ಯವು ಉಪೇಕ್ಷಿಸಲಶಕ್ಯವಾದಾಗ್ಯೂ ರಾಜ್ಯಾಧಿಕಾರದಲ್ಲಿ ಕೇವಲ ಅಸತ್ಯವಾದ ರಾಜ್ಯ ಪ್ರಪಂಚದಿಂದ ತನ್ನ ಆತ್ಮಸ್ವರೂಪಕ್ಕೆ ಮಲಿನಭಾವವು ಉಂಟಾದೀತೆಂದು ಆಲೋಚನಂಗೈದು ಆ ಅರ್ಥವನ್ನು ಯಾವ ಸಮಯದಲ್ಲಿ ಅಂಗೀಕರಿಸುವನಾಗಲಿಲ್ಲವೋ ಆ ಸಮಯದಲ್ಲಿ ಸರ್ವಜ್ಞನಾದ ಆದಿದೇವನಾದ ಚತುರ್ಮುಖನು ತ್ರಿಗುಣಸೃಷ್ಟಿಯನ್ನು ವೃದ್ಧಿಹೊಂದಿಸಲೋಸುಗ ಮಾಡಲ್ಪಟ್ಟ ಧ್ಯಾನವಿಶೇಷದಿಂದ ನಿಶ್ಚಯಿಸಲ್ಪಟ್ಟ ಸಕಲಲೋಕಗಳ ಅಭಿಪ್ರಾಯವುಳ್ಳವನಾಗಿ ಪುರುಷರೂಪವನ್ನು ತಾಳಿರುವ ವೇದಗಳಿಂದ ಮರೀಚಿ ಮುಖ್ಯರಾದ ಋಷಿಸಮೂಹಗಳಿಂದಲೂ ಪರಿವೃತನಾಗಿ ಸತ್ಯಲೋಕದ ದೆಶೆಯಿಂದ ಆವಿರ್ಭವಿಸಿದನು ; ಆಗ ಆಕಾಶಪ್ರದೇಶದಲ್ಲಿ ಚಂದ್ರನಂತೆ ಹೊಳೆಯುತಲಿರುವ ಆ ಚತುರ್ಮುಖನು ವಿಮಾನಪಙ್ತಿಗಳಿಂದ ಸಂಚರಿಸುತಲಿರುವ ಇಂದ್ರಾದಿದೇವತೆಗಳಿಂದ ಸೇವಿಸಲ್ಪಡುತಲಿರುವವನಾಗಿ ಪ್ರತಿಮಾರ್ಗದಲ್ಲಿಯೂ ಸಂಘೀಭವಿಸಿರುವ ಸಿದ್ಧಗಂಧರ್ವ ಸಾಧ್ಯಚಾರಣ ಮುನಿ ಕಿನ್ನರಸಮೂಹಗಳಿಂದ ಸ್ತುತಿಸಲ್ಪಡುವವನಾಗಿ ಗಂಧಮಾಧವನೆಂಬ ಪರ್ವತದ ಗುಹೆಯನ್ನು ಪ್ರಕಾಶಂಗೈಯುತಲೂ ಪ್ರಿಯವ್ರತರಾಯನ ಸಮೀಪವನ್ನೈದಿದನು ; ಆ ಸಮಯದಲ್ಲಿ ಆತನಿಗೆ ತತ್ವೋಪದೇಶಂಗೈಯುತಲಿರುವ ನಾರದಮುನಿಯು ಬರುತಲಿರುವ ಆ ದಿವ್ಯಪುರುಷನನ್ನು ಹಂಸಯುಕ್ತವಾದ ವಿಮಾನದಿಂದ ತಂದೆಯಾದ ಚತುರ್ಮುಖನೆಂದು ತಿಳಿದು ಆತನಿಗೋಸ್ಕರ ತಂದೆಮಕ್ಕಳಾದ ಸ್ವಾಯಂಭುವಮನು ಪ್ರಿಯವ್ರತರಾಯರೊಡಗೂಡಿ ಅಂಜಲಿಬಂಧಂಗೈದು ಅತಿತ್ವರೆಯಿಂದ ಎದುರುಗೊಂಡು ಪೂಜೆಯನ್ನು ಮಾಡಿ ಸ್ತೋತ್ರಂಗೈದನು ! ಹೀಗೆ ಹೇಳಿದ್ದರಿಂದ ಗಂಧಮಾದನ ಪರ್ವತದ ಗುಹೆಯಲ್ಲಿ ನಾರದಮುನಿಯು ಪ್ರಿಯವ್ರತರಾಯನಿಗೆ ಆಸಮಯದಲ್ಲಿ ತತ್ವೋಪದೇಶಂಗೈಯ್ಯುತಲಿದ್ದನು ! ಆಗ ಅಲ್ಲಿಗೆ ತನ್ನ ಕುಮಾರನಾದ ಪ್ರಿಯವ್ರತರಾಯನನ್ನು ತನ್ನ ಗೃಹವನ್ನೈದಿಸಲಿಚ್ಛೆಯಿಂದ ಸ್ವಾಯಂಭುವಮನುವು ಬಂದು ಇದ್ದನೆಂದು ತಿಳಿಯತಕ್ಕದ್ದು ; 'ಎಲೈ ಪರೀಕ್ಷಿದ್ರಾಯನೆ, ಸರ್ವಜ್ಞನಾದ ಆ ಚತುರ್ಮುಖನು ನಾರದಮುನಿಯಿಂದ ಪೂಜೆಯನ್ನು ಪರಿಗ್ರಹಿಸಿ ಉಚಿತವಾದ ವಾಕ್ಚಾತುರ್ಯದಿಂದಲೂ ಅತಿವಿನಯದಿಂದಲೂ ಅವನಿಂದ ವರ್ಣಿಸಲ್ಪಟ್ಟ ಗುಣಸಮೂಹಗಳೂ ಅವತಾರಗಳೂ ಸರ್ವೋತ್ಕರ್ಷಗಳೂ ಉಳ್ಳವನಾಗಿ ದಯದಿಂದುಂಟಾದ ಮುಗುಳುನಗೆಯಿಂದ ನೋಡುತಲಿರುವವನಾಗಿ ಆ ಪ್ರಿಯವ್ರತರಾಯನನ್ನು ಕುರಿತು ಕೇವಲ ಕರ್ಮಮಾರ್ಗದಲ್ಲಿ ಆಸಕ್ತನಾದ ನನ್ನ ವಾಕ್ಯವನ್ನು ಅಹಿತವನ್ನಾಗಿ ತಿಳಿದು ನನ್ನಲ್ಲಿ ಅಸೂಯೆಯಂಗೈದಾನೆಂದು ಶಂಕಿಸಿ ನಿನಗೆ ನಾನು ಈ ರೀತಿಯಿಂದ ಆಜ್ಞಾಪಿಸುವನಲ್ಲ ; ಶ್ರೀಹರಿಯೇ ಈ ಪ್ರಕಾರವಾಗಿ ನನ್ನ ಮುಖದಿಂದ ನಿರೂಪಿಸಿದನು ! ಆದಿಯಲ್ಲಿ ಅತಿರಹಸ್ಯವಾದ ಕರ್ಮಮಾರ್ಗವನ್ನೂ ಜ್ಞಾನಮಾರ್ಗವನ್ನೂ ನಿರೂಪಿಸುವೆನು ; ಅದರ ಅರ್ಥವನ್ನು ನೀನು ತಿಳಿಯುವನಾಗು ; ಯಾವ ಶ್ರೀಹರಿಯ ಆಜ್ಞೆಯನ್ನು ನಾನೂ ನೀನೂ ನಿನಗೆ ತಂದೆಯಾದ ಸ್ವಾಯಂಭುವಮನುವೂ ನಿನ್ನ ಗುರುವಾದ ನಾರದಮುನಿಯೂ ಅಸ್ವತಂತ್ರರಾಗಿ ವಹಿಸುತಲಿಧೇವೆಯೋ ಅಂಥಾ ಅಪ್ರಮೇಯನಾದ ಶ್ರೀಹರಿಯಲ್ಲಿ ನೀನು ದೋಷಾರೋಪಣಂಗೈಯಲು ಯೋಗ್ಯನಲ್ಲ ; ಯಾವ ಪುರುಷನಾದಾಗ್ಯೂ ತಪೋವಿದ್ಯಾಯೋಗ ಬುದ್ಧಿಬಲಗಳಿಂದಲೂ ಅರ್ಥಧರ್ಮ ಪ್ರಬಲಾಶ್ರಯಗಳಿಂದಲೂ ತಾನು ಆ ಶ್ರೀಹರಿಯಿಂದ ಕಲ್ಪಿತವಾದ ವ್ಯಾಪಾರವನ್ನು ಅನ್ಯಥಾ ಮಾಡಲು ಸಮರ್ಥನಲ್ಲ ; ಎಲೈ ಪ್ರಿಯವ್ರತರಾಯನೇ, ಜಗತ್ತಿನಲ್ಲಿ ಪ್ರಾಣಿಗಳ ಸಮೂಹವು ಜನ್ಮವಿಲಯ

ಕರ್ಮಾನಷ್ಠಾನ ಶೋಕ ಮೋಹ ಭಯ ಸುಖದುಃಖಗಳನ್ನು ಅನುಭವಿಸಲೋಸುಗ ಈಶ್ವರನಿಂದ ಕೊಡಲ್ಪಟ್ಟ ದೇಹವನ್ನು ವಹಿಸುತ ವೇದವೆಂಬ ಯಾವ ಶ್ರೀಹರಿಯ ವಾಗ್ರೂಪವಾದ ಹಗ್ಗದಲ್ಲಿ ಅತಿ ದೃಢಗಳಾದ ತ್ರಿಗುಣಗಳಿಂದ ಕಲ್ಪಿಸಲ್ಪಟ್ಟ ಕರ್ಮನಿಬಂಧನಗಳೆಂಬ ಸೂತ್ರಗಳಿಂದ ನಾವು ಬದ್ಧರಾಗಿ ನಾಸಿಕದಲ್ಲಿ ಬದ್ಧಗಳಾದ ಎತ್ತುಗಳು ಯಾವಪ್ರಕಾರದಿಂದ ಮನುಷ್ಯಸೇವೆಯನ್ನು ಮಾಡುವವೋ ಆ ರೀತಿಯಲ್ಲಿ ಶ್ರೀಹರಿಯನ್ನು ಪೂಜೆಗೈಯುತಲಿಧೇವೆ; ಮತ್ತು ಲೋಕನಾಥನಾದ ಶ್ರೀಹರಿಯು ಗುಣಕರ್ಮಬಂಧನದಿಂದ ನಮಗೆ ಯಾವ ಯಾವ ದೇಹವನ್ನು ನಿರ್ಮಿಸಿಧಾನೆಯೋ ಆಯಾಯ ದೇಹವನ್ನು ನಾವು ಅಂಗೀಕರಿಸಿ ನೇತ್ರಗಳುಳ್ಳ ಪುರುಷನಿಂದ ಅಂಧಕರಂತೆ ನಿಯಮಿಸಲ್ಪಡುತಲಿರುವವರಾಗಿ ಆ ಈಶ್ವರನಿಂದ ಕೊಡಲ್ಪಟ್ಟ ಸುಖದುಃಖಗಳನ್ನನುಭವಿಸುತಲಿಧೇವೆ; ಪುರುಷನು ಮುಕ್ತನಾದಾಗ್ಯೂ ಪ್ರಾರಬ್ಧಕರ್ಮಾನುಭವ ಪರ್ಯಂತವು ನಿದ್ರೆಯಿಂದೆಚ್ಚರಗೊಂಡು ಸ್ವಪ್ನದಲ್ಲಿ ಅನುಭವಿಸಲ್ಪಟ್ಟ ಪದಾರ್ಥಗಳಂತೆ ಪ್ರಾರಬ್ಧಕರ್ಮಫಲವನ್ನು ಅಭಿಮಾನಶೂನ್ಯನಾಗಿ ಅನುಭವಂಗೈಯುತ ತನ್ನ ದೇಹವನ್ನು ಧರಿಸುವನು; ಆ ಪುರುಷನು ಪುನಹ ದೇಹಾಂತರಕ್ಕೆ ಕಾರಣಗಳಾದ ಕರ್ಮವಾಸನೆಗಳನ್ನೈದುವದಿಲ್ಲ; ಗೃಹಸ್ಥಾಶ್ರಮದಲ್ಲಿದ್ದು ವಿಷಯಗಳನ್ನನುಭವಿಸುತಲಿರುವ ಪುರುಷನಿಗೆ ಎಂತು ದೇಹಾದ್ಯಭಿಮಾನವು ಹೋಗುವದು? ಮೋಕ್ಷವೆಂತುಂಟಾಗುವದು? ಎಲೈ ಅರಸೇ, ಜಿತೇಂದ್ರಿಯನಲ್ಲದಿರುವ ಪುರುಷನು ಗೃಹವನ್ನು ಬಿಟ್ಟು ವನದಲ್ಲಿ ವಾಸಂಗೈಯುತಲಿರುವವನಾದಾಗ್ಯೂ ಅರಿಷಡ್ವರ್ಗದೊಡನೆ ಕೂಡಿರುವವನಾದ್ದರಿಂದ ಸಂಸಾರಭಯವನ್ನೈದುವನು; ಜ್ಞಾನಿಯಾಗಿ ಇಂದ್ರಿಯಗಳನ್ನು ಜಯಿಸಿ ಆತ್ಮಾರಾಮನಾಗಿರುವ ಪುರುಷನು ಗೃಹದಲ್ಲಿ ವಾಸವನ್ನು ಮಾಡುತಲಿರುವವನಾದಾಗ್ಯೂ ರಾಗಾದಿ ಚಿತ್ತದೋಷವನ್ನೈದುವದಿಲ್ಲ; ಲೋಕದಲ್ಲಿ ನೀತಿಯನ್ನು ತಿಳಿದಂಥಾ ರಾಜಪುರುಷನು ದುರ್ಗವನ್ನಾಶ್ರಯಿಸಿ ಪ್ರಬಲರಾದ ಶತ್ರುಗಳನ್ನು ಯಾವರೀತಿಯಿಂದ ಜಯಿಸುವನೋ ಆ ರೀತಿಯಿಂದ ಅರಿಷಡ್ವರ್ಗವನ್ನು ಜಯಿಸಲಿಚ್ಛೆಯುಳ್ಳ ಜ್ಞಾನಿಯು ಮೊದಲು ಗೃಹದಲ್ಲೇ ಇದ್ದುಕೊಂಡು ಪ್ರಯತ್ನಪೂರ್ವಕವಾಗಿ ಅಂಥಾ ಶತ್ರುಗಳನ್ನು ಜಯಿಸಿ ಅನಂತರದಲ್ಲಿ ಸ್ವೇಚ್ಛೆಯಿಂದ ಸಂಚರಿಸುವನು! ಎಲೈ ಪ್ರಿಯವ್ರತರಾಯನೆ, ನೀನು ಶ್ರೀಪದ್ಮನಾಭನ ಪಾದಪಂಕಜವೆಂಬ ದುರ್ಗವನ್ನಾಶ್ರಯಿಸಿ ಅರಿಷಡ್ವರ್ಗವನ್ನು ಜಯಿಸಿ ಲೋಕದಲ್ಲಿ ಈಶ್ವರನಿಂದ ಕೊಡಲ್ಪಟ್ಟ ಭೋಗಗಳನ್ನನುಭವಿಸಿ ಅನಂತರದಲ್ಲಿ ಸಂಗರಹಿತನಾಗಿ ಪರಬ್ರಹ್ಮನಲ್ಲಿ ಚಿತ್ತಸಮಾಧಿಯಂಗೈಯುವನಾಗು' ಎಂದು ನುಡಿದನು. ಆಗ ಪರಮಭಾಗವತನಾದ ಪ್ರಿಯವ್ರತರಾಯನು ಸರ್ವಜ್ಞನಾಗಿ ಲೋಕಗುರುವಾದ ಬ್ರಹ್ಮದೇವನಿಂದ ಆಜ್ಞಾಪಿಸಲ್ಪಟ್ಟ ಅತಿ ಗುರುತ್ವದಿಂದ ಬಾಗಿದ ಶಿರಸ್ಸುಳ್ಳವನಾಗಿ ಬಹುಮಾನದಿಂದ ಆ ಬ್ರಹ್ಮದೇವನ ಆಜ್ಞೆಯನ್ನಂಗೀಕರಿಸಿದನು; ಆಗ ಬ್ರಹ್ಮದೇವನು ಅತಿ ಸಂತುಷ್ಟನಾದ ಸ್ವಾಯಂಭುವಮನುವಿನಿಂದ ಪೂಜೆಯನ್ನು ಮಾಡಿಸಿಕೊಂಡು ಪ್ರಿಯವ್ರತರಾಯನು ನಾರದಮುನಿಯು ಸಹ ತನ್ನಲ್ಲಿ ವೈಷಮ್ಯವಿಲ್ಲದೆ ನೋಡುತಿರಲು ತನಗೆ ವಿಶ್ರಾಂತಿಸ್ಥಾನವಾಗಿ ವಾಙ್ಮನಸ್ಸುಗಳಿಗಗೋಚರವಲ್ಲದೆ ವ್ಯವಹಾರಾತೀತವಾಗಿರುವ ಬ್ರಹ್ಮಸ್ವರೂಪವನ್ನು ಭಾವಿಸುತ ಅಂತರ್ಧಾನವನ್ನೈದಿದನು! ಆ ಸ್ವಾಯಂಭುವಮನುವು ಬ್ರಹ್ಮದೇವನಿಂದ ಸಂಪಾದಿಸಲ್ಪಟ್ಟ ಮನೋರಥವುಳ್ಳವನಾಗಿ ನಾರದಮುನಿಯ ಸಮ್ಮತಿಯಿಂದ ಪುತ್ರನಾದ ಪ್ರಿಯವ್ರತರಾಯನಿಗೆ ಭೂಮಂಡಲವನ್ನು ಪಾಲನಂಗೈಯಲೋಸುಗ ಪಟ್ಟಾಭಿಷೇಕಂಗೈದು ತಾನು ವಿಷಯಗಳೆಂಬ ವಿಷಗಳಿಗೆ ಸಮುದ್ರರೂಪವಾದ ಗೃಹದಲ್ಲಿ ಪ್ರವರ್ತಿಸಬೇಕೆಂಬ ಇಚ್ಛೆಗೆ ಪರಾಙ್ಮುಖನಾದನು.

"ಎಲೈ ಅರಸೇ, ಈಪ್ರಕಾರವಾಗಿ ಆ ಪ್ರಿಯವ್ರತರಾಯನು ಈಶ್ವರೇಚ್ಛೆಯಿಂದೈದಿಸಲ್ಪಟ್ಟ ಕರ್ಮಮಾರ್ಗದಲ್ಲಿ ಅಧಿಕಾರವುಳ್ಳವನಾಗಿ ಸಕಲ ಜನರ ಸಂಸಾರಬಂಧಗಳನ್ನು ಪರಿಹರಿಸುವ ಮಹಿಮೆಯುಳ್ಳ ಶ್ರೀಹರಿಯ ಚರಣಾರವಿಂದಗಳ ನಿರಂತರ ಧ್ಯಾನಸಾಮರ್ಥ್ಯದಿಂದ ಪರಿಹರಿಸಲ್ಪಟ್ಟ ರಾಗಾದಿ ದೋಷಗಳುಳ್ಳಂಥಾ ಅಂತಃಕರಣವುಳ್ಳವನಾಗಿ ಅತಿ ಶುದ್ಧನಾಗಿ ಬ್ರಹ್ಮಾದಿ ದೇವತೆಗಳನ್ನು ಅವರ ಆಜ್ಞಾಪರಿಪಾಲನದಿಂದ ಬಹುಮಾನಂಗೈಯುತ

ಭೂಮಂಡಲವನ್ನಾಳಿದನು ; ಅನಂತರದಲ್ಲಿ ಆ ಪ್ರಿಯವ್ರತರಾಯನು ವಿಶ್ವಕರ್ಮನ ಮಗಳಾದ ಬರ್ಹಿಷ್ಮತಿದೇವಿಯನ್ನು ವಿವಾಹಮಾಡಿಕೊಂಡು ಆ ಪತ್ನಿಯಲ್ಲಿ ತನಗೆ ಸಮಾನರಾಗಿ ಶೀಲಗುಣರೂಪಗಳಿಂದ ಉತ್ಕೃಷ್ಟರಾದ ಆಗ್ನೀಧ್ರನು, ಇಧ್ಮಜಿಹ್ವನು, ಯಜ್ಞಬಾಹುವು, ಮಹಾವೀರನು, ಹಿರಣ್ಯರೇತಸ್ಸು, ಘೃತಪೃಷ್ಠನು, ಸವನನು, ಮೇಧಾತಿಥಿಯು, ವೀತಿಹೋತ್ರನು, ಕವಿಯು ಎಂಬ ಹತ್ತುಮಂದಿ ಪುತ್ರರನ್ನೂ ಊರ್ಜಸ್ವತೀಯೆಂಬ ಪುತ್ರಿಯನ್ನು ಸಹ ಪಡೆದನು ; ಈ ಹತ್ತುಮಂದಿ ಕುಮಾರರಲ್ಲಿ ಕವಿ ಮಹಾವೀರ ಸವನರೆಂಬ ಮೂರುಮಂದಿಯು ಜಿತೇಂದ್ರಿಯರಾಗಿ ಬಾಲ್ಯಾರಭ್ಯ ಆಧ್ಯಾತ್ಮವಿದ್ಯಾಭ್ಯಾಸಂಗೈದು ಪರಮಹಂಸಾಶ್ರಮಧರ್ಮವನ್ನೈದಿ ಪರಮೋಪಶಾಂತರಾಗಿ ಸಕಲ ಪ್ರಾಣಿಸಮೂಹಕ್ಕೆ ಆವಾಸಭೂತನಾಗಿ ಸಂಸಾರದಿಂದ ಭಯಪಟ್ಟವರಿಗೆ ರಕ್ಷಕನಾಗಿರುವ ಶ್ರೀವಾಸುದೇವನ ಕಾಂತಿಯುಕ್ತಗಳಾದ ಚರಣಾರವಿಂದಗಳ ದೃಢವಾದ ಸ್ಮರಣೆಯಿಂದ ಅಖಂಡಿತವಾದ ಪರಮಭಕ್ತಿಯೋಗ ಪ್ರಭಾವದಿಂದ ಶೋಭಿಸಲ್ಪಟ್ಟ ಅಂತಃಕರಣದಲ್ಲಿ ತೋರುತಲಿರುವ ಸಕಲ ಭೂತಗಳಿಗೆ ಆತ್ಮಭೂತನಾದ್ದರಿಂದ ಪ್ರತ್ಯಗಾತ್ಮರೂಪನಾಗಿರುವ ಶ್ರೀ ವಾಸುದೇವನಲ್ಲಿ ದೇಹಾದ್ಯುಪಾಧಿಗಳನ್ನು ಪರಿಹರಿಸಿಕೊಂಡು ಐಕ್ಯವನ್ನೈದಿದರು ! ಎಲೈ ಪರೀಕ್ಷಿದ್ರಾಯನೇ, ಆ ಪ್ರಿಯವ್ರತರಾಯನಿಗೆ ಮತ್ತೊಬ್ಬಪತ್ನಿಯಲ್ಲಿ ಉತ್ತಮ ತಾಮಸ ರೈವತರು ಎಂಬ ನಾಮಧೇಯಗಳುಳ್ಳ ಮನ್ವಂತರಾಧಿಪತಿಗಳಾದ ಮೂವರು ಪುತ್ರರು ಜನಿಸಿದರು ; ಅವರು ಮೂವರು ಅತಿ ವಿರಕ್ತರಾಗುತಿರಲು ಆ ಪ್ರಿಯವ್ರತರಾಯನು ವಿಘ್ನವಿಲ್ಲದಂತೆ ಸಕಲ ಪುರುಷವ್ಯಾಪಾರಗಳಿಗೆ ಸಾಧಕವಾದ ದೇಹಬಲದಿಂದ ಸಂಪೂರ್ಣವಾದ ಭುಜದ್ವಯದಿಂದ ಶಳೆಯಲ್ಪಟ್ಟ ಧನುಸ್ಸಿನ ಹೆದೆಯ ಟಂಕಾರಧ್ವನಿಮಾತ್ರದಿಂದ ಪರಾಜಯವನ್ನೈದಿಸಲ್ಪಟ್ಟ ದುರ್ಜನರುಳ್ಳವನಾಗಿ ಪ್ರತಿದಿವಸದಲ್ಲಿಯೂ ಬರ್ಹಿಷ್ಮತಿದೇವಿಯ ವೃದ್ಧಿಹೊಂದುತಲಿರುವ ಪತಿದರ್ಶನದಿಂದುಂಟಾದ ಪ್ರೀತಿಯಿಂದ ಎದುರ್ಗೊಂಬ ಲೀಲೆಯಿಂದಲೂ ಸ್ತ್ರೀಸ್ವಭಾವದಿಂದ ಮಾಡಲ್ಪಟ್ಟ ಶೃಂಗಾರಾದಿ ರಸಾನುಭವ ಪ್ರಕಾಶದಿಂದಲೂ ಲಜ್ಜೆಯಿಂದ ಸೂಕ್ಷ್ಮವಾದ ಮುಗುಳುನಗೆಯಿಂದಲೂ ಕೂಡಿರುವ ಸವಿನೋಟಗಳಿಂದಲೂ ಮನೋಹರವಾದ ಪರಿಹಾಸವಾಕ್ಯಗಳಿಂದಲೂ ಹಾವಭಾವವಿಲಾಸಗಳಿಂದಲೂ ತಿರಸ್ಕಾರವನ್ನೈದಿಸಲ್ಪಟ್ಟ ವಿವೇಕವುಳ್ಳವನಂತೆಯೂ ಅಜ್ಞಾನಿಯಂತೆಯೂ ಹನ್ನೊಂದರ್ಬುದ ವರ್ಷಗಳು ಮಹಾಮನಸ್ವಿಯಾಗಿ ಅಖಂಡಭೂಮಂಡಲವನ್ನಾಳಿದನು ! ಭಗವಂತನಾದ ಸೂರ್ಯನು ಲೋಕಾಲೋಕ ಪರ್ವತಪರ್ಯಂತವು ಭೂಮಂಡಲವನ್ನು ಪ್ರಕಾಶಂಗೈಯುತ ಮೇರುಪರ್ವತವನ್ನು ಪ್ರದಕ್ಷಿಣಂಗೈವ ಸಮಯದಲ್ಲಿ ಆ ಮೇರುವಿಗೆ ಅರ್ಧಭಾಗದಲ್ಲಿ ಪ್ರಕಾಶವನ್ನು ಅರ್ಧಭಾಗದಲ್ಲಿ ಅಂಧಕಾರವನ್ನೂ ಮಾಡುವದಕ್ಕೆ ಒಡಂಬಡದೆ ಭಗವದುಪಾಸನೆಯಿಂದ ಸಂಪಾದಿಸಲ್ಪಟ್ಟ ಸರ್ವೋತ್ಕೃಷ್ಟಪ್ರಭಾವವೂ ಸಮಾನವೇಗವೂ ಉಳ್ಳವನಾಗಿ ತೇಜೋಮಯವಾದ ರಥದಿಂದ ರಾತ್ರಿಯನ್ನು ಹಗಲು ಮಾಡುವೆನೆಂದು ಸಂಕಲ್ಪಿಸಿ ಎರಡನೇ ಸೂರ್ಯನಂತೆ ಏಳುಬಾರಿ ಆ ಸೂರ್ಯನನ್ನು ಅನುಸರಿಸಿ ತಿರುಗಿದನು ! ಆ ಪ್ರಿಯವ್ರತರಾಯನ ಪ್ರಸಿದ್ಧಗಳಾದ ರಥದ ಚಕ್ರಗಳ ಅಂಚುಗಳಿಂದ ರಚಿಸಲ್ಪಟ್ಟ ಹಳ್ಳಗಳೇಳು ಸಮುದ್ರಗಳಾದವು ; ಆ ಸಪ್ತಸಮುದ್ರಗಳ ಮಧ್ಯದಲ್ಲಿರುವ ಭೂಪ್ರದೇಶಗಳೇ ಜಂಬು, ಪ್ಲಕ್ಷ, ಕುಶ, ಕ್ರೌಂಚ, ಶಾಕ, ಶಾಲ್ಮಲಿ, ಪುಷ್ಕರಗಳೆಂಬ ಏಳು ದ್ವೀಪಗಳಾದವು ; ಈ ದ್ವೀಪಗಳ ಪ್ರಮಾಣವು ಹ್ಯಾಗೆಂದರೆ : ಜಂಬೂದ್ವೀಪ ಪ್ರಮಾಣ ವಿಸ್ತಾರಕ್ಕೆ ದ್ವಿಗುಣವಾದ ವಿಸ್ತಾರವುಳ್ಳಂಥಾದ್ದು ; ಪ್ಲಕ್ಷದ್ವೀಪವು ಈಪ್ರಕಾರ ಉತ್ತರೋತ್ತರ ಸಂಖ್ಯಾನುಸಾರದಿಂದ ದ್ವಿಗುಣ ವಿಸ್ತಾರವುಳ್ಳಂಥಾವಾಗಿ ಸಪ್ತದ್ವೀಪಗಳು ಸಪ್ತಸಮುದ್ರಗಳ ಮಧ್ಯಪ್ರದೇಶದಲ್ಲಿ ರಚಿಸಲ್ಪಟ್ಟಿರುವವು ; ಈಪ್ರಕಾರದಿಂದ ಕ್ಷಾರೋದ ಇಕ್ಷುರಸೋದ ಸುರೋದ ಘೃತೋದ ದಧಿಮಂಥೋದ ಕ್ಷೀರೋದ ಶುದ್ಧೋದಗಳೆಂಬದಾಗಿ ಏಳು ಸಮುದ್ರಗಳೂ ಏಳು ದ್ವೀಪಗಳಿಗೆ ಅಗಳುಗಳಂತೆ ಆಯಾ ದ್ವೀಪಗಳಿಗೆ ಸಮಾನ ಪ್ರಮಾಣವುಳ್ಳಂಥಾವಾಗಿ ಕ್ರಮದಿಂದ ಒಂದರಲ್ಲೊಂದು ಬೇರೆ ಇದ್ದಂತೆ ಆ ದ್ವೀಪಗಳ ಸುತ್ತಲೂ ರಚಿಸಲ್ಪಟ್ಟಿರುವವು ! ಎಲೈ ಅರಸೇ, ಬರ್ಹಿಷ್ಮತಿದೇವಿಗೆ ಪತಿಯಾದ ಪ್ರಿಯವ್ರತರಾಯನು ತನ್ನನ್ನೇ ಅನುಸರಿಸಿಕೊಂಡಿರುವ ಆಗ್ನೀಧ್ರ ಇಧ್ಮಜಿಹ್ವ ಯಜ್ಞಬಾಹು ಹಿರಣ್ಯರೇತಸ್ಸು

ಘೃತಪೃಷ್ಠ ಮೇಧಾತಿಥಿ ವೀತಿಹೋತ್ರರೆಂಬ ಏಳು ಜನ ಪುತ್ರರಲ್ಲಿ ಜ್ಯೇಷ್ಠಾನುಕ್ರಮದಿಂದ ಒಬ್ಬೊಬ್ಬನಿಗೆ ಒಂದೊಂದು ದ್ವೀಪಾಧಿಪತ್ಯವನ್ನಿತ್ತು ಊರ್ಜಸ್ವತೀಯೆಂಬ ನಾಮಧೇಯವುಳ್ಳ ಪುತ್ರಿಯನ್ನು ಶುಕ್ರಾಚಾರ್ಯನಿಗೆ ವಿವಾಹಾರ್ಥವಾಗಿ ಕೊಟ್ಟನು ; ಆ ಶುಕ್ರಾಚಾರ್ಯನು ಊರ್ಜಸ್ವತಿದೇವಿಯಲ್ಲಿ ದೇವಯಾನಿ ಎಂಬ ಪುತ್ರಿಯನ್ನು ಪಡೆದನು! ಎಲೈ ಪರೀಕ್ಷಿದ್ರಾಯನೇ, ಅಂತ್ಯಜನಾದಾಗ್ಯೂ ಯಾವ ಶ್ರೀಹರಿಯ ನಾಮಧೇಯವನ್ನು ಒಂದುಬಾರಿಯಾದರೂ ಉಚ್ಚಾರಣಗೈದರೆ ಆಕ್ಷಣದಲ್ಲೇ ಸಂಸಾರಬಂಧವನ್ನು ಬಿಡುವನೋ ಅಂಥಾ ಶ್ರೀಹರಿಯ ಪಾದಾರವಿಂದ ಧೂಳಿಗಳಿಂದ ಜಯಿಸಲ್ಪಟ್ಟ ಇಂದ್ರಿಯಗಳುಳ್ಳ ಪುರುಷರಿಗೆ ಇಂಥಾ ಪೌರುಷ ಶಕ್ತಿಯು ಇರುವದೆಂಬುದು ಆಶ್ಚರ್ಯವಲ್ಲ! ಈರೀತಿ ಅಮಿತಪರಾಕ್ರಮವುಳ್ಳ ಆ ಪ್ರಿಯವ್ರತರಾಯನು ಒಂದಾನೊಂದು ಸಮಯದಲ್ಲಿ ನಾರದಮುನಿಯ ಪಾದಗಳನ್ನು ಅನುಸರಿಸಿ ತತ್ವೋಪದೇಶಗೊಂಡು ಅನಂತರ ತನಗೆ ಪ್ರಾಪ್ತವಾದ ರಾಜ್ಯಾದಿ ಭೋಗಸಂಬಂಧದಿಂದ ಮನಸ್ಸಿನಲ್ಲಿ ಸಂತಾಪವುಳ್ಳ ತನ್ನ ಆತ್ಮನನ್ನು ಸುಖರಹಿತನಂತೆ ತಿಳಿದು 'ನನ್ನಿಂದ ಅತ್ಯಂತ ಅನುಚಿತವಾದ ಕಾರ್ಯವು ಅನುಷ್ಠಾನಗೈಯಲ್ಪಟ್ಟಿತು ; ಇಂದ್ರಿಯಗಳಿಂದ ಅವಿದ್ಯಾಕಲ್ಪಿತಗಳಾಗಿಯೂ ದುಃಖಕರಗಳಾಗಿಯೂ ಇರುವ ವಿಷಯಗಳೆಂಬ ಪಾಳುಭಾವಿಯಲ್ಲಿ ಯಾವ ಭೋಗೇಚ್ಛೆಯಿಂದ ನಾನು ಕಡೆಹಾಯಲ್ಪಟ್ಟೆನೋ ಆ ವಿಷಯ ಭೋಗೇಚ್ಛೆಯು ಇನ್ನು ಸಾಕು ಸಾಕು; ನನ್ನ ಪತ್ನಿಯಾದ ಬರ್ಹಿಷ್ಮತಿದೇವಿಯ ಚಿತ್ತವಿನೋದಕ್ಕೆ ಸಾಧನವಾದ ಕಪಿಯಂತಿರುವ ನನ್ನನ್ನು ನಿಂದಿಸು ನಿಂದಿಸು' ಎಂದು ಪಶ್ಚಾತ್ತಾಪವನ್ನೈದಿ ಶ್ರೀಹರಿಯ ಪ್ರಸಾದದಿಂದ ಪಡೆಯಲ್ಪಟ್ಟ ವಿವೇಕದಿಂದ ಪುತ್ರರಿಗೆ ಭೂಮಂಡಲವನ್ನು ವಿಭಾಗಿಸಿ ಕೊಟ್ಟು ವಿಷಯ ವೈರಾಗ್ಯದಿಂದ ಮನಸ್ಸಿನಲ್ಲಿ ಚಿಂತಿಸಲ್ಪಟ್ಟ ಮನೋಹರವಾದ ಶ್ರೀಹರಿಯ ವಿಲಾಸದಿಂದ ಹುಟ್ಟಿದ ಸಾಮರ್ಥ್ಯವುಳ್ಳವನಾಗಿ ಮಹಾಸಾಮ್ರಾಜ್ಯದೊಡನೆ ಕೂಡಿದವಳಾಗಿ ಸಕಲ ಭೋಗಗಳನ್ನನುಭವಿಸಿರುವ ಬರ್ಹಿಷ್ಮತಿದೇವಿಯನ್ನು ನಿರ್ಜೀವವಾದ ಶರೀರದಹಾಗೆ ಪರಿತ್ಯಾಗಗೈದು ನಾರದಮುನಿಯಿಂದ ಪುನಃ ಉಪದೇಶಗೈಯಲ್ಪಟ್ಟ ತತ್ವಮಾರ್ಗವನ್ನೇ ಅನುಸರಿಸಿದನು! ಎಲೈ ಅರಸೇ, ಆ ಪ್ರಿಯವ್ರತರಾಯನ ಮಾಹಾತ್ಮ್ಯವನ್ನು ಪ್ರಕಾಶಗೈಯುತಲಿರುವ ಈ ಶ್ಲೋಕಾರ್ಥಗಳು ಪೂರ್ವಕಲ್ಪಗಳಲ್ಲಿಯೂ ಕೂಡ ಪ್ರಖ್ಯಾತಗಳಾಗಿರುವವು ; ಯಾವ ಪ್ರಿಯವ್ರತರಾಯನು ಜಗತ್ತಿನ ಅಂಧಕಾರವನ್ನು ಪರಿಹರಿಸುವನಾಗಿ ತನ್ನ ರಥಚಕ್ರಗಳ ಸಂಚಾರದಿಂದುಂಟಾದ ಹಳ್ಳಗಳಿಂದ ಸಪ್ತಸಮುದ್ರಗಳನ್ನು ನಿರ್ಮಿಸಿದನೋ ಮತ್ತು ಯಾವ ಮಹಾನುಭಾವನಿಂದ ಸಪ್ತದ್ವೀಪಗಳಿಂದ ಭೂಮಂಡಲಸ್ಥಿತಿಯು ಮಾಡಲ್ಪಟ್ಟಿತೋ ಸಕಲ ಭೂತಗಳ ಸುಖಕ್ಕೋಸುಗ ಸಪ್ತದ್ವೀಪಗಳಲ್ಲಿ ನದಿ ಪರ್ವತ ವನಾದಿಗಳಿಂದ ವಿಭಾಗಪೂರ್ವಕವಾಗಿ ಯಲ್ಲೆಗಳು ರಚಿಸಲ್ಪಟ್ಟವೋ ಭಗವದ್ಭಕ್ತರಲ್ಲಿ ಅತಿಪ್ರಿಯವುಳ್ಳ ಆ ಪ್ರಿಯವ್ರತರಾಯನು ಯೋಗಗಳಿಂದಲೂ ಯಜ್ಞಾದಿಗಳಿಂದಲೂ ಪ್ರಾಪ್ತಗಳಾದ ಪಾತಾಳ ಭೂಲೋಕ ಸ್ವರ್ಗಲೋಕ ವಿಭಾಗಗಳನ್ನು ನರಕಗಳಂತೆ ತಿಳಿದನೋ ಅಂಥಾವನಿಂದ ಮಾಡಲ್ಪಟ್ಟ ವ್ಯಾಪಾರವನ್ನು ಯಾವ ಪುರುಷನು ಮಾಡುವದಕ್ಕೆ ಸಮರ್ಥನಾದಾನು" ಎಂದು ನುಡಿದನು.

೨ನೇ ಅಧ್ಯಾಯ.

ಆಗ್ನೀಧ್ರರಾಯನು ಪೂರ್ವಚಿತ್ತಿಯೆಂಬ ಪತ್ನಿಯಲ್ಲಿ ಪುತ್ರರನ್ನು ಪಡೆದದ್ದು.

ಅನಂತರದಲ್ಲಿ ಶ್ರೀಶುಕಮುನಿಯು ಪರೀಕ್ಷಿದ್ರಾಯನನ್ನು ಕುರಿತು "ಎಲೈ ಅರಸೆ, ತಂದೆಯಾದ ಪ್ರಿಯವ್ರತರಾಯನು ವಿರಕ್ತನಾಗುತಿರಲು ಆ ರಾಯನ ಆಜ್ಞೆಯಲ್ಲಿ ಅತ್ಯಂತ ಆಸಕ್ತನಾದ ಆಗ್ನೀಧ್ರರಾಯನು ಧರ್ಮದಲ್ಲೇ ಮುಖ್ಯವಾದ ದೃಷ್ಟಿಯುಳ್ಳವನಾಗಿ ಜಂಬೂದ್ವೀಪದಲ್ಲಿರುವ ಪ್ರಜೆಗಳನ್ನು ತನ್ನ ಪುತ್ರರಂತೆ ಪಾಲನಗೈದನು! ಆ ಆಗ್ನೀಧ್ರರಾಯನು ಒಂದು ಸಮಯದಲ್ಲಿ ಪುತ್ರರನ್ನು ಪಡೆಯಲಿಚ್ಛೆಯುಳ್ಳವನಾಗಿ ಉತ್ಕೃಷ್ಟವಾದ ಸುರಸ್ತ್ರೀಯರುಗಳಿಗೆ ಕ್ರೀಡಾಸ್ಥಾನವಾದ ಮಂದರಪರ್ವತದ ಗುಹೆಯಲ್ಲಿ ವಾಸಗೈದು ಪುಷ್ಪಾದಿ ಪೂಜೋಪಕರಣಗಳನ್ನು

ಸಂಪಾದಿಸಿ ಚಿತ್ತನಿಶ್ಚಲಂಗೈದು ತಪಸ್ಸಿನಿಂದ ಭಗವಂತನಾದ ಚತುರ್ಮುಖನನ್ನು ಪೂಜಿಸಿದನು ; ಅನಂತರದಲ್ಲಿ ಆದಿಪುರುಷನಾದ ಬ್ರಹ್ಮದೇವನು ಈ ಅರ್ಥವನ್ನು ತಿಳಿದು ತನ್ನ ಸಭೆಯಲ್ಲಿ ಗಾನಂಗೈಯುತಲಿರುವ ಪೂರ್ವಚಿತ್ತಿಯೆಂಬ ಅಪ್ಸರಸ್ತ್ರೀಯನ್ನು ತಪೋಭಂಗಾರ್ಥವಾಗಿ ಅವನ ಸಮೀಪಕ್ಕೆ ಕಳುಹಿಸಿದನು ; ಆ ಪೂರ್ವಚಿತ್ತಿಯು ನಾನಾ ವಿಧಗಳಾಗಿ ನಿಬಿಡಗಳಾಗಿರುವ ವೃಕ್ಷಸಮೂಹಗಳಿಂದ ಆಲಿಂಗನಂಗೈಯಲ್ಪಟ್ಟ ಸ್ವರ್ಣಮಯಗಳಾದ ಬಳ್ಳಿಗಳಲ್ಲಿ ಏಳುತಿರುವ ಮಯೂರಾದಿ ಸ್ತ್ರೀಪುರುಷ ಪಕ್ಷಿಯುಗ್ಮಗಳಿಂದ ಉಚ್ಚಾರಣಂಗೈಯಲ್ಪಡುತಲಿರುವ ಷಡ್ಜಾದಿ ಸ್ವರಗಳಿಂದ ಅತಿ ವಿಚಿತ್ರವಾಗಿ ಗಾನಂಗೈಯುತಲಿರುವ ಅತಿ ನಿರ್ಮಲವಾದ ಸರಸ್ಸಿನಲ್ಲಿ ವಿಕಸಿತಗಳಾಗಿ ಕಮಲಗಳಿಗೆ ಆಶ್ರಯವಾಗಿರುವ ಮನೋಹರವಾದ ಆಗ್ನೀಧ್ರರಾಯನ ಆಶ್ರಮವನ್ನು ಕುರಿತು ತೆರಳಿದಳು ; ಆ ಆಗ್ನೀಧ್ರರಾಯನು ಮನೋಹರವಾದ ಗಮನದಲ್ಲಿ ಅಡಿಗಳ ವಿನ್ಯಾಸ ವಿಶೇಷಗಳಿಂದ ಗಮನದಲ್ಲಿ ವಿಲಾಸವುಳ್ಳ ಆ ಪೂರ್ವಚಿತ್ತಿದೇವಿಯ ಘಣಘಣಾಯೆಂದು ಧ್ವನಿಗೈಯುತಲಿರುವ ರಮಣೀಯಗಳಾದ ಪಾದಾಭರಣಗಳ ಶಬ್ದವನ್ನು ಕೇಳಿ ಸಮಾಧಿಯೋಗದಿಂದ ಮುಚ್ಚಲ್ಪಟ್ಟ ನೇತ್ರಗಳೆಂಬ ಪದ್ಮಕೋಶಗಳ ಯುಗ್ಮವನ್ನು ಸ್ವಲ್ಪವಾಗಿ ತೆರೆದು ನೋಡಿದನು ; ಆಗ ಸಮೀಪದಲ್ಲಿ ಹೆಣ್ಣುತುಂಬಿಯಂತೆ ಪುಷ್ಪಗಳನ್ನು ಆಘ್ರಾಣಂಗೈಯುತಲಿರುವವಳಾಗಿ ದೇವ ಮನುಷ್ಯ ಜನರ ಮನೋನೇತ್ರಗಳಿಗೆ ಆನಂದವನ್ನು ವೃದ್ಧಿಹೊಂದಿಸುತಲಿರುವ ಗಮನಗಳಿಂದಲೂ ವಿಲಾಸಗಳಿಂದಲೂ ವಿನಯಯುಕ್ತವಾದ ಸವಿನೋಟದಿಂದಲೂ ಮಧುರಸ್ವರಯುಕ್ತಗಳಾದ ನುಡಿಗಳಿಂದಲೂ ನೇತ್ರಗಳು ಮೊದಲಾದ ಅವಯವಗಳಿಂದಲೂ ಪುರುಷರ ಮನಸ್ಸಿನಲ್ಲಿ ಮನ್ಮಥನಿಗೆ ಅವಕಾಶವನ್ನು ಕೊಡುತಲಿರುವವಳಾಗಿ ಅಮೃತದಂತೆಯೂ ಮಧುರವಾದ ಮಾಧ್ವದಂತೆಯೂ ಮದಕರವಾದ ತನ್ನ ಮುಗುಳುನಗೆಯೊಡನೆ ಕೂಡಿರುವ ಪರಿಮಳದಿಂದ ಮದಿಸಿರುವ ತುಂಬಿಗಳ ಸಮೂಹಗಳು ಮುತ್ತಿಕೊಂಬವೆಂಬ ಭಯದಿಂದ ಶೀಘ್ರವಾಗಿ ಅಡಿಗಳನ್ನಿಡುವ ಸೊಬಗಿನಿಂದ ರಮಣೀಯವಾಗಿ ಬಳುಕುತಲಿರುವ ಕುಚಗಳು ತುರುಬು ಒಡ್ಯಾಣವು ಸಹ ಉಳ್ಳವಳಾಗಿರುವ ಈ ಪೂರ್ವಚಿತ್ತಿದೇವಿಯು ದರ್ಶನದಿಂದ ಮನ್ಮಥನ ವಶವನ್ನೈದಿಸಲ್ಪಟ್ಟವನಾಗಿ ಆ ಆಗ್ನೀಧ್ರರಾಯನು ಆಕೆಯನ್ನು ತನ್ನ ವಶವನ್ನೈದಿಸುವದಕ್ಕೋಸ್ಕರ ಜಡಭಾವವನ್ನಟನಂಗೈಯುತ ಆ ವನಿತೆಯನ್ನು ಪುರುಷರೀತಿಯಿಂದ ಸಂಬೋಧಸಂಗೈಯ್ಯುತ ‘ಎಲೈ ಮುನಿಶ್ರೇಷ್ಠನೆ ನೀನ್ಯಾರು ? ಈ ಪರ್ವತದಲ್ಲಿ ಯಾವ ಕಾರ್ಯವನ್ನು ಮಾಡಲಿಚ್ಛೈಸುತ್ತೀಯೆ? ನೀನು ನಿಶ್ಚಯವಾಗಿ ದೇವೋತ್ತಮನಾದ ಶ್ರೀವಾಸುದೇವನ ಅಪೂರ್ವವಾದ ಮಾಯೆಯೋ ಏನು ? ಎಲೈ ಮಿತ್ರನೆ, ನೀನು ಮುಖದಲ್ಲಿ ಹೆದೆ ಇಲ್ಲದಿರುವ ಎರಡು ಧನುಸ್ಸುಗಳನ್ನು ಧರಿಸಿದ್ಧೀ ; ನಿನಗೆ ಇಂಥಾ ಧನುಸ್ಸುಗಳಿಂದ ಏನು ಕಾರ್ಯವಿದೆ ? ಜಿತೇಂದ್ರಿಯರಲ್ಲದೆ ಹುಲ್ಲೆಗಳಂತಿರುವ ನಮ್ಮಂಥಾ ಪುರುಷರನ್ನು ಈ ವನದಲ್ಲಿ ಅರಸುತಲಿದ್ದೀಯೋ ಏನು? ಎಲೈ ಮುನಿಶ್ರೇಷ್ಠನೆ, ಈ ವನದಲ್ಲಿ ಸಂಚರಿಸುತಲಿರುವ ನೀನು ನೇತ್ರಕಮಲಗಳೆಂಬ ಗರಿಗಳುಳ್ಳವಾಗಿ ವಿಲಾಸದಿಂದ ನಿಶ್ಚಲಗಳಾಗಿ ಹಿಡಿಗಳಿಲ್ಲದೆ ಮನೋಹರಗಳಾಗಿ ಅತಿ ಸೂಕ್ಷ್ಮಗಳಾದ ಮೊನೆಗಳುಳ್ಳವಾಗಿರುವ ಈ ಬಾಣಗಳನ್ನು ಯಾರಿಗೋಸ್ಕರ ಎಶೆಯುವನಾಗುತಲಿದ್ದೀಯೋ ಅದನ್ನು ನಾವರಿಯೆವು ; ನಿನ್ನ ಈ ಪರಾಕ್ರಮವು ಜಿತೇಂದ್ರಿಯರಲ್ಲದಿರುವ ನಮಗೆ ಕ್ಷೇಮವನ್ನುಂಟುಮಾಡಲಿ’ ಎಂದು ಕಡೆಗಣ್ಣುಗಳಿಂದ ನೋಡುತ ಆ ವನಿತೆಯು ಶರೀರದ ಪರಿಮಳದಲ್ಲಿ ಆಸಕ್ತಿಯಿಂದ ಹಿಂದೆ ಬರುತಲಿರುವ ತುಂಬಿಗಳನ್ನು ನೋಡಿ ‘ಎಲೈ ಸಮರ್ಥನಾದ ಮುನಿಯೆ, ನಿರಂತರವೂ ನಿನ್ನ ಈ ಶಿಷ್ಯರು ರಹಸ್ಯಾರ್ಥದೊಡನೆ ಕೂಡಿರುವ ಸಾಮವೇದವನ್ನು ಸುತ್ತಲೂ ಗಾನಂಗೈಯುತಲಿಧಾರೆ ; ಮತ್ತು ಋಷಿಗಳು ವೇದಶಾಖೆಗಳನ್ನವಂತೆ ನಿನ್ನ ಕೇಶಭಾರದಿಂದ ಸುತ್ತಲೂ ಉದುರುತಲಿರುವ ಪುಷ್ಪಗಳನ್ನೈದುತಲಿಧಾರೆ ; ನಿನ್ನ ಕಾಲುಕಡಗಗಳ ಗರ್ಭಗಳಲ್ಲಿ ತುಂಬಿರುವ ರತ್ನಗಳ ರೂಪವು ತೋರದೆ ಪ್ರಕಟವಾಗಿರುವ ಶಬ್ದವನ್ನು ಅಧಿಕವಾಗಿ ನಾವು ಕೇಳುತಲಿಧೇವೆ’ ಎಂದು ನುಡಿದು ಉಟ್ಟಿರುವ ಸೂಕ್ಷ್ಮ ಪೀತಾಂಬರವನ್ನು ಕಟಿಪಶ್ಚಾದ್ಭಾಗದ ಕಾಂತಿಯನ್ನಾಗಿ ಕಲ್ಪಿಸಿಕೊಂಡು ‘ಎಲೈ ಮುನಿಯೆ, ನಿನ್ನ ಸುಂದರವಾದ ಕಟಿಪಶ್ಚಾದ್ಭಾಗದಲ್ಲಿ ಕದಂಬಪುಷ್ಪಗಳ ಕಾಂತಿಯು ಎಲ್ಲಿಂದ ಐದಿಸಲ್ಪಟ್ಟಿತು ; ಯಾವ ನಿನ್ನ ಕಟಿಪ್ರದೇಶದಲ್ಲಿ ಮಿಂಚಿನ ಚಕ್ರದಂತೆ ಹೊಳೆಯುತಲಿರುವ ಒಡ್ಯಾಣವು ಶೋಭಿಸುವದೋ ಅಂಥಾ ಕಟಿಪ್ರದೇಶದಲ್ಲಿ

ವಲ್ಕಲವು ಎಲ್ಲಿದೆ ಕಾಣಲ್ಪಡಲಿಲ್ಲವೆಂದು ನುಡಿದು ಕುಚಗಳನ್ನು ನೋಡಿ 'ಎಲೈ ಸುಂದರನಾದ ಮುನಿಯೆ, ಯಾವ ಕಾರಣದಿಂದ ನೀನು ಬಳುಕುತಲಿರುವ ಬಡನಡುವಿನಿಂದ ಈ ಕೊಂಬುಗಳನ್ನು ಧರಿಸಿರುವೆ? ಯಾವ ಕೊಂಬುಗಳಲ್ಲಿ ನನ್ನ ದೃಷ್ಟಿಯು ತಗಲಿಕೊಂಡಿರುವದೋ ಮನೋಹರಂಗಳಾದ ಆ ಕೊಂಬುಗಳಲ್ಲಿ ಏನು ತುಂಬಿಸಲ್ಪಟ್ಟವೆ? ಯಾವ ಅನುಲೇಪನದಿಂದ ನೀನು ನನ್ನ ಆಶ್ರಮವನ್ನು ಪರಿಮಳಯುಕ್ತವನ್ನಾಗಿ ಮಾಡುತಲಿದ್ದೀಯೋ ಕೆಂಪಾಗಿಯೂ ಪರಿಮಳಯುಕ್ತವಾಗಿಯೂ ಇರುವ ಆ ಅನುಲೇಪನವು ನಿನ್ನ ಕೊಂಬುಗಳಲ್ಲಿ ಅತಿನೂತನವಾಗಿ ಹೊಳೆಯುತಲಿದೆ! ಎಲೈ ಮಿತ್ರನಾದ ಮುನಿಯೆ, ಯಾವ ಲೋಕದಲ್ಲಿರುವ ಜನರು ಈರೀತಿ ನಮ್ಮಂಥಾವರ ಮನಸ್ಸಿಗೆ ಮೋಹವನ್ನುಂಟುಮಾಡುತಲಿರುವ ಅಪೂರ್ವಗಳಾದ ಅವಯವಗಳನ್ನು ಈ ತೆರದಿಂದ ವಕ್ಷಸ್ಥಳದಲ್ಲಿ ಧರಿಸುತಲಿರುವರೋ ಮತ್ತು ಮುಖದಲ್ಲಿ ಆಶ್ಚರ್ಯಕರವಾಗಿಯೂ ಸವಿನುಡಿ ವಿಲಾಸಗಳೊಡನೆ ಯುಕ್ತವಾಗಿಯೂ ಇರುವ ಅಧರಾಮೃತವನ್ನು ಮುಗುಳುನಗೆಯನ್ನು ಸಹಾ ಧರಿಸಿರುವರೋ ಅಂಥಾ ನಿನ್ನ ಲೋಕವನ್ನು ನನಿಗೆ ತೋರಿಸು' ಎಂದು ಕುಚಾದಿಗಳನ್ನು ವರ್ಣಿಸಿ ತಾಂಬೂಲವನ್ನು ನೋಡಿ 'ಎಲೈ ಮಿತ್ರನೆ, ಯಾವ ದ್ರವ್ಯವನ್ನು ಭಕ್ಷಿಸೋಣದರಿಂದ ಇಂಥಾ ಪರಿಮಳವು ಮುಖದಿಂದ ಬರುತಲಿದೆಯೋ ನಿನಿಗೆ ಅಂಥಾ ಪರಿಮಳ ಯುಕ್ತವಾದ ಆಹಾರದ್ರವ್ಯವ್ಯಾವದು? ಏನುಕಾರಣ ನಿನ್ನ ಕರ್ಣಗಳು ರತ್ನಗಳೇ ನೇತ್ರಗಳಾಗುಳ್ಳವಾದ್ದರಿಂದ ಚಲಿಸದಿರುವ ರೆಪ್ಪೆಗಳುಳ್ಳವಾಗಿಯೂ ಪ್ರಕಾಶಿಸುವವಾಗಿಯೂ ಮಕರಾಕಾರಗಳಾಗಿಯೂ ಇರುವ ಕುಂಡಲಗಳಿಂದ ಪ್ರಕಾಶಿಸುವವೋ ಅದುಕಾರಣ ನೀನು ಶ್ರೀಹರಿಯ ಅಂಶಭೂತನಾಗಿ ತೋರುತಲಿದ್ದೀಯೆ; ಚಲಿಸುತಲಿರುವ ಮತ್ಸ್ಯಯುಗ್ಮದಂತೆ ಶೋಭಿಸುವ ನೇತ್ರಯುಗ್ಮವುಳ್ಳದ್ದಾದ್ದರಿಂದ ಹಂಸಗಳಂತೆ ಶೋಭಿಸುವ ದಂತಪಙ್ಕ್ತಿಗಳ ಕಾಂತಿಯಿಂದ ಸಮೀಪದಲ್ಲಿ ತುಂಬಿಗಳ ಸಮೂಹದಂತಿರುವ ಕೇಶಭಾರವುಳ್ಳಂಥಾ ನಿನ್ನ ಮುಖವು ಸರಸ್ಸಿನಂತೆ ತೋರುತಲಿದೆ; ನಿನ್ನ ಹಸ್ತಪದ್ಮಗಳಿಂದ ತಾಡಿಸುವ ಈ ಚಂಡು ದಿಕ್ಕುಗಳಲ್ಲಿ ಚಲಿಸುತ ಚಪಲಚಿತ್ತನಾದ ನನ್ನ ನೇತ್ರಗಳಿಗೆ ಚಂಚಲಭಾವವನ್ನುಂಟುಮಾಡುತಲಿದೆ; ನಿನ್ನ ಸಡಲಿರುವ ವಕ್ರಗಳಾದ ಕೇಶಗಳ ಸಮೂಹವನ್ನು ನೀನು ಸ್ಮರಿಸುವದಿಲ್ಲವೋ ಏನು? ಈ ಧೂರ್ತನಾದ ವಾಯುವು ನಿನ್ನಲ್ಲಿ ಆಸಕ್ತಿಯುಳ್ಳವನಾಗಿ ಉಡಿಗಂಟನ್ನು ಸಡಲಿಸುತಲಿದ್ದಾನೆ; ಅದನ್ನು ನೀನು ಸ್ಮರಿಸುವದಿಲ್ಲವೋ ಏನು? ಎಲೈ ಮಿತ್ರನಾದ ಮುನಿಯೆ, ತಪಸ್ಸಂಗೈವ ಪುರುಷರ ತಪೋವಿಘ್ನವನ್ನು ಮಾಡುತಲಿರುವ ನಿನ್ನ ಈ ದಿವ್ಯರೂಪವು ಯಾವ ತಪಸ್ಸಿನಿಂದ ಪಡೆಯಲ್ಪಟ್ಟಿತು? ನೀನು ನನ್ನೊಡನೆ ತಪಸ್ಸಂಗೈಯುವನಾಗು; ಇಷ್ಟುಮಾತ್ರವೇ ಅಲ್ಲ; ಸಂಸಾರವನ್ನು ವೃದ್ಧಿಹೊಂದಿಸುವ ಆ ಚತುರ್ಮುಖನು ನನಗೆ ಶೀಘ್ರದಿಂದ ಪ್ರಸನ್ನನಾಗಲಿ! ಎಲೈ ಬ್ರಾಹ್ಮಣನೆ, ಯಾವ ನಿನ್ನಲ್ಲಿ ನನ್ನ ದೃಷ್ಟಿಯು ಮನಸ್ಸು ಸಹಾ ತಗಲಿ ಪುನಃ ಹೊರಕ್ಕೆ ಬರಲಾರವೋ ಅಂಥಾ ಬ್ರಹ್ಮನಿಂದ ಕೊಡಲ್ಪಟ್ಟ ಅತಿಮನೋಹರನಾದ ನಿನ್ನನ್ನು ನಾನು ಬಿಡಲಾರೆನು! ಎಲೈ ರಮಣೀಯಶೃಂಗಗಳಾದ ಕೊಂಬುಗಳುಳ್ಳವನೆ, ಯಾವಕಡೆಯಲ್ಲಿ ನಿನ್ನ ಮನಸ್ಸು ಪ್ರವರ್ತಿಸುವದೋ ಅಲ್ಲಿಗೆ ಅನುಚರನಾದ ನನ್ನನ್ನು ಕರದುಕೊಂಡು ಹೋಗು; ನಿನ್ನ ಈ ಸಖರು ಅನುಕೂಲರಾಗಿ ನನ್ನನ್ನನುಸರಿಸಿಕೊಂಡಿರುವರಾಗಲಿ' ಎಂದು ಸ್ತ್ರೀಯರ ಮನೋವಶೀಕರಣ ವ್ಯಾಪಾರದಲ್ಲಿ ಅತಿನಿಪುಣನಾದ ಚಪಲಬುದ್ಧಿಯುಳ್ಳ ಆಗ್ನೀಧ್ರರಾಯನು ಈರೀತಿ ನಿಪುಣಗಳಾದ ವಿಲಾಸಗಳಿಂದ ಕೂಡಿರುವ ವಚನಗಳಿಂದ ಆ ಪೂರ್ವಚಿತ್ತಿಯನ್ನು ಸಂತೋಷಪಡಿಸಿದನು; ಅನಂತರದಲ್ಲಿ ಆ ಪೂರ್ವಚಿತ್ತಿಯು ಮಹಾವೀರನಾದ ಆಗ್ನೀಧ್ರರಾಯನ ಬುದ್ಧಿ ರೂಪ ಶೀಲ ವಿದ್ಯಾ ವಯಃ ಕೀರ್ತಿ ಸಂಪತ್ತಿಗಳಿಂದಲೂ ತ್ಯಾಗದಿಂದಲೂ ಮೋಹಯುಕ್ತವಾದ ಮನಸ್ಸುಳ್ಳವಳಾಗಿ ಜಂಬೂದ್ವೀಪಕ್ಕೆ ಅಧಿಪತಿಯಾದ ಆಗ್ನೀಧ್ರರಾಯನೊಡನೆ ಹತ್ತು ಸಾವಿರ ಸಂವತ್ಸರಗಳು ಭೂ ಸ್ವರ್ಗ ಭೋಗಗಳನ್ನನುಭವಿಸಿದಳು; ರಾಜಶ್ರೇಷ್ಠನಾದ ಆಗ್ನೀಧ್ರರಾಯನು ಆ ಪೂರ್ವಚಿತ್ತಿದೇವಿಯಲ್ಲಿ ನಾಭಿ ಕಿಂಪುರುಷ ಹರಿವರ್ಷ ಇಳಾವೃತ ರಮ್ಯಕ ಹಿರಣ್ಮಯ ಕುರು ಭದ್ರಾಶ್ವ ಕೇತುಮಾಲಗಳೆಂಬ ನಾಮಧೇಯಗಳುಳ್ಳ ಒಂಭತ್ತು ಮಂದಿ ಪುತ್ರರನ್ನು ಪ್ರತಿವರ್ಷದಲ್ಲಿಯೂ ಒಬ್ಬೊಬ್ಬ ಮಗನನ್ನಾಗಿ ಪಡದು ಆ ಪುತ್ರರನ್ನು ಆ ರಾಜಗೃಹದಲ್ಲೇ ಬಿಟ್ಟನು; ಆ ಬಳಿಕ ನಾಭಿರಾಯನೇ ಮೊದಲಾದ ಆಗ್ನೀಧ್ರರಾಯನ ಪುತ್ರರು ತಾಯಿಯಾದ ಪೂರ್ವಚಿತ್ತಿದೇವಿಯು ಅನುಗ್ರ

ಹದಿಂದ ಸ್ವಭಾವದಿಂದಲೇ ದೃಢಾಂಗರಾಗಿ ಬಲಶಾಲಿಗಳಾಗಿ ತಂದೆಯಿಂದ ವಿಭಾಗಿಸಿ ಕೊಡಲ್ಪಟ್ಟ ತಮ್ಮ ತಮ್ಮ ನಾಮಧೇಯಗಳಿಂದ ಅಂಕಿತಗಳಾದ ಜಂಬೂದ್ವೀಪದ ಒಂಭತ್ತು ಖಂಡಗಳನ್ನು ತಮ್ಮ ತಮ್ಮ ವಿಭಾಗಕ್ರಮದಿಂದ ಆಳಿದರು; ಮತ್ತು ಕಾಮಭೋಗಗಳಲ್ಲಿ ತೃಪ್ತಿಯನ್ನು ಪಡೆಯದಿರುವ ಆ ಆಗ್ನೀಧ್ರರಾಯನು ಪೂರ್ವಚಿತ್ತಿ ದೇವಿಯನ್ನೇ ಬಹುತರವಾಗಿ ಮನಸ್ಸಿನಲ್ಲಿ ಭಾವಿಸುತ ವೇದೋಕ್ತಕರ್ಮಗಳಿಂದ ಆ ಪೂರ್ವಚಿತ್ತಿದೇವಿಯ ಲೋಕವನ್ನು ಹೊಂದಿದನು! ಎಲೈ ಅರಸೆ, ಈರೀತಿ ತಂದೆಯಾದ ಆಗ್ನೀಧ್ರರಾಯನು ಬ್ರಹ್ಮಲೋಕವನ್ನೈದುತಿರಲಾಗಿ ಆ ರಾಜಕುಮಾರರು ಜ್ಯೇಷ್ಠಾನುಕ್ರಮದಿಂದ ಸುಮೇರು ಪುತ್ರಿಯರಾದ ಮೇರುದೇವಿ ಪ್ರತಿರೂಪಾ ಉದಗ್ರದಂಷ್ಟ್ರಾ, ಲತಾ ರಮ್ಯಾ ಶ್ಯಾಮಾ ನಾರಿ ಭದ್ರಾ ದೇವಿಯರೆಂಬ ನಾಮಧೇಯಗಳುಳ್ಳ ಒಂಭತ್ತು ಮಂದಿ ಕನ್ಯೆಯರನ್ನು ವಿವಾಹಮಾಡಿಕೊಂಡರು" ಎಂದು ನುಡಿದನು.

೨ ನೇ ಅಧ್ಯಾಯ.

ನಾಭಿರಾಯನ ಚರಿತ್ರೆಯು.

"ಎಲೈ ಪರೀಕ್ಷಿದ್ರಾಯನೇ, ಅನಂತರದಲ್ಲಿ ಆಗ್ನೀಧ್ರರಾಯನ ಪುತ್ರನಾದ ನಾಭಿರಾಯನು ಪುತ್ರರನ್ನು ಪಡೆಯಲಿಚ್ಛೆಯುಳ್ಳವನಾಗಿ ನಿಶ್ಚಲವಾದ ಚಿತ್ತದಿಂದ ಪತ್ನಿಯಾದ ಮೇರುದೇವಿಯೊಡನೆ ಭಗವಂತನಾದ ಶ್ರೀ ವಾಸುದೇವನನ್ನು ಕುರಿತು ಪ್ರಸಾದವನ್ನು ಪಡೆಯಲೋಸುಗ ಶ್ರದ್ಧೆಯಿಂದಲೂ ಪರಿಶುದ್ಧವಾದ ಮನಸ್ಸಿನಿಂದಲೂ ಯಜ್ಞಂಗೈಯುತಲಿರುವ ಸಮಯದಲ್ಲಿ ಪ್ರವರ್ಗ್ಯಗಳೆಂಬ ಕರ್ಮವಿಶೇಷಗಳು ಅನುಷ್ಠಾನಂಗೈಯಲ್ಪಡುತ್ತಿರಲಾಗಿ ದ್ರವ್ಯ ದೇಶ ಕಾಲ ಮಂತ್ರ ಋತ್ವಿಕ್ಕು ದಕ್ಷಿಣಾವಿಧಾನಗಳೆಂಬ ಸಾಧನ ಸಮೃದ್ಧಿಯಿಂದ ಐದಲಶಕ್ಯನಾದಾಗ್ಯೂ ಭಗವಂತನಾದ ಶ್ರೀಹರಿಯು ತನ್ನ ಭಕ್ತರಲ್ಲಿ ದಯಾಶೀಲನಾದ್ದರಿಂದ ಭಕ್ತರ ಇಷ್ಟಾರ್ಥವನ್ನು ಕೊಡಲಿಚ್ಛೆಯಿಂದ ಶೆಳೆಯಲ್ಪಟ್ಟ ಮನಸ್ಸುಳ್ಳವನಾಗಿ ದಿವ್ಯರೂಪವನ್ನು ಧರಿಸಿ ಮನೋ ನೇತ್ರಗಳಿಗೆ ಆನಂದವಂಗೈಯುತಲಿರುವ ಅಂಗಗಳಿಂದ ಮನೋಹರವಾದ ಕಾರಣ ಸುಖಕರವಾಗಿ ಸ್ವತಂತ್ರವಾಗಿರುವ ತನ್ನ ಮೂರ್ತಿಯನ್ನು ಆ ನಾಭಿರಾಯನಿಗೆ ಗೋಚರಂಗೈಸಿದನು; ಆ ಯಜ್ಞದಲ್ಲಿರುವ ಋತ್ವಿಕ್ಕುಗಳು ಸದಸ್ಯರು ಯಜಮಾನನಾದ ನಾಭಿರಾಯನು ಸಹಾ ಪ್ರಕಾಶಂಗೈಯಲ್ಪಟ್ಟ ಚತುರ್ಭುಜಗಳುಳ್ಳವನಾಗಿ ತೇಜೋಮಯನಾಗಿ ಸುವರ್ಣದಂತೆ ಪೀತವರ್ಣವಾದ ಕೌಶೇಯವನ್ನು ಧರಿಸಿ ವಕ್ಷಸ್ಥಳದಲ್ಲಿ ಹೊಳೆಯುತಲಿರುವ ಶ್ರೀವತ್ಸವೆಂಬ ಮಚ್ಚೆಯುಳ್ಳವನಾಗಿ ಶಂಖಪದ್ಮ ವನಮಾಲಾ ಚಕ್ರ ಕೌಸ್ತುಭಮಣಿ ಗದೆಗಳಿಂದ ಶೋಭಿಸುವನಾಗಿ ಪ್ರಕಟಗಳಾದ ಕಿರಣಗಳುಳ್ಳ ಕಿರೀಟ ಕುಂಡಲಗಳಿಂದಲೂ ಹಸ್ತಕಡಗಗಳಿಂದಲೂ ಕಟಿಸೂತ್ರದಿಂದಲೂ ಭುಜಕೀರ್ತಿಗಳಿಂದಲೂ ಕಾಲುಕಡಗಗಳು ಮೊದಲಾದ ಇತರಾಭರಣಗಳಿಂದಲೂ ಭೂಷಿತನಾಗಿರುವ ಪುರುಷೋತ್ತಮನಾದ ಶ್ರೀಹರಿಯನ್ನು ನಿರ್ಧನರಾದ ಪುರುಷರು ಉತ್ತಮ ನಿಧಿಯನ್ನು ಕಂಡಂತೆ ಅತಿ ಬಹುಮಾನದಿಂದ ಕಂಡು ಬಾಗಿದ ಶಿರಸ್ಸುಳ್ಳವರಾಗಿ ಪೂಜೆಯನ್ನು ಮಾಡಿ ಸ್ತೋತ್ರಂಗೈಯುತ 'ಎಲೈ ಅತಿ ಶ್ರೇಷ್ಠನಾದ ಶ್ರೀಹರಿಯೆ, ನೀನು ಪರಿಪೂರ್ಣನಾದಾಗ್ಯೂ ಭೃತ್ಯರಾದ ನಮ್ಮ ಪೂಜೆಯನ್ನು ಅಂಗೀಕರಿಸು; ನಾವಾದರೋ ನಿನ್ನನ್ನು ಸ್ತೋತ್ರಂಗೈಯ್ಯುವದಕ್ಕೆ ಸಮರ್ಥರಲ್ಲ; ನಮೋನಮಃ ಎಂದು ಇಷ್ಟುಮಾತ್ರ ನುಡಿಯುವದೇ ಸತ್ಪುರುಷರಿಂದ ನಮಗೆ ಉಪದೇಶಂಗೈಯಲ್ಪಟ್ಟದೆ; ಮಾಯಾಗುಣಗಳಾದ ಸತ್ವರಜಸ್ತಮಸ್ಸುಗಳಿಂದ ನಿರ್ಮಿತವಾದ ಪ್ರಪಂಚದಲ್ಲಿ ಬುದ್ಧಿಯುಳ್ಳವನಾದ್ದರಿಂದ ಅಸ್ವತಂತ್ರನಾದ ಪುರುಷನು ಸಕಲಜನ ಸಮೂಹಗಳ ಪಾಪಗಳನ್ನು ಪರಿಹರಿಸುವ ಶುಭಕರಗಳಾದ ನಿನ್ನ ಗುಣಸಮೂಹಗಳಲ್ಲಿ ಏಕದೇಶವನ್ನು ವರ್ಣಿಸುವದಕ್ಕೆ ಯೋಗ್ಯನಾಗುವನೇ ಹೊರ್ತು ಪ್ರಕೃತಿ ಪುರುಷರಿಗೆ ಪರನಾಗಿ ಸರ್ವಸ್ವತಂತ್ರನಾಗಿರುವ ನಿನ್ನ ಸ್ವರೂಪವನ್ನಂತು ಅತಿ ನೀಚಗಳಾದ ನಾಮರೂಪಾಕಾರಗಳಿಂದ ವರ್ಣಿಸುವದಕ್ಕೆ ಯೋಗ್ಯನಾದಾನು; ಮನೋವಾಕ್ಕುಗಳಿಗೆ ವಿಷಯನಲ್ಲ

ದಿರುವವನಾದಾಗ್ಯೂ ನೀನು ಭಕ್ತರಿಂದ ಸುಖದಿಂದ ಪೂಜಿಸಲು ಯೋಗ್ಯನು! ಎಲೈ ಪುರುಷೋತ್ತಮನಾದ ಶ್ರೀಹರಿಯೆ, ಸೇವಕರಿಂದ ಭಕ್ತಿಯಿಂದ ರಚಿಸಲ್ಪಟ್ಟ ಕೊರಳಿನ ಕಲೆಬಿಗಿದು ಹೊರಡುವ ಅಕ್ಷರಂಗಳೊಡನೆ ಕೂಡಿರುವ ಸ್ತುತಿಗಳಿಂದ ಸ್ವಚ್ಛವಾದ ಜಲದಿಂದಲೂ ಪರಿಶುದ್ಧಗಳಾದ ತಳಿರು ತುಲಸೀ ದೂರ್ವೆಗಳಿಂದ ಸಂಪಾದಿಸಲ್ಪಟ್ಟ ಪೂಜೆಯಿಂದಲೂ ಸಂತೋಷಪಡುತಲಿದ್ದೀ; ಭಕ್ತಿಯಿಲ್ಲದಿದ್ದರೆ ಅನೇಕಗಳಾದ ಅಂಗಗಳೊಡನೆ ಯುಕ್ತವಾಗಿದ್ದಾಗ್ಯೂ ಈ ಯಜ್ಞದಿಂದ ತನಗೆ ತಾನೇ ಸರ್ವಕಾಲದಲ್ಲಿಯೂ ಪ್ರತ್ಯಕ್ಷಗಳಾಗಿ ಬಂದರಲ್ಲಿಯೂ ಹೆಚ್ಚುಕುಂದಾಗದೆ ಸರಿಬೀಳುವಂತೆ ಅತಿಶಯದಿಂದ ಸಂಭವಿಸುತಲಿರುವ ಸಕಲ ಪುರುಷಾರ್ಥಗಳೇ ಸ್ವರೂಪವಾಗುಳ್ಳಂಥಾ ನಿನಗೆ ಅಪೇಕ್ಷಿತವಾದ ಪ್ರಯೋಜನವನ್ನು ನಾವು ಈಗ ಕಾಣುವದಿಲ್ಲ; ಇಷ್ಟಾರ್ಥಗಳನ್ನಪೇಕ್ಷಿಸುತಿರುವ ನಮ್ಮಂಥಾ ಜನರಿಗೆ ಈ ಯಜ್ಞಾದಿ ಕರ್ಮವು ಶ್ರೇಯಸ್ಸಾಧನಕ್ಕೆ ಉಪಯೋಗಿಸುವದೇ ಹೊರ್ತು ಪೂರ್ಣಕಾಮನಾದ ನಿನಗೆ ವಿಶೇಷವಾಗಿ ಸಂತೋಷಂಗೈಯಲಾರದು! ಎಲೈ ಪರಮಪುರುಷನಾದ ಶ್ರೀಹರಿಯೆ, ಉತ್ಕೃಷ್ಟವಾದ ತಮ್ಮ ಶ್ರೇಯಸ್ಸನ್ನು ಅರಿಯದಿರುವ ಮೂರ್ಖರಾದ ನಮ್ಮಿಂದ ನೀನು ಅತ್ಯಂತ ದಯೆಯಿಂದ ಯಥಾವಿಧಿಯಾಗಿ ಪೂಜಿಸಲ್ಪಟ್ಟವನಲ್ಲದೆ ನೀನು ಅಪೇಕ್ಷೆಯುಳ್ಳವನಂತೆ ಈಗ ದರ್ಶನವನ್ನು ಕೊಟ್ಟು ನಮ್ಮನ್ನು ಕೃತಾರ್ಥರಂಗೈದವನಾದೆ! ಎಲೈ ಶ್ರೀವಾಸುದೇವನೆ, ನೀನು ನಮಗೆ ವರಗಳನ್ನು ಕೊಡಲೋಸುಗ ಪ್ರತ್ಯಕ್ಷನಾದವನೇ ಸರಿ; ಆದಾಗ್ಯೂ ರಾಜಶ್ರೇಷ್ಠನಾದ ಈ ನಾಭಿರಾಯನ ಯಜ್ಞದಲ್ಲಿ ನಿನ್ನ ಭಕ್ತರಾದ ನಮ್ಮ ನೇತ್ರಗಳಿಗೆ ನೀನು ಯಾವಾಗ ವಿಷಯನಾದೆಯೋ ಆಗಲೇ ನಮಗೆ ಸಕಲ ವರಗಳು ಉಂಟಾದವು' ಎಂದು ನುಡಿದು ಭಗವದ್ದರ್ಶನವು ಪರಮದುರ್ಲಭವೆಂದು ಹೇಳುವರು: ಜ್ಞಾನಿಗಳಿಂದ ನಿರಂತರದಲ್ಲೂ ಅಭ್ಯಾಸಂಗೈಯಲ್ಪಟ್ಟ ಗುಣಗಳ ಸಂಕೀರ್ತನೆಯುಳ್ಳ ಎಲೈ ಶ್ರೀಹರಿಯೆ, ವೈರಾಗ್ಯದಿಂದ ಅತಿ ಪ್ರಕಾಶವಾದ ತತ್ವಜ್ಞಾನವೆಂಬ ಅಗ್ನಿಯಿಂದ ಪರಿಹರಿಸಲ್ಪಟ್ಟ ಸಕಲ ಪಾಪಗಳುಳ್ಳವರಾದ್ದರಿಂದ ನಿನ್ನಂತೆ ಪರಿಶುದ್ಧಚಿತ್ತರಾದ ಆತ್ಮಾರಾಮರಾದ ಮುನಿಗಳಿಗೂ ಕೂಡ ನೀನು ಮೋಕ್ಷದ್ವಾರವಾದ ಗುಣಸಂಕೀರ್ತನ ಮಾತ್ರವೇ ಉಳ್ಳವನಾಗುತ್ತೀಯೆ; ಭಗವದ್ದರ್ಶನದಿಂದಲೇ ಆ ಋಷಿಗಳು ಕೃತಾರ್ಥರಾದಾಗ್ಯೂ ಬಂದು ವರವನ್ನು ಪ್ರಾರ್ಥಿಸುವರು! ಎಲೈ ಶ್ರೀಹರಿಯೆ, ಯಾವರೀತಿಯಿಂದಲಾದರೂ ಕರ್ಮಲೋಪ ಮಂತ್ರಲೋಪಗಳಲ್ಲಿ ಶೀನುವದು ಜಾರಿಬೀಳುವದು ಆಕಳಿಸುವದು ದುರವಸ್ಥೆಯು ಇವೇ ಮೊದಲಾದ ದೇಹಧರ್ಮಗಳಲ್ಲಿ ಜ್ವರಮರಣದ ಸಮಯಗಳಲ್ಲಿಯೂ ಕೂಡ ನಿನ್ನನ್ನು ಸ್ಮರಿಸುವದಕ್ಕೋಸ್ಕರ ನಮ್ಮ ವಾಗಿಂದ್ರಿಯಗಳಿಗೆ ಸಕಲ ಪಾಪಗಳನ್ನು ಪರಿಹರಿಸುತಲಿರುವ ಗುಣಕಲ್ಪಿತಗಳಾದ ನಿನ್ನ ನಾಮಧೇಯಗಳು ವಿಷಯಗಳಾಗಲೀ; ಇಷ್ಟುಮಾತ್ರವೇ ಅಲ್ಲ; ಪುತ್ರನಲ್ಲೇ ಪುರುಷಾರ್ಥಬುದ್ಧಿಯುಳ್ಳವನಾದ್ದರಿಂದ ಪುತ್ರನನ್ನು ಪಡೆಯಲಿಚ್ಛೆಯುಳ್ಳ ಈ ನಾಭಿರಾಯನು ನಿನ್ನಂಥಾ ಪುತ್ರನನ್ನೇ ಅಪೇಕ್ಷಿಸುತಲಿರುವನಾದ್ದರಿಂದ ಐಹಿಕ ಪುರುಷಾರ್ಥಗಳಿಗೂ ಸ್ವರ್ಗಮೋಕ್ಷಗಳಿಗೂ ನಿಯಾಮಕನಾದ ನಿನ್ನನ್ನು ಹೂನುಚ್ಚುಗಳೊಡಗೂಡಿದ ತೌಡನ್ನು ಅಪೇಕ್ಷಿಸುತಲಿರುವ ನಿರ್ಧನನಾದ ಪುರುಷನು ಕುಬೇರನಂತೆ ಶರಣುಹೊಂದುತಲಿಧಾನೆ; ಲೋಕದಲ್ಲಿ ಮಹಾತ್ಮರ ಪಾದಾರವಿಂದಗಳನ್ನು ಸೇವಿಸದಿರುವ ಪುರುಷನು ಈ ಸಂಸಾರದಲ್ಲಿ ಎಲ್ಲೂ ಪರಾಜಯವನ್ನೈದದೆ ಅಗೋಚರವಾದ ಮಾರ್ಗವುಳ್ಳದ್ದಾಗಿರುವ ನಿನ್ನ ಮಾಯೆಯಿಂದ ಜಯಿಸಲ್ಪಡದಿರುವನು; ಆದ್ದರಿಂದ ಯಾವಾತನು ಆವರಿಸಲ್ಪಡದಿರುವ ಬುದ್ಧಿಯುಳ್ಳವನೋ ಆತನು ವಿಷಯಗಳೆಂಬ ವಿಷದ ವೇಗಗಳಿಂದ ಆಕ್ರಮಿಸಲ್ಪಡದಿರುವ ಸ್ವಭಾವವುಳ್ಳವನಾಗುವನು! ಎಲೈ ಬಹುಕಾರ್ಯಗಳನ್ನು ಸಾಧಿಸುವ ಶ್ರೀಹರಿಯೆ, ಸ್ವಲ್ಪಕಾರ್ಯಕ್ಕೋಸುಗ ನೀನು ಯಾವಕಾರಣ ಈಗ ನಮ್ಮಿಂದ ಕರೆಯಲ್ಪಟ್ಟವನಾದೆಯೋ ಅದು ಕಾರಣ ಪುತ್ರಲಾಭದಲ್ಲೇ ಪುರುಷಾರ್ಥಬುದ್ಧಿಯುಳ್ಳ ಜಡರಾದ ನಮ್ಮ ಯಾವ ದೇವತಾತಿರಸ್ಕಾರವುಂಟೋ ಸರ್ವಾತ್ಮಕನಾದ ಸ್ವಾಮಿಯೇ ನಾವು ಮಾಡಿದ ಆ ತಿರಸ್ಕಾರವನ್ನು ನೀನು ಸಾಮ್ಯದೃಷ್ಟಿಯಿಂದ ಸಹಿಸುವನಾಗು' ಎಂದು ಮುನಿಗಳಿಂದ ಗದ್ಯರೂಪವಾದ ಸ್ತೋತ್ರದಿಂದ ಸ್ತುತಿಸಲ್ಪಟ್ಟವನಾಗಿ ಭಗವಂತನಾದ ಶ್ರೀಹರಿಯು ಭರತಖಂಡಕ್ಕೆ ಅಧಿಪತಿಯಾದ ನಾಭಿರಾಯನಿಗೆ ಪೂಜ್ಯರಾದ ಆ ಋಷಿಗಳಿಂದ ನಮಸ್ಕರಿಸಲ್ಪಟ್ಟ ಪಾದಪದ್ಮಗಳುಳ್ಳವನಾಗಿ ದಯೆಯೊಡನೆ ಅವರನ್ನು ಕುರಿತು 'ಎಲೈ ಋಷಿಗಳಿರಾ, ಸತ್ಯಗಳಾದ ಸ್ತೋತ್ರಗಳುಳ್ಳ ನಿಮ್ಮಿಂದ ನಾನು ಈ ನಾಭಿ

ರಾಯನಿಗೋಸುಗ ನನಿಗೆ ಸಮಾನನಾದ ಪುರುಷನು ನಾನೇಹೊರ್ತು ಮತ್ತೊಬ್ಬನಿಲ್ಲವಾದಕಾರಣ ಅತಿದುರ್ಲಭವು; ಅಹೋ ಇದು ಕಷ್ಟವು; ಆದಾಗ್ಯು ಬ್ರಾಹ್ಮಣಶ್ರೇಷ್ಠರ ಸಮೂಹವು ನನಿಗೆ ಮುಖಸ್ಥಾನವಾದ್ದರಿಂದ ಬ್ರಾಹ್ಮಣರ ವಚನವು ಅಸತ್ಯವಾಗುವದಕ್ಕೆ ಯೋಗ್ಯವಲ್ಲ; ಅದುಕಾರಣ ನನಿಗೆ ಸಮಾನನಾದ ಪುರುಷನನ್ನು ಕಾಣದಿರುವ ನಾನೇ ಈ ನಾಭಿರಾಯನ ಪತ್ನಿಯಾದ ಮೇರುದೇವಿಯ ಗರ್ಭದಲ್ಲಿ ನನ್ನ ಕಳೆಯಿಂದ ಅವತರಿಸುತ್ತೇನೆ' ಎಂದು ಭಗವಂತನಾದ ಶ್ರೀಹರಿಯು ಮೇರುದೇವಿಯು ನೋಡುತ್ತಿರಲಾಗಿ ನಾಭಿರಾಯನಿಗೆ ವರವನ್ನಿತ್ತು ಅಂತರ್ಧಾನವನ್ನೈದಿದನು !

"ಎಲೈ ಪರೀಕ್ಷಿದ್ರಾಯನೇ ಕೇಳು : ಆ ಯಜ್ಞದಲ್ಲಿ ಮಹಾಮುನಿಗಳಿಂದ ಈ ರೀತಿ ಪ್ರಾರ್ಥಿಸಲ್ಪಟ್ಟ ಶ್ರೀಹರಿಯು ನಾಭಿರಾಯನ ಇಷ್ಟಾರ್ಥವನ್ನು ಕೊಡಲಿಚ್ಛೆಯಿಂದ ದಿಗಂಬರರಾಗಿ ತಪ್ಪೋನಿಷ್ಠರಾದ ನೈಷ್ಠಿಕ ಬ್ರಹ್ಮಚಾರಿಗಳಾದ ಜ್ಞಾನಿಗಳ ಧರ್ಮಗಳನ್ನು ಲೋಕಕ್ಕೆ ತೋರಿಸುವದರಲ್ಲಿಚ್ಛೆಯುಳ್ಳವನಾಗಿ ಆ ನಾಭಿರಾಯನ ಅಂತಃಪುರದಲ್ಲಿ ಮೇರುದೇವಿಯಲ್ಲಿ ಶುದ್ಧಸತ್ವಗುಣಮಯವಾದ ಶರೀರದಿಂದ ಅವತರಿಸಿದನು" ಎಂದು ನುಡಿದನು.

---

೪ ನೇ ಅಧ್ಯಾಯ.

ಋಷಭಮೂರ್ತಿಯು ನೂರು ಮಂದಿ ಪುತ್ರರನ್ನು ಪಡದು ರಾಜ್ಯಪಾಲನಂಗೈದದ್ದು.

"ಎಲೈ ಪರೀಕ್ಷಿದ್ರಾಯನೇ, ಆನಂತರದಲ್ಲಿ ಉತ್ಪತ್ತಿಯಿಂದಲೇ ಪಾದಗಳು ಮೊದಲಾದ ಅವಯವಸ್ಥಾನಗಳಲ್ಲಿ ಪ್ರಕಾಶಿಸುತಲಿರುವ ವಜ್ರಾಂಕುಶಗಳು ಮೊದಲಾದ ಭಗವಲ್ಲಕ್ಷಣಗಳುಳ್ಳವನಾಗಿ ಸರ್ವತ್ರ ಸಮಬುದ್ಧಿಯು ಉಪಶಾಂತಿಯು ವೈರಾಗ್ಯವು ಈಶ್ವರಭಕ್ತಿಯು ಮಹಾಸಂಪತ್ತು ಇವುಗಳೊಡನೆ ಪ್ರತಿದಿನದಲ್ಲಿಯೂ ವೃದ್ಧಿಹೊಂದುತಲಿರುವ ಪ್ರಭಾವವುಳ್ಳವನಾಗಿರುವ ಆ ಋಷಭರಾಯನನ್ನು ಮಂತ್ರಿಗಳು ಮೊದಲಾದ ಸಾಮಾಜಿಕರು ಬ್ರಾಹ್ಮಣರು ದೇವತೆಗಳು ಸಹಾ ಭೂಮಂಡಲವನ್ನು ರಕ್ಷಣಂಗೈಯಲೋಸುಗ ಅತಿಶಯದಿಂದ ಅಪೇಕ್ಷಿಸಿದರು ; ಈಪ್ರಕಾರದಿಂದ ಅತಿಶ್ರೇಷ್ಠನಾಗಿ ಮಹಾಕವಿಗಳಿಂದ ಕಲ್ಪಿತಗಳಾದ ಮಹಾಪದ್ಯಗಳಿಂದ ವರ್ಣಿಸಲ್ಪಟ್ಟದ್ದಾಗಿರುವ ದೇಹದಿಂದ ತೇಜೋಬಲ ಸಂಪತ್ತುಗಳಿಂದಲೂ ಕೀರ್ತಿ ಪ್ರಭಾವ ಉತ್ಸಾಹಗಳಿಂದಲೂ ಅತಿಶ್ರೇಷ್ಠನಾದ್ದರಿಂದ ಆ ಪುತ್ರನಿಗೆ ನಾಭಿರಾಯನು ಋಷಭನೆಂದು ನಾಮಧೇಯವನ್ನಿಟ್ಟನು ; ಪೂಜ್ಯನಾದ ದೇವೇಂದ್ರನು ಈ ಋಷಭಮೂರ್ತಿಯ ಪ್ರಭಾವವನ್ನು ಪರೀಕ್ಷಿಸುವದಕ್ಕಾಗಿ ಬರಲು ಸರ್ವಜ್ಞನಾದ ಯೋಗೇಶ್ವರನಾದ ಆ ಋಷಭಮೂರ್ತಿಯು ದೇವೇಂದ್ರನ ವ್ಯಾಪಾರವನ್ನು ತಿಳಿದು ಪ್ರಹಾಸಂಗೈದವನಾಗಿ ತನ್ನ ಯೋಗಮಾಯೆಯಿಂದ ಅಜನಾಭನಾಮಕವಾದ ತನ್ನ ಭೂಮಂಡಲದಲ್ಲಿ ಅತಿಶಯವಾಗಿ ವೃಷ್ಟಿಯನ್ನುಂಟು ಮಾಡಿದನು ! ಎಲೈ ಅರಸೇ, ಸತ್ಸಂತಾನವುಳ್ಳ ಆ ನಾಭಿರಾಯನು ತನ್ನ ಮನೋರಥಕ್ಕೆ ಅನುಗುಣನಾದ ಪುತ್ರನನ್ನು ಪಡದು ಸಂತೋಷಾಧಿಕ್ಯದಿಂದ ಪರವಶನಾಗಿ ಸ್ವೇಚ್ಛೆಯಿಂದ ಗ್ರಹಿಸಲ್ಪಟ್ಟ ಮಾಯಾಮನುಷ್ಯರೂಪವುಳ್ಳ ಭಗವಂತನಾಗಿ ಅನಾದಿಪುರುಷನಾದ ಆ ಋಷಭಮೂರ್ತಿಯನ್ನು ಭಗವನ್ಮಾಯೆಯಿಂದ ತನ್ನ ಪುತ್ರನೆಂದು ತೋರುತಲಿರುವ ಬುದ್ಧಿಯುಳ್ಳವನಾಗಿ ಗದ್ಗದಾಕ್ಷರಗಳೊಡನೆ ಕೂಡಿರುವ ವಚನದಿಂದ 'ಎಲೈ ಬಾಲಕನೆ, ಎಲೈ ತಂದೆಯೆ' ಎಂದು ಅತಿವಾತ್ಸಲ್ಯದಿಂದ ಲಾಲನಂಗೈಯುತ ಉತ್ಕೃಷ್ಟವಾದ ಸುಖವನ್ನೈದಿ ಪುರಜನರು ಮೊದಲಾದವರ ವಾಕ್ಯವೇ ಪ್ರಮಾಣವಾಗುಳ್ಳ ನಾಭಿರಾಯನು ಪುರಜನ ಜನಪದಗಳೊಡನೆ ಮಂತ್ರಿಗಳು ಮೊದಲಾದ ಸಕಲ ಸಾಮಾಜಿಕ ಪರ್ಯಂತವು ತಿಳಿಯಲ್ಪಟ್ಟ ಅನುರಾಗವುಳ್ಳವನಾಗಿರುವ ಕುಮಾರನಾದ ಆ ಋಷಭರಾಯನನ್ನು ಧರ್ಮಮರ್ಯಾದೆಯನ್ನು ರಕ್ಷಣಂಗೈಯಲೋಸುಗ ತನ್ನ ರಾಜ್ಯದಲ್ಲಿ ಪಟ್ಟಾಭಿಷಿಕ್ತನನ್ನು ಮಾಡಿ ಬ್ರಾಹ್ಮಣರ ವಶದಲ್ಲಿರಿಸಿ ಪತ್ನಿಯಾದ ಮೇರುದೇವಿಯೊಡನೆ ಬದರಿಕಾಶ್ರಮದಲ್ಲಿ ಲೋಕಕ್ಕೆ ಉಪದ್ರಕರವಲ್ಲದ್ದಾಗಿ ಚರಿಸಲಶಕ್ಯವಾಗಿರುವ ತಪಸ್ಸಿನಿಂದಲೂ ಸಮಾಧಿಯೋಗದಿಂದಲೂ ನರನಾರಾಯಣ

ರೆಂಬ ನಾಮಧೇಯವುಳ್ಳ ಶ್ರೀನಾರಾಯಣನನ್ನು ಉಪಾಸನಂಗೈಯುತ ಕೆಲವು ಕಾಲದಮೇಲೆ ಆ ವಾಸುದೇವನಲ್ಲಿ ಐಕ್ಯವನ್ನು ಹೊಂದಿದನು! ಎಲೈ ಪರೀಕ್ಷಿದ್ರಾಯನೇ ಕೇಳು: ಆ ನಾಭಿರಾಯನ ಕೀರ್ತಿಯನ್ನು ಪ್ರಕಾಶಂಗೈಯುತಿರುವ ಕೆಲವು ಶ್ಲೋಕಗಳ ಅರ್ಥವನ್ನು ಮುನಿಗಳು ಈ ರೀತಿಯಿಂದ ಹೇಳುವರು; ಶ್ರೀಹರಿಯು ಪರಿಶುದ್ಧವಾದ ಯಜ್ಞದಿಂದ ಸಂತೋಷಪಟ್ಟವನಾಗಿ ಯಾವ ಮಹಾಪುರುಷನಿಗೆ ಪುತ್ರಭಾವವನ್ನೈದಿದನೋ ರಾಜಶ್ರೇಷ್ಠನಾದ ಆ ನಾಭಿರಾಯನ ಪ್ರಖ್ಯಾತವಾದ ವ್ಯಾಪಾರವನ್ನು ಯಾವ ಪುರುಷನು ಮಾಡ್ಯಾನು! ಬ್ರಾಹ್ಮಣರು ಆತನ ಯಜ್ಞದಲ್ಲಿ ಸ್ವಧರ್ಮಾರ್ಜಿತಗಳಾದ ಧನ ಭೂಷಣಾದಿಗಳಿಂದ ಪೂಜಿಸಲ್ಪಟ್ಟವರಾಗಿ ಮಂತ್ರಬಲದಿಂದ ಯಾವ ಮಹಾತ್ಮನಿಗೆ ಯಜ್ಞಮೂರ್ತಿಯಾದ ಶ್ರೀ ವಾಸುದೇವನನ್ನು ತೋರಿಸಿದರೋ ಅಂಥಾ ನಾಭಿರಾಯನಿಗಿಂತಲೂ ಬ್ರಾಹ್ಮಣಪ್ರಿಯನಾದ ಪುರುಷನು ಮತ್ತೊಬ್ಬನಿಲ್ಲವೆಂದು ಋಷಿಗಳು ಹೇಳುತ್ತಿದ್ದರು! ಅನಂತರದಲ್ಲಿ ಸರ್ವಜ್ಞನಾದ ಆ ಋಷಭಮೂರ್ತಿಯು ತನ್ನ ಭೂಮಂಡಲವನ್ನು ಸಕಲ ಕರ್ಮಾನುಷ್ಠಾನಕ್ಕೆ ಮುಖ್ಯವಾದ ಕ್ಷೇತ್ರವೆಂದು ತಿಳಿದು ಲೋಕಾನುಗ್ರಹಂಗೈಯಲೋಸುಗ ತೋರಿಸಲ್ಪಟ್ಟ ಗುರುಗೃಹದಲ್ಲಿ ವಾಸವು ಅವರ ಶುಶ್ರೂಷೆಯು ವಿದ್ಯಾಭ್ಯಾಸವೂ ಉಳ್ಳವನಾಗಿ ತನ್ನಿಂದ ಸಮರ್ಪಿಸಲ್ಪಟ್ಟ ದ್ರವ್ಯ ದಕ್ಷಿಣೆಗಳಿಂದ ಸಂತುಷ್ಟರಾದ ಗುರುಗಳ ಅನುಜ್ಞೆಯಿಂದ ಗೃಹಸ್ಥಾಶ್ರಮಧರ್ಮಗಳನ್ನು ಇತರ ಜನರಿಗೆ ಉಪದೇಶಂಗೈದು ಇಂದ್ರಪುತ್ರಿಯಾದ ಜಯಂತೀದೇವಿಯನ್ನು ವಿವಾಹಮಾಡಿಕೊಂಡು ಶೃತಿಸ್ಮೃತ್ಯುಕ್ತಗಳಾದ ಕರ್ಮಗಳನ್ನಾಚರಿಸಿ ಆಕೆಯಲ್ಲಿ ತನಗೆ ಸಮಾನರಾದ ನೂರುಮಂದಿ ಪುತ್ರರನ್ನು ಪಡೆದನು; ಆ ನೂರುಮಂದಿ ಪುತ್ರರಲ್ಲಿ ಮಹಾಯೋಗಿಯಾಗಿ ಉತ್ಕೃಷ್ಟ ಗುಣಶಾಲಿಯಾದ ಭರತರಾಯನನ್ನು ಜ್ಯೇಷ್ಠನೆಂದು ಹೇಳುವರು; ಈ ಭೂಮಂಡಲವು ಆ ಭರತರಾಯನಿಂದ ಪಾಲನಂಗೈಯಲ್ಪಟ್ಟದ್ದಾದಕಾರಣ ಭರತವರ್ಷವೆಂದು ಹೇಳುವರು; ಈ ಭರತರಾಯನಿಗೆ ಹಿಂದೆ ಕುಶಾವರ್ತ ಇಳಾವರ್ತ ಬ್ರಹ್ಮಾವರ್ತ ಆರ್ಯಾವರ್ತ ಮಲಯಕೇತು ಭದ್ರಸೇನ ಇಂದ್ರಸೇನ ಇಂದ್ರಸ್ಪೃಕ್ ವಿದರ್ಭ ಕೀಟಕರೆಂಬ ಒಂಭತ್ತುಮಂದಿ ಪುತ್ರರು ಮಿಕ್ಕ ತೊಂಭತ್ತುಮಂದಿ ಪುತ್ರರಲ್ಲಿ ಜ್ಯೇಷ್ಠರು; ಆ ತೊಂಭತ್ತುಮಂದಿ ಪುತ್ರರಲ್ಲಿ ಕವಿ ಹರಿ ಅಂತರಿಕ್ಷ ಪ್ರಬುದ್ಧ ಪಿಪ್ಪಲಾಯನ ಆವಿರ್ಹೋತ್ರ ದ್ರವಿಡ ಚಮಸ ಕರಭಾಜನರೆಂಬ ಒಂಭತ್ತುಮಂದಿ ಪುತ್ರರು ಮಹಾ ಭಾಗವತರಾಗಿ ಭಾಗವತ ರಹಸ್ಯಧರ್ಮಗಳಿಗೆ ಪ್ರಕಾಶಕರಾದರು! ಎಲೈ ಪರೀಕ್ಷಿದ್ರಾಯನೆ, ಭಗವಂತನ ಮಹಿಮೆಯಿಂದ ವಿಸ್ತರಿಸಲ್ಪಟ್ಟದ್ದಾಗಿ ಶ್ರೀ ವಾಸುದೇವ ನಾರದ ಸಂವಾದರೂಪವಾಗಿ ಉಪಶಾಂತಿಗೆ ಮುಖ್ಯಸ್ಥಾನವಾಗಿರುವ ಆ ಕವಿಮೊದಲಾದ ಒಂಭತ್ತುಮಂದಿ ಪುತ್ರರ ಸಚ್ಚರಿತ್ರೆಯನ್ನು ನಿನಗೆ ಏಕಾದಶಸ್ಕಂಧದಲ್ಲಿ ಹೇಳುತ್ತೇನೆ; ಮಿಕ್ಕ ಒಂಭತ್ತುಮಂದಿಯಾದ ಆ ಜಯಂತೀದೇವಿಯ ಕನಿಷ್ಠಪುತ್ರರು ತಂದೆಯಾದ ಋಷಭರಾಯನ ಆಜ್ಞೆಯನ್ನು ಪರಿಪಾಲನಂಗೈಯುತ ಅತ್ಯಂತ ವಿನಯಶಾಲಿಗಳಾಗಿ ವೇದಾಧ್ಯಯನಂಗೈದು ಕರ್ಮಮಾರ್ಗ ಪ್ರವರ್ತಕರಾಗಿ ಆ ಕರ್ಮಗಳಿಂದ ಪರಿಶುದ್ಧವಾದ ಚಿತ್ತವುಳ್ಳವರಾಗಿ ಬ್ರಾಹ್ಮಣ್ಯವನ್ನು ಪಡೆದರು; ಅನಂತರದಲ್ಲಿ ಋಷಭರಾಯನೆಂಬ ನಾಮಧೇಯವುಳ್ಳ ಭಗವಂತನು ತಾನು ನಿರಂತರವು ಸ್ವತಂತ್ರನಾಗಿ ಸಂಸಾರಬಂಧ ರಹಿತನಾಗಿ ಪರಿಶುದ್ಧನಾಗಿ ಈಶ್ವರನಾದ ಶ್ರೀ ವಾಸುದೇವನಲ್ಲೇ ಆನಂದವನ್ನನುಭವಿಸುತಲಿರುವವನಾದಾಗ್ಯೂ ಕಾಲದಿಂದ ಖಿಲವಾಗಿರುವ ಧರ್ಮವನ್ನು ತಾನು ಆಚರಣಂಗೈವದರಿಂದ ಆ ಧರ್ಮಸ್ವರೂಪವನ್ನರಿಯದಿರುವ ಪಾಮರಜನರಿಗೆ ಉಪದೇಶಂಗೈಯುತ ಅತಿವಿನಯದಿಂದ ಅಸ್ವತಂತ್ರನಂತೆ ಕರ್ಮಗಳನ್ನು ಮಾಡುತ ಉಪಶಾಂತಿಯಿಂದಲೂ ಮಿತ್ರತ್ವದಿಂದಲೂ ದಯೆಯಿಂದಲೂ ಪರಿಪೂರ್ಣನಾಗಿ ಧರ್ಮಾರ್ಥ ಕೀರ್ತಿ ಪುತ್ರಸಮೃದ್ಧಿ ಸದ್ವಸ್ತು ಭೋಗ ಮೋಕ್ಷಗಳೆಂಬ ಪುರುಷಾರ್ಥಗಳ ಸಂಗ್ರಹದಿಂದ ಗೃಹಸ್ಥಾಶ್ರಮದಲ್ಲಿರುವ ಜನರನ್ನು ತನ್ನ ಚರಿತ್ರದಿಂದಲೆ ನಿಯಮಿಸಿದನು; ಜ್ಯೇಷ್ಠನಾದ ಪುರುಷನು ಯಾವ ಯಾವ ಕರ್ಮವನ್ನು ಆಚರಿಸುವನೋ ಇತರರಾದ ಜನರೂ ಸಹ ಆ ಕರ್ಮವನ್ನೇ ಆಚರಿಸುವರು; ಆ ಋಷಭರಾಯನು ಸಕಲ ನಿಯಮಗಳುಳ್ಳ ವೇದರಹಸ್ಯವನ್ನು ತಾನು ತಿಳಿದಿರುವವನಾದಾಗ್ಯೂ ಬ್ರಾಹ್ಮಣರ ಮುಖದಿಂದಲೇ ಆ ವೇದಾರ್ಥಗಳನ್ನು ತಿಳಿದು ಅನುಷ್ಠಾನಂಗೈಯುತ ಸಾಮಾದಿ ಚತುರೋಪಾಯಗಳಿಂದ ಸಕಲ ಜನರನ್ನು ಪಾಲಿಸಿ ದ್ರವ್ಯ ದೇಶಕಾಲ ಯೌವನ ಶ್ರದ್ಧಾ ಋತ್ವಿಕ್ಕು ನಾನಾವಿಧ ದೇವತೋದ್ದೇಶಗ

ಳೆಂಬ ನಿಮಿತ್ತಗಳಿಂದ ವೃದ್ಧಿಹೊಂದಿಸಲ್ಪಟ್ಟ ಸಮಸ್ತ ಕ್ರತುಗಳನ್ನು ಯಥಾವಿಧಿಯಾಗಿ ನೂರಾವರ್ತಿ ಅನುಷ್ಠಾನಂಗೈದನು ; ಭಗವಂತನಾದ ಆ ಋಷಭಮೂರ್ತಿಯಿಂದ ರಕ್ಷಿಸಲ್ಪಡುತಲಿರುವ ಈ ಭೂಮಂಡಲದಲ್ಲಿ ಯಾವ ಪುರುಷನಾದರೂ ಭೂಪತಿಯಾದ ಋಷಭಮೂರ್ತಿಯಲ್ಲಿ ಪ್ರತಿಕ್ಷಣದಲ್ಲಿಯೂ ವೃದ್ಧಿಹೊಂದುತಲಿರುವ ಸ್ನೇಹಾತಿಶಯವನ್ನೇಹೊರ್ತು ಮತ್ತೊಬ್ಬನಿಂದ ಅಪದಾರ್ಥವಾದ ಗಗನಾರವಿಂದದಂತೆ ಸ್ವಲ್ಪವನ್ನಾದರೂ ಯಾವರೀತಿಯಿಂದಲೂ ಯಾವಕಾಲದಲ್ಲೂ ಅಪೇಕ್ಷಿಸುವದಿಲ್ಲ! ಎಲೈ ಪರೀಕ್ಷಿದ್ರಾಯನೇ, ಒಂದು ಸಮಯದಲ್ಲಿ ಆ ಋಷಭರಾಯನು ದೇಶಾಟನಂಗೈಯುತ ಬ್ರಹ್ಮಾವರ್ತವೆಂಬ ಕ್ಷೇತ್ರವನ್ನೈದಿ ಅಲ್ಲಿರುವ ಶ್ರೇಷ್ಠವಾದ ಬ್ರಹ್ಮಋಷಿಗಳ ಸಭೆಯಲ್ಲಿ ಸಮಸ್ತ ಪ್ರಜೆಗಳು ಕೇಳುತ್ತಿರಲು ಮನಸ್ಸನ್ನು ಜಯಿಸಿದವರಾಗಿ ವಿನಯ ಸ್ನೇಹಭಯಗಳಿಂದ ಬದ್ಧರಾಗಿರುವ ತನ್ನ ಪುತ್ರರನ್ನು ಕುರಿತು ಪ್ರಜಾಪಾಲನಂಗೈಯ್ಯಲೋಸುಗ ಉಪದೇಶಂಗೈದನು.''

೫ನೇ ಅಧ್ಯಾಯ.

ಋಷಭಮೂರ್ತಿಯು ತನ್ನ ಪುತ್ರರಿಗೆ ಮೋಕ್ಷಧರ್ಮಗಳನ್ನು ಉಪದೇಶಂಗೈದದ್ದು.

"ಎಲೈ ಪುತ್ರರೇ ಕೇಳಿ : ಈ ಮಾನುಷಲೋಕದಲ್ಲಿ ಶುನಕಾದಿಗಳಿಗೂ ಯಾವ ವಿಷಯಭೋಗಗಳು ಸಮಾನಗಳಾಗಿರುವವೋ ದುಃಖಗಳನ್ನು ಕೊಡುತಲಿರುವ ಆ ವಿಷಯಭೋಗಗಳನ್ನು ಪಡೆಯುವದಕ್ಕೆ ಈ ಮನುಷ್ಯದೇಹವು ಯೋಗ್ಯವಲ್ಲ; ಯಾವ ತಪಸ್ಸಿನಿಂದ ಚಿತ್ತಶುದ್ಧಿಯುಂಟಾಗಿ ಅದರಿಂದ ಚ್ಯುತಿಯಿಲ್ಲದೆ ಬ್ರಹ್ಮಾನಂದವುಂಟಾಗುವದೋ ಉತ್ಕೃಷ್ಟವಾದ ಹರಿಚರಣಾರಾಧನ ರೂಪವಾದ ಅಂಥಾ ತಪಸ್ಸನ್ನುಗೈಯ್ಯುವದಕ್ಕೆ ಯೋಗ್ಯವು ; ಮಹಾತ್ಮರ ಸೇವೆಯು ಮುಕ್ತಿಗೆದ್ವಾರವೆಂದೂ ಸ್ತ್ರೀಸಂಗದಲ್ಲಿ ಆಸಕ್ತರಾದ ಪುರುಷರ ಸಂಗವು ಸಂಸಾರಕ್ಕೆದ್ವಾರವೆಂದೂ ಜ್ಞಾನಿಗಳು ಹೇಳುವರು ; ಆ ಮಹಾತ್ಮರು ಹ್ಯಾಗಿರುವರಂದರೆ : ಯಾರು ಸಮಚಿತ್ತರಾಗಿ ಉಪಶಾಂತರಾಗಿ ಕೋಪರಹಿತರಾಗಿ ಸದಾಚಾರಸಂಪನ್ನರಾಗಿ ಈಶ್ವರನಾದ ನನ್ನಲ್ಲಿ ಮಾಡಲ್ಪಟ್ಟ ಭಕ್ತಿಯೇ ಪುರುಷಾರ್ಥವಾಗುಳ್ಳವರಾಗಿ ಧರ್ಮವಿಚಾರವನ್ನುಹೊರ್ತು ಕೇವಲ ವಿಷಯಗಳ ವಿಚಾರದಲ್ಲಿ ಆಸಕ್ತರಾದ ಜನರಲ್ಲಿಯೂ ಪತ್ನೀಪುತ್ರ ಮಿತ್ರರೊಡನೆ ಯುಕ್ತಗಳಾದ ಗೃಹಗಳಲ್ಲಿಯೂ ಕೂಡ ಅನುರಾಗವಿಲ್ಲದೆ ಲೋಕದಲ್ಲಿ ಎಷ್ಟುಮಾತ್ರ ಅರ್ಥದಿಂದ ಪ್ರಾಣಧಾರಣೆ ಆಗುವದೋ ಅಷ್ಟುಮಾತ್ರ ಪ್ರಯೋಜನದಿಂದಲೇ ಸಂತುಷ್ಟರಾಗಿರುವರೋ ಅವರೇ ಮಹಾತ್ಮರೆಂದು ಹೇಳುವರು ; ಪುರುಷನು ಯಾವಾಗ ಇಂದ್ರಿಯಗಳನ್ನು ಸಂತೋಷಪಡಿಸಲೋಸುಗ ಉದ್ಯುಕ್ತನಾಗುವನೋ ಆಗ ಅತ್ಯಂತ ಮತ್ತನಾಗಿ ಪಾಪವನ್ನು ನಿಶ್ಚಯವಾಗಿ ಮಾಡುವನು; ಯಾವ ಪ್ರಾಚೀನವಾದ ಪಾಪಕರ್ಮದಿಂದ ತನಗೆ ದುಃಖವನ್ನುಂಟುಮಾಡುವದೋ ವಸ್ತುತಃ ಅಸತ್ಯವಾದ ಈ ದೇಹವು ಪ್ರಾಪ್ತವಾಯಿತೋ ಅಂಥಾ ಪಾಪಕರ್ಮವನ್ನು ಮಾಡುವದು ಯೋಗ್ಯವೆಂದು ನಾನು ತಿಳಿಯುವದಿಲ್ಲ ; ಪುರುಷನು ಎಷ್ಟುಪರ್ಯಂತವು ಆತ್ಮಸ್ವರೂಪವನ್ನು ತಿಳಿಯಲು ಇಚ್ಛೈಸುವದಿಲ್ಲವೋ ಅಷ್ಟುಪರ್ಯಂತವು ಈ ದೇಹೇಂದ್ರಿಯಾದಿಗಳಿಂದ ಆತ್ಮಸ್ವರೂಪಕ್ಕೆ ತಿರಸ್ಕಾರವು ಅಜ್ಞಾನಕಲ್ಪಿತವಾಗಿರುವದು ; ಎಷ್ಟುಪರ್ಯಂತವು ಕರ್ಮಗಳು ಅನುಷ್ಠಾನಂಗೈಯಲ್ಪಡುವವೋ ಅಷ್ಟುಪರ್ಯಂತವು ಮನಸ್ಸು ಕರ್ಮಸ್ವಭಾವವಾಗಿ ಶರೀರಸಂಬಂಧವನ್ನುಂಟುಮಾಡುವದು ; ಆತ್ಮನು ಅವಿದ್ಯೆಯಿಂದ ಆವರಿಸಲ್ಪಡುವನಾಗುತ್ತಿರಲು ಪೂರ್ವಾರ್ಜಿತವಾದ ಕರ್ಮವು ಮನಸ್ಸನ್ನು ಕರ್ಮಗಳಲ್ಲಿ ಆಸಕ್ತಿಯುಳ್ಳದ್ದನ್ನಾಗಿ ಮಾಡುವದು ; ವಾಸುದೇವನಾದ ನನ್ನಲ್ಲಿ ಎಷ್ಟುಪರ್ಯಂತವು ಭಕ್ತಿ ಹುಟ್ಟುವದಿಲ್ಲವೊ ಅಷ್ಟುಪರ್ಯಂತವು ಪುರುಷನು ದೇಹಬಂಧದಿಂದ ಬಿಡಲ್ಪಡುವನಾಗುವದಿಲ್ಲ ; ತನ್ನ ಶ್ರೇಯಸ್ಸಾಧನದಲ್ಲಿ ಅತಿಮತ್ತನಾದ ಪುರುಷನು ಯಾವಾಗ ಇಂದ್ರಿಯಗಳ ವ್ಯಾಪಾರವನ್ನು ಅವಿದ್ಯೆಯಿಂದ ಕಲ್ಪಿತವೆಂದು ವಿವೇಕವುಳ್ಳವನಾಗಿ ತಿಳಿಯುವದಿಲ್ಲವೋ ಆಗ ಆ ಅಜ್ಞನಾದ ಪುರುಷನು ಕ್ಷುದ್ರಸುಖಪ್ರಧಾನವಾದ ಗೃಹವನ್ನೈದಿ ತ್ವರೆಯಿಂದ ಆತ್ಮಸ್ವರೂಪಸ್ಮೃತಿಶೂನ್ಯನಾಗಿ ಅಧ್ಯಾತ್ಮಿಕಾದಿ ತಾಪತ್ರ

ಯನ್ನುಂಟುಮಾಡುವನು! ಎಲೈ ಪುತ್ರರೆ, ಎಷ್ಟುಮಾತ್ರ ಉಪಯುಕ್ತವೋ ಅಷ್ಟುಮಾತ್ರವೇ ಸ್ತ್ರೀಯೊಡನೆ ಕೂಡಿ ಸುಖಮಾತ್ರವನ್ನನುಭವಿಸುವ ಪುರುಷನಿಗೆ ಯಾತರಿಂದ ತಾಪತ್ರಯ ಉಂಟಾದೀತೆಂದು ಶಂಕಿಸಿದಲ್ಲಿ ಜ್ಞಾನಿಗಳು ಈ ಸ್ತ್ರೀಪುರುಷರ ಮಿಥುನೀಭವಿಸೋಣವನ್ನು ಅನ್ಯೋನ್ಯವಾಗಿ ಸ್ತ್ರೀಪುರುಷರ ಹೃದಯಗಳ ಸ್ಥೂಲವಾಗಿ ಭೇದಿಸಲಶಕ್ಯವಾದ ಗ್ರಂಥಿಯನ್ನಾಗಿ ಹೇಳುವರು; ಈ ಮಿಥುನೀಭವಿಸೋಣದರಿಂದಲೇ ಜನರಿಗೆ ಗೃಹ ಕ್ಷೇತ್ರ, ಪುತ್ರ, ಮಿತ್ರ ಧನಗಳಿಂದ ಇದೇ ನಾನು—ಇದೇ ನನ್ನದೆಂದು ಮೋಹ ಹುಟ್ಟುವದು; ಕರ್ಮಗಳಿಂದ ಕಟ್ಟಲ್ಪಟ್ಟದ್ದಾಗಿ ಅತಿದೃಢನಾಗಿ ಮನೋರೂಪವಾಗಿರುವ ಈ ಪುರುಷನ ಹೃದಯಗ್ರಂಥಿಯು ಯಾವಾಗ ಸಡಿಲಿತೋ ಆಗ ಈ ಪುರುಷನು ಮಿಥುನೀಭವಿಸೋಣದರ ದೆಶೆಯಿಂದ ನಿವೃತ್ತನಾಗಿ ಅನಂತರದಲ್ಲಿ ಅಹಂಕಾರವನ್ನು ಬಿಟ್ಟು ಮುಕ್ತನಾಗಿ ಬ್ರಹ್ಮಭಾವವನ್ನು ಪಡೆಯುವನು; ಆ ಅಹಂಕಾರ ನಿವೃತ್ತಿಗೆ ಇಪ್ಪತ್ತೈದು ಸಾಧನಗಳುಂಟು: ಎಲೈ ಪುತ್ರರೇ, ಪರಮಾತ್ಮಸ್ವರೂಪನಾಗಿ ಗುರುವಾಗಿರುವ ನನ್ನ ಸೇವೆಯು ಆ ಸೇವೆಯಲ್ಲೇ ಆಸಕ್ತಿಯು ತೃಷ್ಣಾನಿವೃತ್ತಿಯು ಶೀತೋಷ್ಣಾದಿ ದ್ವಂದ್ವಗಳನ್ನು ಸಹಿಸೋಣವು ಸ್ವರ್ಗಾದಿ ಲೋಕಗಳಲ್ಲೂ ಪ್ರಾಣಿಗೆ ದುಃಖವುಂಟೆಂಬ ಭಾವನೆಯು ಆತ್ಮಸ್ವರೂಪವನ್ನು ತಿಳಿಯಲಿಚ್ಛೆಯು ತಪಸ್ಸು ಕಾಮ್ಯಕರ್ಮತ್ಯಾಗವು ನನ್ನ ಪ್ರಸಾದವನ್ನು ಪಡೆಯಲೋಸುಗ ಸತ್ಕರ್ಮಾನುಷ್ಠಾನವು ನನ್ನ ಕಥಾವ್ಯಾಸಂಗವು ನಿರಂತರದಲ್ಲೂ ನನ್ನ ಭಕ್ತರ ಸಂಗತಿಯು ನನ್ನ ಗುಣಸಂಕೀರ್ತನವು ವೈರವಿಲ್ಲದಿರೋಣವು ಸರ್ವತ್ರ ಸಮಬುದ್ಧಿಯು ಉಪಶಾಂತಿಯು ದೇಹದಲ್ಲಿ ಗೃಹದಲ್ಲಿ ಇದೇ ನಾನು—ಇದೇ ನನ್ನದು ಎಂಬ ಬುದ್ಧಿಯನ್ನು ಬಿಡಲಿಚ್ಛೆಯು ವೇದಾಂತಶಾಸ್ತ್ರಾಭ್ಯಾಸವು ಏಕಾಂತಪ್ರದೇಶದಲ್ಲಿ ವಾಸವು ಚನ್ನಾಗಿ ಪ್ರಾಣೇಂದ್ರಿಯ ಮನಸ್ಸುಗಳನ್ನು ನಿಗ್ರಹಿಸೋಣವು ಶ್ರದ್ಧೆಯು ಬ್ರಹ್ಮಚರ್ಯವು ಅವಶ್ಯಕವಾಗಿ ಮಾಡತಕ್ಕ ಕರ್ಮವನ್ನು ಬಿಡದೆ ಇರೋಣವು ವಾಙ್ನಿಯಮವು ಸರ್ವಭೂತಗಳಲ್ಲಿಯೂ ನನ್ನನ್ನು ಭಾವಿಸೋಣದರಲ್ಲಿ ಸಮರ್ಥನಾಗಿ ಶಾಸ್ತ್ರಜನ್ಯಜ್ಞಾನದಿಂದ ಪ್ರಕಾಶಿಸಲ್ಪಟ್ಟದ್ದಾಗಿರುವ ಸ್ವರೂಪಜ್ಞಾನವು ಸಮಾಧಿಯು ಎಂಬ ಇಪ್ಪತ್ತೈದು ಸಾಧನಗಳಿಂದ ಚತುರನಾದ ಪುರುಷನು ಧೈರ್ಯಪ್ರಯತ್ನ ವಿವೇಕಗಳೊಡನೆ ಕೂಡಿದವನಾಗಿ ಅಹಂಕಾರನಾಮಕವಾದ ಉಪಾಧಿಯನ್ನು ಬಿಡುವನು; ಪುರುಷನು ಏಕಾಗ್ರಚಿತ್ತನಾಗಿ ಸಕಲ ಕರ್ಮಗಳಿಗೂ ವಿಶ್ರಾಂತಿಸ್ಥಾನವಾಗಿ ಅವಿದ್ಯೆಯಿಂದ ಸಂಪಾದಿಸಲ್ಪಟ್ಟದ್ದಾಗಿರುವ ಅಹಂಕಾರವೆಂಬ ಉಪಾಧಿಯನ್ನು ನನ್ನ ಉಪದೇಶ ಕ್ರಮವಾಗಿ ಈ ಉಪಾಯದಿಂದ ಚನ್ನಾಗಿ ಪರಿಹರಿಸಿಕೊಂಡು ಅನಂತರದಲ್ಲಿ ಯೋಗಾಭ್ಯಾಸ ಕ್ರಮವನ್ನು ಬಿಡುವವನಾಗಬೇಕು; ನನ್ನ ಲೋಕವಾದ ವೈಕುಂಠವನ್ನು ಪಡೆಯಲಿಚ್ಛೆಯುಳ್ಳವನು ನನ್ನ ಅನುಗ್ರಹ ಮಾತ್ರವೇ ಪ್ರಯೋಜನವಾಗುಳ್ಳ ಪುರುಷನಾದರೂ ತಂದೆಯಾದವನು ಪುತ್ರನನ್ನು ಆಚಾರ್ಯನು ಶಿಷ್ಯನನ್ನು ಅರಸು ಪ್ರಜೆಗಳನ್ನು ಶಿಕ್ಷಿಸುವ ರೀತಿಯಲ್ಲಿ ಅವರ ಶಿಕ್ಷಾನುಸಾರವಾಗಿ ನಡೆಯದಿದ್ದಲ್ಲಿ ಕೋಪವಿಲ್ಲದೆ ಶಿಕ್ಷಿಸಬೇಕು; ತತ್ವಾರ್ಥವನ್ನು ತಿಳಿಯದೆ ತಮಗೆ ಇದು ಶ್ರೇಯಸ್ಸಾಧನವೆಂಬ ಬುದ್ಧಿಯಿಂದ ಕರ್ಮಗಳಲ್ಲಿ ಮೋಹಿತರಾದ ಜನರನ್ನು ಪುನಃ ಆ ಕರ್ಮಗಳಲ್ಲಿ ಪ್ರವರ್ತಿಸುವರನ್ನಾಗಿ ಮಾಡಬೇಡಿ; ತನ್ನ ಶ್ರೇಯಸ್ಸಾಧನದಲ್ಲಿ ದೃಷ್ಟಿಯಿಲ್ಲದೆ ಅತ್ಯಂತ ಫಲಾಪೇಕ್ಷೆಯುಳ್ಳವನಾಗಿ ಯಾವ ಪುರುಷನು ಇಷ್ಟಾರ್ಥಗಳನ್ನು ಅಪೇಕ್ಷಿಸುವನೋ ಆ ಪುರುಷನು ಅಜ್ಞಾನಿಯಾದ್ದರಿಂದ ಸ್ವಲ್ಪ ಸುಖನಿಮಿತ್ತವಾಗಿ ಉಂಟಾಗುವ ಅನ್ಯೋನ್ಯ ವೈರವನ್ನು ಪಾರವಿಲ್ಲದಿರುವ ದುಃಖವನ್ನು ಸಹ ಅರಿಯನು; ತಾನು ಆ ತತ್ವಾರ್ಥವನ್ನು ತಿಳಿದು ಜ್ಞಾನಿಯಾಗಿ ದಯಾಶೀಲನಾಗಿರುವ ಯಾವ ಪುರುಷನು ಅವಿದ್ಯಾಮಧ್ಯದಲ್ಲಿ ತಗಲಿರುವ ಬುದ್ಧಿಶೂನ್ಯನಾಗಿರುವ ಪುರುಷನನ್ನು ನೋಡಿ ಆ ಮಾರ್ಗದಿಂದ ನಡೆಯುತಲಿರುವ ಅಂಧನನ್ನು ಕುರಿತು ಈ ಮಾರ್ಗದಿಂದಲೇ ಹೋಗೆಂದು ನುಡಿಯದೆ ಆ ಪುರುಷನನ್ನು ಕರ್ಮಗಳಲ್ಲಿ ಪ್ರವರ್ತಿಸುವನನ್ನಾಗಿ ಮಾಡದೆ ಮೃತ್ಯುರೂಪವಾದ ಸಂಸಾರದಲ್ಲಿ ತಗಲಿಕೊಂಡು ದುಃಖಪಡುತಲಿರುವ ಪುರುಷನನ್ನು ಯಾವವನು ಭಕ್ತಿಮಾರ್ಗೋಪದೇಶಮಂಗೈದು ಆ ಸಂಸಾರದಿಂದ ಬಿಡಿಸುವದಿಲ್ಲವೋ ಅಂಥಾವನು ಗುರುವೇ ಅಲ್ಲ; ಅವರು ಸ್ವಜನರೂ ಅಲ್ಲ; ಅಂಥಾ ತಂದೆಯು ತಂದೆಯಲ್ಲ; ಅಂಥಾ ತಾಯಿಯು ತಾಯಿಯಲ್ಲ; ಅಂಥಾ ದೇವತೆಯು ದೇವತೆಯಲ್ಲ; ಅಂಥಾ ಪತಿಯು ಪತಿಯಲ್ಲ; ಈಪ್ರಕಾರದಿಂದ ಮೋಕ್ಷಧರ್ಮಗಳನ್ನು ಉಪದೇಶಂಗೈದು ಜ್ಯೇಷ್ಠಭ್ರಾತೃ ಶುಶ್ರೂಷಾ

ರೂಪವಾದ ಧರ್ಮವನ್ನು ಆ ಪುತ್ರರಿಗೆ ಪರಸ್ಪರ ಕಲಹವಿಲ್ಲದಿರುವದಕ್ಕೋಸ್ಕರ ಜನ್ಮವೃತ್ತಾಂತವನ್ನು ಮೊದಲುಗೊಂಡು ಉಪದೇಶಿಸಿದನು ! ಎಲೈ ಪುತ್ರರೇ ಕೇಳಿ: ಮನುಷ್ಯಾಕೃತಿಯುಳ್ಳ ಈ ನನ್ನ ಶರೀರವು ನನ್ನ ಇಚ್ಛಾವಿಲಾಸರೂಪವಾದ್ದರಿಂದ ಇಂಥದ್ದೆಂದು ಭಾವಿಸಲಶಕ್ಯವು; ಯಾವ ಸತ್ವಗುಣದಲ್ಲಿ ಧರ್ಮವಿರುವದೋ ಅಂಥಾ ಶುದ್ಧಸತ್ವಗುಣವೇ ನನ್ನ ಹೃದಯವು; ಯಾವ ಕಾರಣದಿಂದ ಅಧರ್ಮವು ನನ್ನಿಂದ ದೂರವಾಗಿ ಪೃಷ್ಠಭಾಗದಲ್ಲಿ ಮಾಡಲ್ಪಟ್ಟಿರುವದೋ ಆ ಕಾರಣ [illegible] ನನ್ನನ್ನು ಋಷಭಮೂರ್ತಿಯೆಂದು ಹೇಳುವರು ! ಎಲೈ ಪುತ್ರರೇ, ನೀವು ಅಂಥಾ ಶುದ್ಧಸತ್ವಮಯವಾದ ನನ್ನ ಹೃದಯದಿಂದ ಜನಿಸಿದಿರಿ; ಆದಕಾರಣ ಮತ್ಸರವನ್ನು ಬಿಟ್ಟು ಸುಬುದ್ಧಿಯಿಂದ ನೀವೆಲ್ಲರೂ ಅತಿಶ್ರೇಷ್ಠನಾದ ಅಣ್ಣನಾದ ಭರತರಾಯನನ್ನು ಭಕ್ತಿಯಿಂದ ಭಜಿಸುವವರಾಗಿ! ಎಲೈ ಪುತ್ರರೇ, ನೀವು ರಾಜಕುಮಾರರಾದ್ದರಿಂದ ಪ್ರಜಾಪಾಲನಂಗೈಯಬೇಕೆಂದು ಇಚ್ಛ[illegible]ಸಬೇಡಿ; ಆ ಭರತರಾಯನನ್ನು ಭಜಿಸೋಣವೇ ನನ್ನ ಶುಶ್ರೂಷೆಯು; ಅದೇ ಪ್ರಜಾಪಾಲನವು; ಆ ಜ್ಯೇಷ್ಠಾನುಸರಣೆಯಿಂದಲೇ ಸಕಲವೂ ನಿಮ್ಮಿಂದ ಸಾಧಿಸಲ್ಪಟ್ಟೀತು; ಎಂದು ಜ್ಯೇಷ್ಠಭ್ರಾತೃ ಶುಶ್ರೂಷಾರೂಪವಾದ ಧರ್ಮವನ್ನು ನುಡಿದು ಬ್ರಾಹ್ಮಣರೇ ಸೇವಿಸಲು ಯೋಗ್ಯರೆಂಬ ಅಭಿಪ್ರಾಯದಿಂದ ಸರ್ವಭೂತಗಳಿಗಿಂತಲೂ ಬ್ರಾಹ್ಮರೇ ಶ್ರೇಷ್ಠರೆಂದು ನುಡಿದು ಚೇತನಾಚೇತನಾತ್ಮಕವಾದ ಪ್ರಪಂಚದಲ್ಲಿ ಸ್ಥಾವರಗಳಾದ ಲತಾವೃಕ್ಷಗಳಿಗಿಂತಲೂ ಜಂಗಮಗಳಾದ ಪ್ರಾಣಿಗಳು ಶ್ರೇಷ್ಠಗಳು; ಆ ಕ್ರಿಮಿಗಳಿಗಿಂತಲೂ ಜ್ಞಾನದೊಡನೆ ಕೂಡಿರುವ ಪಶ್ವಾದಿಗಳು ಶ್ರೇಷ್ಠಗಳು; ಅವುಗಳಲ್ಲಿ ಮನುಷ್ಯರು ಅತಿ ಶ್ರೇಷ್ಠರು; ಅವರಿಗಿಂತಲೂ ಭೂತಪ್ರೇತಾದಿಗಳು ಶ್ರೇಷ್ಠರು; ಅವರಿಗಿಂತಲೂ ಗಂಧರ್ವರು ಶ್ರೇಷ್ಠರು; ಅವರಿಗಿಂತಲೂ ಸಿದ್ಧರು ಶ್ರೇಷ್ಠರು; ಅವರಿಗಿಂತಲೂ ಕಿನ್ನರಾದಿಗಳು ಶ್ರೇಷ್ಠರು; ಅವರಿಗಿಂತಲು ಅಸುರರು ಶ್ರೇಷ್ಠರು; ಅವರಿಗಿಂತಲು ಇಂದ್ರಾದಿ ದೇವತೆಗಳು ಶ್ರೇಷ್ಠರು; ಆ ದೇವತೆಗಳಲ್ಲಿ ಇಂದ್ರನು ಶ್ರೇಷ್ಠನು; ಆ ಇಂದ್ರನಿಗಿಂತಲೂ ಬ್ರಹ್ಮಪುತ್ರರಾದ ದಕ್ಷಾದಿಗಳು ಶ್ರೇಷ್ಠರು; ಅವರಲ್ಲಿ ರುದ್ರನು ಶ್ರೇಷ್ಠನು; ಆ ರುದ್ರನಿಗಿಂತಲೂ ಬ್ರಹ್ಮದೇವನು ಶ್ರೇಷ್ಠನು; ಆ ಬ್ರಹ್ಮದೇವನಿಗಿಂತಲೂ ನಾನೇ ಶ್ರೇಷ್ಠನು ನನಿಗೂ ಕೂಡ ಬ್ರಾಹ್ಮಣರು ಪೂಜ್ಯರಾದ್ದರಿಂದ ಅವರೇ ಸರ್ವಶ್ರೇಷ್ಠರು; ನಾನು ಮತ್ತೊಂದು ಭೂತವನ್ನು ಬ್ರಾಹ್ಮಣರೊಡನೆ ಸಮಾನವಾದ್ದನ್ನಾಗಿ ತಿಳಿಯುವದಿಲ್ಲ; ಈ ಬ್ರಾಹ್ಮಣರಿಗಿಂತಲೂ ಉತ್ಕೃಷ್ಟವಾದ ವಸ್ತುವನ್ನು ಎಲ್ಲೂ ಕಾಣೆನು; ಪುರುಷರಿಂದ ಬ್ರಾಹ್ಮಣರಲ್ಲಿ ಶ್ರದ್ಧಾಪೂರ್ವಕವಾಗಿ ಉತ್ಕರ್ಷೆಯಿಂದ ಸಮರ್ಪಿಸಲ್ಪಟ್ಟ ಅನ್ನಾದಿ ದ್ರವ್ಯವನ್ನು ನಾನು ಸ್ವೇಚ್ಛೆಯಿಂದ ಯಾವರೀತಿಯಿಂದ ಭುಜಿಸುವೆನೋ ಆ ಪ್ರಕಾರದಿಂದ ಅಗ್ನಿಮುಖದಿಂದ ಸಮರ್ಪಿತವಾದ ದ್ರವ್ಯವನ್ನು ಪರಿಗ್ರಹಿಸುವದಿಲ್ಲ; ಯಾವ ಬ್ರಾಹ್ಮಣನಿಂದ ಪುರಾತನವಾದ ರಮಣೀಯವಾದ ವೇದಗಳೆಂಬ ನನ್ನ ಶರೀರವು ಈ ಲೋಕದಲ್ಲಿ ಧರಿಸಲ್ಪಟ್ಟಿದೆಯೋ ಯಾವ ಬ್ರಾಹ್ಮಣನಲ್ಲಿ ಉತ್ಕೃಷ್ಟವಾಗಿ ಪಾವನವಾದ ಸತ್ವಗುಣವು ಮನೋನಿಗ್ರಹವು ಬಹಿರಿಂದ್ರಿಯನಿಗ್ರಹವು ಸತ್ಯವು ಅನುಗ್ರಹವು ತಪಸ್ಸು ಕ್ಷಮೆಯು ಆತ್ಮಾನುಭವವು ಎಂಬ ಎಂಟುಗುಣಗಳು ನಿರಂತರದಲ್ಲಿಯೂ ಇರುವವೋ ಅಂಥಾ ಬ್ರಾಹ್ಮಣನಿಗಿಂತಲೂ ಉತ್ಕೃಷ್ಟವಾದ್ದನ್ನು ಜಗತ್ತಿನಲ್ಲಿ ನಾನು ಕಾಣುವದಿಲ್ಲ; ಸರ್ವತ್ರ ಪರಿಪೂರ್ಣನಾಗಿ ಪ್ರಕೃತಿ ಪುರುಷರಿಗೆ ಪರನಾಗಿ ಸ್ವರ್ಗಮೋಕ್ಷಗಳಿಗೆ ನಿಯಾಮಕನಾಗಿರುವ ನನಿಗಿಂತಲೂ ಯಾವ ಬ್ರಾಹ್ಮಣರಿಗೆ ಸ್ವಲ್ಪವಾದರೂ ಅಪೇಕ್ಷಿಸತಕ್ಕ ಅರ್ಥವಿಲ್ಲವೋ ಪರಿಗ್ರಹಪರಾಙ್ಮುಖರಾಗಿ ನನ್ನಲ್ಲಿ ಭಕ್ತಿಯಂಗೈಯುತಲಿರುವ ಅಂಥಾ ಬ್ರಾಹ್ಮಣರಿಗೆ ಅರಸುಗಳು ಮೊದಲಾದ ಮತ್ತೊಬ್ಬರಿಂದ ಅಪೇಕ್ಷಿಸತಕ್ಕದ್ದೇನಿದೆ; ಎಂದು ಪುತ್ರರಿಗೆ ಬ್ರಾಹ್ಮಣರ ಸನ್ಮಾನವನ್ನು ಆಜ್ಞಾಪಿಸಿ ಸರ್ವಭೂತಸನ್ಮಾನವನ್ನು ನಿಯಮಿಸಿದನು! ಎಲೈ ಪುತ್ರರೆ, ನೀವು ಮತ್ಸರಾದಿ ದೋಷಗಳಿಂದ ರಹಿತವಾದ ದೃಷ್ಟಿಯುಳ್ಳವರಾಗಿ ಚರಾಚರಸ್ವರೂಪಗಳಾದ ಸರ್ವ ಭೂತಗಳನ್ನು ನನ್ನ ಆವಾಸಸ್ಥಾನಗಳೆಂದು ಪ್ರತಿಕ್ಷಣದಲ್ಲಿಯೂ ಭಾವಿಸೋಣವೇ ನನಿಗೆ ಉತ್ಕೃಷ್ಟವಾದ ಪೂಜೆಯಾಗುವದು! ಎಲೈ ಪುತ್ರರೆ, ಮನೋವಾಕ್ಕುಗಳಿಂದ ಚಕ್ಷುರಾದಿ ಇಂದ್ರಿಯಗಳಿಂದ ಮಾಡಲ್ಪಟ್ಟ ಸಕಲ ಕರ್ಮಗಳಿಗೂ ನನ್ನ ಆರಾಧನವೇ ಮುಖ್ಯಫಲವೆಂದು ತಿಳಿಯತಕ್ಕದ್ದು; ಪುರುಷನು ನನ್ನ ಈ ಆರಾಧನೆಯನ್ನು ಹೊರ್ತು ಅವಿದ್ಯೆಯಿಂದಲೂ ಕಾಲ

ವಂಶದಿಂದಲೂ ತನ್ನನ್ನು ಬಿಡಿಸುವದಕ್ಕೆ ಸಮರ್ಥನಾಗಲಾರನು ! ಎಲೈ ಪರೀಕ್ಷಿದ್ರಾಯನೆ, ಮಹಾನುಭಾವನಾಗಿ ಸರ್ವಭೂತಗಳಿಗೂ ಪರಮಮಿತ್ರನಾದ ಋಷಭನೆಂಬ ನಾಮಧೇಯವುಳ್ಳ ಶ್ರೀವಾಸುದೇವನು ತನ್ನ ಪುತ್ರರು ತಾವೇ ಶಿಕ್ಷಿತರಾಗಿದ್ದಾಗ್ಯೂ ಅವರನ್ನು ಕುರಿತು ಇತರ ಜನರನ್ನು ಶಿಕ್ಷಿಸುವದಕ್ಕೋಸ್ಕರ ಈರೀತಿ ಅಜ್ಞಾಪಿಸಿದವನಾಗಿ ಉಪಶಾಂತಿಶೀಲರಾಗಿ ಕೃತಕೃತ್ಯರಾದ ಮಹಾಮುನಿಗಳಿಗೆ ಭಕ್ತಿ ಜ್ಞಾನ ವೈರಾಗ್ಯಗಳೆಂಬ ಲಕ್ಷಣಗಳಿಂದ ಶೋಭಿಸುವ ಪರಮಹಂಸಾಶ್ರಮ ಧರ್ಮವನ್ನು ಉಪದೇಶಗೈದು ತನ್ನ ಪುತ್ರರಲ್ಲಿ ಜ್ಯೇಷ್ಠನಾಗಿ ಪರಮಭಾಗವತನಾಗಿ ಭಗವದ್ಭಕ್ತರಲ್ಲಿ ಅತ್ಯಂತಾಸಕ್ತನಾದ ಭರತರಾಯನನ್ನು ಭೂಮಂಡಲವನ್ನು ಪರಿಪಾಲನಗೈಯಲು ಪಟ್ಟಾಭಿಷಿಕ್ತನನ್ನು ಮಾಡಿದನು ; ಗೃಹದಲ್ಲೇ ಸರ್ವವನ್ನು ತ್ಯಜಿಸಿ ತನ್ನ ಆತ್ಮನಲ್ಲಿ ಅಗ್ನಿಸಮಾರೋಪಣಗೈದು ಶರೀರಮಾತ್ರಾವಶಿಷ್ಟನಾಗಿ ಉನ್ಮತ್ತನಂತೆ ದಿಗಂಬರನಾಗಿ ಕೆದರಿರುವ ಕೇಶಗಳುಳ್ಳವನಾಗಿ ಆ ಬ್ರಹ್ಮಾವರ್ತ ಕ್ಷೇತ್ರದಿಂದ ಹೊರಟು ಅವಧೂತವೇಷವನ್ನು ಧರಿಸಿ ಆ ಋಷಭಮೂರ್ತಿಯು ಇತರ ಜನರಿಂದ ಮಾತನಾಡಿಸಲ್ಪಟ್ಟಾಗ್ಯೂ ಜನರ ಮಧ್ಯದಲ್ಲಿ ಜಡನಂತೆ ಅಂಧನಂತೆ ಮೂಕನಂತೆ ಕಿವುಡನಂತೆ ಪಿಶಾಚದಂತೆ ಹುಚ್ಚನಂತೆ ಬಾಲನಂತೆ ಮೌನವ್ರತವನ್ನು ಧರಿಸಿ ಅಲ್ಲಲ್ಲಿರುವ ಪಟ್ಟಣಗಳಲ್ಲಿ ಗ್ರಾಮಗಳಲ್ಲಿ ಸುವರ್ಣ ರತ್ನಾದಿಗಳ ಉತ್ಪತ್ತಿಸ್ಥಾನಗಳಲ್ಲಿ ಕೃಷಿಜೀವಿಗಳಾದ ಶೂದ್ರಾದಿಗಳ ಗ್ರಾಮಗಳಲ್ಲಿ ಹುವ್ವಿನತೋಟಗಳಲ್ಲಿ ಪರ್ವತ ಸಮೀಪದಲ್ಲಿರುವ ಗ್ರಾಮಗಳಲ್ಲಿ ಸೇನಾನಿವೇಶಸ್ಥಾನಗಳಲ್ಲಿ ಗೋಸ್ಥಾನಗಳಲ್ಲಿ ಗೋಪಾಲಕಾದಿಸ್ಥಾನಗಳಲ್ಲಿಯೂ ಯಾತ್ರಾರ್ಥಿಗಳಾದ ಜನರ ಸಮೂಹದಲ್ಲಿಯೂ ಪರ್ವತಗಳಲ್ಲಿಯೂ ವನಗಳಲ್ಲಿಯೂ ಋಷ್ಯಾಶ್ರಮಗಳಲ್ಲಿಯೂ ಪ್ರತಿಮಾರ್ಗದಲ್ಲಿಯೂ ದುರ್ಜನರಿಂದ ಭಯಹುಟ್ಟಿಸೋಣ ಪ್ರಹರಿಸೋಣ ಮೇಲೆ ಮೂತ್ರಿಸೋಣ ಕ್ಯಾಕರಿಸಿ ಉಗುಳೋಣ ಕಲ್ಲುಗಳನ್ನು ಧೂಳಿಗಳನ್ನು ಸಗಣಿ ಉಂಡೆಗಳನ್ನು ಎರಚೋಣ ಅಪಾನವಾಯುವನ್ನು ಬಿಡೋಣ ಶಪಿಸೋಣವೇ ಮೊದಲಾದ ಇತ್ಯಾದಿಗಳಿಂದ ಅವಮಾನಪಡಿಸಲ್ಪಟ್ಟವನಾದಾಗ್ಯೂ ಮಕ್ಷಿಕಗಳಿಂದ ಪೀಡಿಸಲ್ಪಟ್ಟ ವನದಲ್ಲಿರುವ ಮತ್ತಗಜದಂತೆ ಸಡ್ಡೆಮಾಡದೆ ಸತ್ಯದಂತೆ ಅಕೃತ್ರಿಮಾತ್ರದಿಂದ ತೋರುತಲಿರುವ ಈ ದೇಹವೆಂಬ ಪ್ರದೇಶದಲ್ಲಿ ಸದ್ರೂಪನಾದ ಬ್ರಹ್ಮನು ಅಸದ್ರೂಪವಾದ ತನ್ನ ಕಾರ್ಯದೊಡನೆ ಕೂಡಿರುವ ಮಾಯೆಯು ಈ ಉಭಯಾನುರೂಪವಾದ ತನ್ನ ಮಹಿಮೆಯಿಂದ ಆರೋಪಣದರಿಂದ ಆರೋಪಿಸಲ್ಪಡದಿರುವ ಅಹಂಕಾರ ಮಮಕಾರವು ನಿಶ್ಚಲನಾದ ಮನಸ್ಸು ಉಳ್ಳವನಾಗಿ ಏಕಾಕಿಯಾಗಿ ಭೂಮಂಡಲವನ್ನು ಸುತ್ತಿದನು ; ಅತಿಸುಕುಮಾರಗಳಾದ ಹಸ್ತ ಪಾದ ವಕ್ಷಸ್ಥಳಗಳು ವಿಸ್ತಾರಗಳಾದ ಭುಜಗಳು ಹೆಗಲುಗಳು ಮುಖವು ಇವೇ ಮೊದಲಾದ ಅವಯವಗಳಲ್ಲಿ ಶ್ಲಾಘ್ಯನಾದವನಾಗಿ ಸ್ವಭಾವದಿಂದಲೇ ಅತಿ ಸುಂದರವಾಗಿ ಸ್ವಭಾವಸಿದ್ಧವಾದ ಮುಗುಳುನಗೆಯಿಂದ ರಮಣೀಯವಾದ ಮುಖಪದ್ಮವುಳ್ಳವನಾಗಿ ನೂತನಗಳಾದ ಪದ್ಮದಳಗಳಂತೆ ಪ್ರಕಾಶಿಸುವ ಸಂತಾಪಹಂಗಳಾದ ಕನೀಹಾಲೆಗಳುಳ್ಳ ಕೆಂಪಾಗಿ ವಿಶಾಲಗಳಾಗಿರುವ ನೇತ್ರಗಳಿಂದ ಪ್ರಕಾಶಿಸುತಲಿರುವವನಾಗಿ ಸಮಾನಗಳಾಗಿ ಮನೋಹರಗಳಾಗಿರುವ ಕಪೋಲ ಕರ್ಣ ಕಂಠ ನಾಸಿಕಗಳುಳ್ಳವನಾಗಿ ಮುಗುಳುನಗೆಯುಳ್ಳ ಮುಖವಿಲಾಸಗಳಿಂದ ಪುರದ ವನಿತೆಯರ ಮನಸ್ಸಿನಲ್ಲಿ ಕಾಮವಿಕಾರವನ್ನು ವೃದ್ಧಿಹೊಂದಿಸುತಲಿರುವವನಾದಾಗ್ಯೂ ಆ ಋಷಭರಾಯನು ಸುತ್ತಲೂ ಜೋಲಾಡುತಲಿರುವ ವಕ್ರಗಳಾದ ಕಪಿಲವರ್ಣಗಳಾದ ಜಟಾರೂಪಗಳಾದ ಕೇಶಗಳ ಅಧಿಕವಾದ ಸಮೂಹವುಳ್ಳವನಾಗಿ ಅತಿವೈರಾಗ್ಯದಿಂದ ತಿರಸ್ಕರಿಸಲ್ಪಟ್ಟಿರುವದಾದ್ದರಿಂದ ಅತಿಮಲಿನವಾದ ಶರೀರದಿಂದ ಪಿಶಾಚಗ್ರಸ್ತನಂತೆ ಕಾಣಲ್ಪಟ್ಟನು ; ಅನಂತರದಲ್ಲಿ ಮಹಾಜ್ಞಾನಿಯಾದ ಆ ಋಷಭಮೂರ್ತಿಯು ಯಾವ ಸಮಯದಲ್ಲಿ ಜನರನ್ನು ತನ್ನ ಯೋಗಮಾರ್ಗಕ್ಕೆ ಪ್ರತಿಕೂಲರನ್ನಾಗಿ ತಿಳಿಯುತ ಆ ಜನರಿಗೆ ಪ್ರತಿಕ್ರಿಯೆಯನ್ನುಗೈಯೋಣವು ಅಯೋಗ್ಯವೆಂದು ತಿಳಿದು ಬೆಟ್ಟದ ಹಾವು ಯಾವರೀತಿ ತನ್ನ ಸ್ಥಾನವನ್ನು ಬಿಟ್ಟು ಚಲಿಸದಿಹದೋ ಆ ರೀತಿಯಿಂದ ಅಂಥಾ ಅಜಗರ ವೃತ್ತಿಯನ್ನಂಗೀಕರಿಸಿ ಒಂದು ಪ್ರದೇಶದಲ್ಲಿ ಮಲಗಿ ಭೋಜನಗೈಯುವನು ; ಪಾನವನ್ನು ಮಾಡುವನು ; ಫಲಾದಿಗಳನ್ನು ಭಕ್ಷಿಸುವನು ; ಮೂತ್ರಿಸುವನು ; ಮಲವಿಸರ್ಜನೆಯನ್ನುಗೈಯುವನು ; ಆ ಮಲದಲ್ಲಿ ಹೊರಳುತ ಆ ಮಲದಿಂದಲೇ ಅನುಲಿಪ್ತಗಳಾದ ಸರ್ವಾವಯವಗಳುಳ್ಳವನಾಗಿರುವ ಈ ಋಷಭಮೂರ್ತಿಯ ಚರಿತ್ರೆಯನ್ನು ಅಸಹ್ಯವೆಂದು ತಿಳಿಯುವ ಜನರನ್ನು ಕುರಿತು

ಶುಕಮುನಿಯು ನುಡಿಯುವನು ! ಎಲೈ ಅರಸೆ, ಆ ಋಷಭಮೂರ್ತಿಯ ಮಲಗಂಧದಿಂದ ಪರಿಮಳಿಸುತಲಿರುವ ವಾಯುವು ಆ ಪ್ರದೇಶವನ್ನು ಸುತ್ತಲೂ ಹತ್ತು ಯೋಜನ ಪರ್ಯಂತವು ದಿವ್ಯಪರಿಮಳಯುಕ್ತವನ್ನಾಗಿ ಮಾಡಿತು ; ಈ ರೀತಿಯಿಂದ ಆ ಋಷಭಮೂರ್ತಿಯು ಗೋವುಗಳು ಹುಲ್ಲೆಗಳು ವಾಯಸಗಳು ಮೊದಲಾದವುಗಳ ಚರ್ಯವನ್ನು ಅಂಗೀಕರಿಸಿ ಅದೇರೀತಿಯಿಂದ ಚರಿಸುವನು ನಿಂತಿರುವನು ಕುಳಿತಿರುವನು ಮಲಗಿರುವನು ಜಲಪಾನಂಗೈವನು ಭಕ್ಷಿಸುವನು ಮೂತ್ರಿಸುವನು ಸಹಾ ಆದನು ! ಎಲೈ ಪರೀಕ್ಷಿದ್ರಾಯನೆ, ಆ ಋಷಭಮೂರ್ತಿಯು ಸ್ವಭಾವದಿಂದಲೇ ಷಡ್ಗುಣೈಶ್ವರ್ಯಸಂಪನ್ನನಾಗಿ ವಿಚ್ಛಿತ್ತಿಯಿಲ್ಲದೆ ಮಾನುಷಾನಂದವನ್ನು ಮೊದಲುಗೊಂಡು ಉತ್ತರೋತ್ತರವಾಗಿ ಶತಗುಣಿತವಾದ ಚತುರ್ಮುಖಾನಂದಕ್ಕಿಂತಲೂ ಶತಗುಣಿತವಾಗಿ ಅತ್ಯುತ್ಕೃಷ್ಟವಾಗಿರುವ ಬ್ರಹ್ಮಾನಂದದ ಅನುಭವಸ್ವರೂಪನಾಗಿ ಮೋಕ್ಷಸಾಮ್ರಾಜ್ಯಲಕ್ಷ್ಮಿಗೆ ಅಧಿಪತಿಯಾಗಿದ್ದಾಗ್ಯೂ ಲೋಕದಲ್ಲಿ ಯೋಗಿಗಳು ಪಾಮರಲೋಕವಾಸನೆಯನ್ನು ಬಿಟ್ಟು ಈ ಪ್ರಕಾರವಾಗಿರಲೆಂಬ ಅನುಗ್ರಹ ಬುದ್ಧಿಯಿಂದ ನಾನಾವಿಧಗಳಾದ ಯೋಗಚರ್ಯಗಳನ್ನಾಚರಿಸುತ ಸಕಲ ಭೂತಗಳಿಗೂ ಅಂತರಾತ್ಮಸ್ವರೂಪನಾಗಿರುವ ಭಗವಂತನಾದ ವಾಸುದೇವನಲ್ಲಿ ತನ್ನ ಆತ್ಮನಿಗೆ ಭೇದವಿಲ್ಲದಿರುವದರಿಂದ ಪ್ರಾಕೃತಜನರಿಗೆ ಹ್ಯಾಗೋ ಹಾಗೆ ಮಧ್ಯದಲ್ಲಿ ದೇಹವೆಂಬ ಉಪಾಧಿಯಿಲ್ಲದವನಾದ್ದರಿಂದ ಸ್ವತಸ್ಸಿದ್ಧಗಳಾದ ಸಮಸ್ತ ಫಲಗಳಿಂದ ಪರಿಪೂರ್ಣನಾದಕಾರಣ ಅಂತರಿಕ್ಷಗಮನವು ಮನೋವೇಗದಂತೆ ಶರೀರವೇಗವು ಅಂತರ್ಧಾನವು ಪರಕಾಯಪ್ರವೇಶವು ಬಹುದೂರದೃಷ್ಟಿಯು ಇವೇ ಮೊದಲಾದ ಯೋಗೈಶ್ವರ್ಯಗಳು ತಮಗೆ ತಾವೇ ಅತಿತ್ವರೆಯಿಂದ ಪ್ರಾಪ್ತಗಳಾದಾಗ್ಯೂ ಇದು ಒಂದು ಅತಿಶಯವೆಂದು ಅವನ್ನು ಪಡೆದು ಮನಸ್ಸಿನಲ್ಲಿ ಸಂತೋಷಪಡಲಿಲ್ಲ ” ಎಂದು ನುಡಿದನು.

೬ನೇ ಅಧ್ಯಾಯ.

ಋಷಭಮೂರ್ತಿಯು ದೇಹತ್ಯಾಗಂಗೈದದ್ದು.

“ ಆ ಬಳಿಕ ಪರೀಕ್ಷಿದ್ರಾಯನು ‘ಎಲೈ ಶುಕಮುನಿಯೆ, ಯೋಗವೆಂಬ ವಾಯುವಿನಿಂದ ಪ್ರಜ್ವಲಿತವಾದ ತತ್ವಜ್ಞಾನವೆಂಬ ಅಗ್ನಿಯಿಂದ ದಹಿಸಲ್ಪಟ್ಟ ರಾಗದ್ವೇಷಾದಿಗಳೆಂಬ ಕರ್ಮ ಬೀಜಗಳುಳ್ಳ ಆತ್ಮಾರಾಮರಾದ ಯೋಗಿಗಳಿಗೆ ತಮಗೆ ತಾವೇ ಬಂದಂಥಾ ಯೋಗೈಶ್ವರ್ಯಗಳು ಕ್ಲೇಶವನ್ನುಂಟುಮಾಡಲಾರವು ; ಆ ಋಷಭಮೂರ್ತಿಯು ಯೋಗೈಶ್ವರ್ಯಗಳಿಂದ ಸಂತೋಷಪಡುವವನಾಗಲಾರನು’ ಎಂದು ನುಡಿದನು.

“ ಆ ವಾಕ್ಯವನ್ನು ಕೇಳಿ ಶ್ರೀ ಶುಕಮುನಿಯು ಪರೀಕ್ಷಿದ್ರಾಯನನ್ನು ಕುರಿತು ‘ಎಲೈ ಅರಸೆ, ನೀನು ಪ್ರಶ್ನೆಗೈದ ಅರ್ಥವು ಸತ್ಯವೇ ಸರಿ : ಆದರೂ ಬುದ್ಧಿಶಾಲಿಗಳಾದ ಕೆಲವರು ಯೋಗಿಗಳು ಯಾವರೀತಿ ಅತಿ ಧೂರ್ತನಾದ ಕಿರಾತನು ಹುಲ್ಲೆಗಳು ತನ್ನ ಅಧೀನಗಳಾಗಿರುವವಾದರೂ ಆ ಹುಲ್ಲೆಗಳಲ್ಲಿ ವಿಶ್ವಾಸವನ್ನು ಮಾಡುವದಿಲ್ಲವೋ ಆರೀತಿ ಅತಿ ಚಪಲವಾದ ಮನಸ್ಸಿನಲ್ಲಿ ಚನ್ನಾಗಿ ವಿಶ್ವಾಸಂಗೈಯುವದಿಲ್ಲ ; ಯಾವ ಮನಸ್ಸಿನಲ್ಲಿ ವಿಶ್ವಾಸವನ್ನು ಮಾಡಿದ್ದರಿಂದ ಮಹಾ ಸಮರ್ಥರಾದ ಸೌರಭಿಮುನಿ ಮೊದಲಾದ ಮಹಾ ಯೋಗಿಗಳಿಂದ ಬಹುಕಾಲದಿಂದ ಸಂಪಾದಿಸಲ್ಪಟ್ಟ ತಪಸ್ಸೂಕೂಡ ಗಳಿತವಾಯಿತೋ ಅತಿ ಚಪಲವಾದ ಅಂಥಾ ಮನಸ್ಸಿನಲ್ಲಿ ಪುರುಷನು ಒಂದು ಸಮಯದಲ್ಲಾದಾಗ್ಯೂ ಸ್ನೇಹವಂಗೈವದಿಲ್ಲ ; ಜಾರಿಣಿಯಾದ ಸ್ತ್ರೀಯು ತನ್ನಲ್ಲಿ ವಿಶ್ವಾಸಯುಕ್ತನಾದ ಪತಿಯನ್ನು ವಂಚಿಸಿ ವಿಟಪುರುಷರಿಗೆ ಅವಕಾಶವನ್ನು ಕೊಟ್ಟು ಕ್ರಮದಿಂದ ಎಂತು ಆ ಪತಿಯನ್ನು ಕೊಲ್ಲುವಳೋ ಆ ರೀತಿಯಿಂದ ವಿಶ್ವಾಸಯುಕ್ತವಾದ ಯೋಗಿಯ ಮನಸ್ಸು ಶತ್ರುಗಳಾದ ಕಾಮಾದಿಗಳಿಗೆ ಆಸ್ಪದವನ್ನು ಕೊಟ್ಟು ಆ ಕಾಮಾದಿಗಳಿಂದ ಪುರುಷನನ್ನು ಯೋಗಭ್ರಷ್ಟನನ್ನಾಗಿ ಮಾಡುವದು ; ಕಾಮ ಕ್ರೋಧ ಲೋಭ ಶೋಕ ಮೋಹ

ಭಯಾದಿಗಳು ಕರ್ಮಬಂಧವು ಯಾವ ಮನಸ್ಸಿನಿಂದ ಉಂಟಾಗುವವೋ ಅಂಥಾ ಮನಸ್ಸನ್ನು ಬುದ್ಧಿಶಾಲಿಯಾದ ಪುರುಷನು ಸ್ವಾಧೀನವಾಯಿತೆಂದು ತಿಳಿಯುವದಿಲ್ಲ ; ಆದ್ದರಿಂದ ಋಷಭಮೂರ್ತಿಯು ಯೋಗೈಶ್ವರ್ಯಗಳಲ್ಲಿ ಆಸಕ್ತನಾಗಲಿಲ್ಲವೆಂದು ತಿಳಿ ! ಎಲೈ ಅರಸೆ, ಈ ಋಷಭಮೂರ್ತಿಯು ಇಂದ್ರಾದಿ ಸಮಸ್ತ ಲೋಕಪಾಲಕರಿಗೆ ಶಿರೋಭೂಷಣದಂತಿರುವವನಾದಾಗ್ಯೂ ಜಡನಂತೆ ಅನೇಕಪ್ರಕಾರಗಳಾದ ಅವಧೂತ ಸನ್ಯಾಸಿ ವೇಷಭಾಷಾಚರಿತ್ರೆಗಳಿಂದ ತೋರದಿರುವ ಭಗವತ್ಪ್ರಭಾವವುಳ್ಳವನಾಗಿ ಯೋಗಿಗಳಿಗೆ ನಾನಾಪ್ರಕಾರವಾದ ದೇಹತ್ಯಾಗವಿಧಿಯನ್ನು ಅಜ್ಞಾಪಿಸಿ ತನ್ನ ಕಳೇಬರವನ್ನು ಬಿಡಲಿಚ್ಛೆಯುಳ್ಳವನಾಗಿ ಪರಮಾತ್ಮನಾದ ವಾಸುದೇವನಲ್ಲಿ ತನ್ನ ಆತ್ಮನನ್ನು ಮಧ್ಯದಲ್ಲಿ ಒಂದು ವ್ಯವಧಾನವಿಲ್ಲದಂತೆ ಅಭೇದದಿಂದ ನೋಡುತ ಸಕಲ ವಿಷಯಾನುವೃತ್ತಿಯನ್ನು ಪರಿಹರಿಸಿ ದೇಹಾಭಿಮಾನವನ್ನು ಬಿಟ್ಟನು ; ಮನಸ್ಸಿನಿಂದ ದೇಹಾಭಿಮಾನವು ಬಿಡಲ್ಪಟ್ಟಾಗ್ಯೂ ಕುಲಾಲಚಕ್ರದಂತೆ ತಾನೇ ಬಂದಾನೊಂದು ಸಂಸ್ಕಾರ ವಿಶೇಷದಿಂದ ಸಂಚರಿಸುವದೇ ಅಭಿಮಾನಾಭಾಸೆಯೆಂದು ತಿಳಿದು ಈ ರೀತಿಯಿಂದ ಬಿಡಲ್ಪಟ್ಟ ದೇಹಾದ್ಯಭಿಮಾನವುಳ್ಳ ಭಗವಂತನಾದ ಆ ಋಷಭಮೂರ್ತಿಯು ದೇಹವು ಯೋಗಮಾಯಾ ವಾಸನಾಪ್ರಭಾವದಿಂದ ಅಭಿಮಾನವಿಲ್ಲದಿದ್ದಾಗ್ಯೂ ಒಂದು ಸಂಸ್ಕಾರವಿಶೇಷದಿಂದ ಸುಮ್ಮನೆ ತೋರುತಲಿರುವ ಅಭಿಮಾನಾಭಾಸೆಯಿಂದಲೂ ಈ ಭೂಮಂಡಲವನ್ನು ಸುತ್ತುತ ಒಂದು ಸಮಯದಲ್ಲಿ ಕೊಂಕಣ ವಂಗ ಕುಟಕ ದಕ್ಷಿಣ ಕರ್ಣಾಟಗಳೆಂಬ ದೇಶಗಳನ್ನು ಪ್ರಯತ್ನವಿಲ್ಲದೆ ತನ್ನಿಂದ ತಾನೇ ಐದಿ ಕಟಕಾಚಲವೆಂಬ ಪರ್ವತದಲ್ಲಿ ಕುಳಿತು ಬಂದು ವಾಸನೆಯಿಂದ ಪಾಷಾಣಗಳನ್ನು ಭಕ್ಷಿಸಿ ಹುಚ್ಚನಂತೆ ಮುಡಿಯನ್ನು ಬಿಚ್ಚಿಕೊಂಡು ದಿಗಂಬರನಾಗಿ ಸಂಚರಿಸಿ ವಾಯುವಿನ ವೇಗದಿಂದ ಕಂಪಿಸಲ್ಪಡುತಲಿರುವ ಬಿದರುಗಳ ಪರಸ್ಪರ ಮಸೆಯೋಣದರಿಂದ ಹುಟ್ಟಿದ ಅತ್ಯುನ್ನತವಾದ ವನಾಗ್ನಿಯು ಆ ವನವನ್ನು ಗ್ರಾಸಂಗೈಯುತ ಆ ಋಷಭಮೂರ್ತಿಯ ದೇಹವನ್ನು ದಹಿಸಿತು ! ಎಲೈ ಅರಸೆ, ಕೊಂಕಣ ವಂಗ ಕಳಿಂಗ ಯವನ ಶಕಗಳೆಂಬ ದೇಶಗಳಿಗೆ ಅಧಿಪತಿಯಾದ ಅರ್ಹನೆಂಬ ನಾಮಧೇಯವುಳ್ಳ ಬ್ರಹ್ಮಚರ್ಯಾದಿ ಸಕಲಾಶ್ರಮಗಳನ್ನು ಅತಿಕ್ರಮಿಸಿರುವ ಆ ಋಷಭಮೂರ್ತಿಯ ಚರಿತ್ರೆಯನ್ನು ಆ ದೇಶಗಳಲ್ಲಿರುವ ಜನರಿಂದ ಕೇಳಿ ತಾನು ಅವಧೂತಧರ್ಮವನ್ನು ಅಭ್ಯಾಸಂಗೈದು ಕಲಿಯುಗದಲ್ಲಿ ಆ ಧರ್ಮವು ಅತಿ ಪ್ರಬಲವಾಗುತಿರಲು ಪ್ರಾಣಿಗಳ ಪೂರ್ವಸಂಚಿತವಾದ ಪಾಪಫಲದಿಂದ ಅತಿ ಮೋಹಿತನಾಗಿ ಬಂದರಿಂದಲೂ ಭಯವಿಲ್ಲದಿರುವ ಸ್ವಧರ್ಮವನ್ನು ಬಿಟ್ಟು ಅಯೋಗವಾಗಿ ದೋಷಯುಕ್ತವಾದ ಪಾಷಂಡಧರ್ಮವನ್ನು ಬುದ್ಧಿಶೂನ್ಯವಾಗಿ ವೃದ್ಧಿಹೊಂದಿಸುವನು ; ಅರ್ಹನಾಮಕನಾದ ಅರಸಿನಿಂದಲೇ ನೀಚರಾದ ಜನರು ಭಗವಂತನ ಮಾಯೆಯಿಂದ ಅತಿ ಮೋಹಿತರಾಗಿ ಶಾಸ್ತ್ರಗಳಿಂದ ವಿಧಿಸಲ್ಪಟ್ಟ ತಮ್ಮ ತಮ್ಮ ವರ್ಣಾಶ್ರಮಾಚಾರಗಳನ್ನು ಬಿಟ್ಟು ಸ್ವೇಚ್ಛೆಯಿಂದ ದೇವತಾತಿರಸ್ಕಾರರೂಪಗಳಾದ ಸ್ನಾನವನ್ನು ಬಿಡೋಣ ಆಚಮನವಿಲ್ಲದಿರೋಣ ಆಚಾರರಹಿತನಾಗಿರೋಣ ಕೇಶಗಳನ್ನು ಕೀಳಿಸಿಕೊಳ್ಳೋಣ ಇವೇ ಮೊದಲಾದ ನೀಚವ್ರತಗಳನ್ನಾಚರಿಸುತ ಅಧರ್ಮವೇ ಬಹಳವಾಗುಳ್ಳ ಕಲಿಯಿಂದ ನಷ್ಟವಾದ ಬುದ್ಧಿಯುಳ್ಳವರಾಗಿ ವೇದಗಳನ್ನು ಬ್ರಾಹ್ಮಣರನ್ನು ಯಜ್ಞಪುರುಷನಾದ ವಾಸುದೇವನನ್ನು ಸಕಲ ಜನರನ್ನು ಸಹಾ ಅಧಿಕವಾಗಿ ದೂಷಿಸುತ ವೇದಮೂಲಕವಲ್ಲದಿರುವ ಪರಂಪರಾರೂಪವಾದ ತಮ್ಮ ಇಚ್ಛೆಯಿಂದ ಕಲ್ಪಿತಗಳಾದ ದುಷ್ಟವ್ರತಗಳನ್ನಾಚರಿಸುವದರಲ್ಲೇ ಅತ್ಯಂತ ವಿಶ್ವಾಸವುಳ್ಳವರಾಗಿ ಅಂಧತಮಸ್ಸಿನಲ್ಲಿ ತಾವೇ ಬೀಳುವರು ; ಮುಂದೆ ಇಂಥಾ ಅನರ್ಥಗಳನ್ನುಂಟುಮಾಡುವ ಈ ಋಷಭಾವತಾರದಿಂದ ಭಗವಂತನಿಗೆ ಏನು ಪ್ರಯೋಜನವೆಂದಲ್ಲಿ ಭಗವಂತನೆ ಈ ಋಷಭಾವತಾರವು ರಜೋಗುಣಯುಕ್ತವಾಗಿ ಕೇವಲ ಕರ್ಮಮಾರ್ಗ ಸಿದ್ಧರಾದ ಜನರಿಗೆ ಮೋಕ್ಷಮಾರ್ಗೋಪದೇಶಂಗೈದು ಅವರನ್ನು ಕೃತಾರ್ಥರಾಗಿ ಮಾಡೋಣವೇ ಫಲವಾಗುಳ್ಳದ್ದು ; ಮೋಕ್ಷಮಾರ್ಗ ಪ್ರದರ್ಶಕನಾದ ಆ ಋಷಭಮೂರ್ತಿಗೆ ಯೋಗ್ಯಗಳಾದ ಈ ಶ್ಲೋಕಗಳನ್ನು ಮಹಾತ್ಮರು ಗಾನಂಗೈಯುತ್ತಿವರು ; ಅವುಗಳ ಅರ್ಥವೇನಂದರೆ : ಸಪ್ತಸಮುದ್ರಗಳಿಂದ ಶೋಭಿತವಾದ ಭೂಮಿಯ ಸಪ್ತದ್ವೀಪಗಳಲ್ಲಿ ಆಯಾಯ ಖಂಡಗಳಲ್ಲಿ ಯಾವ ಭರತಖಂಡದಲ್ಲಿರುವ ಜನರು ಶ್ರೀವಾಸುದೇವನ ಶುಭಕರಗಳಾದ ಋಷಭಾದ್ಯವತಾರಗಳೊಡನೆ ಯುಕ್ತಗಳಾದ ಚರಿತ್ರೆಗಳನ್ನು ಗಾನಂಗೈಯುತಲಿರುವರೋ ಅಂಥಾ ಭರತಖಂಡವೇ ಅತ್ಯಂತ ಪುಣ್ಯಕರ

ವಾದದ್ದು; ಮತ್ತು ಆಶ್ಚರ್ಯಕರವಾದದ್ದು; ಪುರಾಣಪುರುಷನಾದ ಶ್ರೀವಾಸುದೇವನು ಯಾವ ಪ್ರಿಯವ್ರತರಾಯನ ವಂಶದಲ್ಲಿ ಯಾವಕಾರಣ ಋಷಭಮೂರ್ತಿ ರೂಪದಿಂದ ಅವತರಿಸಿ ಮೋಕ್ಷಕ್ಕೆ ಮುಖ್ಯ ಸಾಧನವಾದ ಪರಮರಹಸ್ಯಧರ್ಮವನ್ನಾಚರಿಸಿದನೋ ಅದುಕಾರಣ ಆ ಪ್ರಿಯವ್ರತರಾಯನ ವಂಶವು ಕೀರ್ತಿಯಿಂದ ಅತಿಶುದ್ಧವಾದದ್ದು; ಅದೇ ಆಶ್ಚರ್ಯಕರವಾದದ್ದು; ಯಾವ ಯೋಗಿಯು ಋಷಭಮೂರ್ತಿಯಿಂದ ಮಾಯಾಕಲ್ಪಿತಗಳೆಂದು ಬಿಡಲ್ಪಟ್ಟವಾಗಿ ಯೋಗಫಲಗಳಾಗಿರುವ ಅಣಿಮಾದ್ಯಷ್ಟಸಿದ್ಧಿಗಳನ್ನು ಪಡೆಯಲೋಸುಗ ಪ್ರಯತ್ನಮಾಡುವನೋ ಅಂಥಾ ಮತ್ತೊಬ್ಬ ಯೋಗಿಯು ಅಭಿಮಾನರಹಿತನಾದ ಋಷಭಮೂರ್ತಿಯ ಯೋಗಮಾರ್ಗವನ್ನು ಮನೋರಥದಿಂದಲಾದರೂ ಐದುವದಕ್ಕೆ ಯೋಗ್ಯನಾಗನು! ಎಲೈ ಅರಸೆ, ಜನರ ಸಮಸ್ತ ಪಾಪಗಳನ್ನು ಪರಿಹರಿಸುವದಾಗಿ ಸಕಲ ಶುಭಗಳಿಗೂ ಕಾರಣವಾಗಿ ಅತಿಪರಿಶುದ್ಧವಾಗಿರುವ ಸಮಸ್ತ ವೇದ ಲೋಕ ದೇವಬ್ರಾಹ್ಮಣ ಗೋವುಗಳಿಗೆ ಪರಮಗುರುವಾದ ಋಷಭನಾಮಕನಾದ ಭಗವಂತನ ಈ ಸಚ್ಚರಿತ್ರೆಯನ್ನು ಯಾವ ಪುರುಷನು ವೃದ್ಧಿಯನ್ನೈದಿರುವ ಶ್ರದ್ಧೆಯಿಂದ ಏಕಾಗ್ರಚಿತ್ತನಾಗಿ ಕೇಳುವನೋ ಯಾವ ಪುರುಷನು ಶ್ರವಣಮಾಡಿಸುವನೋ ಅವರೀರ್ವರಿಗೂ ಸಮವಾಗಿ ಭಗವಂತನಾದ ಶ್ರೀವಾಸುದೇವನಲ್ಲಿ ಪರಮಭಕ್ತಿಯು ಚನ್ನಾಗಿ ಉಂಟಾಗುವದು; ಮತ್ತು ಆ ಭಗವದ್ಭಕ್ತಿಯೇ ಪರಮಪುರುಷಾರ್ಥವು; ಜ್ಞಾನಿಗಳು ಆ ಭಗವದ್ಭಕ್ತಿರಸದಲ್ಲಿ ನಾನಾಪ್ರಕಾರಗಳಾದ ಪಾಪಗಳೊಡನೆ ಯುಕ್ತಗಳಾದ ಸಂಸಾರತಾಪಗಳಿಂದ ತಪ್ತವಾಗಿರುವ ತಮ್ಮ ಅಂತಃಕರಣವನ್ನು ನಿರಂತರದಲ್ಲಿಯೂ ಸ್ನಾನಮಾಡಿಸುವವರಾಗಿ ಆ ಭಕ್ತಿಜನ್ಯವಾದ ಪರಮಾನಂದದಿಂದಲೇ ಭಗವದ್ಭಕ್ತರಾಗೋಣದರಿಂದಲೂ ಸರ್ವತೋಮುಖವಾಗಿ ಪಡೆಯಲ್ಪಟ್ಟ ಸಮಸ್ತಪುರುಷಾರ್ಥಗಳುಳ್ಳವರಾದ್ದರಿಂದಲೂ ಭಗವಂತನು ತಾನೇ ಮೋಕ್ಷವೆಂಬ ಪರಮಪುರುಷಾರ್ಥವನ್ನು ಕೊಡುವನಾದಾಗ್ಯೂ ಅದನ್ನೂ ಕೂಡ ಆದರಮಾಡುವರಾಗುವದಿಲ್ಲ; ಭಗವಂತನ ದರ್ಶನವು ದುರ್ಲಭವು; ಮೋಕ್ಷವಾದರೋ ಮತ್ತೂ ದುರ್ಲಭವು; ಆದಕಾರಣ ಇದು ಅತ್ಯಂತ ಭಕ್ತಿ ಸ್ತುತಿಯೆಂದು ಶಂಕಿಸಿದರು! ಎಲೈ ಪರೀಕ್ಷಿದ್ರಾಯನೆ, ಭಗವಂತನಾದ ಶ್ರೀವಾಸುದೇವನು ಪಾಂಡುವಂಶಸ್ಥರಾದ ನಿಮಿಗೂ ಯದುವಂಶಸ್ಥರಾದ ಅರಸುಗಳಿಗೂ ಕೂಡ ಪಾಲಕನು; ಪರಮಗುರುವು; ಉಪಾಸ್ಯದೇವನು; ಮಿತ್ರನು; ಕುಲಕ್ಕೆ ನಿಯಾಮಕನು; ಒಂದು ಸಮಯದಲ್ಲಿ ನಿಮಗೆ ದೂತನು ಸಹಾ ಆಗಿ ನಿಮ್ಮನ್ನು ರಕ್ಷಣಮಾಡಿದನೆಂಬ ಈ ಅರ್ಥವು ಹಾಗಿರಲಿ; ಇತರ ಜನರು ನಿರಂತರವು ತನ್ನನ್ನು ಭಜಿಸುವರಾದಾಗ್ಯೂ ಅವರಿಗೆ ಮುಕ್ತಿಯನ್ನೀವನೇ ಹೊರ್ತು ಒಂದು ಸಮಯದಲ್ಲಾದರೂ ಪ್ರೇಮಯುಕ್ತವಾದ ಭಕ್ತಿಯೋಗವನ್ನು ಕೊಡುವದಿಲ್ಲ; ನಿರಂತರದಲ್ಲಿಯೂ ಅನುಭವಿಸಲ್ಪಡುವ ಸ್ವಸ್ವರೂಪವೆಂಬ ಪ್ರಯೋಜನದಿಂದ ವಿಗತವಾದ ವಿಷಯಭೋಗೇಚ್ಛೆಯುಳ್ಳವನಾಗಿ ಯಾವ ಋಷಭಮೂರ್ತಿಯು ಲೋಕದಲ್ಲಿ ಲೋಕಾದಿ ವಿಷಯಕವಾದ ಮನೋರಥದಿಂದ ಮೋಕ್ಷರೂಪವಾದ ಶ್ರೇಯಸ್ಸಿನ ವಿಷಯದಲ್ಲಿ ಬಹುಕಾಲದಿಂದ ನಿದ್ರೆಯನ್ನು ಮಾಡುತ್ತಲಿರುವ ಬುದ್ಧಿಯುಳ್ಳ ಪಾಮರಜನರಿಗೆ ಅತಿದಯದಿಂದ ಎಂದಿಗೂ ಭಯರಹಿತವಾದ ಆತ್ಮಸ್ವರೂಪವನ್ನು ಉಪದೇಶಮಾಡಿದನೋ ಭಗವಂತನಾದ ಅಂಥಾ ಋಷಭಮೂರ್ತಿಗೋಸ್ಕರ ನಮಸ್ಕಾರವು!"

೭ ನೇ ಅಧ್ಯಾಯ.

ಭರತರಾಯನು ಬದರಿಕಾಶ್ರಮದಲ್ಲಿ ಶ್ರೀ ವಾಸುದೇವನನ್ನು ಕುರಿತು ತಪಸ್ಸುಮಾಡಿದ್ದು.

"ಎಲೈ ಪರೀಕ್ಷಿದ್ರಾಯನೆ, ಅನಂತರದಲ್ಲಿ ಪರಮಭಾಗವತನಾದ ಭರತರಾಯನು ಯಾವ ಸಮಯದಲ್ಲಿ ಭಗವಂತನಾದ ಋಷಭಮೂರ್ತಿಯಿಂದ ಭೂಮಂಡಲವನ್ನು ಪಾಲನಮಾಡುವದಕ್ಕೋಸುಗ ರಾಜ್ಯದಲ್ಲಿ ಸಂಕಲ್ಪಮಾತ್ರದಿಂದಲೇ ಆಜ್ಞಾಪಿಸಲ್ಪಟ್ಟನೋ ಆಗ ಆ ತಂದೆಯ ಆಜ್ಞೆಯಲ್ಲಿ ಅತ್ಯಂತಾಸಕ್ತನಾದ ವಿಶ್ವರೂಪನ ಮಗಳಾದ ಪಂಚಜನೀದೇವಿಯನ್ನು ವಿವಾಹಮಾಡಿಕೊಂಡು ಆಕೆಯಲ್ಲಿ ಸಕಲಾಂಶಗಳಲ್ಲಿಯೂ ತನಗೆ ಸಮಾನರಾದ ಸುಮತಿ

ರಾಷ್ಟ್ರಭೃತ್ ಸುದರ್ಶನ ಆವರಣ ಧೂಮ್ರಕೇತುಗಳೆಂಬ ನಾಮಧೇಯಗಳುಳ್ಳ ಐವರು ಪುತ್ರರನ್ನು ತಾಮಸಾ
ಹಂಕಾರವು ಶಬ್ದಾದಿ ಪಂಚತನ್ಮಾತ್ರಗಳನ್ನು ಎಂತು ಹುಟ್ಟಿಸುವದೋ ಆರೀತಿಯಿಂದ ಪಡೆದನು ; ಅಜನಾಭವೆಂಬ
ನಾಮಧೇಯವುಳ್ಳ ಈ ಭೂಖಂಡವನ್ನು ಜನರು ಯಾವ ಭರತರಾಯನನ್ನು ಮೊದಲುಗೊಂಡು ಭರತಖಂಡವೆಂದು
ಹೇಳುವರೋ ಸರ್ವಜ್ಞನಾದ ಆ ಭರತರಾಯನು ತಂದೆ ತಾತಂದಿರಂತೆ ಅತ್ಯಂತ ಪ್ರಜಾವಾತ್ಸಲ್ಯವುಳ್ಳವನಾದ್ದರಿಂದ ತನ್ನ
ರಾಜಧರ್ಮವನ್ನನುಸರಿಸಿ ತಮ್ಮ ತಮ್ಮ ಧರ್ಮಗಳಲ್ಲಿ ಆಸಕ್ತರಾದ ಪ್ರಜೆಗಳನ್ನು ರಕ್ಷಿಸಹತ್ತಿದನು ; ಶಾಸ್ತ್ರೋ
ಕ್ತ ಅಧಿಕಾರ ಸಂಪತ್ತಿನಿಂದ ಸಾಧಿಸಲ್ಪಟ್ಟ ಅಗ್ನಿಹೋತ್ರ, ದರ್ಶಪೂರ್ಣಮಾಸ ಚಾತುರ್ಮಾಸ್ಯ ಪಶು ಅಗ್ನಿಷ್ಟೋ
ಮಗಳೆಂಬ ಕರ್ಮಗಳಿಗೆ ಪ್ರಕೃತಿ ವಿಕೃತಿರೂಪಗಳಾದ ನಾನಾಪ್ರಕಾರಗಳಾದ ಯಜ್ಞಗಳಿಂದ ಅತಿಶ್ರದ್ಧಾಪೂರ್ವ
ಕವಾಗಿ ಪ್ರತಿವರ್ಷದಲ್ಲಿ ಚಾತುರ್ಹೋತ್ರವೆಂಬ ವಿಧಿಯಿಂದ ಯಜ್ಞಕ್ಕೆ ಅಧಿಪತಿಯಾದ ಶ್ರೀಹರಿಯನ್ನು ಸಂತೋ
ಷಪಡಿಸುತ್ತಿದ್ದನು ; ಈ ರೀತಿಯಿಂದ ನಾನಾವಿಧಗಳಾದ ಯಾಗಗಳು ಸಾಂಗೋಪಾಂಗವಾಗಿ ಅನುಷ್ಠಾನಗೈಯಲ್ಪ
ಡುತ್ತಿರಲು ಆ ಯಾಗಗಳಲ್ಲಿ ಭರತಮಹಾರಾಯನು ಪರಬ್ರಹ್ಮನಾಗಿ ಯಜ್ಞಪುರುಷನಾಗಿ ಅಂತರ್ಯಾಮಿರೂಪ
ದಿಂದ ಕರ್ಮಗಳಲ್ಲಿ ಪ್ರವರ್ತಿಸುವಂತೆ ಮಾಡುವವನಾದ್ದರಿಂದ ಮುಖ್ಯಕರ್ತೃವಾಗಿ ಸರ್ವದೇವತಾಪ್ರಕಾಶಗಳಾದ
ಮಂತ್ರಗಳಿಗೆ ಅರ್ಥಸ್ವರೂಪರಾದ ಇಂದ್ರಾದಿ ದೇವತೆಗಳಿಗೂ ಪ್ರಭುವಾದ್ದರಿಂದ ಪರದೇವತೆಯಾಗಿರುವ ಭಗವಂತ
ನಾದ ಶ್ರೀವಾಸುದೇವನಲ್ಲಿ ಧರ್ಮವೆಂಬ ನಾಮಧೇಯವುಳ್ಳ ಕರ್ಮಗಳಿಗೆ ಫಲವಾದ ಅಪೂರ್ವವನ್ನು ಭಾವಿಸುವ
ನಾಗಿ ಈರೀತಿ ಭಾವಿಸೋಣವೆಂಬ ತನ್ನ ಬುದ್ಧಿ ಕೌಶಲ್ಯದಿಂದ ನಷ್ಟಗಳಾದ ರಾಗಾದಿ ಚಿತ್ತದೋಷಗಳುಳ್ಳವನಾಗಿ
ಅಧ್ವರ್ಯುಗಳೆಂಬ ಋತ್ವಿಕ್ಕುಗಳಿಂದ ಹವಿರ್ದ್ರವ್ಯಗಳನ್ನು ಹೋಮಗೈಯಲೋಸುಗ ಗ್ರಹಿಸಲ್ಪಡುವನಾಗು
ತ್ತಿರಲು ಆ ಯಜ್ಞಭೋಕ್ತೃಗಳಾದ ಸೂರ್ಯಾದಿ ದೇವತೆಗಳನ್ನು ಪರಮಪುರುಷನಾದ ಶ್ರೀವಾಸುದೇವನ ನೇತ್ರ
ಗಳು ಮೊದಲಾದ ಅವಯವಗಳಲ್ಲಿ ಧ್ಯಾನಗೈಯುವನು ; ಈಪ್ರಕಾರವಾಗಿ ಪರಿಶುದ್ಧಗಳಾದ ಕರ್ಮಗಳಿಂದ ಪರಿ
ಶುದ್ಧವಾದ ಚಿತ್ತವುಳ್ಳ ಭರತರಾಯನಿಗೆ ಹೃದಯದಲ್ಲಿರುವ ಆಕಾಶವೇ ತನ್ನ ಪ್ರಕಾಶಸ್ಥಾನವಾಗುಳ್ಳ ಮಹಾಪುರುಷಾ
ಕೃತಿಯನ್ನು ಧರಿಸಿ ಶ್ರೀವತ್ಸ ಕೌಸ್ತುಭಮಣಿ ವನಮಾಲಾ ಚಕ್ರ ಶಂಖ ಪದ್ಮ ಗದೆಗಳಿಂದ ಪ್ರಕಾಶಿಸುತಲಿರುವ
ಶ್ರೀ ವಾಸುದೇವನು ತನ್ನ ಭಕ್ತರಾದ ನಾರದಾದಿ ಮುನಿಗಳ ಹೃದಯದಲ್ಲಿ ಚಿತ್ರಪ್ರತಿಮೆಯಂತೆ ನಿಶ್ಚಲನಾಗಿರುವ
ಪೂರ್ವೋಕ್ತವಾದ ಮಹಾಪುರುಷರೂಪದಿಂದ ತನ್ನ ಮನಸ್ಸಿನಲ್ಲಿ ಪ್ರಕಾಶಿಸುವ ಅತ್ಯಂತಾತಿಶಯದಿಂದ ತೀವ್ರವಾಗಿ
ವೃದ್ಧಿಹೊಂದುತಲಿರುವ ಭಕ್ತಿಯು ಹುಟ್ಟಿತು ; ಆ ಭರತರಾಯನು ಇಂಥಾ ಸದ್ವ್ಯಾಪಾರದಿಂದ ಕ್ಲುಪ್ತವಾಗಿ ರಾ
ಜ್ಯಾದಿ ಭೋಗಾದೃಷ್ಟಕ್ಕೆ ಸಂಪೂರ್ತಿಕಾಲವಾದ ಕೋಟಿ ಸಂವತ್ಸರಗಳನ್ನು ಕಳೆದು ತನ್ನಿಂದ ಅನುಭವಿಸಲ್ಪಡುತ
ಲಿರುವ ತಂದೆ ತಾತರಿಂದ ಸಂಪಾದಿಸಲ್ಪಟ್ಟ ರಾಜ್ಯಾದಿ ಧನವನ್ನು ವಿಭಾಗಪೂರ್ವಕವಾಗಿ ಪುತ್ರರಿಗಿತ್ತು ತಾನು ಸಕ
ಲ ಸಂಪತ್ತುಗಳಿಗೂ ಆವಾಸಸ್ಥಾನವಾದ ತನ್ನ ಗೃಹದಿಂದ ಹೊರಟು ಶ್ರೀವಿಷ್ಣುಕ್ಷೇತ್ರವಾದ ಪುಲಹ ಋಷ್ಯಾಶ್ರಮ
ವನ್ನೈದಿದನು ! ಎಲೈ ಅರಸೆ, ಆ ಆಶ್ರಮದಲ್ಲಿ ವಿದ್ಯಾಧರಕುಂಡವೆಂಬ ಹರಿಕ್ಷೇತ್ರದಲ್ಲಿ ಭಗವಂತನಾದ ಶ್ರೀವಾಸು
ದೇವನು ಅಲ್ಲಿರುವ ಭಕ್ತರಿಗೆ ಅತಿವಾತ್ಸಲ್ಯದಿಂದ ಈಗಲೂ ಅವರವರಿಗೆ ಇಷ್ಟವಾದ ರೂಪವನ್ನು ಧರಿಸಿ ದರ್ಶನ
ವನ್ನು ಕೊಡುತಲಿರುವನು ; ಆ ಪ್ರದೇಶದಲ್ಲಿ ಊರ್ಧ್ವಭಾಗದಲ್ಲೂ ಅಧೋಭಾಗದಲ್ಲೂ ನಾಭಿಗಳುಳ್ಳ ಶಿಲಾಚ
ಕ್ರಗಳಿಂದ ಪ್ರಕಾಶಿಸುತಲಿರುವ ಸಕಲ ನದಿಗಳಿಗೂ ಶ್ರೇಷ್ಠವಾದ ಗಂಡಕಿಯೆಂಬ ನದಿಯು ಆ ಆಶ್ರಮಗಳನ್ನು ಪಾ
ವನಗಳನ್ನಾಗಿ ಮಾಡುತಲಿಹುದು ! ಎಲೈ ಅರಸೆ, ಆ ಪುಲಹಾಶ್ರಮವನದಲ್ಲಿ ಭರತಮಹಾರಾಯನು ತಾನೊಬ್ಬನೇ
ನಾನಾವಿಧಗಳಾದ ಪುಷ್ಪಗಳಿಂದಲೂ ತುಲಸೀಕಮಲ ಶುದ್ಧೋದಕಗಳಿಂದಲೂ ಕಂದಮೂಲ ಫಲಾದ್ಯುಪಚಾರಗಳಿಂ
ದಲೂ ಶ್ರೀವಾಸುದೇವನ ಪೂಜೆಯಂಗೈಯುತಲಿರುವವನಾಗಿ ಚಿತ್ತಶುದ್ಧಿಯನ್ನು ಸಂಪಾದಿಸಿ ವಿಷಯಾಪೇಕ್ಷೆಯನ್ನು
ಬಿಟ್ಟು ಪರಮೋಪಶಾಂತನಾಗಿ ಉತ್ಕೃಷ್ಟವಾದ ಆನಂದವನ್ನು ಪಡೆದು ಆ ತಪೋವನದಲ್ಲೀ ಈರೀತಿ ನಿರಂತರವು
ಭಗವತ್ಪೂಜೆಯನ್ನುಗೈಯೋಣದರಿಂದ ಶ್ರೀವಾಸುದೇವನಲ್ಲಿ ವೃದ್ಧಿಪೊಂದುತಲಿರುವ ಭಕ್ತಿಭಾವದಿಂದ ದ್ರವಿಸುತಲಿ
ರುವ ಚಿತ್ತದಲ್ಲಿ ಮತ್ತೊಂದುಪ್ರಯತ್ನವಿಲ್ಲದವನಾಗಿ ಅತಿಸಂತೋಷದಿಂದ ದೇಹದಲ್ಲಿಹೊಳೆಯುತಲಿರುವ ರೋಮಾಂ

ಚಸಮೂಹವುಳ್ಳವನಾಗಿ ಉತ್ಸಾಹದಿಂದ ಹುಟ್ಟಿದ ಆನಂದಬಾಷ್ಪಗಳಿಂದ ಮರೆಮಾಡಲ್ಪಟ್ಟ ನೋಟವುಳ್ಳ ನೇತ್ರಗಳು ಳ್ಳವನಾಗಿ ತನಗೆ ನಾಥನಾದ ಶ್ರೀಹರಿಯ ರಕ್ತವರ್ಣಗಳಾದ ಪಾದಾರವಿಂದಗಳ ಧ್ಯಾನವಿಶೇಷದಿಂದ ವೃದ್ಧಿಹೊಂದಿರು ವ ಭಕ್ತಿಯಿಂದ ಎಲ್ಲಾ ಕಡೆಯಲ್ಲೂ ವ್ಯಾಪ್ತವಾಗಿರುವ ಪರಮಾನಂದರಸದಿಂದ ಪರಿಪೂರ್ಣವಾದ ಅಗಾಧವಾದ ಹೃದ ಯ ವೆಂಬ ಮಡುವಿನಲ್ಲಿ ಮುಳುಗಿದ ಬುದ್ಧಿಯುಳ್ಳವನಾದಕಾರಣ ಆಗ ತನ್ನಿಂದ ಮಾಡಲ್ಪಡುತಲಿರುವ ಆ ಭಗವತ್ಪೂ ಜೆಯನ್ನು ಮರೆತನು! ಎಲೈ ಅರಸೆ, ಈಪ್ರಕಾರದಿಂದ ಭಗವದ್ವ್ರತದೀಕ್ಷೆಯನ್ನು ಧರಿಸಿರುವ ಭರತರಾಯನು ಕೃಷ್ಣಾಜಿನವೆಂಬ ವಸ್ತ್ರವನ್ನುಟ್ಟು ಕಾಲತ್ರಯದಲ್ಲೂ ಸ್ನಾನಂಗೈಯೋಣದರಿಂದ ನೆನೆದು ಹೊಂಬಣ್ಣಗಳಾಗಿರುವ ವಕ್ರಗಳಾಗಿರುವ ಜಟೆಗಳ ಸಮೂಹದಿಂದ ಪ್ರಕಾಶಿಸುತಲಿರುವನಾಗಿ ಸೂರ್ಯಪ್ರತಿಪಾದಕವಾದ ಋಕ್ಕಿನಿಂದ ಉದ ಯಿಸುತಲಿರುವ ಸೂರ್ಯಮಂಡಲದಲ್ಲಿ ಸುವರ್ಣಮಯವಾದ ಭಗವಂತನಾದ ಶ್ರೀನಾರಾಯಣನನ್ನು ಉಪಸ್ಥಾನಂ ಗೈಯುತ ಈರೀತಿ ಸ್ತುತಿಸಿದನು; ಯಾವ ಬ್ರಹ್ಮಸ್ವರೂಪಭೂತವಾದ ತೇಜಸ್ಸು ಸಂಕಲ್ಪಮಾತ್ರದಿಂದಲೇ ಈ ಪ್ರ ಪಂಚವನ್ನು ನಿರ್ಮಿಸಿ ಅಂತರ್ಯಾಮಿರೂಪದಿಂದ ಆ ಪ್ರಪಂಚದಲ್ಲಿ ಪ್ರವೇಶಂಗೈದು ತನ್ನ ಚಿಚ್ಛಕ್ತಿಯಿಂದ ವಿಷ ಯಭೋಗಗಳನ್ನಪೇಕ್ಷಿಸುತಲಿರುವ ಜೀವಸಮೂಹವನ್ನು ಸಾಕ್ಷಿರೂಪದಿಂದ ನೋಡುತಲಿರುವದೋ ಪ್ರಾಣಿಗಳಲ್ಲಿ ಉಪಾಧಿರೂಪಗಳಾದ ಬುದ್ಧಿಗಳಿಗೆ ಪ್ರೇರಕವಾಗಿ ಪ್ರಕೃತಿಗೆ ಪರವಾದ್ದರಿಂದ ಶುದ್ಧಸತ್ವಸ್ವರೂಪವಾಗಿ ಆಯಾ ಕರ್ಮಫಲಗಳನ್ನೀವದಾಗಿ ಸೂರ್ಯನಿಗೆ ಸ್ವರೂಪಭೂತವಾಗಿರುವ ತೇಜಸ್ಸನ್ನು ನಾವು ಶರಣುಹೊಂದೇವು— ಎಂದು ಭರತರಾಯನು ಸೂರ್ಯಮಂಡಲದಲ್ಲಿ ಭಗವಂತನನ್ನು ಸ್ತುತಿಸಿದನು."

೮ ನೇ ಅಧ್ಯಾಯ.

ಭರತರಾಯನು ಹುಲ್ಲೆಯಾಗಿ ಜನಿಸಿದ್ದು.

"ಎಲೈ ಪರೀಕ್ಷಿದ್ರಾಯನೆ, ಅನಂತರದಲ್ಲಿ ಆ ಭರತರಾಯನು ಒಂದು ದಿವಸ ಮೃತ್ತಿಕಾಶೌಚ ದಂತಧಾವನ ಪೂರ್ವಕವಾಗಿ ಗಂಡಕಿಯೆಂಬ ಮಹಾನದಿಯಲ್ಲಿ ಸ್ನಾನಂಗೈದು ವಿಧಿಪ್ರಾಪ್ತವಾದ ನಿತ್ಯನೈಮಿತ್ತಿಕ ಕರ್ಮಾನುಷ್ಠಾ ನವನ್ನು ಮಾಡಿ ಆ ನದೀತೀರದಲ್ಲಿ ಕುಳಿತು ಪ್ರಣವಮಂತ್ರವನ್ನು ಜಪಿಸುತ ಮೂರು ಮುಹೂರ್ತಗಳು ಕುಳಿತಿ ರಲಾಗಿ ಆ ಸಮಯದಲ್ಲಿ ಒಂದು ಹೆಣ್ಣುಹುಲ್ಲೆಯು ಏಕಾಕಿಯಾಗಿ ಬಾಯಾರಿಕೆಯಿಂದ ಆ ನದೀಸಮೀಪವನ್ನು ಕುರಿತು ಬಂದು ಅತ್ಯಂತಾಸಕ್ತಿಯಿಂದ ಜಲಪಾನಂಗೈಯುತಿರಲು ಆಕ್ಷಣದಲ್ಲೇ ಸಮೀಪದಲ್ಲಿ ಲೋಕಭಯಂಕರ ವಾದ ಸಿಹ್ಮಗರ್ಜನೆಯು ಅತಿ ಪ್ರಕಟವಾಗಿ ಕೇಳಲ್ಪಟ್ಟಿತು; ಆಗ ಸ್ವಭಾವದಿಂದಲೇ ಚಪಲವಾದ ಗರ್ಭಿಣಿಯಾಗಿದ್ದ ಆ ಹೆಣ್ಣುಹುಲ್ಲೆಯು ಆ ಸಿಹ್ಮಗರ್ಜನೆಯನ್ನು ಕೇಳಿ ಅತ್ಯಂತ ಭಯದಿಂದ ಚಂಚಲಗಳುಳ್ಳ ನೋಟಗಳುಳ್ಳದ್ದಾಗಿ ಆ ಸಿಹ್ಮಭಯವು ಬಳಹೊಗೋಣದರಿಂದ ವ್ಯಾಕುಲವಾದ ಮನಸ್ಸುಳ್ಳದ್ದಾಗಿ ಅತ್ಯಂತ ಘಾಬರಿಯಿಂದ ಸುತ್ತುತಲಿರು ವ ನೇತ್ರಗಳುಳ್ಳದ್ದಾಗಿ ಉಪಶಾಂತಿಯನ್ನೈದದಿರುವ ಬಾಯಾರಿಕೆಯುಳ್ಳದ್ದಾಗಿ ಭಯದಿಂದ ಶೀಘ್ರವಾಗಿ ಆ ನದಿಯ ನ್ನು ದಾಟಿತು; ಆಗ ಆ ಗರ್ಭವು ಸ್ಥಾನವನ್ನು ಬಿಟ್ಟು ಯೋನಿಪ್ರದೇಶದಿಂದ ಗಳಿತವಾಗಿ ಆ ನದೀಪ್ರವಾಹದಲ್ಲಿ ಬೀಳಲು ಆ ಹುಲ್ಲೆಯು ಆ ಗರ್ಭಪತನದಿಂದಲೂ ಲಂಘಿಸೋಣದರಿಂದಲೂ ಭಯದಿಂದಲೂ ಉಂಟಾದ ಶ್ರಮಾತಿ ಶಯದಿಂದ ಪೀಡಿಸಲ್ಪಟ್ಟು ತನ್ನ ಗುಂಪಿನಿಂದ ಬಿಡಲ್ಪಟ್ಟದ್ದಾಗಿ ಒಂದಾನೊಂದು ಗುಹೆಯಲ್ಲಿ ಬಿದ್ದು ದೇಹವನ್ನು ಬಿಟ್ಟಿತು; ಅನಂತರದಲ್ಲಿ ಭರತರಾಯನು ಆ ನದೀಪ್ರವಾಹದಲ್ಲಿ ತೇಲುತಲಿರುವ ಬಂಧುಗಳಿಂದ ಬಿಡಲ್ಪಟ್ಟ ಅತಿ ದೀನವಾದ ಆ ಹುಲ್ಲೇ ಮರಿಯನ್ನು ನೋಡಿ ಅತ್ಯಂತ ದಯೆಯಿಂದ ತಾಯಿಯಿಲ್ಲದಿರುವ ಆ ಮರಿಯನ್ನು ತೆಗದು ಕೊಂಡು ತನ್ನ ಆಶ್ರಮವನ್ನೈದಿ ಅತ್ಯಂತವಾಗಿ ಮಾಡಲ್ಪಟ್ಟ ತನ್ನದೆಂಬ ಅಭಿಮಾನದಿಂದ ತೃಣಾದಿಗಳಿಂದ ಪೋಷಿ ಸೋಣ ತೋಳ ಮೊದಲಾದ ದುಷ್ಟಮೃಗಗಳ ಬಾಧೆಯಿಲ್ಲದಂತೆ ರಕ್ಷಿಸೋಣ ಸಂತೋಷಪಡಿಸೋಣ ಮುದ್ದಾ

ದೋಣ ಲಾಲನಂಗೈಯೋಣ ಇತ್ಯಾದಿಗಳಲ್ಲೇ ಅತ್ಯಂತಾಸಕ್ತಿಯುಂಟಾಗೋಣವರಿಂದ ಸ್ನಾನಾದಿ ನಿಯಮಗಳು ಅಹಿಂಸಾದಿ ಧರ್ಮಗಳು ಶ್ರೀಹರಿಪೂಜೆ ಮೊದಲಾದ ಸದ್ವ್ಯಾಪಾರಗಳು ಸಹಾ ದಿನದಿನಕ್ಕೆ ಒಂದೊಂದಾಗಿ ಕ್ರಮದಿಂದ ಬಿತಲ್ಪಟ್ಟವಾಗಿ ಕಲವು ದಿವಸಗಳಲ್ಲಿ ಆ ಸತ್ಕರ್ಮಗಳೂ ತ್ಯಾಗಂಗೈಯಲ್ಪಟ್ಟವು ; ಈರೀತಿ ಒಂದು ಸಮಯದಲ್ಲಿ ಆ ಭರತರಾಯನು ಹುಲ್ಲೆಮರಿಯಲ್ಲಿ ತನಗುಂಟಾದ ಆಸಕ್ತಿಯನ್ನು ತಾನೇ ವಿಸ್ತರಿಸಿ ನುಡಿಯುತ ಇದೇನು ಆಶ್ಚರ್ಯವು ! ಕಟಕಟಾ ಅತಿ ದೀನವಾದ ಈ ಹುಲ್ಲೇಮರಿಯು ಕಾಲಚಕ್ರಭ್ರಮಣ ವೇಗದಿಂದ ತನ್ನ ಹುಲ್ಲೆಗಳ ಸಮೂಹದಿಂದಲೂ ಆಪ್ತಬಂಧುಗಳಿಂದಲೂ ವಿಯೋಗವನ್ನೈದಿಸಲ್ಪಟ್ಟು ನನ್ನನ್ನು ಶರಣುಹೊಂದಿ ನನ್ನನ್ನೇ ತನ್ನ ತಾಯಿತಂದೆಗಳೆಂದೂ ತನ್ನ ಬಂಧುಗಳೆಂದೂ ತಿಳಿಯುತಲಿರುವದೇ ಹೊರ್ತು ಮತ್ತೊಂದನ್ನು ಅರಿಯದೆ ನನ್ನಲ್ಲೇ ವಿಶ್ವಾಸಂಗೈಯುತಲಿದೆ ; ಅದುಕಾರಣ ನಾನೇ ಆಶ್ರಯವಾಗುಳ್ಳ ಈ ಹುಲ್ಲೆಯನ್ನು ಶರಣಾಗತಜನರನ್ನು ಉಪೇಕ್ಷೆಮಾಡುವದು ಅತಿ ದೋಷವೆಂದು ತಿಳಿದಿರುವ ನಾನು ಇದರನಿಮಿತ್ತವಾಗಿ ತಪೋಭಂಗವಾದೀತೆಂಬ ದೋಷಬುದ್ಧಿಯನ್ನು ಮಾಡದೆ ತೃಣಾದಿಗಳಿಂದ ಪೋಷಿಸುವನೂ ತೋಳ ಮೊದಲಾದ ದುಷ್ಟಮೃಗಗಳಿಂದ ಬಾಧೆಯಿಲ್ಲದಂತೆ ರಕ್ಷಿಸುವನೂ ತುರಸೋಣವೇ ಮೊದಲಾದ್ದರಿಂದ ಲಾಲಿಸುವನೂ ಆಗಬೇಕು ; ಉಪಶಾಂತಶೀಲರಾಗಿ ದೀನದಯಾಪರರಾದ ಸಜ್ಜನರು ಇಂಥಾ ಶರಣಾಗತಪ್ರಾಣಿರಕ್ಷಣೆಗಂಗೈಯಲೋಸುಗ ಅತ್ಯುತ್ಕೃಷ್ಟಗಳಾದ ತಮ್ಮ ಪುರುಷಾರ್ಥಗಳನ್ನಾದರೂ ನಿಶ್ಚಯವಾಗಿ ಉಪೇಕ್ಷಿಸುವರೆಂಬ ಬುದ್ಧಿಯಿಂದ ಭರತರಾಯನು ಆ ಹುಲ್ಲೆಯಲ್ಲಿ ಅತ್ಯಂತಾಸಕ್ತನಾಗಿ ಕುಳಿತಿರುವಾಗಲೂ ಶಯನಕಾಲದಲ್ಲಿಯೂ ಸಂಚಾರ ಸ್ನಾನ ಭೋಜನಕಾಲಗಳಲ್ಲೂ ಆ ಹುಲ್ಲೆಮರಿಯೊಡನೆ ಕೂಡಿ ಅತ್ಯಂತ ಸ್ನೇಹಬದ್ಧವಾದ ಹೃದಯವುಳ್ಳವನಾಗಿದ್ದನು ! ಎಲೈ ಅರಸೆ, ಆ ಭರತರಾಯನು ದರ್ಭೆಗಳು ಪುಷ್ಪಗಳು ಸಮಿತ್ತುಗಳು ಫಲಪತ್ರ ಕಂದಮೂಲ ಜಲಗಳನ್ನು ತರುವಂಥಾ ಕಾಲದಲ್ಲಿ ತೋಳ ನಾಯಿ ಮೊದಲಾದ ದುಷ್ಟಜಂತುಗಳಿಂದ ಯಾವಾಗ ಭಯವನ್ನು ಶಂಕಿಸುವನೋ ಆ ಸಮಯದಲ್ಲಿ ಆ ಹುಲ್ಲೆಮರಿಯೊಡನೆ ವನವನ್ನು ಪ್ರವೇಶಿಸುವನು ; ಆಯಾ ಮಾರ್ಗದಲ್ಲಿ ಬಾಲಭಾವದಿಂದ ಆಯಾ ಪ್ರದೇಶಗಳಲ್ಲಿ ಆಸಕ್ತಿಯಿಂದ ನಿಲ್ಲುತಲಿರುವ ಆ ಹುಲ್ಲೆಯನ್ನು ದೈನ್ಯದಿಂದಲೂ ಅತಿಶಯವಾದ ಸ್ನೇಹಾಧಿಕ್ಯದಿಂದಲೂ ಸಂಪೂರ್ಣವಾದ ಚಿತ್ತವುಳ್ಳವನಾಗಿ ತನ್ನ ಭುಜದಲ್ಲಿ ವಹಿಸುವನು ; ಈರೀತಿ ತೊಡೆಯಲ್ಲಿಯೂ ಎದೆಯಲ್ಲಿಯೂ ಸಹಾ ಆ ಮರಿಯನ್ನು ಇರಿಸಿಕೊಂಡು ಉತ್ಕೃಷ್ಟವಾದ ಸಂತೋಷಪಡುತ್ತಿರುವನು ; ದೇವಪೂಜಾದಿ ಸತ್ಕರ್ಮಗಳನ್ನನುಷ್ಠಾನಂಗೈವ ಸಮಯದಲ್ಲಿ ಆ ಪೂಜಾಮಧ್ಯದಲ್ಲೇ ಎದ್ದುಬಂದು ಯಾವಾಗ ಹುಲ್ಲೆಯನ್ನು ನೋಡುವನೋ ಆ ಸಮಯದಲ್ಲಿ ಸ್ವಸ್ಥವಾದ ಮನಸ್ಸಿನಿಂದ ಸರ್ವತ್ರ ನಿನಗೆ ಕ್ಷೇಮವುಂಟಾಗಲೀ ಎಂದು ಆ ಮರಿಗೆ ಆಶೀರ್ವಾದಗಳನ್ನು ಮಾಡುವನು ; ಆ ಹುಲ್ಲೆಯು ದೃಷ್ಟಿಗೆ ವಿಷಯವಾಗದಿದ್ದರೆ ನಷ್ಟಧನನಾದ ದರಿದ್ರನಂತೆ ಅತಿಖಿನ್ನವಾದ ಮನಸ್ಸುಳ್ಳವನಾಗಿ ಅತ್ಯಂತಾಪೇಕ್ಷೆಯಿಂದ ಆ ಹುಲ್ಲೇಮರಿಯ ವಿಯೋಗದಿಂದ ಅತಿ ದೀನನಾಗಿ ಮನಸ್ಸಿನಲ್ಲಿ ಸಂತಾಪಪಡುತ ಅತಿ ದೈನ್ಯದೊಡನೆ ಶೋಕಪಡುತ ಮಹಾಮೋಹವನ್ನೈದಿ ಎಲೈ ತಾಯಿಯಿಲ್ಲದೆ ನನ್ನಲ್ಲಿ ವಿಶ್ವಾಸಯುಕ್ತವಾದ ಆ ಹುಲ್ಲೇಮರಿಯು ಶಠನಂತೆಯೂ ಬೇಡನಂತೆಯೂ ಅತಿ ವಂಚಕವಾದ ಕ್ರೂರವಾದ ಬುದ್ಧಿಯುಳ್ಳವನಾಗಿ ದುಷ್ಟನಾಗಿ ಭಾಗ್ಯರಹಿತನಾಗಿರುವ ನನ್ನ ಅಪರಾಧಗಳನ್ನು ತಾನು ಶುದ್ಧಚಿತ್ತವುಳ್ಳದ್ದಾದ್ದರಿಂದ ಸುಜನರಂತೆ ಗಣನೆಯನ್ನು ಮಾಡದೆ ನನ್ನ ಸಮೀಪಕ್ಕೆ ಪುನಃ ಬರುವದೋ ಏನೊ ? ಕಟಕಟಾ ಕ್ಷೇಮದಿಂದ ಈ ಆಶ್ರಮವನದಲ್ಲಿ ಕೋಮಲಗಳಾದ ತೃಣಗಳನ್ನು ಭಕ್ಷಿಸುತ ದೈವದಿಂದ ರಕ್ಷಿಸಲ್ಪಟ್ಟದ್ದಾಗಿರುವ ಆ ಮರಿಯನ್ನು ನೋಡುವೆನೋ ಏನೊ ? ತೋಳವಾದರೂ ಶುನಕವಾದರೂ ವ್ಯಾಘ್ರವಾದರೂ ಈ ಹುಲ್ಲೆಯನ್ನು ಭಕ್ಷಣಮಾಡದಿರುವದೋ ಏನೊ ? ಸಕಲ ಲೋಕಗಳಿಗೂ ಕ್ಷೇಮಕರವಾದ ಉದಯವುಳ್ಳ ವೇದಸ್ವರೂಪನಾದ ಭಗವಂತನಾದ ಸೂರ್ಯನು ಅಸ್ತವನ್ನು ಹೊಂದುತಲಿಧಾನೆ ; ಈವರೆಗೂ ಆ ಹೆಣ್ಣುಹುಲ್ಲೆಗೆ ನಿಕ್ಷೇಪವಾದ ಆ ಮೃಗಶಿಶುವು ಬರಲಿಲ್ಲ ; ಪುನಃ ಆ ಹುಲ್ಲೆಯೆಂಬ ಅರಸುಮಗನು ಭಾಗ್ಯರಹಿತನಾದ ನನ್ನನ್ನೈದಿ ನಾನಾವಿಧಗಳಾದ ಮನೋಹರಗಳಾದ ನೇತ್ರಾನಂದವಂಗೈಯುತಲಿರುವ ತನ್ನ ಬಾಲಕ್ರೀಡೆಯಿಂದ ಬಂಧುಗಳ ದುಃಖವನ್ನು ಪರಿಹರಿಸುವ ನನ್ನನ್ನು ಸಂತೋಷ

ಪಡಿಸುವನೋ ಏನೊ? ಪುನಃ ಆ ಹುಲ್ಲೆಯು ಕ್ರೀಡಿಸುವ ಸಮಯದಲ್ಲಿ ಯಥಾರ್ಥವಲ್ಲದಿರುವ ಸಮಾಧಿಯಿಂದ ಮುಚ್ಚಲ್ಪಟ್ಟ ನೇತ್ರಗಳುಳ್ಳವನಾಗಿರುವ ನನ್ನ ಪ್ರಣಯಕೋಪದಿಂದ ಭಯಪಡುತ ನನ್ನ ಸಮೀಪಕ್ಕೆ ಬಂದು ಜಲಬಿಂದುಪನಂತೆ ಅತಿ ಮೃದುವಾದ ಕೊಂಬಿನ ತುದಿಯಿಂದ ಬರೆಯುವದೋ ಏನೋ? ಹವಿಸ್ಸು ಇಟ್ಟಿರುವ ದರ್ಭೆಗಳು ಬಾಲ್ಯಪ್ರಯುಕ್ತವಾದ ಚಾಪಲ್ಯದಿಂದ ದಂತಗಳಿಂದ ಕಚ್ಚಿ ಕಳೆಯಲ್ಪಡಲು ನನ್ನಿಂದ ಧಿಕ್ಕರಿಸಲ್ಪಟ್ಟ ಆ ಹುಲ್ಲೆಯು ಅತ್ಯಂತ ಭಯಪಡುತ ಆಕ್ಷಣದಲ್ಲೇ ಬಾಲಕ್ರೀಡೆಯನ್ನು ಬಿಟ್ಟು ಋಷಿಕುಮಾರನಂತೆ ನಿಶ್ಚಲವಾಗಿರುವದು; ಯಾವಕಾರಣದಿಂದ ಈ ಭೂಮಿಯು ವಿನಯಯುಕ್ತವಾದ ಹುಲ್ಲೆಮರಿಯ ಅತಿ ಸೂಕ್ಷ್ಮಗಳಾಗಿ ಮನೋಹರಗಳಾಗಿ ಶುಭಕರಗಳಾಗಿ ತೀಕ್ಷ್ಣಗಳಾಗಿರುವ ಗೊರಸುಗಳುಳ್ಳ ಅಲ್ಲಲ್ಲಿ ಗುರುತಾಗಿ ಮಾಡಲ್ಪಟ್ಟಿರುವ ಅಡಿಗಳ ಪಜ್ತಿಗಳಿಂದ ಹುಲ್ಲೆಯೆಂಬ ಧನದ ವಿಯೋಗದಿಂದ ದುಃಖಿತನಾಗಿ ದೀನನಾಗಿರುವ ನನಗೆ ಆ ಹುಲ್ಲೆಯು ಮಾರ್ಗವನ್ನು ಸೂಚನೆಮಾಡುತ ಸರ್ವತ್ರ ಹುಲ್ಲೆ ಅಡಿಗಳಿಂದ ಅಲಂಕರಿಸಲ್ಪಟ್ಟ ತನ್ನನ್ನು ಸ್ವರ್ಗಮೋಕ್ಷಗಳನ್ನಪೇಕ್ಷಿಸುವ ಬ್ರಾಹ್ಮಣರಿಗೆ ಯಜ್ಞಪ್ರದೇಶವನ್ನಾಗಿ ಮಾಡುವಳೋ ಆ ಕಾರಣದಿಂದ ಪರಿಶುದ್ಧಳಾದ ಭಾಗ್ಯವತಿಯಾದ ಈ ಭೂಮಿಯಿಂದೇನು ತಪಸ್ಸು ಮಾಡಲ್ಪಟ್ಟಿತೊ? ಯಾವ ಭೂಮಿಗಳಲ್ಲಿ ಹುಲ್ಲೆಗಳು ಸಂಚರಿಸುವವೋ ಆ ಭೂಮಿಯು ಸಕಲ ಕರ್ಮಗಳಿಗೂ ಯೋಗ್ಯವೆಂದು ಋಷಿಗಳು ಹೇಳುವರು; ಎಂದು ಚಿಂತಿಸಿ ಅಷ್ಟರಲ್ಲಿ ಚಂದ್ರನು ಉದಯಿಸಲು ಆ ಚಂದ್ರನಲ್ಲಿರುವ ಹುಲ್ಲೆಯನ್ನು ತನ್ನ ಹುಲ್ಲೆಯೆಂದು ಭಾವಿಸಿ ಭಗವಂತನಾಗಿ ದೀನವತ್ಸಲನಾದ ಈ ಚಂದ್ರನು ತಾಯಿಯಿಲ್ಲದೆ ತನ್ನ ಆಶ್ರಮದಿಂದ ತಪ್ಪಿಹೋದ ಆ ಮರಿಹುಲ್ಲೆಯನ್ನು ಭಯವಿಲ್ಲದಂತೆ ದಯೆಯಿಂದ ಪಾಲನೆಮಾಡುತಲಿಹಾನೆಯೋ ಏನೊ? ಎಂದು ನುಡಿದು ಚಂದ್ರಕಿರಣಸ್ಪರ್ಶದಿಂದ ಸುಖವನ್ನು ಹೊಂದಿ ಹುಲ್ಲೆಮರಿಯ ವಿಯೋಗಜ್ವರವೆಂಬ ಕಾಡುಗಿಚ್ಚಿನ ಜ್ವಾಲೆಗಳಿಂದ ಅತಿತಪ್ತವಾದ ಚಿತ್ತವೆಂಬ ಬಿಳಿತಾವರೆ ಬಳ್ಳಿಯುಳ್ಳವನಾಗಿ ಮೃಗಶಿಶುವನ್ನು ಹುಡುಕುತಲಿರುವ ನನ್ನನ್ನು ಈ ಚಂದ್ರನು ಶೀತಳವಾದ ಉಪಶಾಂತವಾದ ನನ್ನಲ್ಲಿ ಪ್ರೇಮದಿಂದ ಬಹುತರವಾಗಿ ಸ್ರವಿಸುತಲಿರುವ ಮುಖಜಲವೆಂಬ ಅಮೃತಮಯಗಳಾದ ಕಿರಣಗಳಿಂದ ತಾಪಶಾಂತಿಯನ್ನು ಐದಿಸುವನೋ ಏನೊ? ಎಂದು ಚಿಂತಿಸಿ ಆ ಭರತರಾಯನು ತನ್ನ ಇಷ್ಟಾರ್ಥವನ್ನು ಹೊಂದದೆ ಅತಿ ದುಃಖಿತವಾದ ಮನಸ್ಸುಳ್ಳವನಾಗಿ ಮೃಗಶಿಶುರೂಪವಾದ ತನ್ನ ಪ್ರಾರಬ್ಧಕರ್ಮದಿಂದಲೂ ಯೋಗಾಭ್ಯಾಸದಿಂದಲೂ ಭಗವತ್ಪೂಜಾರೂಪವಾದ ತಪಸ್ಸಿನಿಂದಲೂ ಭ್ರಷ್ಟನಾದನು; ಆ ಹುಲ್ಲೆಯು ಪ್ರಾರಬ್ಧರೂಪವಲ್ಲದಿದ್ದರೆ ಮೊದಲೇ ಪರಿತ್ಯಾಗಮಾಡಲ್ಪಟ್ಟ ಅತಿ ಪ್ರಿಯರಾದ ಔರಸಪುತ್ರರುಳ್ಳ ಭರತರಾಯನಿಗೆ ಇತರ ಜಾತಿಯಲ್ಲಿ ಜನಿಸಿದ ಈ ಹುಲ್ಲೆಮರಿಯಲ್ಲಿ ಸಾಕ್ಷಾತ್ಪುತ್ರನಲ್ಲಿ ಹ್ಯಾಗೋ ಹಾಗೆ ಮೋಕ್ಷಪ್ರತಿಬಂಧಕವಾಗಿ ಎಂತು ಆಸಕ್ತಿಯು ಹುಟ್ಟುವದು! ಎಲೈ ಅರಸೆ, ಈಪ್ರಕಾರವಾಗಿ ವಿಘ್ನದಿಂದ ನಷ್ಟವಾದ ಯೋಗಾಭ್ಯಾಸವುಳ್ಳವನಾಗಿ ಹುಲ್ಲೆಮರಿಯನ್ನು ಬಹುಪ್ರಕಾರವಾಗಿ ಪೋಷಿಸುವದರಲ್ಲೇ ಆಸಕ್ತಿಯಿಂದ ತಾನು ಕೃತಾರ್ಥನಾಗುವ ವಿಚಾರವನ್ನು ಮಾಡಿದ ರಾಜಶ್ರೇಷ್ಠನಾದ ಆ ಭರತರಾಯನಿಗೆ ಅಷ್ಟರಲ್ಲೇ ತೀಕ್ಷ್ಣವಾದ ವೇಗವುಳ್ಳ ಪರಿಹರಿಸುವದಕ್ಕೆ ಅಶಕ್ಯವಾದ ಮೃತ್ಯುಕಾಲವು ಇಲಿ ಇರುವ ಬಿಲವನ್ನು ಎಂತು ಸರ್ಪವು ಪ್ರವೇಶಿಸುವದೋ ಆರೀತಿಯಿಂದ ಪ್ರಾಪ್ತವಾಯಿತು; ದೇಹವನ್ನು ತ್ಯಜಿಸುವ ಕಾಲದಲ್ಲಿ ಪುತ್ರನಂತೆ ಶೋಕಪಡುತಲಿರುವ ಹುಲ್ಲೆಮರಿಯನ್ನು ನೋಡಿ ಅತಿಶಯದಿಂದ ನೋಡುತ ಆ ಹುಲ್ಲೆಯಲ್ಲೇ ಇರಿಸಲ್ಪಟ್ಟ ಮನಸ್ಸುಳ್ಳವನಾಗಿ ಆ ಹುಲ್ಲೆಯನ್ನು ತನ್ನ ದೇಹವನ್ನೂ ಸಹ ಬಿಟ್ಟು ಆ ಶರೀರದೊಡನೆ ನಷ್ಟವಾಗದಿರುವ ಪೂರ್ವಜನ್ಮಸ್ಮರಣೆಯುಳ್ಳವನಾಗಿ ಪಾಮರನಂತೆ ಹುಲ್ಲೆಜನ್ಮವನ್ನು ಐದಿದನು; ಆಮೇಲೆ ಭರತರಾಯನು ಆ ಮೃಗಜನ್ಮದಲ್ಲಿಯೂ ಹಿಂದೆ ಮಾಡಲ್ಪಟ್ಟ ಭಗವತ್ಪೂಜೆಯ ಸಾಮರ್ಥ್ಯದಿಂದ ತನ್ನ ಮೃಗಜನ್ಮಕ್ಕೆ ಕಾರಣವನ್ನು ಸ್ಮರಿಸಿಕೊಂಡು ಅತಿಶಯದಿಂದ ಪಶ್ಚಾತ್ತಪ್ತನಾಗಿ ಮನಸ್ಸಿನಲ್ಲಿ ಯಾವಕಾರಣದಿಂದ ಬಿಡಲ್ಪಟ್ಟ ಸಮಸ್ತ ಸಂಗಗಳುಳ್ಳವನಾಗಿ ವಿಜನವಾದ ಅತಿ ಪುಣ್ಯಕರವಾದ ವನವನ್ನು ಆಶ್ರಯಿಸಿ ಜ್ಞಾನಿಯಾಗಿರುವ ನನ್ನ ಮನಸ್ಸು ಸರ್ವಭೂತಗಳಿಗೂ ಅಂತರಾತ್ಮನಾದ ಭಗವಂತನಾದ ಶ್ರೀವಾಸುದೇವನಲ್ಲಿಯೂ ಆತನ ಕಥಾಶ್ರವಣದಲ್ಲಿಯೂ ಅದರ ಅರ್ಥವನ್ನು ಚಿಂತಿಸುವದರಲ್ಲಿಯೂ ಶ್ರೀಹರಿನಾಮ ಸಂಕೀರ್ತನೆಯಲ್ಲಿಯೂ ಶ್ರೀಹರಿಚರಣಗಳ ಪೂಜೆಯ

ಕ್ಷಿಯೂ ಅವನ್ನು ಸ್ಮರಿಸೋಣವರಲ್ಲಿಯೂ ಕೂಡ ಅತ್ಯಂತಾಸಕ್ತಿಯುಂಟಾದ್ದರಿಂದ ವ್ಯರ್ಥಗಳಲ್ಲದಿರುವ ಯಾಮಗಳಿಂದ ಯುಕ್ತವಾದ ಕಾಲದಿಂದ ನಿಕ್ಷಿಸಲ್ಪಟ್ಟಂಥಾದ್ದಾಗಿ ಸರ್ವತ್ರ, ನಿಶ್ಚಯವಾಗಿದ್ದು ಈಗ ತನ್ನ ಅಜ್ಞಾನದಿಂದ ಹುಲ್ಲೆಮರಿಯನ್ನನುಸರಿಸಿ ದೂರವಾಗಿ ಹೋಯಿತು ; ಅದುಕಾರಣ ನಾನು ಜ್ಞಾನಿಗಳ ಮಾರ್ಗದದೆಶೆಯಿಂದ ಭ್ರಷ್ಟನಾದೆನು ; ಅಟಕಟಾ—ಮೃಗರೂಪನಾದ ಆ ಭರತನು ಈರೀತಿ ಹೊರಗೆ ಪ್ರಕಟವಾಗದಿರುವ ದುಃಖವುಳ್ಳವನಾಗಿ ತನ್ನ ತಾಯಿಯಾದ ಹೆಣ್ಣುಹುಲ್ಲೆಯನ್ನು ಬಿಟ್ಟು ಆ ಕಾಳಾಂಜನವೆಂಬ ಪರ್ವತದಿಂದ ಉಪಶಾಂತಿ ಸ್ವಭಾವಗಳಾದ ಮುನಿಗಳ ಸಮೂಹಗಳಿಗೆ ಅತ್ಯಂತ ಇಷ್ಟವಾದ ವಿಷ್ಣುಕ್ಷೇತ್ರವಾದ ಪುಲಹಾಶ್ರಮವಾದ ಸಾಲವೃಕ್ಷಗಳಿಂದ ಶೋಭಿತವಾದ ಗ್ರಾಮವನ್ನು ಪುನಃ ಐದಿದನು ; ಆ ಆಶ್ರಮದಲ್ಲಿಯೂ ಭರತರಾಯನು ಮೃಗಜನ್ಮನಿವೃತ್ತಿಕಾಲವನ್ನೇ ನಿರೀಕ್ಷಿಸುತ ಸಂಗದಿಂದ ಅತ್ಯಂತ ಭಯಪಡುತ ಏಕಾಕಿಯಾಗಿ ಒಣಗಿರುವ ಎಲೆಗಳಿಂದಲೂ ತೃಣಗಳಿಂದಲೂ ಬಳ್ಳಿಗಳಿಂದಲೂ ಪ್ರಾಣಧಾರಣೆಯನ್ನು ಮಾಡಿ ತನ್ನ ಮೃಗಜನ್ಮಕ್ಕೆ ಕಾರಣವಾದ ಪ್ರಾರಬ್ಧಕರ್ಮದ ಅವಸಾನವನ್ನು ಚಿಂತಿಸುತ ಅಧೋರ್ದಕದಲ್ಲಿ ಮೃಗಶರೀರವನ್ನು ಬಿಟ್ಟನು.”

೯ನೇ ಅಧ್ಯಾಯ.

ಭರತರಾಯನು ಭದ್ರಕಾಳಿಯೆಂಬ ಶಕ್ತಿಗೆ ಪಶುಭಾವದಿಂದ ಅರ್ಪಿಸಲ್ಪಟ್ಟದ್ದು.

“ಎಲೈ ಅರಸೆ, ಅನಂತರದಲ್ಲಿ ಆಂಗೀರಸಗೋತ್ರೋತ್ಪನ್ನರಾದ ಬ್ರಾಹ್ಮಣರಲ್ಲಿ ಶ್ರೇಷ್ಠನಾದ ಅಂತರಿಂದ್ರಿಯನಿಗ್ರಹವು ಬಹಿರಿಂದ್ರಿಯ ನಿಗ್ರಹವು ವ್ರತನಿಷ್ಠೆಯು ವೇದಾಧ್ಯಯನವು ಅತಿಥಿಗಳಿಗೋಸುಗ ಅನ್ನಾದಿ ದಾನವು ಸಂತೋಷವು ಕ್ಷಮೆಯು ವಿನಯವು ಅಸೂಯೆಯಿಲ್ಲದಿರೋಣವು ಕರ್ಮಪ್ರಕಾಶಕವಿದ್ಯೆಯು ದೇಹೇಂದ್ರಿಯಗಳಿಗಿಂತಲೂ ಆತ್ಮನು ವ್ಯತಿರಿಕ್ತನೆಂಬ ಜ್ಞಾನವು ಧರ್ಮಸಮೃದ್ಧಿಯಿಂದ ಹುಟ್ಟಿರುವ ಆನಂದವು ಈ ಉತ್ಕೃಷ್ಟ ಗುಣಗಳೊಡನೆ ಯುಕ್ತನಾದ ಒಬ್ಬಾನೊಬ್ಬ ಬ್ರಾಹ್ಮಣನಿಗೆ ಜ್ಯೇಷ್ಠಪತ್ನಿಯಲ್ಲಿ ತನಗೆ ಸಮಾನರಾದ ಶಾಸ್ತ್ರಪಾಂಡಿತ್ಯವು ಸತ್ಸ್ವಭಾವವು ಶುಚಿತ್ವವು ಇವೇ ಮೊದಲಾದ ಸಕಲಗುಣಗಳಿಂದ ಶೋಭಿತರಾದ ಏಕೋದರರಾದ ಒಂಭತ್ತುಮಂದಿ ಪುತ್ರರು ಜನಿಸಿದರು ; ಕನಿಷ್ಠಪತ್ನಿಯಲ್ಲಿ ಒಬ್ಬ ಪುರುಷನು ಒಬ್ಬ ಸ್ತ್ರೀಯು ಜನಿಸಿದರು ; ಆ ಸ್ತ್ರೀಪುರುಷಯುಗ್ಮದಲ್ಲಿ ಯಾವವನು ಪುರುಷನೋ ಅವನನ್ನೇ ಪರಮಭಾಗವತನಾಗಿ ರಾಜಶ್ರೇಷ್ಠನಾಗಿ ಮೃಗಶರೀರವನ್ನು ಬಿಟ್ಟು ಚರಮಜನ್ಮದಲ್ಲಿ ಬ್ರಾಹ್ಮಣತ್ವವನ್ನು ಹೊಂದಿರುವ ಭರತರಾಯನೆಂದು ಹೇಳುವರು ; ಆ ಬ್ರಾಹ್ಮಣಜನ್ಮದಲ್ಲಿಯೂ ಆ ಭರತರಾಯನು ಸ್ವಜನ ಸಂಗದ ದೆಶೆಯಿಂದ ಭಯಪಡುತ ಕರ್ಮಬಂಧವನ್ನು ಪರಿಹರಿಸುವ ಶ್ರವಣ ಸ್ಮರಣ ಸಂಕೀರ್ತನೆಗಳುಳ್ಳ ಭಗವಂತನ ಪಾದಾರವಿಂದಯುಗ್ಮವನ್ನು ಮನಸ್ಸಿನಲ್ಲಿ ವಿಶೇಷದಿಂದ ಧರಿಸಿ ಈಶ್ವರಾನುಗ್ರಹದಿಂದ ಸ್ಮರಿಸಲ್ಪಟ್ಟ ತನ್ನ ಪೂರ್ವಜನ್ಮಗಳ ಪರಂಪರೆಯುಳ್ಳವನಾದಕಾರಣ ತನಗೆ ತಪೋವಿಘ್ನವನ್ನು ಶಂಕಿಸುತ ತನ್ನನ್ನು ಲೋಕಕ್ಕೆ ಉನ್ಮತ್ತನನ್ನಾಗಿಯೂ ಅಜ್ಞನನ್ನಾಗಿಯೂ ಕಿವುಡನನ್ನಾಗಿಯೂ ತೋರಿಸಿದನು ; ಅನಂತರದಲ್ಲಿ ಆ ಬ್ರಾಹ್ಮಣನು ಪುತ್ರಸ್ನೇಹದಿಂದ ಬದ್ಧವಾದ ಮನಸ್ಸುಳ್ಳವನಾಗಿ ತನ್ನ ಪುತ್ರನಿಗೆ ಸಮಾವರ್ತನಪರ್ಯಂತಗಳಾದ ಬ್ರಾಹ್ಮಣಕರ್ಮಗಳನ್ನು ಮಾಡಿಸಿ ಮೊದಲು ಉಪನೀತನಾದ ಆ ಪುತ್ರನಿಗೆ ಇಷ್ಟಗಳಲ್ಲದೇ ಇದ್ದರೂ ದೇಹಾದಿ ಶುದ್ಧಿ ಶುದ್ಧಾಚಮನಗಳು ಮೊದಲಾದ ಕರ್ಮ ನಿಯಮಗಳನ್ನು ತಂದೆಯಿಂದ ಪುತ್ರನು ಶಿಕ್ಷಿತನಾಗಬೇಕೆಂದು ದುರಭಿನಿವೇಶವುಳ್ಳವನಾಗಿ ಶಿಕ್ಷೆಯನ್ನು ಮಾಡಿದನು ; ಆ ಜಡಭರತನು ಆ ಉಪದೇಶಕ್ರಮವನ್ನು ತಂದೆಯ ಸಮೀಪದಲ್ಲೇ ವಿಪರೀತವನ್ನಾಗಿ ಮಾಡಿದನು ; ಆ ಬ್ರಾಹ್ಮಣನು ಉಪಾಕರ್ಮಪೂರ್ವಕವಾಗಿ ಶ್ರಾವಣಾದಿ ಮಾಸಗಳಲ್ಲಿ ವೇದಾಧ್ಯಯನವನ್ನು ಮಾಡಿಸುತ ಮೊದಲು ಸಪ್ತವ್ಯಾಹೃತಿಗಳೊಡನೆ ಪ್ರಣವಶಿರಸ್ಸುಗಳೊಡನೆ ಮೂರು ಪಾದಗಳೊಡನೆ ಯುಕ್ತವಾದ ಗಾಯತ್ರಿಯನ್ನು ಚೈತ್ರಾದಿ ನಾಲ್ಕು ಮಾಸಗಳಲ್ಲಿ ಆವೃತ್ತಿ

ಯನ್ನು ಮಾಡುತಲಿರುವವನಾದಾಗ್ಯೂ ತನ್ನ ಪುತ್ರನಿಗೆ ಸ್ವರಾಕ್ಷರ ಕ್ರಮಯುಕ್ತವಾಗಿ ಗಾಯತ್ರಿಯನ್ನು ಪಠಣಂ
ಗೈಸುವದಕ್ಕೆ ಸಮರ್ಥನಾಗಲಿಲ್ಲ ; ಆ ಬ್ರಾಹ್ಮಣನು ಈ ಪ್ರಕಾರದಿಂದ ಆತ್ಮಸ್ವರೂಪನಾದ ತನ್ನ ಪುತ್ರನಲ್ಲಿ ಅನು
ರಾಗದಿಂದ ನಿಲ್ಲಿಸಲ್ಪಟ್ಟ ಮನಸ್ಸುಳ್ಳವನಾಗಿ ದೇಹಾದಿಶುದ್ಧಿ ವೇದಾಧ್ಯಯನ ವ್ರತನಿಯಮಗಳನ್ನೂ ಆಚಾರ್ಯ
ಅಗ್ನಿಗಳ ಶುಶ್ರೂಷಾದಿ ವ್ಯಾಪಾರವನ್ನೂ ಮಾಡುತಲಿರುವ ಬ್ರಹ್ಮಚಾರಿಗೆ ಯೋಗ್ಯಗಳಾದ ಕರ್ಮಗಳು ಆ ಪುತ್ರ
ನಿಂದ ತಿರಸ್ಕರಿಸಲ್ಪಟ್ಟವಾದಾಗ್ಯೂ ತಂದೆಯಿಂದ ಪುತ್ರನು ಶಿಕ್ಷಿತನಾಗಬೇಕೆಂಬ ದುರಭಿನಿವೇಶವುಳ್ಳವನಾಗಿ ಪುತ್ರನ
ನ್ನು ಕುರಿತು ಆಜ್ಞಾಪಿಸುತಲಿರುವವನಾದಾಗ್ಯೂ ಪುತ್ರನು ಪಂಡಿತನಾಗಬೇಕೆಂಬ ಮನೋರಥವನ್ನು ಪಡೆಯದೆ
ತಾನು ಅಪ್ರಮತ್ತವಾದಕಾಲದಿಂದ ಗೃಹಗಲ್ಲೇ ಪ್ರಮತ್ತನಾಗಿದ್ದು ಪರಲೋಕವನ್ನೈದಿದನು ; ಅನಂತರದಲ್ಲಿ ಆ
ಬ್ರಾಹ್ಮಣನ ಕನಿಷ್ಠಪತ್ನಿಯು ತನ್ನ ಪುತ್ರೀಪುತ್ರರನ್ನು ಸವತಿಯ ಹಸ್ತದಲ್ಲಿ ಸಮರ್ಪಿಸಿ ತಾನು ಸಹಗಮನ
ವಿಧಾನದಿಂದ ಪತಿಲೋಕವನ್ನೈದಿದಳು ; ಜ್ಯೇಷ್ಠಪತ್ನಿ ಗರ್ಭೋತ್ಪನ್ನರಾದ ಆ ಒಂಭತ್ತುಮಂದಿ ಪುತ್ರರು ತಮ್ಮ
ತಂದೆ ಸ್ವರ್ಗಾರೂಢನಾಗುತ್ತಿರಲು ತಾವು ಬ್ರಹ್ಮವಿದ್ಯಾಸ್ವರೂಪವನ್ನು ಅರಿಯದೆ ಕೇವಲ ಕರ್ಮಕಾಂಡದಲ್ಲೇ
ಆಸಕ್ತವಾದ ಬುದ್ಧಿಯುಳ್ಳವರಾಗಿ ತಮ್ಮನಾದ ಆ ಭರತನನ್ನು ಅವನ ಪ್ರಭಾವವನ್ನರಿಯದೆ ಅತಿ ಮೂಢನೆಂದು
ತಿಳದು ವಿದ್ಯಾವಿಷಯವಾಗಿ ಅವನನ್ನು ಶಿಕ್ಷಿಸುವದರಲ್ಲಿ ಪರಾಙ್ಮುಖರಾದರು ; ಆ ದ್ವಿಜಕುಮಾರನು ದ್ವಿಪಾತ್ಪಶುಗ
ಳಾದ ಪಾಮರ ಜನರಿಂದ ಎಲೈ ಉನ್ಮತ್ತನೆ—ಅಜ್ಞನೆ—ಕಿವುಡನೆ ಎಂದು ಯಾವಾಗ ಕರೆಯಲ್ಪಡುವನೋ ಆ ಸಮ
ಯದಲ್ಲಿ ಆ ಉನ್ಮತ್ತಾದಿ ಭಾವಗಳಿಗೆ ಅನುಗುಣಗಳಾದ ವಚನಗಳನ್ನು ನುಡಿಯುವನು ; ಅನ್ಯಜನರಿಂದ ಪ್ರೇರಿಸ
ಲ್ಪಟ್ಟು ಅವರ ಇಚ್ಛೆಯಿಂದಲೇ ಕರ್ಮಗಳನ್ನು ಮಾಡುವನು ; ಬಿಟ್ಟಿಯಿಂದಲೂ ಕೂಲಿಯಿಂದಲೂ ಯಾಚಿ
ಸೋಣಾದರಿಂದಲೂ ಅದೃಷ್ಟದಿಂದ ಪ್ರಾಪ್ತವಾದ ಪದಾರ್ಥವನ್ನು ಸ್ವಲ್ಪವಾದರೂ ಅಧಿಕವಾದರೂ ಷಡ್ರಸಯು
ಕ್ತವಾದದ್ದಾದರೂ ಕದನ್ನವಾದರೂ ದೇಹೇಂದ್ರಿಯಗಳ ತೃಪ್ತಿಯನ್ನು ಅಪೇಕ್ಷಿಸದೆ ಸುಮ್ಮನೆ ಭಕ್ಷಿಸುವನು ;
ಆ ದ್ವಿಜಕುಮಾರನು ಸರ್ವಕಾಲದಲ್ಲಿಯೂ ಮೂಲಕಾರಣವಿಲ್ಲದಿರುವ ಸ್ವತಸ್ಸಿದ್ಧವಾದ ತ್ರಿಪುಟಶೂನ್ಯವಾದ ಚಿ
ನ್ಮಾತ್ರಾನುಭವವೆಂಬ ಆನಂದಸ್ವರೂಪನಾದ ಪರಮಾತ್ಮನೇ ನಾನೆಂಬ ಪರಮಾರ್ಥಜ್ಞಾನವನ್ನು ಪಡದಿರುವವನಾಗಿ
ಮಾನಾಪಮಾನಾದಿ ದ್ವಂದ್ವಗಳಿಂದುಂಟಾದ ಸುಖದುಃಖಗಳಲ್ಲಿ ಆಸಕ್ತನಾಗದೆ ದೇಹಾದ್ಯಭಿಮಾನ ರಹಿತನಾದ್ದರಿಂದ
ಇಂದ್ರಿಯಗಳ ತೃಪ್ತಿಗೋಸುಗ ಅನ್ನಾದಿಗಳನ್ನು ಭಕ್ಷಿಸದೆ ಶೀತೋಷ್ಣ ವಾಯುವರ್ಷಾದಿಗಳಲ್ಲಿ ವೃಷಭದಂತೆ
ಹೊದಿಕೆಯಿಲ್ಲದವನಾಗಿ ಅತಿ ಪುಷ್ಟನಾಗಿ ಅತ್ಯಂತ ಕಠಿಣಗಳಾದ ಅವಯವಗಳುಳ್ಳವನಾಗಿ ಭೂಶಯನದಿಂದ ಮೈ
ಯನ್ನು ಉಜ್ಜೋಣವಿಲ್ಲದಿರುವದರಿಂದಲೂ ಸ್ನಾನವಿಲ್ಲದಿರೋಣದರಿಂದಲೂ ಶರೀರದಲ್ಲಿ ವ್ಯಾಪಿಸಿಕೊಂಡಿರುವ ಧೂಳಿ
ಗಳಿಂದ ಮಲಿನವಾದ ಮಹಾ ರತ್ನದಂತೆ ಪ್ರಕಟವಿಲ್ಲದಿರುವ ಬ್ರಾಹ್ಮಣ ತೇಜಸ್ಸುಳ್ಳವನಾಗಿ ಅತಿ ಮಲಿನವಾದ ಯ
ಜ್ಞೋಪವೀತದಿಂದ ಅವನ ಸ್ವರೂಪವನ್ನರಿಯದಿರುವ ಜನರಿಂದ ಬ್ರಾಹ್ಮಣಾಧಮನೆಂಬ ನಾಮಧೇಯದಿಂದ ತಿರಸ್ಕ
ರಿಸಲ್ಪಟ್ಟವನಾಗಿ ಸಂಚರಿಸುವನು ; ಯಾವ ದ್ವಿಜಕುಮಾರನು ಅನ್ಯಜನರ ಸೇವೆಯನ್ನು ಕೂಲಿಯಿಂದ ಆಹಾರವ
ನ್ನಪೇಕ್ಷಿಸುವನಾದನೋ ಆ ಕಾಲದಲ್ಲಿ ಅಣ್ಣಂದಿರಿಂದ ಗದ್ದೆಯಲ್ಲಿ ಕೆಲಸ ಮಾಡಿದರೆ ನಿನಗೆ ಆಹಾರವನ್ನು ಕೊಟ್ಟೇ
ವೆಂದು ವಂಚನೆಯಿಂದ ಆಜ್ಞಾಪಿಸಲ್ಪಟ್ಟವನಾಗಿ ಆ ಜಡಭರತನು ಆ ಕೆಲಸವಾದಮೇಲೆ ಅಣ್ಣಂದಿರಿಂದ ಕೊಡಲ್ಪಟ್ಟ
ನುಚ್ಚುಗಳನ್ನು ಗಾಣದ ಹಿಂಡಿಯನ್ನು ನುಚ್ಚು ತೌಡಿನಿಂದ ಉಳಿದಿರುವ ಉದ್ದುಗಳನ್ನು ಶೀಕುಮೊದಲಾದ್ದನ್ನು
ಸಹಾ ಅಮೃತದಂತೆ ಸವಿಯಾಗಿ ಭುಂಜಿಸುವನು ; ಹಳತಿಟ್ಟುಗಳೆಂದು ಹೆಚ್ಚುಕಡಮೆಯೆಂದು ಸಹಾ ಅರಿಯನು ;
ಹೀಗಿರಲು ಒಂದು ಸಮಯದಲ್ಲಿ ಒಬ್ಬ ಶೂದ್ರನಾದ ಅರಸು ಪುತ್ರನನ್ನು ಪಡೆಯಲಿಚ್ಛೆಯುಳ್ಳವನಾಗಿ ಭದ್ರಕಾಳಿ
ಯೆಂಬ ಶಕ್ತಿಗೆ ನರಪಶುವನ್ನು ಸಮರ್ಪಿಸುವದಕ್ಕೋಸ್ಕರ ಪ್ರಯತ್ನಂಗೈದನು ; ಆ ಸಮಯದಲ್ಲಿ ದೈವಯೋಗ
ದಿಂದ ಬಂಧನದಿಂದ ಬಿಡಿಸಿಕೊಂಡು ಓಡಿಹೋಗಿರುವ ನರಪಶುವಿನ ಮಾರ್ಗವನ್ನು ಆ ಅರಸಿನ ಭೃತ್ಯರು ಹುಡು
ಕಲೋಸುಗ ಅಲ್ಲಲ್ಲಿ ಸಂಚರಿಸುತ ಅಂಧಕಾರದಿಂದ ವ್ಯಾಪ್ತವಾದ ರಾತ್ರಿಯಲ್ಲಿ ಅರ್ಧರಾತ್ರಿಸಮಯದಲ್ಲಿ ಎಲ್ಲೂ ಆ
ಪಶುವನ್ನೈದಿದವರಾಗದೆ ದೈವವ್ಯಾಪಾರದಿಂದ ವೀರಾಸನವನ್ನು ಅಂಗೀಕರಿಸಿ ದಂಡಪಾಣಿಯಾಗಿ ಸುತ್ತಲೂ ತಿರುಗೋ

ಣಾವರಿಂದಲೂ ಹುಲ್ಲೆಗಳಿಂದಲೂ ಕಾಡುಹಂದಿಗಳಿಂದಲೂ ಬಾಧೆಯಿಲ್ಲನಂತೆ ಗದ್ದೆಗಳನ್ನು ರಕ್ಷಿಸುತಲಿರುವ ಅಂಗೀರಸಗೋತ್ರೋತ್ಪನ್ನನಾದ ಆ ಬ್ರಾಹ್ಮಣಕುಮಾರನನ್ನು ನೋಡಿದರು ; ಆ ರಾಜಭಟರು ಈ ದ್ವಿಜಕುಮಾರನನ್ನು ಅನರ್ಘ್ಯಗಳಾದ ಮಹಾಪುರುಷ ಲಕ್ಷಣಗಳುಳ್ಳವನನ್ನಾಗಿ ತಿಳಿದು ತಮ್ಮ ಅರಸಿನ ನಷ್ಟವಾದ ಪಶುವಿಗೆ ಇವನೇ ಪ್ರತಿನಿಧಿಯೆಂದು ತಿಳಿದು ಆ ದ್ವಿಜಕುಮಾರನನ್ನು ಹಗ್ಗಗಳಿಂದ ಬಿಗಿದು ಕಟ್ಟಿ ಸಂತೋಷದಿಂದ ವಿಕಸಿತವಾದ ಮುಖವುಳ್ಳವರಾಗಿ ಆ ಭದ್ರಕಾಳಿಯೆಂಬ ದೇವತೆಯ ಸ್ಥಾನವನ್ನು ಐದಿಸಿದರು ; ಆ ಚೋರರು ಆ ದ್ವಿಜಕುಮಾರನಿಗೆ ವಿಧ್ಯುಕ್ತವಾಗಿ ಸ್ನಾನವನ್ನು ಮಾಡಿಸಿ ನೂತನ ವಸ್ತ್ರವನ್ನು ಹೊದ್ದಿಸಿ ಭೂಷಣ ಅನುಲೇಪನ ಪುಷ್ಪಹಾರಗಳಿಂದಲೂ ತಿಲಕ ಮೊದಲಾದ್ದರಿಂದಲೂ ಅಲಂಕೃತನಾಗಿ ಭೋಜನವನ್ನು ಮಾಡಿರುವ ನರಪಶುವಾದ ಆ ದ್ವಿಜಕುಮಾರನನ್ನು ಧೂಪ ದೀಪ ಪುಷ್ಪಮಾಲಿಕೆಗಳಿಂದ ಅರಳು ತಳಿರು ಧಾನ್ಯದ ಮೊಳಕೆಗಳು ಫಲಗಳು ಉಪಾಯನಂಗಳು ಇತ್ಯಾದಿ ದ್ರವ್ಯಗಳಿಂದ ಯುಕ್ತವಾದ ಹಿಂಸಾಪೂರ್ವಕವಾದ ಶಕ್ತಿಪೂಜಾವಿಧಾನದಿಂದ ಮಹತ್ತಾದ ಗಾನ ಸ್ತುತಿ ಮೃದಂಗ ಭೇರಿ ಶಬ್ದದಿಂದಲೂ ಭದ್ರಕಾಳಿಯೆಂಬ ದೇವತೆಯ ಮುಂದುಗಡೆಯುಲ್ಲಿ ಸಮರ್ಪಿಸಿದರು ; ಆ ಶೂದ್ರ ನರಪತಿಗೆ ಪುರೋಹಿತನಾಗಿರುವ ಮತ್ತೊಬ್ಬ ಚೋರನು ನರಪಶುವಿನ ರಕ್ತವೆಂಬ ಮದ್ಯದಿಂದ ಭದ್ರಕಾಳಿಯೆಂಬ ದೇವತೆಯನ್ನು ಸಂತೋಷಪಡಿಸಿ ಭದ್ರಕಾಳಿ ಮಂತ್ರದಿಂದ ಮಂತ್ರಿಸಲ್ಪಟ್ಟ ಅತಿ ಭಯಂಕರವಾದ ತೀಕ್ಷ್ಣವಾದ ಖಡ್ಗವನ್ನು ಹಸ್ತದಲ್ಲಿ ಧರಿಸಿದನು ! ಎಲೈ ಅರಸೆ, ಈಪ್ರಕಾರವಾಗಿ ರಜಸ್ತಮೋಗುಣಗಳೇ ಸ್ವಭಾವಗಳಾಗುಳ್ಳ ಧನಮದವೆಂಬ ದೋಷದಿಂದ ಮೀರೆತಪ್ಪಿರುವ ಚಿತ್ತವುಳ್ಳ ಭಗವದಂಶಯುಕ್ತವಾದ ಬ್ರಾಹ್ಮಣರ ಸಮೂಹವನ್ನು ತೃಣೀಕರಿಸಿ ದುರ್ಮಾರ್ಗದಿಂದ ಸ್ವೇಚ್ಛಾವಿಹಾರಿಗಳಾದ ಶೂದ್ರರಿಂದ ಮಾಡಲ್ಪಡುವ ಸಾಕ್ಷಾದ್ಬ್ರಹ್ಮಸ್ವರೂಪನಾದ ಬ್ರಹ್ಮಋಷಿ ಪುತ್ರನಾದ ನಿರ್ವೈರನಾದ ಸಕಲಭೂತ ಮಿತ್ರನಾದ ಆ ದ್ವಿಜಕುಮಾರನ ಅತಿ ಭಯಂಕರವಾದ ಹಿಂಸೆಯನ್ನು ಕಂಡು ಆ ಕಾಲದಲ್ಲಿ ಆ ಭದ್ರಕಾಳಿಯೆಂಬ ದೇವತೆಯೇ ಆಪತ್ಕಾಲದಲ್ಲಿ ಪ್ರಾರ್ಥನೆಯನ್ನು ಮಾಡಿ ನರಪಶುಹಿಂಸೆಯನ್ನು ಮಾಡುವದು ಸಮ್ಮತವಾದಾಗ್ಯೂ ಇಂಥಾ ಮಹಾಪುರುಷನ ಹಿಂಸೆಯು ತನಗೆ ಸಮ್ಮತವಲ್ಲವೆಂದು ತಿಳಿದು ಸಹಿಸಲಶಕ್ಯವಾದ ಆ ಪುರುಷನ ಬ್ರಹ್ಮತೇಜಸ್ಸಿನಿಂದ ದಹಿಸಲ್ಪಟ್ಟ ದೇಹವುಳ್ಳವಳಾಗಿ ಅತಿ ತ್ವರೆಯಿಂದ ಶಿಲಾಪ್ರತಿಮೆಯನ್ನು ಬಿಟ್ಟು ಹೊರಗೆ ಹೊರಟುಹೋದಳು ; ಅನಂತರದಲ್ಲಿ ಆ ಭದ್ರಕಾಳಿಯು ಅತ್ಯಂತವಾಗಿ ಅಪರಾಧವನ್ನು ಸಹಿಸಲಾರೋಣದರಿಂದಲೂ ತನ್ನ ಶರೀರವು ಜ್ವಲಿಸೋಣದರಿಂದಲೂ ಪುಟ್ಟಿದ ಕೋಪವು ಇವುಗಳ ಆಟೋಪವೇಗದಿಂದ ಚದರಿರುವ ಹುಬ್ಬುಗಂಟೆಂಬ ಶಾಖೆಗಳ ವಕ್ರಗಳಾದ ಕೋರೆದಾಡೆಗಳ ರಕ್ತವರ್ಣಗಳಾದ ನೇತ್ರಗಳ ಭ್ರಮಣೆಯಿಂದ ಅತಿ ಭಯಂಕರವಾದ ಮುಖವುಳ್ಳವಳಾಗಿ ಈ ಪ್ರಪಂಚವನ್ನು ಸಂಹರಿಸಲು ಪ್ರಯತ್ನವುಳ್ಳವಳಂತೆ ಅತಿ ಸನ್ನಾಹದಿಂದ ಅಟ್ಟಹಾಸಂಗೈಯುತಲಿರುವವಳಾಗಿ ತನ್ನ ಸ್ಥಾನದಿಂದ ಮೇಲಕ್ಕೆ ಹಾರಿ ಆ ಹಿಂಸನ ಹಸ್ತದಲ್ಲಿರುವ ಖಡ್ಗದಿಂದ ಛೇದಿಸಲ್ಪಟ್ಟ ಶಿರಸ್ಸುಗಳುಳ್ಳ ಅತಿ ಗರ್ವಯುಕ್ತರಾದ ಆ ಚೋರರ ಕಂಠಗಳಿಂದ ಸ್ರವಿಸುತಲಿರುವ ಅತ್ಯುಷ್ಣವಾದ ರಕ್ತವೆಂಬ ಮದ್ಯವನ್ನು ತನ್ನ ಪರಿವಾರದೇವತೆಗಳೊಡನೆ ಪಾನಂಗೈದು ಆ ರಕ್ತದಿಂದ ಹುಟ್ಟಿದ ಮದದಿಂದ ಪರವಶಳಾಗಿ ಥಟ್ಟನೆ ಗಾನಂಗೈದು ನಾಟ್ಯವನ್ನು ಮಾಡಿ ಅವರ ಶಿರಸ್ಸುಗಳೆಂಬ ಚೆಂಡುಗಳ ಕ್ರೀಡೆಯನ್ನು ಮಾಡಿ ವಿಹರಿಸಿದಳು ! ಎಲೈ ಅರಸೆ, ಈಪ್ರಕಾರವಾಗಿ ಮಹಾತ್ಮರ ವಿಷಯದಲ್ಲಿ ಸಂಕಲ್ಪಿಸಲ್ಪಟ್ಟ ಹಿಂಸಾರೂಪವಾದ ಅಪರಾಧ ಮಾಡಿದ ದುರ್ಜನರಿಗೆ ಸಮಗ್ರವಾಗಿ ದುಸ್ಸಿದ್ಧಿ ಫಲಿಸುವದು ; ದೇಹೇಂದ್ರಿಯಾದಿಗಳೇ ತಾನೆಂಬ ದೃಢವಾದ ಅಹಂಕಾರವನ್ನು ಬಿಟ್ಟವರಾಗಿ ಸರ್ವಭೂತಗಳಿಗೂ ಮಿತ್ರರಾಗಿ ನಿರ್ವೈರರಾಗಿ ಸಾಕ್ಷಾತ್ ಶ್ರೀ ನಾರಾಯಣನಿಂದ ಕಾಲಸ್ವರೂಪವಾದ ಭಕ್ತರ ಸಂರಕ್ಷಣೆಯಲ್ಲಿ ಜಾಗರೂಕರಾದ ಶ್ರೇಷ್ಠವಾದ ತನ್ನ ಚಕ್ರಾಯುಧದಿಂದ ಸರ್ವಾಂತರ್ಯಾಮಿಯಾದ್ದರಿಂದ ಆಯಾ ರೂಪಗಳಿಂದ ರಕ್ಷಿಸಲ್ಪಡುತ ಯಾತರಿಂದಲೂ ಭಯವಿಲ್ಲದಿರುವ ಆ ಶ್ರೀಹರಿಯ ಪಾದಾರವಿಂದವನ್ನು ಶರಣುಹೊಂದಿದವರಾಗಿರುವ ಪರಮಹಂಸರಾದ ಪರಮ ಭಾಗವತರಿಗೆ ತಮ್ಮ ಶಿರಚ್ಛೇದವಾಗುವ ಸಮಯದಲ್ಲು ಭಯವಿಲ್ಲದಿರುವದು ಯಾವದುಂಟೋ ಅದು ಆಶ್ಚರ್ಯವಲ್ಲವು” ಎಂದು ನುಡಿದನು.

೧೦ ನೇ ಅಧ್ಯಾಯ.

ರಹೂಗಣನೆಂಬ ಅರಸು ಜಡಭರತನಿಂದ ಪ್ರಸಾದವನ್ನು ಹೊಂದಿದ್ದು.

"ಎಲೈ ಅರಸೆ, ಸಿಂಧು ಸೌವೀರಗಳೆಂಬ ದೇಶಗಳಿಗೆ ಅಧಿಪತಿಯಾದ ರಹೂಗಣನೆಂಬ ಅರಸು ಬ್ರಹ್ಮಸ್ವರೂಪವನ್ನು ತಿಳಿಯಲಿಚ್ಛೆಯಿಂದ ಇಕ್ಷುಮತಿಯೆಂಬ ನದೀತೀರದಲ್ಲಿ ವಾಸಂಗೈಯುತಲಿರುವ ಸರ್ವಜ್ಞನಾದ ಕಪಿಲ ಮಹಾಮುನಿಯ ದರ್ಶನಕ್ಕೋಸ್ಕರ ಹೊರಡುತ್ತಿರಲು ಆ ಸಮಯದಲ್ಲಿ ಪಲ್ಲಕ್ಕಿ ಹೊರುವ ಬೆಸ್ತರನ್ನು ಹುಡುಕುತಲಿರುವ ಗೊತ್ತುಗಾರನಾದ ಒಬ್ಬ ಬೆಸ್ತನು ದೈವಯೋಗದಿಂದ ಮಾರ್ಗದಲ್ಲಿ ಸಂಚರಿಸುತಲಿರುವ ಆ ಜಡಭರತನನ್ನು ಬಿಟ್ಟಿಹಿಡಿದನು ; ಅತ್ಯಂತವಾಗಿ ಬಲತಿರುವ ಯೌವನಸ್ಥನಾದ ಕಠಿಣಗಳಾದ ಅವಯವಗಳುಳ್ಳ ಈ ಪುರುಷನು ಎತ್ತಿನಂತೆಯೂ ಕತ್ತೆಯಂತೆಯೂ ಭಾರವನ್ನು ವಹಿಸುವದಕ್ಕೆ ಸಮರ್ಥನೆಂದು ಮೊದಲು ಬಿಟ್ಟಿ ಹಿಡಿಯಲ್ಪಟ್ಟ ಬೆಸ್ತರೊಡನೆ ಬಲಾತ್ಕಾರದಿಂದ ಹಿಡಿಯಲ್ಪಟ್ಟರುವ ಮಹಾನುಭಾವನಾದ ಆ ಜಡಭರತನು ಇಂಥಾ ನೀಚಕೃತ್ಯಕ್ಕೆ ಯೋಗ್ಯನಲ್ಲದಿದ್ದರೂ ಆ ರಹೂಗಣನೆಂಬ ಅರಸಿನ ಪಲ್ಲಕ್ಕಿಯನ್ನು ಹೊತ್ತು ಮಾರ್ಗದಲ್ಲಿ ಇರುವೆ ಮೊದಲಾದ ಪ್ರಾಣಿಗಳಿಗೆ ಹಿಂಸೆಯಾದೀತೆಂಬ ಬುದ್ಧಿಯಿಂದ ಮುಂದೆ ಬಾಣಪ್ರಮಾಣವಾದ ಪ್ರದೇಶವನ್ನು ಅಡಿಗಳನ್ನಿಟ್ಟು ನಡಿಯುವನಾದ್ದರಿಂದ ಯಾವಾಗ ಪಲ್ಲಕ್ಕಿಬೆಸ್ತರ ಗಮನವು ಏಕರೀತಿಯಾಗಲಿಲ್ಲವೋ ಆ ಸಮಯದಲ್ಲಿ ರಹೂಗಣನು ಹೆಚ್ಚುಕಡಿಮೆಯಾಗಿ ಹೋಗುತಲಿರುವ ತನ್ನ ಪಲ್ಲಕ್ಕಿಯನ್ನು ನೋಡಿ ಹೊತ್ತಿರುವ ಬೆಸ್ತರನ್ನು ಕುರಿತು 'ಎಲೈ ಬೆಸ್ತರೆ, ಚನ್ನಾಗಿ ನಡಿಯಿರಿ ; ಯಾಕೆ ಹೆಚ್ಚುಕಡಿಮೆಯಾಗಿ ಪಲ್ಲಕ್ಕಿಯನ್ನು ಹೊರುತ್ತೀರಿ' ಎಂಬ ಅರಸಿನ ವಾಕ್ಯವನ್ನು ಕೇಳಿ ಆ ಬೆಸ್ತರು ರಾಜದಂಡನೆಯ ದೆಶೆಯಿಂದ ಭಯಪಟ್ಟ ಮನಸ್ಸುಳ್ಳವರಾಗಿ ಆ ಅರಸನನ್ನು ಕುರಿತು 'ಎಲೈ ಅರಸೆ, ನಾವು ಅತ್ಯಂತ ಮತ್ತರಾಗಿರುವರಲ್ಲ ; ನಿನ್ನ ಆಜ್ಞಾನುಸಾರವಾಗಿ ಪಲ್ಲಕ್ಕಿಯನ್ನು ಚನ್ನಾಗಿ ಹೊರುತಲಿದ್ದೇವೆ ; ಈ ಪುರುಷನು ಈಗತಾನೇ ಪಲ್ಲಕ್ಕಿಯನ್ನು ಹೊರೋಣದರಲ್ಲಿ ನಿಯಮಿಸಲ್ಪಟ್ಟವನಾದರೂ ಶೀಘ್ರವಾಗಿ ನಡೆಯುವದಿಲ್ಲ ; ಅದುಕಾರಣ ನಾವು ಇವನೊಡನೆ ಪಲ್ಲಕ್ಕಿಯನ್ನು ಹೊರುವದಕ್ಕೆ ಸಮರ್ಥರಲ್ಲ ; ಒಬ್ಬನ ಸಂಗತಿಯಿಂದ ಹುಟ್ಟಿದ ದೋಷವು ಅವನೊಡನೆ ಸಂಗಂಗೈಯ್ಯುತಲಿರುವವರಿಗೂ ಉಂಟಾಗುವದೆಂದು ಹೇಳಲ್ಪಟ್ಟ ದೀನರಾದ ಬೆಸ್ತರ ಮಾತನ್ನು ಕೇಳಿ ರಹೂಗಣರಾಯನು ಮಹಾತ್ಮರ ಚರಣಸೇವೆ ಮಾಡಿದಂಥಾವನಾದಾಗ್ಯೂ ದೈವದಿಂದ ಪ್ರೇರಿತವಾದ ಸ್ವಭಾವದಿಂದ ಪರವಶನಾಗಿ ಮಾಡಲ್ಪಟ್ಟವನಾದ್ದರಿಂದ ಸ್ವಲ್ಪ ಕೋಪದೊಡನೆ ಕೂಡಿದವನಾಗಿ ಬೂದಿಯಿಂದ ಮುಚ್ಚಲ್ಪಟ್ಟ ಅಗ್ನಿಯಂತೆ ಪ್ರಕಟವಲ್ಲದಿರುವ ಬ್ರಹ್ಮತೇಜಸ್ಸುಳ್ಳ ಆ ಜಡಭರತನನ್ನು ಕುರಿತು ರಜೋಗುಣದಿಂದಾವೃತವಾದ ಬುದ್ಧಿಯುಳ್ಳವನಾಗಿ 'ಎಲೈ ತಮ್ಮನೇ, ನಿಶ್ಚಯವಾಗಿ ನೀನು ಅತ್ಯಂತವಾಗಿ ಶ್ರಮೆಪಡುತಲಿದ್ದೀಯೆ ; ನೀನು ಬಹಳ ಹೊತ್ತಿನಿಂದ ಮಾರ್ಗದಲ್ಲಿ ಬಹುದೂರ ಪಲ್ಲಕ್ಕಿಯನ್ನು ಹೊತ್ತವನಾದೆ ; ನೀನು ಬಲಿತಿರುವ ದೇಹವುಳ್ಳವನಲ್ಲ ; ಅತಿ ಕಠಿನಗಳಾದ ಅವಯವಗಳುಳ್ಳವನಲ್ಲ ; ವೃದ್ಧಭಾವದಿಂದ ಪೀಡಿಸಲ್ಪಟ್ಟವನಾಗಿದ್ದೀಯೆ ! ಎಲೈ ಮಿತ್ರನೆ, ನಿನ್ನೊಡನೆ ಈ ಬೆಸ್ತರು ಚನ್ನಾಗಿ ಪಲ್ಲಕ್ಕಿಯನ್ನು ಹೊರುವದಿಲ್ಲ' ಎಂದು ಬಹುಪ್ರಕಾರವಾಗಿ ವಕ್ರಗಳಾದ ವಚನಗಳಿಂದ ಆ ರಹೂಗಣನಿಂದ ಪರಿಹಾಸಂಗೈಯಲ್ಪಟ್ಟವನಾದಾಗ್ಯೂ ಆ ಜಡಭರತನು ಅವಿದ್ಯೆಯಿಂದ ರಚಿಸಲ್ಪಟ್ಟ ಆಕಾಶದಿಂದ ಪಂಚಭೂತಗಳು ಶ್ರೋತ್ರಾದಿ ಇಂದ್ರಿಯಗಳು ಪುಣ್ಯಾಪಾಪಗಳು ಅಂತಃಕರಣಗಳು ಸಹ ಉಳ್ಳ ಅಸತ್ಯನಾದ ತನ್ನ ಈ ಕಡೇಶರೀರದಲ್ಲಿ ಇದೇ ನಾನು—ಇದೇ ನನ್ನದು ಎಂದು ಆರೋಪಿಸಲ್ಪಡದಿರುವ ಜ್ಞಾನವುಳ್ಳವನಾದ್ದರಿಂದ ಕೇವಲ ಬ್ರಹ್ಮಸ್ವರೂಪನಾಗಿ ಉತ್ತರವನ್ನು ಕೊಡದೆ ಪೂರ್ವಪ್ರಕಾರದಿಂದ ಸುಮ್ಮನೆ ಆ ಪಲ್ಲಕ್ಕಿಯನ್ನು ಹೊತ್ತನು ; ಆಗ ಪುನಃ ಹೆಚ್ಚುಕುಂದಾಗಿ ತನ್ನ ಪಲ್ಲಕ್ಕಿಯು ಹೋಗುತ್ತಿರಲು ಆ ರಹೂಗಣರಾಯನು ಅತ್ಯಂತ ಕೋಪಯುಕ್ತನಾಗಿ 'ಎಲೈ ಅಜ್ಞನೆ, ಇದೇನು ನೀನು ಜೀವಂತನಾದಾಗ್ಯೂ ನಿರ್ಜೀವನಂತೆ ಅರಸಾದ ನನ್ನನ್ನು ತಿರಸ್ಕರಿಸಿ ನನ್ನ ಆಜ್ಞೆಯನ್ನು ಮೀರುವನಾಗಿದ್ದೀಯೆ ; ಯಾವಪ್ರಕಾರದಿಂದ ಶಿಕ್ಷೆಮಾಡಿದರೆ ನೀನು ಪ್ರಮತ್ತನಾಗದಿರುವೆಯೋ ಆ ಪ್ರಕಾರವಾಗಿ ಜನಸಮೂಹವನ್ನು

ದುವುದನ್ನು ಶಿಕ್ಷಿಸುವಂತೆ ನಾನು ನಿನ್ನನ್ನು ಶಿಕ್ಷಿಸುವೆನು' ಎಂದು ಈರೀತಿ ಅಸಂಗತವಾದ ವಾಕ್ಯವನ್ನು ಹೇಳುತ್ತ ನಾನು ಅರಸೆಂಬ ದುರಹಂಕಾರವುಳ್ಳವನಾಗಿ ರಜಸ್ತಮೋಗುಣಗಳಿಂದ ಅಧಿಕವಾದ ಮದದಿಂದ ಶ್ರೀ ಭಗವಂತನ ಪ್ರೀತಿಗೆ ಸ್ಥಾನಭೂತನಾದ ಜಡಭರತನನ್ನು ತಿರಸ್ಕರಿಸಿ ಅಪ್ರಾಜ್ಞನಾದ ತನ್ನನ್ನು ಪ್ರಾಜ್ಞನೆಂದು ತಿಳಿಯುತ್ತ ಮಹಾ ಯೋಗಿಗಳು ಜಡರಂತೆ ಸಂಚರಿಸುವರೆಂಬ ಅರ್ಥವನ್ನು ತಿಳಿಯದವನಾಗಿರುವ ರಹೂಗಣರಾಯನ 'ಮೊದಲು ನೀನು ಶ್ರಮಪಟ್ಟವನಲ್ಲ; ಬಹಳ ಮಾರ್ಗವನ್ನು ನಡೆದವನಲ್ಲ' ಎಂದು ಹೇಳಲ್ಪಟ್ಟ ಆ ವಕ್ರವಚನಗಳಿಗೆ ಸಾಕ್ಷಾತ್ ಬ್ರಹ್ಮಸ್ವರೂಪನಾಗಿ ಸರ್ವ ಪ್ರಾಣಿಗಳಿಗೂ ಮಿತ್ರನಾಗಿ ಅಂತರಾತ್ಮನಾಗಿರುವ ಗರ್ವರಹಿತನಾದ ಆ ಜಡಭರತನು ಮುಗುಳುನಗೆಯೊಡನೆ—ಎಲೈ ವೀರನೆ, ಭಾರವೆಂಬ ಒಂದು ಪದಾರ್ಥವು ಸತ್ಯವಾದದ್ದೇ ಆದರೆ ಆ ಭಾರವನ್ನು ವಹಿಸುವ ದೇಹವು ಸತ್ಯವಾದದ್ದೇ ಆದರೆ ಅಂಥಾ ದೇಹಕ್ಕೂ ನನಗೂ ಸಂಬಂಧವು ಸತ್ಯವಾದರೆ ಆಗ ನನಗೆ ಶ್ರಮಾದಿಗಳು ಇಲ್ಲವೆಂದು ನಿನ್ನಿಂದ ನುಡಿಯಲ್ಪಟ್ಟ ವಚನವು ಸತ್ಯವೇ ಸರಿ—ವಂಚನೆ ಮಾತಲ್ಲ; ಪ್ರಕೃತದಲ್ಲಿ ಭಾರವೂ ದೇಹವೂ ಅನೃತವಾದ್ದರಿಂದಲೂ ಆ ದೇಹಸಂಬಂಧವು ನನಗೆ ಸರ್ವಾತ್ಮನಾ ಇಲ್ಲದೆ ಹೋದ್ದರಿಂದಲೂ ನಿನ್ನ ಮಾತು ಕಪಟವೇ ಸರಿ; ಅದೇರೀತಿ ನಡಿಯುವಂಥಾ ನನಗೆ ಐದತಕ್ಕ ಸ್ಥಾನವೂ ಮಾರ್ಗವೂ ಸತ್ಯವಾದರೆ ಆಗ ದೂರಮಾರ್ಗವನ್ನು ನಡೆಯಲಿಲ್ಲವೆಂದು ನನ್ನನ್ನು ಕುರಿತು ನುಡಿದ ವಚನವು ಸತ್ಯವೇ ಸರಿ—ಕಪಟವಲ್ಲ; ಪ್ರಕೃತದಲ್ಲಿ ಪ್ರಾಪ್ಯವಾದ ಆ ಸ್ಥಳವೂ ಆ ಮಾರ್ಗವೂ ಅನೃತಗಳಾದ್ದರಿಂದ ನಿನ್ನ ಆ ವಚನವು ಅಸತ್ಯವೇ ಸರಿ; ನಾನು ಅತ್ಯಂತ ಪುಷ್ಟನೆಂದು ನುಡಿದೆಯಲ್ಲ—ಎಲೈ ಅರಸೆ, ಚೇತನಾಚೇತನನಾದ ನನ್ನನ್ನು ಕುರಿತು ನೀನು ಅತಿ ಪುಷ್ಟನೆಂಬ ಈ ವಾಕ್ಯವು ಮೂರ್ಖಜನ ಸಮ್ಮತವೇ ಹೊರ್ತು ವಿದ್ವಜ್ಜನ ಸಮ್ಮತವಲ್ಲ; ಈ ಅತಿ ಪುಷ್ಟನೆಂಬ ವಾಕ್ಯವು ಪಂಚಭೂತ ಸಮೂಹರೂಪವಾದ ದೇಹದಲ್ಲೇ ಹೊರ್ತು ಆತ್ಮನಲ್ಲಿ ಉಂಟಾಗಲಾರದು; ಅದು ಹ್ಯಾಗೆಂದರೆ: ಸ್ಥೂಲತ್ವವು ಕೃಶತ್ವವು ವ್ಯಾಧಿಗಳು ಕ್ಷುತ್ತು ಬಾಯಾರಿಕೆಯು ಭಯವು ಕಲಹವು ಇಚ್ಛೆಯು ವೃದ್ಧತ್ವವು ನಿದ್ರೆಯು ಸ್ತ್ರೀವಿಷಯದಲ್ಲಿ ಆಸಕ್ತಿಯು ಕೋಪವು ಅಹಂಕಾರದಿಂದುಂಟಾದ ಮದವು ಇವೇ ಮೊದಲಾದ ಗುಣಗಳು ದೇಹಾಭಿಮಾನದೊಡನೆ ಕೂಡಿ ಜನಿಸಿರುವ ಪುರುಷನಿಗೆ ಹೊರ್ತು ದೇಹಾಭಿಮಾನವನ್ನು ಬಿಟ್ಟಿರುವವನಿಗೆ ಉಂಟಾಗಲಾರದು; ಜೀವಿಸುತಲಿರುವವನಾದಾಗ್ಯೂ ನಿರ್ಜೀವನಂತೆ ತೋರುತಲಿದ್ದೀಯೆ ಎಂದು ನುಡಿದೆಯಲ್ಲ—ಎಲೈ ರಾಜನೆ, ಜೀವನ್ಮೃತತ್ವವು ನನಗೆ ಮಾತ್ರವೇ ಉಂಟೆಂದು ನೀನು ತಿಳಿಯಬೇಡ; ಪ್ರತಿಕ್ಷಣದಲ್ಲೂ ಉತ್ಪತ್ತಿ ವಿಲಯಗಳುಳ್ಳದ್ದಾದಕಾರಣ ವಿಕಾರಿಗಳಾದ ಸಮಸ್ತ ವಸ್ತುಗಳಿಗೂ ನಿಶ್ಚಯವಾಗಿ ಜೀವನ್ಮೃತತ್ವವುಂಟೆಂದು ತಿಳಿ; ಸ್ವಾಮಿಯಾದ ನಿನ್ನ ಆಜ್ಞೆಯನ್ನು ನಾನು ಅತಿಕ್ರಮಿಸಿದೆನೆಂದು ನುಡಿದೆಯಲ್ಲ—ಎಲೈ ಪೂಜ್ಯನೆ, ಸ್ವಾಮಿ ಭೃತ್ಯಭಾವವು ಯಾವಾಗ ಇವನೇ ಸ್ವಾಮಿಯು ಇವನೇ ಭೃತ್ಯನೆಂಬ ವ್ಯವಸ್ಥೆಯು ಸ್ಥಿರವಾಗಿರುವದೋ ಆಗ ಆಜ್ಞಾಪಿಸೋಣವು ಅದರಿಂದ ಮಾಡತಕ್ಕ ಈ ಕರ್ಮವು ಉಭಯ ಸಂಬಂಧವು ಸ್ಥಿರವಾಗಿರುವದು; ಎಷ್ಟುಪರ್ಯಂತ ನಾನು ಅರಸಾಗಿರುವೆನೋ ಅಷ್ಟುಪರ್ಯಂತವು ನಾನು ಸ್ವಾಮಿಯೇ ಸರಿಯೆಂದು ನುಡಿದೆಯಲ್ಲ—ಎಲೈ ಪ್ರಭುವೆ ಅವನು ಅರಸು ಇವನು ಭೃತ್ಯನೆಂಬ ಈ ಭೇದಬುದ್ಧಿಗೆ ಲೋಕವ್ಯವಹಾರ ಒಂದನ್ನು ಹೊರ್ತು ಮತ್ತೊಂದು ನಿಮಿತ್ತವನ್ನು ಸ್ವಲ್ಪವನ್ನಾದರು ನಾನು ಕಾಣೆನು; ತತ್ವಾರ್ಥವನ್ನು ವಿಚಾರಿಸುವದರಲ್ಲಿ ನಿಯಾಮಕನು ಯಾವನಿರ್ಧಾನೆ; ಆಜ್ಞಾಪಿಸತಕ್ಕ ಕರ್ಮವು ಏನು ಇದೆ; ಆದಾಗ್ಯೂ ನಾನು ದೊರೆಯೆಂಬ ಅಭಿಮಾನವು ನಿನಗಿದ್ದರೆ ನಾವು ನಿನಗೆ ಯಾವ ಕಾರ್ಯವನ್ನು ಮಾಡಬೇಕು ಆಜ್ಞಾಪಿಸು; ಅತಿ ಮತ್ತನಾದ ನಿನಗೆ ಶಿಕ್ಷೆಯನ್ನು ಮಾಡುವೆನೆಂದು ಹೇಳಿದೆ; ಹುಚ್ಚನಂತೆಯೂ ಮತ್ತನಂತೆಯೂ ಜಡನಂತೆಯೂ ಇರುವವನಾಗಿ ಬ್ರಹ್ಮಭಾವವನ್ನೈದಿದವನಾಗಿರುವ ನನಗೆ ನಿನ್ನಿಂದ ಮಾಡಲ್ಪಟ್ಟ ದಂಡನೆಯಿಂದಲೂ ನಿಯಮಿಸೋಣದರಿಂದಲೂ ಏನು ಪ್ರಯೋಜನವು; ನಾನು ಮುಕ್ತನಲ್ಲದೆ ಜಡನಾಗಿದ್ದರೂ ನೀನು ನನ್ನನ್ನು ಶಿಕ್ಷಿಸೋಣವು ವ್ಯರ್ಥವೇ ಸರಿ; ಸ್ವಭಾವದಿಂದ ಜಡನಾದ ಪುರುಷನನ್ನು ಶಿಕ್ಷೆಯಿಂದ ಸ್ವಾಧೀನ ಮಾಡುವದು ಅಶಕ್ಯವು ಎಂದು ಉಪಶಾಂತನಾದ ರಹೂಗಣರಾಯನಿಗೆ ಪ್ರತ್ಯುತ್ತರವನ್ನಿತ್ತು ದೇಹಾದಿಗಳಲ್ಲಿ ಆತ್ಮಬುದ್ಧಿಗೆ ಕಾರ

ಣವಾದ ಅವಿದ್ಯೆಯನ್ನು ಜಯಿಸಿ ಪ್ರಾರಬ್ಧಕರ್ಮವನ್ನು ಫಲಾನುಭವದಿಂದಲೇ ಕ್ಷಯವನ್ನು ಐದಿಸುತಲಿರುವವನಾಗಿ ಪುನಃ ಆ ಅರಸಿನ ಪಲ್ಲಕ್ಕಿಯನ್ನು ವಹಿಸಿದನು! ಎಲೈ ಪರೀಕ್ಷಿದ್ರಾಯನೇ, ಸಿಂಧು ಸೌವೀರಗಳೆಂಬ ದೇಶಗಳಿಗೆ ಅಧಿಪತಿಯಾದ ಅತಿ ಸಾತ್ವಿಕವಾದ ಶ್ರದ್ಧೆಯೆಂಬ ಸಾಧನದಿಂದ ತತ್ವಾರ್ಥವನ್ನು ತಿಳಿಯಬೇಕೆಂಬ ಇಚ್ಛೆಯಲ್ಲಿ ಮುಖ್ಯಾಧಿಕಾರಿಯಾಗಿರುವ ಆ ರಹೂಗಣನು ತನ್ನ ಅಹಂಕಾರವನ್ನು ಪರಿಹರಿಸುವ ಅನೇಕ ಯೋಗಶಾಸ್ತ್ರಸಮ್ಮತವಾದ ಆ ಜಡಭರತನ ವಾಕ್ಯವನ್ನು ಕೇಳಿ ಅತಿ ವೇಗದಿಂದ ಪಲ್ಲಕ್ಕಿಯಿಂದಿಳಿದು ತಾನು ಅರಸೆಂಬ ಗರ್ವವನ್ನು ಬಿಟ್ಟು ಆ ಬ್ರಾಹ್ಮಣನ ಪಾದಗಳಲ್ಲಿ ಅಪರಾಧವನ್ನು ಕ್ಷಮಿಸಬೇಕೆಂದು ಶಿರಸ್ಸನ್ನಿರಿಸಿ 'ಎಲೈ ಮಹಾಯೋಗಿಯೇ, ಯಾವಕಾರಣ ನೀನು ಯಜ್ಞೋಪವೀತವನ್ನು ಧರಿಸುತಲಿದ್ದೀಯೋ ಅದುಕಾರಣ ನೀನು ದತ್ತಾತ್ರೇಯಾದಿ ಮಹಾಯೋಗಿಗಳಲ್ಲಿ ಯಾವ ಅವಧೂತನೊ? ಈರೀತಿ ರಹಸ್ಯವಾಗಿ ಸಂಚರಿಸುತಲಿದ್ದೀಯೆ? ನೀನು ಯಾವವನ ಸಂಬಂಧಿಯು? ಎಲ್ಲಿ ಇರುವಂಥಾವನು? ಏನುಕಾರಣ ಇಲ್ಲಿಗೆ ಬಂದೆ? ನಮ್ಮ ಕ್ಷೇಮಕ್ಕೋಸ್ಕರ ನೀನು ಬಂದಿರುವನಾದರೆ ಭಗವಂತನಾದ ಕಪಿಲಮುನಿಯೇ ನೀನು ಆಗಿರುವೆಯೋ ಏನು? ಎಲೈ ಯೋಗಿಯೇ, ಇಂದ್ರನ ವಜ್ರಾಯುಧದಿಂದ ರುದ್ರನ ತ್ರಿಶೂಲಾಯುಧದಿಂದ ಯಮನ ದಂಡಾಯುಧದಿಂದ ಅಗ್ನಿ ಸೂರ್ಯ ಚಂದ್ರ ವಾಯು ಕುಬೇರ ಮುಖ್ಯರಾಗುಳ್ಳ ದೇವತೆಗಳ ಅಸ್ತ್ರಗಳಿಂದಲೂ ನಾನು ಭಯಪಡುವವನಲ್ಲ; ಬ್ರಾಹ್ಮಣಾವಮಾನದಿಂದಲೇ ಅತ್ಯಂತ ಭಯಪಡುವೆನಾದಕಾರಣ ನನ್ನ ಈ ಪ್ರಶ್ನೆಗೆ ಉತ್ತರವನ್ನು ನುಡಿಯುವನಾಗು! ಎಲೈ ದ್ವಿಜನೇ, ಸಂಗರಹಿತನಾಗಿ ಮರೆಮಾಡಲ್ಪಟ್ಟ ಜ್ಞಾನರೂಪವಾದ ಪ್ರಭಾವವುಳ್ಳವನಾಗಿ ಅಪಾರಮಹಿಮೆಯುಳ್ಳವನಾಗಿರುವ ನೀನು ಎಂತು ಜಡನಂತೆ ಸಂಚರಿಸುವೆಯೋ ಆ ಕಾರಣವನ್ನು ನನಿಗೆ ನಿರೂಪಿಸು; ಯೋಗಶಾಸ್ತ್ರ ರಹಸ್ಯಯುಕ್ತಗಳಾದ ನಿನ್ನ ವಚನಗಳು ನಮ್ಮ ಮನಸ್ಸಿನಿಂದಲಾದರೂ ಭೇದಿಸಿ ತಿಳಿಯುವದಕ್ಕೆ ಅಶಕ್ಯಗಳಾಗಿವೆ! ಎಲೈ ದ್ವಿಜನೇ, ಯೋಗಶಾಸ್ತ್ರಪ್ರವರ್ತಕನಾಗಿ ಬ್ರಹ್ಮಸ್ವರೂಪವನ್ನು ತಿಳಿದವನಾಗಿ ಮಹಾ ಮುನಿಗಳಲ್ಲಿ ಶ್ರೇಷ್ಠನಾಗಿ ಜ್ಞಾನಶಕ್ತಿಯಿಂದ ಅವತರಿಸಿರುವ ಸಾಕ್ಷಾತ್ ನಾರಾಯಣನಾಗಿ ಲೋಕಗುರುವಾಗಿರುವ ಕಪಿಲಮುನಿಯನ್ನು ಕುರಿತು ಸಂಸಾರದಲ್ಲಿರುವ ಜನರಿಗೆ ರಕ್ಷಕವು ಯಾವದು ಎಂದು ಪ್ರಶ್ನೆಗೈಯಲೋಸುಗ ನಾನು ಹೊರಟಂಥಾವನಾಗಿದ್ದೇನೆ; ಆ ಕಪಿಲ ಋಷಿಯಾದ ನೀನು ಸಕಲ ಲೋಕಗಳನ್ನು ನೋಡಲೋಸುಗ ಪ್ರಕಾಶಂಗೈಯ್ಯಲ್ಪಡದಿರುವ ಮಹಿಮೆಯುಳ್ಳವನಾಗಿ ಈರೀತಿಯಿಂದ ಸಂಚರಿಸುತಲಿದ್ದೀಯೋ ಏನು? ಸಂಸಾರದಲ್ಲಿ ಬದ್ಧನಾಗಿರುವ ಮಂದಬುದ್ಧಿಯುಳ್ಳ ಪುರುಷನು ಮಹಾಯೋಗಿಗಳ ರೀತಿಯನ್ನು ಎಂತು ಕಾಣುವನು; ನನಿಗೆ ಶ್ರಮವಿಲ್ಲವೆಂಬ ನಿನ್ನ ವಚನಕ್ಕೆ ಉತ್ತರವೇನೆಂದರೆ: ಎಲೈ ಯೋಗಿಯೇ, ಯಾವರೀತಿ ಯುದ್ಧಾದಿಗಳನ್ನು ಮಾಡುತಲಿರುವ ನನಿಗೆ ಶ್ರಮೆಯು ಕಾಣಲ್ಪಟ್ಟದೆಯೋ ಆ ನನ್ನ ದೃಷ್ಟಾಂತದಿಂದ ಭಾರವನ್ನು ಹೊತ್ತುಕೊಂಡು ನಡೆಯುತಲಿರುವ ನಿನಗೆ ಶ್ರಮೆಯುಂಟೆ ಎಂದು ಊಹಿಸುವೆನು? ಭಾರವು ವಹಿಸೋಣವು ವ್ಯವಹಾರಮಾತ್ರವೇ ಹೊರ್ತು ಸತ್ಯವಲ್ಲವೆಂಬ ನಿನ್ನ ವಚನಕ್ಕೆ ಉತ್ತರವೇನೆಂದರೆ: ಘಟವು ಅಸತ್ಯವಾದರೆ ಘಟದಿಂದ ಜಲಾಹರಣಾದಿ ವ್ಯಾಪಾರಗಳು ಇಲ್ಲದೇ ಹೋಗುವವೆಂಬ ಕಾರಣದಿಂದ ಘಟವು ಸತ್ಯವೇ ಸರಿ ಎಂದು ಎಂತು ಅಂಗೀಕರಿಸತಕ್ಕದ್ದೋ ಅಂತು ಈ ಪ್ರಪಂಚವು ಸಕಲ ವ್ಯಾಪಾರಗಳಿಗೂ ಸಾಧನವಾದ್ದರಿಂದ ಯಾವದು ಅಸತ್ಯವೋ ಅದು ಸತ್ಯವಾದ ಘಟದಂತೆ ವ್ಯಾಪಾರಗಳಿಗೆ ಸಾಧನವಾಗಲಾರದೆಂಬ ವ್ಯತಿರೇಕ ದೃಷ್ಟಾಂತದಿಂದ ಸತ್ಯವೇ ಸರಿ ಎಂದು ಅಂಗೀಕರಿಸಬೇಕು; ಸ್ಥೂಲತ್ವಾದಿ ಧರ್ಮಗಳು ಉಪಾಧಿ ಕಲ್ಪಿತಗಳೆಂಬ ಅರ್ಥವನ್ನಂಗೀಕರಿಸಿ ಅವಕ್ಕೆ ಸತ್ಯತ್ವವನ್ನು ಸಾಧಿಸುವನು! ಎಲೈ ಬ್ರಾಹ್ಮಣನೆ, ಮೊದಲು ಅಗ್ನಿಯಿಂದ ಘಟಕ್ಕೆ ತಾಪವು ಆ ಘಟತಾಪದಿಂದ ಅದರಲ್ಲಿರುವ ತಂಡುಲಗಳ ಬಹಿರ್ಭಾಗಗಳೆಂಬ ತಾಪವು ಅವುಗಳ ತಾಪದಿಂದ ತಂಡುಲ ಗರ್ಭಗಳಿಗೆ ಪಾಕವು ಸಹಾ ಎಂತು ಸತ್ಯವಾಗುಂಟಾಗುವದೋ ಅಂತು ದೇಹೇಂದ್ರಿಯ ಪ್ರಾಣ ಚಿತ್ತಗಳೊಡನೆ ಸಂಬಂಧದಿಂದಲೂ ಆ ದೇಹಾದ್ಯುಪಾಧಿ ಧರ್ಮಗಳನ್ನು ಅನುಸರಿಸೋಣದರಿಂದಲೂ ಪುರುಷನಿಗೆ ಆ ದೇಹಾದಿಗೆ ನಿಮಿತ್ತಕವಾದ ಸಂಸಾರವು ಸತ್ಯವಾಗಿರುವದು; ಸ್ವಾಮಿ ಭೃತ್ಯನ್ಯಾಯವು ಸ್ಥಿರವಲ್ಲವೆಂಬುವದಕ್ಕೆ ಉತ್ತರವೇನೆಂದರೆ: ಸ್ವಾಮಿಭೃತ್ಯಭಾವವು ಅಸ್ಥಿರವಾದರೂ ಯಾವಕಾಲದಲ್ಲಿ ಯಾವ

ವನು ರಾಜ್ಯವನ್ನಾಳುವನೋ ಆ ಕಾಲದಲ್ಲಿ ಅವನು ಪ್ರಜೆಗಳನ್ನು ದಂಡಿಸುವನು; ಜಡರನ್ನು ಶಿಕ್ಷಿಸುವದು ನಿಷ್ಫಲವೆಂಬುವದಕ್ಕೆ ಉತ್ತರವೇನೆಂದರೆ: ಜಡನಿಗೆ ಜಡತ್ವಾದಿ ಧರ್ಮಗಳು ಹೋಗತಕ್ಕವಲ್ಲ; ಆದಾಗ್ಯೂ ಜಡರನ್ನು ಶಿಕ್ಷಿಸುವದಕ್ಕೆ ಈಶ್ವರಾಜ್ಞಾಪರಿಪಾಲನವೇ ಫಲವಾದ್ದರಿಂದ ಪುರುಷನು ಸ್ವಧರ್ಮವಾದ ಪ್ರಜಾಶಿಕ್ಷಣರೂಪವಾದ ಭಗವದಾರಾಧನವಂಗೈಯ್ಯುವವನಾಗಿ ಸಕಲ ಪಾಪಗಳನ್ನು ಪರಿಹರಿಸಿಕೊಳ್ಳುವನು; ಅದುಕಾರಣ ಭಗವದ್ಭಕ್ತನು ನಿಷ್ಫಲವಾದ ಧರ್ಮವನ್ನು ಮಾಡನು! ಎಲೈ ದೀನಬಂಧುವಾದ ಬ್ರಾಹ್ಮಣನೇ, ಅರಸೆಂಬ ದುರಭಿಮಾನದಿಂದ ಪುಟ್ಟಿದ ಮದದಿಂದ ನಿರಾಕರಿಸಲ್ಪಟ್ಟ ನಿಮ್ಮಂಥಾ ಮಹಾಯೋಗಿಗಳು ನನ್ನಲ್ಲಿ ಯಾವ ಸ್ನೇಹಯುಕ್ತವಾದ ದೃಷ್ಟಿಯಿಂದ ನಾನು ಸತ್ಪುರುಷರ ತಿರಸ್ಕಾರವೆಂಬ ಪಾಪವನ್ನು ಕಳವೆನೋ ಅಂಥಾ ಸ್ನೇಹಯುಕ್ತವಾದ ದೃಷ್ಟಿಯನ್ನು ನೀನು ಇರಿಸುವವನಾಗು; ನನಿಗೆ ಅವಮಾನದಿಂದ ಪುಟ್ಟಿದ ವಿಕಾರಗಳು ಇಲ್ಲವಾದಕಾರಣ ನಿನಗೆ ಎಂತು ಪಾಪವುಂಟಾದೀತೆಂದರೆ: ಎಲೈ ಯೋಗಿಯೇ, ಪ್ರಪಂಚಕ್ಕೆ ಬಂಧುವೂ ಮಿತ್ರನೂ ಸಹ ಆಗಿ ಸರ್ವತ್ರ ಆತ್ಮದೃಷ್ಟಿಯಿಂದ ದೇಹಾಭಿಮಾನ ರಹಿತನಾದ ನಿನಗೆ ವಿಕಾರಗಳು ಇಲ್ಲದೇ ಇದ್ದರೂ ನನ್ನಂಥಾ ಪುರುಷನು ಶೂಲಪಾಣಿಯಂತೆ ಸಮರ್ಥನಾದರೂ ತನ್ನಿಂದ ಮಾಡಲ್ಪಟ್ಟ ಮಹಾತ್ಮರ ತಿರಸ್ಕಾರದಿಂದ ಕ್ಷಿಪ್ರವಾಗಿ ವಿಲಯವನ್ನೈದುವನು' ಎಂಬ ಈ ಅರ್ಥವನ್ನು ರಹೂಗಣರಾಯನು ಜಡಭರತನನ್ನು ಕುರಿತು ನಿರೂಪಿಸಿದನು."

೧೧ನೇ ಅಧ್ಯಾಯ.

ಜಡಭರತನು ರಹೂಗಣನಿಗೆ ಆತ್ಮಸ್ವರೂಪವನ್ನು ಉಪದೇಶಿಸಿದ್ದು.

" ಈ ರೀತಿ ರಹೂಗಣನಿಂದ ವಿಜ್ಞಾಪಿಸಲ್ಪಟ್ಟ ವಾಕ್ಯವನ್ನು ಕೇಳಿ ಜಡಭರತನು 'ಎಲೈ ರಹೂಗಣನೇ ಕೇಳು: ನೀನು ವಿದ್ವಾಂಸನಲ್ಲದಿದ್ದಾಗ್ಯೂ ವಿದ್ವಾಂಸರಿಂದ ವಾಕ್ಪ್ರೌಢಿಯಿಂ ಕಲ್ಪಿಸಲ್ಪಟ್ಟ ಉದ್ಗ್ರಂಥಗಳಿಗೆ ಸಮಾನಗಳಾದ ವಾದಗಳನ್ನು ಮಾಡುತಲಿದ್ದೀಯಾದಕಾರಣ ನೀನು ಅತ್ಯಂತವಾಗಿ ವಿದ್ವಾಂಸರಲ್ಲಿ ಶ್ರೇಷ್ಠನಲ್ಲ; ನೀನು ಯಾವ ಸ್ವಾಮಿಭೃತ್ಯಭಾವಾದಿ ಲೋಕವ್ಯವಹಾರವನ್ನು ಸತ್ಯವೆಂದು ನುಡಿಯುವೆಯೋ ಆ ಲೋಕವ್ಯವಹಾರವನ್ನು ವಿದ್ವಾಂಸರು ತತ್ವಾರ್ಥವನ್ನು ವಿಚಾರಿಸಿ ಈ ರೀತಿ ನುಡಿಯುವದಿಲ್ಲ; ತತ್ವಾರ್ಥ ವಿಚಾರಣೆಯನ್ನು ಮಾಡದೆ ಮನಸ್ಸು ಬಂದಂತೆ ನುಡಿಯುವನಾದಕಾರಣ ಈ ವ್ಯವಹಾರವು ನಿತ್ಯವಲ್ಲ! ಎಲೈ ಅರಸೇ, ಅದೇಪ್ರಕಾರವಾಗಿ ಅವಿತಗಳಾದ ಗೃಹಸ್ಥಾಶ್ರಮ ಸಾಧ್ಯಗಳಾದ ಯಜ್ಞಗಳನ್ನು ವಿಸ್ತರಿಸಿ ಹೇಳುವ ವಿದ್ಯೆಗಳಲ್ಲಿ ಅತ್ಯಂತವಾಗಿ ಪ್ರಕಾಶಿಸುತಲಿರುವ ವೇದವಾದಂಗಳಲ್ಲಿ ಹಿಂಸಾದಿ ವ್ಯಾಪಾರರಹಿತವಾಗಿ ರಾಗಾದಿ ಸಂಬಂಧವಿಲ್ಲದ್ದಾಗಿರುವ ತತ್ವಾರ್ಥ ನಿರೂಪಣೆಯು ಬಹುತರ ಪ್ರಕಾಶಿಸುವದಿಲ್ಲ; ಅದುಕಾರಣ ವೈದೀಕ ಕರ್ಮಫಲ ವ್ಯವಹಾರವು ಸತ್ಯವಲ್ಲ; ಸ್ವಪ್ನ ದೃಷ್ಟಾಂತದಿಂದ ಗೃಹಸ್ಥಾಶ್ರಮ ಸೌಖ್ಯವನ್ನು ದೃಶ್ಯತ್ವವೆಂಬ ಕಾರಣದಿಂದ ಯಾವ ಪುರುಷನು ತಾನೇ ಇದು ತ್ಯಜಿಸಲು ಯೋಗ್ಯವೆಂದು ಭಾವಿಸಿ ತಿಳಿಯುವದಿಲ್ಲವೋ ಆ ಪುರುಷನಿಗೆ ಚನ್ನಾಗಿ ತತ್ವಜ್ಞಾನವುಂಟಾಗುವದಕ್ಕೋಸ್ಕರ ವೇದಾಂತ ವಾಕ್ಯಗಳೂ ಅತ್ಯಂತವಾಗಿ ಉಪಯೋಗಿಸಲಾರವು; ಎಷ್ಟುಪರ್ಯಂತವು ಮನಸ್ಸು ಸತ್ವಗುಣದಿಂದಲೂ ರಜೋಗುಣದಿಂದಲೂ ತಮೋಗುಣದಿಂದಲೂ ವಶೀಕರಿಸಲ್ಪಡುವದೋ ಅಷ್ಟುಪರ್ಯಂತವು ಆ ಮನಸ್ಸು ಕಡೆಯಿಲ್ಲದ್ದಾಗಿ ಪುರುಷನಿಗೆ ಜ್ಞಾನೇಂದ್ರಿಯಗಳಿಂದ ಧರ್ಮವನ್ನಾದರೂ ಅಧರ್ಮವನ್ನಾದರೂ ಉಂಟುಮಾಡುವದು; ಕರ್ಮವಾಸನಾಯುಕ್ತವಾಗಿ ಆತ್ಮೋಪಾಧಿಯಾದಕಾರಣ ವಿಷಯಗಳೊಡನೆ ಸಂಬಂಧವಾಗಿ ಸತ್ವಾದಿ ಗುಣಗಳಿಂದ ಅಲ್ಲಲ್ಲಿ ಚಲಿಸಲ್ಪಡುವದಾಗಿ ಕಾಮಾದಿ ವಿಕಾರಯುಕ್ತವಾಗಿ ಪಂಚಭೂತಗಳು ಇಂದ್ರಿಯಗಳು ಇವೇ ಮೊದಲಾದ ಹದಿನಾರು ಕಳೆಗಳಲ್ಲಿ ಮುಖ್ಯವಾಗಿರುವ ಮನಸ್ಸು ಪ್ರತ್ಯೇಕ ಪ್ರತ್ಯೇಕಗಳಾದ ನಾಮಧೇಯಗಳೊಡನೆ ದೇವ ಪಶ್ವಾದಿ ನಾನಾವಿಧ ರೂಪಭೇದಗಳನ್ನು ಧರಿಸಿ ಆ ದೇಹಗಳಿಂದ ಪ್ರಾಣಿಗಳಿಗೆ ಹೆಚ್ಚು ನೀಚ ಭಾವಗಳನ್ನುಂಟುಮಾಡು

ವದು; ಮಾಯಾಕಲ್ಪಿತವಾದ ಜೀವೋಪಾಧಿಯಾಗಿ ಸಂಸಾರ ಚಕ್ರದಲ್ಲಿ ಪ್ರಾಣಿಗಳನ್ನು ಸುತ್ತಿಸುವದಾಗಿರುವ ಮನಸ್ಸು ತನಗೆ ಆಶ್ರಯನಾದ ಜೀವಾತ್ಮನನ್ನು ಆಕ್ರಮಿಸಿಕೊಂಡಿರುವದಾದಕಾರಣ ಸುಖದುಃಖಗಳನ್ನು ಮೋಹವನ್ನು ತಡೆಯಲಶಕ್ಯವಾದ ಕಾಲಪ್ರಾಪ್ತವಾದ ಫಲವನ್ನು ಸಹ ಕಲ್ಪಿಸುತಲಿಧೆ; ಪ್ರಕಾಶಿಸುವದಾಗಿ ಜಾಗ್ರತ್ಸ್ವಪ್ನರೂಪವಾಗಿ ಪುನಃ ಕಲ್ಪಿತವಾಗಿರುವ ಸಮಸ್ತ ವ್ಯವಹಾರವು ಆತ್ಮನಿಗೆ ಸದಾ ದೃಶ್ಯವಾಗಿ ತೋರುತಲಿಹುದು; ಅದು ಕಾರಣ ದೇಹಾದ್ಯಭಿಮಾನವುಂಟಾಗುವದಕ್ಕೆ ಆ ಅಭಿಮಾನವು ಇಲ್ಲದೆ ಇರುವದಕ್ಕೆ ಉತ್ಕೃಷ್ಟವಾದ ಅಪಕೃಷ್ಟಗಳಾದ ದೇಹಗಳು ಉಂಟಾಗುವದಕ್ಕೆ ಮನಸ್ಸೇ ಕಾರಣವೆಂದು ಮುನಿಗಳು ಹೇಳುವರು; ಮನಸ್ಸು ದೇಹಾದಿಗಳಲ್ಲಿ ಅತ್ಯಂತ ಆಸಕ್ತಿಯುಳ್ಳದ್ದಾದರೆ ಸುಖವನ್ನು ಉಂಟುಮಾಡುವದು; ಯಾವರೀತಿ ದೀಪವು ಘೃತಯುಕ್ತವಾದ ವರ್ತಿಯನ್ನು ಐದಿದರೆ ಧೂಮಯುಕ್ತಗಳಾದ ಜ್ವಾಲೆಗಳನ್ನು ಐದಿ ಘೃತವು ನಷ್ಟನಾದರೆ ಪುನಃ ತನ್ನ ಶುಕ್ಲರೂಪವನ್ನು ಐದುವದೋ ಆರೀತಿ ಮನಸ್ಸು ಸತ್ವಾದಿ ಗುಣಗಳೊಡನೆ ಪ್ರಾಚೀನ ಕರ್ಮವಾಸನೆಗಳೊಡನೆ ಯುಕ್ತವಾಗಿ ನಾನಾವಿಧಗಳಾದ ವೃತ್ತಿಗಳನ್ನು ಪಡೆದು ಆ ಗುಣಕರ್ಮ ಸಂಬಂಧವಿಲ್ಲದೇ ಹೋದರೆ ಬ್ರಹ್ಮಭಾವವನ್ನೈದುವದು; ಕರ್ಮೇಂದ್ರಿಯಗಳು ಐದು ಜ್ಞಾನೇಂದ್ರಿಯಗಳು ಐದು ಅಭಿಮಾನವೆಂಬುವದು ಒಂದು ಅಂತು ಮನಸ್ಸಿನ ವೃತ್ತಿಗಳು ಹನ್ನೊಂದಕ್ಕೂ ಶಬ್ದಾದಿಗಳು ಐದು ವಚನಾದಿಗಳು ಐದು ದೇಹವು ಒಂದು ಅಂತು ಹನ್ನೊಂದು ವಿಷಯಗಳೆಂದು ನುಡಿಯುವರು; ಆ ವಿಷಯಗಳ ವಿವರವೇನಂದರೆ: ಗಂಧವು ರೂಪವು ರಸವು ಸ್ಪರ್ಶವು ಶಬ್ದವು ಈ ಐದು ಜ್ಞಾನೇಂದ್ರಿಯಜನ್ಯಗಳಾದ ಜ್ಞಾನವೃತ್ತಿಗಳಿಗೆ ವಿಷಯಗಳು; ವಚನವು ಶಿಲ್ಪವು ಗಮನವು ಮೂತ್ರವಿಸರ್ಜನೆಯು ಭೋಗವು ಈ ಐದು ಕರ್ಮೇಂದ್ರಿಯಜನ್ಯಗಳಾದ ಕ್ರಿಯಾವೃತ್ತಿಗೆ ವಿಷಯಗಳು; ವಿವೇಕಿಗಳಿಗೆ ದೇಹವು ಇದು ನನ್ನ ಭೋಗಸ್ಥಾನವೆಂಬ ಅಭಿಮಾನಕ್ಕೆ ವಿಷಯವು; ಮೂಢಜನರಿಗೆ ಈ ದೇಹವು ಶಯ್ಯೆಯೆಂಬ ನಾಮಧೇಯಯುಕ್ತವಾದ ಅಹಂಕಾರವೆಂಬ ಹನ್ನೆರಡನೇ ವೃತ್ತಿಗೆ ವಿಷಯವೆಂದು ಕೆಲವರು ಋಷಿಗಳು ಹೇಳುವರು; ಈ ಹನ್ನೊಂದು ವೃತ್ತಿಗಳು ಆಯಾ ಭೇದಗಳಿಂದ ಅನಂತಗಳಾಗುವವು; ವಿಷಯಗಳು ಸ್ವಭಾವವು ಸಂಸ್ಕಾರವು ಅದೃಷ್ಟವುಕಾಲವು ಇವುಗಳಿಂದ ಪೂರ್ವೋಕ್ತಗಳಾದ ಆ ಹನ್ನೊಂದು ಮನೋವೃತ್ತಿಗಳು ಮೊದಲು ಶತವಿಧಗಳಾಗಿ ಅನಂತರ ಸಹಸ್ರವಿಧಗಳಾಗಿ ಅನಂತರ ಕೋಟಿವಿಧಗಳಾಗಿ ಹುಟ್ಟುವವು; ಈ ವೃತ್ತಿಗಳು ಒಂದರಿಂದ ಒಂದು ಹುಟ್ಟುವವು; ತಮ್ಮಿಂದ ತಾವು ಹುಟ್ಟುವದು ಮತ್ತೇನಂದರೆ: ಅನಂತಶಕ್ತಿಯುಳ್ಳ ಪರಮೇಶ್ವರನಿಂದಲೇ ಅನಂತಾನಂತಗಳಾಗಿ ಹುಟ್ಟುವವು! ಎಲೈ ಅರಸೆ, ಜೀವೋಪಾಧಿಯಾಗಿ ಅಶುದ್ಧವ್ಯಾಪಾರಗಳಿಂದೈಯುತಲಿರುವ ಮನಸ್ಸಿನಿಂದ ಉತ್ಪನ್ನಗಳಾದ ವಿಚ್ಛೇದವಿಲ್ಲದ ಮಾಯಾಕಲ್ಪಿತಗಳಾಗಿರುವ ಈ ನಾನಾವಿಧಗಳಾದ ವೃತ್ತಿಗಳನ್ನು ಕೇವಲ ಶುದ್ಧನಾದ ಜೀವನು ಜಾಗ್ರತ್ಸ್ವಪ್ನಾವಸ್ಥೆಗಳಲ್ಲಿ ಸ್ಫುಟಗಳನ್ನಾಗಿ ನೋಡುವನು; ಆ ಜೀವನೇ ಅವಸ್ಥಾತ್ರಯಸಾಕ್ಷಿಯಾದ ಕ್ಷೇತ್ರಜ್ಞನೆಂದು ತಿಳಿಯತಕ್ಕದ್ದು; ಈರೀತಿ ಜೀವತತ್ವವನ್ನು ನಿರೂಪಿಸಿ ಆ ಜೀವನಿಂದ ಹೊಂದತಕ್ಕ ಈಶ್ವರತ್ವವನ್ನು ನಿರೂಪಿಸುವನು; ಕ್ಷೇತ್ರಜ್ಞನಾದ ವ್ಯಾಪಕನಾದ ಜಗತ್ಕಾರಣನಾದ ಪೂರ್ಣನಾದ ಪ್ರತ್ಯಕ್ಷನಾದ ಸ್ವಯಂಪ್ರಕಾಶನಾದ ಜನ್ಮಾದಿರಹಿತನಾದ ಬ್ರಹ್ಮಾದಿಗಳಿಗೂ ಮೂಲಪ್ರಭುವಾದ ಜೀವಸಮೂಹಕ್ಕೆ ನಿಯಾಮಕನಾದ ಷಡ್ಗುಣೈಶ್ವರ್ಯ ಸಂಪನ್ನನಾದ ಸರ್ವಭೂತಾಶ್ರಯನಾದ ಶ್ರೀಹರಿಯು ತನಗೆ ಸ್ವಾಧೀನವಾದ ಮಾಯೆಯಿಂದ ಜೀವರಲ್ಲಿ ಸಾಕ್ಷಿರೂಪದಿಂದಿರುವವನಾಗಿ ಆ ಜೀವನನ್ನು ಆಯಾ ಕರ್ಮಗಳಲ್ಲಿ ನಿಯಾಮಿಸುವನು; ಯಾವ ರೀತಿಯಿಂದ ವಾಯುವು ಚರಾಚರಸ್ವರೂಪಗಳಾದ ಭೂತಗಳಲ್ಲಿ ಪ್ರಾಣಾದಿರೂಪದಿಂದ ಇರುವವನಾಗಿ ಭೂತಗಳನ್ನು ನಿಯಾಮಿಸುವನೋ ಅದೇ ರೀತಿಯಿಂದ ಭಗವಂತನಾದ ವಾಸುದೇವನು ಈ ಪ್ರಪಂಚದಲ್ಲಿ ಸಾಕ್ಷಿರೂಪದಿಂದಿರುವವನಾಗಿ ಆ ಪ್ರಪಂಚವನ್ನು ನಿಯಾಮಿಸುವನು; ಈಪ್ರಕಾರವಾಗಿ ಆತ್ಮನು ಪರಿಶುದ್ಧನೆಂದೂ ಸಂಸಾರವು ಅಸತ್ಯವೆಂದೂ ನಿರೂಪಿಸಿ ಸಂಸಾರನಿವೃತ್ತಿಪ್ರಕಾರವನ್ನು ಹೇಳುವೆನು! ಎಲೈ ರಹೂಗಣನೆ ಕೇಳು: ಪುರುಷನು ಸಂಗವನ್ನು ಬಿಟ್ಟು ಅರಿಷಡ್ವರ್ಗವನ್ನು ಜಯಿಸಿ ಜ್ಞಾನೋದಯದಿಂದ ಮಾಯೆಯನ್ನು ನಿರಾಕರಿಸಿ ಎಷ್ಟುಪರ್ಯಂತವು ಆತ್ಮಸ್ವರೂಪವನ್ನು ತಿಳಿಯುವನಾಗುವದಿಲ್ಲವೋ ಅಷ್ಟುಪರ್ಯಂತವು ಈ ಸಂಸಾರ ಚಕ್ರದಲ್ಲಿ ತಿರು

ಗುವನು; ಯಾವಕಾರಣ ಮನಸ್ಸು ಶೋಕ ಮೋಹ ರೋಗ ರಾಗ ಲೋಭ ವೈರಗಳೊಡನೆ ಯುಕ್ತವಾಗಿ ಸಂಸಾರಾಕ್ಷಿ ಮಮತೆಯನ್ನು ಪುಟ್ಟಿಸುವದೋ ಅದುಕಾರಣ ಜೀವೋಪಾಧಿಯಾದ ಈ ಮನಸ್ಸನ್ನು ಸಂಸಾರತಾಪಗಳಿಗೆ ಉತ್ಪತ್ತಿಸ್ಥಾನವೆಂದು ಎಷ್ಟುಪರ್ಯಂತವು ತಿಳಿಯುವನಾಗುವದಿಲ್ಲವೋ ಅಷ್ಟುಪರ್ಯಂತವು ಪುರುಷನು ಸಂಸಾರದಲ್ಲಿ ತಿರುಗುವನು! ಎಲೈ ಅರಸೆ, ನೀನು ಪ್ರಮತ್ತನಲ್ಲದೆ ಗುರುವೆಂಬ ಶ್ರೀಹರಿಯ ಚರಣಸೇವೆಯನ್ನು ಅಸ್ತ್ರದಿಂದ ಶತ್ರುವಾಗಿ ಅತಿ ಸಮರ್ಥವಾಗಿ ಉಪೇಕ್ಷೆಯಿಂದ ವೃದ್ಧಿಹೊಂದಿರುವದಾಗಿ ತಾನು ಮಿಥ್ಯಾಸ್ವರೂಪವಾದಾಗ್ಯೂ ಆತ್ಮಸ್ವರೂಪವನ್ನು ಮರೆಮಾಡುವದಾಗಿರುವಂಥಾ ಮನಸ್ಸನ್ನು ಜಯಿಸುವನಾಗಬೇಕೆಂಬ ಅರ್ಥವನ್ನು ಜಡಭರತನು ರಹೂಗಣರಾಯನನ್ನು ಕುರಿತು ನಿರೂಪಿಸಿದನು.''

೧೨ನೇ ಅಧ್ಯಾಯ.

ಜಡಭರತನು ರಹೂಗಣನಿಗೆ ತತ್ವಜ್ಞಾನವನ್ನು ಉಪದೇಶಿಸಿದ್ದು.

"ಆ ಬಳಿಕ ರಹೂಗಣರಾಯನು ಜಡಭರತನನ್ನು ಕುರಿತು 'ಎಲೈ ಮಹಾಯೋಗೀಶ್ವರನೆ, ಈಶ್ವರಸ್ವರೂಪನಾಗಿ ಪರಮಾನಂದಪ್ರಕಾಶದಿಂದ ದೇಹಾಭಿಮಾನವನ್ನು ಬಿಟ್ಟವನಾಗಿ ಬ್ರಾಹ್ಮಣಾಧಮವೇಷದಿಂದ ಮರೆಮಾಡಲ್ಪಟ್ಟ ಸ್ವರೂಪಾನುಭವವುಳ್ಳವನಾಗಿರುವ ನಿನಗೋಸ್ಕರ ನಮಸ್ಕಾರವು! ಎಲೈ ಬ್ರಾಹ್ಮಣನೆ, ಜ್ವರವೆಂಬ ರೋಗದಿಂದ ಪೀಡಿತನಾದ ಪುರುಷನಿಗೆ ಸವಿಯಾದ ಔಷಧಿಯು ಯಾವರೀತಿ ಆ ಬಾಧೆಯನ್ನು ಪರಿಹರಿಸುವದೋ ಅತಿ ತೀಕ್ಷ್ಣವಾದ ಬಿಸಿಲಿನಿಂದ ಅತಿ ತಪ್ತನಾದ ಪುರುಷನಿಗೆ ಶೀತಳವಾದ ಜಲವು ಯಾವರೀತಿ ಆ ತಾಪವನ್ನು ಪರಿಹರಿಸುವದೋ ಆರೀತಿ ತುಚ್ಛವಾದ ದೇಹದಲ್ಲಿರುವ ಅಭಿಮಾನವೆಂಬ ಸರ್ಪದಿಂದ ಕಚ್ಚಲ್ಪಟ್ಟ ವಿವೇಕವೆಂಬ ದೃಷ್ಟಿಯುಳ್ಳ ನನಗೆ ನಿನ್ನ ತತ್ವೋಪದೇಶ ವಚನಗಳು ಅಮೃತಕ್ಕೆ ಸಮಾನವಾದ ದಿವ್ಯೌಷಧವಾಗಿ ಸಂಸಾರದುಃಖವನ್ನು ಪರಿಹರಿಸುವದು! ಅದುಕಾರಣ ಎಲೈ ಬ್ರಾಹ್ಮಣನೆ, ನನ್ನ ಸಂಶಯಕ್ಕೆ ವಿಷಯವಾದ ಅರ್ಥವನ್ನು ಅನಂತರದಲ್ಲಿ ನಾನು ಕೇಳುತ್ತೇನೆ; ಪ್ರಕೃತಕ್ಕೆ ವೇದಾಂತರಹಸ್ಯದೊಡನೆ ಯುಕ್ತವಾದ ನಿನ್ನ ವಚನದ ಅರ್ಥವು ತಿಳಿಯುವದಕ್ಕೆ ಅಶಕ್ಯವಾದಾಗ್ಯೂ ಅದನ್ನು ಸುಖದಿಂದ ತಿಳಿಯುವದಕ್ಕೋಸ್ಕರ ಅತ್ಯಂತಾಪೇಕ್ಷೆಯುಳ್ಳ ನನಗೆ ನಿರೂಪಿಸು! ಎಲೈ ಯೋಗೀಶ್ವರನೆ, ಭಾರವನ್ನು ವಹಿಸೋಣವೆ ಮೊದಲಾದ ವ್ಯಾಪಾರಗಳು ಅವುಗಳಿಂದ ಹುಟ್ಟುವ ಶ್ರಮಾದಿಗಳು ಪ್ರತ್ಯಕ್ಷಾದಿ ಪ್ರಮಾಣಗಳಿಂದ ಕಾಣಲ್ಪಡುತ ಬಾಧೆಯಿಲ್ಲದಿರುವವಾದಾಗ್ಯೂ ಲೋಕವ್ಯವಹಾರಮಾತ್ರದಿಂದ ಕಲ್ಪಿತಗಳೇ ಹೊರ್ತು ವಸ್ತುತಃ ಇಲ್ಲವೆಂದು ನೀನು ಯಾವ ಅರ್ಥವನ್ನು ಹೇಳುವೆಯೋ ಆ ಅರ್ಥದಲ್ಲಿ ಸಂಶಯದಿಂದ ನನ್ನ ಮನಸ್ಸು ಸುತ್ತುತಲಿದೆ' ಎಂದು ಪ್ರಶ್ನೆಗೈಯಲ್ಪಟ್ಟವನಾಗಿ ಜಡಭರತನು 'ಎಲೈ ರಹೂಗಣರಾಯನೆ, ಯಾವದು ಪೃಥ್ವೀವಿಕಾರವೆಂದು ಹೇಳಲ್ಪಡುವದೋ ಆ ಪೃಥ್ವೀವಿಕಾರವೇ ಒಂದಾನೊಂದು ಕಾರಣದಿಂದ ಭೂಮಿಯಲ್ಲಿ ಸಂಚರಿಸುತ ಈ ಭಾರವಾಹಕ ಮೊದಲಾದ ಜನವೆಂದು ಪ್ರಸಿದ್ಧಿಯನ್ನು ಪಡೆಯುವದು; ಯಾವ ಪೃಥ್ವೀವಿಕಾರವು ಚಲಿಸುವದಿಲ್ಲವೋ ಅದೇ ಪಾಷಾಣಾದಿ ಪದಾರ್ಥವೆಂದು ಹೇಳಲ್ಪಡುವದು; ಜನರಿಗೂ ಪಾಷಾಣಾದಿಗಳಿಗೂ ಇಷ್ಟುಮಾತ್ರವೇ ಭೇದಹೊರ್ತು ಮತ್ತೊಂದಿಲ್ಲ; ಅವುಗಳೆರಡು ಜಡವಾದ್ದರಿಂದ ಅವಕ್ಕೆ ಭಾರವಾಹನಾದಿ ಶ್ರಮೆಯೂ ಇಲ್ಲ; ಶ್ರಮೆವುಂಟೆಂದರೆ: ಅಂಥಾ ಶ್ರಮಕ್ಕೆ ಆಶ್ರಯವನ್ನಾಗಿ ಒಂದು ವಸ್ತುವನ್ನು ತೋರಿಸಬೇಕು; ಆ ಪೃಥ್ವೀವಿಕಾರವಾದ ಶರೀರದ ಪಾದಗಳಮೇಲೆ ಹರಡು ಕಣಕಾಲು ಮಂಡಿ ತೊಡೆ ನಡು ಎದೆ ಕೊರಳು ಹೆಗಲು ಈರೀತಿ ಬಾದರಾಣೀಯೊಂದು ಇರುವದರಲ್ಲಿ ಯಾವದರ ಭಾರವು ಯಾವದಕ್ಕೆ ಉಂಟಾಗುವದು? ಇವುಗಳಲ್ಲಿ ಅವಯವಗಳು ಯಾವವು? ಅವಯವಗಳ್ಯಾವವೆಂಬ ವಿವೇಕದಿಂದ ಶೂನ್ಯನಾಗಿ ನೀನು ಇದ್ದೀಯೆ? ನಿನ್ನ ಪಲ್ಲಕ್ಕಿಯಲ್ಲಿ ನಿನ್ನಲ್ಲಿ ಸಹಾ ಅವಯವತ್ವವಿಲ್ಲ; ಹೆಗಲಿನಲ್ಲಿ ದಾರುಮಯವಾದ ಪಲ್ಲಕ್ಕಿ ಇದೆ; ಆ ಪಲ್ಲಕ್ಕಿಯಲ್ಲಿ

ಸೌವೀರದೇಶಕ್ಕೆ ಧೊರೆಯೆಂಬ ನಾಮಧೇಯಮಾತ್ರವುಳ್ಳ ಒಂದು ಪೃಥುವೀವಿಕಾರವಿದೆ ; ಆ ದೇಹವೆಂಬ ಪೃಥ್ವೀವಿಕಾರದಲ್ಲಿ ದೃಢವಾದ ಅಭಿಮಾನವುಳ್ಳ ನೀನು ಸಿಂಧುದೇಶಕ್ಕೆ ನಾನು ಅರಸೆಂಬ ದುಷ್ಟವಾದ ಮದದಿಂದ ವಿವೇಕಶೂನ್ಯನಾಗಿದ್ದೀಯೆ ! ಎಲೈ ಅರಸೆ, ದಯಮಾಡುವದಕ್ಕೆ ಯೋಗ್ಯರಾದ ಅತ್ಯಂತ ಕಷ್ಟದಿಂದ ದೀನರಾದ ಈ ಬೆಸ್ತರನ್ನು ಬಿಟ್ಟುಹಿಡಿದು ದಯವಿಲ್ಲದೆ ಶಠನಾಗಿರುವೆಯಾದಕಾರಣ ಸುಮ್ಮನೇ ಅನೃತವಾಗಿ ಪ್ರಜಾಪಾಲಕನೆಂದು ಆತ್ಮಪ್ರಶಂಸೆಯಂಗೈಯುತಲಿರುವ ನೀನು ಮಹಾತ್ಮರ ಸಭೆಯಲ್ಲಿ ಪ್ರಕಾಶಿಸುವನಾಗುವದಿಲ್ಲ ; ಮೇಲೆ ಇರುವ ಅವಯವಗಳ ಭಾರವು ಕೆಳಗಿರುವ ಅವಯವಗಳಿಗೆ ಉಂಟಾಗುವದೆಂಬ ಅರ್ಥವಲ್ಲ ; ಚೇತನಾಚೇತನಾತ್ಮಕವಾದ ಪ್ರಪಂಚಕ್ಕೆ ಯಾವಾಗ ಪೃಥ್ವಿಯಲ್ಲೇ ಉತ್ಪತ್ತಿಯನ್ನು ಸ್ಥಿತಿಯನ್ನು ನಾಶವನ್ನು ನಿಶ್ಚಯವಾಗಿ ತಿಳಿಯುವರಾಗುತ್ತೀವೋ ಆಗ ಪೃಥ್ವಿಗಿಂತಲೂ ಅನ್ಯವಾದ ವಿಕಾರವಿಲ್ಲದಿರುವದಾದಕಾರಣ ನಾಮಮಾತ್ರಕ್ಕಿಂತಲೂ ಅನ್ಯವಾಗಿ ಒಂದು ವ್ಯಾಪಾರದಿಂದ ಇದು ಇರುವದೆಂದು ಊಹಿಸುವದಕ್ಕೆ ಯೋಗ್ಯವಾಗಿರುವ ವ್ಯವಹಾರಮೂಲವು ಎಂತು ನಿರೂಪಿಸಲ್ಪಡುವದು ; ಆ ಪೃಥ್ವಿಯೂ ಸತ್ಯವಲ್ಲ ; ಪೃಥ್ವಿಯು ಅಸತ್ಯಗಳಾದ ಸೂಕ್ಷ್ಮಗಳಾದ ತನಿಗೆ ಕಾರಣಗಳಾದ ಪರಮಾಣುಗಳಲ್ಲಿ ಲಯವನ್ನೈದುವದಾದಕಾರಣ ಪೃಥ್ವಿಯೆಂಬ ಶಬ್ದವು ಅದೇರೀತಿ ಅರ್ಥವಿಲ್ಲದಿರುವದರಿಂದ ಅಸತ್ಯವೆಂದು ನಿರೂಪಿಸಲ್ಪಟ್ಟಿದೆಯಾದಕಾರಣ ಪರಮಾಣುವ್ಯತಿರಿಕ್ತವಾಗಿ ಪೃಥ್ವಿಯಿಲ್ಲ ; ಯಾವ ಪರಮಾಣುಗಳ ಸಮೂಹವು ಇದು ಪೃಥ್ವಿಯೆಂಬ ಬುದ್ಧಿಗೆ ಕಾರಣವಾಗಿದೆಯೋ ಆ ಪರಮಾಣುಗಳು ಅಜ್ಞಾನದಿಂದ ಮನಸ್ಸಿನಲ್ಲಿ ಕಲ್ಪಿತಗಳೇ ಹೊರ್ತು ಸತ್ಯವಾದವಲ್ಲ ; ಗಿಡ್ಡಾಗಿ ಉದ್ದವಾಗಿ ಸೂಕ್ಷ್ಮವಾಗಿ ಮಹತ್ತಾಗಿ ಕಾರಣವಾಗಿ ಕಾರ್ಯವಾಗಿ ಚೇತನವಾಗಿ ಅಚೇತನವಾಗಿ ಈರೀತಿ ನಾನಾವಿಧಗಳಾದ ಧರ್ಮಗಳೊಡನೆ ಯುಕ್ತವಾಗಿ ಬುದ್ಧಿಗೆ ತೋರುತಲಿರುವ ಈ ಅದ್ವೈತಪ್ರಪಂಚವು ವಿಷಯ ಸ್ವಭಾವ ಸಂಸ್ಕಾರ ಅದೃಷ್ಟಕಾಲಗಳೆಂಬ ನಾಮಗಳೊಡನೆ ಕೂಡಿರುವ ಮಾಯೆಯಿಂದ ಕಲ್ಪಿಸಲ್ಪಟ್ಟದೆಯೆಂದು ತಿಳಿ ! ಎಲೈ ಅರಸೆ, ಪಾರಮಾರ್ಥಿಕ ಸತ್ಯಸ್ವರೂಪವಾದ ಪರಿಶುದ್ಧವಾದ ಏಕರೂಪವಾದ ಬಾಹ್ಯಾಭ್ಯಂತರವೆಂಬ ವ್ಯವಹಾರರಹಿತವಾದ್ದರಿಂದ ಪರಿಪೂರ್ಣವಾದ ಸಾಕ್ಷಿರೂಪವಾದ ನಿರ್ವಿಕಾರವಾದ ಇಂಥಾ ಸ್ವರೂಪಜ್ಞಾನವು ಒಂದೇ ಸತ್ಯವೆಂದು ತಿಳಿ ; ಐಶ್ವರ್ಯಾದಿ ಷಡ್ಗುಣಗಳಿಂದ ಯುಕ್ತವಾದ ಆ ಸ್ವರೂಪಜ್ಞಾನವನ್ನು ಋಷಿಗಳು ವಾಸುದೇವನೆಂದು ನುಡಿಯುವರು ! ಎಲೈ ರಹೂಗಣನೆ, ಪುರುಷನು ಇಂಥಾ ಜ್ಞಾನವನ್ನು ಮಹಾತ್ಮರ ಪಾದಪದ್ಮಗಳ ಸೇವೆಯಿಂದ ಹೊರ್ತು ಮತ್ತೊಂದು ತಪಸ್ಸಿನಿಂದಲೂ ವೇದೋಕ್ತ ಕರ್ಮದಿಂದಲೂ ಅತಿಥಿ ಮೊದಲಾದವರಿಗೆ ಅನ್ನಾದಿಗಳನ್ನು ವಿಭಜಿಸಿ ಕೊಡೋಣದರಿಂದಲೂ ಪರೋಪಕಾರದಿಂದಲೂ ವೇದಾಭ್ಯಾಸದಿಂದಲೂ ಜಲ ಅಗ್ನಿ ಸೂರ್ಯ ಇವರ ಉಪಾಸನೆಗಳಿಂದಲೂ ಹೊಂದಲಾರನು ; ಮಹಾತ್ಮರ ಸಮೀಪದಲ್ಲಿ ಸ್ತ್ರೀಯರು ಮೊದಲಾದ ದುಷ್ಟವಿಷಯಗಳ ಪ್ರಸ್ತಾಪಕ್ಕೆ ವಿಘ್ನಸ್ವರೂಪನಾದ ಶ್ರೀ ವಾಸುದೇವನ ಗುಣಗಳ ಕಥೆಯು ನಿರಂತರವೂ ಆಗುತಲಿರುವದು ; ಪ್ರತಿದಿನದಲ್ಲೂ ಮಾಡಲ್ಪಡುತಲಿರುವ ಆ ಭಗವತ್ಕಥಾಶ್ರವಣವು ಮೋಕ್ಷವನ್ನು ಪಡೆಯಲಿಚ್ಛೆಯುಳ್ಳ ಪುರುಷನಿಗೆ ಶ್ರೀ ವಾಸುದೇವನಲ್ಲಿ ಸದ್ಭಕ್ತಿಯನ್ನು ಪುಟ್ಟಿಸುವದು ! ಎಲೈ ಅರಸೆ, ಪೂರ್ವಜನ್ಮದಲ್ಲಿ ಭರತನೆಂಬ ನಾಮಧೇಯವುಳ್ಳ ಅರಸಾದ ನಾನು ಇಹಲೋಕ ಪರಲೋಕಗಳ ಭೋಗಗಳಲ್ಲಿ ವಿರಕ್ತನಾಗಿ ಭಗವತ್ಪೂಜೆಯಂಗೈಯುತಲಿದ್ದು ಒಂದು ಹುಲ್ಲೆಯ ಸಂಗದಿಂದ ಜ್ಞಾನವೆಂಬ ಫಲದಿಂದ ರಹಿತನಾಗಿ ಆ ಹುಲ್ಲೆಯ ಜನ್ಮವನ್ನು ಪಡದವನಾದೆನು ; ಆ ಮೃಗದೇಹದಲ್ಲಿಯೂ ನನಿಗೆ ಭಗವತ್ಪೂಜೆಯಿಂದ ಪುಟ್ಟಿದ ಆ ಪೂರ್ವಜನ್ಮಸ್ಮರಣೆಯು ತಪ್ಪಲಿಲ್ಲ ; ಅನಂತರದಲ್ಲಿ ಉಂಟಾದ ಈ ಬ್ರಾಹ್ಮಣಜನ್ಮದಲ್ಲಿ ನಾನು ಜನದ ಸಂಗದದೆಸೆಯಿಂದ ಭಯಪಡುವನಾದ್ದರಿಂದ ನಿಸ್ಸಂಗನಾಗಿ ಪ್ರಕಟನಾಗದೆ ಸಂಚರಿಸುತಲಿದ್ದೇನೆ ; ಅದುಕಾರಣ ಪುರುಷನು ಮಹಾತ್ಮರ ಸಂಗದಿಂದ ಹುಟ್ಟಿದ ಜ್ಞಾನವೆಂಬ ಖಡ್ಗದಿಂದ ಛೇದಿಸಲ್ಪಟ್ಟ ಮೋಹವುಳ್ಳವನಾಗಿ ಶ್ರೀಹರಿ ಚರಿತ್ರಗಳ ಸಂಕೀರ್ತನ ಶ್ರವಣದಿಂದ ತತ್ವಜ್ಞಾನವನ್ನು ಪಡೆದು ಸಂಸಾರಮಾರ್ಗದ ಯಲ್ಲೆಕಟ್ಟು ದಾಟಿ ಶ್ರೀಹರಿಯಲ್ಲೇ ಐಕ್ಯವನ್ನು ಪಡೆಯುವನು.’ ಎಂದು ನುಡಿದನು.”

೧೩ನೇ ಅಧ್ಯಾಯ.

ಜಡಭರತನು ರಹೂಗಣನಿಗೆ ವೈರಾಗ್ಯವುಂಟಾಗುವದಕ್ಕೋಸ್ಕರ ಸಂಸಾರವೆಂಬ ಅರಣ್ಯವನ್ನು ವರ್ಣಿಸಿದ್ದು.

"ಎಲೈ ರಹೂಗಣನೆ ಕೇಳು: ದಾಟುವದಕ್ಕೆ ಅಶಕ್ಯವಾದ ಪ್ರವೃತ್ತಿಮಾರ್ಗದಲ್ಲಿ ಅಜ್ಞಾನದಿಂದ ಆಸಕ್ತವಾಗಿ ಸತ್ವರಜಸ್ತಮೋಗುಣಗಳಿಂದ ವಿಭಜಿಸಲ್ಪಟ್ಟ ಕರ್ಮಮಾರ್ಗಗಳನ್ನು ಮಾಡಬೇಕೆಂದು ತಿಳಿಯುತಲಿರುವ ಅಪ್ರಸಿದ್ಧವಾದ ಜೀವಸಮೂಹವು ವಿಷಯಸುಖವನ್ನು ಅಪೇಕ್ಷಿಸಿ ಆ ಕರ್ಮಮಾರ್ಗದಲ್ಲಿ ನಡೆಯುತ ಯಾವರೀತಿ ವರ್ತಕರಸಮೂಹವು ದ್ರವ್ಯವನ್ನು ಸಂಪಾದಿಸಲೋಸುಗ ದೇಶಾಂತರವನ್ನು ಕುರಿತು ಪೋಗುತ ಎಂತು ಮಧ್ಯಮಾರ್ಗದಲ್ಲಿ ಮಹಾರಣ್ಯವನ್ನೈದುವದೋ ಆಗೇರೀತಿ ಸಂಸಾರವೆಂಬ ಮಹಾರಣ್ಯವನ್ನೈದುವದೇ ಹೊರ್ತು ಸುಖವನ್ನೈದುವದಿಲ್ಲ; ಆ ಸಂಸಾರವೆಂಬ ಅರಣ್ಯದಲ್ಲಿ ಇಂದ್ರಿಯಗಳೆಂಬ ಆರುಮಂದಿ ಚೋರರು ದುಷ್ಟವಾದ ಬುದ್ಧಿಯೆಂಬ ಸಾರಥಿಯುಳ್ಳ ಆ ಜೀವಸಮೂಹವನ್ನು ಸುತ್ತಿಕೊಂಡು ಅದರ ಸತ್ಕರ್ಮವೆಂಬ ಧನವನ್ನು ವಿಷಯಾನುಭವದಿಂದ ಬಲಾತ್ಕರಿಸಿ ಅಪಹರಿಸುತಲಿಧಾರೆ; ಆ ಅರಣ್ಯದಲ್ಲಿ ಪತ್ನಿಪುತ್ರಾದಿಗಳೆಂಬ ನರಿಗಳು ನೀನು ನನಿಗೆ ಪತಿಯು—ನೀನು ನನಿಗೆ ತಂದೆಯು ಎಂದು ನುಡಿಯುತಲಿರುವವರಾಗಿ ಬಳಹೊಕ್ಕು ಅತಿ ಮತ್ತವಾದ ಆ ಜೀವಸಮೂಹವನ್ನು ಕುರಿಯನ್ನು ತೋಳಗಳು ಕಳೆಯುವಂತೆ ಅಲ್ಲಲ್ಲಿ ಕಳೆಯುವವು; ಆ ಅರಣ್ಯದಲ್ಲಿ ಅಧಿಕಗಳಾದ ಬಳ್ಳಿಗಳಿಂದಲೂ ಹುಲ್ಲುಗಳಿಂದಲೂ ಪ್ರವೇಶಿಸಲಶಕ್ಯವಾದ ಸ್ಥಾನದಲ್ಲಿ ಮಾರ್ಗಸ್ಥನಾದ ವರ್ತಕನು ಅತಿ ತೀಕ್ಷ್ಣಗಳಾದ ಮಕ್ಷಿಕಗಳಿಂದಲೂ ಸೊಳ್ಳೆಗಳಿಂದಲೂ ಯಾವರೀತಿ ಪೀಡಿಸಲ್ಪಡುವನೋ ಮತ್ತೊಂದು ಕಡೆಯಲ್ಲಿ ಗಂಧರ್ವಪಟ್ಟಣವನ್ನು ನೋಡುವನೋ ಮತ್ತೊಂದುಕಡೆಯಲ್ಲಿ ಅತಿ ವೇಗಯುಕ್ತವಾದ ಜ್ವಾಲಾಮುಖವಾದ ಪಿಶಾಚವನ್ನು ನೋಡುವನೋ ಅದೇರೀತಿ ಕಾಮುಕರ್ತ್ರಾದಿಗಳಿಂದ ಭಯಂಕರವಾದ ಗೃಹಸ್ಥಾಶ್ರಮದಲ್ಲಿರುವಂಥಾ ಪುರುಷನು ಮಕ್ಷಿಕಾದಿಗಳಿಗೆ ಸಮಾನರಾದ ದುರ್ಜನರಿಂದ ಪೀಡಿಸಲ್ಪಡುವನು; ಮತ್ತೊಂದುಕಡೆ ಗಂಧರ್ವಪಟ್ಟಣದಂತೆ ಅಸಂಭಾವಿತಗಳಾಗಿರುವ ದೇಹಾದಿಗಳನ್ನು ಅತ್ಯಂತವಾಗಿ ಇವು ಯಥಾರ್ಥಗಳೇ ಸರಿಯೆಂದು ತಿಳಿಯುವನು; ಮತ್ತೊಂದು ಸ್ಥಳದಲ್ಲಿ ಜ್ವಾಲಾಮುಖವಾದ ಪಿಶಾಚಕ್ಕೆ ಸಮಾನವಾದ ಸುವರ್ಣವನ್ನು ಇದು ಗ್ರಹಿಸುವದಕ್ಕೆ ಯೋಗ್ಯವೆಂದು ನೋಡುವನು! ಎಲೈ ಅರಸೆ, ಆ ಅರಣ್ಯದಲ್ಲಿ ಸಂಚರಿಸುತಲಿರುವ ವರ್ತಕನಂತೆ ಸಂಸಾರದಲ್ಲಿರುವ ಪುರುಷನು ಗೃಹದಲ್ಲಿಯೂ ಜಲದಲ್ಲಿಯೂ ಧನದಲ್ಲಿಯೂ ಬುದ್ಧಿಯುಳ್ಳವನಾಗಿ ಅಲ್ಲಲ್ಲಿ ಸುತ್ತುವನು; ಆ ಅರಣ್ಯದಲ್ಲಿ ವರ್ತಕನು ಒಂದು ಕಡೆಯಲ್ಲಿ ಯಾವರೀತಿ ಸುಂಟರ ಘಾಳಿಯಲ್ಲಿ ಎದ್ದಿರುವ ಧೂಳಗಳಿಂದ ಮಲಿನಗಳಾದ ದಿಕ್ಕುಗಳನ್ನು ಆ ಧೂಳಿಯಿಂದ ತುಂಬಲ್ಪಟ್ಟ ನೇತ್ರಗಳುಳ್ಳವನಾಗಿ ಇದು ಪೂರ್ವ ಇದು ಪಶ್ಚಿಮವೆಂದು ತಿಳಿಯುವನಾಗನೋ ಅದೇರೀತಿ ಸಂಸಾರದಲ್ಲಿರುವ ಪುರುಷನು ಸುಂಟುರಘಾಳಿಯಂತೆ ಸುತ್ತುತಲಿರುವ ಸ್ತ್ರೀಯಲ್ಲಿ ಪುಟ್ಟಿಗ ರಾಗಾದಿಗಳಿಂದ ಪ್ರಕಾಶರಾದ ತನ್ನ ಕರ್ಮಗಳಿಗೆ ಸಾಕ್ಷಿಗಳಾದ ದಿಗ್ದೇವತೆಗಳನ್ನು ತಿಳಿಯುವನಾಗನು; ಆ ಅರಣ್ಯದಲ್ಲಿ ವರ್ತಕನು ಯಾವರೀತಿ ದೃಷ್ಟಿಗೋಚರವಲ್ಲದಿರುವ ಚಿಮ್ಮಂಡೆಗಳೆಂಬ ಕ್ರಿಮಿವಿಶೇಷಗಳ ಧ್ವನಿಗಳಿಂದ ಕರ್ಣಶೂಲೆವುಳ್ಳವನಾಗಿ ಘೂಕಗಳ ಧ್ವನಿಗಳಿಂದ ದುಃಖಿತವಾದ ಮನಸ್ಸುಳ್ಳವನಾಗಿ ಕ್ಷುತ್ತಿನಿಂದ ಪೀಡಿತನಾಗಿ ಯಾವದರ ನೆರಳು ಪಾಪಸಂಪಾದಕವೋ ಅಂಥಾ ಅಪುಣ್ಯಕರಗಳಾದ ವೃಕ್ಷಗಳನ್ನು ಆಶ್ರಯಿಸಿ ಬಾಯಾರಿಕೆಯಿಂದ ಇದು ಜಲವೆಂದು ಬಿಸಲುದೊರೆಯನ್ನು ಕುರಿತು ಹೋಗುವನೋ ಆರೀತಿ ಪುರುಷನು ಸಂಸಾರದಲ್ಲಿ ಹಿಂದುಕಡೆಯಲ್ಲಿ ಅಹಿತಗಳಾದ ವಚನಗಳನ್ನು ನುಡಿಯುವರಾದಕಾರಣ ಚಿಮ್ಮಂಡೆಗಳಿಗೆ ಸಮಾನರಾದ ಜನರ ದುರ್ವಾಕ್ಯಗಳಿಂದ ಕರ್ಣಶೂಲೆಯುಳ್ಳವನಾಗಿ ಎದುರಿಗೆ ಅಪ್ರಿಯವಚನಗಳನ್ನು ನುಡಿಯುವರಾದಕಾರಣ ಘೂಕಸಮಾನರಾದ ಜನರ ದುರ್ಭಾಷೆಗಳಿಂದ ದುಃಖಿತವಾದ ಮನಸ್ಸುಳ್ಳವನಾಗಿ ಪಾಪವೃಕ್ಷಗಳಿಗೆ ಸಮಾನರಾದ ಅಧರ್ಮಿಷ್ಠರನ್ನು ಕ್ಷುತ್ತಿನಿಂದ ಪೀಡಿತನಾಗಿ ಆಶ್ರಯಿಸುವನು; ವಿಷಯಗಳು ಬಿಸಲುದೊರೆಯಂತೆ ನಿಷ್ಫಲಗಳೆಂದು ತಿಳಿಯಲ್ಪಟ್ಟವಾದಾಗ್ಯೂ ಪುನಃ ಅವುಗಳ

ಆಸಕ್ತಿಯಿಂದ ತೊಳಲುವನು ; ಅರಣ್ಯದಲ್ಲಿ ನಿರ್ಜಲಗಳಾದ ನದಿಗಳಲ್ಲಿ ತಾಪಸವೃತ್ತಿಗೋಸುಗ ಬೀಳುತ್ತಲಿರುವ ವರ್ತಕನಿಗೆ ಶರೀರ ಒಡೆಯೋಣದರಿಂದ ಎಂತು ಲಕ್ಷಣವೇ ದುಃಖವುಂಟಾಗುವದೋ ಜಲವೂ ಶಿಕ್ಕದೆ ಹೋಗುವದೋ ಆರೀತಿ ಪುರುಷನು ಸಂಸಾರದಲ್ಲಿ ಇಹಲೋಕದಲ್ಲಿಯೂ ಪರಲೋಕದಲ್ಲಿಯೂ ದುಃಖವನ್ನು ಕೊಡುವ ಪಾಷಂಡರನ್ನು ಅನುಸರಿಸಿ ವ್ಯರ್ಥವಾಗುವನು ; ಮತ್ತು ಅನ್ನವಿಲ್ಲದವನಾಗಿ ಪ್ರತರಿಂದ ಅನ್ನಾದಿಗಳನ್ನು ಅಪೇಕ್ಷಿಸುವನು ; ಆ ವರ್ತಕನು ಒಂದುಕಡೆಯಲ್ಲಿ ಕಾಡುಗಿಚ್ಚನ್ನೈದಿ ಎಂತು ಅತಿತಪ್ತನಾಗಿ ದುಃಖಪಡುವನೋ ಮತ್ತೊಂದು ಕಡೆಯಲ್ಲಿ ಯಕ್ಷರಿಂದ ಪೀಡಿತನಾಗಿ ಪ್ರಾಣಗಳನ್ನು ಬಿಡುವನೋ ಅದೇರೀತಿ ಪುರುಷನು ಕಾಡುಗಿಚ್ಚಿಗೆ ಸಮಾನವಾದ ಗೃಹವನ್ನೈದಿ ಶೋಕಾಗ್ನಿಯಿಂದ ತಪ್ತನಾಗಿ ಕಷ್ಟಪಡುವನು ; ಮತ್ತೊಂದು ಸಮಯದಲ್ಲಿ ಯಕ್ಷ ರಾಕ್ಷಸರಿಗೆ ಸಮಾನರಾದ ದುಷ್ಟರಾದ ಅರಸುಗಳಿಂದ ಅಪಹರಿಸಲ್ಪಟ್ಟ ಪ್ರಾಣದಂತೆ ಅತ್ಯಂತ ಇಷ್ಟವಾದ ಧನವುಳ್ಳವನಾಗಿ ದುಃಖಪಡುವನು ; ಆರಣ್ಯದಲ್ಲಿ ವರ್ತಕನಂತೆ ಸಂಸಾರದಲ್ಲಿ ಪುರುಷನು ಒಂದುಕಡೆಯಲ್ಲಿ ಶೂರರಿಂದ ಅಪಹರಿಸಲ್ಪಟ್ಟ ಧನವು ದೀನವಾದ ಮನಸ್ಸೂ ಉಳ್ಳವನಾಗಿ ಶೋಕಮೋಹಗಳಿಂದ ಮೂರ್ಛೆಯನ್ನೈದುವನು ; ಅರಣ್ಯದಲ್ಲಿ ವರ್ತಕನು ಗಂಧರ್ವಪಟ್ಟಣವನ್ನು ಪ್ರವೇಶಿಸಿ ಎಂತು ಮುಹೂರ್ತಮಾತ್ರವು ಸುಖಿಯಂತೆ ಸಂತೋಷಪಡುವನೋ ಅದೇರೀತಿ ಪುರುಷನು ಗಂಧರ್ವನಗರದಂತೆ ಪುನಃ ಕಲ್ಪಿತನಾಗಿರುವ ಪಿತೃಪುತ್ರಾದಿ ಸಮೂಹವನ್ನೈದಿ ಮುಹೂರ್ತಮಾತ್ರ ಸುಖಿಯಂತೆ ಸಂತೋಷಪಡುವನು ; ಮಹಾವನದಲ್ಲಿ ಸಂಚರಿಸುತಲಿರುವನಾಗಿ ವರ್ತಕನು ಎಂತು ಮುಳ್ಳು ಕಲ್ಲುಗಳಿಂದ ಚುಚ್ಚಲ್ಪಟ್ಟ ಪಾದಗಳುಳ್ಳವನಾದಾಗ್ಯೂ ಬೆಟ್ಟಗಳನ್ನು ಹತ್ತಬೇಕೆಂಬ ಇಚ್ಛೆಯುಳ್ಳವನಾಗಿ ವ್ಯಸನವನ್ನೈದುವನೋ ಅದೇರೀತಿ ಸಂಸಾರಿಯು ಮುಳ್ಳು ಕಲ್ಲುಗಳಿಗೆ ಸಮಾನಗಳಾದ ವಿಘ್ನಗಳಿಂದ ತಿರಸ್ಕರಿಸಲ್ಪಟ್ಟವನಾದಾಗ್ಯೂ ಪರ್ವತಸಮಾನವಾದ ಮಹತ್ಕಾರ್ಯವನ್ನು ಗೈಯಲಿಚ್ಛೆಯುಳ್ಳವನಾಗಿ ಮನೋವ್ಯಥೆಯನ್ನೈದಿದ ವನಚಾರಿಯಂತೆ ಪ್ರತಿಕ್ಷಣವಲ್ಲೂ ಜಠರಾಗ್ನಿಯಿಂದ ಪೀಡಿತನಾಗಿ ಜನರಲ್ಲಿ ಕೋಪವನ್ನು ಮಾಡುವನು ; ವನಚಾರಿಯು ಒಂದುಕಡೆಯಲ್ಲಿ ಹೆಬ್ಬಾವಿನಿಂದ ನುಂಗಲ್ಪಟ್ಟವನಾಗಿ ಎಂತು ಏನೂ ಅರಿಯದೆ ಒಂದು ಕಡೆಯಲ್ಲಿ ಸರ್ಪಗಳಿಂದ ಕಚ್ಚಲ್ಪಟ್ಟವನಾಗಿ ಅಂಧಕಾರದಲ್ಲಿ ಕಣ್ಣುಕಾಣದೆ ಪಾಳುಭಾವಿಯಲ್ಲಿ ಬಿದ್ದು ಅಲ್ಲೇ ಅಡಗುವನೋ ಅದೇರೀತಿ ಸಂಸಾರದಲ್ಲಿ ಪುರುಷನು ನಿದ್ರೆಯೆಂಬ ಹೆಬ್ಬಾವಿನಿಂದ ಗ್ರಾಸಂಗೈಯಲ್ಪಟ್ಟವನಾಗಿ ಕಾಡಿನಲ್ಲಿ ತ್ಯಜಿಸಲ್ಪಟ್ಟ ನಿರ್ಜೀವಶರೀರದಂತೆ ಏನೂ ಅರಿಯದೆ ಇಹನು ; ಮತ್ತು ಸರ್ಪಸಮಾನರಾದ ದುರ್ಜನರಿಂದ ಪೀಡಿಸಲ್ಪಟ್ಟವನಾಗಿ ವಿವೇಕಶೂನ್ಯನಾಗಿ ಮೋಹದಲ್ಲಿಯೂ ದುಃಖದಲ್ಲಿಯೂ ಮಗ್ನನಾಗುವನು ; ಆ ವನಚಾರಿಯಾದ ವರ್ತಕನು ಒಂದು ಕಡೆಯಲ್ಲಿ ಜೇನು ಮೊದಲಾದ ರಸದ್ರವ್ಯಗಳನ್ನು ಹುಡುಕುವನಾಗಿ ಎಂತು ಆ ಜೇನುಹುಳು ಮೊದಲಾದ್ದರಿಂದ ಪೀಡಿಸಲ್ಪಟ್ಟು ದುಃಖವನ್ನೈದುವನೋ ಮತ್ತೊಂದು ಸಮಯದಲ್ಲಿ ಅತಿ ಪ್ರಯಾಸದಿಂದ ಜೇನು ಮೊದಲಾದ್ದನ್ನು ಸಾಧಿಸಿದವನಾದರೂ ಆ ಪದಾರ್ಥವನ್ನು ಮತ್ತೊಬ್ಬರು ಎಂತು ಅಪಹರಿಸುವರೋ ಅದೇರೀತಿ ಸಂಸಾರದಲ್ಲಿ ಒಂದು ಕಡೆಯಲ್ಲಿ ಪರಸ್ತ್ರೀ ಮೊದಲಾದ ವಿಷಯಗಳನ್ನು ಹುಡುಕುತ ಆ ಸ್ತ್ರೀ ಮೊದಲಾದ ವಿಷಯಗಳಿಗೆ ಗೊತ್ತುಗಾರರಾದ ಪುರುಷರಿಂದ ಕೊಲ್ಲಲ್ಪಟ್ಟವನಾಗಿ ದುಃಖವನ್ನೈದುವನು ; ಒಂದು ಸಮಯದಲ್ಲಿ ಅತಿಪ್ರಯಾಸದಿಂದ ಪರಸ್ತ್ರೀ ಮೊದಲಾದ್ದನ್ನು ಸಾಧಿಸುವನಾದರೂ ಅದನ್ನು ಕೆಲವರು ಅಪಹರಿಸುವರು ; ಸಂಸಾರಿಯು ವನಚಾರಿಯಂತೆ ಒಂದು ಸಮಯದಲ್ಲಿ ಛಳಿ ಘಾಳಿ ಬಿಸಲು ವರ್ಷಗಳಿಂದ ದುಃಖಿಸುತ ಅವಕ್ಕೆ ಪ್ರತಿಕ್ರಿಯೆಯನ್ನು ಮಾಡುವದಕ್ಕೆ ಅಸಮರ್ಥನಾಗಿ ಒಂದು ಕಡೆಯಲ್ಲಿ ಕ್ರಯಾದಿಗಳಿಂದ ಸ್ವಲ್ಪವಾದ ಪದಾರ್ಥವನ್ನು ಗ್ರಹಿಸುವನಾದರೂ ಆ ಕ್ರಯದ್ರವ್ಯವನ್ನು ಲೋಭದಿಂದ ಕೊಡಲಾರದೆ ವಂಚಿಸೋಣದರಿಂದ ಅವನೊಡನೆ ವಿರೋಧವನ್ನು ಸಂಪಾದಿಸುವನು ; ಸಂಸಾರದಲ್ಲಿ ಪುರುಷನು ವನಚಾರಿಯಂತೆ ಒಂದುಕಡೆಯಲ್ಲಿ ತನ್ನ ಧನವನ್ನು ಕಳಕೊಂಡು ಹಾಸಿಗೆ ಕಂಬಳ ಗೃಹವು ವಾಹನವು ಇಲ್ಲದವನಾಗಿ ಆ ಹಾಸಿಗೆ ಮೊದಲಾದ ಪದಾರ್ಥಗಳನ್ನು ಪರರನ್ನು ಯಾಚಿಸುತಲಿರುವವನಾಗಿ ಯಾವಾಗ ಅವರಿಂದ ಆ ಪದಾರ್ಥಗಳನ್ನು ಯಾಚನೆಯಿಂದ ಪಡೆಯುವವನಾಗುವನೋ ಆ ಸಮಯದಲ್ಲಿ ಪರದ್ರವ್ಯಗಳಲ್ಲಿ ಅಭಿಲಾಷೆಯಿಂದ ಚೌರ್ಯಾದಿಗಳನ್ನು ಮಾಡಿ ಪರರಿಂದ ಅವಮಾನವನ್ನು ಐದುವನು ; ಅರಣ್ಯದಲ್ಲಿ ವರ್ತಕನಂತೆ

ಸಂಸಾರಮಾರ್ಗದಲ್ಲಿ ಪುರುಷನು ಪರಸ್ಪರವಾಗಿ ಧನವನ್ನು ಕೊಡೋಣ ಕೊಂಬೋಣದರಿಂದ ಅನ್ಯರೊಡನೆ ಪ್ರಬಲವಾದ ವಿರೋಧವನ್ನು ಐದುವನು; ಬಳಿಕ ಪುನಃ ಅವರೊಡನೆ ಪರಸ್ಪರವಾಗಿ ವಿವಾಹಾದಿ ಸಂಬಂಧಗಳನ್ನು ಮಾಡುತ ಅಧಿಕಗಳಿಂದ ಶ್ರಮಗಳಿಂದ ಧನನಿಮಿತ್ತವಾಗಿ ವ್ಯಥೆಗಳಿಂದಲೂ ದ್ವೇಷಾದಿಗಳಿಂದಲೂ ದೇಹಧಾರಣೆಯಂಗೈಯುತ ಮೃತಪ್ರಾಯನಾಗುವನು; ಅರಣ್ಯದಲ್ಲಿ ವರ್ತಕರ ಸಮೂಹದಂತೆ ಸಂಸಾರದಲ್ಲಿ ಜೀವಸಮೂಹವು ಮೃತರಾದವರನ್ನು ಬಿಟ್ಟು ಜನ್ಮಿಸಿರುವವರನ್ನು ಪರಿಗ್ರಹಿಸಿಕೊಂಡು ಸಂಸಾರವನ್ನುಗೈಯುತ ಎಲ್ಲಿಂದ ಹೊರಟುಹೋಯಿತೋ ಅಲ್ಲಿಗೆ ಬಾರದಹಾಗೆ ಹೋಗುವದು! ಎಲೈ ಅರಸೆ, ಈ ಜೀವಸಮೂಹದಲ್ಲಿ ಸಮರ್ಥನಾದ ಪುರುಷನು ಸಂಸಾರಮಾರ್ಗದ ಕೊನೆಯನ್ನು ಐದಲಾರನು; ಮತ್ತು ಆ ಸಂಸಾರವನ್ನು ದಾಟುವದಕ್ಕೆ ಉಪಾಯವನ್ನೂ ತಿಳಿಯಲಾರನು; ದಿಗ್ಗಜಗಳನ್ನು ಜಯಿಸಿರುವ ಮಹಾಶೂರರು ಇದು ನನ್ನ ಭೂಮಿ—ಇದು ನಿನ್ನ ಭೂಮಿ ಎಂದು ಭೂಮಿನಿಮಿತ್ತವಾಗಿ ಪರಸ್ಪರ ವೈರವನ್ನೈದಿ ಯುದ್ಧದಲ್ಲಿ ಪ್ರಾಣತ್ಯಾಗಂಗೈಯುವದಕ್ಕೆ ಸಮರ್ಥರಾಗುವರೇ ಹೊರತು ನಿರ್ವೈರನಾದ ಯತಿಯು ಯಾವ ವೈಕುಂಠವನ್ನೈದುವನೋ ಆ ವೈಕುಂಠಲೋಕವನ್ನು ಹೊಂದುವದಕ್ಕೆ ಸಮರ್ಥರಾಗಲಾರರು! ಎಲೈ ಅರಸೇ, ಅರಣ್ಯದಲ್ಲಿ ಸಂಚರಿಸುವ ಪುರುಷನು ಎಂತು ಬಳ್ಳಿಗಳನ್ನು ಕೊಂಬೆಗಳನ್ನು ಆಶ್ರಯಿಸಿ ಸವಿನುಡಿಗಳನ್ನು ನುಡಿಯುತ ಪಕ್ಷಿಗಳಲ್ಲಿ ಅಭಿಲಾಷೆಯುಳ್ಳವನಾಗಿ ಅವುಗಳಲ್ಲಿ ಆಸಕ್ತಿಯನ್ನು ಮಾಡುವನೋ ಮತ್ತೊಂದು ಕಡೆಯಲ್ಲಿ ಒಂದು ಸಮಯದಲ್ಲಿ ಸಿಂಹಗಳ ಸಮೂಹದಿಂದ ಭಯಪಡುವನಾಗಿ ಆ ಸಿಂಹಭಯವನ್ನು ಪರಿಹರಿಸಿಕೊಳ್ಳಲೋಸುಗ ಬಕಪಕ್ಷಿಗಳೊಡನೆ ರಣಹದ್ದುಗಳೊಡನೆ ಹದ್ದುಗಳೊಡನೆ ವಾಸಂಗೈಯುವನೋ ಅದೇರೀತಿ ಪುರುಷನು ಸಂಸಾರದಲ್ಲಿ ಬಳ್ಳಿಗಳ ಕೊಂಬೆಗಳಂತೆ ಅತಿ ಮೃದುಗಳಾದ ಸ್ತ್ರೀಯರ ಭುಜಗಳನ್ನವಲಂಬಿಸಿಕೊಂಡು ಆ ಸ್ತ್ರೀಯರ ಭುಜಗಳಲ್ಲಿ ಆಡುತಲಿರುವವನಾಗಿ ಸವಿಗಳಾದ ಬಾಲನುಡಿಗಳನ್ನು ನುಡಿಯುವವರಾಗಿ ಪಕ್ಷಿಗಳಿಗೆ ಸಮಾನಗಳಾಗಿರುವ ಮಕ್ಕಳಲ್ಲಿ ಅಭಿಲಾಷೆಯಿಂದ ಆಸಕ್ತನಾಗುವನು; ಒಂದು ಕಡೆಯಲ್ಲಿ ಒಂದು ಸಮಯದಲ್ಲಿ ಸಿಂಹಸಮೂಹಕ್ಕೆ ಸಮಾನವಾದ ಜನ್ಮಮರಣಾದಿ ಸಮೂಹದಿಂದ ಭೀತನಾಗಿ ಆ ಜನ್ಮಮರಣಾದಿಗಳನ್ನು ಪರಿಹರಿಸಿಕೊಳ್ಳಲೋಸುಗ ಬಕಹದ್ದು ರಣಹದ್ದುಗಳಂತೆ ಅತಿ ವಂಚಕರಾದ ಕ್ಷುದ್ರರಾದ ಅತಿ ಕ್ರೂರರಾದ ಪಾಷಂಡರೊಡನೆ ಸ್ನೇಹವಂಗೈದು ಅವರಲ್ಲೇ ಸೇರುವನು; ಆ ಅರಣ್ಯದಲ್ಲಿ ವರ್ತಕನು ಎಂತು ಬಕಾದಿ ಪಕ್ಷಿಗಳಿಂದ ವಂಚಿಸಲ್ಪಟ್ಟವನಾಗಿ ಇವುಗಳ ಸಹವಾಸದಲ್ಲಿ ಫಲವಿಲ್ಲವೆಂದು ತಿಳಿದು ಅನಂತರದಲ್ಲಿ ಹಂಸಪಕ್ಷಿಗಳ ಸಮೂಹವನ್ನು ಸೇರಿ ಅವುಗಳಲ್ಲೂ ಅಭಿರುಚಿಯಿಲ್ಲದವನಾಗಿ ಅವನ್ನು ಬಿಟ್ಟು ಕಪಿಗಳನ್ನು ಹೊಂದಿ ಆ ಕಪಿಜಾತಿ ಕ್ರೀಡಿಸುವಂತೆ ತಾನೂ ಸ್ತ್ರೀಯೊಡನೆ ಕ್ರೀಡಿಸೋಣದರಿಂದ ಇಂದ್ರಿಯಸುಖವನ್ನು ಪಡೆದು ಪರಸ್ಪರ ಮುಖಾವಲೋಕನದಿಂದ ತನಗೆ ಪ್ರಾಪ್ತವಾಗುವ ಮರಣಕಾಲವನ್ನು ಎಂತು ಅರಿಯದೆ ಇಹನೋ ಅದೇರೀತಿಯಲ್ಲಿ ಸಂಸಾರದಲ್ಲಿ ಪುರುಷನು ಪಾಷಂಡರಿಂದ ವಂಚಿಸಲ್ಪಟ್ಟವನಾಗಿ ಅವರಲ್ಲಿ ಪ್ರಯೋಜನವಿಲ್ಲವೆಂದು ತಿಳಿದು ಹಂಸಗಳಿಗೆ ಸಮಾನರಾದ ಬ್ರಾಹ್ಮಣರ ಸಮೂಹವನ್ನು ಹೊಂದಿ ಅನಂತರದಲ್ಲಿ ಇವನು ಭ್ರಷ್ಟನು ಇವನಿಗೆ ಪುನರುಪನಯನವಾಗಬೇಕೆಂದು ಆ ಬ್ರಾಹ್ಮಣರಿಂದ ತನಗೆ ನಿಯಮಿಸಲ್ಪಟ್ಟ ಪ್ರಾಯಶ್ಚಿತ್ತಾರ್ಥಗಳಾದ ಪುನರುಪನಯನಾದಿ ಸಂಸ್ಕಾರಗಳಲ್ಲಿ ಅಭಿರುಚಿಯಿಲ್ಲದವನಾಗಿ ಅವರನ್ನು ಬಿಟ್ಟು ಕಪಿಸಮಾನರಾದ ಆಚಾರಭ್ರಷ್ಟರಾದ ಶೂದ್ರಪ್ರಾಯರಾದ ಪುರುಷರನ್ನು ಹೊಂದಿ ಅವರಂತೆ ಸ್ತ್ರೀಯರೊಡನೆ ಕ್ರೀಡಿಸುವನಾಗಿ ಇಂದ್ರಿಯಸುಖವನ್ನು ಪಡೆದು ಆ ಸ್ತ್ರೀಯರೊಡನೆ ಪರಸ್ಪರ ಮುಖವನ್ನು ನೋಡೋಣದರಿಂದ ತನಗೆ ಬರುವ ಮರಣಕಾಲವನ್ನು ಅರಿಯದೆ ವ್ಯರ್ಥನಾಗುವನು; ವೃಕ್ಷಗಳಲ್ಲಿ ವನಚಾರಿಯಂತೆ ಸಂಸಾರಿಯಾದ ಪುರುಷನು ಗೃಹಗಳಲ್ಲಿ ಕ್ರೀಡಿಸುತ ಪತ್ನೀ ಪುತ್ರಾದಿಗಳಲ್ಲಿ ಅತಿ ವಾತ್ಸಲ್ಯಯುಕ್ತನಾಗಿ ಸ್ತ್ರೀಸಂಯೋಗವನ್ನು ಮಾಡಬೇಕೆಂಬ ಇಚ್ಛೆಯಿಂದ ಅತಿ ದೀನನಾಗಿ ಈರೀತಿ ಪ್ರಾಪ್ತವಾದ ತನ್ನ ಸಂಸಾರಬಂಧವನ್ನು ಪರಿಹರಿಸುವದಕ್ಕೆ ಅಸಮರ್ಥನಾಗಿ ಇಹನು; ಆ ವನಚಾರಿಯು ಎಂತು ಒಂದು ಕಡೆಯಲ್ಲಿ ಬೆಟ್ಟದ ಕಮರಿಯಲ್ಲಿ ಬೀಳುತಲಿರುವವನಾಗಿ ಕೆಳಗೆ ಇರುವ ಒಂದು ಮಹಾಗಜವನ್ನು ನೋಡಿ ಭಯದಿಂದ ಒಂದು ಬಳ್ಳಿಯನ್ನು ಹಿಡಿದುಕೊಂಡು ಮಧ್ಯದಲ್ಲಿ ಜೋಲುತಲಿಹನೋ ಅದೇರೀತಿಯಲ್ಲಿ ಸಂಸಾರದಲ್ಲಿ

ಪುರುಷನು ಪರ್ವತದ ಕಮರಿಯಂತೆ ಅತಿ ಭಯಂಕರವಾದ ರೋಗಾದಿ ದುಃಖದಲ್ಲಿ ತಗಲಿಕೊಂಡು ಕಮರಿಯಲ್ಲಿರುವ ಗಜಕ್ಕೆ ಸಮಾನವಾದ ಮೃತ್ಯುವಿನದೆಶೆಯಿಂದ ಭೀತನಾಗಿ ಬಳ್ಳಿಗೆ ಸಮಾನವಾದ ಪ್ರಾಚೀನಕರ್ಮವನ್ನವಲಂಬಿಸಿ ಅದರ ಬಲದಿಂದ ಜೀವಿಸುತಲಿಹನು ; ವನಚಾರಿಯಂತೆ ಸಂಸಾರಿಯು ಅತಿ ಪ್ರಯಾಸದಿಂದ ಮಹಾ ರೋಗಾದಿ ವಿಪತ್ತುಗಳಿಂದ ಬಿಡಲ್ಪಟ್ಟವನಾದಾಗ್ಯೂ ಪುನಃ ಯಥಾಪ್ರಕಾರವಾಗಿ ಲೋಕವ್ಯವಹಾರದಲ್ಲೇ ರಮಿಸುತಲಿಹನು ; ಇಂಥಾ ಭಯಂಕರವಾದ ಸಂಸಾರಮಾರ್ಗದಲ್ಲಿ ಮಾಯೆಯಿಂದ ಕೆಡಹಲ್ಪಟ್ಟ ಪುರುಷನು ಒಬ್ಬನಾದರೂ ಸಂಸಾರಚಕ್ರದಲ್ಲಿ ಸುತ್ತುತ ಆ ಸಂಸಾರನಿವೃತ್ತಿಗೆ ಉಪಾಯವನ್ನರಿಯನು ! ಎಲೈ ಅರಸೆ, ನೀನು ಅದೇರೀತಿಯಲ್ಲಿ ಮಾಯೆಯಿಂದ ಸಂಸಾರಮಾರ್ಗದಲ್ಲಿ ಕೆಡಹಲ್ಪಟ್ಟವನಾಗಿ ಅದರ ನಿವೃತ್ತಿಪ್ರಕಾರವನ್ನು ಅರಿಯದವನಾಗಿ ಇದ್ದೀಯೆ ! ಎಲೈ ರಹೂಗಣರಾಯನೆ, ಅದುಕಾರಣ ನೀನು ಪ್ರಜಾದಂಡನೆಯನ್ನು ಬಿಟ್ಟು ಸರ್ವಭೂತಗಳಿಗೂ ಮಿತ್ರನಾಗಿ ವಿಷಯಗಳಲ್ಲಿ ಆಸಕ್ತಿಯಿಲ್ಲದಿರುವ ಮನಸ್ಸುಳ್ಳವನಾಗಿ ಶ್ರೀಹರಿ ಸೇವೆಯಿಂದ ಅತಿ ತೀಕ್ಷ್ಣವಾದ ಜ್ಞಾನವೆಂಬ ಖಡ್ಗವನ್ನು ಧರಿಸಿ ಅತಿ ದುಸ್ತರವಾದ ಸಂಸಾರಾರಣ್ಯದ ಮಾರ್ಗವನ್ನು ದಾಟುವವನಾಗು ' ಎಂದು ಆ ಮಹಾಯೋಗಿಯಿಂದ ನಿರೂಪಿಸಲ್ಪಟ್ಟ ತತ್ವೋಪದೇಶವಚನವನ್ನು ಕೇಳಿ ರಹೂಗಣರಾಯನು 'ಎಲೈ ಯೋಗಿಯೇ, ಈ ಪ್ರಪಂಚದಲ್ಲಿ ಮನುಷ್ಯಜನ್ಮವೇ ಸಮಸ್ತಗಳಾದ ದೇವತಾ ಜನ್ಮಗಳಿಗಿಂತಲೂ ಅತಿ ಶ್ರೇಷ್ಠವಾದದ್ದು ; ಯಾವ ದೇವಾದಿ ಜನ್ಮಗಳಲ್ಲಿ ಸ್ವರ್ಗದಲ್ಲಾದರೂ ಶ್ರೀಹರಿ ಕೀರ್ತಿಯಿಂದ ಪರಿಶೋಧಿತವಾದ ಮನಸ್ಸುಳ್ಳ ಮಹಾತ್ಮರಾದ ನಿಮ್ಮ ದರ್ಶನ ಸಂಭಾಷಣಾದಿಗಳು ವಿಶೇಷವಾಗಿ ಉಂಟಾಗಲಾರವೋ ಅಂಥಾ ಇತರ ದೇವತಾದಿ ಜನ್ಮಗಳಿಂದ ಏನು ಪ್ರಯೋಜನವು ! ಎಲೈ ಬ್ರಾಹ್ಮಣನೆ, ಯಾವ ನಿನ್ನ ಮುಹೂರ್ತಮಾತ್ರವುಂಟಾದ ಸಂಗತಿಯಿಂದ ದುಷ್ಟವಾದ ಊಹೆಯಿಂದ ಅತಿ ದೃಢವಾದ ನನ್ನ ಅವಿವೇಕವು ನಷ್ಟವಾಯಿತೋ ಅಂಥಾ ನಿನ್ನ ಪಾದಾರವಿಂದಗಳ ಧೂಳಿಗಳಿಂದ ಪರಿಹರಿಸಲ್ಪಟ್ಟ ಪಾಪವುಳ್ಳ ನನಗೆ ಶ್ರೀ ವಾಸುದೇವನಲ್ಲಿ ನಿರ್ಮಲವಾದ ಭಕ್ತಿಯುಂಟಾಗುವದೆಂಬದು ಆಶ್ಚರ್ಯವಲ್ಲ; ಬ್ರಹ್ಮಜ್ಞಾನಿಗಳೂ ಇಂಥಾ ರೂಪದಿಂದ ಜಗತ್ತಿನಲ್ಲಿ ಸಂಚರಿಸುತಲಿರುವರೆಂಬ ಅರ್ಥವನ್ನರಿಯದವನಾದ್ದರಿಂದ ರಹೂಗಣರಾಯನು ಸಕಲ ಪುರುಷರಿಗೋಸ್ಕರ ನಮಸ್ಕಾರವು ! ವೃದ್ಧರಿಗೋಸ್ಕರ ನಮಸ್ಕಾರವು ! ಯೌವನಸ್ಥರಿಗೋಸ್ಕರ ನಮಸ್ಕಾರವು ! ಬಾಲಕರಿಗೋಸ್ಕರ ನಮಸ್ಕಾರವು ! ಕೇವಲ ಕ್ರೀಡಾಸಕ್ತರಾದ ಬ್ರಹ್ಮಚಾರಿಗಳಿಗೋಸ್ಕರ ನಮಸ್ಕಾರವು ! ಯಾವ ಬ್ರಾಹ್ಮಣರು ಅವಧೂತ ಸನ್ಯಾಸಿವೇಷಗಳನ್ನು ಧರಿಸಿ ಭೂಮಿಯಲ್ಲಿ ಸಂಚರಿಸುವರೋ ಅಂಥಾ ಮಹಾ ಯೋಗಿಗಳಿಗೋಸ್ಕರ ನಮಸ್ಕಾರವು ! ಜಗತ್ತಿನಲ್ಲಿ ರಾಜ್ಯಮದದಿಂದ ಮಹಾತ್ಮರನ್ನು ತಿರಸ್ಕರಿಸದಂಥಾ ಅರಸುಗಳಿಗೆ ಕ್ಷೇಮವುಂಟಾಗಲಿ—ಎಂದು ಪ್ರಾರ್ಥಿಸಿದನು. ಎಲೈ ಉತ್ತರಾಗರ್ಭಸಂಭೂತನಾದ ಪರೀಕ್ಷಿದ್ರಾಯನೇ ಕೇಳು : ಬ್ರಾಹ್ಮಣಜನ್ಮವನ್ನು ಧರಿಸಿ ಬ್ರಹ್ಮಾನಂದವನ್ನು ಅನುಭವಿಸುತಲಿರುವ ಯೋಗಿಯಾದ ಆ ಭರತನು ಸಿಂಧುದೇಶಕ್ಕೆ ಅಧಿಪತಿಯಾದ ರಹೂಗಣರಾಯನು ಆತ್ಮತತ್ವವನ್ನು ತಿರಸ್ಕರಿಸುತಲಿರುವವನಾದಾಗ್ಯೂ ಪರಮದಯಾಶೀಲನಾದ್ದರಿಂದ ಆತನಿಗೆ ಈರೀತಿ ಬ್ರಹ್ಮಸ್ವರೂಪೋಪದೇಶವಂಗೈದು ; ಆ ಅರಸಿನಿಂದ ಅತಿ ವಿನಯದಿಂದ ನಮಸ್ಕರಿಸಲ್ಪಟ್ಟ ಪಾದಾರವಿಂದಗಳುಳ್ಳವನಾಗಿ ಸಂಪೂರ್ಣವಾದ ಸಮುದ್ರದಂತೆ ಉಪಶಾಂತಿಯನ್ನೈದಿರುವ ಇಂದ್ರಿಯಜನ್ಯಗಳಾದ ವೃತ್ತಿಜ್ಞಾನಗಳುಳ್ಳ ಮನಸ್ಸುಳ್ಳವನಾಗಿ ಭೂಮಿಯಲ್ಲಿ ಸಂಚರಿಸಿದನು ; ಅನಂತರದಲ್ಲಿ ಆ ರಹೂಗಣರಾಯನು ಆ ಮಹಾಯೋಗಿಯದೆಶೆಯಿಂದ ಪರಮಾತ್ಮತತ್ವವನ್ನು ತಿಳಿದು ಅಜ್ಞಾನದಿಂದ ತನ್ನಲ್ಲಿ ಆರೋಪಿಸಲ್ಪಟ್ಟ ದೇಹವೇ ಆತ್ಮನೆಂಬ ಬುದ್ಧಿಯನ್ನು ಬಿಟ್ಟನು ! ಎಲೈ ಪರೀಕ್ಷಿದ್ರಾಯನೇ, ಭಗವತಾಶ್ರಿತನಾದ ಭರತನನ್ನು ಆಶ್ರಯಿಸಿದ ರಹೂಗಣರಾಯನಿಗೆ ಈರೀತಿಯಿಂದ ತಕ್ಷಣದಲ್ಲೇ ದೇಹಾದಿಗಳಲ್ಲಿ ಅಹಂಕಾರನಿವೃತ್ತಿಯುಂಟಾಯಿತು ' ಎಂದು ನುಡಿದನು.

ಪರೀಕ್ಷಿದ್ರಾಯನು ಶುಕಮುನಿಯನ್ನು ಕುರಿತು "ಎಲೈ ಶುಕಮುನಿಯೆ, ಸರ್ವಜ್ಞನಾದ ನಿನ್ನಿಂದ ಈಗ ವರ್ತಕಸಮೂಹದ ದೃಷ್ಟಾಂತರದಿಂದ ನಿರೂಪಿಸಲ್ಪಟ್ಟ ವಚನದಿಂದ ಜೀವಾತ್ಮರ ಯಾವ ಸಂಸಾರ ಮಾರ್ಗವು ಉಪದೇಶಗೈಯಲ್ಪಟ್ಟಿತೋ ಆ ಸಂಸಾರಮಾರ್ಗವು ವಿವೇಕಿಗಳ ಬುದ್ಧಿಯಿಂದ ಮಾತ್ರವೇ ಚೋರರೇ ಇಂದ್ರಿಯಗ

ಳು ; ನರಿಗಳೇ ಪುತ್ರಾದಿಗಳೆಂದು ಕಲ್ಪಿಸಲ್ಪಟ್ಟವಿಷಯಗಳುಳ್ಳದ್ದಾದ್ದರಿಂದ ಶೀಘ್ರವಾಗಿ ಜ್ಞಾನರಹಿತರಾದ ಜನರಿಂದ ತಿಳಿಯುವಕ್ಕೆ ಶಕ್ಯವಲ್ಲವಾದಕಾರಣ ತಿಳಿಯಲಶಕ್ಯವಾದ ಸಂಸಾರಮಾರ್ಗಸ್ವರೂಪವನ್ನು ಪ್ರಕೃತದಲ್ಲಿ ಚೋರರು ನರಿಗಳು ಇವೇ ಮೊದಲಾದ ವಸ್ತುಗಳಿಗೆ ಸಮಾನಗಳಾದ ವಸ್ತುಗಳನ್ನು ವಿವರಿಸಿ ಹೇಳುವವನಾಗು" ಎಂದು ನುಡಿದನು.

೧೪ನೇ ಅಧ್ಯಾಯ.

ಶುಕಮುನಿಯು ಪರೀಕ್ಷಿದ್ರಾಯನಿಗೆ ಸಂಸಾರವೆಂಬ ಅರಣ್ಯವನ್ನು ವಿವರಿಸಿದ್ದು.

"ಎಲೈ ಪರೀಕ್ಷಿದ್ರಾಯನೇ ಕೇಳು : ಪ್ರಸಿದ್ಧವಾದ ಜೀವಸಮೂಹವು ಭಗವಂತನ ಸ್ವಾಧೀನವಾದ ಮಾಯೆಯಿಂದ ದೇಹವೇ ಆತ್ಮನೆಂದು ತಿಳಿಯುತಲಿರುವ ಪಾಮರಜನರಿಗೆ ಸತ್ವಾದಿ ಗುಣಗಳಿಂದ ವಿಭಾಗಂಗೈಯಲ್ಪಟ್ಟವಾಗಿ ಶುಭವೆಂದು ಅಶುಭವೆಂದು ಮಿಶ್ರವೆಂದು ತ್ರಿವಿಧಗಳಾಗಿರುವ ಕರ್ಮಗಳಿಂದ ನಿರ್ಮಿಸಲ್ಪಟ್ಟ ನಾನಾವಿಧಗಳಾದ ದೇಹಪರಂಪರೆಗಳೊಡನೆ ಸಂಯೋಗ ವಿಯೋಗಾದಿರೂಪವಾದ ಅನಾದಿಯಾದ ಸಂಸಾರದ ಅನುಭವಕ್ಕೆ ದ್ವಾರವಾಗಿರುವ ಮನಸ್ಸುಮೊದಲಾದ ಷಡಿಂದ್ರಿಯಗಳ ಸಮೂಹದಿಂದ ದುರ್ಗಮಾರ್ಗದಂತೆ ಪ್ರವೇಶಿಸಲಶಕ್ಯವಾದ ಸಂಸಾರರೂಪವಾದ ಮಾರ್ಗದಲ್ಲಿ ಕೆಡಹಲ್ಪಟ್ಟದ್ದಾಗಿ ವರ್ತಕಸಮೂಹದಂತೆ ದ್ರವ್ಯಸಂಪಾದನೆಯಲ್ಲಿ ಆಸಕ್ತವಾಗಿ ದೇಹಗಳಿಂದ ಮಾಡಲ್ಪಟ್ಟ ಕರ್ಮಗಳ ಫಲಮುಖದಿಂದ ಸುಖ ದುಃಖಗಳನ್ನನುಭವಿಸುತ ಶ್ಮಶಾನದಂತೆ ಅಮಂಗಳಕರವಾದ ಸಂಸಾರಾರಣ್ಯದಲ್ಲಿ ಬಿದ್ದು ನಿಷ್ಫಲಗಳಾದ ಬಹುವಿಘ್ನಯುಕ್ತಗಳಾದ ವ್ಯಾಪಾರಗಳುಳ್ಳದ್ದಾಗಿ ಸಂಸಾರಾರಣ್ಯದಲ್ಲಿ ಉಂಟಾಗುವ ತಾಪಗಳನ್ನು ಪರಿಹರಿಸುವ ಶ್ರೀ ವಾಸುದೇವನೆಂಬ ಗುರುವಿನ ಚರಣಗಳೆಂಬ ಪದ್ಮಗಳಲ್ಲಿ ತುಂಬಿಗಳಂತೆ ಆಸಕ್ತರಾದ ಪರಮಭಾಗವತರಿಂದ ಆಚರಿಸಲ್ಪಟ್ಟ ಭಕ್ತಿಮಾರ್ಗವನ್ನು ಐದುವದಿಲ್ಲ; ಆ ಸಂಸಾರಾರಣ್ಯದಲ್ಲಿ ಷಡಿಂದ್ರಿಯಗಳು ತಮ್ಮ ತಮ್ಮ ವ್ಯಾಪಾರದಿಂದ ಚೋರರಂತೆ ಆಚರಿಸುತಲಿಹವು; ಬಹುಕಷ್ಟದಿಂದ ಸಂಪಾದಿಸಲ್ಪಟ್ಟ ಧನವು ಯಾವದುಂಟೋ ಆ ಧನವು ಪುರುಷನಿಗೆ ಧರ್ಮಸಾಧನವೆಂದು ಋಷಿಗಳು ಹೇಳುವರು ; ಸಾಕ್ಷಾತ್ ವಾಸುದೇವನ ಪೂಜಾರೂಪವಾದ ಯಾವ ಧರ್ಮವುಂಟೋ ಆ ಧರ್ಮವೇ ಮುಕ್ತಿಸಾಧನವೆಂದು ಮುನಿಗಳು ಹೇಳುವರು; ಆ ಇಂದ್ರಿಯಗಳು ದರ್ಶನ ಸ್ಪರ್ಶನ ಶ್ರವಣ ಆಸ್ವಾದನ ಆಘ್ರಾಣಗಳೆಂಬ ಐದು ಜ್ಞಾನೇಂದ್ರಿಯವೃತ್ತಿಗಳಿಂದಲೂ ಸಂಕಲ್ಪ ವ್ಯವಸಾಯಗಳೆಂಬ ಅಂತಃಕರಣವೃತ್ತಿಗಳಿಂದಲೂ ಗೃಹದಲ್ಲಿ ಕ್ಷುದ್ರವಿಷಯಗಳನ್ನು ಅನುಭವಿಸೋಣದರಿಂದಲೂ ದುರ್ಬುದ್ಧಿಯುಳ್ಳವನಾಗಿ ಮನೋನಿಗ್ರಹವಿಲ್ಲದಿರುವ ಪುರುಷನ ಅಂಥಾ ಧರ್ಮಸಾಧನವಾದ ಧನವನ್ನು ಅರಣ್ಯದಲ್ಲಿ ವೈಮರತಿರುವ ವರ್ತಕರ ಸಮೂಹದ ಧನವನ್ನು ಎಂತು ಚೋರರು ಅಪಹರಿಸುವರೋ ಆರೀತಿ ಅಪಹರಿಸುವವು ; ಆ ಸಂಸಾರಾರಣ್ಯದಲ್ಲಿ ನಾಮಮಾತ್ರದಿಂದ ಪತ್ನೀ ಪುತ್ರಾದಿಗಳೆಂದ ಎಳೆಯಲ್ಪಡುವರಾಗಿ ತಮ್ಮ ವ್ಯಾಪಾರದಿಂದ ತೋಳಗಳಿಗೂ ನರಿಗಳಿಗೂ ಸಮಾನರಾಗಿರುವ ಸ್ವಜನರು ಇಚ್ಛೆಯಿಲ್ಲದಿರುವನಾಗಿ ಅತಿಲುಬ್ಧನಾಗಿರುವ ಸಂಸಾರಿಯು ನೋಡುತಲಿರುವವನಾದಾಗ್ಯೂ ರಕ್ಷಿಸಲ್ಪಟ್ಟ ಅವನ ಧನವನ್ನು ಕುರಿಯನ್ನು ತೋಳಗಳು ಭಕ್ಷಿಸುವಂತೆ ಅಪಹರಿಸುತಲಿದ್ದಾರೆ ; ಯಾವರೀತಿ ಭೂಮಿಯು ಪ್ರತಿಸಂವತ್ಸರದಲ್ಲು ಉಳಲ್ಪಟ್ಟದ್ದಾದಾಗ್ಯೂ ದಹಿಸಲ್ಪಡದಿರುವ ಬೀಜಗಳುಳ್ಳದ್ದಾಗಿ ಪುನಃ ಬಿತ್ತುವ ಸಮಯದಲ್ಲಿ ತೃಣಗಳಿಂದಲೂ ಹೊದೆಗಳಿಂದಲೂ ಬಳ್ಳಿಗಳಿಂದಲೂ ಪ್ರವೇಶಿಸಲಶಕ್ಯವಾಗುವದೋ ಅದೇರೀತಿ ಗೃಹಸ್ಥಾಶ್ರಮವು ನಾನಾವಿಧಕರ್ಮಗಳಿಗೂ ಉತ್ಪತ್ತಿಸ್ಥಾನವೆಂದು ತಿಳಿ ; ಆ ಗೃಹಸ್ಥಾಶ್ರಮದಲ್ಲಿ ಕರ್ಮಗಳು ನಷ್ಟವಾಗುವದಿಲ್ಲ ; ಕರ್ಪೂರದ ಸಂಪುಟದಲ್ಲಿ ಕರ್ಪೂರವು ನಷ್ಟವಾದಾಗ್ಯೂ ಆ ಪರಿಮಳವು ಎಂತು ಕ್ಷಯಿಸುವದಿಲ್ಲವೋ ಅದೇರೀತಿ ಸಕಲ ಕಾಮನೆಗಳಿಗೂ ಸಂಪುಟಪ್ರಾಯವಾದ ಗೃಹದಲ್ಲಿ ಆಸಕ್ತನಾದ ಪುರುಷನು ಕಾಡುನೊಣಗಳು ಸೊಳ್ಳೆಗಳು ಇವುಗಳಿಗೆ ಸಮಾನರಾದ ನೀಚರಿಂದಲೂ ಮಿಡಿಚೆಗಳಿಂದಲೂ ಮಕ್ಷಿಕಗಳಿಂದಲೂ ಚೋರರಿಂದಲೂ ಮೂಷಕಮೊದಲಾದ್ದರಿಂದಲೂ ಪೀಡಿಸಲ್ಪಡುತಲಿರುವ ಧನಧಾ

ನ್ಯಗಳುಳ್ಳವನಾದಾಗ್ಯೂ ಈ ಸಂಸಾರಮಾರ್ಗದಲ್ಲಿ ಸುತ್ತುತಲಿರುವವನಾಗಿ ಅವಿದ್ಯಾಕಾಮಕರ್ಮಗಳಿಂದ ಬದ್ಧವಾದ
ಮನಸ್ಸಿನಿಂದ ಗಂಧರ್ವನಗರದಂತೆ ಅಸಂಭಾವಿತವಾದಾಗ್ಯೂ ಈ ಮನುಷ್ಯ ಪ್ರಪಂಚವನ್ನು ಅಜ್ಞಾನದೃಷ್ಟಿಯಿಂದ
ಸತ್ಯವೆಂದು ತಿಳಿಯುತಲಿಧಾನೆಯಾವಕಾರಣ ಗೃಹಸ್ಥಾಶ್ರಮದಲ್ಲಿ ಕರ್ಮಗಳು ಕ್ಷಯಿಸುವದಿಲ್ಲವೆಂದು ತಿಳಿ ; ಪುರುಷ
ನು ಅಸತ್ಯವಾದ ಈ ಪ್ರಪಂಚದಲ್ಲಿ ಪಾನ ಭೋಜನ ಸ್ತ್ರೀಸಂಗಗಳೇ ಮೊದಲಾದ ದುರ್ವ್ಯಸನಗಳಲ್ಲಿ ಆಸಕ್ತನಾಗಿ
ಒಂದುಕಡೆಯಲ್ಲಿ ಬಿಸಲುದೊರೆಗೆ ಸಮಾನಗಳಾದ ವಿಷಯಗಳನ್ನನುಭವಿಸಿ ಅರಣ್ಯದಲ್ಲಿ ಅಗ್ನಿಬೇಕೆಂಬ ಪುರುಷನು
ಎಂತು ಕೊಳ್ಳಿಯಂತೆ ಅತ್ಯಂತ ಜ್ವಲಿಸುತ ಸುತ್ತುತಲಿರುವ ಪಿಶಾಚವಿಶೇಷವನ್ನು ಇದು ಕೊಳ್ಳಿಯೆಂದು ಗ್ರಹಿಸಬೇ
ಕೆಂಬ ಇಚ್ಛೆಯಿಂದ ಅದನ್ನು ಕುರಿತು ಅಗ್ನಿಲಾಭವಿಲ್ಲದೆ ಅದಕ್ಕೆ ಶಿಕ್ಕಿ ಅದರಿಂದಲೇ ಅತಿ ಪೀಡಿತನಾಗಿ ನಷ್ಟನಾಗಿ
ಹೋಗುವನೂ ಅದೇರೀತಿ ಸಂಸಾರದಲ್ಲಿ ಪುರುಷನು ಒಂದುಕಡೆ ಸುವರ್ಣದಂತೆ ಕೆಂಪಾದ ರಜೋಗುಣದಿಂದ ಹು
ಟ್ಟಿದ ಸುವರ್ಣವಿಷಯಕವಾದ ಬುದ್ಧಿಯುಳ್ಳವನಾಗಿ ಸಕಲದೋಷಗಳಿಗೂ ಸ್ಥಾನವಾಗಿ ಅಗ್ನಿಯ ಮಲರೂಪವಾಗಿ
ರುವ ಸುವರ್ಣವನ್ನುಗ್ರಹಿಸಬೇಕೆಂಬ ಇಚ್ಛೆಯಿಂದ ಅಲ್ಲಲ್ಲಿ ಸುತ್ತುತ ಅದನ್ನು ಹೊಂದದೆ ತಾನೇನಷ್ಟನಾಗುವನು ;
ಈ ಸಂಸಾರನೆಂಬ ಅರಣ್ಯದಲ್ಲಿ ಪುರುಷನು ಒಂದುವೇಳೆ ತನ್ನ ಜೀವನಕ್ಕೆ ಸಾಧನಗಳಾದ ಗೃಹ ಜಲ ಧನ ಇವೇ
ಮೊದಲಾದ ಪದಾರ್ಥಗಳನ್ನು ಸಂಪಾದಿಸೋಣದರಲ್ಲಿ ಅತ್ಯಾಸಕ್ತನಾಗಿ ಅಲ್ಲಲ್ಲಿ ಸುತ್ತುತಲಿಹನು ; ಒಂದು ಸಮ
ಯದಲ್ಲಿ ಸುಂಟುರಘಾಳಿಗೆ ಸಮಾನಳಾದ ಕಾಂತೆಯಿಂದ ತೊಡೆಯಲ್ಲಿ ಕುಳ್ಳಿರಿಸಿಕೊಳ್ಳಲ್ಪಟ್ಟವನಾಗಿ ಆ ಕಾಲದಲ್ಲಿ
ಹುಟ್ಟಿದ ಮೋಹದಿಂದ ಅಂಧಕಾರದಿಂದ ವ್ಯಾಪಿಸಲ್ಪಟ್ಟವನಂತಿರುವ ಅತ್ಯಂತ ರಜೋಗುಣದಿಂದ ಮರೆಮಾಡಲ್ಪಟ್ಟ
ಬುದ್ಧಿಯುಳ್ಳವನಾಗಿ ಧೂಳಿಗಳಿಂದ ವ್ಯಾಪ್ತವಾದ ನೇತ್ರಗಳುಳ್ಳವನಂತೆ ದಿಕ್ಕುಗಳಲ್ಲಿ ಪ್ರಾಣಿಗಳ ಪುಣ್ಯಪಾಪಗ
ಳಿಗೆ ಸಾಕ್ಷಿಗಳಾಗಿರುವ ದೇವತೆಗಳನ್ನರಿಯದಿಹನು ; ಪುರುಷನು ಒಂದು ಸಮಯದಲ್ಲಿ ವಿಷಯಗಳನ್ನು ನಿಷ್ಫಲ
ಗಳೆಂದು ಒಂದುಬಾರಿ ತಾನೇ ತಿಳಿದವನಾದಾಗ್ಯೂ ದೇಹದಲ್ಲಿರುವ ಅತ್ಯಂತಾಸಕ್ತಿಯಿಂದ ನಷ್ಟವಾದ ಸ್ಮೃತಿಗಳು
ಳ್ಳವನಾಗಿ ಆ ಸ್ಮೃತಿಭ್ರಂಶೆಯಿಂದಲೇ ಪುನಃ ಬಿಸಲುದೊರೆಗೆ ಸಮಾನಗಳಾದ ಆ ವಿಷಯಗಳನ್ನೇ ಅನುಸರಿಸಿ
ಹೋಗುವನು ; ಒಂದುಕಡೆಯಲ್ಲಿ ಸಂಸಾರಿಯು ಘೂಕಗಳು ಚಿಮ್ಮಂಡೆಗಳು ಇವುಗಳ ಧ್ವನಿಯಂತೆ ಅತಿ ಕಠಿಣ
ವಾದ ಉತ್ಸಾಹದಿಂದ ಮುಂದೆ ತೋರದಿರೋಣ ಹ್ಯಾಗೋ ಹಾಗೆ ಪ್ರತ್ಯಕ್ಷವಾಗಿ ಪರೋಕ್ಷವಾದಾಗ್ಯೂ ಶತೃಗಳು
ಅರಸುಗಳು ಗರ್ಜಿಸಿ ಬೆದರಿಸೋಣದರಿಂದ ಅತ್ಯಂತ ವ್ಯಥಾಯುಕ್ತವಾದ ಕರ್ಣಗಳು ಚಿತ್ತವು ಸಹ ಉಳ್ಳವನಾಗು
ವನು ; ಪುರುಷನು ಯಾವಾಗ ಕ್ಷೀಣವಾದ ಪೂರ್ವಪುಣ್ಯವುಳ್ಳವನಾಗುವನೋ ಆಗ ವಿಷತಿಂದಿಗಳು ಕಾಗೆಮೋರೆ
ಗಳು ಇವೇ ಮೊದಲಾದ ಪಾಪಕರಗಳಾದ ವೃಕ್ಷಗಳಂತೆ ಬಳ್ಳಿಗಳಂತೆ ವಿಷಕೂಪಂಗಳಂತೆ ದೃಷ್ಟಾದೃಷ್ಟಫಲಶೂ
ನ್ಯವಾದ ಧನವುಳ್ಳವರಾಗಿ ಜೀವವಂತರಾದಾಗ್ಯೂ ಮೃತಪ್ರಾಯರಾಗಿರುವ ಪುರುಷರನ್ನು ತಾನು ಜೀವನ್ಮೃತನಾಗಿ
ಆಶ್ರಯಿಸುತಲಿಧಾನೆ ; ಒಂದು ಸಮಯದಲ್ಲಿ ಸಂಸಾರಿಯು ದುರ್ಜನರ ಸಂಗತಿಯಿಂದ ವಂಚಿತವಾದ ಬುದ್ಧಿಯುಳ್ಳ
ವನಾಗಿ ಯಾವರೀತಿ ಜಲರಹಿತವಾದ ನದಿಯ ಹಳ್ಳದಲ್ಲಿ ಬಿದ್ದರೆ ತಕ್ಷಣದಲ್ಲೇ ಶಿರಸ್ಸು ಒಡೆದು ಯಾತನೆಯು ಅನು
ವರ್ತಿಸಿಹದೋ ಅದೇರೀತಿ ಇಹಲೋಕ ಪರಲೋಕಗಳಲ್ಲಿ ದುಃಖವನ್ನೀವ ಪಾಷಂಡಸಮೂಹವನ್ನನುಸರಿಸುತಲಿ
ಧಾನೆ ; ಸಂಸಾರಿಯು ಯಾವ ಸಮಯವಲ್ಲಿ ಪರರನ್ನು ಬಾಧೆಪಡಿಸುವದರಿಂದ ತನಿಗೆ ಅನ್ನವು ದೊರೆಯದೆ ಹೋ
ಗುವದೋ ಆ ಸಮಯದಲ್ಲಿ ತಂದೆಯಾದಾದರೂ ಪುತ್ರರದಾದರೂ ಸ್ವತ್ತಾಗಿರುವ ತೃಣಮಾತ್ರವನ್ನಾದರೂ ಯಾರ
ಲ್ಲಿ ಕಾಣುವನೋ ಅವರನ್ನು ಬಾಧಿಸುತಲಿಧಾನೆ ; ಅದು ಇಲ್ಲದೆ ಇದ್ದರೆ ತಂದೆಯನ್ನಾದರೂ ಪುತ್ರರನ್ನಾದರೂ
ಬಾಧಿಸುತಲಿಧಾನೆ ; ಪುರುಷನು ಇಷ್ಟವಾದ ಫಲದಿಂದ ರಹಿತನಾಗಿ ಸುಖಸೂಚಕವಲ್ಲದ್ದಾಗಿ ಕಾಡುಕಿಚ್ಚಿನಂತಿರುವ
ಗೃಹವನ್ನೈದಿ ಶೋಕವೆಂಬ ಅಗ್ನಿಯಿಂದ ದಹಿಸಲ್ಪಡುತ ಅತ್ಯಂತ ದುಃಖವನ್ನನುಭವಿಸುತಲಿಧಾನೆ ; ಪುರುಷನು
ಕಾಲವಿಶೇಷದಿಂದ ಪ್ರತಿಕೂಲನಾದ ರಾಜಸಮೂಹವೆಂಬ ರಾಕ್ಷಸರಿಂದ ಅಪಹರಿಸಲ್ಪಟ್ಟ ಅತ್ಯಂತಇಷ್ಟಗಳಾದ ಧನ
ರೂಪಗಳಾದ ಪ್ರಾಣಗಳುಳ್ಳವನಾಗಿ ಮೃತನಂತೆ ಸಂತೋಷ ಮೊದಲಾದ ಜೀವಧರ್ಮಗಳನ್ನು ಬಿಟ್ಟಿರುವನು ;
ಒಂದು ಸಮಯದಲ್ಲಿ ಮನೋರಥದಿಂದ ಕಲ್ಪಿತರಾದ ತಂದೆತಾತರೇ ಮೊದಲಾಗುಳ್ಳ ಸ್ವಜನರು ಅಸತ್ಯರೂಪವಾದರೂ

ಅವರನ್ನು ಶಿಕ್ಷಿತರೆಂದು ತಿಳಿಯುವ ಸ್ವಪ್ನಸುಖಕ್ಕೆ ಸಮಾನವಾದ ಸುಖವನ್ನನುಭವಿಸುತಲಿರ್ಧಾನೆ; ಬಂದು ಸಮಯದಲ್ಲಿ ಸಂಸಾರಿಯು ಗೃಹಸ್ಥಾಶ್ರಮದಲ್ಲಿ ವಿಹಿತಗಳಾದ ನಾನಾವಿಧಾನಗಳಾದ ಕರ್ಮವಿಧಾನಗಳ ವಿಸ್ತಾರವೆಂಬ ಮಹಾ ಪರ್ವತವನ್ನು ಹತ್ತಿ ಅದರ ಕೊನೆಯನ್ನು ಕಾಣಬೇಕೆಂದು ಇಚ್ಛೈಸುತ ಲೋಕಸಿದ್ಧಗಳಾದ ಸಂಸಾರ ವ್ಯಸನಗಳಿಂದ ಕ್ಷೀಣವಾದ ಮನಸ್ಸುಳ್ಳವನಾಗಿ ಮುಳ್ಳು ಕಲ್ಲುಗಳಿಂದ ಪ್ರವೇಶಿಸಲಶಕ್ಯವಾದ ಭೂಮಿಯನ್ನು ಪ್ರವೇಶಿಸಿ ವನಚಾರಿಯಂತೆ ದುಃಖವನ್ನು ಪಡೆಯುತಲಿರ್ಧಾನೆ; ಬಂದು ಸಮಯದಲ್ಲಿ ಸಹಿಸುವದಕ್ಕೆ ಅಶಕ್ಯವಾದ ಜಠರಾಗ್ನಿಯಿಂದ ಗ್ರಹಿಸಲ್ಪಟ್ಟ ಬಲವುಳ್ಳವನಾಗಿ ತನ್ನ ಪತ್ನೀ ಪುತ್ರಾದಿಗಳಲ್ಲಿ ಕೋಪವನ್ನು ಮಾಡುತ ಅದೇ ಜೀವನು ನಿದ್ರೆಯೆಂಬ ಹೆಬ್ಬಾವಿನಿಂದ ಕಬಳಿಸಲ್ಪಟ್ಟವನಾಗಿ ಅತಿ ದೃಢವಾದ ಅಜ್ಞಾನದಲ್ಲಿ ಮಗ್ನನಾಗಿ ಶೂನ್ಯವಾದ ಅರಣ್ಯದಲ್ಲಿ ಮಲಗಿದಂತೆ ಮಲಗಿಸಿ ಶ್ಮಶಾನದಲ್ಲಿ ತ್ಯಜಿಸಲ್ಪಟ್ಟ ಶವದಂತೆ ಮತ್ತೊಂದು ವ್ಯಾಪಾರವನ್ನು ತಿಳಿಯುವದಿಲ್ಲ; ಬಂದು ಸಮಯದಲ್ಲಿ ಸಂಸಾರಿಯು ದುರ್ಜನರೆಂಬ ಸರ್ಪಗಳಿಂದ ಮುರಿಯಲ್ಪಟ್ಟ ಗರ್ವವೆಂಬ ಕೋರದಾಡೆಯುಳ್ಳವನಾಗಿ ಕ್ಷಣಮಾತ್ರವಾದರೂ ನಿದ್ರೆಯನ್ನೈಯ್ಯದೆ ಅತ್ಯಂತ ವ್ಯಥಾಯುಕ್ತವಾದ ಮನಸ್ಸಿನಿಂದ ಕ್ಷೀಣವಾಗುತಲಿರುವ ಜ್ಞಾನವುಳ್ಳವನಾಗಿ ಅಂಧಕನಂತೆ ಪಾಳುಭಾವಿಯಲ್ಲಿ ಬೀಳುವನು; ಬಂದು ಕಡೆಯಲ್ಲಿ ಪರಸ್ತ್ರೀ ಮೊದಲಾದ ವಿಷಯಗಳೆಂಬ ಮಧುಬಿಂದುಗಳನ್ನು ಅಲ್ಲಲ್ಲಿ ಹುಡುಕುತ ಜೀವನು ಯಾವಾಗ ಆ ಪರಸ್ತ್ರೀ ಪರದ್ರವ್ಯಾದಿಗಳನ್ನು ಆಕ್ರಮಿಸುವನೋ ಆ ಸಮಯದಲ್ಲಿ ಆ ಸ್ತ್ರೀಯ ಪತಿಯೇ ಮೊದಲಾಗುಳ್ಳ ಪುರುಷರಿಂದಲಾದರೂ ಅರಸುಗಳಿಂದಲಾದರೂ ಸಂಹರಿಸಲ್ಪಟ್ಟವನಾಗಿ ಪಾರವಿಲ್ಲದಿರುವ ನರಕದಲ್ಲಿ ಬೀಳುತಲಿರ್ಧಾನೆ; ಅದುಕಾರಣ ಈ ಪ್ರವೃತ್ತಿಮಾರ್ಗದಲ್ಲಿ ಕರ್ಮವನ್ನು ಇಹಲೋಕ ಪರಲೋಕಗಳಲ್ಲಿಯೂ ಪುರುಷನ ಸಂಸಾರಕ್ಕೆ ಉತ್ಪತ್ತಿಸ್ಥಾನವೆಂದು ಋಷಿಗಳು ಹೇಳುವರು; ಪುರುಷನು ಬಂದು ಸಮಯದಲ್ಲಿ ಅತಿ ಪ್ರಯಾಸದಿಂದ ಪರರಿಂದ ಮಾಡಲ್ಪಡುವ ವಧೆಯಿಂದ ತಪ್ಪಿಸಿಕೊಂಡು ಆ ಪರಸ್ತ್ರೀ ಪರದ್ರವ್ಯಾದಿಗಳನ್ನು ಸಾಧಿಸುವನಾದರೆ ಅದನ್ನು ಮತ್ತೊಬ್ಬ ದೇವದತ್ತನು ಅಪಹರಿಸುವನು; ಅನಂತರದಲ್ಲಿ ಅವನನ್ನು ವಂಚಿಸಿ ಆ ಪದಾರ್ಥವನ್ನು ಮತ್ತೊಬ್ಬ ವಿಷ್ಣುದತ್ತನು ಅಪಹರಿಸುವನು; ಅವನನ್ನು ಮೋಸಪಡಿಸಿ ಮತ್ತೊಬ್ಬನು ತೆಗದುಕೊಳ್ಳುವನು; ಈಮೇರೆಗೆ ಮರ್ಯಾದೆಯಿಲ್ಲದೆ ಆ ಪದಾರ್ಥವು ಹೋಗುವದು; ಬಂದುಕಡೆಯಲ್ಲಿ ಸಂಸಾರಿಯು ಶೀತವಾತಗಳುಮೊದಲಾದ ಆಧ್ಯಾತ್ಮಿಕ ಆಧಿದೈವಿಕ ಆಧಿಭೌತಿಕಗಳೆಂಬ ಅನೇಕ ಬಾಧೆಗಳಿಗೆ ಪ್ರತಿಕ್ರಿಯೆಯನ್ನು ಮಾಡುವದರಲ್ಲಿ ಅಸಮರ್ಥನಾಗಿ ಅಪಾರವಾದ ಚಿಂತೆಯುಳ್ಳವನಾಗಿಹನು; ಮತ್ತೊಂದು ಕಡೆಯಲ್ಲಿ ಪರಸ್ಪರ ಕ್ರಯ ವಿಕ್ರಯಗಳನ್ನು ಮಾಡುತಲಿರುವವನಾಗಿ ಅನ್ಯರಿಂದ ಕಾಚಾಮಾತ್ರವಾದ ದ್ರವ್ಯವನ್ನಾದರೂ ಅದಕ್ಕಿಂತಲೂ ಸ್ವಲ್ಪವಾದ ಧನವನ್ನಾದರೂ ಅಪಹರಿಸುತಲಿರುವವನಾಗಿ ಆ ಧನವನ್ನು ಪುನಃ ಕೊಡದೆ ವಂಚಿಸೋಣದರಿಂದ ಅವರೊಡನೆ ದ್ವೇಷವನ್ನೈಯ್ಯುತಲಿಹನು; ಈ ಸಂಸಾರಮಾರ್ಗದಲ್ಲಿ ಪುರುಷನಿಗೆ ಅಧಿಕವಾದ ಕಷ್ಟವು ಚೋರಾದಿಗಳಿಂದ ಧನಬಾಧೆ ಮೊದಲಾದದ್ದು ಸುಖ ದುಃಖ ರಾಗ ದ್ವೇಷ ಭಯ ಅಭಿಮಾನ ಪ್ರಮಾದ ಉನ್ಮಾದ ಶೋಕ ಮೋಹ ಲೋಭ ಮಾತ್ಸರ್ಯಗಳು ಅಸೂಯೆಯು ಅವಮಾನವು ಕ್ಷುತ್ತು ಬಾಯಾರಿಕೆಯು ಮನೋವ್ಯಥೆಯು ರೋಗವು ಜನ್ಮವು ಜರಾ ಮರಣ ಮೊದಲಾದ ಉಪದ್ರವಗಳು ನಿರಂತರವೂ ಉಂಟಾಗುವವು; ಪುರುಷನು ಬಂದು ಸಮಯದಲ್ಲಿ ಭಗವನ್ಮಾಯೆಯಿಂದ ಮೋಹಿತನಾಗಿ ಸ್ತ್ರೀಯಿಂದ ಬಳ್ಳಿಗಳಿಂದ ಅವಲಂಬಿಸಲ್ಪಟ್ಟ ವೃಕ್ಷದಂತೆ ಕೋಮಲಗಳಾದ ಭುಜಗಳಿಂದ ಆಲಿಂಗನವನ್ನೈಯ್ಯಲ್ಪಟ್ಟವನಾಗಿ ವಿವೇಕರಹಿತನಾಗಿ ಆ ಸ್ತ್ರೀಯೊಡನೆ ಕ್ರೀಡಿಸುವದಕ್ಕೆ ಯೋಗ್ಯವಾದ ಗೃಹದ ನಿರ್ಮಾಣದಲ್ಲಿ ವ್ಯಾಕುಲವಾದ ಮನಸ್ಸುಳ್ಳವನಾಗಿ ಆ ಕಾಂತೆಯನ್ನು ಆಶ್ರಯಿಸೋಣದರಲ್ಲಿ ಪ್ರಸಕ್ತರಾದ ಪುತ್ರರು ಹೆಣ್ಣುಮಕ್ಕಳು ಇವರುಗಳ ಸವಿನುಡಿಗಳಿಂದಲೂ ನೋಟಗಳಿಂದಲೂ ವಿಲಾಸಗಳಿಂದಲೂ ಅಪಹರಿಸಲ್ಪಟ್ಟ ಚಿತ್ತವುಳ್ಳವನಾಗಿ ಮನೋನಿಗ್ರಹವನ್ನು ಪಡೆಯದೆ ತನ್ನ ಆತ್ಮನನ್ನು ಪಾರವಿಲ್ಲದ ಅಜ್ಞಾನದಲ್ಲಿ ಕೆಡಹುತಲಿರ್ಧಾನೆ; ಬಂದು ಸಮಯದಲ್ಲಿ ಪರಮಾಣುಮೊದಲುಗೊಂಡು ದ್ವಿಪರಾರ್ಧಪರ್ಯಂತವಾಗ ಮಹಾಕಾಲಸ್ವರೂಪವಾಗಿ ಶೀಘ್ರದಿಂದ ಸುತ್ತೋಣದರಿಂದ ಬಾಲ್ಯವೆಂದೂ ಯೌವ್ವನವೆಂದೂ ವೃದ್ಧತ್ವವೆಂದೂ ಈ ಕ್ರಮದಿಂದ ಹುಲ್ಲು ದಂಟು ಮೊದಲುಗೊಂಡು ಬ್ರಹ್ಮಪರ್ಯಂತಗಳಾದ ಪ್ರತಿಕ್ರಿಯೆಯನ್ನು ಮಾ

ಡುವದಕ್ಕೆ ಅಸಮರ್ಥಗಳಾದ ಸಕಲ ಭೂತಗಳನ್ನು ತಾನು ಪ್ರವೃತ್ತನಲ್ಲದೆ ಸಂಹರಿಸ ತಲಿರುವ ವಿಷ್ಣುಚಕ್ರದ ದೆಶೆಯಿಂದ ಭಯಪಟ್ಟ ಮನಸ್ಸುಳ್ಳವನಾಗಿ ಪುರುಷನು ಅಂಥಾ ಕಾಲಸ್ವರೂಪವಾದ ಚಕ್ರವನ್ನು ತನ್ನ ಆಯುಧವಾಗುಳ್ಳ ಭಗವಂತನಾದ ಪರಮೇಶ್ವರನಾದ ಯಜ್ಞಪುರುಷನಾದ ಶ್ರೀಹರಿಯನ್ನು ಅನಾದರಂಗೈದು ಕರಿ ಬಿಳದಾಗಿರುವ ರಣಹದ್ದುಗಳು ಬಕಪಕ್ಷಿಗಳು ಇವುಗಳೊಡನೆ ಸಮಾನರಾಗಿ ಮಹಾತ್ಮರಿಂದ ಶಾಸ್ತ್ರದಲ್ಲಿ ತಿರಸ್ಕರಿಸಲ್ಪಟ್ಟವರಾಗಿರುವ ಪಾಷಂಡದೇವತೆಗಳನ್ನು ಮೂಲಪ್ರಮಾಣವಿಲ್ಲದಿರುವ ಪಾಷಂಡಶಾಸ್ತ್ರದಿಂದ ಅಂಗೀಕರಿಸಿ ವ್ಯವಹಾರಂಗೈಯುತ್ತಲಿಧಾನೆ ; ಆ ಪುರುಷನು ಆತ್ಮವಂಚಕರಾದ ಆ ಪಾಷಂಡರಿಂದ ಯಾವಾಗ ಅತ್ಯಂತ ವಂಚಿಸಲ್ಪಟ್ಟವನಾಗುವನೋ ಆಗ ಪುನಃ ಬ್ರಾಹ್ಮಣಸಮೂಹವನ್ನು ಶೇರಿ ಅವರಿಂದ ಇವನು ಭ್ರಷ್ಟನೆಂದು ತನಿಗೆ ನಿಯಮಿಸಲ್ಪಟ್ಟ ಪುನರುಪನಯನಾದಿ ಸಂಸ್ಕಾರವನ್ನೂ ಅವರಿಗೆ ಸ್ವಭಾವಸಿದ್ಧವಾಗಿರುವ ಉಪನಯನಾದಿ ಸಂಸ್ಕಾರವನ್ನೂ ಶ್ರೌತ ಸ್ಮಾರ್ತ ಕರ್ಮಾನುಷ್ಠಾನಪೂರ್ವಕವಾದ ಭಗವತ್ಪೂಜೆಯನ್ನೂ ಸಮ್ಮತಿಪಡುವವನಾಗದೆ ಶೂದ್ರಸಮೂಹಕ್ಕೂ ವಾನರಜಾತಿಗೂ ಶ್ರುತ್ಯುಕ್ತವಾದ ಕರ್ಮಾಚರಣೆಯಲ್ಲಿ ಯೋಗ್ಯತೆಯಿಲ್ಲದೆ ಹೋದ್ದರಿಂದ ಕೇವಲ ಸ್ತ್ರೀಸಂಗವು ಪತ್ನೀ ಪುತ್ರಾದಿಗಳನ್ನು ರಕ್ಷಿಸೋಣವು ಇಷ್ಟುಮಾತ್ರವೇ ಮುಖ್ಯ ಕರ್ಮಗಳಾಗುಳ್ಳ ಶೂದ್ರಸಮೂಹವನ್ನು ಐದುತಲಿಧಾನೆ ; ಆ ಪುರುಷನು ಆ ಶೂದ್ರರಲ್ಲಿ ಅಡ್ಡಿಯಿಲ್ಲದವನಾಗಿ ಮನಸ್ಸುಬಂದಂತೆ ಕ್ರೀಡಿಸುತ ಅತ್ಯಾಸಕ್ತವಾದ ಬುದ್ಧಿಯುಳ್ಳವನಾಗಿ ಸ್ತ್ರೀಯೊಡನೆ ಕೂಡಿ ಪರಸ್ಪರ ಮುಖಾವಲೋಕನ ಮೊದಲಾದ ವಿಷಯವ್ಯಾಪಾರಗಳಿಂದ ತನ್ನ ಮೃತ್ಯುಕಾಲವನ್ನು ಮರೆಯುವನು ; ಸಂಸಾರಿಯು ಒಂದು ಕಡೆಯಲ್ಲಿ ವೃಕ್ಷಗಳಂತೆ ಇಹಲೋಕಮಾತ್ರದಲ್ಲಿ ಉಪಯೋಗಿಸುವ ಗೃಹಗಳಲ್ಲಿ ಕಪಿಯಂತೆ ಪತ್ನೀಪುತ್ರಾದಿಗಳಲ್ಲಿ ಅತ್ಯಂತ ಆಸಕ್ತನಾಗಿ ಸ್ತ್ರೀಸಂಭೋಗವೆಂಬ ಮಹೋತ್ಸವದಲ್ಲಿ ಚಪಲನಾಗಿ ಕ್ರೀಡಿಸುತಲಿಹನು ; ಪುರುಷನು ಈ ಪ್ರಕಾರದಿಂದ ಸಂಸಾರಮಾರ್ಗದಲ್ಲಿ ಸುಖದುಃಖಗಳನ್ನನುಭವಿಸುತ ಮೃತ್ಯುವೆಂಬ ಮಹಾಗಜದ ದೆಶೆಯಿಂದ ಭೀತನಾಗಿ ಪರ್ವತದಂತೆ ಭಯಂಕರವಾದ ರೋಗಾದಿ ವಿಪತ್ತಿನಲ್ಲಿ ಬೀಳುತ ಒಂದುಕಡೆಯಲ್ಲಿ ಶೀತವಾದ ವರ್ಷಗಳು ಮೊದಲಾದ ಆಧ್ಯಾತ್ಮಿಕ ಆಧಿದೈವಿಕ ಆಧಿಭೌತಿಕಗಳೆಂಬ ದುರ್ದಶೆಗಳಿಗೆ ಪ್ರತಿಕ್ರಿಯೆಯನ್ನು ಮಾಡಲೋಸುಗ ಅಶಕ್ತನಾಗಿ ಅಮಿತವಾದ ಚಿಂತೆಯಿಂದ ದುಃಖಪಡುವನಾಗಿ ಆ ರೋಗಾದಿಗಳಿಂದ ಒಂದುವೇಳೆ ಪುರುಷನು ಮುಕ್ತನಾದರೆ ಆಗ ಪುನಃ ಒಂದುಕಡೆಯಲ್ಲಿ ಪರಸ್ಪರ ಕ್ರಯ ವಿಕ್ರಯಗಳನ್ನು ಮಾಡುತ ಅನ್ಯರಿಂದ ಕಾಸುಮಾತ್ರವನ್ನಾದರೂ ಅರಕಾಸನ್ನಾದರೂ ಅಪಹರಿಸಿ ಪುನಃ ಅದನ್ನು ಕೊಡದೆ ಲೋಭದಿಂದ ವಂಚಿಸುವದರಿಂದ ಅವರೊಡನೆ ದ್ವೇಷವಂಗೈಯುತಲಿಧಾನೆ ; ಸಂಸಾರಿಯು ಒಂದುಕಡೆಯಲ್ಲಿ ನಷ್ಟಗಳಾದ ಹಾಸಿಗೆ ಕಂಬಳಿ ಇವೇ ಮೊದಲಾದ ಭೋಗಸಾಮಗ್ರಿಗಳುಳ್ಳವನಾಗಿ ಪುನಃ ಆ ವಸ್ತುಗಳನ್ನು ಯಾಚನಾಮುಖದಿಂದ ಅನ್ಯರಿಂದ ಪಡೆಯುವನಾಗದೆ ಯಾವಾಗ ಅನ್ಯರಲ್ಲಿ ತನಗೆ ಇಷ್ಟಗಳಾದ ಆ ವಸ್ತುಗಳನ್ನು ಅಪಹರಿಸುವದರಲ್ಲಿ ನಿಶ್ಚಯಿಸಲ್ಪಟ್ಟ ಬುದ್ಧಿಯುಳ್ಳವನಾಗುವನೋ ಆಗ ಅನ್ಯರಿಂದ ಅವಮಾನವನ್ನು ಪಡೆಯುತಲಿಧಾನೆ; ಪುರುಷನು ಈ ಪ್ರಕಾರದಿಂದ ಜನರಲ್ಲಿ ಪರಸ್ಪರ ಧನನಿಮಿತ್ತವಾಗಿ ವೈರವನ್ನು ಸಂಪಾದಿಸಿದವನಾದಾಗ್ಯೂ ಪೂರ್ವವಾಸನೆಯಿಂದ ಆ ಜನರೊಡನೆ ಪುನಃ ವಿವಾಹಾದಿ ಸಂಬಂಧವನ್ನೈದುತಲಿಧಾನೆ ; ಪುನಃ ವಿಯೋಗಕಾಲಬಂದಲ್ಲಿ ಅವರನ್ನು ತ್ಯಾಗಂಗೈಯುತಲಿಧಾನೆ ; ಈ ಸಂಸಾರಮಾರ್ಗದಲ್ಲಿ ಯಾವವನು ನಾನಾವಿಧಗಳಾದ ದುಃಖಗಳಿಂದಲೂ ವಿಘ್ನಗಳಿಂದಲೂ ಪೀಡಿಸಲ್ಪಟ್ಟವನಾಗಿ ರೋಗಾದಿ ವಿಪತ್ತುಗಳನ್ನೈದಿ ಮೃತನಾಗುವನೋ ಆ ಪುರುಷನನ್ನು ಇತರನಾದ ಪುರುಷನು ಅಲ್ಲೇ ಪರಿತ್ಯಾಗಂಗೈದು ಹುಟ್ಟಹುಟ್ಟದವರನ್ನು ಪರಿಗ್ರಹಿಸಿಕೊಂಡು ಶೋಕಪಡುತ ಮೋಹಪಡುತ ಚಿಂತಿಸುತ ಕೂಗುತ ಸಂತೋಷಪಡುತ ಗಾನಂಗೈಯುತ ಈರೀತಿ ಬದ್ಧನಾಗಿ ಸಜ್ಜನರಿಗೆ ವ್ಯತಿರಿಕ್ತನಾಗಿ ಆ ಸಂಸಾರಮಾರ್ಗದಿಂದ ಹಿಂದಕ್ಕೆ ತಿರುಗುವನಾಗದೆ ಇಧಾನೆ ; ನಾನಾಪ್ರಕಾರವಾದ ಈ ಜೀವಸಮೂಹವು ಯಾವ ವಾಸುದೇವನಿಂದ ನಿರ್ಮಿಸಲ್ಪಟ್ಟತೋ ಅಂಥಾ ವಾಸುದೇವನನ್ನೇ ಈ ದುಸ್ಸಹವಾದ ಸಂಸಾರಮಾರ್ಗಕ್ಕೆ ತಾರಕನೆಂದು ಮುನಿಗಳು ಹೇಳುವರು ; ಅಹಿಂಸಾದಿ ಧರ್ಮಗಳುಳ್ಳವರಾಗಿ ವಿಷಯ ಪರಾಙ್ಮುಖವಾದ ಚಿತ್ತವುಳ್ಳವರಾಗಿರುವ ಮಹಾಮುನಿಗಳು ಯಾವ ಯೋಗರಹಸ್ಯವನ್ನು ಚನ್ನಾಗಿ ಬಲ್ಲರೋ ಅಂಥಾ ಯೋಗರಹಸ್ಯವನ್ನು ಜೀವ

ಸಮೂಹವು ಪಡೆಯುವದಿಲ್ಲ; ಬಗ್ಗ ಜಗಳನ್ನು ಜಯಿಸಿದವನಾಗಿ ಮಹಾಶೂರನಾಗಿರುವ ರಾಜಶ್ರೇಷ್ಠನು ಈ ಯೋಗಶಾಸ್ತ್ರಕ್ರಮವನ್ನು ಐಯುವವನಾಗವದಿಲ್ಲ; ತಾವು ಯಾವ ಭೂಮಿಯನ್ನು ಬಿಟ್ಟು ಪರಲೋಕವನ್ನೈದುವರೋ ಅಂಥಾ ಭೂಮಿಗೋಸ್ಕರ ಪ್ರಯತ್ನಂಗೈದು ಇದು ನನ್ನ ಭೂಮಿಯೆಂದು ಪರಸ್ಪರ ವೈರವುಳ್ಳವರಾಗಿ ಮಹಾಯುದ್ಧದಲ್ಲಿ ಶಸ್ತ್ರಾಸ್ತ್ರಗಳಿಂದ ಪ್ರಹರಿಸಲ್ಪಟ್ಟವರಾಗಿ ಮಲಗುವರು! ಸಂಸಾರಿಯು ಕರ್ಮವೆಂಬ ಬಳ್ಳಿಯನ್ನವಲಂಬಿಸಿಕೊಂಡು ಅದರ ಬಲದಿಂದ ರೋಗಾದಿ ವಿಪತ್ತುಗಳಿಂದ ಅತಿ ಪ್ರಯಾಸದಿಂದ ಬಿಡಲ್ಪಟ್ಟವನಾದರೆ ಆಗ ಪುನಃ ಪ್ರಪಂಚವ್ಯವಹಾರದಲ್ಲೇ ಇರುವನು; ಒಂದುವೇಳೆ ಆ ರೋಗಾದಿಗಳಿಂದ ಮೃತನಾಗಿ ನರಕಯಾತನೆಯನ್ನನುಭವಿಸಿ ಕರ್ಮಬಲದಿಂದ ಬಿಡಲ್ಪಟ್ಟವನಾದಾಗ್ಯೂ ಪುನಃ ಈ ಸಂಸಾರಮಾರ್ಗದಲ್ಲೇ ಬಿದ್ದು ಪುನಃ ಆ ನರಕದಲ್ಲಿರುವ ಜೀವಸಮೂಹವನ್ನೈದುವನು; ಇದೇರೀತಿ ಪುರುಷನು ಸ್ವರ್ಗಾದಿ ಲೋಕಗಳಲ್ಲಿರುವವನಾದಾಗ್ಯೂ ಕರ್ಮವಶದಿಂದ ಭೂಲೋಕವನ್ನು ಹೊಂದಿ ಪುನಃ ಜೀವಸಮೂಹವನ್ನೈದುವನು; ಈರೀತಿ ಶುಕಮುನಿಯು ಆ ಭರತಯೋಗಿಯಿಂದ ಸಂಸಾರಮಾರ್ಗವು ಅತ್ಯಂತ ದುಃಖರೂಪವೆಂಬ ತಾತ್ಪರ್ಯದಿಂದ ನಿರೂಪಿಸಲ್ಪಟ್ಟ ಮಹಾರಣ್ಯವರ್ಣನಾರೂಪಗಳಾದ ವಚನಗಳಿಗೆ ಅರ್ಥವನ್ನು ನಿರೂಪಿಸಿ ಆ ಭರತನ ಚರಿತ್ರೆಯನ್ನು ಪ್ರಕಾಶಂಗೈವ ಶ್ಲೋಕಗಳ ಅರ್ಥವನ್ನು ನಿರೂಪಿಸುವನು! ಎಲೈ ಪರೀಕ್ಷಿದ್ರಾಯನೆ, ಯಾವ ಭರತರಾಯನು ಶ್ರೀವಾಸುದೇವನಲ್ಲೇ ಅತಿ ಭಕ್ತಿಯುಳ್ಳವನಾದಕಾರಣ ಯೌವನಕಾಲದಲ್ಲೇ ಮನೋಹರವಾದ ಬಿಡುವದಕ್ಕೆ ಅಶಕ್ಯರಾದ ಪತ್ನೀಪುತ್ರರನ್ನು ರಾಜ್ಯವನ್ನು ಸಹ ಮಲವನ್ನಂತೆ ತುಚ್ಛಬುದ್ಧಿಯಿಂದ ತ್ಯಾಗಂಗೈದನೋ ಋಷಭಮೂರ್ತಿಯ ಪುತ್ರನಾದ ರಾಜಶ್ರೇಷ್ಠನಾದ ಆ ಭರತರಾಯನ ಮಾರ್ಗವನ್ನು ಯಾವ ಅರಸು ಗರುಡನ ಮಾರ್ಗವನ್ನು ನೊಣದಂತೆ ಮನಸ್ಸಿನಿಂದಲಾದರೂ ಅನುಸರಿಸುವದಕ್ಕೆ ಯೋಗ್ಯನಾದಾನು? ಭರತರಾಯನು ಬಿಡಲಶಕ್ಯವಾದ ಭೂಮಿ ಧನ ಸ್ವಜನ ಪತ್ನೀಪುತ್ರರನ್ನು ದೇವತೆಗಳಿಂದಲೂ ಅಪೇಕ್ಷಿಸುವದಕ್ಕೆ ಯೋಗ್ಯಗಳಾಗಿ ತನ್ನ ದಯವನ್ನು ಅಪೇಕ್ಷಿಸಿ ತನ್ನನ್ನೇ ನೋಡುವಳಾಗಿರುವ ರಾಜ್ಯಲಕ್ಷ್ಮಿಯನ್ನು ಅಪೇಕ್ಷಿಸುವನಾಗಲಿಲ್ಲವೆಂಬದು ಯಾವದುಂಟೋ ಆ ಅರ್ಥವು ಆ ಭರತರಾಯನಿಗೆ ಯುಕ್ತವೇಸರಿ; ಶ್ರೀವಾಸುದೇವನ ಶೇವೆಯಲ್ಲಿ ಆಸಕ್ತವಾದ ಮನಸ್ಸುಳ್ಳ ಮಹಾತ್ಮರಿಗೆ ಮೋಕ್ಷವು ನಿಕೃಷ್ಟವಾಗಿ ತೋರುವದಾದಕಾರಣ ಆ ಭರತರಾಯನಿಗೆ ಎಂತು ಆ ಪುತ್ರಾದಿಗಳಲ್ಲಿ ಅಪೇಕ್ಷೆಪುಟ್ಟುವದು? ಯಜ್ಞಸ್ವರೂಪನಾಗಿ ಧರ್ಮಕ್ಕೆ ಅಧಿಪತಿಯಾಗಿ ಯಜ್ಞಾದಿ ಪುಣ್ಯಫಲವನ್ನು ಕೊಡುವವನಾಗಿ ವಿಧ್ಯುಕ್ತವಾದ ಕರ್ಮಾನುಷ್ಠಾನದಲ್ಲಿ ನಿಪುಣನಾಗಿ ಯೋಗಶಾಸ್ತ್ರದಿಂದ ಧ್ಯಾನಂಗೈಯ್ಯಲು ಯೋಗ್ಯನಾಗಿ ಜ್ಞಾನವೆಂಬ ಮುಖ್ಯ ಫಲವುಳ್ಳವನಾಗಿ ಮಾಯೆಗೆ ನಿಯಾಮಕನಾಗಿ ಸಕಲ ಜೀವಸಮೂಹಗಳಿಗೂ ಪ್ರೇರಕನಾಗಿರುವ ಶ್ರೀಹರಿಗೋಸ್ಕರ ನಮಸ್ಕಾರವು ಎಂದು ಘಟ್ಟಿಯಾಗಿ ಆ ಮೃಗದೇಹವನ್ನು ಬಿಡುವ ಸಮಯದಲ್ಲೂಕೂಡ ಯಾವ ಭರತರಾಯನು ಸಂಕೀರ್ತನಂಗೈದನೋ ಆ ಭರತರಾಯನ ಮಾರ್ಗವನ್ನು ಯಾವ ಅರಸು ಅನುಸರಿಸುವದಕ್ಕೆ ಯೋಗ್ಯನಾದಾನು! ಭಗವದ್ಭಕ್ತರಿಂದ ಶ್ಲಾಘಿಸಲ್ಪಟ್ಟ ಅತಿನಿರ್ಮಲಗಳಾದ ಗುಣಗಳೂ ಕರ್ಮಗಳೂ ಉಳ್ಳ ರಾಜಶ್ರೇಷ್ಠನಾದ ಭರತರಾಯನ ಚರಿತ್ರೆಯನ್ನು ವಿಸ್ತರಿಸುವ ಶುಭಕರವಾದ ಆಯುರ್ವೃದ್ಧಿಯನ್ನುಂಟುಮಾಡುವ ಸಂಪತ್ಕರವಾದ ಯಶಸ್ಕರವಾದ ಸ್ವರ್ಗ ಮೋಕ್ಷಗಳನ್ನೀವ ಈ ಉಪಾಖ್ಯಾನವನ್ನು ಯಾವ ಪುರುಷನು ಕೇಳುವನೋ ಯಾವ ಪುರುಷನು ಹೇಳುವನೋ ಯಾವವನು ಕೇಳಿ ಸಂತೋಷಪಡುವನೋ ಆ ಪುರುಷನು ತನ್ನಿಂದ ತಾನೇ ಸಕಲ ಇಷ್ಟಾರ್ಥಗಳನ್ನು ಪಡೆಯುವನು; ಅನ್ಯರಿಂದ ಒಂದು ಇಷ್ಟಾರ್ಥವನ್ನಾದರೂ ಅಪೇಕ್ಷಿಸುವವನಾಗನು" ಎಂದು ನುಡಿದನು.

೧೫ನೇ ಅಧ್ಯಾಯ.

ಭರತರಾಯನ ವಂಶಸ್ಥರಾದ ಅರಸುಗಳ ಉತ್ಪತ್ತಿಯು.

"ಎಲೈ ಪರೀಕ್ಷಿದ್ರಾಯನೆ, ದುಷ್ಟರಾದ ಕೆಲವುಮಂದಿ ಪಾಷಂಡಿಗಳು ಋಷಭರಾಯನಿಂದ ಆಶ್ರಯಿಸಲ್ಪಟ್ಟ ಜೀವನ್ಮುಕ್ತಮಾರ್ಗವನ್ನು ಅನುಸರಿಸುತಲಿರುವ ಯಾವ ಸುಮತಿನಾಮಕನಾದ ರಾಜಶ್ರೇಷ್ಠನನ್ನು ನೋಡಿ ಶ್ರುತಿ

ಸಮ್ಮತವಲ್ಲದಿರುವ ದುಷ್ಟದೇವತೆಯನ್ನು ತಮ್ಮ ಬುದ್ಧಿಯಿಂದ ಕಲಿಯುಗದಲ್ಲಿ ಕಲ್ಪಿಸುವವರಾಗುವರೋ ಅಂಥಾ ಮಹಾಮಹಿಮೆಯುಳ್ಳ ಭರತನ ಕುಮಾರನಾದ ಸುಮತಿನಾಮಕನಾದ ಅರಸು ರಾಜ್ಯವನ್ನು ಪರಿಪಾಲಿಸಿದನು ; ಸುಮತಿರಾಯನ ದೆಶೆಯಿಂದ ವೃದ್ಧಸೇನಾದೇವಿಯಲ್ಲಿ ದೇವತಾಜಿತ್ತೆಂಬ ಅರಸು ಹುಟ್ಟಿದನು ; ಆ ದೇವತಾಜಿತ್ತಿನಿಂದ ಆಸುರೀದೇವಿಯಲ್ಲಿ ದೇವದ್ಯುಮ್ನನೆಂಬ ಅರಸು ಹುಟ್ಟಿದನು ; ಆ ದೇವದ್ಯುಮ್ನನಿಗೆ ಧನುಮತೀದೇವಿಯಲ್ಲಿ ಪರಮೇಷ್ಠಿಯೆಂಬ ಪುತ್ರನು ಜನಿಸಿದನು ; ಆ ಪರಮೇಷ್ಠಿರಾಯನಿಗೆ ದೇವಯಾಜನೆಂಬ ಪುತ್ರನು ಹುಟ್ಟಿದನು ; ಆ ದೇವಯಾಜನಿಗೆ ಸುವರ್ಚಲಾದೇವಿಯಲ್ಲಿ ಪ್ರತೀಹನೆಂಬ ಪುತ್ರನು ಜನಿಸಿದನು ; ಆ ಪ್ರತೀಹರಾಯನು ಬಹುಮಂದಿ ಶಿಷ್ಯರಿಗೆ ಆತ್ಮವಿದ್ಯೆಯನ್ನು ವಿವರಿಸಿ ಉಪದೇಶಮಾಡಿದು ಆ ತತ್ವೋಪದೇಶದಿಂದಲೇ ತಾನು ಪರಿಶುದ್ಧನಾಗಿ ಶ್ರೀ ವಾಸುದೇವನನ್ನು ಚಿತ್ತದಲ್ಲಿ ಧ್ಯಾನಮಾಡಿದನು ; ಆ ಪ್ರತೀಹರಾಯನಿಗೆ ಸುವರ್ಚಲಾದೇವಿಯಲ್ಲಿ ಪ್ರತಿಹರ್ತೃ ಪ್ರಸ್ತೋತಾ ಉದ್ಗಾತರೆಂಬ ನಾಮಧೇಯಗಳುಳ್ಳ ಯಜ್ಞಕರ್ಮಗಳಲ್ಲಿ ಅತಿ ನಿಪುಣರಾದ ಮೂವರು ಪುತ್ರರು ಜನಿಸಿದರು; ಆ ಪ್ರತಿಹರ್ತೃವೆಂಬ ಅರಸಿಗೆ ಸ್ತುತಿದೇವಿಯಲ್ಲಿ ಅಜನು ಭೂಮನು ಎಂಬ ಇಬ್ಬರು ಪುತ್ರರು ಜನಿಸಿದರು ; ಆ ಭೂಮನೆಂಬ ಅರಸಿಗೆ ಋಷಿಕುಲ್ಯಾದೇವಿಯಲ್ಲಿ ಉದ್ಗೀಥನೆಂಬ ಪುತ್ರನು ಹುಟ್ಟಿದನು ; ಆ ಉದ್ಗೀಥನಿಗೆ ದೇವಕುಲ್ಯಾದೇವಿಯಲ್ಲಿ ಪ್ರಸ್ತಾವನೆಂಬ ಪುತ್ರನು ಹುಟ್ಟಿದನು ; ಆ ಪ್ರಸ್ತಾವನಿಗೆ ನಿಯುತ್ಸಾದೇವಿಯಲ್ಲಿ ವಿಭುವೆಂಬ ಪುತ್ರನು ಜನಿಸಿದನು ; ವಿಭುರಾಯನಿಗೆ ಭಾರತೀದೇವಿಯಲ್ಲಿ ಪೃಥುಷೇಣನೆಂಬ ಪುತ್ರನು ಜನಿಸಿದನು ; ಆ ಪೃಥುಷೇಣನಿಗೆ ಆಕೂತಿದೇವಿಯಲ್ಲಿ ನಕ್ತನೆಂಬ ಪುತ್ರನು ಜನಿಸಿದನು ; ಆ ನಕ್ತನಿಗೆ ಧೃತಿದೇವಿಯಲ್ಲಿ ರಾಜಶ್ರೇಷ್ಠನಾದ ಮಹಾ ಕೀರ್ತಿವಂತನಾದ ಗಯನೆಂಬ ಅರಸು ಜನಿಸಿದನು ; ಆ ಗಯರಾಯನು ಲೋಕರಕ್ಷಣೆಯನ್ನು ಮಾಡಲಿಚ್ಛೆಯಿಂದ ಸತ್ವಗುಣವನ್ನು ಧರಿಸಿರುವ ಭಗವಂತನಾದ ಶ್ರೀ ಮಹಾವಿಷ್ಣುವಿನ ಅಂಶಭೂತನಾಗಿ ಆತ್ಮತತ್ವಾದಿ ಲಕ್ಷಣಗಳೊಡನೆ ಕೂಡಿದವನಾಗಿ ಮಹಾಪುರುಷಭಾವವನ್ನೈದಿದನು ; ಆ ಗಯಮಹಾರಾಯನು ಪ್ರಜೆಗಳನ್ನು ಪರೋಪದ್ರವವಿಲ್ಲದಂತೆ ರಕ್ಷಣೆಮಾಡುವುದರಿಂದಲೂ ಇಷ್ಟಾರ್ಥಗಳನ್ನು ಕೊಟ್ಟು ಪೋಷಿಸೋಣ ತನ್ನ ರಾಜನೀತಿಯಿಂದ ಸಂತೋಷಪಡಿಸೋಣ ಪ್ರಿಯವಚನಗಳಿಂದ ಲಾಲನಮಾಡೋಣ ಈಪ್ರಕಾರದಿಂದ ಸನ್ಮಾರ್ಗದಲ್ಲಿ ನಡೆಯಬೇಕೆಂದು ಪ್ರಜೆಗಳಿಗೆ ಆಜ್ಞಾಪಿಸೋಣ ಇವು ಮೊದಲಾದ ರಾಜಧರ್ಮಗಳಿಂದಲೂ ಯಜ್ಞಮೊದಲಾದ ಗೃಹಸ್ಥಾಶ್ರಮಧರ್ಮಗಳಿಂದಲೂ ಭಗವಂತನಾದ ಸಗುಣ ನಿರ್ಗುಣಸ್ವರೂಪನಾದ ಪರಬ್ರಹ್ಮನಾದ ಶ್ರೀ ವಾಸುದೇವನಲ್ಲಿ ಸರ್ವಭಾವದಿಂದಲೂ ಸಮರ್ಪಿಸಲ್ಪಟ್ಟದ್ದಾದಕಾರಣ ಪಾರಮಾರ್ಥಿಕವಾಗಿ ರಾಜಧರ್ಮವೆಂದೂ ಗೃಹಸ್ಥಾಶ್ರಮಧರ್ಮವೆಂದೂ ಉಭಯವಿಧವಾಗಿರುವ ಕರ್ಮದಿಂದಲೂ ಬ್ರಹ್ಮಜ್ಞಾನಿಗಳ ಚರಣಸೇವೆಯಿಂದ ಸಂಪಾದಿಸಲ್ಪಟ್ಟ ಭಗವದ್ಭಕ್ತಿಯೋಗದಿಂದಲೂ ಅತ್ಯಂತ ಸಾರಯುಕ್ತವಾದದ್ದಾದಕಾರಣ ಪರಿಶುದ್ಧವಾದ ಬುದ್ಧಿಯುಳ್ಳವನಾಗಿ ದೇಹಾದಿಗಳಲ್ಲಿ ನಷ್ಟವಾದ ಅಹಂಕಾರವುಳ್ಳ ತನ್ನ ಮನಸ್ಸಿನಲ್ಲಿ ತನ್ನಿಂದ ತಾನೇ ಸಾಕ್ಷಾತ್ಕರಿಸಿರುವ ಪರಬ್ರಹ್ಮನಲ್ಲಿ ತನ್ನ ಐಕ್ಯಾನುಭವವುಳ್ಳವನಾದಕಾರಣ ದೇಹ ರಾಜ್ಯಾದಿಗಳಲ್ಲಿ ಅಭಿಮಾನವಿಲ್ಲದವನಾಗಿ ಭೂಮಿಯನ್ನು ಪಾಲನಮಾಡಿದನು ! ಎಲೈ ಪರೀಕ್ಷಿದ್ರಾಯನೆ, ಆ ಗಯಮಹಾರಾಯನ ಕೀರ್ತಿಪ್ರಕಾಶಕವಾದ ಈ ಶ್ಲೋಕದ ಅರ್ಥವನ್ನು ಪುರಾಣಜ್ಞರಾದ ಮುನಿಗಳು ಹ್ಯಾಗೆ ಹೇಳುವರೆಂದರೆ : ಯಾವ ಅರಸು ತನ್ನ ಸತ್ಕರ್ಮಗಳಿಂದ ಗಯಮಹಾರಾಯನನ್ನು ಅನುಸರಿಸಿ ನಡೆಯುವದಕ್ಕೆ ಶಕ್ತನಾದಾನು ? ಯಜ್ಞಕರ್ತೃತ್ವಾದಿ ಧರ್ಮಗಳೊಡನೆ ಯುಕ್ತನಾಗಿ ಭಗವಂತನ ಅಂಶಾವತಾರನಾಗಿರುವ ಆ ಗಯಮಹಾರಾಯನನ್ನು ಹೊರ್ತು ಅನ್ಯನಾದ ಅರಸು ಯಜ್ಞಕರ್ತೃವಾಗಿ ಸರ್ವತ್ರ ಬಹುಮಾನಕ್ಕೆ ವಿಷಯನಾಗಿ ಸರ್ವಜ್ಞನಾಗಿ ಸಕಲಧರ್ಮ ಪಾಲಕನಾಗಿ ಲಕ್ಷ್ಮಿಗೆ ಆವಾಸಭೂತನಾಗಿ ಸಜ್ಜನರ ಸಭೆಗೆ ನಿಯಾಮಕಭೂತನಾಗಿ ಮಹಾತ್ಮರಿಗೆ ಸೇವಕನಾಗಿ ಈ ಲೋಕದಲ್ಲಿಧಾನೆ ; ಮಹಾ ಪತಿವ್ರತೆಯರಾದ ಯಥಾರ್ಥಗಳಾದ ಆಶೀರ್ವಾದಗಳುಳ್ಳ ದಕ್ಷಪ್ರಜೇಶನಿಗೆ ಪುತ್ರಿಯರಾದ ಶ್ರದ್ಧಾದೇವಿ ಮೈತ್ರೀದೇವಿ ದಯಾದೇವಿ ಇವರೇ ಮೊದಲಾಗುಳ್ಳ ದೇವತಾಸ್ತ್ರೀಯರು ಉತ್ಕೃಷ್ಟವಾದ ಪ್ರೀತಿಯೊಡನೆ ಕೂಡಿ ಗಂಗಾದಿ ಸಕಲ ನದೀತೀರ್ಥಗಳಿಂದ ಯಾವ ಗಯಮಹಾರಾಯನಿಗೆ ಪಟ್ಟಾಭಿಷೇಕವನ್ನು ಮಾಡಿದರೋ ಭೂಮಿಯು ನಿಷ್ಕಾಮನಾದ ಯಾವ ಗಯ

ಮಹಾರಾಯನ ಗುಣಸಮೂಹವೆಂಬ ಕಿರಣದಿಂದ ಪ್ರವಿಸುತಲಿರುವ ಕೆಚ್ಚಲುಳ್ಳವಳಾಗಿ ಯಾವವನ ರಾಜ್ಯದಲ್ಲಿರುವ ಪ್ರಜೆಗಳ ಇಷ್ಟಾರ್ಥಗಳನ್ನು ಕರೆದಳೋ ಅಂಥಾ ಗಯಮಹಾರಾಯನನ್ನು ಯಾವ ಅರಸು ಗುಣಗಳಿಂದ ಅನುಸರಿಶ್ಯಾನು? ದೇವತೆಗಳು ಯಾವ ಗಯಮಹಾರಾಯನಿಗೆ ಅಪೇಕ್ಷೆಯಿಲ್ಲದಿದ್ದಾಗ್ಯೂ ಇಷ್ಟಾರ್ಥಗಳನ್ನು ಕೊಟ್ಟರೋ ಶತ್ರುಗಳಾದ ಅರಸುಗಳು ತಾವು ಯುದ್ಧದಲ್ಲಿ ಬಾಣಗಳಿಂದ ಜಯಿಸಲ್ಪಟ್ಟವರಾಗಿ ಯಾವ ಗಯಮಹಾರಾಯನಿಗೆ ಕಪ್ಪವನ್ನು ಸಮರ್ಪಿಸಿದರೋ ಧರ್ಮಪಾಲನದಿಂದಲೂ ದಕ್ಷಿಣಾದಿಗಳಿಂದಲೂ ಬ್ರಾಹ್ಮಣರು ಯಾವ ರೀತಿಯಿಂದ ತಾವು ಪೂಜಿಸಲ್ಪಟ್ಟರೋ ಅದೇರೀತಿ ಲೋಕಾಂತರಗಳಲ್ಲಿ ತಮ್ಮಿಂದ ಸಂಪಾದಿಸಲ್ಪಟ್ಟಿರುವ ಧರ್ಮಾನುಷ್ಠಾನ ಫಲಗಳಲ್ಲಿ ಷಷ್ಠಾಂಶವಾದ ಧರ್ಮಫಲವನ್ನು ಯಾವ ಗಯಮಹಾರಾಯನಿಗೆ ಸಮರ್ಪಿಸಿದರೋ ಅಂಥಾ ಗಯಮಹಾರಾಯನನ್ನು ಗುಣಗಳಿಂದ ಯಾವವನು ಅನುಸರಿಶ್ಯಾನು? ಬಹು ಸೋಮಪಾನವುಳ್ಳ ಯಾವ ಗಯಮಹಾರಾಯನ ಯಜ್ಞದಲ್ಲಿ ದೇವೇಂದ್ರನು ಹವಿರ್ಭಾಗಗಳಿಂದ ಮದಿಸಿರಲು ಯಜ್ಞಸ್ವರೂಪನಾದ ಭಗವಂತನು ಶ್ರದ್ಧೆಯಿಂದ ಪರಿಶುದ್ಧವಾದ ಭಕ್ತಿಯೋಗದಿಂದ ಸಮರ್ಪಿಸಲ್ಪಟ್ಟ ಯಜ್ಞಫಲವನ್ನು ಪೂಜೆಯನ್ನಂತೆ ಪ್ರತ್ಯಕ್ಷವಾಗಿ ತಾನು ಸ್ವೀಕರಿಸಿದನೋ ಅಂಥಾ ಗಯಮಹಾರಾಯನನ್ನು ಕರ್ಮಗಳಿಂದ ಯಾವವನು ಅನುಸರಿಶ್ಯಾನು? ಯಾವ ಶ್ರೀಹರಿಯನ್ನು ಪ್ರೀತಿಪಡಿಸೋಣದರಿಂದ ಬ್ರಹ್ಮದೇವನೆ ಮೊದಲಾದ ಸಮಸ್ತ ದೇವತೆಗಳು ಪಕ್ಷ್ಯಾದಿಗಳು ಮನುಷ್ಯರು ಬಳ್ಳಿಗಳು ತೃಣಪರ್ಯಂತಗಳಾದ ಸಕಲ ಭೂತಗಳು ಸಹಾ ತಕ್ಷಣವಲ್ಲೇ ಸಂತೋಷಪಡುವವ್ರೋ ಸರ್ವಾಂತರ್ಯಾಮಿಯಾದ ಅಂಥಾ ಶ್ರೀಹರಿಯು ತಾನು ಪ್ರೀತಿಸ್ವರೂಪನಾಗಿಯೇ ಗಯಮಹಾರಾಯನ ಯಜ್ಞದಲ್ಲಿ ಪ್ರತ್ಯಕ್ಷನಾಗಿ ನಾನು ತೃಪ್ತನಾದೆನೆಂದು ಅತಿಸ್ಫುಟವಾಗಿ ಪ್ರೀತಿಯನ್ನು ಪ್ರಕಾಶಂಗೈದನು; ಅಂಥಾ ಗಯಮಹಾರಾಯನಿಂದ ಜಯಂತೀದೇವಿಯಲ್ಲಿ ಚಿತ್ರರಥ ಸುದಾತಿ ಅವರೋಧನರೆಂಬ ಮೂವರು ಪುತ್ರರು ಜನಿಸಿದರು; ಆ ಚಿತ್ರರಥನಿಂದ ಊರ್ಣಾದೇವಿಯಲ್ಲಿ ಸಂಮ್ರಾಟ್ಟೆಂಬ ಅರಸು ಜನಿಸಿದನು; ಆ ಸಂಮ್ರಾಟ್ಟೆಂಬ ಅರಸಿನಿಂದ ಉತ್ಕಲಾದೇವಿಯಲ್ಲಿ ಮರೀಚಿಯೆಂಬ ಅರಸು ಜನಿಸಿದನು; ಆ ಮರೀಚಿಗೆ ಬಿಂದುಮತೀದೇವಿಯಲ್ಲಿ ಬಿಂದುಮಂತನೆಂಬ ಪುತ್ರನು ಜನಿಸಿದನು; ಆ ಬಿಂದುಮಂತನಿಂದ ಸರಘಾದೇವಿಯಲ್ಲಿ ಮಧುವೆಂಬ ಅರಸು ಜನಿಸಿದನು; ಆ ಮಧುರಾಯನಿಗೆ ಸುಮನೋದೇವಿಯಲ್ಲಿ ವೀರವ್ರತನು ಜನಿಸಿದನು; ಆ ವೀರವ್ರತನಿಂದ ಭೋಜಾದೇವಿಯಲ್ಲಿ ಮಂಥು ಪ್ರಮಂಥುಗಳೆಂದು ಈರ್ವರು ಪುತ್ರರು ಜನಿಸಿದರು; ಆ ಮಂಥುರಾಯನಿಗೆ ಸತ್ಯಾದೇವಿಯಲ್ಲಿ ಭೌವ್ವನನೆಂಬ ಪುತ್ರನು ಜನಿಸಿದನು; ಆ ಭೌವ್ವನನಿಂದ ದೋಷಾದೇವಿಯಲ್ಲಿ ತ್ವಷ್ಟ್ರವೆಂಬ ಪುತ್ರನು ಜನಿಸಿದನು; ತ್ವಷ್ಟ್ರವಿಗೆ ವಿರೋಚನಾದೇವಿಯಲ್ಲಿ ವಿರಜನೆಂಬ ಪುತ್ರನು ಜನಿಸಿದನು; ವಿರಜಮಹಾರಾಯನಿಗೆ ವಿಷೂಚೀದೇವಿಯಲ್ಲಿ ಶತಜಿತ್ತೇ ಜ್ಯೇಷ್ಠನಾಗುಳ್ಳ ನೂರುಮಂದಿ ಪುತ್ರರು ಒಬ್ಬ ಹೆಣ್ಣುಮಗಳು ಸಹ ಹುಟ್ಟಿದರು! ಎಲೈ ಪರೀಕ್ಷಿದ್ರಾಯನೇ, ಇದು ಆ ವಿರಜರಾಯನ ಕೀರ್ತಿಪ್ರಕಾಶವಾದ ಶ್ಲೋಕಾರ್ಥವು; ಕಡೆಯಲ್ಲಿ ಹುಟ್ಟಿದ ಆ ವಿರಜರಾಯನು ಪ್ರಿಯವ್ರತರಾಯನ ಈ ವಂಶವನ್ನು ದೇವತೆಗಳ ಸಮೂಹವನ್ನು ವಿಷ್ಣುವಂತೆ ಪಾಲಿಸುವ ತನ್ನ ಕೀರ್ತಿಯಿಂದ ಅತಿಶಯವಾಗಿ ಅಲಂಕರಿಸಿದನು" ಎಂದು ನುಡಿದನು.

೧೬ನೇ ಅಧ್ಯಾಯ.

ಸಪ್ತದ್ವೀಪ ಸಪ್ತಸಮುದ್ರಗಳ ಪ್ರಮಾಣ ಸ್ಥಿತಿ ಲಕ್ಷಣಗಳು—ಮೇರುವಿನ ಪ್ರಮಾಣಸ್ಥಿತಿಯು.

ಅನಂತರದಲ್ಲಿ ಪರೀಕ್ಷಿದ್ರಾಯನು ಮೊದಲು ಪ್ರಿಯವ್ರತರಾಯನ ಕಥೆಯನ್ನು ನಿರೂಪಿಸಿದ ಶುಕಮುನಿಯಿಂದ ಸಂಕ್ಷೇಪದಿಂದ ನಿರೂಪಿಸಲ್ಪಟ್ಟ ಸಪ್ತದ್ವೀಪಾದಿ ಸ್ವರೂಪವನ್ನು ವಿಸ್ತರದಿಂದ ಕೇಳಲಿಚ್ಛೆಯುಳ್ಳವನಾಗಿ ಶುಕಮುನಿಯನ್ನು ಕುರಿತು "ಎಲೈ ಪೂಜ್ಯನಾದ ಶುಕಮುನಿಯೆ, ಎಷ್ಟುಪರ್ಯಂತವು ಸೂರ್ಯನು ಪ್ರಕಾಶಿಸುವನು? ಈ ಚಂದ್ರನು ನಕ್ಷತ್ರಸಮೂಹಗಳೊಡನೆಕೂಡಿ ಶುಕ್ಲಪಕ್ಷ ಕೃಷ್ಣಪಕ್ಷಗಳಲ್ಲಿ ಎಷ್ಟುಪರ್ಯಂತವು ಕಾಣಲ್ಪಡುತಲಿಧಾ

ನೋ ಅಷ್ಟುಪರ್ಯಂತವೂ ಭೂಮಂಡಲವು ವಿಸ್ತಾರವಾಗಿದೆಯೆಂದು ನಿನ್ನಿಂದ ನಿರೂಪಿಸಲ್ಪಟ್ಟಿತು ; ಆ ಭೂಮಂಡಲದಲ್ಲಿ ಪ್ರಿಯವ್ರತರಾಯನ ರಥಚಕ್ರಗಳ ಸಂಚಾರದಿಂದುಂಟಾದ ಹಳ್ಳಗಳಿಂದ ಯಾವ ಸಪ್ತಸಮುದ್ರಗಳು ಕಲ್ಪಿಸಲ್ಪಟ್ಟವೋ ಆ ಸಮುದ್ರಗಳಿಂದ ಈ ಭೂಮಿಯಲ್ಲಿ ಅತಿಶಯದಿಂದ ಸಪ್ತದ್ವೀಪಗಳ ಕಲ್ಪನೆಯು ನಿನ್ನಿಂದ ಸಂಕ್ಷೇಪವಾಗಿ ನಿರೂಪಿಸಲ್ಪಟ್ಟಿತು ? ಈ ಅರ್ಥವನ್ನೇ ಸಮಗ್ರವಾಗಿ ಲಕ್ಷಣ ಪ್ರಮಾಣಪೂರ್ವಕವಾಗಿ ತಿಳಿಯುವದಕ್ಕೋಸ್ಕರ ನಾನು ಇಚ್ಛೈಸುತಲಿದ್ದೇನೆ ; ಭಗವಂತನಾದ ಶ್ರೀ ವಾಸುದೇವನ ತ್ರಿಗುಣಾತ್ಮಕವಾದ ಬ್ರಹ್ಮಾಂಡವೆಂಬ ಸ್ಥೂಲರೂಪದಲ್ಲಿ ಧ್ಯಾನದಿಂದ ನಿಲ್ಲಿಸಲ್ಪಟ್ಟ ಮನಸ್ಸೇ ನಿರ್ಗುಣವಾದ ಅತಿ ಸೂಕ್ಷ್ಮವಾದ ಸ್ವಯಂಪ್ರಕಾಶವಾದ ಷಡ್ಗುಣೈಶ್ವರ್ಯಯುಕ್ತವಾದ ವಾಸುದೇವನೆಂಬ ನಾಮಧೇಯವುಳ್ಳ ಪರಬ್ರಹ್ಮನ ಸೂಕ್ಷ್ಮರೂಪದಲ್ಲಿ ನಿಲ್ಲುವದಕ್ಕೆ ಯೋಗ್ಯವಾಗುವದಾದಕಾರಣ 'ಎಲೈ ಗುರುವಾದ ಶುಕಮುನಿಯೇ, ಈ ಭೂಗೋಳಸ್ವರೂಪವನ್ನು ಚನ್ನಾಗಿ ನಿರೂಪಿಸು ' ಎಂದು ಪ್ರಶ್ನೆಗೈದನು.

" ಶುಕಮುನಿಯು ಎಲೈ ರಾಜಶ್ರೇಷ್ಠನೇ ಕೇಳು : ಪುರುಷನು ಶ್ರೀ ವಾಸುದೇವನ ಮಾಯಾನುಗುಣೈಶ್ವರ್ಯದ ಸ್ಥಾನವಿಶೇಷಗಳ ಕೊನೆಯನ್ನೂ ಅವುಗಳ ನಾಮರೂಪಗಳ ವಿವರವನ್ನೂ ಮನಸ್ಸಿನಿಂದಲೂ ವಾಕ್ಯದಿಂದಲೂ ಬ್ರಹ್ಮಾಯುಸ್ಸಿನಿಂದಲೂ ಚನ್ನಾಗಿ ತಿಳಿಯುವದಕ್ಕೆ ಸಮರ್ಥನಾಗಲಾರನು ; ಅದುಕಾರಣ ಮುಖ್ಯವಾಗಿ ನಾಮ ಆಕೃತಿ ಲಕ್ಷಣಗಳೊಡನೆ ಭೂಗೋಳವನ್ನು ವಿವರಿಸಿ ಹೇಳುತಲಿದ್ದೇನೆ; ಭೂಮಂಡಲವೆಂಬ ಕಮಲಕ್ಕೆ ಆವರಣಗಳಾದ ಸಪ್ತದ್ವೀಪಗಳಲ್ಲಿ ಪ್ರಥಮಾವರ್ಣವಾದ ಜಂಬೂದ್ವೀಪವು ಲಕ್ಷಯೋಜನ ವಿಸ್ತಾರವಾಗಿ ಕಮಲಪತ್ರದಂತೆ ಸಮವಾಗಿ ಮಂಡಲಾಕೃತಿಯಾಗಿರುವದು ; ಆ ಜಂಬೂದ್ವೀಪದಲ್ಲಿ ಒಂಭತ್ತು ವರುಷಗಳು ಎಂಟು ಮರ್ಯಾದಾ ಪರ್ವತಗಳಿಂದ ವಿಭಾಗಂಗೈಯಲ್ಪಟ್ಟಿರುವವು ; ಆ ವರ್ಷಗಳ ಪ್ರಮಾಣವೆಂತೆಂದರೆ : ಆ ವರ್ಷಗಳಲ್ಲಿ ಭರತ ಹರಿವರ್ಷ ಕಿಂಪುರುಷ ರಮ್ಯಕ ಹಿರಣ್ಮಯ ಕುರುಗಳೆಂಬ ಆರು ವರುಷಗಳು ಪ್ರತ್ಯೇಕಪ್ರತ್ಯೇಕವಾಗಿ ಒಂದೊಂದು ದಕ್ಷಿಣೋತ್ತರ ಒಂಭತ್ತು ಸಹಸ್ರಯೋಜನ ವಿಸ್ತಾರವುಳ್ಳಂಥಾವಾಗಿರುವವು ; ಇಳಾವೃತ ಭದ್ರಾಶ್ವಕೇತುಮಾಲಗಳೆಂಬ ಮೂರು ವರ್ಷಗಳು ಪ್ರತ್ಯೇಕ ಪ್ರತ್ಯೇಕವಾಗಿ ಒಂದೊಂದು ದಕ್ಷಿಣೋತ್ತರ ಮೂವತ್ತುನಾಲ್ಕು ಸಹಸ್ರಯೋಜನ ವಿಸ್ತಾರವುಳ್ಳಂಥಾವಾಗಿರುವವು ; ಈ ವರ್ಷಗಳ ಮಧ್ಯದಲ್ಲಿ ಇಳಾವೃತವೆಂಬ ವರ್ಷವಿರುವದು ; ಆ ಇಳಾವೃತವರ್ಷ ಮಧ್ಯದಲ್ಲಿ ಸುವರ್ಣಮಯವಾದ ಕುಲಪರ್ವತಗಳಿಗೆ ಅರಸಾದ ಮಹಾಮೇರುವು ಲಕ್ಷಯೋಜನ ಉನ್ನತವಾಗಿ ಭೂಮಂಡಲವೆಂಬ ಕಮಲಕ್ಕೆ ಕರ್ಣಿಕಾರೂಪವಾಗಿ ಪ್ರಕಾಶಿಸುತ ಶಿರೋಭಾಗದಲ್ಲಿ ಮೂವತ್ತೆರಡು ಸಹಸ್ರಯೋಜನ ವಿಸ್ತಾರವುಳ್ಳಂಥಾದ್ದಾಗಿ ಹದಿನಾರುಸಹಸ್ರಯೋಜನ ಪ್ರಮಾಣದಿಂದ ಭೂಮಿಯೊಳಗೆ ಪ್ರವೇಶಿಸಿ ಹೊರಗೆ ಎಂಭತ್ತುನಾಲ್ಕು ಸಹಸ್ರಯೋಜನ ಪ್ರಮಾಣದಿಂದ ಕಾಣಲ್ಪಡುತಲಿದೆ ; ಇಳಾವೃತ ವರ್ಷಕ್ಕೆ ಉತ್ತರವಾಗಿ ಕ್ರಮದಿಂದ ನೀಲ ಶ್ವೇತ ಶೃಂಗವಂತಗಳೆಂಬ ನಾಮಗಳುಳ್ಳ ಮೂರು ಪರ್ವತಗಳು ; ರಮ್ಯಕ ಹಿರಣ್ಮಯ ಕುರುಗಳೆಂಬ ಮೂರು ಪರ್ವತಗಳಿಗೆ ಮರ್ಯಾದಾಪರ್ವತಗಳೆಂದು ಹೇಳಲ್ಪಡುವವು; ಆ ಮೂರು ಪರ್ವತಗಳು ಪೂರ್ವ ಪಶ್ಚಿಮ ಭಾಗಗಳಲ್ಲಿ ದೀರ್ಘಗಳಾಗಿ ಲವಣಸಮುದ್ರವೇ ಯಲ್ಲೆಯಾಗಿ ಎರಡು ಸಹಸ್ರ ಯೋಜನ ವಿಸ್ತಾರವುಳ್ಳಂಥಾವಾಗಿ ಹತ್ತುಸಹಸ್ರ ಯೋಜನ ಪ್ರಮಾಣದಿಂದ ಉನ್ನತಗಳಾಗಿ ಒಂದಕ್ಕಿಂತಲೂ ಒಂದು ಹೆಚ್ಚಾಗಿ ಮುಂದೆ ಇರುವವು ; ಸ್ವಲ್ಪ ಅಧಿಕವಾದ ಹತ್ತು ಸಹಸ್ರಯೋಜನ ಪ್ರಮಾಣದಿಂದ ಪೂರ್ವ ಪಶ್ಚಿಮ ದೀರ್ಘದಲ್ಲಿ ಮಾತ್ರವೇ ಕಡಿಮೆಯಾಗಿರುವವು ; ಉನ್ನತಭಾಗದಲ್ಲಿ ವಿಸ್ತಾರದಲ್ಲಾದರೂ ಪರಸ್ಪರ ಕಡಿಮೆಯಾಗಿಲ್ಲದೆ ಇರುವವು ; ಅದೇರೀತಿ ಇಳಾವೃತ ವರ್ಷಕ್ಕೆ ದಕ್ಷಿಣವಾಗಿ ಕ್ರಮದಿಂದ ನಿಷಧ ಹೇಮಕೂಟ ಹಿಮವಂತಗಳೆಂಬ ಮೂರು ಪರ್ವತಗಳು ಹರಿವರ್ಷ ಕಿಂಪುರುಷವರ್ಷ ಭರತವರ್ಷಗಳೆಂಬ ಮೂರು ವರ್ಷಗಳಿಗೂ ಮರ್ಯಾದಾ ಪರ್ವತಗಳೆಂದು ಹೇಳಲ್ಪಡುವವು ; ಆ ಮೂರು ಪರ್ವತಗಳು ಪೂರ್ವಪಶ್ಚಿಮ ಭಾಗಗಳಲ್ಲಿ ಪೂರ್ವಪಶ್ಚಿಮ ಲವಣಸಮುದ್ರವೇ ಯಲ್ಲೆಯಾಗುಳ್ಳಂಥಾವಾಗಿ ಹತ್ತುಸಹಸ್ರಯೋಜನ ಪ್ರಮಾಣದಿಂದ ಉನ್ನತಗಳಾಗಿ ಎರಡುಸಹಸ್ರಯೋಜನ ವಿಸ್ತಾರವುಳ್ಳಂಥಾವಾಗಿ ಮೊದಲು ಇರುವದಕ್ಕಿಂತಲೂ ಹೆಚ್ಚಾಗಿ ಮುಂದೆ ಇರುವವು ; ಸ್ವಲ್ಪ ಅಧಿಕವುಳ್ಳ ಹತ್ತು

ಸಹಸ್ರ ಯೋಜನ ಪ್ರಮಾಣದಿಂದ ಪೂರ್ವ ಪಶ್ಚಿಮ ದೀರ್ಘದಲ್ಲಿ ಮಾತ್ರವೇ ಕಡಿಮೆಯಾಗಿ ಉನ್ನತಭಾಗದಲ್ಲೂ ಕಡಿಮೆಯಿಲ್ಲದಿರುವವು; ಅದೇರೀತಿ ಇಳಾವೃತ ವರ್ಷಕ್ಕೆ ಪಶ್ಚಿಮದಲ್ಲಿ ಮಾಲ್ಯವಂತವೆಂಬ ಪರ್ವತವು ಪೂರ್ವದಲ್ಲಿ ಗಂಧಮಾದನವೆಂಬ ಪರ್ವತವು ಇರುವವು, ಈ ಎರಡು ಪರ್ವತಗಳು ಕೇತುಮಾಲಾ ಭದ್ರಾಶ್ವಗಳೆಂಬ ಈ ಎರಡು ವರ್ಷಗಳಿಗೂ ಮರ್ಯಾದಾಪರ್ವತಗಳೆಂದು ಹೇಳಲ್ಪಡುತಲಿವೆ; ಈ ಎರಡು ಪರ್ವತಗಳೂ ಉತ್ತರಪಾರ್ಶ್ವದಲ್ಲಿ ನೀಲಗಿರಿ ಪರ್ಯಂತವೂ ದಕ್ಷಿಣಪಾರ್ಶ್ವದಲ್ಲಿ ನಿಷಧಗಿರಿಪರ್ಯಂತವೂ ದೀರ್ಘಗಳಾಗಿ ಎರಡುಸಹಸ್ರಯೋಜನ ವಿಸ್ತಾರವುಳ್ಳಂಥವಾಗಿರುವವು; ಮಂದರ ಮೇರುಮಂದರ ಸುಪಾರ್ಶ್ವ ಕುಮುದಗಳೆಂಬ ನಾಲ್ಕು ಪರ್ವತಗಳು ಮಹಾಮೇರುವಿಗೆ ನಾಲ್ಕುದಿಕ್ಕುಗಳಲ್ಲಿಯೂ ಆಧಾರವಾಗಿ ಕಲ್ಪಿಸಲ್ಪಟ್ಟಿರುವದಾದಕಾರಣ ಉಪಷ್ಟಂಭಕ ಪರ್ವತಗಳೆಂದು ಹೇಳಲ್ಪಡುವವು; ಈ ನಾಲ್ಕು ಪರ್ವತಗಳೂ ಹತ್ತುಸಹಸ್ರ ಯೋಜನ ಪ್ರಮಾಣದಿಂದ ಉನ್ನತಗಳಾಗಿ ಅಷ್ಟು ವಿಸ್ತಾರವಾಗಿಯೇ ಇರುವವು; ಮೇರುವಿಗೆ ಪೂರ್ವಾದಿ ನಾಲ್ಕುದಿಕ್ಕುಗಳಲ್ಲಿ ಕ್ರಮವಾಗಿರುವ ಮಂದರ ಮೊದಲಾದ ನಾಲ್ಕು ಪರ್ವತಗಳಲ್ಲಿ ರಸಾಲ ಜಂಬು ಕದಂಬ ನ್ಯಗ್ರೋಧಗಳೆಂಬ ಶ್ರೇಷ್ಠಗಳಾದ ನಾಲ್ಕು ವೃಕ್ಷಗಳು ಒಂದುಸಾವಿರದ ನೂರುಯೋಜನ ಪ್ರಮಾಣದಿಂದ ಉನ್ನತಗಳಾಗಿ ಒಂದುಸಾವಿರವು ನೂರುಯೋಜನ ಪ್ರಮಾಣವಾದ ಕೊಂಬೆಗಳ ವಿಸ್ತಾರವುಳ್ಳಂಥವಾಗಿ ಪೂರ್ವಾದಿ ಕ್ರಮದಿಂದ ನಾಲ್ಕು ಪರ್ವತಗಳಿಗೂ ಧ್ವಜಗಳಂತೆ ಹೊಳೆಯುತಲಿರುವವು; ಈ ಮಂದರ ಮೊದಲಾದ ನಾಲ್ಕು ಪರ್ವತಗಳಲ್ಲಿ ನೂರುಯೋಜನ ವಿಸ್ತಾರವುಳ್ಳ ಕ್ಷೀರಸರಸ್ಸು ಮಧುಸರಸ್ಸು ಇಕ್ಷುರಸ ಸರಸ್ಸು ಶುದ್ಧೋದಕ ಸರಸ್ಸುಗಳೆಂಬದಾಗಿ ನಾಲ್ಕು ಸರಸ್ಸುಗಳು ಪೂರ್ವಾದಿ ಕ್ರಮದಿಂದ ಇರುವವು! ಎಲೈ ಪರೀಕ್ಷಿದ್ರಾಯನೆ, ಆ ಸರಸ್ಸುಗಳನ್ನು ಗಂಧರ್ವಾದಿ ಸಮೂಹಗಳು ಸೇವಿಸುತ ಪ್ರಯತ್ನವಿಲ್ಲದೆ ಸಾಧಾರಣವಾಗಿ ಅಣಿಮಾದ್ಯಷ್ಟೈಶ್ವರ್ಯಗಳನ್ನು ಪಡೆಯುತಲಿಧಾರೆ; ಈ ಮಂದರಾದಿ ನಾಲ್ಕು ಪರ್ವತಗಳಲ್ಲಿ ಪೂರ್ವಾದಿಕ್ರಮದಿಂದ ನಂದನ ಚೈತ್ರರಥ ವೈಭ್ರಾಜಕ ಸರ್ವತೋಭದ್ರಗಳೆಂಬದಾಗಿ ನಾಲ್ಕು ದೇವೋದ್ಯಾನಗಳು ಇರುವವು; ಆ ಉದ್ಯಾನವನಗಳಲ್ಲಿ ದೇವತಾಸ್ತ್ರೀಯರಲ್ಲಿ ಅತ್ಯುತ್ತಮರಾದ ಸ್ತ್ರೀಯರ ಸಮೂಹಕ್ಕೆ ನಾಯಕರಾದ ದೇವತಾಶ್ರೇಷ್ಠರು ಸಂಘೀಭವಿಸಿ ಗಂಧರ್ವಾದಿಗಳಿಂದ ಶ್ಲಾಘನೆಗೈಯಲ್ಪಡುತ ಮಹಾಮಹಿಮೆಯುಳ್ಳವರಾಗಿ ಕ್ರೀಡಿಸುತಲಿಧಾರೆ; ಆ ಮಂದರಪರ್ವತದಲ್ಲಿ ಒಂದುಸಾವಿರದ ನೂರುಯೋಜನ ಉನ್ನತವಾಗಿರುವ ದೇವತಾಯೋಗ್ಯವಾದ ಚೂತವೃಕ್ಷದ ಅಗ್ರಭಾಗದಿಂದ ಪರ್ವತಶಿಖರಗಳಂತೆ ಸ್ಥೂಲಗಳಾದ ಅಮೃತಸಮಾನಗಳಾದ ಫಲಗಳು ಬೀಳುತಲಿವೆ; ಕೆಳಗೆ ಬೀಳೋಣದರಿಂದ ಶೀಳುತಲಿರುವ ಆ ಚೂತಫಲಗಳ ಅತ್ಯಂತ ಮಧುರವಾದ ಸ್ವತಃ ಪರಿಮಳಸುತಲಿರುವ ಇತರ ಗಂಧಗಳಿಂದ ಪರಿಪೂರ್ಣವಾದ ಬಹಳವಾದ ರಕ್ತವರ್ಣವೆಂಬ ಜಲದಿಂದ ಪುಟ್ಟಿದ ಅರುಣೋದೆಯೆಂಬ ನದಿಯು ಮಂದರವೆಂಬ ಪರ್ವತಶ್ರೇಷ್ಠದ ಶಿಖರದಿಂದ ಕೆಳಕ್ಕೆ ಬೀಳುತ ಇಳಾವೃತ ವರ್ಷಕ್ಕೆ ಪೂರ್ವಭಾಗದಲ್ಲಿ ಪ್ರವಹಿಸುತಲಿದೆ; ಆ ಚೂತಫಲ ರಸವನ್ನು ಆಸ್ವಾದನೆಮಾಡಿ ಅತ್ಯಂತ ಪರಿಮಳಯುಕ್ತಗಳಾದ ಅವಯವಗಳುಳ್ಳವರಾಗಿ ಪಾರ್ವತೀದೇವಿಗೆ ಸೇವಕರಾಗಿರುವ ಪುಣ್ಯಜನ ಸ್ತ್ರೀಯರ ಶರೀರ ಸಂಪರ್ಕದಿಂದ ಸುಗಂಧಯುಕ್ತವಾಗಿರುವ ವಾಯುವು ಸುತ್ತಲೂ ಹತ್ತುಯೋಜನ ಪರ್ಯಂತ ದೇಶವನ್ನು ಪರಿಮಳಯುಕ್ತವನ್ನಾಗಿ ಮಾಡುತಲಿದೆ; ಇದೇರೀತಿಯಲ್ಲಿ ಅತ್ಯಂತ ಉನ್ನತಪ್ರದೇಶದಿಂದ ಬೀಳೋಣದರಿಂದ ಶೀಳುವ ಅತಿ ಸ್ವಲ್ಪಗಳಾದ ಬೀಜಗಳುಳ್ಳ ಗಜಶರೀರ ಪ್ರಮಾಣಗಳಾದ ಜಂಬೂಫಲಗಳ ರಸದಿಂದ ಹುಟ್ಟಿರುವ ಜಂಬೂನದಿಯೆಂಬ ನಾಮಧೇಯವುಳ್ಳ ಒಂದು ನದಿಯು ಮಹಾಮೇರುವಿಗೆ ದಕ್ಷಿಣಭಾಗದಲ್ಲಿರುವ ಮೇರುಮಂದರವೆಂಬ ಪರ್ವತದ ಶಿಖರದಿಂದ ಹತ್ತುಯೋಜನದಿಂದ ಭೂಮಿಯಲ್ಲಿ ಬೀಳುತ ಅಲ್ಲಿಂದ ತನಗೆ ದಕ್ಷಿಣವಾಗಿ ಹೊರಟು ಸಮಸ್ತವಾದ ಇಳಾವೃತ ವರ್ಷವನ್ನು ವ್ಯಾಪಿಸಿಕೊಂಡು ಪ್ರವಹಿಸುತಲಿಧೆ; ಆ ನದಿಯ ಉಭಯತೀರಗಳಲ್ಲಿಯೂ ಸುತ್ತಲೂ ಇರುವ ಮೃತ್ತಿಕೆಯೇ ಜಂಬೂಫಲ ರಸದೊಡನೆ ಮಿಶ್ರವಾಗಿ ವಾಯು ಸೂರ್ಯಸಂಬಂಧದಿಂದ ಉಂಟಾದ ಒಂದು ಪರಿಪಾಕವಿಶೇಷದಿಂದ ನಿರಂತರವೂ ದೇವಸಮೂಹದ ಆಭರಣಯೋಗ್ಯವಾದ ಜಾಂಬೂನದವೆಂಬ ನಾಮಧೇಯವುಳ್ಳ ಸುವರ್ಣವಾಗುತಲಿಧೆ; ದೇವಾದಿಗಳು ತಮ್ಮ ಸ್ತ್ರೀಯರೊಡನೆ ಆ ಸುವರ್ಣ

ವನ್ನೇ ಕಿರೀಟ ಕಟಕ ಕಟಿಸೂತ್ರಗಳು ಮೊದಲಾದ ಆಭರಣಗಳನ್ನಾಗಿ ಧರಿಸುತಲಿಧಾರೆ; ಮೇರುವಿಗೆ ಪಶ್ಚಿಮವಾಗಿರುವ ಸುಪಾರ್ಶ್ವ ಪರ್ವತದಲ್ಲಿ ಪುಟ್ಟಿರುವ ಮಹಾ ಕದಂಬ ವೃಕ್ಷದ ಪೋಟರಗಳಿಂದ ಸ್ರವಿಸುತಲಿರುವ ಐದು ಮಾರು ಹಗ್ಗದಿಂದ ಬಂದು ಸುತ್ತು ಬರುವಷ್ಟು ಗಾತ್ರಗಳಾದ ಐದು ಜೇನುತುಪ್ಪದ ಧಾರೆಗಳು ಆ ಸುಪಾರ್ಶ್ವ ಪರ್ವತದ ಶಿಖರದಿಂದ ಬೀಳುತ ಅಲ್ಲಿಂದ ತಮಿಗೆ ಪಶ್ಚಿಮವಾಗಿ ಹೊರಟು ಇಳಾವೃತವರ್ಷವನ್ನು ವ್ಯಾಪಿಸುತಲಿವೆ; ಆ ಜೇನುತುಪ್ಪದ ಧಾರೆಗಳನ್ನು ಪಾನಗೈಯುತಲಿರುವ ಮಹಾತ್ಮರ ಮುಖದಿಂದ ಹೊರಟುಬರುವ ನಿಶ್ವಾಸವಾಯುವು ಸುತ್ತಲೂ ನೂರು ಯೋಜನ ಪ್ರದೇಶವನ್ನು ದಿವ್ಯ ಪರಿಮಳಯುಕ್ತವನ್ನಾಗಿ ಮಾಡುತಲಿದೆ; ಇದೇಮೇರುವಿಗೆ ಉತ್ತರವಾಗಿರುವ ಕುಮುದಪರ್ವತದಲ್ಲಿ ಪುಟ್ಟಿರುವ ಶತವಲ್ಕವೆಂಬ ನಾಮಧೇಯವುಳ್ಳ ನ್ಯಗ್ರೋಧ ವೃಕ್ಷದ ಕೊಂಬೆಗಳಿಂದ ಕ್ಷೀರ ದಧಿ ಘೃತ ಮಧು ಗುಡ ಅನ್ನಗಳು ಮೊದಲಾದ ಭಕ್ಷ್ಯ ಭೋಜ್ಯ ಲೇಹ್ಯ ಚೋಷ್ಯಗಳು ವಸ್ತ್ರ ಶೈಯ್ಯಾಸನ ಆಭರಣಗಳು ಮೊದಲಾದ ಸಕಲ ಇಷ್ಟಾರ್ಥಗಳನ್ನೀವ ನದಿಗಳು ಅಧೋಮುಖಗಳಾಗಿ ಆ ಕುಮುದಪರ್ವತದ ಶಿಖರದಿಂದ ಬೀಳುತಲಿರುವ ಆ ಪರ್ವತಕ್ಕೆ ಉತ್ತರದಲ್ಲಿ ಹೊರಟು ಇಳಾವೃತವರ್ಷದಲ್ಲಿರುವ ಮಹಾತ್ಮರನ್ನು ತೃಪ್ತಿಪಡಿಸುತಲಿವೆ; ಆ ಪದಾರ್ಥಗಳನ್ನನುಭವಿಸುತಲಿರುವ ಪುರುಷರಿಗೆ ವಳಿಗಳು ನರೆ ಬಳಲಿಕೆ ಬೆವರು ದುರ್ಗಂಧವು ಜರೆಯು ರೋಗವು ಮರಣವು ಅಪಮೃತ್ಯುವು ಶೀತೋಷ್ಣಗಳು ವಿವರ್ಣತ್ವವು ಈತಿಬಾಧೆಯು ಇವೇಮೊದಲಾದ ನಾನಾತಾಪವಿಶೇಷಗಳು ಉಂಟಾಗಲಾರವು; ಜೀವಿಸುವಪರ್ಯಂತವು ಸರ್ವೋತ್ಕೃಷ್ಟವಾದ ಸುಖವನ್ನೇ ಅನುಭವಿಸುತಲಿಧಾರೆ; ಕುರಂಗ ಕುಕುರ ವೈಕಂಕತ ಕುಸುಂಭ ತ್ರಿಕೂಟ ಶಿಶಿರ ಪತಂಗ ರುಚಕ ನಿಷಧ ಶೀತವಾಸ ಕಪಿಲ ಶಂಖ ವೈಡೂರ್ಯ ಗಾರುಡ ಹಂಸ ಋಷಭ ನಾಗ ಕಾಲಾಂಜನ ನಾರದಂಗಳೆಂಬ ಪರ್ವತಗಳು ಮತ್ತು ಕೆಲವು ಪರ್ವತಗಳು ಕಮಲಕರ್ಣಿಕೆಯಂತಿರುವ ಮಹಾಮೇರುವಿನ ಬುಡದಲ್ಲಿ ಕೇಸರಗಳಂತೆ ಸುತ್ತಲೂ ಕಲ್ಪಿಸಲ್ಪಟ್ಟಿರುತಲಿವೆ; ನಾಲ್ಕು ದಿಕ್ಕುಗಳಲ್ಲಿಯೂ ಮೇರುವಿನ ಬುಡವನ್ನು ಮೊದಲುಗೊಂಡು ಸುತ್ತಲೂ ಬಂದು ಸಹಸ್ರ ಯೋಜನವನ್ನು ಬಿಟ್ಟು ಪೂರ್ವಾದಿ ಎಂಟು ಪರ್ವತಗಳು ಇಹವು; ಕಲ್ಪಾಂತದಲ್ಲಿ ಹದಿನೆಂಟು ಯೋಜನ ಪ್ರಮಾಣವುಳ್ಳ ಪ್ರಸ್ಥಕ್ಕೆ ಎರಡು ಸಹಸ್ರ ಯೋಜನ ವಿಸ್ತಾರವುಳ್ಳ ಎರಡು ಸಹಸ್ರ ಯೋಜನ ಉನ್ನತಗಳಾದ ಜಠರ ದೇವಕೂಟಗಳೆಂಬ ಎರಡು ಪರ್ವತಗಳು ಉತ್ತರದಲ್ಲಿ ದೀರ್ಘಗಳಾಗಿ ಮೇರುವಿಗೆ ಪೂರ್ವದಿಕ್ಕಿನಲ್ಲಿ ಇಹವು; ಇದೇರೀತಿ ಮೇರುವಿಗೆ ಪಶ್ಚಿಮದಲ್ಲಿ ಪವನ ಪಾರಿಯಾತ್ರಗಳೆಂಬ ಎರಡು ಪರ್ವತಗಳು ಅದೇಪ್ರಕಾರವಾಗಿ ಅದೇಪ್ರಮಾಣವಾಗಿಹವು; ಮೇರುವಿಗೆ ದಕ್ಷಿಣದಲ್ಲಿ ಕೈಲಾಸ ಕರವೀರಗಳೆಂಬ ಎರಡು ಪರ್ವತಗಳು ಪೂರ್ವದಲ್ಲಿ ದೀರ್ಘಗಳಾಗಿ ಅದೇ ಪ್ರಮಾಣದಿಂದಿಹವು; ಇದೇರೀತಿ ಮೇರುವಿಗೆ ಉತ್ತರದಲ್ಲಿ ತ್ರಿಶೃಂಗ ಮಕರಗಳೆಂಬ ಎರಡು ಪರ್ವತಗಳು ಅದೇ ಪ್ರಮಾಣದಿಂದಿಹವು; ಈಪ್ರಕಾರವಾಗಿ ಎಂಟು ಪರ್ವತಗಳಿಂದ ಪರಿಧಿಗಳಿಂದ ಅಗ್ನಿಯಂತೆ ಮೇರುಪರ್ವತವು ನಾಲ್ಕುಕಡೆಯಲ್ಲಿಯೂ ಸುತ್ತಿಕೊಳ್ಳಲ್ಪಟ್ಟು ಹೊಳೆಯುತಲಿದೆ; ಅಂಥಾ ಮೇರುಶಿರಸ್ಸಿನ ಮಧ್ಯಭಾಗದಲ್ಲಿ ಹತ್ತು ಸಹಸ್ರ ಯೋಜನ ವಿಸ್ತಾರವುಳ್ಳ ಸಮಚತುರಶ್ರವಾದ ಸುವರ್ಣಮಯವಾದ ಭಗವಂತನಾದ ಚತುರ್ಮುಖನಿಗೆ ಆವಾಸಸ್ಥಾನವಾದ ಬಂದು ಪಟ್ಟಣವು ಕಲ್ಪಿಸಲ್ಪಟ್ಟಿದೆ ಎಂದು ಋಷಿಗಳು ಹೇಳುವರು; ಆ ಬ್ರಹ್ಮದೇವನ ಪಟ್ಟಣಕ್ಕೆ ಪೂರ್ವಾದಿಯಾಗಿ ಎಂಟುದಿಕ್ಕುಗಳಲ್ಲಿ ಅಷ್ಟದಿಕ್ಪಾಲಕರಿಗೆ ಸ್ಥಾನಗಳಾದ ಎರಡುಸಹಸ್ರವು ಐನೂರುಯೋಜನ ವಿಸ್ತಾರವುಳ್ಳ ಇಂದ್ರಾದಿಗಳಿಗೆ ಸಮಾನಗಳಾದ ವರ್ಣಗಳುಳ್ಳ ಎಂಟು ಪಟ್ಟಣಗಳಿರುವವು; ಆ ಪಟ್ಟಣಗಳ ನಾಮಧೇಯಗಳೇನಂದರೆ: ಬ್ರಹ್ಮದೇವನಿಗೆ ಮನೋವತಿ ಇಂದ್ರನಿಗೆ ಅಮರಾವತಿ ಅಗ್ನಿಗೆ ತೇಜೋವತಿ ಯಮನಿಗೆ ಸಂಯಮನಿ ನಿಋತಿಗೆ ಕೃಷ್ಣಾಂಗನಾ ವರುಣನಿಗೆ ಶ್ರದ್ಧಾವತಿ ವಾಯುವಿಗೆ ಗಂಧವತಿ ಕುಬೇರನಿಗೆ ಮಹೋದಯಾ ಈಶಾನ್ಯನಿಗೆ ಯಶೋವತಿ ಎಂದು ಒಂಭತ್ತು ಪಟ್ಟಣಗಳಿಗೂ ಈ ಒಂಭತ್ತು ನಾಮಗಳು.''

೧೭ನೇ ಅಧ್ಯಾಯ.

ಮೇರುವಿಗೆ ನಾಲ್ಕು ದಿಕ್ಕುಗಳಲ್ಲಿ ಗಂಗೆಯು ಅವತರಿಸಿದ್ದು-ಇಳಾವೃತ ವರ್ಷದಲ್ಲಿ ರುದ್ರಮೂರ್ತಿಯು ಸಂಕರ್ಷಣಮೂರ್ತಿಯನ್ನು ಉಪಾಸನಂಗೈದದ್ದು.

"ಎಲೈ ಪರೀಕ್ಷಿದ್ರಾಯನೆ, ಮೇರುವಿನಲ್ಲಿ ಬಲಿಯು ಯಜ್ಞದಲ್ಲಿ ಆ ಬಲಿಯು ನಿಗ್ರಹಾರ್ಥವಾಗಿ ತ್ರಿವಿಕ್ರಮ ರೂಪವನ್ನು ಧರಿಸಿ ದಕ್ಷಿಣಪಾದದಿಂದ ಭೂಮಿಯನ್ನಾಕ್ರಮಿಸಿಕೊಂಡು ವಾಮಪಾದವನ್ನು ಊರ್ಧ್ವಮುಖವಾಗಿ ಎತ್ತುತಲಿರುವ ಭಗವಂತನಾದ ಮಹಾ ವಿಷ್ಣುವಿನ ವಾಮಪಾದದ ಹೆಬ್ಬೆಟ್ಟಿನ ಉಗುರಿನಿಂದ ಭೇದಿಸಲ್ಪಟ್ಟ ಊರ್ಧ್ವ ಪ್ರದೇಶವುಳ್ಳ ಕೊಪ್ಪರಿಗೆಯಂತಿರುವ ಬ್ರಹ್ಮಾಂಡ ರಂಧ್ರದಿಂದ ಹೊಂಗಿರುವ ಮಹಾ ಗಂಗೆಯು ಯಾವ ಜಲಧಾರೆಯು ಒಳಕ್ಕೆ ಪ್ರವೇಶಿಸಿತೋ ಆ ಜಲಧಾರೆಯು ಭಗವಂತನ ಪಾದಪದ್ಮ ಪ್ರಕ್ಷಾಳನದಿಂದ ಆ ಪಾದದಲ್ಲಿರುವ ಕುಂಕುಮರೇಣುಗಳೆಂಬ ಕೇಸರಗಳಿಂದ ಕೆಂಪಾಗಿ ಮಾಡಲ್ಪಟ್ಟದ್ದಾದಕಾರಣ ತನ್ನಲ್ಲೇ ಆಚಮನಸ್ನಾನಾದಿಗಳಿಂದ ಸಕಲ ಜಗತ್ತಿನ ಪಾಪಗಳೆಂಬ ಕಲ್ಮಷಗಳನ್ನು ಪರಿಹರಿಸುತಲಿರುವದಾದಾಗ್ಯೂ ಆತನಿಗೆ ಆ ಪಾಪವೆಂಬ ಕಲ್ಮಷ ಸಂಬಂಧ ವಿಲ್ಲದಿರುವ ಜಾಹ್ನವೀ ಭಾಗೀರಥಿ ಇವೇ ಮೊದಲಾದ ನಾಮಧೇಯಾಂತರಗಳಲ್ಲದೆ ಸಾಕ್ಷಾದ್ಭಗವತ್ಪದೀ ಎಂಬ ಬಂದು ನಾಮದಿಂದ ಹೇಳಲ್ಪಡುತ ಅನೇಕ ಸಹಸ್ರಯುಗ ಪರಿಮಿತವಾದ ಬಹುಕಾಲದಿಂದ ಅಂತರಿಕ್ಷದ ಶಿರಸ್ಸಿನಲ್ಲಿ ಅವತರಿಸಿತು; ಎಲ್ಲಿ ಆ ಜಲಧಾರೆಯು ಬಿತ್ತೋ ಆ ಅಂತರಿಕ್ಷಪ್ರದೇಶವನ್ನೇ ವಿಷ್ಣುಪದವೆಂದು ಋಷಿಗಳು ಹೇಳುವರು; ಅಲ್ಲಿ ದೃಢಸಂಕಲ್ಪನಾದ ಉತ್ತಾನಪಾದರಾಯನಿಗೆ ಪುತ್ರನಾದ ಧ್ರುವರಾಯನು ತಮ್ಮ ಕುಲದೇವತೆಯಾದ ಶ್ರೀಹರಿಯ ಪಾದಕಮಲದಿಂದ ಆವಿರ್ಭವಿಸಿದ ತೀರ್ಥವೆಂದು ಆ ಗಂಗೆಯನ್ನು ಪ್ರತಿಕ್ಷಣದಲ್ಲಿಯೂ ವೃದ್ಧಿಹೊಂದುತಲಿರುವ ಭಗವದ್ಭಕ್ತಿಯೋಗದಿಂದ ಅತ್ಯಂತವಾಗಿ ದ್ರವಿಸಿದ ಮನಸ್ಸುಳ್ಳವನಾದ ಕಾರಣ ಅತ್ಯಂತಾಸಕ್ತಿಯಿಂದ ಪರವಶವಾದ ಮುಚ್ಚಲ್ಪಟ್ಟ ನೇತ್ರಗಳ ಯುಗ್ಮವೆಂಬ ತಾವರೆಮೊಗ್ಗುಗಳಿಂದ ಸ್ರವಿಸುತಲಿರುವ ನಿರ್ಮಲವಾದ ಆನಂದಬಾಷ್ಪಧಾರೆಯಿಂದ ಪ್ರಕಾಶಂಗೈಯಲ್ಪಡುತಲಿರುವ ರೋಮಾಂಚಸಮೂಹವುಳ್ಳವನಾಗಿ ಈಗಲೂ ಅತ್ಯಂತ ಆದರಣೆಯಿಂದ ಶಿರಸ್ಸಿನಲ್ಲಿ ಧರಿಸುತಲಿಧಾನೆ; ಆ ಧ್ರುವಮಂಡಲಕ್ಕೆ ಅಧೋಭಾಗದಲ್ಲಿ ಆ ಗಂಗಾಪ್ರವಾಹವನ್ನು ತಿಳದಿರುವಂಥಾ ಸಮಸ್ತ ಋಷಿಗಳೂ ಈ ಗಂಗಾಪ್ರಾಪ್ತಿಯೇ ನಮ್ಮ ತಪಸ್ಸಿಗೆ ಸರ್ವೋತ್ಕೃಷ್ಟವಾದ ಸಿದ್ಧಿಯು; ಇದಕ್ಕಿಂತಲೂ ಅಧಿಕವಾದ ಸಿದ್ಧಿಯಿಲ್ಲವೆಂದು ಸರ್ವಾತ್ಮಕನಾದ ಭಗವಂತನಾದ ವಾಸುದೇವನಲ್ಲಿ ಸ್ಥಿರವಾದ ಭಕ್ತಿಯೋಗದ ಲಾಭದಿಂದ ಉಪೇಕ್ಷಿಸಲ್ಪಟ್ಟ ಇತರ ಪುರುಷಾರ್ಥಗಳೂ ತತ್ವಜ್ಞಾನವೂ ಉಳ್ಳವರಾಗಿ ಮೋಕ್ಷವನ್ನು ಪಡೆಯಲಿಚ್ಛೆಯುಳ್ಳ ಜನರು ಪ್ರತ್ಯಕ್ಷವಾದ ಮುಕ್ತಿಯನ್ನು ಪಡೆದಂತೆ ಅವತರಿಸಿರುವ ಗಂಗೆಯೆಂಬ ಬಹುಮಾನದಿಂದ ಈಗಲೂ ಜಟಾಸಮೂಹಗಳಿಂದ ಧರಿಸುತಲಿಧಾರೆ; ಆ ಸಪ್ತ ಋಷಿಗಳಿಗಿಂತಲೂ ಕೆಳಗೆ ಅನೇಕ ಸಹಸ್ರಕೋಟಿ ಸಂಖ್ಯೆಗಳುಳ್ಳ ವಿಮಾನಸಮೂಹಗಳಿಂದ ವ್ಯಾಪ್ತವಾದ ಆಕಾಶಮಾರ್ಗದಿಂದ ಇಳಿಯುತಲಿರುವ ಆ ಗಂಗೆಯು ಆಕಾಶಮಂಡಲವನ್ನು ವ್ಯಾಪಿಸಿಕೊಂಡು ಮಹಾಮೇರುವಿನ ಶಿರಸ್ಸಿನಲ್ಲಿರುವ ಬ್ರಹ್ಮಸ್ಥಾನದಲ್ಲಿ ಬೀಳುತಲಿದೆ; ಆ ಬ್ರಹ್ಮಸ್ಥಾನದಲ್ಲಿ ಆ ಗಂಗೆಯು ನಾಲ್ಕುಪ್ರಕಾರವಾಗಿ ಭಿನ್ನಿಸಿ ನಾಲ್ಕು ನಾಮಧೇಯಗಳಿಂದ ವ್ಯವಹರಿಸಲ್ಪಡುತಲಿರುವವಳಾಗಿ ಸ್ತ್ರೀ ನದಿಗಳಿಗೂ ಪುರುಷ ನದಿಗಳಿಗೂ ಅಧಿಪತಿಯಾದ ಸಮುದ್ರವನ್ನೇ ಪ್ರವೇಶಿಸುತಲಿಧಾಳೆ; ಆ ನಾಲ್ಕು ಗಂಗಾಪ್ರವಾಹಗಳಿಗೂ ಸೀತಾ ಅಲಕನಂದಾ ಚಕ್ಷುಃ ಭದ್ರಾ ಎಂಬದಾಗಿ ನಾಲ್ಕು ನಾಮಧೇಯಗಳೆಂದು ತಿಳಿಯತಕ್ಕದ್ದು; ಸೀತಾಯೆಂಬ ನದಿಯು ಆ ಬ್ರಹ್ಮಸ್ಥಾನದಿಂದ ಮೊದಲು ಕೇಸರ ಪರ್ವತಗಳಿಂದ ಮುಖ್ಯಗಳಾದ ಶಿಖರಗಳಲ್ಲಿ ಬಿದ್ದು ಆ ಶಿಖರಗಳಿಂದ ಕೆಳಕ್ಕೆ ಇಳಿಯುತಲಿರುವಂಥಾದ್ದಾಗಿ ಗಂಧಮಾದನ ಪರ್ವತದ ಶಿರಸ್ಸಿನಲ್ಲಿ ಬಿದ್ದು ಅಲ್ಲಿಂದ ಭದ್ರಾಶ್ವವರ್ಷಮಧ್ಯದಲ್ಲಿ ಹೊರಟು ಪೂರ್ವದಿಕ್ಕಿನಲ್ಲಿರುವ ಲವಣಸಮುದ್ರವನ್ನು ಪ್ರವೇಶಿಸುತಲಿಧೆ; ಇದರೀತಿ ಚಕ್ಷುಸ್ಸೆಂಬ ನದಿಯು ಆ ಬ್ರಹ್ಮಸ್ಥಾನದಿಂದ ಕ್ರಮವಾಗಿ ಮಾಲ್ಯವತ್ಪರ್ವತದ ಶಿಖರದಲ್ಲಿ ಬಿದ್ದು ಅಲ್ಲಿಂದ ಅತಿ ವೇಗದಿಂದ ಪ್ರವಹಿಸುತ ಕೇತುಮಾಲವರ್ಷ ಮಧ್ಯದಲ್ಲಿ ಹೊರಟು ಪಶ್ಚಿಮದಿಕ್ಕಿನಲ್ಲಿ ಲವಣ ಸಮುದ್ರವನ್ನು ಪ್ರವೇಶಿಸುತಲಿಧೆ; ಭದ್ರೆಯೆಂಬ ನದಿಯು ಉತ್ತರದಿಕ್ಕಿನಲ್ಲಿ ಮೇರುಶಿರಸ್ಸಿನಿಂದಿಳಿಯುತ ಕುಮುದಪರ್ವತವಲ್ಲಿ ಬಿದ್ದು ಅಲ್ಲಿಂದ

ನೀಲಪರ್ವತತ ಶಿಖರದಲ್ಲಿಳಿದು ಅಲ್ಲಿಂದ ಶ್ವೇತಪರ್ವತದ ಶಿಖರವನ್ನು ಹೊಂದಿ ಅಲ್ಲಿಂದ ಶೃಂಗವತ್ಪರ್ವತದ ಶಿಖರದಲ್ಲಿ ಬಿದ್ದು ಅಲ್ಲಿಂದ ಕೆಳಕ್ಕೆ ಪ್ರವಹಿಸುತ ಉತ್ತರ ಕುರುವರ್ಷವನ್ನು ದಾಟಿ ಉತ್ತರದಿಕ್ಕಿನಲ್ಲಿ ಲವಣಸಮುದ್ರವನ್ನು ಪ್ರವೇಶಿಸುತಲಿಧೆ; ಅದೇರೀತಿಯಿಂದ ಅಲಕನಂದೆಯೆಂಬ ನದಿಯೂ ಆ ಬ್ರಹ್ಮಸ್ಥಾನಕ್ಕೆ ದಕ್ಷಿಣದಿಗ್ಭಾಗದಿಂದ ಹೊರಟು ಕ್ರಮದಿಂದ ಅನೇಕ ಪರ್ವತ ಶಿಖರಗಳನ್ನತಿಕ್ರಮಿಸಿ ಅತಿ ತೀವ್ರವೇಗದಿಂದ ನಿಷಧ ಹೇಮಕೂಟ ಹಿಮವಂತಗಳೆಂಬ ಈ ಮೂರುಪರ್ವತಗಳ ಶಿಖರಗಳನ್ನು ಅತಿಕ್ರಮಿಸಿ ಅಲ್ಲಿಂದ ಭಾರತವರ್ಷವನ್ನು ವ್ಯಾಪಿಸಿಕೊಂಡು ದಕ್ಷಿಣದಿಕ್ಕಿನಲ್ಲಿ ಲವಣಸಮುದ್ರವನ್ನು ಪ್ರವೇಶಂಗೈಯುತಲಿಧೆ; ಮೇರುಪರ್ವತವೇ ಮೊದಲಾಗುಳ್ಳ ಅನೇಕ ಪರ್ವತಗಳಲ್ಲಿ ಉದ್ಭವಿಸಿದ ಅನೇಕಕೋಟಿ ಸಂಖ್ಯೆಗಳುಳ್ಳ ಕೆಲವು ನದೀನದಗಳೂ ಈ ವರ್ಷಗಳಲ್ಲಿರುವವು; ಆ ಒಂಭತ್ತು ವರ್ಷಗಳಲ್ಲಿಯೂ ಈ ಭರತವರ್ಷವನ್ನೇ ಕರ್ಮಕ್ಷೇತ್ರವೆಂದು ಹೇಳುವರು; ಮಿಕ್ಕ ಎಂಟು ವರ್ಷಗಳನ್ನು ಸ್ವರ್ಗಸುಖವನ್ನನುಭವಿಸುವ ಪುರುಷರ ಪುಣ್ಯಫಲಶೇಷಕ್ಕೆ ಭೋಗಸ್ಥಾನಗಳಾದ ಭೂಸ್ವರ್ಗಗಳೆಂದು ಋಷಿಗಳು ಹೇಳುವರು; ಈ ವರ್ಷಗಳಲ್ಲಿ ಮನುಷ್ಯಮಾನದಿಂದ ಹತ್ತುಸಾವಿರ ಸಂವತ್ಸರಗಳು ಜೀವಿಸುವವರಾಗಿ ದೇವತೆಗಳಿಗೆ ಸಮಾನರಾಗಿ ಹತ್ತು ಸಾವಿರ ಗಜಗಳ ಬಲವುಳ್ಳವರಾಗಿ ವಜ್ರದಂತೆ ಅತಿ ದೃಢವಾದ ಶರೀರದಲ್ಲಿರುವ ಬಲ ಯೌವನ ಸಂತೋಷಗಳಿಂದ ಅತಿ ಸಂತುಷ್ಟಗಳಾದ ರತಿಯಲ್ಲಿ ಉದ್ಯುಕ್ತಗಳಾದ ಸ್ತ್ರೀ ಪುರುಷ ಯುಗ್ಮಗಳ ಪರಸ್ಪರ ಸಂಭೋಗವಾದನಂತರದಲ್ಲಿ ತಮ್ಮ ಆಯುಸ್ಸಿನಲ್ಲಿ ಒಂದು ಸಂವತ್ಸರವು ಅವಶಿಷ್ಟವಾಗಿರುತಿರಲು ಒಂದೇ ಗರ್ಭವನ್ನು ಧರಿಸುವ ಪತ್ನಿಗಳುಳ್ಳವರಾಗಿಯೂ ಇರುವ ಪುರುಷರಿಗೆ ನಿರಂತರವು ಅತಿಶಯವಾಗಿ ವಿಷಯಸುಖವನ್ನನುಭವಿಸುವದರಿಂದ ತ್ರೇತಾಯುಗ ಸಮಾನವಾದ ಕಾಲವೇ ಆಗುವದು; ಆ ಎಂಟು ವರ್ಷಗಳಲ್ಲಿ ದೇವಶ್ರೇಷ್ಠರು ಸಕಲ ಋತುಗಳಲ್ಲಿಯೂ ವೃದ್ಧಿಹೊಂದುತಲಿರುವ ಪುಷ್ಪಗುಚ್ಛಗಳು ಫಲಗಳು ತಳಿರುಗಳು ಇವುಗಳ ಸಮೃದ್ಧಿಯಿಂದ ಅತ್ಯಂತವಾಗಿ ಬಾಗುತಲಿರುವ ಕೊಂಬೆಗಳು ಅವನ್ನು ಆಶ್ರಯಿಸಿಕೊಂಡಿರುವ ಬಳ್ಳಿಗಳೂ ಉಳ್ಳ ವೃಕ್ಷಗಳಿಂದ ಪ್ರಕಾಶಿಸುತಲಿರುವ ಮನೋಹರಗಳಾದ ವನಗಳುಳ್ಳ ಆಶ್ರಮಸ್ಥಾನಗಳಲ್ಲಿ ಆ ವರ್ಷಗಳಲ್ಲಿರುವ ಪರ್ವತಗಳ ಗುಹಾಪ್ರವೇಶಗಳಲ್ಲಿ ವಿಕಶಿತಗಳಾಗಿ ಅನೇಕ ವಿಧಗಳಾಗಿ ನೂತನಗಳಾಗಿರುವ ಕಮಲಗಳ ಪರಿಮಳದಿಂದ ಅತ್ಯಂತ ಸಂತೋಷಯುಕ್ತಗಳಾದ ರಾಜಹಂಸ ಕಲಹಂಸ ಜಲಕುಕ್ಕುಟ ಕಾರಂಡ ಸಾರಸ ಚಕ್ರವಾಕಗಳೇ ಮೊದಲಾಗುಳ್ಳ ಪಕ್ಷಿ ವಿಶೇಷಗಳಿಂದ ನಾನಾಜಾತೀಯ್ಯಗಳಾದ ತುಂಬಿಗಳ ಸಮೂಹಗಳಿಂದಲೂ ಧ್ವನಿಯುಕ್ತಗಳಾಗಿ ಮಾಡಲ್ಪಡುತಲಿರುವ ನಿರ್ಮಲವಾದ ಜಲವುಳ್ಳ ಸರಸ್ಸುಗಳಲ್ಲಿ ತಮ್ಮ ತಮ್ಮ ಸೇವಕಜನರಲ್ಲಿ ಪ್ರಮುಖರಾದ ಪುರುಷರಿಂದ ಮಾಡಲ್ಪಟ್ಟ ದಿವ್ಯೋಪಚಾರಗಳುಳ್ಳವರಾಗಿ ಜಲಕ್ರೀಡಾದಿಗಳಿಂದ ವಿಚಿತ್ರಗಳಾದ ವಿನೋದಗಳಿಂದ ಅತಿ ಮನೋಹರರಾದ ದೇವತಾಸ್ತ್ರೀಯರ ಕಾಮದಿಂದ ವೃದ್ಧಿಹೊಂದುತಲಿರುವ ವಿಲಾಸಗಳಿಂದಲೂ ಮುಗುಳುನಗೆಗಳಿಂದಲೂ ಸವಿನೋಟಗಳಿಂದಲೂ ಸೆಳೆಯಲ್ಪಟ್ಟ ಮನಸ್ಸುಳ್ಳವರಾಗಿ ಮನಸ್ಸುಬಂದಂತೆ ಕ್ರೀಡಿಸುತಲಿಧಾರೆ; ಪರಮಪುರುಷನಾದ ಭಗವಂತನಾದ ಶ್ರೀನಾರಾಯಣನು ಈ ಭಾರತಾದಿ ನವವರ್ಷಗಳಲ್ಲಿರುವ ಪುರುಷರನ್ನು ಅನುಗ್ರಹಿಸಲೋಸುಗ ತನ್ನ ಲೀಲಾಕಲ್ಪಿತಗಳಾದ ಮೂರ್ತಿಗಳ ಸಮೂಹದಿಂದ ಈಗಲೂ ಪ್ರತ್ಯಕ್ಷನಾಗುತಲಿಧಾನೆ; ಇಳಾವೃತವರ್ಷದಲ್ಲಿ ಭಗವಂತನಾದ ಪುರುಷನಾದ ಶ್ರೀ ರುದ್ರನು ಒಬ್ಬನೇ ಹೊರ್ತು ಪಾರ್ವತೀ ಶಾಪಕಾರಣವನ್ನು ತಿಳಿದಿರುವ ಪ್ರಾಕೃತನಾದ ಮತ್ತೊಬ್ಬ ಪುರುಷನು ಅಲ್ಲಿ ಪ್ರವೇಶಿಸುವದಿಲ್ಲ; ಅಲ್ಲಿ ಪ್ರವೇಶಿಸುತ ಪುರುಷನು ಆ ಕ್ಷಣದಲ್ಲೇ ಸ್ತ್ರೀಭಾವವನ್ನೈದುವನೆಂಬುವದಕ್ಕೆ ನಿಮಿತ್ತವನ್ನು ಮುಂದೆ ಒಂಭತ್ತನೇ ಸ್ಕಂಧದಲ್ಲಿ ನಿರೂಪಿಸುತ್ತೇನೆ! ಭಗವಂತನಾದ ಶ್ರೀರುದ್ರನು ಪಾರ್ವತೀ ಸೇವಕರಾದ ಅನೇಕ ಕೋಟಿ ಸ್ತ್ರೀಯರಿಂದ ಸೇವಿಸಲ್ಪಡುತಲಿರುವವನಾಗಿ ವಾಸುದೇವ ಪ್ರದ್ಯುಮ್ನ ಅನಿರುದ್ಧ ಸಂಕರ್ಷಣರೆಂಬ ಈ ಚತುರ್ವ್ಯೂಹಮೂರ್ತಿಗಳಲ್ಲಿ ನಾಲ್ಕನೆಯದಾಗಿ ತಮೋಗುಣಪ್ರಧಾನವಾಗಿ ತನಗೆ ಕಾರಣವಾಗಿರುವ ಸಂಕರ್ಷಣನಾಮಕವಾದ ಭಗವಂತನ ಮೂರ್ತಿಯನ್ನು ತನ್ನ ಮನಸ್ಸಿನಲ್ಲಿ ಧ್ಯಾನವಿಷಯವಾದ ರೂಪದಿಂದ ಪ್ರತ್ಯಕ್ಷವಾಗಿ ಸನ್ನಿಧಾನದಲ್ಲಿ ನಿಲ್ಲಿಸಿಕೊಂಡು ಈ ಮಂತ್ರವನ್ನು ಜಪಿಸುತ ಉಪಾಸನೆಯಂಗೈಯುತಲಿಧಾನೆ; ಆ ಮಂತ್ರಾರ್ಥವೇನಂದರೆ; ಭಗವಂತನಾಗಿ ಮಹಾಪುರುಷನಾಗಿ ಸಮಸ್ತ

ವಿಷಯಗಳಿಗೂ ಪ್ರಕಾಶಕನಾಗಿ ಅಪರಿಚ್ಛಿನ್ನನಾದ ಅನಂತಮೂರ್ತಿಗೋಸ್ಕರ ನಮಸ್ಕಾರವು ಎಂಬ ಅರ್ಥವುಳ್ಳ ಈ ಮಂತ್ರವನ್ನು ಜಪಿಸಿ ಸಂಕರ್ಷಣಮೂರ್ತಿಯನ್ನು ಸ್ತುತಿಸುವನು! ಎಲೈ ಸೇವಿಸಲು ಯೋಗ್ಯನಾದ ಸಂಕರ್ಷಣನೆ, ಲೋಕರಕ್ಷಕಗಳಾದ ಪಾದಪದ್ಮಗಳುಳ್ಳವನಾಗಿ ಸಂಪೂರ್ಣಗಳಾದ ಐಶ್ವರ್ಯ ಕೀರ್ತಿಗಳು ಸಂಪತ್ತು ಜ್ಞಾನ ವೈರಾಗ್ಯಗಳೆಂಬ ಆರು ಗುಣಗಳಿಗೆ ಮುಖ್ಯಾಶ್ರಯನಾಗಿ ಭಕ್ತರಲ್ಲಿ ಅತಿಶಯದಿಂದ ಪ್ರಕಟಂಗೈಯಲ್ಪಟ್ಟ ಸ್ವರೂಪವುಳ್ಳವನಾಗಿ ಆ ಭಕ್ತರ ಸಂಸಾರಬಂಧವನ್ನು ಪರಿಹರಿಸುವವನಾಗಿ ಆ ಭಕ್ತರಲ್ಲಿ ಸಂಸಾರಬಂಧವನ್ನುಂಟುಮಾಡುವವನಾಗಿರುವ ಈಶ್ವರನಾದ ನಿನ್ನನ್ನು ನಾನು ಭಜಿಸುತಲಿಧೇನೆ; ಕ್ರೋಧವೇಗವನ್ನು ಜಯಿಸಲಾರದಿರುವ ನಮ್ಮ ದೃಷ್ಟಿಯು ಯಾವರೀತಿ ವಿಷಯಾದಿಗಳಿಂದ ಸಂಬಂಧಿಸುತಲಿದೆಯೋ ಆರೀತಿ ನಿಗ್ರಹಾರ್ಥವಾಗಿ ನೋಡುತಲಿರುವವನಾದಾಗ್ಯೂ ಯಾವವನ ದೃಷ್ಟಿಯು ವಿಷಯಗಳಾದ ಇಂದ್ರಿಯಗಳಿಂದ ಸ್ವಲ್ಪವಾದರೂ ಲೇಪಯುಕ್ತವಾಗಿ ಮಾಡಲ್ಪಡಲಾರದೋ ಅದುಕಾರಣ ಅಂಥಾ ಶ್ರೀಹರಿಯನ್ನು ಇಂದ್ರಿಯಗಳಿಂದ ಜಯಿಸಲಿಚ್ಛೆಯುಳ್ಳ ಪುರುಷನು ಆದರಣೆಯಿಂದ ಸೇವಿಸುವನಾಗುವದಿಲ್ಲ; ದುಷ್ಟವಾದ ದೃಷ್ಟಿಯುಳ್ಳ ಪುರುಷನಿಗೆ ಯಾವ ಸಂಕರ್ಷಣಮೂರ್ತಿಯು ತನ್ನ ಮಾಯೆಯಿಂದ ಸುರಾ ಮದ್ಯಪಾನಗಳಿಂದ ಅತಿರಕ್ತಗಳಾದ ನೇತ್ರಗಳುಳ್ಳ ಮತ್ತನಂತೆ ಅತಿ ಭಯಂಕರನಾಗಿ ತೋರುವನೋ ನಾಗಕನ್ನೆಯರು ಯಾವವನ ಪೂಜಾಸಮಯದಲ್ಲಿ ಮೊದಲು ಪಾದಗಳ ಸ್ಪರ್ಶನಮಾತ್ರದಿಂದಲೇ ಸ್ಖಲಿತವಾದ ಇಂದ್ರಿಯವುಳ್ಳವರಾಗಿ ಲಜ್ಜೆಯಿಂದ ಭುಜಾದಿಗಳನ್ನು ಪೂಜಿಸುವದರಲ್ಲಿ ಸಮರ್ಥರಾಗುವದಿಲ್ಲವೋ ಅಂಥಾ ಸಂಕರ್ಷಣಮೂರ್ತಿಯನ್ನು ಯಾವ ಪುರುಷನು ಸೇವಿಸನು; ಯಾವ ಪುರುಷನು ಈ ಪ್ರಪಂಚದ ಸ್ಥಿತಿ ಜನ್ಮ ಲಯಗಳಿಗೆ ಕಾರಣನೆಂದೂ ಸ್ವತಃ ಸ್ಥಿತಿ ಜನ್ಮ ಲಯರಹಿತನೆಂದೂ ಅಪರಿಚ್ಛಿನ್ನನೆಂದೂ ಮಂತ್ರಗಳು ಹೇಳುವವೊ ಯಾವ ದೇವನು ಸಹಸ್ರಸಂಖ್ಯೆಯುಳ್ಳ ತನ್ನ ಶಿರಸ್ಸುಗಳೆಂಬ ಸ್ಥಾನಗಳಲ್ಲಿ ಏಕದೇಶದಲ್ಲಿರುವ ಈ ಭೂಮಂಡಲವನ್ನು ಬಿಳೀ ಸಾಸಿವೆಯಹಾಗೆ ಅರಿಯದಿಹನೋ ಅಂಥಾ ಸಂಕರ್ಷಣಮೂರ್ತಿಗೋಸ್ಕರ ನಮಸ್ಕಾರವು! ಯಾವ ಶ್ರೀಹರಿಯು ನಿಮಿತ್ತವಾಗಿ ಶರೀರವುಳ್ಳದ್ದಾಗಿ ಸತ್ವಗುಣವನ್ನು ಆಶ್ರಯಿಸಿರುವದಾಗಿ ಪ್ರಥಮ ಸೃಷ್ಟಿರೂಪವಾಗಿರುವ ಮಹತ್ತತ್ವವು ಹುಟ್ಟಿತೋ ಆ ಮಹತ್ತತ್ವರೂಪನೇ ಭಗವಂತನಾದ ಬ್ರಹ್ಮದೇವನು; ಅವನಿಂದ ಪ್ರತ್ಯಕ್ಷವಾಗಿ ಜನಿಸಿರುವ ಶ್ರೀ ರುದ್ರನಾದ ನಾನು ತ್ರಿಗುಣಾತ್ಮಕವಾದ ನನ್ನ ವಿಭೂತಿಸ್ವರೂಪವಾದ ಅಹಂಕಾರದಿಂದ ದೇವತಾಸಮೂಹವನ್ನೂ ಭೂತಸಮೂಹವನ್ನೂ ಇಂದ್ರಿಯಸಮೂಹವನ್ನೂ ಸೃಷ್ಟಿಯಂಗೈಯುತಲಿಧೇನೆ; ಮಹತ್ತತ್ವವು ನಾನು ಅಹಂಕಾರವು ದೇವತಾಗಣವು ಭೂತಸಮೂಹವು ಇಂದ್ರಿಯಸಮೂಹವು ಈ ಸಮಸ್ತರಾದ ನಾವೂ ಸೂತ್ರದಿಂದ ಪಕ್ಷಿಗಳಂತೆ ಕ್ರಿಯಾಶಕ್ತಿಯಿಂದ ಕಟ್ಟಲ್ಪಟ್ಟ ಇಂಥಾವರಾದಕಾರಣ ಯಾವ ಮಹಾತ್ಮನ ವಶದಲ್ಲಿರುವಂಥಾವರಾಗಿ ಯಾವವನ ಅನುಗ್ರಹದಿಂದಲೇ ಈ ಬ್ರಹ್ಮಾಂಡಸೃಷ್ಟಿಯನ್ನು ಮಾಡುತಲಿಧೇವೋ ಅಂಥಾ ಸಂಕರ್ಷಣಮೂರ್ತಿಗೋಸ್ಕರ ನಮಸ್ಕಾರವು! ಇಂದ್ರಿಯವ್ಯಾಪಾರಗಳಿಂದ ಮೋಹಿತರಾದ ಈ ಜನರು ಯಾವ ಶ್ರೀಹರಿಯಿಂದ ನಿರ್ಮಿಸಲ್ಪಟ್ಟದ್ದಾಗಿ ಕರ್ಮಗಳೆಂಬ ಗ್ರಂಥಿಗಳನ್ನು ಐದಿಸುತಲಿರುವ ಈ ಮಾಯೆಯನ್ನೇ ಸುಲಭವಾಗಿ ತಿಳಿಯದೆ ಮಾಯೆಯನ್ನು ದಾಟುವ ಉಪಾಯವನ್ನು ಒಂದು ಸಮಯದಲ್ಲಾದರೂ ಅರಿಯರೋ ಆ ಮಾಯೆಯ ಉತ್ಪತ್ತಿ ಸ್ಥಿತಿ ಲಯಗಳಿಗೆ ಸ್ಥಾನವಾದ ನಿಜಸ್ವರೂಪವುಳ್ಳವನಾಗಿ ಮಾಯೆಗೆ ಆಶ್ರಯನಾಗಿರುವ ಆ ಸಂಕರ್ಷಣಮೂರ್ತಿಗೋಸ್ಕರ ನಮಸ್ಕಾರವು—ಎಂದು ಶ್ರೀರುದ್ರನು ಇಳಾವೃತವರ್ಷದಲ್ಲಿ ನಿರಂತರವು ಸಂಕರ್ಷಣಮೂರ್ತಿಯನ್ನು ಸೇವಿಸುತಲಿಧಾನೆ."

---

೧೮ ನೇ ಅಧ್ಯಾಯ.

ವಕ್ಷಮಾಣವಾದ ಮೂರುಖಂಡಗಳಲ್ಲಿ ಭಗವಂತನ ಮೂರ್ತಿವಿಶೇಷಗಳನ್ನು ವರ್ಣಿಸಿದ್ದು.

"ಎಲೈ ಪರೀಕ್ಷಿದ್ರಾಯನೇ, ಅದೇರೀತಿ ಭದ್ರಾಶ್ವವರ್ಷದಲ್ಲಿ ಧರ್ಮಪುತ್ರನಾದ ಆ ವರ್ಷಾಧಿಪತಿಯಾದ ಭದ್ರಶ್ರವಸ್ಸೆಂಬ ಅರಸು ಅವನ ಸೇವಕರಲ್ಲಿ ಪ್ರಮುಖರಾದ ಪುರುಷರು ಸಾಕ್ಷಾದ್ಭಗವಂತನಾದ ಶ್ರೀವಾಸುದೇವನಿಗೆ ಅತಂ

ತ ಪ್ರಿಯವಾದ ಧರ್ಮಸ್ವರೂಪವಾದ ಹಯಗ್ರೀವಮೂರ್ತಿಯನ್ನು ಉತ್ಕೃಷ್ಟವಾದ ಸಮಾಧಿಯಿಂದ ಎದುರಿಗೆ ಸನ್ನಿಧಾನದಲ್ಲೇ ನಿಲ್ಲಿಸಿಕೊಂಡು ಈ ಮಂತ್ರವನ್ನು ಜಪಿಸುತ ಉಪಾಸನೆಯಂಗೈಯುತಲಿಧಾರೆ! ಆ ಮಂತ್ರಾರ್ಥ ವೇನೆಂದರೆ: ಭಗವಂತನಾದ ಮನಶ್ಶುದ್ಧಿಕರನಾದ ಧರ್ಮಪುರುಷನಿಗೋಸ್ಕರ ನಮಸ್ಕಾರವೆಂಬ ಈ ಅರ್ಥವುಳ್ಳ ಮಂತ್ರವನ್ನು ಜಪಿಸಿ ಅನಂತರದಲ್ಲಿ ಸ್ತೋತ್ರವಂಗೈವರು! ಈ ಪ್ರಪಂಚದಲ್ಲಿ ಜನರು ತುಚ್ಛವಾದ ವಿಷಯಸುಖ ವನ್ನು ಪಡೆಯುವದಕ್ಕೋಸ್ಕರ ಪಾಪಕೃತ್ಯವನ್ನೇ ಚಿಂತಿಸುತ ಬಾಲಕನಾಗಿ ಮೃತನಾದ ಪುತ್ರನನ್ನೂ ವೃದ್ಧನಾದ ತಂದೆಯನ್ನೂ ದಹಿಸಿದಂಥಾವರಾಗಿ ತಾವು ಆ ಪಿತಾಪುತ್ರರ ಧನಗಳಿಂದ ಜೀವಿಸಲಿಚ್ಛೈಸುತ ತಮ್ಮನ್ನು ಸಂಹರಿಸುವ ನನ್ನು ನೋಡುತಲಿರುವವರಾದಾಗ್ಯೂ ಕಾಣರು ಎಂಬ ಅರ್ಥದಲ್ಲಿ ಆಶ್ಚರ್ಯಕರವಾದ ಭಗವಂತನ ವ್ಯಾಪಾರವೇ ಹೊರ್ತು ಮತ್ತೊಂದು ಕಾರಣವಿಲ್ಲ! ಎಲೈ ವಾಸುದೇವನೆ, ಋಷಿಗಳು ಈ ಪ್ರಪಂಚವನ್ನು ಶಾಸ್ತ್ರದಿಂದ ನಶ್ವ ರವೆಂದು ಹೇಳುವರು; ತತ್ವಸ್ವರೂಪವನ್ನು ತಿಳದಿರುವ ಪಂಡಿತರು ಸಮಾಧಿಯಲ್ಲಿಯೂ ಈ ಪ್ರಪಂಚವನ್ನು ನಶ್ವ ರವನ್ನಾಗಿ ನೋಡುತಲಿಧಾರೆ; ಆದಾಗ್ಯೂ ಅಂಥಾ ಜ್ಞಾನಿಗಳು ನಿನ್ನ ಮಾಯೆಯಿಂದ ಮೋಹವನ್ನೈದುತಲಿಧಾರೆಂಬ ಈ ಅರ್ಥವು ಆಶ್ಚರ್ಯಕರವಾದ ನಿನ್ನ ಮಾಯಾ ವ್ಯಾಪಾರವೇ ಹೊರ್ತು ಮತ್ತೊಂದಲ್ಲ; ಅದುಕಾರಣ ಶಾಸ್ತ್ರಾ ದಿ ಶ್ರಮವನ್ನು ಬಿಟ್ಟು ಪರಮಾತ್ಮನಾದ ನಿನಗೆ ನಮಸ್ಕರಿಸುತಲಿಧ್ಧೇನೆ! ಎಲೈ ಹರಿಯೇ, ನೀನು ವಸ್ತುತಃ ಅಕ ರ್ತನಾದಾಗ್ಯೂ ಆವರಣವಿಲ್ಲದಿರುವವನಾದಾಗ್ಯೂ ನಿನ್ನಲ್ಲಿ ಈ ಪ್ರಪಂಚದ ಸೃಷ್ಟಿ ಸ್ಥಿತಿ ಪ್ರಳಯ ರೂಪವಾದ ಕ ರ್ಮವು ವೇದದಿಂದ ಅಂಗೀಕರಿಸಲ್ಪಟ್ಟದೆಯೆಂಬ ಈ ಅರ್ಥವು ಮಾಯೆಯಿಂದ ನೀನು ಸರ್ವಸ್ವರೂಪನಾಗಿ ಪ್ರಪಂ ಚದ ಸೃಷ್ಟ್ಯಾದಿಯನ್ನು ಮಾಡುತಲಿರುವವನಾದ್ದರಿಂದ ನಿನ್ನಲ್ಲಿ ಆಶ್ಚರ್ಯಕರವಲ್ಲ; ವಸ್ತುತಃ ಸರ್ವ ವ್ಯತಿರಿಕ್ತನಾಗಿ ಮಾಯೋಪಾಧಿರಹಿತನಾಗಿರುವ ನಿನ್ನಲ್ಲಿ ಅವರಣರಹಿತತ್ವವು ಅಕರ್ತೃತ್ವವೂ ಯುಕ್ತವು; ಯುಗಪ್ರಳಯದಲ್ಲಿ ಶಂಖನೆಂಬ ದೈತ್ಯನಿಂದ ಅಪಹರಿಸಲ್ಪಟ್ಟ ವೇದಗಳನ್ನು ಯಾವ ಹಯಗ್ರೀವಮೂರ್ತಿಯು ಆ ದೈತ್ಯನನ್ನು ಸಂಹರಿ ಸಿ ಪಾತಾಳಲೋಕದಿಂದ ತಂದು ಅವುಗಳನ್ನೇ ಪ್ರಾರ್ಥನಂಗೈಯುತಲಿರುವ ಬ್ರಹ್ಮದೇವನಿಗೋಸ್ಕರ ಇತ್ತನೋ ಸತ್ಯಸಂಕಲ್ಪನಾದ ಅಂಥಾ ಹಯಗ್ರೀವಸ್ವಾಮಿಗೋಸ್ಕರ ನಮಸ್ಕಾರವು! ಭದ್ರಶ್ರವಸ್ಸು ಮೊದಲಾದವರು ಸ್ತುತಿ ಸುವರು: ಹರಿವರ್ಷದಲ್ಲಿ ಭಗವಂತನು ನರಸಿಂಹರೂಪದಿಂದ ಸೇವಿಸಲ್ಪಡುತಲಿಹನು; ಆ ನೃಸಿಂಹಾವತಾರಕ್ಕೆ ಕಾರಣವನ್ನು ಮುಂದೆ ಪ್ರಹ್ಲಾದಚರಿತ್ರೆಯಲ್ಲಿ ನಿನಗೆ ನಿರೂಪಿಸುತ್ತೇನೆ; ಆ ಹರಿವರ್ಷದಲ್ಲಿ ಮಹಾಪುರುಷ ಸಮೂಹಗಳಿಗೆ ಆಶ್ರಯನಾಗಿ ಮಹಾ ಭಾಗವತನಾಗಿ ದೈತ್ಯ ದಾನವ ಕುಲಗಳನ್ನು ಪಾವನಂಗೈವದರಲ್ಲಿ ಯೋ ಗ್ಯವಾದ ಚರಿತ್ರೆಯುಳ್ಳವನಾಗಿರುವ ಪ್ರಹ್ಲಾದನು ಅತ್ಯಂತ ಇಷ್ಟವಾದ ನೃಸಿಂಹಮೂರ್ತಿಯನ್ನು ಫಲವು ಬೇ ಕೆಂಬ ಸಂಕಲ್ಪದಿಂದ ರಹಿತವಾದ್ದರಿಂದ ವ್ಯವಧಾನವಿಲ್ಲದಿರುವ ಏಕಾಗ್ರ ಭಕ್ತಿಯೋಗದಿಂದ ಆ ವರ್ಷದಲ್ಲಿರುವ ಪುರುಷರೊಡನೆ ಈ ಮಂತ್ರವನ್ನು ಜಪಿಸಿ ಉಪಾಸನೆಯಂಗೈಯುತಲಿಧಾನೆ! ಭಗವಂತನಾಗಿ ಸೂರ್ಯಾದಿ ದೇ ವತೆಗಳ ತೇಜಸ್ಸುಗಳಿಗೂ ಪ್ರಕಾಶಕನಾದ ನೃಸಿಂಹಮೂರ್ತಿಗೋಸ್ಕರ ನಮಸ್ಕಾರವು! ವಜ್ರದಂತೆ ಅತಿ ಕಠಿನ ಗಳಾದ ಉಗುರುಗಳೂ ವಜ್ರದಂತೆ ಕಠಿನಗಳಾದ ಕೋರದಾಡೆಗಳೂ ಉಳ್ಳ ದೇವನೇ ಕರ್ಮವಾಸನೆಗಳನ್ನು ದಹಿಸಿ ಅಜ್ಞಾನವನ್ನು ಕಬಳಿಸಿ ನನಗೆ ಅಭಯಸ್ವರೂಪನಾಗು! ಎಂಬ ಈ ಮಂತ್ರವನ್ನು ಜಪಿಸಿ ಅನಂತರದಲ್ಲಿ ಸ್ತೋ ತ್ರಂಗೈಯುತ ಪ್ರಪಂಚಕ್ಕೆ ಕ್ಷೇಮವುಂಟಾಗಲಿ; ದುರ್ಜನನು ಕ್ರೂರಭಾವವನ್ನು ಬಿಡಲಿ; ಸಕಲ ಭೂತಗಳು ಪರಸ್ಪರವಾಗಿ ಶುಭವನ್ನೇ ಬುದ್ಧಿಯಿಂದ ಭಾವಿಸುತಲಿರಲಿ; ಆ ಭೂತಗಳ ಮನಸ್ಸು ಉಪಶಾಂತಿಮೊದಲಾದ ಸದ್ಗು ಣಗಳನ್ನು ಹೊಂದಲಿ; ನಮ್ಮ ಬುದ್ಧಿಯು ಶ್ರೀ ವಾಸುದೇವನಲ್ಲೇ ನಿಷ್ಕಾಮವಾಗಿ ನಿರಂತರವು ನಿಂತಿರಲಿ; ನಮಗೆ ಬಂದರಲ್ಲೂ ಸಂಗವಿಲ್ಲದೆ ಹೋಗಲಿ; ಯಾವರೀತಿಯಿಂದಾದರೂ ಬಂದು ಸಮಯದಲ್ಲಿ ಸಂಗವುಂಟಾದರೆ ಆಗಲೂ ಗೃಹ ಪತ್ನೀ ಪುತ್ರ ಧನ ಬಂಧುಗಳಲ್ಲಿ ಸಂಗವುಂಟಾಗಬೇಡ; ನಮಗೆ ಭಗವದ್ಭಕ್ತರಲ್ಲೇ ಸಂಗವುಂಟಾಗಲಿ; ಎಷ್ಟರಿಂದ ತನಗೆ ಪ್ರಾಣಧಾರಣೆಯಾದೀತೊ ಅಷ್ಟುಮಾತ್ರ ವಸ್ತುವಿನಿಂದ ಅತಿ ಸಂತುಷ್ಟನಾದ ಜ್ಞಾನಿಯು ಎಂತು ಶೀಘ್ರವಾಗಿ ಮೋಕ್ಷಸಿದ್ಧಿಯನ್ನೈದುವನೋ ಆರೀತಿ ಗೃಹಾದಿಗಳಲ್ಲಿ ಆಸಕ್ತನಾದ ಪುರುಷನು ಸಿದ್ಧಿಯನ್ನೈದಲಾ ರನು; ಭಗವದ್ಭಕ್ತರ ಸಂಗದಿಂದ ಪಡೆಯಲ್ಪಟ್ಟ ಅಸಾಧಾರಣವಾದ ಪ್ರಭಾವಾತಿಶಯವುಳ್ಳ ಶ್ರೀಹರಿ ಚರಿತ್ರೆಯನ್ನು

ಶ್ರೋತ್ರಾದಿಗಳಿಂದ ಶೇವಿಸುತಲಿರುವ ಪುರುಷರ ಚಿತ್ತಕಲ್ಮಷವನ್ನು ಅಂತರ್ಯಾಮಿಯಾದ ವಾಸುದೇವನು ಪರಿಹರಿಸುತಲಿಧಾನೆ; ಗಂಗಾತೀರ್ಥವಾದರೋ ಬಾರಿಬಾರಿಗೂ ತನ್ನನ್ನು ಶೇವಿಸುತಲಿರುವ ಪುರುಷರ ದೇಹದಲ್ಲಿರುವ ಕಲ್ಮಷವನ್ನು ಮಾತ್ರ ಪರಿಹರಿಸುತಲಿಧೆಯೋ ಹೊರ್ತು ಚಿತ್ತದೋಷವನ್ನು ಪರಿಹರಿಸಲಾರದು; ಅದುಕಾರಣ ಯಾವ ಪುರುಷನಾದರೂ ಅಂಥಾ ಭಗವದ್ಭಕ್ತರನ್ನು ಸೇವಿಸದಿರುವನೆ; ಯಾವ ಪುರುಷನಿಗೆ ಭಗವಂತನಲ್ಲಿ ನಿಷ್ಕಾಮವಾದ ಪರಿಶುದ್ಧವಾದ ಭಕ್ತಿಯುಂಟಾಗುವದೋ ಆ ಪುರುಷನಲ್ಲಿ ಭಗವಂತನ ಪ್ರಸಾದದಿಂದ ಸಕಲ ದೇವತೆಗಳೂ ಧರ್ಮಜ್ಞಾನಾದಿ ಸಕಲ ಗುಣಗಳೊಡನೆ ಕೂಡಿ ನಿರಂತರವೂ ವಾಸಂಗೈವರು; ಅಸತ್ಯವಾದ ವಿಷಯಸುಖದಲ್ಲಿ ಅಭಿಲಾಷೆಯಿಂದ ಹೊರಗೆ ಸುತ್ತುತಲಿರುವನಾದ್ದರಿಂದ ಶ್ರೀಹರಿ ಭಕ್ತಿರಹಿತನಾದ ಪುರುಷನಿಗೆ ಮಹಾತ್ಮರ ಜ್ಞಾನವೈರಾಗ್ಯಾದಿ ಗುಣಗಳು ಎಂತು ಉಂಟಾಗುವವು; ಲೋಕದಲ್ಲಿ ಮತ್ಸ್ಯಗಳು ಜಲವನ್ನು ಬಿಟ್ಟ ಮಾತ್ರದಿಂದ ಜೀವಿಸುವದು ಅಸಿದ್ಧವಾದ್ದರಿಂದ ಇಷ್ಟವಾದ ಆ ಜಲವೇ ಅವಕ್ಕೆ ಎಂತು ಆತ್ಮಸ್ವರೂಪವೋ ಅದೇರೀತಿ ಭಗವಂತನಾದ ಶ್ರೀಹರಿಯು ಪ್ರಾಣಿಗಳಿಗೆ ಆತ್ಮನಾಗಿಹನು; ಜಗತ್ತಿನಲ್ಲಿ ದೊಡ್ಡವನೆಂದು ಪ್ರಸಿದ್ಧನಾದ ಪುರುಷನೂ ಕೂಡಾ ಆತ್ಮಸ್ವರೂಪನಾದ ಅಂಥಾ ಹರಿಯನ್ನು ಬಿಟ್ಟು ಗೃಹದಲ್ಲಿ ಆಸಕ್ತನಾದರೆ ಆಗ ಶೂದ್ರಾದಿ ದಂಪತಿಗಳಲ್ಲಿ ಪ್ರಸಿದ್ಧವಾಗಿ ವಯಸ್ಸಿನಿಂದ ಮಾತ್ರವೇ ಉಂಟಾಗಿರುವ ಯಾವ ಮಹತ್ವವುಂಟೋ ಅಂಥಾ ಮಹತ್ವವೇ ಅವನಿಗೆ ಉಂಟಾಗುವದೇ ಹೊರ್ತು ಜ್ಞಾನಾದಿಗಳಿಂದ ಮಹತ್ವ ಉಂಟಾಗಲಾರದು; ಅದುಕಾರಣ ಆಶಾಭಿನಿವೇಶ ದುಃಖ ಕ್ರೋಧ ಮಾನ ಭಯ ದೈನ್ಯಾದಿಗಳಿಗೆ ಮೂಲಕಾರಣವಾಗಿ ವಿಚ್ಛೇದವಿಲ್ಲದೆ ಜನ್ಮಮರಣಗಳನ್ನು ಕಲ್ಪಿಸುತಲಿರುವ ಗೃಹವನ್ನು ಬಿಟ್ಟು ಯಾವರೀತಿಯಿಂದಲೂ ಭಯವಿಲ್ಲದಿರುವ ಶ್ರೀ ನರಸಿಂಹಮೂರ್ತಿಯ ಪಾದಾರವಿಂದವನ್ನು ಭಜಿಸುವರಾಗೀ ಎಂದು ಪ್ರಹ್ಲಾದನು ನಿರಂತರವು ಅಸುರರಿಗೆ ಉಪದೇಶಂಗೈಯುತಲಿಧಾನೆ! ಎಲೈ ಅರಸೆ, ಅದೇರೀತಿ ಕೇತುಮಾಲವರ್ಷದಲ್ಲಿ ಭಗವಂತನು ಕಾಮದೇವಸ್ವರೂಪನಾಗಿ ಲಕ್ಷ್ಮೀದೇವಿಗೆ ಸಂವತ್ಸರಕ್ಕೆ ಪುತ್ರರಾದ ಮುವ್ವತ್ತಾರು ಸಾವಿರ ಅಹರಭಿಮಾನಿ ದೇವತೆಗಳಿಗೂ ಸಂವತ್ಸರಕ್ಕೆ ಪುತ್ರಿಯರಾದ ಮುವ್ವತ್ತಾರುಸಾವಿರ ರಾತ್ರ್ಯಭಿಮಾನಿ ದೇವತೆಗಳಿಗೂ ಆ ಕೇತುಮಾಲವರ್ಷಕ್ಕೆ ಅಧಿಪತಿಗಳಾದ ಪುರುಷರಿಗೂ ಪ್ರೀತಿಯನ್ನು ಮಾಡಲಿಚ್ಛೆಯಿಂದ ಇಧಾನೆ; ಅಲ್ಲಿ ಮಹಾವಿಷ್ಣುವಿನ ಚಕ್ರಾಯುಧದ ತೇಜಸ್ಸಿನಿಂದ ಭಯಪಟ್ಟ ಮನಸ್ಸುಳ್ಳ ಆ ರಾತ್ರ್ಯಭಿಮಾನಿ ದೇವತೆಗಳ ಗರ್ಭಗಳು ಭಗ್ನಗಳಾದರೂ ಬಂದು ಸಂವತ್ಸರದ ಕೊನೆಯಲ್ಲಿ ಪ್ರಾಣರಹಿತಗಳಾಗಿ ಕೆಳಕ್ಕೆ ಬೀಳುತಲಿವೆ; ಆ ಕಾಮದೇವಸ್ವರೂಪನಾದ ಭಗವಂತನು ಅತ್ಯಂತ ಮನೋಹರವಾದ ಗಮನದಿಂದ ಪುಟ್ಟಿದ ವಿಲಾಸದಿಂದ ಪ್ರಕಾಶಿತವಾಗಿ ಮನೋಹರವಾಗಿರುವ ಮುಗುಳುನಗೆಯೊಡನೆ ಕೂಡಿರುವ ಕಟಾಕ್ಷವೀಕ್ಷಣವೆಂಬ ಲೀಲೆಯಿಂದ ಸ್ವಲ್ಪವಾಗಿ ಎತ್ತಲ್ಪಟ್ಟ ಸುಂದರವಾದ ಹುಬ್ಬುಗಳೆರಡರಿಂದ ಮನೋಹರವಾದ ಮುಖವೆಂಬ ಕಮಲದ ಕಾಂತಿಯಿಂದ ಲಕ್ಷ್ಮೀದೇವಿಯನ್ನು ಸಂತೋಷಪಡಿಸುತ ತನ್ನ ಇಂದ್ರಿಯಗಳನ್ನು ಸಂತೋಷಪಡಿಸುತಲಿಧಾನೆ; ಆ ಲಕ್ಷ್ಮೀದೇವಿಯು ರಾತ್ರಿಗಳಲ್ಲಿ ರಾತ್ರ್ಯಭಿಮಾನಿ ದೇವತೆಗಳೊಡನೆಯೂ ಅಹಸ್ಸುಗಳಲ್ಲಿ ಅಹರಭಿಮಾನಿ ದೇವತೆಗಳೊಡನೆಯೂ ಕೂಡ ಆ ಭಗವಂತನ ಮಾಯಾಸ್ವರೂಪವಾದ ಸುಂದರರೂಪವನ್ನು ಉತ್ಕೃಷ್ಟವಾದ ಸಮಾಧಿಯೋಗದಿಂದ ಉಪಾಸನೆಯಂಗೈಯ್ಯುತ ಈ ಮಂತ್ರವನ್ನು ಜಪಿಸುತ 'ಎಲೈ ಭಗವಂತನಾಗಿ ಇಂದ್ರಿಯಗಳಿಗೆ ನಿಯಾಮಕನಾಗಿ ಉತ್ಕೃಷ್ಟಗಳಾದ ಸಮಸ್ತವಸ್ತುಗಳಿಂದ ಲಕ್ಷ್ಯವಾಗಿ ಮಾಡಲ್ಪಟ್ಟ ಮನಸ್ಸುಳ್ಳವನಾಗಿ ಸಮಸ್ತಗಳಾದ ಕರ್ಮಗಳಿಗೂ ಜ್ಞಾನಗಳಿಗೂ ಸಂಕಲ್ಪ ವ್ಯವಸಾಯಗಳೇ ಮೊದಲಾಗುಳ್ಳ ಮನೋವೃತ್ತಿಗಳಿಗೂ ಆಯಾ ವಿಷಯಗಳಿಗೂಕೂಡ ಅಧಿಪತಿಯಾಗಿ ಹನ್ನೊಂದು ಇಂದ್ರಿಯಗಳು ಐದು ವಿಷಯಗಳು ಹದಿನಾರು ಅಂಶಗಳುಳ್ಳವನಾಗಿ ವೇದೋಕ್ತ ಕರ್ಮಗಳಿಂದ ಪಡೆಯಲು ಯೋಗ್ಯನಾಗಿ ಅನ್ನಸ್ವರೂಪನಾಗಿ ಅಮೃತಸ್ವರೂಪನಾಗಿ ಸರ್ವಸ್ವರೂಪನಾಗಿ ಇಂದ್ರಿಯ ಮನೋದೇಹಶಕ್ತಿಗಳನ್ನು ವೃದ್ಧಿಹೊಂದಿಸುವವನಾಗಿ ನಾಥನಾಗಿರುವ ಇಂಥಾ ಕಾಮದೇವನಾದ ನಿನಗೋಸ್ಕರ ಮನಸ್ಸಿನಿಂದಲೂ ವಾಕ್ಕಿನಿಂದಲೂ ನಮಸ್ಕಾರವು ಎಂಬ ಅರ್ಥವುಳ್ಳ ಮಂತ್ರವನ್ನು ಜಪಿಸಿ ಸ್ತೋತ್ರಂಗೈಯುತಲಿರುವಳು! ಎಲೈ ಹರಿಯೇ, ಲೋಕದಲ್ಲಿ ಯಾವ ಸ್ತ್ರೀಯರು ಅಭಿಮ

ತರಾದ ಪತಿಗಳನ್ನು ಪಡೆಯ ಲಿಚ್ಛೆಯುಳ್ಳವರಾಗಿ ಸ್ವಭಾವದಿಂದಲೇ ಸಕಲ ವಿಷಯೇಂದ್ರಿಯಗಳಿಗೆ ಪತಿಯಾಗಿ ಕಾಮಸ್ವರೂಪನಾಗಿರುವ ನಿನ್ನನ್ನು ವ್ರತಗಳಿಂದ ಸೇವಿಸಿ ಅನ್ಯರಾದ ಪತಿಗಳನ್ನು ಅಪೇಕ್ಷಿಸುತಲಿದ್ದಾರೋ ಆ ಸ್ತ್ರೀಯರ ಇಷ್ಟರಾದ ಪುತ್ರರನ್ನು ಧನವನ್ನು ಆಯುಸ್ಸನ್ನೂ ಆ ಪತಿಗಳು ತಾವು ಅಸ್ವತಂತ್ರರಾದ್ದರಿಂದ ರಕ್ಷಿಸುವದಕ್ಕೆ ಸಮರ್ಥರಾಗುವದಿಲ್ಲ; ಯಾವ ಪುರುಷನು ತಾನು ಬುದರಿಂದಲೂ ಭಯಪಡದೆ ಭಯದಿಂದ ಪೀಡಿತರಾದ ಜನರನ್ನು ಸಕಲೋಪದ್ರವಗಳಿಂದಲೂ ರಕ್ಷಿಸುತಲಿದ್ದಾನೆಯೋ ಅವನೇ ಪತಿಯಾಗುವನೇ ಹೊರ್ತು ಮತ್ತೊಬ್ಬನಲ್ಲ; ನೀನು ಆತ್ಮಲಾಭಕ್ಕಿಂತಲೂ ಅನ್ಯವಾದ ಪದಾರ್ಥವನ್ನು ಅಧಿಕವೆಂದು ತಿಳಿಯದೇ ಸ್ವತಂತ್ರನಾಗಿರುವೆ ಯಾವ ಕಾರಣ ಅಂಥಾ ಗುಣಗಳಿಂದ ಯುಕ್ತನಾದ ಆ ಪತಿಯು ನೀನೊಬ್ಬನೇ ಸರಿ; ಅನ್ಯರಾದ ಪತಿಗಳು ಸ್ವತಂತ್ರರಲ್ಲದಿರುವದರಿಂದ ಅವರು ಪತಿಗಳೇ ಅಲ್ಲ; ಸರ್ವರೂ ಸ್ವತಂತ್ರರಾದರೆ ಆಗ ಮಂಡಲಾಧಿಪತಿಗಳಿಗೆ ಎಂತು ಒಬ್ಬರಿಂದ ಒಬ್ಬರಿಗೆ ಭಯವುಂಟಾಗುವದೋ ಅದೇರೀತಿ ಒಬ್ಬರಿಂದ ಒಬ್ಬರಿಗೆ ಭಯವುಂಟಾಗಿ ಎಲ್ಲರೂ ನಷ್ಟರಾಗುವರು; ಅದುಕಾರಣ ಒಬ್ಬರೂ ಸ್ವತಂತ್ರರಲ್ಲ; ಒಬ್ಬರೂ ಪತಿಗಳಲ್ಲ; ಸ್ವತಂತ್ರನು ನೀನೇ ಪತಿಯು ನೀನೇ ಸರಿ! ಎಲೈ ಭಗವಂತನೆ, ಯಾವ ಸ್ತ್ರೀಯು ಅಂಥಾ ನಿನ್ನ ಪಾದಾರವಿಂದ ಪೂಜೆಯನ್ನು ಹೊರ್ತು ಮತ್ತೊಂದು ಫಲವನ್ನು ಅಪೇಕ್ಷಿಸುವಳಾಗಳೊ ಆ ಸ್ತ್ರೀಯು ಸಕಲ ಇಷ್ಟಾರ್ಥಗಳನ್ನು ಪಡೆಯುತಲಿದ್ದಾಳೆ; ಮತ್ತೊಂದು ಫಲವನ್ನು ಪಡೆಯಲೋಸುಗ ಅಪೇಕ್ಷೆಯಿಂದ ನೀನು ಪೂಜಿಸಲ್ಪಟ್ಟವನಾದರೆ ಆಗ ಫಲಾನುಭವಾನಂತರದಲ್ಲಿ ಆ ಸ್ತ್ರೀಯು ನಷ್ಟವಾದ ಇಷ್ಟಾರ್ಥವುಳ್ಳವಳಾಗಿ ಸಂತಾಪವನ್ನೈದುವಳೋ ಅಂಥಾ ಅನಿತ್ಯವಾದಫಲವನ್ನೇ ನೀನು ಅವಳಿಗೆ ಕೊಡುತಲಿದ್ದೀಯೇ ಹೊರ್ತು ನಿತ್ಯವಾದ ಫಲಗಳನ್ನು ಕೊಡುವದಿಲ್ಲ! ಎಲೈ ಸ್ವಾಮಿಯೆ, ಇಂದ್ರಿಯಸುಖದಲ್ಲಿ ಮನಸ್ಸುಳ್ಳವರಾಗಿ ಬ್ರಹ್ಮ ರುದ್ರಾದಿ ದೇವತೆಗಳು ನಿನ್ನ ಕಟಾಕ್ಷವನ್ನು ಪಡೆಯಲೋಸುಗ ಅತಿ ಭಯಂಕರವಾದ ತಪಸ್ಸಂಗೈಯುತಲಿದ್ದಾರೆ; ಆದಾಗ್ಯೂ ಬ್ರಹ್ಮಾದಿಗಳು ಭಗವಂತನಾದ ನಿನ್ನ ಪಾದಾರವಿಂದ ಭಜನೆಯನ್ನು ಹೊರ್ತು ನಿನ್ನಲ್ಲೇ ಚಿತ್ತವುಳ್ಳವಳಾಗಿ ಅಸ್ವತಂತ್ರಳಾಗಿರುವ ನನ್ನ ಕಟಾಕ್ಷವಿಲಾಸಗಳನ್ನು ಪಡೆಯಲಾರರು; ನಾನು ನಿನ್ನನ್ನೇ ಸೇವಿಸುತಲಿರುವ ಪುರುಷರನ್ನು ನೋಡುವೆನೇ ಹೊರ್ತು ಮತ್ತೊಬ್ಬರನ್ನು ಕಟಾಕ್ಷಿಸುವಳಲ್ಲ! ಎಲೈ ಅಚ್ಯುತನೆ, ಸಕಲ ಪುರುಷಾರ್ಥ ಸಿದ್ಧಿಗೂ ಕಾರಣನಾದ ನಿನ್ನ ಯಾವ ಹಸ್ತಕಮಲವು ಭಕ್ತರ ಶಿರಸ್ಸಿನಲ್ಲಿ ದಯೆಯಿಂದ ಇರಿಸಲ್ಪಡುವದೋ ಸಕಲ ಇಷ್ಟಾರ್ಥಗಳನ್ನು ಕೊಡೋಣದರಿಂದ ಸತ್ಪುರುಷರಿಂದ ಶ್ಲಾಘನಂಗೈಯಲ್ಪಟ್ಟ ಅಂಥಾ ನಿನ್ನ ಹಸ್ತಕಮಲವನ್ನು ನನ್ನ ಶಿರಸ್ಸಿನಲ್ಲಿರಿಸುವವನಾಗು; ನೀನು ವಕ್ಷಸ್ಸಿನಲ್ಲಿ ನನ್ನನ್ನು ಚಿಹ್ನೆಯನ್ನಾಗಿ ಧರಿಸುತಲಿದ್ದೀಯೆ; ಆದರೂ ನನ್ನಲ್ಲಿ ನಿನಗೆ ಆದರಣೆಮಾತ್ರವೇ ಸರಿ; ಭಕ್ತರಲ್ಲೇ ಅತ್ಯಂತ ದಯೆಯಿರುವನು; ಇದು ಆಶ್ಚರ್ಯವಲ್ಲವೇ? ಅದುಕಾರಣ ಈಶ್ವರನಾದ ನಿನ್ನ ಮಾಯಾವ್ಯಾಪಾರವನ್ನು ಯಾವ ಪುರುಷನೂ ಊಹಿಸುವದಕ್ಕೆ ಸಮರ್ಥನಾಗಲಾರನು’ ಎಂದು ಲಕ್ಷ್ಮೀದೇವಿಯು ಕಾಮಸ್ವರೂಪನಾದ ಭಗವಂತನನ್ನು ಸ್ತೋತ್ರಂಗೈದಳು.

“ಎಲೈ ಅರಸೆ, ರಮ್ಯಕವರ್ಷದಲ್ಲಿ ಭಗವಂತನಿಗೆ ಅತ್ಯಂತ ಇಷ್ಟವಾದ ಮತ್ಸ್ಯಾವತಾರರೂಪವು ಆ ವರ್ಷಕ್ಕೆ ಅಧಿಪತಿಯಾದ ಮನುವಿಗೆ ಪೂರ್ವದಲ್ಲಿ ಭಗವಂತನಿಂದಲೇ ತೋರಿಸಲ್ಪಟ್ಟಿತು; ಈಗಲೂ ಆ ಸತ್ಯವ್ರತನೆಂಬ ಮನುವು ಮಹತ್ತಾದ ಭಕ್ತಿಯೋಗದಿಂದ ಆ ಮತ್ಸ್ಯಮೂರ್ತಿಯನ್ನು ಆರಾಧನಂಗೈಯುತಲಿದ್ದಾನೆ; ಭಗವಂತನಾಗಿ ಸದ್ಗುಣಪ್ರಧಾನನಾದ ಅತಿ ಪ್ರಮಾಣವಾದ ಶರೀರವುಳ್ಳ ಇಂದ್ರಿಯಶಕ್ತಿ ಮನಶ್ಶಕ್ತಿ ದೇಹಶಕ್ತಿಗಳನ್ನು ವೃದ್ಧಿಹೊಂದಿಸುತಲಿರುವ ಮತ್ಸ್ಯಮೂರ್ತಿಗೋಸುಗ ನಮಸ್ಕಾರವು ಎಂಬ ಅರ್ಥವುಳ್ಳ ಮಂತ್ರವನ್ನು ಜಪಿಸಿ ಆ ಸತ್ಯವ್ರತನು ಸ್ತೋತ್ರಂಗೈದನು! ‘ಎಲೈ ಹರಿಯೆ, ನೀನು ಇಂದ್ರಾದಿ ಸಕಲ ಲೋಕಪಾಲಕರಿಗೂ ಅದೃಶ್ಯನಾಗಿ ಸಕಲ ಭೂತಗಳಿಗೂ ಅಂತರ್ಯಾಮಿರೂಪನಾಗಿ ವೇದಸ್ವರೂಪವಾದ ಧ್ವನಿಯುಳ್ಳವನಾಗಿ ಸಂಚರಿಸುತಲಿದ್ದೀಯೆ; ಯಾವ ಮುಖ್ಯಪುರುಷನು ಈ ಪ್ರಪಂಚವನ್ನೂ ಬ್ರಾಹ್ಮಣಾದಿಗಳನ್ನೂ ವಿಧಿನಿಷೇಧಾತ್ಮಕವಾದ ಶಾಸ್ತ್ರದಿಂದ ಎಂತು ಸೂತ್ರಧಾರಿಯು ತನ್ನ ಸೂತ್ರದಿಂದ ಮರದ ಬೊಂಬೆಯನ್ನು ತನ್ನ ವಶವನ್ನೈದಿಸುವನೋ ಅದೇ ರೀತಿ ತನ್ನ ವಶವನ್ನು ಐದಿಸುವಂಥಾ ಈಶ್ವರನೇ ನೀನು! ಎಲೈ ಹರಿಯೆ, ಪರಸ್ಪರ ಅಸೂಯೆಯೆಂಬ ಜ್ವರದೊ

ತನೆ ಕೂಡಿರುವ ಇಂದ್ರಾದಿ ಲೋಕಪಾಲಕರು ಪ್ರತ್ಯೇಕವಾಗಿ ತಾವು ಸಂಘಿಭವಿಸಿ ಅತಿ ಸಾಹಸಗೈಯುತ್ತಲಿರುವಂಥಾ ಪರಾಧೀನರಾಗಿಹ ಯಾವ ನಿನ್ನನ್ನು ಹೊರತು ಚೇತನಾಚೇತನಾತ್ಮಕವಾಗಿ ನಾನಾಪ್ರಕಾರವಾಗಿರುವ ಈ ದೃಶ್ಯ ಪ್ರಪಂಚವನ್ನು ಸ್ವಲ್ಪವನ್ನಾದರೂ ರಕ್ಷಿಸುವದಕ್ಕೆ ಶಕ್ತರಾಗುವದಿಲ್ಲವೋ ಅಂಥಾ ನೀನೇ ಈ ಪ್ರಪಂಚಕ್ಕೆ ಪ್ರಾಣರೂಪದಿಂದ ಪಾಲಕನಾಗಿಯೂ ಈಶ್ವರನಾಗಿಯೂ ಇದ್ದೀಯೆ; ಯಾವ ನೀನು ಈಶ್ವರನಾದ್ದರಿಂದ ಓಷಧಿಗಳಿಗೂ ಬಳ್ಳಿಗಳಿಗೂ ಆಶ್ರಯವಾಗಿ ಮನುವಾದ ನನ್ನೊಡನೆ ಯುಕ್ತವಾಗಿರುವ ಭೂಮಿಯನ್ನು ಪೃಷ್ಠಭಾಗದಲ್ಲಿ ಧರಿಸಿ ಅನೇಕ ತರಂಗಪಙ್ಕ್ತಿಗಳಿಂದ ಪರಿಪೂರ್ಣವಾದ ಪ್ರಳಯಕಾಲದಲ್ಲಿರುವ ಮಹಾ ಸಮುದ್ರದಲ್ಲಿ ನಿಜಶಕ್ತಿಯಿಂದ ಸಂಚರಿಸುತ್ತಲಿದ್ದೀಯೋ ಜಗತ್ತಿನ ಪ್ರಾಣಿಸಮೂಹಕ್ಕೆ ನಿಯಾಮಕನಾದ ಅಂಥಾ ನಿನಗೋಸ್ಕರ ನಮಸ್ಕಾರವು' ಎಂದು ಆ ಮನುವು ಮತ್ಸ್ಯಮೂರ್ತಿಯನ್ನು ಸ್ತುತಿಸಿದನು! ಎಲೈ ಅರಸೆ, ಹಿರಣ್ಮಯ ವರ್ಷದಲ್ಲಿ ಭಗವಂತನು ಕೂರ್ಮದೇಹವನ್ನು ಧರಿಸಿಹನು; ಅಲ್ಲಿ ಪಿತೃಗಣಗಳಿಗೆ ಅಧಿಪತಿಯಾದ ಅರ್ಯಮನು ಆ ವರ್ಷದಲ್ಲಿರುವ ಪುರುಷರೊಡನೆ ಭಗವಂತನಿಗೆ ಅತ್ಯಂತ ಇಷ್ಟವಾದ ಆ ಕೂರ್ಮಮೂರ್ತಿಯನ್ನು ಉಪಾಸನೆಗೈಯುತ್ತ ಈ ಮಂತ್ರವನ್ನು ಜಪಿಸುತ್ತ ಭಗವಂತನಾಗಿ ಸಂಪೂರ್ಣವಾದ ಸತ್ವಗುಣಕ್ಕೆ ಮುಖ್ಯಾಶ್ರಯನಾಗಿ ಜಲದಲ್ಲಿ ಸಂಚರಿಸುವನಾದ್ದರಿಂದ ಕಾಣಲ್ಪಡದಿರುವ ಸ್ಥಾನವುಳ್ಳವನಾಗಿ ಸರ್ವವ್ಯಾಪಕನಾಗಿ ಸರ್ವಕ್ಕೂ ಆಧಾರವಾಗಿರುವ ಕೂರ್ಮಮೂರ್ತಿಯಾದ ನಿನಗೋಸ್ಕರ ನಮಸ್ಕಾರವೆಂಬ ಈ ಅರ್ಥವುಳ್ಳ ಮಂತ್ರವನ್ನು ಜಪಿಸಿ ಅನಂತರದಲ್ಲಿ ಆ ಅರ್ಯಮನು 'ಎಲೈ ಸ್ವಾಮಿಯೆ, ನಿನ್ನ ಮಾಯೆಯಿಂದ ಕಲ್ಪಿತವಾಗಿ ಅಸತ್ಯವಾಗಿ ತೋರೋಣದರಿಂದ ಬಿಸಲುದೊರೆಯಲ್ಲಿ ತೋರುವ ಜಲದಂತೆ ಎಣಿಸುವದಕ್ಕೆ ಅಶಕ್ಯವಾಗಿ ನಾನಾವಿಧರೂಪಗಳಿಂದ ನಿರೂಪಿಸಲ್ಪಟ್ಟದ್ದಾಗಿ ದೃಶ್ಯವಾಗಿರುವ ಈ ಭೂಮಿ ಮೊದಲಾದ ಪ್ರಪಂಚದ ರೂಪವು ನಿನ್ನ ರೂಪವೇ ಹೊರ್ತು ನಿನಗಿಂತಲೂ ಪ್ರತ್ಯೇಕವಾಗಿಲ್ಲ; ಅಂಥಾ ಅವ್ಯಕ್ತ ಪ್ರಪಂಚಕಾರಣನಾದ ನಿನಗೋಸ್ಕರ ನಮಸ್ಕಾರವು! ಜರಾಯುಜಗಳಾದ ಮನುಷ್ಯಾದಿಗಳು ಸ್ವೇದಜಗಳಾದ ಕ್ರಿಮಿ ಕೀಟಾದಿಗಳು ಅಂಡಜಗಳಾದ ಪಕ್ಷಿ ಸರ್ಪಾದಿಗಳು ಉದ್ಭಿಜ್ಜಗಳಾದ ವೃಕ್ಷಾದಿಗಳು ದೇವ ಋಷಿ ಪಿತೃ ಭೂತಗಳೂ ಇಂದ್ರಿಯ ಸಮೂಹವು ಸ್ವರ್ಗಾದಿಲೋಕವು ಆಕಾಶವು ಭೂಮಿಯು ಪರ್ವತ ನದಿ ಸಮುದ್ರ ದ್ವೀಪಗಳು ಗ್ರಹ ನಕ್ಷತ್ರಗಳು ಇವೇ ಮೊದಲಾಗುಳ್ಳ ಚೇತನಾಚೇತನಾತ್ಮಕವಾದ ವ್ಯವಹಾರಯೋಗ್ಯವಾದ ಈ ಸಮಸ್ತ ಪ್ರಪಂಚವೂ ನೀನೇ ಹೊರ್ತು ಮತ್ತೊಂದಿಲ್ಲ; ಅನಂತಗಳಾದ ಭೇದಗಳುಳ್ಳ ನಾಮಗಳೂ ರೂಪಗಳೂ ಆಕೃತಿಗಳೂ ಉಳ್ಳ ಯಾವ ನಿನ್ನಲ್ಲಿ ಕಪಿಲಾದಿ ಮುನಿಗಳಿಂದ ಪ್ರಕೃತಿ ಮಹತ್ತತ್ವ ಅಹಂಕಾರಗಳು ಶಬ್ದಾದಿ ಪಂಚತನ್ಮಾತ್ರಗಳು ಶ್ರೋತ್ರಾದಿ ಪಂಚಜ್ಞಾನೇಂದ್ರಿಯಗಳು ಪಂಚಪ್ರಾಣಗಳು ಅಂತಃಕರಣವು ಅಂತೂ ಇಪ್ಪತ್ತುನಾಲ್ಕು ತತ್ವಗಳು ಕಲ್ಪಿಸಲ್ಪಟ್ಟವಾಗಿ ಯಾವ ನಿನ್ನ ತತ್ವಜ್ಞಾನದಿಂದಲೇ ಪುನಃ ಅಸತ್ಯಗಳಾಗಿ ಮಾಡಲ್ಪಡುವವೋ ಅಂಥಾ ಸಾಂಖ್ಯಸಿದ್ಧಾಂತ ಸ್ವರೂಪನಾದ ನಿನಗೋಸ್ಕರ ನಮಸ್ಕಾರವು' ಎಂದು ಅರ್ಯಮನು ಸ್ತುತಿಸಿದನು! ಉತ್ತರ ಕುರುದೇಶಗಳಲ್ಲಿ ಯಜ್ಞಪುರುಷನಾದ ಭಗವಂತನು ವರಾಹರೂಪವನ್ನು ಧರಿಸಿರುವನು; ಅಲ್ಲಿ ಈ ಭೂಮಿದೇವಿಯು ಆ ಕುರು ವರ್ಷಾಧಿಪತಿಗಳೊಡನೆ ಕೂಡಿ ಅಚಂಚಲವಾದ ಭಕ್ತಿಯೋಗದಿಂದ ಆ ವರಾಹಮೂರ್ತಿಯನ್ನು ಉಪಾಸನೆಗೈಯುತ್ತ ಉತ್ಕೃಷ್ಟವಾದ ಈ ಉಪನಿಷತ್ತನ್ನು ಪಾರಾಯಣಗೈಯುತಲಿರುವಳು; ಭಗವಂತನಾಗಿ ಮಂತ್ರಗಳಿಂದ ಪ್ರಕಾಶಗೈಯಲ್ಪಡುವನಾಗಿ ಯಜ್ಞಸ್ವರೂಪನು ಕ್ರತುಸ್ವರೂಪಗಳಾದ ಅವಯವಗಳುಳ್ಳವನಾಗಿ ಮಹಾಪುರುಷನಾಗಿ ಕರ್ಮದಿಂದ ಪರಿಶುದ್ಧನಾಗಿ ಭೂಮಿಯನ್ನು ಧರಿಸುವನಾಗಿ ಸಕಲ ಯಜ್ಞಾನುಷ್ಠಾನ ಕರ್ತೃವಾಗಿ ವಸ್ತುತಃ ನಿರ್ಗುಣನಾಗಿರುವಂಥಾ ವರಾಹಮೂರ್ತಿಯಾದ ನಿನಗೋಸ್ಕರ ನಮಸ್ಕಾರವು ಎಂಬ ಈ ಅರ್ಥವುಳ್ಳ ಉಪನಿಷತ್ತನ್ನು ಜಪಿಸಿದಳು! ಭೂದೇವಿಯು 'ಎಲೈ ಹರಿಯೆ, ನಿಪುಣರಾದ ವಿದ್ವಾಂಸರು ಕರ್ಮಗಳಿಂದಲೂ ಕರ್ಮಫಲಗಳಿಂದಲೂ ಪ್ರಕಾಶವಾಗಿರುವ ಬ್ರಹ್ಮಾಂಡಸ್ವರೂಪವನ್ನು ಚನ್ನಾಗಿ ತಿಳಿಯುವ ಇಚ್ಛೆಯುಳ್ಳವರಾಗಿ ವಿವೇಕಸಾಧನವಾದ ಮನಸ್ಸಿನಿಂದ ಮಥನ ಸಾಮಗ್ರಿಯಿಂದ ಕಾಷ್ಠಗಳಲ್ಲಿ ಅಗ್ನಿಯನ್ನು ಮಥಿಸುವಂತೆ ದೇಹೇಂದ್ರಿಯಾದಿಗಳಲ್ಲಿ ಯಾವ ಹರಿಸ್ವರೂಪವನ್ನು ಹುಡುಕುತಲಿದ್ದಾರೋ ಅವರಿಗೋಸ್ಕರ ಆ ನಿಜಸ್ವರೂಪವನ್ನು ಪ್ರಕಾಶಗೈಯುತ್ತ

ಲಿರುವ ಅಂಥಾ ಪರಮಾತ್ಮನಿಗೆ ನಮಸ್ಕಾರವು! ವಿಷಯ ಇಂದ್ರಿಯವ್ಯಾಪಾರ ದೇವತಾ ದೇಹ ಕಾಲ ಅಹಂಕಾರಗಳೆಂಬ ಕಾರ್ಯಗಳಾದ ಮಾಯಾಗುಣಗಳಿಂದ ತತ್ವದಿಂದ ಸಾಕ್ಷಾತ್ಕರಿಸಲ್ಪಡುತಲಿರುವ ತತ್ವಸ್ವರೂಪನಾಗಿ ವಿಚಾರದಿಂದ ಯಮನಿಯಮಾದ್ಯನುಷ್ಠಾನಗಳಿಂದಲೂ ನಿಶ್ಚಯಾತ್ಮಕವಾದ ಬುದ್ಧಿಯುಳ್ಳ ಮುನಿಗಳಿಂದ ನಿರಾಕರಿಸಲ್ಪಟ್ಟ ಮಾಯಾಕಲ್ಪಿತವಾದ ಆಕಾರವುಳ್ಳವನಾಗಿರುವ ನಿನಗೋಸ್ಕರ ನಮಸ್ಕಾರವು! ಎಂತು ಲೋಹವು ಅಯಸ್ಕಾಂತವೆಂಬ ಶಿಲೆಯ ಸನ್ನಿಧಿ ಬಲದಿಂದ ಅದಕ್ಕೆ ಅಭಿಮುಖವಾಗಿ ಚಲಿಸುತಲಿಧೆಯೋ ಅದೇರೀತಿ ಮಾಯೆಯು ದ್ರಷ್ಟ್ರವಾದ ನಿನಗೆ ಪ್ರಾಣಿಗಳ ಕರ್ಮಫಲ ಭೋಗಕ್ಕೋಸುಗ ಸ್ವತಃ ಇಷ್ಟಗಳಲ್ಲದಿರುವ ಪ್ರಪಂಚದ ಸೃಷ್ಟಿ ಸ್ಥಿತಿ ಲಯಗಳನ್ನು ತಾನು ಜಡನಾದಾಗ್ಯೂ ಯಾವ ಈಶ್ವರ ಸನ್ನಿಧಾನಬಲದಿಂದ ತನ್ನ ಗುಣಗಳಿಂದ ಮಾಡುತಲಿಧೆಯೋ ದೇಹೇಂದ್ರಿಯಾದಿಗಳಿಗೂ ಜೀವಾದೃಷ್ಟಗಳಿಗೂ ಸಾಕ್ಷಿಯಾದ ಅಂಥಾ ನಿನಗೋಸ್ಕರ ನಮಸ್ಕಾರವು! ಜಗತ್ತಿಗೆ ಕಾರಣಭೂತನಾದ ಯಾವ ವರಾಹಮೂರ್ತಿಯು ಭೂಮಿಯಾದ ನನ್ನನ್ನು ಕೋರೆದಾಡೆಯ ತುದಿಯಲ್ಲಿ ಧರಿಸಿ ಪಾತಾಳದಿಂದ ಹೊರಟು ಪ್ರಳಯಕಾಲ ಸಮುದ್ರದಿಂದ ಮದ್ದಾನೆಯಂತೆ ಹೊರಕ್ಕೆ ಬಂದು ಯುದ್ಧಕ್ಕೋಸುಗ ಪ್ರತಿಗಜದಂತೆ ನಿಂತಿರುವ ಹಿರಣ್ಯಾಕ್ಷನೆಂಬ ದೈತ್ಯನನ್ನು ಸಂಹರಿಸಿ ಯಾವನು ಕ್ರೀಡಿಸುತಲಿದ್ದನೋ ಅಂಥಾ ವರಾಹಮೂರ್ತಿಯಾದ ನಿನಗೋಸ್ಕರ ನಮಸ್ಕಾರವು' ಎಂದು ಭೂದೇವಿಯು ಕುರುವರ್ಷದಲ್ಲಿ ಭಗವಂತನನ್ನು ಉಪಾಸನಂಗೈದಳು."

---

೧೯ ನೇ ಅಧ್ಯಾಯ.

ಕಿಂಪುರುಷವರ್ಷದಲ್ಲಿ ಭಾರತವರ್ಷದಲ್ಲಿ ಇರುವ ಭಗವತ್ಸೇವಕರನ್ನು ಭಗವನ್ಮೂರ್ತಿಗಳನ್ನೂ ವಿವರಿಸಿದ್ದು.

"ಎಲೈ ಅರಸೆ, ಕಿಂಪುರುಷವರ್ಷದಲ್ಲಿ ಭಗವಂತನಾದ ಲಕ್ಷ್ಮಣಸ್ವಾಮಿಗೆ ಅಣ್ಣನಾದ ಸೀತಾಮನೋಹರನಾದ ಶ್ರೀರಾಮನನ್ನು ಆ ಶ್ರೀರಾಮಮೂರ್ತಿಯ ಪಾದಾರವಿಂದಗಳ ಸನ್ನಿಧಿಯಲ್ಲೇ ಪರಮಾಸಕ್ತನಾದ ಪರಮಭಾಗವತನಾದ ಆಂಜನೇಯನು ಅಲ್ಲಿರುವ ಕಿಂಪುರುಷರೊಡನೆ ವಿಚ್ಛೇದವಿಲ್ಲದಿರುವ ಭಕ್ತಿಯಿಂದ ಉಪಾಸನಂಗೈಯುತ ಅನೇಕರಾದ ಗಂಧರ್ವರೊಡನೆ ಕೂಡಿ ಅರ್ಷ್ಟಿಷೇಣನೆಂಬ ಗಂಧರ್ವರಾಜನಿಂದ ಗಾನಂಗೈಯಲ್ಪಡುತಲಿರುವ ಅತ್ಯಂತ ಶುಭಕರವಾದ ಶ್ರೀರಾಮಕಥೆಯನ್ನು ನಿರಂತರವೂ ಕೇಳುತ ತಾನು ಈ ಮಂತ್ರವನ್ನು ಜಪಿಸುತಲಿರುವನು; ಭಗವಂತನಾಗಿ ಮಹಾಪುರುಷರಿಂದ ಶ್ಲಾಘನಂಗೈಯಲ್ಪಡುತಲಿರುವವನಾಗಿ ಸತ್ಪುರುಷರ ಲಕ್ಷಣವು ಸ್ವಭಾವವು ವ್ರತವೂ ಉಳ್ಳವನಾಗಿ ಮನೋನಿಗ್ರಹವುಳ್ಳವನಾಗಿ ಲೋಕವನ್ನು ಅನುಸರಿಸಿ ನಡೆಯುವವನಾಗಿ ಸುಜನನೆಂಬ ಪ್ರಖ್ಯಾತಿಗೆ ಕೊನೆಯಲ್ಲೆಯಾಗಿ ಬ್ರಾಹ್ಮಣಪ್ರಿಯನಾಗಿ ದೇವತಾಸ್ವರೂಪನಾಗಿರುವ ಮಹಾಪುರುಷನಾದ ರಾಜಶ್ರೇಷ್ಠನಾದ ಶ್ರೀರಾಮನಿಗೋಸ್ಕರ ನಮಸ್ಕಾರವೆಂಬ ಅರ್ಥವುಳ್ಳ ಈ ಮಂತ್ರವನ್ನು ಜಪಿಸಿ ಸ್ತೋತ್ರಂಗೈದನು! ಭಗವಂತನ ಸ್ವರೂಪವು ತನ್ನ ಪ್ರಕಾಶದಿಂದ ನಷ್ಟಗಳಾದ ದೇಹೇಂದ್ರಿಯಾದಿಗಳ ನಾನಾಪ್ರಕಾರಗಳಾದ ಜಾಗರಾದ್ಯವಸ್ಥೆಯುಳ್ಳದ್ದಾದಕಾರಣ ಕೇವಲ ಉಪಶಾಂತವಾಗಿ ನಾಮರೂಪಗಳಿಲ್ಲದಿರೋಣದರಿಂದ ದೃಶ್ಯವಲ್ಲದಿರುವದಾಗಿ ಸಾಕ್ಷಿಯಾಗಿ ನೋಡುತಲಿರುವದಾದ್ದರಿಂದ ಪರಿಶುದ್ಧವಾಗಿ ನಿಜಾನುಭವಮಾತ್ರಸ್ವರೂಪವಾಗಿ ಅಹಂಕಾರರಹಿತವಾಗಿ ಜ್ಞಾನಶಾಲಿಯಾದ ಪುರುಷನಿಂದ ಬ್ರಹ್ಮಭಾವದಿಂದ ಸಾಕ್ಷಾತ್ಕರಿಸುವದಕ್ಕೆ ಯೋಗ್ಯವಾಗಿಹದೋ ಅಂಥಾ ಶ್ರೀರಾಮಸ್ವರೂಪವನ್ನು ಭಜಿಸುತಲಿಧೇನೆ; ರಾವಣನು ಬ್ರಹ್ಮನ ವರದಿಂದ ಮನುಷ್ಯನಿಂದ ಹೊರ್ತು ಮತ್ತೊಬ್ಬನಿಂದ ಸಂಹರಿಸಲು ಅಶಕ್ಯನಾದಕಾರಣ ಆ ದುಷ್ಟನಿಗ್ರಹವೆಂಬ ಪ್ರಯೋಜನದಿಂದ ಸಂಸಾರದಲ್ಲಿ ಸ್ತ್ರೀಸಂಗಾದಿಗಳಿಂದ ಉಂಟಾಗುವ ದುಃಖವು ಸಹಿಸಲಶಕ್ಯವೆಂದು ಮನುಷ್ಯರನ್ನು ರಕ್ಷಿಸೋಣವೆಂಬ ಪ್ರಯೋಜನದಿಂದ ವ್ಯಾಪಕನಾದ ಭಗವಂತನು ಮನುಷ್ಯಾವತಾರವನ್ನು ತಾಳದನೇ ಹೊರ್ತು ಮತ್ತೊಂದು ಪ್ರಯೋಜನಾರ್ಥವಲ್ಲ; ಹಾಗಲ್ಲದಿದ್ದರೆ—ನಿಜಸ್ವರೂಪದಲ್ಲೇ ರಮಿಸುತಲಿರುವ ಸರ್ವಸ್ವರೂಪನಾದ ಸ್ವತಂತ್ರನಾದ ಶ್ರೀರಾಮನಿಗೆ ಸೀತಾವಿರಹದಿಂದ ಪುಟ್ಟಿದ ವ್ಯಸನಗಳು ಯಾತರಿಂದುಂಟಾಗುವವು; ಭಗವಂತನಾದ ವಾಸುದೇವನಾದ ಶ್ರೀರಾಮನು ಮೂರುಲೋಕಗಳಲ್ಲಿ

ಒಂದು ವಸ್ತುವಿನಲ್ಲಿಯೂ ಆಸಕ್ತನಲ್ಲ; ಯಾವಕಾರಣ ಜ್ಞಾನಿಗಳಿಗೆ ಪರಮಾತ್ಮಸ್ವರೂಪನಾಗಿ ಅತ್ಯಂತ ಮಿತ್ರನಾಗಿ ಇರುವನೋ ಅದುಕಾರಣ ಆ ಶ್ರೀರಾಮನು ಒಬ್ಬ ಸ್ತ್ರೀನಿಮಿತ್ತವಾಗಿ ಮೋಹವನ್ನೈದನು; ಶ್ರೀರಾಮನಿಗೆ ಸ್ವಜನರಲ್ಲಿ ವ್ಯಾಮೋಹವುಂಟಾಗಿ ಪೂರ್ವದಲ್ಲಿ ಒಬ್ಬ ದೇವದೂತನೊಡನೆ ಮಂತ್ರಾಲೋಚನೆಯಂಗೈಯುತಲಿರುವ ಸಮಯದಲ್ಲಿ ಇಲ್ಲಿಗೆ ಯಾವನು ಬಂದರೂ ಅವನು ಸಂಹರಿಸಲು ಯೋಗ್ಯನೆಂದು ವಿಜ್ಞಾಪನಂಗೈಯಲ್ಪಟ್ಟ ವಾಕ್ಯವನ್ನು ಕೇಳಿ ಶ್ರೀರಾಮನು ಆ ಕಾಲದಲ್ಲಿ ರಾಜದ್ವಾರದಲ್ಲಿ ಬಂದು ನಿಂತಿರುವ ಅತಿ ಕೋಪಿಷ್ಠನಾದ ದೂರ್ವಾಸಮುನಿಯ ಆಗಮನವನ್ನು ತನಿಗೆ ವಿಜ್ಞಾಪನಂಗೈಯ್ಯಲೋಸುಗ ಸಮೀಪಕ್ಕೆ ಬಂದಿರುವ ಅತ್ಯಂತ ಇಷ್ಟನಾದ ತಮ್ಮನಾದ ಲಕ್ಷ್ಮಣಸ್ವಾಮಿಯನ್ನು ಎಂತು ಪರಿತ್ಯಾಗಂಗೈದನು; ಒಂದರಲ್ಲೂ ಆಸಕ್ತನಲ್ಲದ ಶ್ರೀರಾಮನು ಯಾವ ಕಾರಣದಿಂದ ಸತ್ಕುಲಜನ್ಮಾದಿಗಳಿಂದ ರಹಿತರಾಗಿ ವಾನರರಾಗಿರುವ ನಮ್ಮೊಡನೆ ಮಿತ್ರಭಾವವನ್ನೈದಿದನೋ ಅದುಕಾರಣ ಮಹಾತ್ಮನಾದ ಆ ಶ್ರೀರಾಮನಿಗೆ ಸಂತೋಷಕಾರಣವು ಭಕ್ತಿ ಒಂದೇಹೊರ್ತು ಸತ್ಕುಲವೂ ಜನ್ಮವೂ ಸೌಂದರ್ಯವೂ ಉತ್ತಮಜಾತಿಯೂ ಉತ್ಕೃಷ್ಟವಾದ ಬುದ್ಧಿಯೂ ಅಲ್ಲ; ಯಾವ ಶ್ರೀರಾಮನು ಅಯೋಧ್ಯಾಪುರವಾಸಿಗಳಿಂದ ಸಮಸ್ತ ಜನರನ್ನು ವೈಕುಂಠಲೋಕವನ್ನೈದಿಸಿದನೋ ಸ್ವಲ್ಪ ಸೇವೆಯನ್ನಾದರೂ ಅಧಿಕ ಸೇವೆಯೆಂದು ತಿಳಿಯುವನೋ ಸರ್ವೋತ್ತಮನಾಗಿ ಮನುಷ್ಯರೂಪವನ್ನು ಧರಿಸಿದವನಾಗಿ ವಾಸುದೇವಸ್ವರೂಪನಾಗಿರುವ ಶ್ರೀರಾಮನನ್ನು ದೇವನಾದರೂ ನರನಾದರೂ ವಾನರನಾದರೂ ಸರ್ವಪ್ರಕಾರದಿಂದಲೂ ಭಕ್ತಿಭಾವನೆಯಿಂದ ಸೇವಿಸಬೇಕು! ಎಲೈ ಅರಸೇ, ಭಾರತವರ್ಷದಲ್ಲಿ ಭಗವಂತನಾದ ನಾರಾಯಣನು ವೃದ್ಧಿಹೊಂದಿದ ಧರ್ಮವೂ ಜ್ಞಾನಸಮೃದ್ಧಿಯೂ ಇಂದ್ರಿಯನಿಗ್ರಹವೂ ಅಹಂಕಾರರಹಿತತ್ವವೂ ಮೊದಲಾದ ಉತ್ತಮಗುಣಗಳಿಂದ ಪೂರ್ಣನಾಗಿ ಮುಕ್ತಿಸಾಧನವಾದ ತಪಸ್ಸನ್ನು ಜ್ಞಾನಿಗಳನ್ನು ಅನುಗ್ರಹಿಸಲೋಸುಗ ಏಕಾಂತನಿಷ್ಠನಾಗಿ ಕಲ್ಪಾಂತಪರ್ಯಂತವೂ ಚರಿಸುತಲಿರ್ಧಾನೆ; ಪೂಜ್ಯನಾದ ನಾರದಮುನಿಯು ವರ್ಣಾಶ್ರಮಧರ್ಮನಿಷ್ಠರಾದ ಭರತವರ್ಷದಲ್ಲಿರುವ ಪ್ರಜೆಗಳೊಡನೆ ಕೂಡಿ ತನಗೆ ಪೂರ್ವದಲ್ಲಿ ಭಗವಂತನಿಂದ ಉಪದೇಶಂಗೈಯಲ್ಪಟ್ಟ ಸಾಂಖ್ಯಯೋಗ ಶಾಸ್ತ್ರಗಳೊಡನೆ ಶ್ರೀಭಗವಂತನ ಮಹಿಮೆಯನ್ನು ಪ್ರಕಟಂಗೈಯುತಲಿರುವ ಪಾಂಚರಾತ್ರಾಗಮವನ್ನು ಸೂರ್ಯಸಾವರ್ಣಿಯೆಂಬ ಮನುವಿಗೆ ಉಪದೇಶಂಗೈದು ಪರಮಭಕ್ತಿಯೋಗದಿಂದ ಆ ನಾರಾಯಣನನ್ನು ಭಜಿಸುತ ಆ ನಾರದಮುನಿಯು ಈ ಮಂತ್ರವನ್ನು ಜಪಿಸುತಲಿರುವನು! ಭಗವಂತನಾದ ಉಪಶಾಂತಿಶೀಲನಾದ ಅಹಂಕಾರರಹಿತನಾದ ತನ್ನನ್ನೇ ಭಜಿಸುವ ವಿರಕ್ತರಿಗೆ ಧನಸ್ವರೂಪನಾದ ಋಷಿಶ್ರೇಷ್ಠನಾದ ನರನಾರಾಯಣಸ್ವರೂಪನಾದ ಪರಮಹಂಸರಿಗೆ ಪರಮಗುರುವಾದ ಪರಮಾತ್ಮನಲ್ಲೇ ರಮಿಸುತಲಿರುವ ಮಹಾಯೋಗಿಗಳಿಗೆ ಅಧಿಪತಿಯಾದ ಶ್ರೀಹರಿಗೋಸ್ಕರ ನಮಸ್ಕಾರವು ಎಂಬ ಅರ್ಥವುಳ್ಳ ಈ ಮಂತ್ರವನ್ನು ಜಪಿಸಿ ಸ್ತೋತ್ರಂಗೈಯುವನು! ಯಾವ ಮಹಾತ್ಮನು ಈ ಪ್ರಪಂಚದ ಸೃಷ್ಟ್ಯಾದಿಗಳಲ್ಲಿ ತಾನು ಕರ್ತನಾದಾಗ್ಯೂ ನಾನು ಕರ್ತನೆಂದು ತಿಳಿಯುವದಿಲ್ಲವೋ ಯಾವವನು ದೇಹದಲ್ಲಿ ವ್ಯಾಪಕನಾಗಿದ್ದರೂ ಆ ದೇಹಧರ್ಮಗಳಾದ ಕ್ಷುತ್ತು ಬಾಯಾರಿಕೆ ಮೊದಲಾಗುಳ್ಳ ಧರ್ಮಗಳಿಂದ ತಿರಸ್ಕರಿಸಲ್ಪಡುವವನಾಗುವದಿಲ್ಲವೋ ದ್ರಷ್ಟ್ರುವಾದರೂ ಯಾವವನ ದೃಷ್ಟಿಯು ದೃಶ್ಯಗಳಾದ ವಸ್ತುಗಳಿಂದ ವಿಕಾರವನ್ನೈದುವದಿಲ್ಲವೋ ಒಂದರಲ್ಲಿಯೂ ಸಂಗವಿಲ್ಲದವನಾಗಿ ದೇಹೇಂದ್ರಿಯಗಳಿಗಿಂತಲೂ ವ್ಯತಿರಿಕ್ತನಾಗಿ ಒಂದರಿಂದಲೂ ವಿಕಾರವಿಲ್ಲದೆ ಸಾಕ್ಷಿಯಾಗಿರುವ ಶ್ರೀಹರಿಗೋಸ್ಕರ ನಮಸ್ಕಾರವು! ಎಲೈ ಯೋಗೇಶ್ವರನಾದ ನಾರಾಯಣನೇ, ಪುರುಷನು ಜನ್ಮಪ್ರಭೃತಿಯಾಗಿ ಉಂಟಾದ ಭಕ್ತಿಯಿಂದ ದೇಹಾವಸಾನಕಾಲದಲ್ಲಿ ದುಷ್ಟವಾದ ದೇಹಾಭಿಮಾನವನ್ನು ಬಿಟ್ಟು ನಿರ್ಗುಣನಾದ ನಿನ್ನಲ್ಲಿ ಮನಸ್ಸನ್ನು ದೃಢವಾಗಿ ನಿಲ್ಲಿಸಬೇಕೆಂಬುದು ಯಾವದುಂಟೋ ಅಂಥಾ ಆ ಮನೋಧಾರಣೆಯನ್ನೇ ಭಗವಂತನಾದ ಬ್ರಹ್ಮದೇವನು ಮಹಾಯೋಗಚಾತುರ್ಯವೆಂದು ನಮಗೆ ಉಪದೇಶಂಗೈದನು; ಇಹಲೋಕ ಪರಲೋಕಗಳಲ್ಲುಂಟಾಗುವ ವಿಷಯಭೋಗಗಳಲ್ಲಿ ಅತ್ಯಾಸಕ್ತನಾದ ಮೂರ್ಖನು ತನ್ನ ಪತ್ನೀಪುತ್ರ, ಧನಗಳ ಕ್ಷೇಮವನ್ನು ಚಿಂತಿಸುತಲಿರುವವನಾಗಿ ಮೃತ್ಯುವಿನ ದೆಸೆಯಿಂದ ಎಂತು ಭಯಪಡುವನೋ ಅದೇರೀತಿ ವಿದ್ವಾಂಸನು ವಿಷಯಾಸಕ್ತನಾಗಿ ಪುತ್ರಾದಿಗಳ ಕ್ಷೇಮವನ್ನೇ ಚಿಂತಿಸುತ ಮೃತ್ಯುವಿನ ದೆಸೆಯಿಂದ ಭಯಪಡುವನಾದರೆ

ಆಗ ಅವನ ಶಾಸ್ತ್ರಾಭ್ಯಾಸ ಪ್ರಯತ್ನವು ಕೇವಲ ಶ್ರಮಕ್ಕೆ ಕಾರಣವೇ ಹೊರ್ತು ಮತ್ತೊಂದಕ್ಕೆ ಸಾಧನವಲ್ಲ! ಎಲೈ ಶ್ರೀಹರಿಯೇ, ಅದುಕಾರಣ ಯಾವ ಯೋಗದಿಂದ ನಿಕೃಷ್ಟಗಳಾದ ದೇಹಾದಿಗಳಲ್ಲಿ ನಿನ್ನ ಮಾಯೆಯಿಂದ ಕಲ್ಪಿತವಾದ ಪರಿಹರಿಸಲಶಕ್ಯವಾದ ಅಹಂಕಾರ ಮಮಕಾರವನ್ನು ನಾವು ಶೀಘ್ರದಿಂದ ತ್ಯಜಿಸುವೆವೋ ಅಂಥಾ ಮನೋಯೋಗವನ್ನು ನೀನು ನಮಗೆ ಉಂಟುಮಾಡು ಎಂದು ನಾರದ ಮುನಿಯು ಆ ಭರತವರ್ಷದಲ್ಲಿ ನಾರಾಯಣಮೂರ್ತಿಯನ್ನು ಸ್ತುತಿಸಿದನು. ಇಳಾವೃತ ವರ್ಷದಲ್ಲಿ ಹ್ಯಾಗೋ ಹಾಗೆ ಈ ಭಾರತವರ್ಷದಲ್ಲಿಯೂ ಅನೇಕಗಳಾದ ನದಿಗಳೂ ಪರ್ವತಗಳೂ ಇರುವವು; ಅವು ಯಾವವೆಂದರೆ: ಮಲಯ ಮಂಗಳಪ್ರಸ್ಥ ಮೈನಾಕ ತ್ರಿಕೂಟ ಋಷಭ ಕಟಕ ಕೋಲ ಸಹ್ಯ ವೇದಗಿರಿ ಋಶ್ಯಮೂಕ ಶ್ರೀಶೈಲ ಮಹೇಂದ್ರ, ವೇಂಕಟಾದ್ರಿ, ವಿಂಧ್ಯ ಶುಕ್ತಿಮಂತ ಋಕ್ಷಗಿರಿ ಪಾರಿಯಾತ್ರ, ದ್ರೋಣ ಚಿತ್ರಕೂಟ ಗೋವರ್ಧನ ರೈವತಕ ಕಕುಭ ನೀಲಗಿರಿ ಕೋಕಾಮುಖ ಇಂದ್ರಕೀಲ ಕಾಮಗಿರಿ ಇವು ಮೊದಲಾದ ಮುಖ್ಯ ಪರ್ವತಗಳೂ ಕೆಲವು ಸಾಧಾರಣ ಪರ್ವತಗಳೂ ಅನೇಕ ಸಹಸ್ರ ವಿಧಗಳಾಗಿರುವವು; ಈ ಪರ್ವತಗಳ ನಿತಂಬಗಳಿಂದ ಜನಿಸಿರುವ ನದೀನದಗಳು ಸಂಖ್ಯೆಯಿಲ್ಲದೆ ಅನೇಕಗಳಾಗಿರುವವು; ಆ ನದೀನದಗಳಲ್ಲಿ ಚಂದ್ರವಶಾ ತಾಂಬ್ರಪರ್ಣೀ ಅವಟೋದ ಕೃತಮಾಲಾ ವೈಹಾಯಸೀ ಕಾವೇರೀ ಪಿನಾಕಿನಿ ಪಯಸ್ವಿನಿ ಶರ್ಕರಾವತಿ ತುಂಗಭದ್ರಾ, ಕೃಷ್ಣವೇಣೀ ಭೀಮರಥೀ ಗೋದಾವರಿ ನಿರ್ವಿಂಧ್ಯಾ ಪಯೋಷ್ಣಿ ತಾಪಿನಿ ರೇವಾ ಸುರಸಾ ನರ್ಮದಾ ಚರ್ಮಣ್ವತಿ ಸಿಂಧು ಶೋಣಾ ಮಹಾನದೀ ವೇದಸ್ಮೃತಿ ಋಷಿಕುಲ್ಯಾ ತ್ರಿಸಾಮಾ ಕೌಶಿಕೀ ಮಂದಾಕಿನಿ ಯಮುನಾ ಸರಸ್ವತೀ ದೃಷದ್ವತೀ ಗೋಮತೀ ಸರಯೂ ಓಘವತೀ ಸುಘೋಷ ಸಾಘೋಮ ಶತದ್ರು ಚಂದ್ರಭಾಗ ಶಿತದ್ರು ಮರುದ್ವೃಥಾ ವಿತಸ್ತಾ ಅಸಿಕ್ನಿ ಮೊದಲಾದ ಈ ನದಿಗಳೇ ಮಹಾನದಿಗಳೆಂದು ಪ್ರಸಿದ್ಧಗಳಾಗಿರುವವು; ಭರತವರ್ಷದಲ್ಲಿರುವ ಪ್ರಜೆಗಳು ಈ ಮಹಾನದಿಗಳ ನಾಮಸ್ಮರಣ ಮಾತ್ರದಿಂದಲೇ ಪರಿಶುದ್ಧರಾಗುತಲಿದ್ದಾರೆ; ಯಾವಕಾರಣದಿಂದ ಸಮಸ್ತ ಜನರಿಗೆ ಸಮಸ್ತ ಗತಿಗಳು ಆಯಾಯ ಕರ್ಮಗಳನ್ನು ಅನುಸರಿಸಿ ಉಂಟಾಗುವವೋ ಅದುಕಾರಣ ಈ ಭರತವರ್ಷದಲ್ಲಿ ಜನ್ಮವನ್ನು ಪಡದಿರುವ ಪುರುಷರು ತಮ್ಮಿಂದ ಮಾಡಲ್ಪಟ್ಟ ಸಾತ್ವಿಕ ರಾಜಸ ತಾಮಸಗಳೆಂಬ ತ್ರಿವಿಧ ಕರ್ಮಗಳಿಂದ ತಮ್ಮ ಆತ್ಮನಿಗೆ ಸ್ವರ್ಗಗತಿಯನ್ನು ಭೂಲೋಕಗತಿಯನ್ನು ನರಕಲೋಕಗತಿಯನ್ನು ಸಂಪಾದಿಸುತಲಿದ್ದಾರೆ; ಈ ವರ್ಷದಲ್ಲಿ ಬ್ರಾಹ್ಮಣನಿಗೆ ಸನ್ಯಾಸವು ಕ್ಷತ್ರಿಯನಿಗೆ ವಾನಪ್ರಸ್ಥಾಶ್ರಮವೆಂಬ ಈ ಕ್ರಮದಿಂದ ಅವರವರ ಯೋಗ್ಯತಾನುಸಾರವಾಗಿರುವ ಮುಕ್ತಿಸಾಧನಪ್ರಕಾರಗಳಿಂದ ಮನುಷ್ಯರಿಗೆ ಮುಕ್ತಿಯುಂಟಾಗುತಲಿದೆ; ನಾನಾಪ್ರಕಾರಗಳಾದ ಗತಿಗಳಿಗೆ ಕಾರಣವಾದ ಅವಿದ್ಯಾಗ್ರಂಥಿಯನ್ನು ಛೇದಿಸುವ ನಿಮಿತ್ತವಾಗಿ ಪುರುಷನಿಗೆ ಯಾವಾಗ ವಿಷ್ಣುಭಕ್ತರೊಡನೆ ಉತ್ಕೃಷ್ಟವಾದ ಸಂಗತಿಯುಂಟಾಗುವದೋ ಆಗ ರಾಗಾದಿ ದೋಷರಹಿತನಾದ ಪರಮಾತ್ಮನಾದ ಶ್ರೀವಾಸುದೇವನಲ್ಲಿ ಇತರ ಫಲೇಚ್ಛೆಯಿಲ್ಲದಿರುವ ಭಕ್ತಿಯೋಗಸ್ವರೂಪವಾಗಿರುವಂಥಾದ್ದೇ ಮೋಕ್ಷವೆಂದು ತಿಳಿ; ದೇವತೆಗಳು ಕೂಡ ಈ ಭರತವರ್ಷದಲ್ಲಿ ಮನುಷ್ಯಜನ್ಮವನ್ನು ಸಕಲ ಪುರುಷಾರ್ಥಸಾಧನವೆಂದು ಶ್ಲಾಘಿಸುತಲಿಹರು; ಭರತವರ್ಷದಲ್ಲಿ ನಮಗೆ ಯಾವ ಮನುಷ್ಯಜನ್ಮವನ್ನು ಬೇಕೆಂದು ಇಚ್ಛೈಸೋಣಮಾತ್ರವೇ ಹೊರ್ತು ಆ ಮನೋರಥಸಿದ್ಧಿಯು ಉಂಟಾಗಲಿಲ್ಲವೋ ಶ್ರೀಹರಿಸೇವೆಗೆ ಉಪಯುಕ್ತವಾದ ಅಂಥಾ ಮನುಷ್ಯಜನ್ಮವನ್ನು ಯಾರು ಪಡದಿಹರೋ ಆ ಮನುಷ್ಯರಿಂದ ಎಂಥಾ ಶುಭಕರವಾದ ತಪಸ್ಸು ಪೂರ್ವದಲ್ಲಿ ಆಚರಿಸಲ್ಪಟ್ಟಿತೋ ಅಂಥಾ ತಪಸ್ಸೆಂಬ ಸಾಧನಹೊರ್ತು ಶ್ರೀಹರಿಯು ತಾನೇ ದಯೆಯಿಂದ ಈ ಭರತವರ್ಷದಲ್ಲಿರುವ ಜನರಿಗೆ ಪ್ರಸನ್ನನಾಗುತಲಿದ್ದಾನೊ ಏನೊ? ಯಾವ ಸ್ವರ್ಗಲೋಕದಲ್ಲಿ ನಮಗೆ ಶ್ರೀನಾರಾಯಣನ ಪಾದಸ್ಮರಣೆಯುಂಟಾಗುವದಿಲ್ಲವೋ ಎಲ್ಲಿ ವಿಚ್ಛೇದವಿಲ್ಲದೆ ಸರ್ವೋತ್ಕೃಷ್ಟವಾಗಿರುವ ಇಂದ್ರಿಯ ಭೋಗದಿಂದ ಆ ಹರಿಪಾದಸ್ಮರಣೆಯು ಅತ್ಯಂತವಾಗಿ ನಷ್ಟವಾಯಿತೋ ಅಂಥಾ ತುಚ್ಛವಾದ ಸ್ವರ್ಗದ ಪ್ರಾಪ್ತಿಯಿಂದಲೂ ಸ್ವರ್ಗಸಾಧನಗಳಾಗಿ ಕಷ್ಟಸಾಧ್ಯಗಳಾಗಿರುವ ಯಜ್ಞಾದಿಗಳಿಂದಲೂ ತಪೋ ದಾನ ವ್ರತಾದಿಗಳಿಂದಲೂ ನಮಗೆ ಏನುಪ್ರಯೋಜನವು? ಯಾವಕಾರಣ ಪುರುಷರು ಈ ಮನುಷ್ಯದೇಹದಿಂದ ಕ್ಷಣಮಾತ್ರದಿಂದ ತಮ್ಮ ಕರ್ಮಫಲವನ್ನು ನಿಸ್ಸಂಗರಾಗಿ ಶ್ರೀಹರಿಗೆ ಸಮರ್ಪಿಸಿ

ಭಯರಹಿತವಾದ ವೈಕುಂಠಲೋಕವನ್ನು ಐದುವರೋ ಆದುಕಾರಣ ಅನೇಕ ಕಲ್ಪಗಳು ಜೀವಿಸುವ ಇಂದ್ರಾದಿಗಳ ಪುನರ್ಜನ್ಮಸ್ಥಾನ ಪ್ರಾಪ್ತಿಗಿಂತಲೂ ಸ್ವಲ್ಪವಾದ ಆಯುಸ್ಸುಳ್ಳ ಮನುಷ್ಯರಿಗೆ ಸ್ಥಾನವಾದ ಭರತವರ್ಷದಲ್ಲಿ ಜನಿಸೋಣವೇ ಶ್ರೇಷ್ಠವು; ಯಾವಕಾರಣ ಯಾವ ಬ್ರಹ್ಮಲೋಕದಲ್ಲಿ ಸತ್ಪುರುಷರಾದ ಪರಮಭಾಗವತರು ಇಲ್ಲವೋ ಎಲ್ಲಿ ಶ್ರೀಹರಿ ಕಥೆಗಳೆಂಬ ಅಮೃತನದಿಗಳು ಇಲ್ಲವೋ ಎಲ್ಲಿ ಶ್ರೀಹರಿ ಕಥಾಮೃತ ನದಿಗಳನ್ನು ಆಶ್ರಯಿಸಿರುವ ಮಹತ್ತುಗಳಾದ ನೃತ್ತ ಗೀತ ವಾದ್ಯೋತ್ಸವಗಳೊಡನೆ ಯುಕ್ತಗಳಾದ ಶ್ರೀಹರಿ ಪೂಜೆಗಳು ಇಲ್ಲವೋ ಅಂಥಾ ಲೋಕವು ಸತ್ಯಲೋಕವಾದರೂ ಸೇವಿಸಲು ಯೋಗ್ಯವಲ್ಲ; ಇಂಥಾ ಭರತವರ್ಷದಲ್ಲಿಯೂ ಜ್ಞಾನಸಾಧನಗಳಾದ ಯಜ್ಞ ದಾನಾದಿಗಳಿಗೆ ಉಪಯುಕ್ತಗಳಾದ ದ್ರವ್ಯಗಳ ಸಮೂಹದಿಂದ ಸಂಪೂರ್ಣವಾದ ಮನುಷ್ಯಜನ್ಮವನ್ನು ಪಡೆದವರಾದಾಗ್ಯೂ ಯಾವ ಪುರುಷರು ಮೋಕ್ಷಸಿದ್ಧಿಗೋಸುಗ ಪ್ರಯತ್ನವನ್ನು ಮಾಡದೆ ಇದ್ದಾರೋ ಆ ಪುರುಷರು ಯಾವರೀತಿಯಿಂದ ಪಕ್ಷಿಗಳು ಕಿರಾತನಿಂದ ಬಿಡಲ್ಪಟ್ಟವಾದರೂ ಅದೇ ವೃಕ್ಷದಲ್ಲಿ ಮೈಮರತಿರುವಂಥಾವಾಗಿ ಕ್ರೀಡಿಸುತ ಪುನಹ ಅವನ ಬಲೆಗೆ ಶಿಕ್ಕುವವೋ ಅದೇರೀತಿ ಸಂಸಾರಬಂಧವನ್ನು ಐದುವರು; ಯಾವ ಮನುಷ್ಯರಿಂದ ಯಜ್ಞಗಳಲ್ಲಿ ಇದು ಅಗ್ನಿಗೆ ಇದು ಇಂದ್ರನಿಗೆ ಎಂದು ದರ್ಭೆಗಳಲ್ಲಿ ಪ್ರತ್ಯೇಕ ಪ್ರತ್ಯೇಕವಾಗಿ ಉದ್ದೇಶಂಗೈದು ವಿಧಿಮಂತ್ರಪೂರ್ವಕವಾಗಿ ತ್ಯಾಗಂಗೈಯಲ್ಪಟ್ಟ ಚರುಪುರೋಡಾಶಾದಿ ದ್ರವ್ಯಗಳಿಂದ ಶ್ರೀಹರಿಯು ತಾನು ಸಕಲ ಪುರುಷಾರ್ಥಗಳಿಗೆ ನಿಯಾಮಕನಾಗಿ ಪರಿಪೂರ್ಣನಾಗಿ ಒಬ್ಬನಾಗಿದ್ದಾಗ್ಯೂ ಪ್ರತ್ಯೇಕವಾಗಿ ಇಂದ್ರಾದಿ ನಾಮಗಳಿಂದ ಕರೆಯಲ್ಪಟ್ಟವನಾಗಿ ಇದು ನನ್ನ ಪದಾರ್ಥವೆಂದು ಸಂತೋಷದಿಂದ ಸ್ವೀಕರಿಸಿ ಭುಂಜಿಸುವನೋ ಅಂಥಾ ಮನುಷ್ಯಜನ್ಮಕ್ಕೆ ಸಮಾನವಾದದ್ದಾವದಿದೆ; ಶ್ರೀಹರಿಯು ಪುರುಷರಿಂದ ಪ್ರಾರ್ಥಿಸಲ್ಪಟ್ಟವನಾಗಿ ಇಷ್ಟಾರ್ಥವನ್ನು ಕೊಡುವನೆಂಬುದು ಸತ್ಯವೇ ಸರಿ; ಆದಾಗ್ಯೂ ಯಾವಕಾರಣದಿಂದ ಇಷ್ಟಾರ್ಥವನ್ನು ಕೊಟ್ಟನಂತರದಲ್ಲಿಯೂ ಪುರುಷರಿಗೆ ವಿಷಯವಾಗಿ ಪುನಹ ಯಾಚನೆಯುಂಟಾಗುವದೋ ಆದುಕಾರಣ ಅಪೇಕ್ಷಿಸುವ ಜನರಿಗೆ ಶ್ರೀಹರಿಯು ಮನಃಪೂರ್ವಕವಾಗಿ ಇಷ್ಟಾರ್ಥವನ್ನು ಕೊಡುವದಿಲ್ಲ; ಯಾಚಿಸದಿದ್ದರೆ ಸ್ವಲ್ಪವನ್ನಾದರೂ ಶ್ರೀಹರಿಯು ಕೊಡುವದಿಲ್ಲವೆಂದು ಶಂಕಿಸಿದರೆ ಫಲವನ್ನು ಅಪೇಕ್ಷಿಸದೆ ಶ್ರೀಹರಿಯನ್ನು ಸೇವಿಸುವ ವಿರಕ್ತರಿಗೆ ಶ್ರೀಹರಿಯ ಪಾದಪದ್ಮವೇ ಸಕಲ ಮನೋರಥಪೂರ್ತಿಯನ್ನುಂಟುಮಾಡುತಲಿದೆ; ಆದುಕಾರಣ ವಿರಕ್ತರೇ ಕೃತಾರ್ಥರೆಂದು ತಿಳಿ; ನಿಮ್ಮಿಂದ ಮಾಡಲ್ಪಟ್ಟ ಯಜ್ಞಾದಿಗಳಿಗೆ ವೇದಾಧ್ಯಯನಕ್ಕೆ ನಾನಾವಿಧ ತಪೋವ್ರತಾದಿಗಳಿಗೂ ಯಾವ ಪುಣ್ಯಫಲವುಂಟೋ ಆ ಪುಣ್ಯಫಲವು ಈ ಸ್ವರ್ಗಸುಖಾನುಭವದಿಂದ ಅವಶಿಷ್ಟವಾಗಿ ಸ್ವಲ್ಪವಿದ್ದದ್ದೇ ಉಂಟಾದರೆ ಆ ಪುಣ್ಯಫಲಶೇಷದಿಂದ ಈ ಭರತವರ್ಷದಲ್ಲಿ ನಮಗೆ ಶ್ರೀಹರಿಯೇ ಸೇವಿಸತಕ್ಕವನೆಂಬ ಸ್ಮೃತಿಯೊಡನೆ ಯುಕ್ತರಾಗಿ ಶೀಘ್ರದಿಂದ ಶ್ರೀಹರಿಯ ಕಟಾಕ್ಷಕ್ಕೆ ಸಾಧನನಾಗಿರುವ ಮನುಷ್ಯಜನ್ಮವುಂಟಾಗಲೀ ಎಂದು ದೇವತೆಗಳು ಭಾರತವರ್ಷವನ್ನು ಶ್ಲಾಘನಂಗೈಯ್ಯುತಲಿಧಾರೆ! ಎಲೈ ಪರೀಕ್ಷಿದ್ರಾಯನೆ, ಜಂಬೂದ್ವೀಪಕ್ಕೆ ಎಂಟು ಉಪದ್ವೀಪಗಳು ಇರುವವೆಂದು ಋಷಿಗಳು ಹೇಳುವರು; ಯುಗಾಂತದಲ್ಲಿ ಅರವತ್ತುಸಾವಿರ ಸಂಖ್ಯೆಯುಳ್ಳ ಸಗರಚಕ್ರವರ್ತಿಯ ಪುತ್ರರು ಅಶ್ವಮೇಧಾರ್ಥವಾದ ಅಶ್ವವನ್ನು ಹುಡುಕುತ ಈ ಭೂಮಿಯನ್ನು ಎಲ್ಲಾಕಡೆಯಲ್ಲಿಯೂ ಭೇದಿಸಿದರು; ಆಗ ತಿಟ್ಟು ಹಳ್ಳಗಳಿಂದ ಎಂಟು ಉಪದ್ವೀಪಗಳು ಹುಟ್ಟಿದವು; ಈ ದ್ವೀಪಗಳ ನಾಮಧೇಯಗಳು ಸ್ವರ್ಣಪ್ರಸ್ಥ ಚಂದ್ರಶುಕ್ಲ ಆವರ್ತಕ ರಮಣಕ ಮಂದೇಹಾರಣ ಪಾಂಚಜನ್ಯ ಸಿಂಹಳ ಲಂಕೆಗಳೆಂದು ಎಂಟು ದ್ವೀಪಗಳಿಗೂ ಎಂಟು ನಾಮಗಳು."

೨೦ನೇ ಅಧ್ಯಾಯ.

ಪ್ಲಕ್ಷಾದಿ ದ್ವೀಪಗಳು ಸಮುದ್ರಗಳು ಲೋಕಾಲೋಕ ಪರ್ವತಗಳ ಸ್ಥಿತಿಯು.

"ಎಲೈ ಪರೀಕ್ಷಿದ್ರಾಯನೆ, ಇತಃಪರದಲ್ಲಿ ಪ್ಲಕ್ಷಾದಿ ದ್ವೀಪಗಳ ಪ್ರಮಾಣವನ್ನೂ ಲಕ್ಷಣವನ್ನೂ ಆಕೃತಿಯನ್ನೂ ಆಯಾ ದ್ವೀಪಗಳಲ್ಲಿ ವರ್ಷವಿಭಾಗವನ್ನೂ ನಿರೂಪಿಸುತಲಿದ್ದೇನೆ; ಲಕ್ಷಯೋಜನ ವಿಸ್ತಾರವಾದ ಈ

ಜಂಬೂದ್ವೀಪವು ಲಕ್ಷಯೋಜನ ವಿಸ್ತಾರವಾದ ಲವಣಸಮುದ್ರದಿಂದ ಜಂಬೂದ್ವೀಪದಿಂದ ಮಹಾಮೇರುವಂತೆ ಸುತ್ತಲೂ ಸುತ್ತಿಕೊಳ್ಳಲ್ಪಟ್ಟದೆ ; ಈ ಲವಣಸಮುದ್ರವು ತನಗಿಂತಲೂ ದ್ವಿಗುಣವಿಸ್ತಾರವಾದ್ದರಿಂದ ದ್ವಿಲಕ್ಷಯೋಜನ ವಿಸ್ತಾರವಾದ ಪ್ಲಕ್ಷದ್ವೀಪದಿಂದ ಹೊರಗಿರುವ ಉದ್ಯಾನವನದಿಂದ ಅಗಳನಂತೆ ಸುತ್ತಲೂ ಸುತ್ತಿಕೊಳ್ಳಲ್ಪಟ್ಟದೆ ; ಆ ಪ್ಲಕ್ಷದ್ವೀಪದಲ್ಲಿ ಆ ಜಂಬೂವೃಕ್ಷದಂತೆ ಒಂದುಸಾವಿರದ ನೂರುಯೋಜನ ಪ್ರಮಾಣವುಳ್ಳದ್ದಾಗಿಯೂ ಆ ದ್ವೀಪಕ್ಕೆ ಪ್ರಖ್ಯಾತಿಯನ್ನುಂಟುಮಾಡುತಲಿರುವ ಒಂದು ಬಸರೀಮರವು ಸುವರ್ಣಮಯವಾಗಿ ಪುಟ್ಟಿಹುದು ; ಆ ವೃಕ್ಷದಲ್ಲಿ ಏಳು ನಾಲಿಗೆಗಳುಳ್ಳ ಅಗ್ನಿಯಿಹನು ; ಆ ಪ್ಲಕ್ಷದ್ವೀಪಕ್ಕೆ ಅಧಿಪತಿಯಾದ ಪ್ರಿಯವ್ರತರಾಯನ ಪುತ್ರನಾದ ಇಧ್ಮಜಿಹ್ವನೆಂಬ ಅರಸು ತನ್ನ ಭಾಗಕ್ಕೆ ಬಂದಿರುವ ಪ್ಲಕ್ಷದ್ವೀಪವನ್ನು ಏಳು ವರ್ಷಗಳನ್ನಾಗಿ ವಿಭಾಗಂಗೈದು ಆ ವರ್ಷಗಳಿಗೆ ಸಮಾನ ನಾಮಧೇಯಗಳುಳ್ಳ ಏಳುಮಂದಿ ಪುತ್ರರಿಗೆ ಇತ್ತು ತಾನು ಆತ್ಮಸಮಾಧಿಯಿಂದ ವಿಶ್ರಾಂತಿಯನ್ನು ಪಡೆದನು ; ಶಿವ ಯಶಸ್ಯ ಸುಭದ್ರ ಶಾಂತ ಕ್ಷೇಮ ಅಭಯ ಅಮೃತಗಳೆಂದು ಆ ಏಳುದ್ವೀಪಕ್ಕೂ ಏಳು ನಾಮಧೇಯಗಳು ; ಆ ವರ್ಷದಲ್ಲಿ ಏಳು ಪರ್ವತಗಳು ಏಳು ನದಿಗಳು ಪ್ರಸಿದ್ಧಗಳಾಗಿಹವು ; ಕೆಲವು ನದಿಗಳು ಕೆಲವು ಪರ್ವತಗಳು ಸಂಖ್ಯೆಯಿಲ್ಲದೆ ಇರುವವು ; ಮಣಿಕೂಟ ವಜ್ರಕೂಟ ಇಂದ್ರಸೇನ ಜ್ಯೋತಿಷ್ಮಾನ್ ಸುವರ್ಣ ಹಿರಣ್ಯಗ್ರೀವ ಮೇಘಮಾಲಗಳೆಂಬ ಈ ಏಳು ಪರ್ವತಗಳು ಆ ಏಳು ವರ್ಷಗಳಿಗೆ ಮರ್ಯಾದಾಪರ್ವತಗಳಾಗಿಹವು ; ಮುಂದಮಾನಸೋತ್ತರವೆಂಬ ಒಂದು ಮರ್ಯಾದಾಪರ್ವತವು ಸುತ್ತಲು ಮಂಡಲಾಕಾರವಾಗಿರುವದೆಂದು ನಿರೂಪಿಸುವರಾದಕಾರಣ ಈ ಪ್ಲಕ್ಷದ್ವೀಪಾದಿ ಪಂಚದ್ವೀಪಗಳಲ್ಲಿರುವ ಮರ್ಯಾದಾ ಪರ್ವತಗಳು ಅಡ್ಡರೇಖೆಗಳಂತೆ ಆಕೃತಿಯುಳ್ಳವಾಗಿ ಎರಡು ಕಡೆಗಳಲ್ಲಿಯೂ ಸಮುದ್ರಗಳನ್ನು ತಗುಲುತಲಿರುವವು ; ಆ ಪ್ಲಕ್ಷದ್ವೀಪದ ಆ ಏಳು ವರ್ಷಗಳಲ್ಲಿ ಅರುಣಾ ನೃಮ್ಣಾ ಆಂಗೀರಸಿ ಸಾವಿತ್ರಿ ಸುಪ್ರಭಾತಾ ಋತಂಭರಾ ಸತ್ಯಂಭರಾಗಳೆಂಬ ಈ ಏಳು ಮಹಾನದಿಗಳು ಇಹವು ; ಈ ಮಹಾನದಿಗಳಲ್ಲಿ ಸ್ನಾನಾಚಮನಾದಿಗಳಿಂದ ರಜೋಗುಣ ತಮೋಗುಣಗಳಿಲ್ಲದವರಾಗಿ ಬ್ರಾಹ್ಮಣಾದಿ ನಾಲ್ಕುವರ್ಣಗಳಿಗೆ ಪ್ರತಿನಾಮಗಳಾಗಿರುವ ಹಂಸ ಪತಂಗ ಊರ್ಧ್ವಾಯನ ಸತ್ಯಾಂಗರೆಂಬ ನಾಮಗಳುಳ್ಳವರಾಗಿರುವ ಚತುರ್ವರ್ಣಸ್ಥರಾದ ಪುರುಷರು ಒಂದುಸಾವಿರ ವರ್ಷಗಳು ಜೀವಿಸುವವರಾಗಿ ದೇವತೆಗಳಿಗೆ ಸಮಾನವಾದ ರೂಪವೂ ಪುತ್ರೋತ್ಪಾದನವೂ ಉಳ್ಳವರಾಗಿ ಸ್ವರ್ಗಕ್ಕೆ ದ್ವಾರಭೂತನಾದ ವೇದಮಯನಾದ ಪರಮಾತ್ಮಸ್ವರೂಪನಾದ ಸೂರ್ಯನನ್ನು ವೇದಮಂತ್ರಗಳಿಂದ ಸೇವಿಸುತಲಿಹರು ; ಅನುಷ್ಠಾನಂಗೈಯಲ್ಪಡುತಲಿರುವ ಧರ್ಮಕ್ಕೂ ಪ್ರಮಾಣದಿಂದ ತಿಳಿದಿರುವ ಧರ್ಮಕ್ಕೂ ಆ ಧರ್ಮಗಳನ್ನು ನಿರೂಪಿಸುವದಕ್ಕೂ ಪುಣ್ಯಫಲಕ್ಕೂ ಪಾಪಫಲಕ್ಕೂ ನಿಯಾಮಕನಾಗಿ ಅನಾದಿಯಾದ ವಿಷ್ಣುವಿಗೆ ಸ್ವರೂಪಭೂತನಾಗಿರುವ ಸೂರ್ಯನನ್ನು ಶರಣುಹೊಂದುತಲಿಹೇವೆಂಬ ಈ ಅರ್ಥವುಳ್ಳ ವೇದಮಂತ್ರಗಳಿಂದ ಆ ಪುರುಷರು ಸೂರ್ಯನನ್ನು ಸೇವಿಸುತಲಿಹರು ; ಪ್ಲಕ್ಷದ್ವೀಪವನ್ನು ಮೊದಲುಗೊಂಡು ಐದು ದ್ವೀಪಗಳಲ್ಲಿರುವ ಸಕಲ ಪುರುಷರಿಗೂ ಆಯುಸ್ಸು ವೀರ್ಯವು ಮನಶ್ಶಕ್ತಿಯು ಇಂದ್ರಿಯಶಕ್ತಿಯು ದೇಹಶಕ್ತಿಯು ಬುದ್ಧಿಯು ಪರಾಕ್ರಮವು ಸಮಾನಗಳಾಗಿ ಉತ್ಪತ್ತಿಸಿದ್ಧಗಳಾಗಿರುವವು ; ಪ್ಲಕ್ಷದ್ವೀಪವು ಎರಡುಲಕ್ಷಯೋಜನ ವಿಸ್ತಾರವುಳ್ಳ ಇಕ್ಷುರಸ ಸಮುದ್ರದಿಂದ ಎಂತು ಸುತ್ತಿಕೊಳ್ಳಲ್ಪಟ್ಟಿಹುದೋ ಅಂತು ಶಾಲ್ಮಲಿದ್ವೀಪವು ಚತುರ್ಲಕ್ಷಯೋಜನ ವಿಸ್ತಾರವುಳ್ಳದ್ದಾಗಿ ಚತುರ್ಲಕ್ಷಯೋಜನ ವಿಸ್ತಾರವುಳ್ಳ ಸುರೋದವೆಂಬ ಸಮುದ್ರದಿಂದ ಸುತ್ತಲು ಸುತ್ತಿಕೊಳ್ಳಲ್ಪಟ್ಟಿಹುದು ; ಆ ದ್ವೀಪದಲ್ಲಿ ಒಂದುಸಾವಿರದ ನೂರುಯೋಜನ ಉನ್ನತವಾಗಿ ಆ ದ್ವೀಪಕ್ಕೆ ಪ್ರಖ್ಯಾತಿಕರವಾದ ಒಂದು ಬೂರುಗದ ಮರವಿಹುದು ; ಆ ವೃಕ್ಷದ ಮೂಲಪ್ರದೇಶದಲ್ಲಿ ಗರುಡನು ತನಗೆ ಅವಯವಗಳಾಗಿರುವ ವೇದಗಳಿಂದ ಶ್ರೀಹರಿಯನ್ನು ಸ್ತುತಿಸುವವನಾಗಿ ವಾಸಂಗೈಯುತಲಿಹನೆಂದು ಮುನಿಗಳು ಹೇಳುವರು , ಆ ಬೂರುಗದ ಮರವು ಆ ಶಾಲ್ಮಲೀದ್ವೀಪಕ್ಕೆ ಸೂಚನಾರ್ಥವಾಗಿ ಕಾಣಲ್ಪಡುತಲಿಹೆ ; ಪ್ರಿಯವ್ರತ ಪುತ್ರನಾದ ಶಾಲ್ಮಲೀದ್ವೀಪಾಧಿಪತಿಯಾದ ಯಜ್ಞಬಾಹುವೆಂಬ ಅರಸು ಆ ದ್ವೀಪವನ್ನು ಏಳು ವರ್ಷಗಳನ್ನಾಗಿ ವಿಭಾಗಂಗೈದು ಸುರೋಚನ ಮೊದಲಾದ ಏಳುಮಂದಿ ತನ್ನ ಪುತ್ರರಿಗೆ ಇತ್ತನು ; ಆ ವರ್ಷಾಧಿಪತಿಗಳ ನಾಮಗಳೇ ಆ ವರ್ಷಗಳ ನಾಮಗಳೆಂದು ತಿಳಿಯತಕ್ಕದ್ದು ; ಸುರೋಚನ ಸೌಮನಸ್ಯ ರಮಣಕ ದೇವ

ಬರ್ಹಿ ವಾರಿಧರ ಆಪ್ಯಾಯನ ಅಭಿಜ್ಞಾನಗಳೆಂದು ಈ ಏಳು ಆ ವರ್ಷಗಳ ನಾಮಧೇಯಗಳು ; ಆ ವರ್ಷಗಳ ನಾಮಗಳೇ ಆ ವರ್ಷಾಧಿಪತಿಗಳ ನಾಮಗಳೆಂದು ತಿಳಿಯತಕ್ಕದ್ದು; ಆ ಏಳು ವರ್ಷಗಳಲ್ಲಿ ಏಳು ಪರ್ವತಗಳು ಏಳು ನದಿಗಳು ಪ್ರಸಿದ್ಧಗಳಾಗಿಹವು; ಅನೇಕ ಪರ್ವತಗಳು ಅನೇಕ ನದಿಗಳೂ ಇಹವು; ಸ್ವರಸ ಶತಶೃಂಗ ವಾಮದೇವ ಕುಂದ ಕುಮುದ ಪುಷ್ಪವರ್ಷ ಸಹಸ್ರಶೃತಿಗಳೆಂಬ ಈ ಏಳು ಪರ್ವತಗಳು ಆ ಏಳು ವರ್ಷಗಳಿಗೆ ಮರ್ಯಾದಾಪರ್ವತಗಳಾಗಿಹವು; ಅನುಮತಿ ಸಿನೀವಾಲಿ ಸರಸ್ವತಿ ಕುಹು ರಜನಿ ನಂದಾ ರಾಕೆಗಳೂ ಎಂದು ಆ ಏಳು ನದಿಗಳ ನಾಮಧೇಯಗಳು ; ಆ ವರ್ಷಗಳಿಗೆ ಅಭಿಮಾನಿಗಳಾಗಿ ಬ್ರಾಹ್ಮಣಾದಿ ನಾಲ್ಕು ವರ್ಣಗಳಿಗೆ ಪ್ರತಿನಾಮಗಳಾದ ಶೃತಧರಾ ವೀರ್ಯಧರಾ ವಸುಂಧರ ಇಧ್ಮಧರರೆಂಬ ನಾಮಧೇಯಗಳುಳ್ಳವರಾಗಿರುವ ಚತುರ್ವರ್ಣಸ್ಥರಾದ ಪುರುಷರು ಭಗವಂತನೂ ವೇದಸ್ವರೂಪನೂ ಆತ್ಮಸ್ವರೂಪನೂ ಆದ ಚಂದ್ರನನ್ನು ವೇದಮಂತ್ರದಿಂದ ಉಪಾಸನಂಗೈಯುತಲಿಧಾರೆ ; ಯಾವ ಚಂದ್ರನು ಅಮೃತಮಯಗಳಾದ ತನ್ನ ಕಿರಣಗಳಿಂದ ಶುಕ್ಲಪಕ್ಷದಲ್ಲಿ ದೇವತೆಗಳಿಗೋಸುಗ ಕೃಷ್ಣಪಕ್ಷದಲ್ಲಿ ಪಿತೃದೇವತೆಗಳಿಗೋಸುಗವು ಅನ್ನವನ್ನು ವಿಭಾಗಂಗೈದು ಈವನೋ ಅಂಥಾ ಚಂದ್ರನು ಪ್ರಜೆಗಳಾದ ನಮಗೆ ಪ್ರಸನ್ನನಾಗಲಿ ಎಂಬ ಅರ್ಥವುಳ್ಳ ಮಂತ್ರದಿಂದ ಭಜಿಸುವರು ; ಇದೇರೀತಿಯಿಂದ ಸುರೋದವೆಂಬ ಸಮುದ್ರಕ್ಕಿಂತಲೂ ಆಚೆಗೆ ಅಷ್ಟಲಕ್ಷ ಯೋಜನ ವಿಸ್ತಾರವಾದ ಕುಶದ್ವೀಪವು ಅದರಂತೆ ಅಷ್ಟಲಕ್ಷಯೋಜನ ವಿಸ್ತಾರವುಳ್ಳ ಘೃತೋದವೆಂಬ ಸಮುದ್ರದಿಂದ ಸುತ್ತಿಕೊಳ್ಳಲ್ಪಟ್ಟಹುದು ; ಆ ದ್ವೀಪದಲ್ಲಿ ದೇವತೆಗಳಿಂದ ನಿರ್ಮಿಸಲ್ಪಟ್ಟದ್ದಾಗಿಯೂ ಆ ದ್ವೀಪಕ್ಕೆ ಪ್ರಖ್ಯಾತಿಕರವಾಗಿಯೂ ಇರುವ ದರ್ಭೆಗಳ ಒಂದು ಬುಡವು ಅಗ್ನಿಯಂತೆ ಪ್ರಕಾಶಿಸುತ ತನ್ನ ಕೋಮಲಗಳಾದ ಅಗ್ರಗಳ ಪ್ರಭೆಯಿಂದ ದಿಕ್ಕುಗಳನ್ನು ಪ್ರಕಾಶಯುಕ್ತಗಳನ್ನಾಗಿ ಮಾಡುತಲಿಧೆ ; ಪ್ರಿಯವ್ರತ ಪುತ್ರನಾದ ಕುಶದ್ವೀಪಾಧಿಪತಿಯಾದ ಹಿರಣ್ಯರೇತನೆಂಬ ಅರಸು ತನಗೆ ವಿಭಾಗದಿಂದ ಲಬ್ಧವಾದ ಆ ಕುಶದ್ವೀಪವನ್ನು ಏಳುಪ್ರಕಾರಗಳಾಗಿ ವಿಭಾಗಂಗೈದು ವಸು ಮೊದಲಾದ ಏಳುಮಂದಿ ತನ್ನ ಪುತ್ರರಿಗೆ ಇತ್ತು ತಾನು ವಿರಕ್ತಿಯಿಂದ ತಪೋನಿಷ್ಠನಾದನು ; ವಸು ವಸುಧಾನ ದೃಢರುಚಿ ನಾಭಿಗುಪ್ತ ಸತ್ಯವ್ರತಾ ವಿಪ್ರ ವಾಮದೇವಗಳೆಂದು ಈ ಏಳು ಆ ವರ್ಷಗಳ ನಾಮಗಳು ; ಈ ವರ್ಷಗಳಲ್ಲಿ ಮರ್ಯಾದಾಪರ್ವತಗಳು ನದಿಗಳು ಸಹ ಏಳು ಪ್ರಸಿದ್ಧಗಳಾಗಿಹವು ; ಚಕ್ರ ಚತುಃಶೃಂಗ ಕಪಿಲ ಚಿತ್ರಕೂಟ ದೇವಾನೀಕ ಊರ್ಧ್ವರೋಮ ದ್ರವಿಣಗಳೆಂಬ ಈ ಏಳು ಮರ್ಯಾದಾಪರ್ವತಗಳು ; ರಸಕುಲ್ಯಾ ಮಧುಕುಲ್ಯಾ ಮಿತ್ರವಿಂದಾ ಶೃತವಿಂದಾ ದೇವಗರ್ಭ ಘೃತಚ್ಯುತ ಮಂತ್ರಮಾಲೆಗಳೆಂಬ ಈ ಏಳು ಆ ನದಿಗಳ ನಾಮಗಳು ; ಈ ನದಿಗಳಲ್ಲಿ ಸ್ನಾನಾಚಮನಗಳಿಂದ ಪರಿಶುದ್ಧರಾಗಿ ಸಕಲ ವಿದ್ಯಾಸ್ವರೂಪಜ್ಞರಾಗಿ ಕುಲಕರೆಂಬ ನಾಮಧೇಯಗಳುಳ್ಳವರಾಗಿರುವ ಚತುರ್ವರ್ಣಸ್ಥರಾದ ಪುರುಷರು ಭಗವಂತನಾದ ಅಗ್ನಿಯನ್ನು ನಿಪುಣವಾದ ಕರ್ಮದಿಂದ ಎಲೈ ಅಗ್ನಿಯೆ, ಸಾಕ್ಷಾತ್ಪರಬ್ರಹ್ಮನಾದ ಶ್ರೀ ವಾಸುದೇವನ ಹವಿರ್ಭಾಗಗಳನ್ನು ನೀನು ವಹಿಸುತಲಿದ್ದೀಯಾದಕಾರಣ ಶ್ರೀಹರಿಗೆ ಅಂಗಭೂತರಾದ ಇಂದ್ರಾದಿ ದೇವತೆಗಳನ್ನು ಕುರಿತು ನಮ್ಮಿಂದಗೈಯಲ್ಪಡುತಲಿರುವ ಯಜ್ಞಗಳಿಂದ ಶ್ರೀಹರಿಯನ್ನು ನೀನು ಪೂಜಿಸುವನಾಗೆಂಬ ಅರ್ಥವುಳ್ಳ ಈ ಮಂತ್ರದಿಂದ ಪೂಜಿಸುತಲಿಧಾರೆ ; ಈ ಕುಶದ್ವೀಪಕ್ಕಿಂತಲೂ ಆಚೆ ಷೋಡಶಲಕ್ಷ ಯೋಜನ ವಿಸ್ತಾರವುಳ್ಳ ಕ್ರೌಂಚದ್ವೀಪವು ಶೋಡಶಲಕ್ಷ ಯೋಜನ ವಿಸ್ತಾರವುಳ್ಳ ಕ್ಷೀರಸಮುದ್ರದಿಂದ ಘೃತಸಮುದ್ರದಿಂದ ಸುತ್ತಲ್ಪಟ್ಟ ಕುಶದ್ವೀಪದಂತೆ ಸುತ್ತಿಕೊಳ್ಳಲ್ಪಟ್ಟಹುದು ; ಆ ದ್ವೀಪದಲ್ಲಿ ಕ್ರೌಂಚನಾಮಕವಾದ ಒಂದು ಶ್ರೇಷ್ಠವಾದ ಪರ್ವತವು ಆ ದ್ವೀಪಕ್ಕೆ ಖ್ಯಾತಿಕರವಾಗಿಹುದು ; ಆ ಪರ್ವತವು ಪೂರ್ವದಲ್ಲಿ ಕುಮಾರಸ್ವಾಮಿಯ ಶಕ್ತ್ಯಾಯುಧದಿಂದ ಭೇದಿಸಲ್ಪಟ್ಟ ತಪ್ಪಲುಗಳು ಪೊದೆಗಳೂ ಉಳ್ಳಂಥಾದ್ದಾದಾಗ್ಯೂ ಕ್ಷೀರಸಮುದ್ರದಿಂದ ಅಭಿಷೇಕಂಗೈಯಲ್ಪಡುತಲಿರುವದಾಗಿ ವರುಣನಿಂದ ರಕ್ಷಿಸಲ್ಪಟ್ಟಂಥಾದ್ದಾಗಿ ಭಯವಿಲ್ಲದೇ ಅಲ್ಲಿ ನಿಂತಿತು ; ಆ ಕ್ರೌಂಚದ್ವೀಪದಲ್ಲಿ ಪ್ರಿಯವ್ರತ ಪುತ್ರನಾಗಿ ಆ ದ್ವೀಪಾಧಿಪತಿಯಾದ ಘೃತಪೃಷ್ಟನೆಂಬ ಅರಸು ತನ್ನ ದ್ವೀಪವನ್ನು ಏಳುವರ್ಷಗಳನ್ನಾಗಿ ವಿಭಾಗಂಗೈದು ಪುತ್ರರ ನಾಮಧೇಯಗಳುಳ್ಳ ಆ ಏಳುವರ್ಷಗಳಲ್ಲಿ ಏಳುಮಂದಿ ಪುತ್ರರನ್ನು ಆ ವರ್ಷಾಧಿಪತಿಗಳನ್ನಾಗಿರಿಸಿ ತಾನು ಜ್ಞಾನಿಯಾಗಿ ಅತಿ ಶುಭಕರವಾದ ಕೀರ್ತಿಯುಳ್ಳ ಶ್ರೀಹ

ರಿಯ ಚರಣಗಳಲ್ಲಿ ಐಕ್ಯವನ್ನು ಪಡೆದನು; ಆಮೋದ ಮಧುರದ ಮೇಘಪೃಷ್ಠ ಸುಧಾಮ ಋಷಿಜುಷ್ಟ ಲೋಹಿತಾರ್ಣವ ವನಸ್ಪತಿಗಳೆಂದು ಆ ವರ್ಷಾಧಿಪತಿಗಳ ನಾಮಧೇಯಗಳು; ಆ ಏಳುವರ್ಷಗಳಲ್ಲಿ ಪರ್ವತಗಳು ನದಿಗಳು ಏಳೇ ಪ್ರಸಿದ್ಧಗಳಾಗಿಹವು; ಶುಕ್ಲ ವರ್ಧಮಾನ ಭೋಜನ ಉಪಬರ್ಹಿಣ ಆನಂದ ನಂದನ ಸರ್ವತೋಭದ್ರಗಳೆಂದು ಈ ಏಳು ಮರ್ಯಾದಾಪರ್ವತಗಳು; ಅಭಯ ಅಮೃತೌಘ ಆರ್ಯಕ ತೀರ್ಥವತಿ ತೃಪ್ತಿ ರೂಪವತಿ ಪವಿತ್ರವತೀ ಶುಕ್ಲಗಳೆಂದು ಈ ಏಳು ಆ ನದಿಗಳ ನಾಮಧೇಯಗಳು; ಈ ನದಿಗಳ ಪಾವನವಾದ ಜಲವನ್ನು ಸೇವಿಸುವ ನಾಲ್ಕು ವರ್ಣಗಳಿಗೆ ಪ್ರತಿನಾಮಗಳಾದ ಗುರು ಋಷಭ ದ್ರವಿಣ ದೇವಕರೆಂಬ ನಾಮಧೇಯಗಳುಳ್ಳವರಾಗಿರುವ ಚತುರ್ವರ್ಣಸ್ಥರಾದ ಪುರುಷರು ಆ ವರ್ಷಗಳಲ್ಲಿ ಜಲಸ್ವರೂಪನಾದ ಶ್ರೀಹರಿಯನ್ನು ಜಲದಿಂದ ಪೂರ್ಣವಾದ ಅಂಜಲಿಯಿಂದ ಸೇವಿಸುತಲಿಧಾರೆ! ಎಲೈ ಜಲದೇವತೆಗಳಿರಾ, ನೀವು ಈಶ್ವರನಿಂದ ಸಾಮರ್ಥ್ಯವನ್ನು ಪಡೆದು ಇದ್ದೀರಾದಕಾರಣ ಭೂಲೋಕ ಭುವರ್ಲೋಕ ಸುವರ್ಲೋಕಗಳೆಂಬ ಈ ಮೂರುಲೋಕಗಳನ್ನು ಯಾವ ನೀವು ಪಾವನಂಗೈಯುತಲಿದ್ದೀರೋ ಸ್ವಭಾವದಿಂದಲೇ ಪಾಪಗಳನ್ನು ಪರಿಹರಿಸುವ ಅಂಥಾ ನೀವು ನಮ್ಮ ಶರೀರಗಳನ್ನು ಪರಿಶುದ್ಧಗಳನ್ನಾಗಿ ಮಾಡಿ ಎಂಬ ಅರ್ಥವುಳ್ಳ ಈ ಮಂತ್ರದಿಂದ ಜಲದೇವತೆಯನ್ನು ಸೇವಿಸುತಲಿಧಾರೆ; ಇದೇರೀತಿ ಕ್ಷೀರಸಮುದ್ರಕ್ಕಿಂತಲೂ ಆಚೆ ಸುತ್ತಲೂ ಶಾಕದ್ವೀಪವು ಮುವತ್ತೆರಡುಲಕ್ಷಯೋಜನ ವಿಸ್ತಾರವುಳ್ಳದ್ದಾಗಿ ಅಷ್ಟೇ ವಿಸ್ತಾರವುಳ್ಳ ದಧಿ ಮಂಥೋದವೆಂಬ ಸಮುದ್ರದಿಂದ ಸುತ್ತಲೂ ಸುತ್ತಿಕೊಳ್ಳಲ್ಪಟ್ಟಿಹುದು; ಆ ಶಾಕದ್ವೀಪದಲ್ಲಿ ಶಾಕವೆಂಬ ಒಂದು ವೃಕ್ಷವು ಆ ದ್ವೀಪಕ್ಕೆ ಪ್ರಖ್ಯಾತಿಕರವಾಗಿಹುದು; ಆ ವೃಕ್ಷದ ದಿವ್ಯವಾದ ಅಧಿಕವಾದ ಪರಿಮಳವು ಆ ದ್ವೀಪವನ್ನು ಸುತ್ತಲೂ ದಿವ್ಯಪರಿಮಳವನ್ನಾಗಿ ಮಾಡುತಲಿದೆ; ಪ್ರಿಯವ್ರತ ಪುತ್ರನಾಗಿ ಆ ಶಾಕದ್ವೀಪಾಧಿಪತಿಯಾದ ಮೇಧಾತಿಥಿಯೆಂಬ ಅರಸು ಆ ಶಾಕದ್ವೀಪವನ್ನು ಏಳುವರ್ಷಗಳಾಗಿ ವಿಭಾಗಂಗೈದು ಪುತ್ರರ ನಾಮಧೇಯಗಳೊಡನೆ ಯುಕ್ತಗಳಾದ ಆ ಏಳು ವರ್ಷಗಳಲ್ಲಿ ಪುರೋಜವ ಮನೋಜವ ಪವಮಾನ ಧೂಮ್ರಾನೀಕ ಚಿತ್ರರಥ ಬಹುರೂಪ ವಿಶ್ವರೆಂಬ ನಾಮಧೇಯಗಳುಳ್ಳ ಏಳುಮಂದಿ ಪುತ್ರರನ್ನು ಅಧಿಪತಿಗಳನ್ನಾಗಿರಿಸಿ ತಾನು ಶ್ರೀಹರಿಯಲ್ಲಿ ಚಿತ್ತವನ್ನು ಸಮರ್ಪಿಸಿ ತಪಸ್ಸಿಗೋಸುಗ ವನವನ್ನೈದಿದನು! ಆ ವರ್ಷಗಳಲ್ಲಿ ಏಳು ಪರ್ವತಗಳು ಏಳು ನದಿಗಳೇ ಪ್ರಸಿದ್ಧಗಳಾಗಿರುವವು; ಈಶಾನ ಉರುಶೃಂಗ ಬಲಭದ್ರ ಶತಕೇಸರ ಸಹಸ್ರಸ್ರೋತ ದೇವಪಾಲ ಮಹಾಸನಗಳೆಂದು ಈ ಏಳು ಆ ಮರ್ಯಾದಾಪರ್ವತಗಳಿಗೆ ನಾಮಧೇಯಗಳು; ಅನಘಾ ಆಯುರ್ದಾ ಉಭಯಸ್ಪೃಷ್ಟಿ ಅಪರಾಜಿತ ಪಂಚಪದಿ ಸಹಸ್ರಶೃತಿ ನಿಜಧೃತಿಗಳೆಂದು ಈ ಏಳು ಆ ನದಿಗಳ ನಾಮಧೇಯಗಳು; ಆ ವರ್ಷಗಳಲ್ಲಿ ಋತವ್ರತ ಸತ್ಯವ್ರತ ದಾನವ್ರತ ಅನುವ್ರತರೆಂಬ ಪ್ರತಿ ನಾಮಧೇಯಗಳುಳ್ಳ ಚತುರ್ವರ್ಣಸ್ಥರಾದ ಪುರುಷರು ಪ್ರಾಣಾಯಾಮಗಳಿಂದ ಪರಿಹರಿಸಿಕೊಳ್ಳಲ್ಪಟ್ಟ ರಜೋಗುಣ ತಮೋಗುಣಗಳುಳ್ಳವರಾಗಿ ವಾಯುಸ್ವರೂಪನಾದ ಭಗವಂತನನ್ನು ಪರಮ ಸಮಾಧಿಯಿಂದ ಪೂಜಿಸುತ ಯಾವ ವಾಯುವು ಸಮಸ್ತ ಪ್ರಾಣಿಗಳನ್ನು ಅಂತಃಪ್ರವೇಶಂಗೈದು ಪ್ರಾಣಾದಿ ಪಂಚವೃತ್ತಿಗಳಿಂದ ರಕ್ಷಿಸುತಲಿಹನೋ ಮತ್ತು ಈ ಪ್ರಪಂಚವು ಯಾವನ ಆಧೀನವಾಗಿದೆಯೋ ಅಂಥಾ ಅಂತರ್ಯಾಮಿಯಾದ ಈಶ್ವರನಾದ ಪ್ರತ್ಯಕ್ಷನಾಗಿರುವ ವಾಯುದೇವನು ನಮ್ಮನ್ನು ರಕ್ಷಿಸಲೀ ಎಂಬ ಅರ್ಥವುಳ್ಳ ಈ ಮಂತ್ರದಿಂದ ಉಪಾಸನಂಗೈಯುತಲಿಹರು! ಎಲೈ ಅರಸೇ, ಇದೇರೀತಿ ದಧಿಸಮುದ್ರಕ್ಕಿಂತಲೂ ಆಚೆ ಶಾಕದ್ವೀಪಕ್ಕಿಂತಲೂ ದ್ವಿಗುಣವಿಸ್ತಾರವಾದ್ದರಿಂದ ಅರವತ್ತುನಾಲ್ಕುಲಕ್ಷಯೋಜನ ವಿಸ್ತಾರವಾದ ಪುಷ್ಕರದ್ವೀಪವು ಅಷ್ಟೇ ವಿಸ್ತಾರವುಳ್ಳ ಶುದ್ಧೋದಕ ಸಮುದ್ರದಿಂದ ಸುತ್ತಿಕೊಳ್ಳಲ್ಪಟ್ಟದೆ; ಆ ಪುಷ್ಕರದ್ವೀಪದಲ್ಲಿ ಅಗ್ನಿಜ್ವಾಲೆಗಳಂತೆ ಅತಿ ಪ್ರಕಾಶಮಾನಗಳಾದ ಸುವರ್ಣಮಯಗಳಾದ ಅನೇಕಕೋಟಿ ದಳಗಳುಳ್ಳ ಒಂದು ಕಮಲವು ಬ್ರಹ್ಮದೇವನಿಗೆ ಪೀಠವಾಗಿ ಕಲ್ಪಿಸಲ್ಪಟ್ಟದೆ; ಆ ಕಮಲವೇ ಆ ದ್ವೀಪಕ್ಕೆ ಪ್ರಖ್ಯಾತಿಕರವಾಗಿರುವದು; ಈ ಪುಷ್ಕರದ್ವೀಪ ಮಧ್ಯದಲ್ಲಿರುವ ಯಾವ ಪರ್ವತವು ತನಗೆ ಮೇಲೆ ಒಂದು ಕೆಳಗೆ ಒಂದು ಈ ರೀತಿ ಇರುವ ಎರಡು ವರ್ಷಗಳಿಗೆ ಮರ್ಯಾದಾ ಪರ್ವತವಾಗಿ ಹತ್ತುಸಾವಿರ ಯೋಜನ ಉನ್ನತವಾಗಿಯೂ ಹತ್ತುಸಾವಿರ ಯೋಜನ ವಿಸ್ತಾರವುಳ್ಳದ್ದಾಗಿಯೂ ಇಹುದೋ ಆ ಮಾನಸೋತ್ತರ ಪರ್ವತದಲ್ಲಿ ನಾಲ್ಕು ದಿಕ್ಕುಗಳಲ್ಲಿಯೂ ಇಂದ್ರ ಯಮ ವರುಣ ಕುಬೇರರ ಪಟ್ಟಣಗಳು ನಾಲ್ಕಿಹವು; ಆ ಪಟ್ಟಣಗಳ ಉಪರಿಭಾಗದಲ್ಲಿ ಮೇರು

ಪರ್ವತವನ್ನು ಪ್ರದಕ್ಷಿಣವಾಗಿ ಸುತ್ತುತ ಸೂರ್ಯನ ರಥದ ಸಂವತ್ಸರರೂಪವಾದ ಚಕ್ರವು ಉತ್ತರಾಯಣ ದಕ್ಷಿಣಾಯನಗಳಿಂದ ಸುತ್ತುತ್ತಲಿದೆ; ಪ್ರಿಯವ್ರತ ಪುತ್ರನಾದ ಆ ಪುಷ್ಕರದ್ವೀಪಾಧಿಪತಿಯಾದ ವೀತಿಹೋತ್ರನೆಂಬ ಅರಸು ಆ ಪುಷ್ಕರದ್ವೀಪವನ್ನು ಎರಡು ವರ್ಷಗಳನ್ನಾಗಿ ಭಾಗಗೈದು ತನ್ನ ಪುತ್ರರ ನಾಮಧೇಯಗಳೊಡನೆ ಯುಕ್ತಗಳಾದ ಆ ಎರಡು ವರ್ಷಗಳಿಗೆ ರಮಣಕ ಧಾತಕರೆಂಬ ಈರ್ವರು ಪುತ್ರರನ್ನು ಅಧಿಪತಿಗಳನ್ನಾಗಿ ನಿಯಮಿಸಿ ತಾನು ಜ್ಯೇಷ್ಠನಂತೆ ಶ್ರೀಹರಿ ಸೇವೆಯಲ್ಲೇ ಆಸಕ್ತನಾಗಿದ್ದನು; ಆ ಪುಷ್ಕರದ್ವೀಪದಲ್ಲಿರುವ ಪುರುಷರು ಚತುರ್ಮುಖಬ್ರಹ್ಮನನ್ನು ಬ್ರಹ್ಮಸಾಲೋಕ್ಯಾದಿಗಳಿಗೆ ಸಾಧನವಾದ ಕರ್ಮದಿಂದ ಉಪಾಸನೆಯಂಗೈಯುತ ಕರ್ಮಫಲರೂಪವಾಗಿ ಪರಬ್ರಹ್ಮಸ್ವರೂಪಕ್ಕೆ ಪ್ರಕಾಶಕವಾಗಿ ಒಬ್ಬನಾದ ಈಶ್ವರನಲ್ಲೇ ಚಿತ್ತಸಮಾಧಿಯುಳ್ಳಂಥಾದ್ದಾದ ಕಾರಣ ಅದ್ವಿತೀಯವಾಗಿರುವ ಯಾವ ಚತುರ್ಮುಖಸ್ವರೂಪವನ್ನು ಪುರುಷರು ಭೇದದಿಂದ ಸೇವಿಸುತಲಿಹರೋ ಅಂಥಾ ಭಗವಂತನಾದ ಬ್ರಹ್ಮದೇವನಿಗೋಸ್ಕರ ನಮಸ್ಕಾರವೆಂಬ ಅರ್ಥವುಳ್ಳ ಈ ಮಂತ್ರವನ್ನು ಆ ಪುರುಷರು ಜಪಿಸುತಲಿಹರೆ; ಆ ಶುದ್ಧೋದಕ ಸಮುದ್ರಕ್ಕಿಂತಲೂ ಆಚೆ ಲೋಕಾಲೋಕವೆಂಬ ಒಂದು ಪರ್ವತವು ಸೂರ್ಯಪ್ರಕಾಶವುಳ್ಳ ದೇಶಕ್ಕೂ ಸೂರ್ಯಪ್ರಕಾಶವಿಲ್ಲದೆ ಇರುವ ದೇಶಕ್ಕೂ ವಿಭಾಗಾರ್ಥವಾಗಿ ಮಧ್ಯದಲ್ಲಿ ಕಲ್ಪಿಸಲ್ಪಟ್ಟಿದೆ; ಮೇರುವಿಗೂ ಮಾನಸೋತ್ತರ ಪರ್ವತಕ್ಕೂ ಮಧ್ಯದಲ್ಲಿ ಒಂದುಕೋಟಿಯು ಐವತ್ತೇಳುಲಕ್ಷವು ಐವತ್ತುಸಾವಿರ ಯೋಜನ ಪ್ರಮಾಣವುಳ್ಳ ಭೂಮಿ ಇರುವದು; ಶುದ್ಧೋದಕ ಸಮುದ್ರಕ್ಕಿಂತಲೂ ಆಚೆಗೂ ಅದೇರೀತಿ ಭೂಮಿಯು ಒಂದುಕೋಟಿಯು ಐವತ್ತೇಳುಲಕ್ಷವು ಐವತ್ತುಸಾವಿರಯೋಜನ ಪ್ರಮಾಣವುಳ್ಳದ್ದಾಗಿ ಈ ಭೂಮಿಗಿಂತಲೂ ಆಚೆಗೆ ಸುವರ್ಣಮಯವಾದ ಭೂಮಿಯು ಎಂಟುಕೋಟಿಯು ಮುವ್ವತ್ತೊಂಭತ್ತುಲಕ್ಷ ಯೋಜನ ಪ್ರಮಾಣವುಳ್ಳದ್ದಾಗಿ ಕನ್ನಡಿಯಂತೆ ಸಮಸ್ಥಳವಾಗಿ ಹೊಳೆಯುತಲಿಹುದು; ಅಲ್ಲಿ ಹೋದ ಪದಾರ್ಥವು ಅತಿ ಪ್ರಯಾಸದಿಂದಲಾದರೂ ಪುನಃ ಹಿಂದಕ್ಕೆ ತಿರುಗುವದಿಲ್ಲ; ಅದುಕಾರಣ ಆ ಭೂಮಿಯು ದೇವತೆಗಳನ್ನು ಹೊರ್ತು ಇತರರಾದ ಪ್ರಾಣಿಗಳಿಂದ ಶೂನ್ಯವಾಗಿಹುದು; ಶುದ್ಧೋದಕ ಸಮುದ್ರಕ್ಕಿಂತಲೂ ಆಚೆಗೆ ಲೋಕಾಲೋಕವೆಂಬ ಪರ್ವತವಿಹುದು; ಆ ಪರ್ವತದ ಒಳಭಾಗದಲ್ಲಿ ಸೂರ್ಯನೇ ಮೊದಲಾಗುಳ್ಳ ಧ್ರುವನೇ ಕೊನೆಯಾಗುಳ್ಳ ಜ್ಯೋತಿರ್ಗಣಗಳ ಕಿರಣಗಳು ಈ ಮೂರುಲೋಕಗಳನ್ನು ಪ್ರಕಾಶಂಗೈವವೇ ಹೊರ್ತು ಅದರ ಹೊರಭಾಗದಲ್ಲಿ ಪ್ರಸರಿಸುವದಿಲ್ಲ; ಅಷ್ಟು ಉನ್ನತವಾಗಿ ಅಷ್ಟು ವಿಸ್ತಾರವಾಗಿಯೂ ಧ್ರುವನಿಗಿಂತಲೂ ಉನ್ನತವಾಗಿಯೂ ಇರುವಕಾರಣ ಮೂರು ಲೋಕಗಳಿಗೂ ಮರ್ಯಾದಾಪರ್ವತವಾಗಿ ಪಂಚಾಶತ್ಕೋಟಿಯೋಜನ ಪರಿಮಿತವಾದ ಭೂಗೋಳಪ್ರಮಾಣದಲ್ಲಿ ಚತುರ್ಥಾಂಶಪ್ರಮಾಣವುಳ್ಳದ್ದಾಗಿ ಈಶ್ವರನಿಂದ ಕಲ್ಪಿಸಲ್ಪಟ್ಟಿಹುದು; ಲೋಕಾಲೋಕ ಪರ್ವತಕ್ಕೆ ಊರ್ಧ್ವಭಾಗದಲ್ಲಿ ಪೂರ್ವಾದಿ ನಾಲ್ಕು ದಿಕ್ಕುಗಳಲ್ಲಿಯೂ ಸರ್ವಲೋಕಗುರುವಾದ ಬ್ರಹ್ಮನಿಂದ ಋಷಭ ಪುಷ್ಕರಚೂಡ ವಾಮನ ಅಪರಾಜಿತಗಳೆಂಬ ನಾಲ್ಕು ಗಜಶ್ರೇಷ್ಠಗಳು ಸಕಲ ಲೋಕಗಳ ಸ್ಥಿತಿಗೆ ಆಧಾರಾರ್ಥವಾಗಿ ನಿಕ್ಷಿಸಲ್ಪಟ್ಟಂಥಾವಾಗಿವೆ; ಭಗವಂತನಾದ ಮಹಾಪುರುಷನಾದ ಸರ್ವಾಂತರ್ಯಾಮಿಯಾದ ಶ್ರೀಹರಿಯು ಆ ಋಷಭಾದಿ ನಾಲ್ಕು ಗಜಗಳಿಗೆ ತನ್ನ ಅಂಶಭೂತರಾದ ಇಂದ್ರಾದಿ ದೇವತೆಗಳಿಗೂ ನಾನಾಪ್ರಕಾರವಾದ ಸಾಮರ್ಥ್ಯವನ್ನು ವೃದ್ಧಿಹೊಂದಿಸಲೋಸುಗ ಸಕಲಲೋಕ ಕ್ಷೇಮಕ್ಕೋಸ್ಕರ ಧರ್ಮ ಜ್ಞಾನ ವೈರಾಗ್ಯ ಐಶ್ವರ್ಯಗಳೊಡನೆಯೂ ಅಷ್ಟಮಹಾ ಸಿದ್ಧಿಗಳೊಡನೆಯೂ ಯುಕ್ತನಾದ ತನ್ನ ಶುದ್ಧಸತ್ವಗುಣವನ್ನು ಪ್ರಕಾಶಂಗೈಯುವನಾಗಿ ವಿಷ್ವಕ್ಸೇನ ಪ್ರಮುಖರಾದ ತನ್ನ ಗಣನಾಯಕರಿಂದ ಸುತ್ತಲೂ ಸೇವಿಸಲ್ಪಡುತಲಿರುವವನಾಗಿ ಚಕ್ರಾದಿ ಪಂಚಾಯುಧಗಳಿಂದ ಪ್ರಕಾಶಿಸುತಲಿರುವ ಭುಜಗಳಿಂದ ಹೊಳೆಯುತಲಿರುವವನಾಗಿ ಪರವೈಶ್ವರ್ಯಕ್ಕೂ ಅಧಿಪತಿಯಾದ್ದರಿಂದ ಒಂದೇ ಶರೀರದಿಂದ ಆ ಲೋಕಾಲೋಕ ಪರ್ವತದಲ್ಲಿ ಸರ್ವದಿಕ್ಕುಗಳಲ್ಲಿಯೂ ವ್ಯಾಪಕನಾಗಿಹನು! ಎಲೈ ಅರಸೆ, ಭಗವಂತನಾದ ಶ್ರೀಹರಿಯು ಸರ್ವಾಂತರ್ಯಾಮಿಯಾಗಿ ಲೋಕಗಳನ್ನು ಪಾಲಿಸುವನಾದರೂ ತನ್ನ ಯೋಗಮಾಯೆಯಿಂದ ಕಲ್ಪಿಸಲ್ಪಟ್ಟ ನಾನಾವಿಧಗಳಾದ ಲೋಕಗಳ ಸ್ಥಿತಿಯನ್ನು ಪಾಲಸಂಗೈಯಲೋಸುಗ ಈಪ್ರಕಾರವಾಗಿ ಲೀಲೆಯಿಂದ ಬಾದು ಆಕೃತಿಯನ್ನು ಧರಿಸಿ ಸರ್ವತ್ರ ಇಹನೆಂದು ತಿಳಿಯುವನಾಗು; ಮೇರುವಿಗೂ ಲೋಕಾಲೋಕ ಪರ್ವತ

ಕ್ಕೂ ಮಧ್ಯದಲ್ಲಿ ಸೂರ್ಯಪ್ರಕಾಶವುಳ್ಳ ಭೂಮಿಯು ಪ್ರಮಾಣವು ಎಂತು ಹನ್ನೆರಡುಕೋಟಿ ಐವತ್ತುಲಕ್ಷ ಯೋಜನಗಳೋ ಅಂತು ಲೋಕಾಲೋಕ ಪರ್ವತಕ್ಕಿಂತಲೂ ಆಚೆ ಸೂರ್ಯಪ್ರಕಾಶವಿಲ್ಲದಿರುವ ಭೂಮಿಯು ವಿಸ್ತಾರ ಪ್ರಮಾಣವು ಹನ್ನೆರಡುಕೋಟಿಯೂ ಐವತ್ತುಲಕ್ಷ ಯೋಜನಗಳು ;. ಮೇರುವಿಗೆ ಒಂದು ಪಾರ್ಶ್ವದಲ್ಲಿ ಇಪ್ಪತ್ತೈದುಕೋಟಿ ಯೋಜನಗಳಿಂದ ಭೂವಿಸ್ತಾರಪ್ರಮಾಣವು ನಿರೂಪಿಸಲ್ಪಟ್ಟಿತು ; ಲೋಕಾಲೋಕ ಪರ್ವತಕ್ಕಿಂತಲೂ ಆಚೆಗೆ ಯೋಗೇಶ್ವರರಾದ ಮಹಾ ಸಿದ್ಧರು ಸಂಚರಿಸುವರೇಹೊರ್ತು ಮತ್ತೊಬ್ಬರ ಸಂಚಾರವಿಲ್ಲವೆಂದು ಋಷಿಗಳು ಹೇಳುವರು ; ಬ್ರಹ್ಮಾಂಡದ ಯಾವ ಪೂರ್ವೋತ್ತರ ಕಪಾಲಗಳುಂಟೋ ಒಂದು ಕೊಪ್ಪರಿಗೆ ಮೇಲೆ ಒಂದು ಕೊಪ್ಪರಿಗೆ ಮೊಗಚೆಯಿರುವಂತೆ ಕೆಳಗೆ ಒಂದು ಮೇಲೆಒಂದಿರುವ ಆ ಬ್ರಹ್ಮಾಂಡಕಪಾಲಗಳ ಮಧ್ಯದಲ್ಲಿ ಸೂರ್ಯನಿಹನು ; ಆ ಸೂರ್ಯನಿಗೂ ಅಂಡಗೋಳಕ್ಕೂ ಮಧ್ಯದಲ್ಲಿರುವ ಪ್ರದೇಶ ಪ್ರಮಾಣವು ಸರ್ವತ್ರ ಇಪ್ಪತ್ತೈದು ಕೋಟಿಯೋಜನಗಳೆಂದು ತಿಳಿಯತಕ್ಕದ್ದು ; ಮೃತಪ್ರಾಯವಾದ ಈ ಬ್ರಹ್ಮಾಂಡದಲ್ಲಿ ಸೂರ್ಯನು ವಿರಾಡ್ರೂಪದಿಂದ ಪ್ರವೇಶಿಸಿರುವನಾದಕಾರಣ ಮಾರ್ತಾಂಡನೆಂಬ ನಾಮಧೇಯವನ್ನು ಪಡೆದಿಹನು ; ಸೂರ್ಯನಿಂದಲೇ ದಿಕ್ಕುಗಳು ವಿಭಾಗಂಗೈಯುತ ಇದು ಸ್ವರ್ಗವು ಇದು ಭೂಮಿಯು ಎಂದು ವಿಭಜಿಸಲ್ಪಡುವವು ; ಸೂರ್ಯನಿಂದಲೇ ಭೋಗ ಮೋಕ್ಷ ಪ್ರದೇಶಗಳು ನರಕಗಳು ಅತಳಾದಿ ಸಪ್ತಪಾತಾಳಗಳು ಸಹಾ ವಿಭಾಗಂಗೈಯಲ್ಪಡುವವು ; ಇತರ ಲೋಕವಿಭಾಗವು ಸೂರ್ಯನಿಂದಲೇ ತಿಳಿಯಲ್ಪಡುವವು ; ದೇವತೆಗಳಿಗೆ ಪಶು ಪಕ್ಷಿ ಮೊದಲಾದ್ದಕ್ಕೆ ಮನುಷ್ಯರಿಗೆ ನದಿ ಪರ್ವತ ವೃಕ್ಷಗಳಿಗೆ ಬಳ್ಳಿಗಳಿಗೆ ಮತ್ತೂ ಇತರ ಜೀವಸಮೂಹಗಳಿಗೂ ಸೂರ್ಯನೇ ಆತ್ಮಸ್ವರೂಪನಾಗಿ ಈಶ್ವರನಾಗಿ ನೇತ್ರಗಳಿಗೆ ಅಧಿದೇವತೆಯಾಗಿಹನು."

೨೧ ನೇ ಅಧ್ಯಾಯ.

ಕಾಲಚಕ್ರದಿಂದ ಸುತ್ತುತಲಿರುವ ಸೂರ್ಯನಿಗೆ ಸ್ವಗತಿಯಿಂದ ರಾಶಿಸಂಚಾರವುಂಟಾಗುವದರಿಂದ ಪ್ರಪಂಚ ವ್ಯಾಪಾರವು ಉಂಟಾಗುವದು.

"ಎಲೈ ಪರೀಕ್ಷಿದ್ರಾಯನೇ, ಈ ಭೂಮಂಡಲ ಪ್ರದೇಶವು ವಿಸ್ತಾರದಿಂದ ಐವತ್ತು ಕೋಟಿ ಯೋಜನ ಪ್ರಮಾಣವುಳ್ಳಂಥಾದ್ದು ; ಉನ್ನತಭಾವದಿಂದ ಇಪ್ಪತ್ತೈದು ಕೋಟಿ ಯೋಜನ ಪ್ರಮಾಣವುಳ್ಳದ್ದು ; ಈ ಭೂಮಂಡಲಸ್ಥಿತಿಯು ಪ್ರಮಾಣಲಕ್ಷಣಪೂರ್ವಕವಾಗಿ ನಿನಗೋಸ್ಕರ ನಿರೂಪಿಸಲ್ಪಟ್ಟಿತು ; ಅವರೇ ಮೊದಲಾದ ದ್ವಿದಳಧಾನ್ಯದ ಎರಡು ಹೋಳುಗಳಲ್ಲಿ ಒಂದು ಹೋಳಿನ ಪ್ರಮಾಣವನ್ನು ತಿಳಿಯೋಣದರಿಂದ ಎರಡನೇ ಹೋಳಿನ ಪ್ರಮಾಣವು ಎಂತು ತಿಳಿಯಲ್ಪಡುವದೋ ಅದೇರೀತಿ ಭೂಮಂಡಲದ ಪ್ರಮಾಣ ನಿರೂಪಣೆಯಿಂದಲೇ ಖಗೋಳ ಪ್ರಮಾಣವು ನಿರೂಪಿಸಲ್ಪಟ್ಟಿತು ; ಭೂಗೋಳ ಖಗೋಳಗಳ ಮಧ್ಯದಲ್ಲಿ ಸಂಧಿಸಲ್ಪಟ್ಟಿರುವದೇ ಅಂತರಿಕ್ಷವೆಂದು ತಿಳಿ ; ಆ ಅಂತರಿಕ್ಷದ ಮಧ್ಯಭಾಗದಲ್ಲಿ ಭಗವಂತನಾದ ಸೂರ್ಯನು ಬಿಸಲಿನಿಂದ ಮೂರು ಲೋಕಗಳನ್ನು ತಪಿಸುವಂತೆಯೂ ಮತ್ತೂ ತನ್ನ ಪ್ರಭೆಯಿಂದ ಪ್ರಕಾಶಯುಕ್ತಗಳನ್ನಾಗಿಯೂ ಮಾಡುತಲಿಹಾನೆ ; ಈ ಸೂರ್ಯನು ಉತ್ತರಾಯಣ ದಕ್ಷಿಣಾಯನ ವೈಷುವತಗಳೆಂಬ ನಾಮಧೇಯಗಳುಳ್ಳವಾಗಿ ಆರೋಹಣ ಅವರೋಹಣಗಳಿಂದ ಮಂದ ಶೀಘ್ರ ಸಮಾನಗಳಾಗಿರುವ ಮೂರು ಗತಿಗಳಿಂದ ಆರೋಹಣ ಅವರೋಹಣ ಸಮಾನಸ್ಥಾನಗಳಲ್ಲಿ ಕಾಲಾನುಸಾರವಾಗಿ ಆರೋಹಣಾದಿಗಳನ್ನೈದುತಲಿರುವವನಾಗಿ ಮಕರಾದಿ ರಾಶಿಗಳಲ್ಲಿ ದಿವಾರಾತ್ರಿಗಳನ್ನು ದೀರ್ಘಗಳನ್ನಾಗಿಯೂ ಹ್ರಸ್ವಗಳನ್ನಾಗಿಯೂ ಸಮಾನಗಳನ್ನಾಗಿಯೂ ಮಾಡುತಲಿಹಾನೆ ; ಯಾವ ಸಮಯದಲ್ಲಿ ಸೂರ್ಯನು ಮೇಷ ತುಲಾರಾಸಿಗಳಲ್ಲಿ ಸಂಚರಿಸುವನೋ ಆ ಕಾಲದಲ್ಲಿ ದಿನಗಳ ಪ್ರಮಾಣವು ರಾತ್ರಿಗಳ ಪ್ರಮಾಣವು ಸಮಾನವಾಗಿಹುದು; ಈ ದಿನರಾತ್ರಿಗಳಿಗೆ ಅತ್ಯಂತವಾಗಿ ಹೆಚ್ಚುಕಡಮೆ ಇಲ್ಲದಿರೋಣದರಿಂದ ಮೇಷ ತುಲೆಗಳಲ್ಲಿ ದಿವಾ

ರಾತ್ರಿಗಳು ಸಮಾನವಾಗಿರುವವೆಂದು ನಿರೂಪಿಸಲ್ಪಟ್ಟಿತು; ಚನ್ನಾಗಿ ವಿಚಾರಿಸುವದರಲ್ಲಿ ಒಂದು ದಿನ ಪ್ರಮಾಣವು ಒಂದು ರಾತ್ರಿ ಪ್ರಮಾಣವೇ ಸಮವಾಗಿರುವದು ಎಂದು ತಿಳಿಯತಕ್ಕದ್ದು; ಸೂರ್ಯನು ವೃಷಭರಾಶಿಯೇ ಮೊದಲಾಗುಳ್ಳ ಐದು ರಾಶಿಗಳಲ್ಲಿ ಪ್ರತಿಮಾಸವು ಸಂಚರಿಸುವಾಗ ರಾತ್ರಿಗಳಲ್ಲಿ ಒಂದೊಂದು ಘಳಿಗೆ ನ್ಯೂನವಾಗುವದು; ಸೂರ್ಯನು ಯಾವಾಗ ವೃಶ್ಚಿಕವೇ ಮೊದಲಾಗುಳ್ಳ ಐದು ರಾಶಿಗಳಲ್ಲಿ ಸಂಚರಿಸುವನೋ ಆಗ ಅಹಃಪ್ರಮಾಣಗಳು ತಗ್ಗುವವು; ರಾತ್ರಿಪ್ರಮಾಣಗಳು ಹೆಚ್ಚುವವು; ದಕ್ಷಿಣಾಯನ ಹುಟ್ಟುವಪರ್ಯಂತವು ಅಹಸ್ಸುಗಳು ವೃದ್ಧಿಹೊಂದುವವು; ರಾತ್ರಿಗಳು ತಗ್ಗುವವು; ಆ ಬಳಿಕ ಉತ್ತರಾಯನ ಹುಟ್ಟುವಪರ್ಯಂತವೂ ರಾತ್ರಿಗಳು ವೃದ್ಧಿಹೊಂದುವವು; ಅಹಸ್ಸುಗಳು ತಗ್ಗುವವು; ಈ ಅರ್ಥವೇ ಮುಖ್ಯಾರ್ಥವೆಂದು ತಿಳಿಯುತಕ್ಕದ್ದು; ಈರೀತಿಯಿಂದ ಮಂದ ಶೀಘ್ರ ಸಮಗತಿಗಳಿಂದ ಸೂರ್ಯನು ಒಂಭತ್ತು ಕೋಟಿಯು ಐವತ್ತೊಂದುಲಕ್ಷ ಯೋಜನಗಳು ಮಂಡಲಾಕೃತಿಯುಳ್ಳ ಮಾನಸೋತ್ತರ ಪರ್ವತವನ್ನು ಅರವತ್ತು ಘಳಿಗೆಗಳಿಂದ ಪ್ರತಿದಿವಸದಲ್ಲಿ ಸುತ್ತುತ್ತಾ ಇರುವನೆಂದು ಋಷಿಗಳು ಹೇಳುವರು; ಸೂರ್ಯನ ಆರೋಹಣ ಅವರೋಹಣಾದಿ ಸ್ಥಾನಗಳು ವಾಯುಪುರಾಣೋಕ್ತ ಪ್ರಕಾರದಿಂದ ವಿಸ್ತರಿಸಿ ನಿರೂಪಿಸುವೆನು! ಸಮಸ್ತ ಗ್ರಹಗಳಿಗೂ ಸಂಚಾರಸ್ಥಾನಗಳು ಮೂರುಪ್ರಕಾರಗಳಾಗಿಹವು; ಆ ಮೂರು ಸ್ಥಾನಗಳಲ್ಲಿ ಜಾರದ್ಗವವೆಂಬ ಸ್ಥಾನವು ಮಧ್ಯಪ್ರದೇಶದಲ್ಲಿಹುದು; ಅದಕ್ಕಿಂತಲೂ ಉತ್ತರವಾಗಿ ಐರಾವತವೆಂಬ ಸ್ಥಾನವಿಹುದು; ಆ ಜಾರದ್ಗವಕ್ಕೆ ದಕ್ಷಿಣವಾಗಿ ವೈಶ್ವಾನರವೆಂಬ ಸ್ಥಾನವಿರುವದು; ಈರೀತಿ ಮಧ್ಯೋತ್ತರ ದಕ್ಷಿಣಗಳೆಂಬ ಈ ಮೂರು ಮಾರ್ಗಗಳು ಪ್ರತ್ಯೇಕವಾಗಿ ಮೂರ ವೀಧಿಗಳೆಂದು ಮೂರುಪ್ರಕಾರಗಳಾಗುವವು; ಅಶ್ವಿನೀ ಭರಣೀ ಕೃತ್ತಿಕೆಗಳು ಈ ಮೂರು ನಾಗವೀಧಿಯೆಂದೂ ರೋಹಿಣೀ ಮೃಗಶಿರ ಆರ್ದ್ರೆಗಳು ಗಜವೀಧಿಯೆಂದೂ ಪುನರ್ವಸು ಪುಷ್ಯ ಆಶ್ಲೇಷಗಳು ಐರಾವತವೀಧಿಯೆಂದೂ ಹೇಳಲ್ಪಡುವವು; ಈ ಮೂರು ವೀಧಿಗಳು ಗ್ರಹಸಂಚಾರಕ್ಕೆ ಉತ್ತರಮಾರ್ಗವು; ಮಖ ಪುಬ್ಬ ಉತ್ತರೆಗಳು ಆರ್ಷಭವೀಧಿಯೆಂದೂ ಹಸ್ತ ಚಿತ್ರೆ ಸ್ವಾತಿಗಳು ಗೋವೀಧಿಯೆಂದೂ ವಿಶಾಖೆ ಅನೋರಾಧೆ ಜ್ಯೇಷ್ಠಗಳು ಜಾರದ್ಗವಿಯೆಂದೂ ಹೇಳಲ್ಪಡುವವು; ಈ ಮೂರು ವೀಧಿಗಳು ಗ್ರಹಸಂಚಾರಕ್ಕೆ ಮಧ್ಯಮಾರ್ಗವು; ಮೂಲ ಪೂರ್ವಾಷಾಢ ಉತ್ತರಾಷಾಢಗಳು ಅಜವೀಧಿಯೆಂದೂ ಶ್ರವಣ ಧನಿಷ್ಠ ಶತಭಿಷೆಗಳು ಮೃಗವೀಧಿಯೆಂದೂ ಪೂರ್ವಾಭಾದ್ರೆ ಉತ್ತರಾಭಾದ್ರೆ ರೇವತಿ ವೈಶ್ವಾನರವೀಧಿಯೆಂದೂ ಹೇಳಲ್ಪಡುವವು; ಈ ಮೂರು ವೀಧಿಗಳು ಗ್ರಹಸಂಚಾರಕ್ಕೆ ದಕ್ಷಿಣ ಮಾರ್ಗವು; ಉತ್ತರಾಯಣದಲ್ಲಿ ಧ್ರುವನು ಸೂರ್ಯರಥದ ಅಚ್ಚಿನ ಎರಡು ತುದಿಗಳಲ್ಲಿ ಕಟ್ಟಲ್ಪಟ್ಟಿರುವ ವಾಯುಪಾಶಗಳನ್ನು ಸೆಳೆಯುವನೋ ಆ ಸಮಯದಲ್ಲಿ ಸೂರ್ಯನ ರಥವು ಉತ್ತರ ಮಾರ್ಗವನ್ನು ಹತ್ತಿ ಗ್ರಹಮಂಡಲಕ್ಕಿಂತಲೂ ಒಳಕ್ಕೆ ಪ್ರವೇಶಿಸುವದು; ಆಗ ಸೂರ್ಯನ ಗತಿಯು ಮಂದವಾಗುವದು; ಈ ನಿಮಿತ್ತಗಳಿಂದ ಉತ್ತರಾಯಣದಲ್ಲಿ ದಿವಾಪ್ರಮಾಣವು ವೃದ್ಧಿಹೊಂದುವದು; ರಾತ್ರಿಪ್ರಮಾಣವು ತಗ್ಗುವದು; ದಕ್ಷಿಣಾಯನವು ಹುಟ್ಟುತಲಿರಲು ಯಾವಾಗ ಧ್ರುವನು ಆ ವಾಯುಪಾಶಗಳನ್ನು ಬಿಡುವನೋ ಆಗ ಸೂರ್ಯನ ರಥವು ಅಲ್ಲಿಂದ ಕೆಳಕ್ಕೆ ಇಳಿದು ರಾಶಿಮಂಡಲಕ್ಕಿಂತಲೂ ಹೊರಗೆ ಪ್ರವೇಶಿಸುವದು; ಆಗ ಸೂರ್ಯನ ಗತಿಯು ಶೀಘ್ರವಾಗುವದು; ಈ ನಿಮಿತ್ತಗಳಿಂದ ದಕ್ಷಿಣಾಯನದಲ್ಲಿ ಅಹಪ್ರಮಾಣವು ತಗ್ಗುವದು; ರಾತ್ರಿಪ್ರಮಾಣವು ವೃದ್ಧಿಯಾಗುವದು; ಮೇಷ ತುಲೆಗಳಲ್ಲಿ ಧ್ರುವನು ವಾಯುಪಾಶಗಳನ್ನು ಸೆಳೆಯದೆ ಸಮವಾಗಿ ಹಿಡಿದಿರುವನಾದಕಾರಣ ಸೂರ್ಯ ರಥವು ಸಮವಾಗಿ ಸಂಚರಿಸುತ್ತ ರಾಶಿಮಂಡಲದ ಮಧ್ಯವನ್ನು ಪ್ರವೇಶಿಸುವದು; ಆಗ ಸೂರ್ಯನ ಗತಿಯು ಸಮವಾಗಿರುವದು; ಈ ಕಾರಣಗಳಿಂದ ಆ ಅಹೋರಾತ್ರಿ ಪ್ರಮಾಣಗಳು ಸಮಾನಗಳಾಗಿಹವು; ಉದಯಾಸ್ತಾದಿಗಳ ಕ್ರಮವೆಂತೆನೆ: ಸೂರ್ಯನು ಮೇರುವಿಗೆ ಪೂರ್ವವಾಗಿ ಮಾನಸೋತ್ತರ ಪರ್ವತದಲ್ಲಿರುವ ದೇವಧಾನಿಯೆಂಬ ಇಂದ್ರನ ಪುರವನ್ನೈದಿ ಅಲ್ಲಿಂದ ದಕ್ಷಿಣವಾಗಿ ಆ ಪರ್ವತದಲ್ಲಿರುವ ಸಂಯಮಿನಿಯೆಂಬ ಪಟ್ಟಣವನ್ನೈದಿ ಅಲ್ಲಿಂದ ಪಶ್ಚಿಮವಾಗಿರುವ ನಿಮ್ಲೋಚನಿಯೆಂಬ ವರುಣನ ಪಟ್ಟಣವನ್ನೈದಿ ಅಲ್ಲಿಂದ ಉತ್ತರವಾಗಿರುವ ವಿಭಾವರೀಯೆಂಬ ಕುಬೇರನ ಪಟ್ಟಣವನ್ನು ಸಪೂರ್ವಾದಿಯಾಗಿ ಆ ನಾಲ್ಕು ಪಟ್ಟಣಗಳಲ್ಲಿ ಸಕಲ ಭೂತಗಳಿಗೂ ಆಯಾಯ ಕರ್ಮಗಳಲ್ಲಿ ಪ್ರವೃತ್ತಿ

ನಿವೃತ್ತಿಗಳುಂಟಾಗುವದಕ್ಕೆ ನಿಮಿತ್ತಗಳಾದ ಉದಯ ಮಧ್ಯಾಹ್ನ ಅಸ್ತಮಯ ಅರ್ಧರಾತ್ರಿಗಳನ್ನು ಕಾಲವಿಶೇಷ ದಿಂದೈಯ್ದುತಲಿಹನು ; ಮೇರುವಿಗೆ ದಕ್ಷಿಣವಾಗಿರುವ ಜನರಿಗೆ ಮಾನಸೋತ್ತರ ಪರ್ವತದಲ್ಲಿರುವ ಇಂದ್ರಪುರವನ್ನು ಮೊದಲುಗೊಂಡು ಪೂರ್ವಾದಿ ದಿಗ್ವಿಭಾಗವುಂಟಾಗುವದು ; ಮೇರುವಿಗೆ ಪಶ್ಚಿಮದಲ್ಲಿರುವ ಜನರಿಗೆ ಯಮಪುರವನ್ನು ಮೊದಲುಗೊಂಡು ಪೂರ್ವಾದಿ ದಿಗ್ವಿಭಾಗವುಂಟಾಗುವದು ; ಮೇರುವಿಗೆ ಉತ್ತರದಲ್ಲಿರುವ ಜನರಿಗೆ ವರುಣಪುರವು ಮೊದಲುಗೊಂಡು ಪೂರ್ವಾದಿ ದಿಗ್ವಿಭಾಗವುಂಟಾಗುವದು ; ಮೇರುವಿಗೆ ಪೂರ್ವದಲ್ಲಿರುವ ಜನರಿಗೆ ಕುಬೇರಪುರವು ಮೊದಲುಗೊಂಡು ಪೂರ್ವಾದಿಯಾಗಿ ದಿಗ್ವಿಭಾಗವುಂಟಾಗುವದು ; ಈರೀತಿ ಮೇರುವಿಗೆ ನಾಲ್ಕುದಿಕ್ಕುಗಳಲ್ಲಿರುವ ಜನರಿಗೆ ಉದಯ ಮಧ್ಯಾಹ್ನ ಅಸ್ತಮಯ ಅರ್ಧರಾತ್ರಿಗಳುಂಟಾಗುವವು ; ಆ ಮೇರುವಿನಲ್ಲಿರುವ ಪುರುಷರಿಗೆ ಸೂರ್ಯನು ನಿರಂತರದಲ್ಲಿಯೂ ಮಧ್ಯಾಹ್ನದಲ್ಲಿರುವವನಾಗಿ ಪ್ರಕಾಶಿಸುವನು ; ಸೂರ್ಯನು ನಕ್ಷತ್ರಗಳಿಗೆ ಅಭಿಮುಖವಾದ ತನ್ನ ಗಮನದಿಂದ ಮೇರುಪರ್ವತವನ್ನು ಎಡದಕಡೆಯಲ್ಲಿರುವದನ್ನಾಗಿ ಮಾಡುತಲಿರುವವನಾದಾಗ್ಯೂ ಪ್ರದಕ್ಷಿಣವಾಗಿ ಸುತ್ತುತಲಿರುವ ಪ್ರವಹವೆಂಬ ನಾಮಧೇಯವುಳ್ಳ ವಾಯುವಿನಿಂದ ಸುತ್ತಿಸಲ್ಪಡುತಲಿರುವ ನಕ್ಷತ್ರಚಕ್ರವಶದಿಂದ ಪ್ರತಿದಿನದಲ್ಲಿಯೂ ಆ ಮೇರುವಿಗೆ ಬಲಗಡೆ ಇರುವದನ್ನಾಗಿ ಮಾಡುತಲಿಹಾನೆ ; ನಕ್ಷತ್ರಚಕ್ರವಶದಿಂದ ಸೂರ್ಯನು ಅತಿ ದೂರದಲ್ಲೇ ಮೇಲೆ ಇರುವವನಾದಾಗ್ಯೂ ಭೂಮಿಯಲ್ಲಿ ತಗಲಿಕೊಂಡವನಂತೆ ಕಾಣಲ್ಪಡುವದು ಯಾವದುಂಟೋ ಅದೇ ಉದಯವೆಂದು ತಿಳಿಯತಕ್ಕದ್ದು ; ಆಕಾಶಮಧ್ಯದಲ್ಲಿರುವವನಂತೆ ಕಾಣಲ್ಪಡುವದೇ ಮಧ್ಯಾಹ್ನವು ; ಸೂರ್ಯನು ಭೂಮಿಯಲ್ಲಿ ಪ್ರವೇಶಿಸಿದವನಂತೆ ಕಾಣಲ್ಪಡುವದೇ ಅಸ್ತಮಯವು ; ಅದಕ್ಕಿಂತಲೂ ಸೂರ್ಯನು ದೂರದೇಶವನ್ನೈದುವದೇ ಅರ್ಧರಾತ್ರಿಯು ; ಸೂರ್ಯನು ಯಾರಿಂದ ಎಲ್ಲಿ ಕಾಣಲ್ಪಡುವನೋ ಅವರಿಗೆ ಅದೇ ಸೂರ್ಯೋದಯವು ; ಎಲ್ಲಿ ದೃಷ್ಟಿಗೋಚರನಾಗದೆ ಹೋಗುವನೋ ಅದೇ ಅಸ್ತಮಯವು ; ಅದುಕಾರಣವೇ ಸರ್ವದ್ವೀಪಗಳಲ್ಲಿಯೂ ಸಕಲ ವರ್ಷಗಳಲ್ಲಿಯೂ ಇರುವ ಜನರಿಗೆ ಮೇರುಪರ್ವತವು ಉತ್ತರದಿಕ್ಕಿನಲ್ಲೇ ಇರುವದು ; ಯಾವವನು ಎಲ್ಲಿಂದ ಸೂರ್ಯನನ್ನು ಉದಯಕಾಲದಲ್ಲಿ ನೋಡುವನೋ ಅವನಿಗೆ ಅದೇ ಪೂರ್ವದಿಕ್ಕು ; ಅವನಿಗೆ ಎಡಕಡೆಯಲ್ಲೇ ಮೇರುಪರ್ವತವಿಹುದು ; ಎಲ್ಲಿ ಸೂರ್ಯನು ಉದಯಿಸುವನೋ ಅಲ್ಲಿಗೆ ಸಮಸೂತ್ರವಾದ ಪ್ರದೇಶದಲ್ಲಿ ಅಸ್ತವನ್ನೈದುವನು ; ಅಲ್ಲಿ ಸೂರ್ಯನು ಸೂತ್ರಸ್ಥನಾದ್ದರಿಂದ ಕಾಣಲ್ಪಡುವನು ; ಮಧ್ಯಾಹ್ನ ಸಮಯದಲ್ಲಿ ಯಾವ ಆಕಾಶಪ್ರದೇಶದಲ್ಲಿ ಕಾಣಲ್ಪಡುವನೋ ಅಲ್ಲಿಗೆ ಸಮಸೂತ್ರವಾದ ಪ್ರದೇಶದಲ್ಲಿ ಆ ಸೂರ್ಯನು ಇರುವಲ್ಲಿ ಅರ್ಧರಾತ್ರೆಯಾಗುವದು ; ಅಲ್ಲಿರುವ ಸೂರ್ಯನು ಅತಿ ದೂರಸ್ಥನಾದ್ದರಿಂದ ಕಾಣಲ್ಪಡುವದಿಲ್ಲ ; ಯಾವ ಸಮಯದಲ್ಲಿ ಸೂರ್ಯನು ಮಾನಸೋತ್ತರ ಪರ್ವತದಲ್ಲಿ ಇಂದ್ರನ ಪುರದಿಂದ ಹೊರಡುವನೋ ಆಗ ಅಲ್ಲಿಂದ ಹದಿನೈದು ಘಳಿಗೆಗಳಿಂದ ಎರಡುಕೋಟಿಯು ಮುವ್ವತ್ತೇಳುಲಕ್ಷವು ಇಪ್ಪತ್ತೈದು ಯೋಜನಗಳನ್ನು ಅತಿಕ್ರಮಿಸಿ ಆ ಮಾನಸೋತ್ತರದಲ್ಲಿರುವ ಯಮಪುರವನ್ನೈದುವನು ; ಅಲ್ಲಿಂದ ಹದಿನೈದು ಘಳಿಗೆಗಳಿಂದ ಅದೇರೀತಿ ಅಷ್ಟು ಯೋಜನಗಳನ್ನು ಅತಿಕ್ರಮಿಸಿ ವರುಣನ ಪುರವನ್ನೈದುವನು ; ಅದೇರೀತಿ ಸೂರ್ಯನು ಕುಬೇರಪುರವನ್ನೈದಿ ಪುನಹ ಅಲ್ಲಿಂದ ಮಾನಸೋತ್ತರಪರ್ವತದಲ್ಲಿರುವ ಆ ಇಂದ್ರನ ಪುರವನ್ನೈದುವನು ; ಇದೇರೀತಿ ಚಂದ್ರಾದಿ ಗ್ರಹಗಳು ಕಾಲಚಕ್ರದಲ್ಲಿ ಯಾವ ಯಾವ ನಕ್ಷತ್ರಗಳಲ್ಲಿರುವರೋ ಆಯಾಯ ನಕ್ಷತ್ರಗಳೊಡನೆ ಉದಯಾಸ್ತಮಯಗಳನ್ನು ಪಡೆಯುವರು ; ವೇದಮಯವಾದ ಆ ಸೂರ್ಯರಥವು ಒಂದು ಮುಹೂರ್ತದಿಂದ ಮುವ್ವತ್ತಾರುಲಕ್ಷವು ಎಂಟುನೂರು ಯೋಜನಗಳನ್ನು ಅತಿಕ್ರಮಿಸುತ ಇಂದ್ರಾದಿಗಳ ಆ ನಾಲ್ಕು ಪಟ್ಟಣಗಳಲ್ಲಿ ಸಂಚರಿಸುತಲಿಹದು ; ಆ ಸೂರ್ಯರಥದ ಚಕ್ರಕ್ಕೆ ಚೈತ್ರಾದಿ ದ್ವಾದಶಮಾಸಗಳೇ ಅರೆಗಳು ; ಆರು ಋತುಗಳೇ ಅಂಚುಗಳು ; ಮೂರು ಚಾತುರ್ಮಾಸ್ಯಗಳೇ ನಾಭಿಗಳು ; ಅದುಕಾರಣ ಆ ರಥಚಕ್ರವು ಸಂವತ್ಸರರೂಪವಾಗಿರುವದೆಂದು ಋಷಿಗಳು ಹೇಳುವರು ; ಆ ಸೂರ್ಯರಥದ ಅಚ್ಚು ಮೇರುಪರ್ವತದ ಶಿರೋಭಾಗದಲ್ಲಿ ನಿಂತಿಹುದು ; ಆ ಅಚ್ಚಿನ ಒಂದು ಭಾಗವು ಮಾನಸೋತ್ತರ ಪರ್ವತದ ಶಿರೋಭಾಗದಲ್ಲಿ ನಿಂತಿಹುದು ; ಆ ಅಚ್ಚಿನಲ್ಲಿ ತಗಲಿಸಲ್ಪಟ್ಟ ಸೂರ್ಯರಥದ ಆ ಒಂದು ಚಕ್ರವು ತೈಲಯಂತ್ರದ ಚಕ್ರದಂತೆ ಮಾನಸೋತ್ತರಪರ್ವತದ

ಮೇಲೆ ಲಕ್ಷಯೋಜನ ಉಪರಿಭಾಗದಲ್ಲಿ ವಾಯುಬದ್ಧ ಭೂಮಿಯಲ್ಲಿ ಸಂಚರಿಸುವದು ; ಆ ರಥದ ಅಚ್ಚು ಮೇರುವಿಗೆ ಸಮಾನವಾಗಿ ಉತ್ತರಭಾಗದಲ್ಲಿ ಉದ್ದವಾಗಿ ಒಂದುಕೋಟಿಯು ಐವತ್ತೇಳು ಲಕ್ಷವು ಐವತ್ತುಸಾವಿರ ಯೋಜನ ಪ್ರಮಾಣವುಳ್ಳದ್ದಾಗಿರುವದು ; ಆ ಸೂರ್ಯರಥದ ಚಕ್ರದ ತುದಿಯಲ್ಲಿ ಕಟ್ಟಲ್ಪಟ್ಟ ಪೂರ್ವಭಾಗವುಳ್ಳ ಮತ್ತೊಂದು ಅಚ್ಚು ಮೂವತ್ತೊಂಭತ್ತು ಲಕ್ಷವು ಮೂವತ್ತೇಳುಸಾವಿರವು ಐನೂರುಯೋಜನ ಪ್ರಮಾಣವುಳ್ಳದ್ದಾಗಿ ತೈಲಯಂತ್ರದ ಅಚ್ಚಿನಂತಿರುವದಾಗಿ ಧ್ರುವನಲ್ಲಿ ಸೇರಿರುವ ವಾಯುಪಾಶದಿಂದ ಕಟ್ಟಲ್ಪಟ್ಟ ಅಗ್ರಭಾಗವುಳ್ಳದ್ದಾಗಿ ಸುತ್ತುವದು ; ಆ ಸೂರ್ಯರಥದಲ್ಲಿ ಸೂರ್ಯನು ಕುಳಿತುಕೊಳ್ಳುವ ಸ್ಥಾನವು ಮೂವತ್ತಾರುಲಕ್ಷ ಯೋಜನಗಳು ಉನ್ನತವಾಗಿ ಒಂಭತ್ತುಲಕ್ಷಯೋಜನ ವಿಸ್ತಾರವುಳ್ಳದ್ದಾಗಿರುವದು ; ಆ ರಥಾಶ್ವಗಳನ್ನು ಕಟ್ಟುವದಕ್ಕೆ ಯೋಗ್ಯವಾದ ನೊಗವು ಮೂವತ್ತಾರುಲಕ್ಷ ಯೋಜನಗಳು ಉದ್ದವಾಗಿ ಒಂಭತ್ತುಲಕ್ಷಯೋಜನ ಗಾತ್ರವಾಗಿರುವದು ; ಗಾಯತ್ರಿ ಮೊದಲಾದ ಛಂದಸ್ಸುಗಳ ನಾಮಧೇಯಗಳುಳ್ಳ ಏಳು ಅಶ್ವಗಳು ಆ ನೊಗದಲ್ಲಿ ಅರುಣನಿಂದ ಕಟ್ಟಲ್ಪಟ್ಟಂಥಾವಾಗಿ ದೇವೋತ್ತಮನಾದ ಸೂರ್ಯನನ್ನು ವಹಿಸುತಲಿವೆ ; ಅರುಣನು ಸೂರ್ಯನ ಮುಂಭಾಗದಲ್ಲಿ ಪಶ್ಚಿಮಾಭಿಮುಖನಾಗಿ ಸಾರಥ್ಯವಂಗೈಯುತಲಿಧಾನೆ ; ಅದೇರೀತಿ ಅಂಗುಷ್ಠಪರ್ವಮಾತ್ರ ಪ್ರಮಾಣ ಶರೀರರಾದ ವಾಲಖಿಲ್ಯರೆಂಬ ನಾಮಧೇಯಗಳುಳ್ಳವರಾಗಿರುವ ಅರವತ್ತುಸಾವಿರ ಮಹಾಮುನಿಗಳು ಸೂರ್ಯನ ಮುಂದುಗಡೆಯಲ್ಲಿ ಸ್ತೋತ್ರಂಗೈಯಲೋಸುಗ ಬ್ರಹ್ಮದೇವನಿಂದ ನಿಯಮಿಸಲ್ಪಟ್ಟಂಥಾವರಾಗಿ ಸೂರ್ಯನನ್ನು ಸ್ತುತಿಸುತಲಿಧಾರೆ ; ಕೆಲವು ಋಷಿಗಳು ಗಂಧರ್ವರು ಅಪ್ಸರಸ್ತ್ರೀಯರು ಸರ್ಪಶ್ರೇಷ್ಠರು ಗ್ರಾಮಣಿಗಳು ರಾಕ್ಷಸರು ದೇವತೆಗಳೆಂದು ಏಳುವಿಧಗಳಾದ ದೇವತಾಜಾತಿಗಳಲ್ಲಿ ಒಂದೊಂದು ಜಾತಿಯಲ್ಲಿ ಹದಿನಾಲ್ಕು ಜನರ ಮೇರೆಗೆ ಏಳು ಸಮೂಹಗಳಾಗಿ ನಾನಾಪ್ರಕಾರಗಳಾದ ನಾಮಧೇಯಗಳುಳ್ಳವರಾಗಿ ಪ್ರತಿ ಮಾಸದಲ್ಲಿಯೂ ನಾನಾಪ್ರಕಾರಗಳಾದ ನಾಮಧೇಯಗಳುಳ್ಳ ಭಗವಂತನಾದ ಪರಮಾತ್ಮಸ್ವರೂಪನಾದ ಸೂರ್ಯನನ್ನು ಪ್ರತ್ಯೇಕ ಪ್ರತ್ಯೇಕವಾಗಿ ಕರ್ಮಗಳಿಂದ ಉಪಾಸನೆಯನ್ನು ಮಾಡುತಲಿಧಾರೆ! ಎಲೈ ಅರಸೆ, ಈ ಸೂರ್ಯನು ಒಂದು ಕ್ಷಣದಿಂದ ಎರಡು ಸಾವಿರದ ಇನ್ನೂರು ಯೋಜನಗಳು ನಾಲ್ಕು ಹರದಾರಿ ಪ್ರಮಾಣವಾದ ಪ್ರದೇಶವನ್ನು ಸಂಚರಿಸುತಲಿರುವನು ; ಅರವತ್ತು ಘಳಿಗೆಗಳಿಂದ ಒಂಭತ್ತುಕೋಟಿಯು ಐವತ್ತೊಂದುಲಕ್ಷ ಯೋಜನ ವಿಸ್ತಾರವುಳ್ಳ ಭೂಮಂಡಲವನ್ನು ಸಂಚರಿಸುತ್ತಾನೆ.”

೨೨ನೇ ಅಧ್ಯಾಯ.

ಚಂದ್ರ ಶುಕ್ರ ಮೊದಲಾದ ಗ್ರಹಗಳ ಸ್ಥಿತಿಯು.

ಅನಂತರದಲ್ಲಿ ಪರೀಕ್ಷಿದ್ರಾಯನು ಶುಕಮುನಿಯನ್ನು ಕುರಿತು “ಎಲೈ ಶುಕಮುನಿಯೆ, ಮೇರುಪರ್ವತವನ್ನು ಧ್ರುವನನ್ನು ಪ್ರದಕ್ಷಿಣವಾಗಿ ಸುತ್ತುತಲಿರುವ ಭಗವಂತನಾದ ಸೂರ್ಯನು ರಾಶಿಗಳನ್ನು ಪ್ರದಕ್ಷಿಣವಾಗಿ ಸುತ್ತುತಲಿಧಾನೆಂಬ ಅರ್ಥವು ಸರ್ವಜ್ಞನಾದ ನಿನ್ನಿಂದ ನಿರೂಪಿಸಲ್ಪಟ್ಟಿತು ; ಈ ಅರ್ಥವು ವಿರುದ್ಧವಾದ್ದರಿಂದ ನಾನು ಅದನ್ನು ಚನ್ನಾಗಿ ತಿಳಿಯಲು ಇಚ್ಛೈಸುತಲಿಧೇನೆ” ಎಂದು ನುಡಿದನು.

ಶುಕಮುನಿಯು “ಎಲೈ ಪರೀಕ್ಷಿದ್ರಾಯನೆ, ಯಾವರೀತಿಯಿಂದ ಸುತ್ತುತಲಿರುವ ಕುಲಾಲಚಕ್ರದೊಡನೆ ಆ ಕುಲಾಲಚಕ್ರದಲ್ಲಿರುವ ಸೂಕ್ಷ್ಮರಂಧ್ರಗಳನ್ನು ಆಶ್ರಯಿಸಿಕೊಂಡು ತಾವು ಸುತ್ತುತಲಿರುವ ಇರುವೆ ಮೊದಲಾದ ಸೂಕ್ಷ್ಮಪ್ರಾಣಿಗಳು ಆ ಚಕ್ರದಲ್ಲಿರುವಂಥಾವಾದಾಗ್ಯೂ ಆ ಕುಲಾಲಚಕ್ರವು ಸುತ್ತುವ ಕಾಲದಲ್ಲಿ ಅದರ ಭ್ರಮಣಗತಿಯನ್ನು ಬಿಟ್ಟು ಪ್ರತ್ಯೇಕವಾಗಿ ಒಂದು ಗತಿಯನ್ನು ಆಶ್ರಯಿಸುವವೋ ಅದೇರೀತಿ ನಕ್ಷತ್ರರಾಶಿಗಳೊಡನೆ ಯುಕ್ತವಾಗಿ ಮೇರುವಿನನ್ನು ಧ್ರುವನನ್ನು ಪ್ರದಕ್ಷಿಣವಾಗಿ ನಿರಂತರವು ಸುತ್ತುತಲಿರುವ ಆ ಕಾಲಚಕ್ರದೊಡನೆ ಕಾಲಚಕ್ರವನ್ನು ಆಶ್ರಯಿಸಿಕೊಂಡು ಸುತ್ತುತಲಿರುವ ಸೂರ್ಯಾದಿ ಗ್ರಹಗಳು ಮೇರುವಿಗೆ ಪ್ರದಕ್ಷಿಣವಾಗಿ ಸುತ್ತು

ತಲಿರುವ ಕಾಲಚಕ್ರವನ್ನು ಬಿಟ್ಟು ಮತ್ತೊಂದು ಗತಿಯಿಂದ ಪೂರ್ವನಕ್ಷತ್ರವನ್ನು ಬಿಟ್ಟು ಮತ್ತೊಂದು ನಕ್ಷತ್ರವನ್ನು ಪೂರ್ವರಾಶಿಯನ್ನು ಬಿಟ್ಟು ಮತ್ತೊಂದು ರಾಶಿಯನ್ನು ನಕ್ಷತ್ರಕ್ರಮದಿಂದ ಸಂಚರಿಸುತಲಿಧಾರೆ ; ಭಗವಂತನಾದ ಅನಾದಿಪುರುಷನಾದ ಸಾಕ್ಷಾತ್ ನಾರಾಯಣಸ್ವರೂಪನಾದ ಸೂರ್ಯನು ಋಷಿಗಳಿಂದ ಶೃತಿಯಿಂದ ಊಹಿಸಲ್ಪಡುತಲಿರುವನಾದಾಗ್ಯೂ ಲೋಕಕ್ಷೇಮಕ್ಕೋಸ್ಕರ ಕಾಲಸ್ವರೂಪವನ್ನು ಹನ್ನೆರಡುಪ್ರಕಾರವಾಗಿ ವಿಭಾಗಂಗೈದು ಚೈತ್ರಾದಿ ಮಾಸಗಳಲ್ಲಿ ಕ್ರಮವಾಗಿ ಒಂದೊಂದು ನಾಮಧೇಯವುಳ್ಳವನಾಗಿ ವಸಂತಾದಿ ಷಡೃತುಗಳಲ್ಲಿ ಆಯಾ ಕರ್ಮಫಲಭೋಗಕ್ಕೆ ಅನುಗುಣವಾಗಿ ಶೀತೋಷ್ಣಾದಿ ಋತುಧರ್ಮಗಳನ್ನುಂಟುಮಾಡುತಲಿಧಾನೆ; ವರ್ಣಾಶ್ರಮಾಚಾರಗಳನ್ನನುಸರಿಸಿ ನಡೆಯುವ ಪುರುಷರು ಈ ಲೋಕದಲ್ಲಿ ಶ್ರದ್ಧೆಯಿಂದ ವೇದೋಕ್ತಗಳಾದ ನಾನಾವಿಧ ಕರ್ಮಗಳಿಂದ ಈ ಸೂರ್ಯನನ್ನು ಇಂದ್ರಾದಿರೂಪದಿಂದ ಪೂಜಿಸುತಲಿರುವವರಾಗಿ ಧ್ಯಾನಾದಿಗಳಿಂದ ಆ ಸೂರ್ಯನನ್ನು ಅಂತರ್ಯಾಮಿ ರೂಪದಿಂದ ಪೂಜಿಸುತ ಶೀಘ್ರದಿಂದ ಸ್ವರ್ಗ ಮೋಕ್ಷಗಳನ್ನು ಪಡೆಯುತಲಿಧಾರೆ ; ಲೋಕಗಳಿಗೆ ಆತ್ಮಸ್ವರೂಪನಾದ ಈ ಸೂರ್ಯನು ಅಂತರಿಕ್ಷ ಮಧ್ಯದಲ್ಲಿರುವ ಕಾಲಚಕ್ರವನ್ನೈದಿ ಸಂವತ್ಸರಕ್ಕೆ ಅವಯವಗಳಾದ ರಾಶಿಗಳೆಂಬ ನಾಮಧೇಯಗಳುಳ್ಳ ಮೇಷಾದಿ ದ್ವಾದಶ ಮಾಸಗಳನ್ನು ಅನುಭವಿಸುತಲಿಧಾನೆ ; ಶುಕ್ಲಪಕ್ಷ ಒಂದು ಕೃಷ್ಣಪಕ್ಷ ಒಂದು ಈ ಎರಡು ಪಕ್ಷಗಳು ಕೂಡಿದರೆ ಚಾಂದ್ರಮಾನದಿಂದ ಒಂದು ಮಾಸವು ಆಗುವದು ; ಈ ಎರಡು ಕಾಲ ಮಹಾನಕ್ಷತ್ರಗಳನ್ನು ಸೂರ್ಯನು ಸಂಚರಿಸುವನಾದರೆ ಸೌರಮಾನದಿಂದ ಒಂದು ಮಾಸವು ಆಗುವದು ; ಪಿತೃಮಾಸದಿಂದ ಒಂದು ದಿವಸವು ಒಂದು ರಾತ್ರಿಯು ಆದರೆ ಮನುಷ್ಯರಿಗೆ ಒಂದು ಮಾಸವಾಗುವದೆಂದು ಋಷಿಗಳು ಹೇಳುವರು ; ಸೂರ್ಯನು ಎಷ್ಟುಮಾತ್ರವಾದ ಕಾಲದಿಂದ ಎರಡು ರಾಶಿಗಳನ್ನನುಭವಿಸುವನೋ ಅಷ್ಟುಮಾತ್ರವಾದ ಕಾಲವು ಋತುವೆಂದು ಹೇಳಲ್ಪಡುವದು ; ಎಷ್ಟುಮಾತ್ರವಾದ ಕಾಲದಿಂದ ಆರು ರಾಶಿಗಳನ್ನನುಭವಿಸುವನೋ ಅಷ್ಟುಮಾತ್ರವಾದ ಕಾಲವೇ ಅಯನವೆಂದು ಹೇಳಲ್ಪಡುವದು ; ಸೂರ್ಯನು ಎಷ್ಟುಮಾತ್ರವಾದ ಕಾಲದಿಂದ ಸ್ವರ್ಗ ಭೂಮಂಡಲಗಳೊಡನೆ ದ್ವಾದಶರಾಶಿಗಳನ್ನು ಸಮಗ್ರವಾಗಿ ಅನುಭವಿಸುವನೋ ಅಷ್ಟುಮಾತ್ರವಾದ ಆ ಕಾಲವನ್ನೇ ಸೂರ್ಯನ ಮಂದ ಶೀಘ್ರಸಮಗತಿಗಳಿಂದ ಸಂವತ್ಸರವೆಂದೂ ಪರಿವತ್ಸರವೆಂದೂ ಇಡಾವತ್ಸರವೆಂದೂ ಅನುವತ್ಸರವೆಂದೂ ಇದ್ವತ್ಸರವೆಂದೂ ಋಷಿಗಳು ಹೇಳುವರು ; ಯಾವಾಗ ಚೈತ್ರ ಶುದ್ಧ ಪಾಡ್ಯದಲ್ಲಿ ಮೇಷ ಸಂಕ್ರಮಣ ಹುಟ್ಟುವದೋ ಆಗ ಸೌರಮಾನಕ್ಕೆ ಚಾಂದ್ರಮಾನಕ್ಕೆ ಒಂದೇಕಾಲದಿಂದ ಉಪಕ್ರಮವುಂಟಾಗುವದು ; ಆ ವರ್ಷಕ್ಕೆ ಸಂವತ್ಸರವೆಂಬ ನಾಮಧೇಯ ಉಂಟಾಗುವದು ; ಆಮೇಲೆ ವರ್ಷದಲ್ಲಿ ಸೌರಮಾನದಿಂದ ಆರು ದಿನಗಳು ವೃದ್ಧಿಹೊಂದುವವು, ಚಾಂದ್ರಮಾನದಿಂದ ಆರು ದಿನಗಳು ತಗ್ಗುವವಾದಕಾರಣ ಇವು ಎರಡಕ್ಕೂ ಹನ್ನೆರಡು ದಿವಸ ಹೆಚ್ಚುಕಡಿಮೆಯಾದ್ದರಿಂದ ಚಾಂದ್ರ ಸೌರಮಾನಗಳು ಹಿಂದುಮುಂದಾಗುವವು ; ಈರೀತಿಯಿಂದ ಐದು ವರ್ಷಗಳು ನಡೆಯುತಲಿರಲು ಈ ಮಧ್ಯದಲ್ಲಿ ಎರಡು ಅಧಿಕಮಾಸಗಳು ಹುಟ್ಟುವವು ; ಆಮೇಲೆ ಆರನೇ ವರ್ಷವೇ ಪುನಃ ಸಂವತ್ಸರವೆಂದು ಹೇಳಲ್ಪಡುವದು ; ಅದುಕಾರಣ ಈ ಭೇದಗಳಿಂದ ಮೊದಲು ಸಂವತ್ಸರವು ಎರಡನೇದು ಪರಿವತ್ಸರವು ಮೂರನೇದು ಇಡಾವತ್ಸರವು ನಾಲ್ಕನೇದು ಅನುವತ್ಸರವು ಐದನೇದು ಇದ್ವತ್ಸರವು ಎಂದು ಸೂರ್ಯನ ಮಂದ ಶೀಘ್ರ ಸಮಗತಿಗಳಿಂದ ಹೇಳಲ್ಪಡುವದು ; ಆರನೇದರಿಂದ ಸಂವತ್ಸರ ಪರಿವತ್ಸರ ಇಡವತ್ಸರ ಅನುವತ್ಸರ ಇದ್ವತ್ಸರಗಳೆಂದು ಅದೇರೀತಿ ಕ್ರಮವಾಗಿ ನಡೆಯುವದೆಂದು ತಿಳಿಯತಕ್ಕದ್ದು; ಇದೇರೀತಿಯಿಂದ ಚಂದ್ರನು ಸೂರ್ಯಕಿರಣಗಳಿಗಿಂತಲೂ ಲಕ್ಷಯೋಜನಗಳ ಉಪರಿಭಾಗದಲ್ಲಿ ಸಂಚರಿಸುತ ಸೂರ್ಯನ ಸಂವತ್ಸರ ಭುಕ್ತಿಯನ್ನು ಒಂದು ಮಾಸದಿಂದಲೇ ಅನುಭವಿಸುವನು ; ಮಾಸಭುಕ್ತಿಯನ್ನು ಎರಡೂಕಾಲು ದಿನಗಳಿಂದ ಪಕ್ಷಭುಕ್ತಿಯನ್ನು ಒಂದು ದಿನದಿಂದಲೇ ಅತಿ ಶೀಘ್ರಗತಿಯುಳ್ಳವನಾಗಿ ಅನುಭವಿಸುತಲಿಧಾನೆ ; ಚಂದ್ರನು ವೃದ್ಧಿಕ್ಷಯಗಳನ್ನೈದುತಲಿರುವ ತನ್ನ ಕಳೆಗಳಿಂದ ಉಂಟಾದ ಶುಕ್ಲಪಕ್ಷ ಕೃಷ್ಣಪಕ್ಷಗಳಿಂದ ಪಿತೃಗಳಿಗೆ ಅಹೋರಾತ್ರಿಗಳನ್ನು ಮಾಡುತ ಸಕಲ ಪ್ರಾಣಿಸಮೂಹಗಳಿಗೆ ಅನ್ನಸ್ವರೂಪನೂ ಅಮೃತಸ್ವರೂಪನೂ ಆದ್ದರಿಂದ ಪ್ರಾಣಸ್ವರೂಪನಾಗಿ ಜೀವಿಸುವದಕ್ಕೆ ಕಾರಣನಾದ್ದರಿಂದ ಜೀವಸ್ವರೂಪನಾಗಿ

ಅರವತ್ತು ಘಳಿಗೆಗಳಿಂದ ಒಂದೊಂದು ನಕ್ಷತ್ರವನ್ನು ಅನುಭವಿಸುತಲಿಧಾನೆ; ಷೋಡಶಕಲಾಯುಕ್ತನಾದ ಭಗವಂತನಾದ ಹರಿಸ್ವರೂಪನಾದ ಈ ಚಂದ್ರನು ಮನೋರೂಪನು; ಅನ್ನಸ್ವರೂಪನು; ಅಮೃತಸ್ವರೂಪನು; ದೇವ ಪಿತೃ ಮನುಷ್ಯ ಭೂತ ಪಶು ಪಕ್ಷಿ ಸರ್ಪ ವೃಕ್ಷ ಲತೆಗಳ ಪ್ರಾಣಶಕ್ತಿಯನ್ನು ವೃದ್ಧಿಹೊಂದಿಸುತಲಿರುವನಾದ್ದರಿಂದ ಸರ್ವಾತ್ಮಕನೆಂದು ಋಷಿಗಳು ವರ್ಣಿಸುತ್ತಾರೆ; ಚಂದ್ರಮಂಡಲಕ್ಕಿಂತಲೂ ಮೇಲೆ ಮೂರುಲಕ್ಷ ಯೋಜನಗಳಿಗಿಂತಲೂ ಉಪರಿಭಾಗದಲ್ಲಿ ನಕ್ಷತ್ರಗಳು ಮೇರುವಿಗೆ ಪ್ರದಕ್ಷಿಣವಾಗಿ ಸಂಚರಿಸುತಲಿಹವು; ಉತ್ತರಾಷಾಢ ಶ್ರವಣನಕ್ಷತ್ರಗಳ ಮಧ್ಯದಲ್ಲಿ ಫಲವಿಶೇಷದಿಂದ ಪ್ರತ್ಯೇಕವಾಗಿ ಕಲ್ಪಿಸಲ್ಪಟ್ಟ ಅಭಿಜಿತ್ತೆಂಬ ನಕ್ಷತ್ರದೊಡನೆ ಇಪ್ಪತ್ತೆಂಟಾದ ಅಶ್ವಿನ್ಯಾದಿನಕ್ಷತ್ರಗಳು ಕಾಲಚಕ್ರದಲ್ಲಿ ಈಶ್ವರನಿಂದ ಕಲ್ಪಿಸಲ್ಪಟ್ಟಿರುವವು; ನಕ್ಷತ್ರಮಂಡಲಕ್ಕಿಂತಲೂ ಎರಡುಲಕ್ಷ ಯೋಜನ ಉಪರಿಭಾಗದಲ್ಲಿ ಶುಕ್ರನು ಸಂಚರಿಸುತಲಿಧಾನೆ; ಆ ಶುಕ್ರನು ಸೂರ್ಯನಿಂದ ಅನುಭವಿಸತಕ್ಕ ನಕ್ಷತ್ರದ ಹಿಂದುಗಡೆಯಲ್ಲೇ ಶೀಘ್ರ ಮಂದ ಸಮಗತಿಗಳಿಂದ ಸೂರ್ಯನಿಂದ ಸಂಚರಿಸುತಲಿಹನು; ನಿರಂತರವು ಶುಕ್ರನು ಲೋಕಗಳಿಗೆ ಬಹುತರವಾಗಿ ಶುಭಫಲಪ್ರದನಾಗಿ ತನ್ನ ಸಂಚಾರದಿಂದ ವೃಷ್ಟಿಯನ್ನುಂಟುಮಾಡುವನು; ಯಾವ ಯಾವ ಗ್ರಹದಿಂದ ಅನಾವೃಷ್ಟಿಯುಂಟಾಗುವದೋ ಆಯಾ ಗ್ರಹವನ್ನು ಉಪಶಾಂತಿಯನ್ನೈದಿಸುವನು; ಶುಕ್ರನಂತೆ ಬುಧನು ಕೂಡ ಸೂರ್ಯನಿಗೆ ಸಮೀಪಸ್ಥನಾಗಿ ಸಂಚರಿಸುತಲಿಧಾನೆ; ಶುಕ್ರನಿಗಿಂತಲೂ ಬುಧನಿಗೆ ವಿಶೇಷವೇನೆಂದರೆ: ಶುಕ್ರಸ್ಥಾನಕ್ಕಿಂತಲೂ ಎರಡುಲಕ್ಷ ಯೋಜನಗಳ ಉಪರಿಭಾಗದಲ್ಲಿ ಕಾಣಿಸ್ಪಡುತಲಿರುವ ಸೌಮ್ಯಗ್ರಹವಾದ ಬುಧನು ಬಹುತರವಾಗಿ ಲೋಕಕ್ಕೆ ಶುಭಫಲವನ್ನೀವನು; ಯಾವಾಗ ಸೂರ್ಯನನ್ನು ಬಿಟ್ಟು ದೂರವಾಗಿ ಹೋಗುವನೋ ಆ ಸಮಯದಲ್ಲಿ ಪ್ರಚಂಡವಾತವನ್ನು ವೃಷ್ಟಿಯಿಲ್ಲದೆ ಮೇಘಾಡಂಬರವನ್ನು ಅನಾವೃಷ್ಟಿಯನ್ನು ದೇಶಕ್ಕೆ ಭಯವನ್ನು ಉಂಟುಮಾಡುವನು; ಈ ಬುಧನಿಗಿಂತಲೂ ಎರಡುಲಕ್ಷ ಯೋಜನ ಉಪರಿಭಾಗದಲ್ಲಿ ಕಾಣಲ್ಪಡುತಲಿರುವ ಅಂಗಾರಕನು ನಲ್ವತ್ತೈದು ದಿವಸಗಳಿಂದ ಒಂದೊಂದು ರಾಶಿಯನ್ನಾಗಿ ಹನ್ನೆರಡು ರಾಶಿಗಳನ್ನು ಅನುಭವಿಸುತಲಿಧಾನೆ; ಅಶುಭಗ್ರಹವಾದ ಈ ಅಂಗಾರಕನು ಯಾವಾಗ ವಕ್ರಿಸುವನೋ ಆಗ ದೇಶಕ್ಕೆ ದುಃಖವನ್ನುಂಟುಮಾಡುವನು; ಈ ಅಂಗಾರಕನಿಗಿಂತಲೂ ಎರಡುಲಕ್ಷ ಯೋಜನಗಳ ಉಪರಿಭಾಗದಲ್ಲಿರುವ ಪೂಜ್ಯನಾದ ಬೃಹಸ್ಪತಿಯು ಒಂದೊಂದು ರಾಶಿಯಲ್ಲಿ ಒಂದೊಂದು ಸಂವತ್ಸರವು ಸಂಚರಿಸುವನು; ಈ ಬೃಹಸ್ಪತಿಯು ವಕ್ರಿಸುವನಾಗದೆ ಋಜುಗತಿಯುಳ್ಳವನಾಗಿದ್ದಲ್ಲಿ ಬ್ರಾಹ್ಮಣ ಸಮೂಹಕ್ಕೆ ಬಹುತರವಾಗಿ ಶುಭಫಲವನ್ನೀವನು; ಬೃಹಸ್ಪತಿಗಿಂತಲೂ ಎರಡುಲಕ್ಷ ಯೋಜನಗಳ ಉಪರಿಭಾಗದಲ್ಲಿ, ಕಾಣಲ್ಪಡುತಲಿರುವ ಶನೈಶ್ಚರನು ಒಂದೊಂದು ರಾಶಿಯಲ್ಲಿ ಮುವ್ವತ್ತು ಮಾಸಗಳು ಅತಿ ಮಂದಗತಿಯಿಂದ ಸಂಚರಿಸುತಲಿರುವನಾಗಿ ಕ್ರಮದಿಂದ ಇದೇರೀತಿ ಹನ್ನೆರಡು ರಾಶಿಗಳನ್ನು ಮುವ್ವತ್ತು ಸಂವತ್ಸರಗಳಿಂದ ಅನುಭವಿಸುತ ಸಕಲ ಪ್ರಾಣಿಗಳಿಗೂ ಅಶುಭಫಲವನ್ನೇ ಉಂಟುಮಾಡುವನು; ಈ ಶನೈಶ್ಚರನಿಗಿಂತಲೂ ಉತ್ತರವಾಗಿಹನ್ನೊಂದು ಲಕ್ಷ ಯೋಜನಗಳ ಉಪರಿಭಾಗದಲ್ಲಿ ಕಾಣಲ್ಪಡುತಲಿರುವ ಸಪ್ತಋಷಿಗಳು ಲೋಕಗಳ ಕ್ಷೇಮವನ್ನು ಭಾವಿಸುತಲಿರುವವರಾಗಿ ಭಗವಂತನಾದ ಮಹಾವಿಷ್ಣುವಿನ ಉತ್ಕೃಷ್ಟವಾದ ಸ್ಥಾನವನ್ನು ಪ್ರದಕ್ಷಿಣವಾಗಿ ಸುತ್ತುತಲಿಧಾರೆ."

೨೩ನೇ ಅಧ್ಯಾಯ.

ಧ್ರುವನ ಸ್ಥಾನವನ್ನು ಶ್ರೀಮಹಾವಿಷ್ಣುವು ಶಿಂಶುಮಾರ ಸ್ವರೂಪನಾಗಿರುವದನ್ನು ವರ್ಣಿಸಿದ್ದು.

"ಎಲೈ ಪರೀಕ್ಷಿದ್ರಾಯನೆ, ಆ ಸಪ್ತಋಷಿಗಳ ಸ್ಥಾನಕ್ಕಿಂತಲೂ ಹದಿಮೂರುಲಕ್ಷ ಯೋಜನಗಳ ಉಪರಿಭಾಗದಲ್ಲಿ ಪ್ರಸಿದ್ಧವಾಗಿರುವ ಯಾವ ಸ್ಥಾನವನ್ನು ವಿಷ್ಣುವಿನ ಉತ್ಕೃಷ್ಟವಾದ ಸ್ಥಾನವೆಂದು ಋಷಿಗಳು ಹೇಳುವರೋ ಅಂಥಾ ಉನ್ನತವಾದ ಸ್ಥಾನದಲ್ಲಿ ಪರಮಭಾಗವತನಾದ ಉತ್ತಾನಪಾದರಾಯನಿಗೆ ಪುತ್ರನಾದ ಧ್ರುವನು ಒಂದೇಕಾಲದಲ್ಲಿ ಕೂಡಿದವರಾಗಿ ನಕ್ಷತ್ರರೂಪಿಗಳಾಗಿರುವ ಅಗ್ನಿ ಇಂದ್ರ ಬ್ರಹ್ಮ ಕಶ್ಯಪ ಧರ್ಮಪುರುಷರಿಂದ ಬಹು

ಮಾನದಿಂದ ಪ್ರದಕ್ಷಿಣಂಗೈಯಲ್ಪಡುತ ಅನೇಕ ಕಲ್ಪಗಳು ಜೀವಿಸುವ ಮಹಾಪುರುಷರಿಂದ ಆಶ್ರಯಿಸುವದಕ್ಕೆ ಯೋಗ್ಯನಾಗಿ ಈಗ್ಯೂ ಸರ್ವೋತ್ಕೃಷ್ಟನಾಗಿಧಾನೆ; ಈ ಧೃವರಾಯನ ಪ್ರಭಾವವು ನಿನಿಗೋಸ್ಕರ ಮೊದಲೇ ಚತುರ್ಥಸ್ಕಂಧದಲ್ಲಿ ವಿಶೇಷವಾಗಿ ನಿರೂಪಿಸಲ್ಪಟ್ಟದೆ; ಆ ಧೃವನು ಭಗವತ್ಸ್ವರೂಪವಾಗಿ ಅಸ್ಫುಟವಾದ ಗತಿಯುಳ್ಳದ್ದಾಗಿರುವ ಕಾಲದಿಂದ ಸುತ್ತಿಸಲ್ಪಡುತಲಿರುವ ಸಮಸ್ತಗಳಾದ ಗ್ರಹಗಳಿಗೂ ಅಶ್ವಿನ್ಯಾದಿ ಪ್ರಸಿದ್ಧನಕ್ಷತ್ರಗಳಿಗೂ ಮಿಕ್ಕ ಸಾಧಾರಣಗಳಾದ ನಕ್ಷತ್ರಸಮೂಹಗಳಿಗೂ ಆಧಾರಭೂತವಾದ ಮಹಾಸ್ತಂಭವಂತಿರುವ ಈಶ್ವರನಿಂದ ಕಲ್ಪಿಸಲ್ಪಟ್ಟವನಾಗಿ ಅತ್ಯಂತ ಪ್ರಕಾಶಿಸುತಲಿಧಾನೆ; ಯಾವರೀತಿ ಮೇಟಿಮರದಲ್ಲಿ ಧಾನ್ಯಗಳನ್ನು ತುಳಸುವದಕ್ಕೋಸ್ಕರ ಹಗ್ಗಗಳಿಂದ ಪಜ್ತಿಯಾಗಿ ಕಟ್ಟಲ್ಪಟ್ಟ ಎತ್ತುಗಳು ತ್ರಿಕಾಲದಲ್ಲಿಯೂ ತಮ್ಮ ತಮ್ಮ ಪಜ್ತಿಯನ್ನು ಬಿಡದೇ ಆ ಮೇಟಿಮರಕ್ಕೆ ಸುತ್ತಲೂ ಮಂಡಲಾಕಾರವಾಗಿ ಸುತ್ತುವವೋ ಅದೇರೀತಿ ಗ್ರಹ ನಕ್ಷತ್ರಾದಿ ಸಮೂಹಗಳು ಈ ಕಾಲಚಕ್ರದಲ್ಲಿ ಒಳಗೆ ಹೊರಗೆ ಈಶ್ವರನಿಂದ ಕೇರಿಸಲ್ಪಟ್ಟಂಥಾವಾಗಿ ಮೇಟಿಮರದಂತೆ ಆಕಾಶಮಧ್ಯದಲ್ಲಿರುವ ಈ ಧೃವನನ್ನೇ ಅವಲಂಬಿಸಿಕೊಂಡು ಪ್ರವಹವಾಯುವಿನಿಂದ ಪ್ರೇರಿಸಲ್ಪಟ್ಟವಾಗಿ ಕಲ್ಪಾಂತಪರ್ಯಂತವೂ ಆ ಧೃವನನ್ನು ಸುತ್ತುತಲಿವೆ; ಯಾವರೀತಿಯಿಂದ ಅಂತರಿಕ್ಷದಲ್ಲಿ ಮೇಘಗಳು ಹದ್ದು ಮೊದಲಾದ ಪಕ್ಷಿಗಳು ವಾಯುವಿನ ಆಧೀನಗಳಾಗಿ ಕರ್ಮವಿಶೇಷವೆಂಬ ಸಹಾಯವುಳ್ಳವಾಗಿ ಕೆಳಕ್ಕೆ ಬೀಳದೆ ಅಲ್ಲೇ ಸುತ್ತುತಲಿಹವೋ ಅದೇರೀತಿ ನಕ್ಷತ್ರಸಮೂಹಗಳು ಪ್ರಕೃತಿಪುರುಷ ಸಂಬಂಧದಿಂದ ಬದ್ಧಗಳಾಗಿ ಕರ್ಮವಿಶೇಷದಿಂದ ಕಲ್ಪಿತವಾದ ಗತಿಯುಳ್ಳಂಥಾವಾಗಿ ಈ ಭೂಮಿಯಲ್ಲಿ ಬೀಳದೆ ಆ ಕಾಲಚಕ್ರದಲ್ಲೇ ಸಂಚರಿಸುತಲಿಹವು; ಕೆಲವರು ಋಷಿಗಳು ಈ ನಕ್ಷತ್ರಮಂಡಲವು ಶಿಂಶುಮಾರಚಕ್ರದಲ್ಲಿ ಶಿಂಶುಮಾರಸ್ವರೂಪನಾಗಿರುವ ಭಗವಂತನಾದ ಶ್ರೀವಾಸುದೇವನ ಯೋಗಧಾರಣೆಯಲ್ಲಿ ದೃಢವಾಗಿ ನಿಂತಿರುವದೆಂದು ಹೇಳುವರು; ಅಧೋಮುಖವಾಗಿ ಮಂಡಲಾಕಾರವಾಗಿ ಸುತ್ತಿಕೊಂಡಿರುವ ದೇಹವುಳ್ಳ ಶಿಂಶುಮಾರಮೂರ್ತಿಯ ಪುಚ್ಛಾಗ್ರಭಾಗದಲ್ಲಿ ಧೃವನು ಇಹನು; ಆ ಪುಚ್ಛಾಗ್ರಕ್ಕಿಂತಲೂ ಕೆಳಗೆ ಬ್ರಹ್ಮನು ಅಗ್ನಿಯು ಇಂದ್ರನು ಧರ್ಮಪುರುಷನು ಸಹ ಒಬ್ಬನಿಗಿಂತಲೂ ಒಬ್ಬನು ಈರೀತಿ ಕೆಳಗೆ ಕ್ರಮವಾಗಿ ಇರುವರು; ಪುಚ್ಛದ ಮೂಲದಲ್ಲಿ ಧಾತೃವಿಧಾತೃಗಳು ಇರುವರು; ಕಟಿಪ್ರದೇಶದಲ್ಲಿ ಸಪ್ತಋಷಿಗಳಿರುವರು; ಪ್ರದಕ್ಷಿಣವಾಗಿ ಮಂಡಲಾಕಾರದಿಂದ ಸುತ್ತಲ್ಪಟ್ಟ ಶರೀರವುಳ್ಳ ಆ ಶಿಂಶುಮಾರಮೂರ್ತಿಯ ದಕ್ಷಿಣಪಾರ್ಶ್ವದಲ್ಲಿ ಅಭಿಜಿತ್ತೆಂಬ ನಕ್ಷತ್ರ ಮೊದಲುಗೊಂಡು ಪುನರ್ವಸೂಪರ್ಯಂತವೂ ಉತ್ತರಾಯಣಗಳೆಂಬ ಹದಿನಾಲ್ಕು ನಕ್ಷತ್ರಗಳು ಇರುವವು; ವಾಮಪಾರ್ಶ್ವದಲ್ಲಿ ಪುಷ್ಯ ಮೊದಲುಗೊಂಡು ಉತ್ತರಾಷಾಢ ನಕ್ಷತ್ರಪರ್ಯಂತವೂ ದಕ್ಷಿಣಾಯನಗಳೆಂಬ ಈ ಹದಿನಾಲ್ಕು ನಕ್ಷತ್ರಗಳಿರುವವು; ಈ ರೀತಿಯಿಂದ ಆ ಶಿಂಶುಮಾರಮೂರ್ತಿಯ ಉಭಯಪಾರ್ಶ್ವಗಳಲ್ಲಿಯೂ ಅಶ್ವಿನ್ಯಾದಿಯಾಗಿ ಇಪ್ಪತ್ತೆಂಟು ನಕ್ಷತ್ರಗಳು ಸಮಸಂಖ್ಯೆಯಿಂದ ಅವಯವಗಳಾಗಿರುವವು; ಈ ಅರ್ಥವನ್ನೇ ಆಯಾ ಸ್ಥಾನಗಳನ್ನು ವಿಭಜಿಸಿ ವಿಶೇಷದಿಂದ ಹೇಳುವರು; ಆ ಶಿಂಶುಮಾರಮೂರ್ತಿಯು ಪೃಷ್ಠಭಾಗದಲ್ಲಿ ಅಜವೀಧಿಯು ಆಕಾಶಗಂಗೆಯು ಇರುವವು; ಉದರದಲ್ಲಿ ಉತ್ತರಾಯಣ ನಕ್ಷತ್ರಗಳಿಗೆ ಕೊನೆಯಾದ ಪುನರ್ವಸುವು ದಕ್ಷಿಣಾಯನ ನಕ್ಷತ್ರಗಳಿಗೆ ಆದಿಯಾದ ಪುಷ್ಯವು ಇರುವವು; ದಕ್ಷಿಣ ವಾಮ ನಿತಂಬ ಸ್ಥಾನಗಳಲ್ಲಿ ಪುನರ್ವಸುವಿಗೆ ಹಿಂದಣದಾದ ಆರ್ದ್ರೆಯು ಪುಷ್ಯಕ್ಕೆ ಎರಡನೆಯದಾದ ಆಶ್ಲೇಷೆಯು ಸಹ ಎರಡು ನಕ್ಷತ್ರಗಳಿರುವವು; ಬಲ ಎಡಗಳಾದ ಹಿಂದೆಯಿರುವ ಎರಡು ಪಾದಗಳಲ್ಲಿ ಉತ್ತರಾಯಣಕ್ಕೆ ಮೊದಲಿನದಾದ ಅಭಿಜಿತ್ತೆಂಬ ನಕ್ಷತ್ರವು ದಕ್ಷಿಣಾಯನಕ್ಕೆ ಕೊನೇದಾದ ಉತ್ತರಾಷಾಢೆಯು ಸಹಾ ಇರುವವು; ಬಲ ಎಡಗಳಾದ ನಾಶಿಕಾಸ್ಥಾನಗಳಲ್ಲಿ ಅಭಿಜಿತ್ತಿಗೆ ಎರಡನೇದಾದ ಶ್ರವಣವು ಆ ಉತ್ತರಾಷಾಢೆಗೆ ಹಿಂದಣದಾದ ಪೂರ್ವಾಷಾಢೆಯು ಇರುವವು; ಬಲ ಎಡಗಳಾದ ನೇತ್ರಗಳಲ್ಲಿ ಶ್ರವಣಕ್ಕೆ ಎರಡನೆಯದಾದ ಧನಿಷ್ಠೆಯು ಪೂರ್ವಾಷಾಢಕ್ಕೆ ಹಿಂದಣದಾದ ಮೂಲಾನಕ್ಷತ್ರವು ಇರುವವು; ವಾಮಪಾರ್ಶ್ವದಲ್ಲಿರುವ ಪಂಕ್ತಿಗಳೆಂಬ ಅವಯವಗಳಲ್ಲಿ ಮಖಾನಕ್ಷತ್ರವನ್ನು ಮೊದಲುಗೊಂಡು ಅನೂರಾಧಾಂತಗಳಾದ ಎಂಟು ದಕ್ಷಿಣಾಯನ ನಕ್ಷತ್ರಗಳು ಇರುವವು; ದಕ್ಷಿಣಪಾರ್ಶ್ವದಲ್ಲಿರುವ ಪಂಕ್ತಿಗಳಲ್ಲಿ ವ್ಯಸ್ತವಾಗಿ ಮೃಗಶಿರ ಮೊದಲುಗೊಂಡು ಹಿಂದಕ್ಕೆ ಪೂರ್ವಾಭಾದ್ರಪದಾಂತಗಳಾದ ಎಂಟು ಉತ್ತರಾಯಣ

ನಕ್ಷತ್ರಗಳಿರುವವು; ಬಲ ಎಡಗಳಾದ ಹೆಗಲುಗಳಲ್ಲಿ ಉತ್ತರಾಯಣ ನಕ್ಷತ್ರಗಳಲ್ಲಿ ಅವಶಿಷ್ಟವಾದ ಶತಭಿಷೆಯು ದಕ್ಷಿಣಾಯನ ನಕ್ಷತ್ರಗಳಲ್ಲಿ ಅವಶಿಷ್ಟವಾದ ಜ್ಯೇಷ್ಠೆಯು ಇರುವವು; ಮೇಲೆ ಇರುವ ದವಡೆಯಲ್ಲಿ ಅಗಸ್ತ್ಯನು ಕೆಳಗಿರುವ ದವಡೆಯಲ್ಲಿ ನಕ್ಷತ್ರರೂಪಿಯಾದ ಯಮನು ಇರುವರು; ಮುಖದಲ್ಲಿ ಅಂಗಾರಕನು ಗುಹ್ಯಸ್ಥಾನದಲ್ಲಿ ಶನೈಶ್ಚರನು ಕತ್ತಿನಲ್ಲಿರುವ ಕೋಬಿನಲ್ಲಿ ಬೃಹಸ್ಪತಿಯು ವಕ್ಷಸ್ಸಿನಲ್ಲಿ ಸೂರ್ಯನು ಹೃದಯದಲ್ಲಿ ನಾರಾಯಣನು ಮನಸ್ಸಿನಲ್ಲಿ ಚಂದ್ರನು ನಾಭಿಯಲ್ಲಿ ಶುಕ್ರನು ಸ್ತನಗಳಲ್ಲಿ ಅಶ್ವಿನೀದೇವತೆಗಳು ಪ್ರಾಣಾಪಾನಗಳಲ್ಲಿ ಬುಧನು ಕಂಠದಲ್ಲಿ ರಾಹುವು ಸಕಲಾವಯವಗಳಲ್ಲಿ ಕೇತುವು ರೋಮಗಳಲ್ಲಿ ಮಿಕ್ಕ ಸಕಲ ನಕ್ಷತ್ರಸಮೂಹಗಳು ಇರುವವು; ಇದೇರೀತಿಯಿಂದ ಭಗವಂತನಾದ ಶ್ರೀ ಮಹಾವಿಷ್ಣುವಿನ ಸಕಲ ದೇವತಾತ್ಮಕವಾದ ಈ ಶಿಂಶುಮಾರಸ್ವರೂಪವಾದ ಮೂರ್ತಿಯನ್ನು ಪುರುಷನು ಪ್ರತಿದಿನವೂ ಸಂಧ್ಯಾಕಾಲದಲ್ಲಿ ನಿಯಮಯುಕ್ತನಾಗಿ ಮೌನದಿಂದ ದರ್ಶನಂಗೈಯುತ ಉಪಸ್ಥಾನವನ್ನು ಮಾಡುವವನಾಗಬೇಕು; ನಕ್ಷತ್ರಗಳಿಗೆ ಆಶ್ರಯನಾದ ಕಾಲಚಕ್ರಸ್ವರೂಪನಾದ ದೇವತೆಗಳಿಗೆ ಅಧಿಪತಿಯಾದ ಮಹಾಪುರುಷನಿಗೋಸ್ಕರ ನಮಸ್ಕಾರವೆಂಬ ಅರ್ಥವುಳ್ಳ ಈ ಮಂತ್ರದಿಂದ ಆ ಶಿಂಶುಮಾರ ಮೂರ್ತಿಯನ್ನು ಭಜನಂಗೈಯುವವನಾಗಬೇಕು; ಗ್ರಹ ನಕ್ಷತ್ರ ತಾರಾತ್ಮಕವಾದ ಆಧಿದೈವಿಕವಾದ ಶಿಂಶುಮಾರಾಕೃತಿಯುಳ್ಳ ಹರಿಯ ರೂಪವನ್ನು ತ್ರಿಕಾಲದಲ್ಲಿಯೂ ಈ ಶಿಂಶುಮಾರ ಮಂತ್ರವನ್ನು ಜಪಿಸುವ ಮಹಾತ್ಮರನ್ನು ಪ್ರತಿದಿನವಲ್ಲಿಯೂ ನಮಸ್ಕರಿಸುವ ಪುರುಷನಿಗೆ ಆಯಾ ದಿವಸದಲ್ಲಿ ಪ್ರಾಪ್ತವಾದ ಪಾಪವು ಅತಿ ಶೀಘ್ರವಾಗಿ ಪರಿಹರಿಸಲ್ಪಡುವದು" ಎಂದು ನುಡಿದನು.

೨೪ನೇ ಅಧ್ಯಾಯ.

ಸೂರ್ಯನಿಗಿಂತಲೂ ಅಧೋಭಾಗದಲ್ಲಿರುವ ರಾಹು ಮೊದಲಾದವರ ಸ್ಥಿತಿಯು—ಅತಳಾದಿ ಸಪ್ತಪಾತಾಳಗಳ ಸ್ಥಿತಿಯು.

"ಎಲೈ ಪರೀಕ್ಷಿದ್ರಾಯನೆ, ಸೂರ್ಯನಿಗಿಂತಲೂ ಹತ್ತುಸಹಸ್ರಯೋಜನ ಕೆಳಗೆ ರಾಹುವು ನಕ್ಷತ್ರದಂತೆ ಸಂಚರಿಸುತಲಿಧಾನೆ; ಸಿಂಹಿಕಾ ಪುತ್ರನಾದ ಅಸುರಾಧಮನಾದ ಈ ರಾಹುವು ದೇವತ್ವಕ್ಕೆ ಯೋಗ್ಯನಲ್ಲದೇ ಇದ್ದರೂ ಭಗವಂತನ ದಯೆಯಿಂದ ದೇವತ್ವವನ್ನೂ ಗ್ರಹತ್ವವನ್ನೂ ಪಡೆದಿರುವನು; ಇವನ ಜನ್ಮಕರ್ಮಾದಿಗಳನ್ನು ನಿನಗೆ ಮುಂದೆ ನಿರೂಪಿಸುತ್ತೇನೆ; ಗ್ರಹಣವುಂಟಾಗುವ ಕ್ರಮ ಹ್ಯಾಗಂದರೆ; ಪ್ರಕಾಶಿಸುತಲಿರುವ ಸೂರ್ಯಮಂಡಲವು ಹತ್ತುಸಾವಿರ ಯೋಜನ ವಿಸ್ತಾರವುಳ್ಳಂಥಾದ್ದೆಂದು ಋಷಿಗಳು ಹೇಳುವರು; ಚಂದ್ರಮಂಡಲವು ಹನ್ನೆರಡುಸಾವಿರ ಯೋಜನ ವಿಸ್ತಾರವುಳ್ಳದ್ದು; ರಾಹುಮಂಡಲವು ಹದಿಮೂರುಸಾವಿರ ಯೋಜನ ವಿಸ್ತಾರವುಳ್ಳದ್ದು ಎಂದು ತಿಳಿಯುತಕ್ಕದ್ದು; ಈ ರಾಹುವು ಹಿಂದೆ ಇಂದ್ರಾದಿ ದೇವತೆಗಳು ಅಮೃತಪಾನವನ್ನು ಮಾಡುತ್ತಿರಲು ಆ ಸಮಯದಲ್ಲಿ ತಾನು ಅಸುರನಾದಾಗ್ಯೂ ಚೌರ್ಯದಿಂದ ಸೂರ್ಯಚಂದ್ರರ ಮಧ್ಯದಲ್ಲಿ ಪ್ರವೇಶಂಗೈದು ಅಮೃತಪಾನವನ್ನು ಮಾಡಿದವನಾಗಿ ಆ ಸೂರ್ಯಚಂದ್ರರಿಂದ ಇವನು ಅಸುರನೆಂದು ವಿಷ್ಣು ಮೊದಲಾದ ದೇವತೆಗಳಿಗೆ ತಿಳಿಸಲ್ಪಟ್ಟವನಾದ್ದರಿಂದ ಆ ದ್ವೇಷವನ್ನು ಮನಸ್ಸಿನಲ್ಲಿ ನಿಲ್ಲಿಸಿಕೊಂಡು ಈಗ್ಯೂ ಸೂರ್ಯಚಂದ್ರರನ್ನು ಬಾಧಿಸುತಲಿಧಾನ; ಪರ್ವಗಳಲ್ಲಿ ಸೂರ್ಯಚಂದ್ರರಿಗೆ ರಾಹುವಿನಿಂದ ಉಂಟಾಗುವ ಬಾಧೆಯನ್ನು ತಿಳಿದು ಭಗವಂತನಾದ ಶ್ರೀಹರಿಯು ಆ ಸೂರ್ಯಚಂದ್ರರನ್ನು ರಕ್ಷಿಸಲೋಸುಗ ತನ್ನ ಆಯುಧವಾದ ಸುದರ್ಶನವೆಂಬ ಚಕ್ರವನ್ನು ಆಕಾಶದಲ್ಲಿ ರಾಹುವನ್ನು ತಿರಸ್ಕರಿಸಲೋಸುಗ ಕಳುಹಿಸುತಲಿಧಾನೆ; ಆಗ ರಾಹುವು ತೇಜಸ್ಸಿನಿಂದ ಸಹಿಸಲಶಕ್ಯವಾಗಿ ಬಾರಿಬಾರಿಗೂ ಆಕಾಶದಲ್ಲಿ ಸುತ್ತುತಲಿರುವ ಭಗವಂತನ ಆ ಚಕ್ರಾಯುಧಕ್ಕೆ ಅಭಿಮುಖವಾಗಿ ಮುಹೂರ್ತಮಾತ್ರವು ನಿಂತು ಭಯದಿಂದ ಮನಸ್ಸಿನಲ್ಲಿ ತನಿಗೆ ಸಂಹಾರವುಂಟಾಗುವದೆಂಬ ಶಂಕೆಯಿಂದ ದೂರವಾಗಿ ಹಿಂದಕ್ಕೆ ಹೋಗುತಲಿಧಾನೆ; ಆ ಸಮಯದಲ್ಲಿ ರಾಹುವಿಗೂ ಆ ಸೂರ್ಯಚಂದ್ರರಿಗೂ ಮಧ್ಯದಲ್ಲಿ ಆ ಚಕ್ರವು ನಿಂತಿರೋಣವನ್ನೆ ಗ್ರಹಣವೆಂದು ಜನರು ಹೇಳುವರು; ಆ ಚಕ್ರವು ಸೂರ್ಯ ಚಂದ್ರರಿಗೆ ಸಮಸೂತ್ರವಾಗಿ ನಿಂತಿರುವದಾದರೆ ಅರ್ಧಗ್ರಾಸವು ಪಾ

ದಗ್ರಾಸವು ಆಗುವದೆಂದು ತಿಳಿಯತಕ್ಕದ್ದು; ಆ ರಾಹುಮಂಡಲಕ್ಕಿಂತಲೂ ಹತ್ತು ಸಾವಿರ ಯೋಜನಗಳ ಕೆಳಗೆ ಕ್ರಮದಿಂದ ಸಿದ್ಧ ಚಾರಣ ವಿದ್ಯಾಧರಸ್ಥಾನಗಳಿರುವವು; ಅದಕ್ಕಿಂತಲೂ ಕೆಳಗೆ ಯಕ್ಷ ರಾಕ್ಷಸ ಪಿಶಾಚ ಭೂತ ಪ್ರೇತ ಗಣಗಳಿಗೆ ಕ್ರೀಡಾಸ್ಥಾನವಾದ ಅಂತರಿಕ್ಷವಿಹುದು; ಎಷ್ಟುಪರ್ಯಂತವು ವಾಯುವು ಅತ್ಯಂತವಾಗಿ ಸಂಚರಿಸುವನೋ ಎಷ್ಟುಪರ್ಯಂತವು ಮೇಘಗಳು ಕಾಣಲ್ಪಡುವವೋ ಅಷ್ಟುಪರ್ಯಂತವು ಅಂತರಿಕ್ಷವೆಂದು ತಿಳಿಯತಕ್ಕದ್ದು; ಕೆಲವರು ಋಷಿಗಳು ಗ್ರಹಾದಿಗಳಿಂದ ಶೂನ್ಯವಾಗಿರುವದೇ ಅಂತರಿಕ್ಷವೆಂದು ಹೇಳುವರು; ಆ ಅಂತರಿಕ್ಷಕ್ಕಿಂತಲು ನೂರುಯೋಜನಗಳ ಕೆಳಗೆ ಭೂಮಿಯು ಇರುವದು; ಈ ಭೂಮಿಗೆ ಮೇಲೆ ಎಷ್ಟುಪರ್ಯಂತವು ಹಂಸಗಳು ಹದ್ದುಗಳು ಗಿಡಗಗಳು ಗರುಡಪಕ್ಷಿಗಳು ಇವೇ ಮೊದಲಾಗುಳ್ಳ ಪ್ರಬಲ ಪಕ್ಷಿಗಳು ಸಂಚರಿಸುವವೋ ಅಷ್ಟುಪರ್ಯಂತವು ಭೂಲೋಕವೆಂದು ತಿಳಿಯತಕ್ಕದ್ದು! ಎಲೈ ಅರಸೆ, ಸೂರ್ಯನಿಗಿಂತಲೂ ಮೇಲೆ ಧ್ರುವಮಂಡಲಪರ್ಯಂತವು ಸೂರ್ಯನಿಗಿಂತಲು ಕೆಳಗೆ ಭೂಮಿಪರ್ಯಂತವೂ ಇರುವ ಸ್ಥಾನಗಳು ಭೂಮಿಯಿರುವ ರೀತಿಯು ನನ್ನಿಂದ ನಿನಗೆ ವಿಸ್ತಾರವಾಗಿ ನಿರೂಪಿಸಲ್ಪಟ್ಟಿತು; ಇತಃಪರದಲ್ಲಿ ಭೂಮಿಗಿಂತಲೂ ಕೆಳಗೆ ಏಳು ಪಾತಾಳಗಳು ಒಂದೊಂದು ಹತ್ತುಸಾವಿರ ಯೋಜನ ಉನ್ನತಗಳಾಗಿ ಬ್ರಹ್ಮಾಂಡಕಟಾಹವು ಎಷ್ಟು ವಿಸ್ತಾರವುಳ್ಳದ್ದೋ ಅಷ್ಟು ವಿಸ್ತಾರವುಳ್ಳದ್ದಾಗಿರುವವು; ಅತಲ ವಿತಲ ಸುತಲ ತಲಾತಲ ರಸಾತಲ ಮಹಾತಲ ಪಾತಾಳಗಳೆಂಬ ಈ ಏಳು ಬಿಲಸ್ವರ್ಗಗಳೆಂಬ ನಾಮಧೇಯಗಳುಳ್ಳವಾಗಿ ಸ್ವರ್ಗಕ್ಕಿಂತಲೂ ಅಧಿಕಗಳಾದ ಕಾಮಭೋಗಗಳಿಂದ ಅಮಿತವಾದ ಆನಂದದಿಂದಲೂ ಸಂಪತ್ತಿನಿಂದಲೂ ಕಾಂತಿಸಮೃದ್ಧಿಯಿಂದಲೂ ಪರಿಪೂರ್ಣಗಳಾದ ಗ್ರಹಗಳು ಉದ್ಯಾನವನಗಳು ಕ್ರೀಡಾಸ್ಥಾನಗಳು ಉಳ್ಳವಾಗಿರುವ ಈ ಸಪ್ತಪಾತಾಳಗಳಲ್ಲಿ ಗೃಹಾಧಿಪತಿಗಳಾದ ದೈತ್ಯ ದಾನವರು ಸರ್ಪಾಧಿಪತಿಗಳೂ ಸಹಾ ನಿತ್ಯದಲ್ಲೂ ಅತಿ ಸಂತುಷ್ಟರಾಗಿ ಅನುರಾಗಯುಕ್ತರಾದ ಪತ್ನೀ ಪುತ್ರರು ಬಂಧು ಮಿತ್ರ ಪರಿವಾರ ಜನರೂ ಉಳ್ಳವರಾಗಿ ಈಶ್ವರನಿಂದ ತಡೆಯಲಶಕ್ಯವಾದ ಮನೋರಥವುಳ್ಳವರಾಗಿ ಮಾಯೆಯಿಂದ ಕ್ರೀಡಿಸುತಲಿರುವರಾಗಿ ವಾಸಂಗೈಯುತಲಿಧಾರೆ! ಎಲೈ ಪರೀಕ್ಷಿದ್ರಾಯನೆ, ಈ ಸಪ್ತಪಾತಾಳಗಳಲ್ಲಿಯೂ ಮಾಯಾವಿಪ್ರಣನಾದ ಮಯನಿಂದ ನಿರ್ಮಿಸಲ್ಪಟ್ಟ ಪಟ್ಟಣಗಳು ನಾನಾಪ್ರಕಾರಗಳಾದ ರತ್ನಶ್ರೇಷ್ಠಗಳಲ್ಲಿ ಅತ್ಯುತ್ತಮಗಳಾದ ಮಣಿಗಳಿಂದ ರಚಿಸಲ್ಪಟ್ಟ ವಿಚಿತ್ರಗಳಾದ ಗೃಹಗಳಿಂದಲೂ ಪ್ರಾಕಾರಗಳಿಂದಲೂ ಪುರದ್ವಾರಗಳಿಂದಲೂ ಸಭಾಸ್ಥಾನಗಳಿಂದಲೂ ಉಪ್ಪರಿಗೆಗಳಿಂದಲೂ ಅಂಗಳಗಳು ಮೊದಲಾಗುಳ್ಳ ಸ್ಥಾನಗಳಿಂದಲೂ ಸರ್ಪಾಧಿಪತಿಗಳಿಂದಲೂ ಸ್ತ್ರೀಸಂಗದಲ್ಲಿ ಉದ್ಯುಕ್ತಗಳಾಗಿರುವ ಕಪೋತಪಕ್ಷಿಗಳಿಂದಲೂ ಗಿಣಿಗಳಿಂದಲೂ ಶಾರಿಕೆಗಳಿಂದಲೂ ನಿಬಿಡಗಳಾದ ಮಣಿಬದ್ಧ ಭೂಮಿಗಳುಳ್ಳ ಆ ಪಾತಾಳಗಳಿಗೆ ಅಧಿಪತಿಗಳಾದ ದೈತ್ಯ ದಾನವಾದಿಗಳು ಇಂಥಾ ಗೃಹಗಳಲ್ಲಿ ಅಲಂಕರಿಸಲ್ಪಟ್ಟವರಾಗಿ ಪ್ರಕಾಶಿಸುತಲಿಧಾರೆ; ಪುಷ್ಪ ಫಲಗುಚ್ಛಗಳಿಂದ ಮನೋಹರಗಳಾದ ತಳಿರುಗಳಿಂದಲೂ ಬಾಗಿರುವ ರಮಣೀಯಗಳಾದ ಕೊಂಬೆಗಳುಳ್ಳ ಸುವರ್ಣಮಯಗಳಾದ ಬಳ್ಳಿಗಳಿಂದಲೂ ಆಲಿಂಗನಂಗೈಯಲ್ಪಟ್ಟವಾಗಿರುವ ವೃಕ್ಷಗಳ ಕಾಂತಿಗಳಿಂದಲೂ ಚಕ್ರವಾಕಾದಿ ಪಕ್ಷಿಗಳ ಮಿಥುನಿಗಳೊಡನೆ ಕೂಡಿರುವ ನಾನಾಪ್ರಕಾರಗಳಾದ ಪಕ್ಷಿಗಳೊಡನೆ ಯುಕ್ತಗಳಾಗಿ ನಿರ್ಮಲಗಳಾದ ಜಲಗಳಿಂದ ಪರಿಪೂರ್ಣಗಳಾಗಿರುವ ಸರಸ್ಸುಗಳ ಕಾಂತಿಗಳಿಂದಲೂ ಮತ್ಸ್ಯ ಸಮೂಹಗಳು ಲಂಘಿಸೋಣದರಿಂದ ಕಲಕಲ್ಪಟ್ಟ ಸರೋವರ ಜಲಗಳಲ್ಲಿ ವಿಕಸಿತಗಳಾಗಿರುವ ಕಮಲಗಳು ಕನ್ನೈದಲೆ ಬಿಳೀನೈದಲೆ ಕಲ್ಹಾರಪುಷ್ಪಗಳು ಕೆಂದಾವರೆಗಳು ಇವುಗಳ ವನಗಳಲ್ಲಿ ವಾಸಂಗೈಯುತಲಿರುವ ಪಕ್ಷಿಗಳ ವಿಚ್ಛೇದವಿಲ್ಲದಿರುವ ಕ್ರೀಡೆಯಿಂದ ವ್ಯಾಪ್ತಗಳಾಗಿ ಮನೋಹರಗಳಾಗಿ ಇಂದ್ರಿಯ ಮನಸ್ಸುಗಳಿಗೆ ಆನಂದಕರಗಳಾಗಿ ನಾನಾಪ್ರಕಾರಗಳಾಗಿರುವ ಧ್ವನಿಮೊದಲಾದ ವಿಲಾಸಗಳಿಂದಲೂ ಸಕಲೇಂದ್ರಿಯೋತ್ಸವಗಳಿಂದಲೂ ಕೂಡಿ ಸ್ವರ್ಗಲೋಕ ಸಂಪತ್ತನ್ನತಿಕ್ರಮಿಸಿರುವ ಇಂಥಾ ಉದ್ಯಾನವನಗಳು ಬಹುತರವಾಗಿರುತಲಿವೆ; ಆ ದೈತ್ಯಾದಿಗಳು ಆ ಪಾತಾಳಗಳಲ್ಲಿ ಸೂರ್ಯ ಚಂದ್ರಾದಿಗಳು ಇಲ್ಲದಿರುವದ್ದರಿಂದ ಅಹೋರಾತ್ರಿ ಕಾಲವಿಭಾಗಗಳಿಂದ ಉಂಟಾಗುವ ಭಯವಿಲ್ಲದಿರುವ ಮಹಾತ್ಮರಾದ ಸರ್ಪಾಧಿಪತಿಗಳ ಫಣಾಮಂಡಲಗಳಲ್ಲಿರುವ ಅನರ್ಘ್ಯ ರತ್ನಗಳು ಸಮಸ್ತವಾದ ಅಂಧಕಾರವನ್ನು ಪರಿಹರಿಸುತಲಿವೆ; ಈ ಪಾತಾಳಗಳಲ್ಲಿ ವಾಸಂಗೈಯುತಲಿರುವ ಪುರುಷರು ದಿವ್ಯೌಷಧಿ ರಸಗಳಿಂದ

ಅಮೃತವನ್ನು ಭುಂಜಿಸುವವರೂ ಅವನ್ನೇ ಪಾನಂಗೈಯುವವರೂ ಆ ಅಮೃತಾದಿಗಳಿಂದಲೇ ಸ್ನಾನಂಗೈಯುವವರೂ ಆದ್ದರಿಂದ ಆ ಪುರುಷರಿಗೆ ರೋಗಗಳು ಮನೋವ್ಯಥೆಗಳು ಶರೀರಗಳಲ್ಲಿ ವಳಗಳು ನರೆ ವೃದ್ಧತ್ವವು ದೇಹದಲ್ಲಿ ವಿವರ್ಣತ್ವವು ದುರ್ಗಂಧವು ಬೆವರು ಶ್ರಮೆಯು ಉತ್ಸಾಹರಹಿತತ್ವವು ಇವೇ ಮೊದಲಾಗುಳ್ಳ ವಯೋಜನ್ಯಗಳಾದ ದುರ್ದಶೆಗಳುಂಟಾಗಲಾರವು; ಭಗವಂತನ ಯಾವ ಚಕ್ರಾಯುಧದ ತೇಜಸ್ಸು ಪಾತಾಳದಲ್ಲಿ ಪ್ರವೇಶಂಗೈಯಲು ಅದರ ಭಯದಿಂದ ತಕ್ಷಣದಲ್ಲೇ ಅಸುರ ಸ್ತ್ರೀಯರಿಂದ ಧರಿಸಲ್ಪಟ್ಟ ಗರ್ಭಗಳಿಗೆ ನಾಲ್ಕುತಿಂಗಳಗಿಂತಲೂ ಒಳಗಾದರೆ ಸ್ರಾವವುಂಟಾಗುವದು; ಅದಕ್ಕಿಂತಲೂ ಅಧಿಕವಾದರೆ ಪತನವೂ ಅಂತವೂ ಉಂಟಾಗುವದು; ಅಂಥಾ ಭಗವಂತನ ತೇಜೋರೂಪವಾದ ಒಂದು ಚಕ್ರಾಯುಧವನ್ನು ಹೊರತು ನಿರಂತರವೂ ಶುಭಸ್ವರೂಪರಾದ ಆ ಪಾತಾಳಲೋಕವಾಸಿಗಳಿಗೆ ಮತ್ತಾವದರಿಂದಲೂ ಮೃತ್ಯುಭಯವುಂಟಾಗಲಾರದು! ಅತಲಲೋಕದಲ್ಲಿ ಯಾವ ಬಲಾಸುರನಿಂದ ನಿರ್ಮಿಸಲ್ಪಟ್ಟ ತೊಂಭತ್ತಾರು ಮಾಯೆಗಳಲ್ಲಿ ಕೆಲವು ಮಾಯೆಗಳನ್ನು ಈ ಲೋಕದಲ್ಲಿ ಮಾಯಾವಿಗಳಾದ ಕೆಲವರು ಅಸುರರು ಈಗ್ಯೂ ಧರಿಸುತಲಿಧಾರೆ; ಆಕಳಿಸುತಲಿರುವ ಯಾವ ಬಲಾಸುರನ ಮುಖದಿಂದ ಸ್ವವರ್ಣಸ್ಥರಾದ ಪುರುಷರಲ್ಲೇ ರಮಿಸುವ ಸ್ವೈರಿಣೀರೆಂಬ ಸ್ತ್ರೀಯರು ಇತರ ವರ್ಣಸ್ಥರಾದ ಪುರುಷರಲ್ಲಿ ರಮಿಸುವ ಕಾಮಿನಿಯರೆಂಬ ಸ್ತ್ರೀಯರು ಅವರಿಗಿಂತಲೂ ಅತಿಶಯದಿಂದ ಸಕಲ ಪುರುಷರಲ್ಲಿಯೂ ಆಸಕ್ತಿಯುಳ್ಳವರಾಗಿ ರಮಿಸುವ ಪುಂಶ್ಚಲೀಯರೆಂಬ ಸ್ತ್ರೀಯರು ಈರೀತಿ ಮೂರುಪ್ರಕಾರವಾಗಿರುವ ಸ್ತ್ರೀಯರ ಸಮೂಹಗಳು ಆವಿರ್ಭವಿಸಿದವೋ ಅಂಥಾ ಪ್ರಭಾವವುಳ್ಳವನಾಗಿ ಮಯನೆಂಬ ಅಸುರನಿಗೆ ಪುತ್ರನಾಗಿರುವ ಆ ಬಲನೆಂಬ ಅಸುರಶ್ರೇಷ್ಠನು ವಾಸಂಗೈಯುತಲಿಧಾನೆ; ಆ ಬಲಾಸುರನಿಂದ ನಿರ್ಮಿತರಾದ ಆ ಸ್ತ್ರೀಯರು ಆ ಅತಲಲೋಕವನ್ನು ಪ್ರವೇಶಿಸಿದಂಥಾ ಪುರುಷನಿಗೆ ಹಾಟಕವೆಂಬ ದಿವ್ಯರಸವನ್ನು ಪಾನಂಗೈಸಿ ಆ ದಿವ್ಯರಸ ಪಾನದಿಂದ ಆ ಪುರುಷನನ್ನು ತಮ್ಮೊಡನೆ ರಮಿಸುವದರಲ್ಲಿ ಸಮರ್ಥನಂಗೈದು ಅನಂತರದಲ್ಲಿ ಉತ್ಕೃಷ್ಟಗಳಾದ ನಿಜವಿಲಾಸಗಳಿಂದ ರಮಣೀಯವಾದ ಸವಿನೋಟದಿಂದ ಅನುರಾಗಾದಿಗಳಿಂದ ಮನಸ್ಸುಬಂದಂತೆ ಆ ಪುರುಷನನ್ನು ರಮಿಸುವಂತೆ ಮಾಡುತಲಿಧಾರೆ; ಹಾಟಕವೆಂಬ ದಿವ್ಯರಸವನ್ನು ಪಾನಂಗೈದ ಪುರುಷನು ತನ್ನನ್ನು ಹತ್ತುಸಾವಿರ ಮಹಾಗಜಗಳ ಬಲವುಳ್ಳವನನ್ನಾಗಿ ತಿಳಿದು ನಾನೇ ಈಶ್ವರನು ನಾನೇ ಸಿದ್ಧನೆಂದು ಅತ್ಯಂತ ಮತ್ತನಂತೆ ಈರೀತಿ ಪ್ರಶಂಸೆಯನ್ನು ಮಾಡುತಲಿಧಾನೆ; ಅತಲಕ್ಕಿಂತಲೂ ಕೆಳಗಿರುವ ವಿತಲವೆಂಬ ಪಾತಾಳಲೋಕದಲ್ಲಿ ಭಗವಂತನಾದ ಹಾಟಕೇಶ್ವರನೆಂಬ ರುದ್ರಮೂರ್ತಿಯು ತನ್ನ ಸೇನಾಪತಿಗಳಾದ ಭೂತಗಣಗಳಿಂದ ಸೇವಿಸಲ್ಪಡುತ ಪ್ರಜಾಸೃಷ್ಟಿಯನ್ನು ವೃದ್ಧಿಹೊಂದಿಸಲೋಸುಗ ಪಾರ್ವತೀದೇವಿಯೊಡನೆ ಏಕಾಂತದಲ್ಲಿ ಕೂಡಿ ರಮಿಸುತಲಿಧಾನೆ; ಆ ಪಾರ್ವತಿ ಪರಮೇಶ್ವರರ ವೀರ್ಯದಿಂದ ಹುಟ್ಟಿದ ಒಂದು ಹಾಟಕೀಯೆಂಬ ನದೀಶ್ರೇಷ್ಠವು ಅಲ್ಲಿ ಪ್ರವಹಿಸುತಲಿದೆ; ಆ ನದಿಯಲ್ಲಿ ಅಗ್ನಿಯು ವಾಯುವಿನಿಂದ ವೃದ್ಧಿಹೊಂದಿಸಲ್ಪಟ್ಟವನಾಗಿ ತನ್ನ ಇಂದ್ರಿಯಶಕ್ತಿಯಿಂದ ಆ ರುದ್ರವೀರ್ಯವನ್ನು ಪಾನಂಗೈಯುತಲಿಧಾನೆ; ಆ ಅಗ್ನಿಯಿಂದ ಉಗಳಲ್ಪಟ್ಟ ರುದ್ರವೀರ್ಯವೇ ಹಾಟಕವೆಂಬ ಸುವರ್ಣವಾಗುತಲಿದೆ; ಆ ಸುವರ್ಣದಿಂದ ರಚಿಸಲ್ಪಟ್ಟ ಭೂಷಣಗಳನ್ನು ಅಲ್ಲಿರುವ ಅಸರೇಂದ್ರರು ತಮ್ಮ ಅಂತಃಪುರದ ಸ್ತ್ರೀಯರೊಡನೆ ಧರಿಸುತಲಿಧಾರೆ; ವಿತಲಕ್ಕಿಂತಲು ಕೆಳಗಿರುವ ಸುತಲವೆಂಬ ಲೋಕದಲ್ಲಿ ಉತ್ಕೃಷ್ಟವಾದ ಕೀರ್ತಿಯುಳ್ಳವನಾಗಿ ಪುಣ್ಯಾತ್ಮರಿಂದ ಶ್ಲಾಘಿಸಲು ಯೋಗ್ಯನಾಗಿ ವಿರೋಚನನ ಪುತ್ರನಾಗಿರುವ ಬಲಿಯೆಂಬ ದೈತ್ಯಾಧಿಪತಿಯು ಪೂರ್ವದಲ್ಲಿ ಇಂದ್ರನಿಗೆ ಪ್ರಿಯವನ್ನು ಮಾಡಲೋಸುಗ ಅದಿತೀದೇವಿಯ ಗರ್ಭದಲ್ಲಿ ಜನಿಸಿ ಬ್ರಹ್ಮಚಾರಿವೇಷಯುಕ್ತವಾದ ವಾಮನರೂಪದಿಂದ ದೇಹವನ್ನು ಧರಿಸಿರುವ ಭಗವಂತನಾದ ವಿಷ್ಣುವಿನಿಂದ ಯಾಚನಾಮುಖದಿಂದ ಅಪಹರಿಸಲ್ಪಟ್ಟ ತ್ರೈಲೋಕ್ಯ ಸಾಮ್ರಾಜ್ಯವುಳ್ಳವನಾಗಿ ಪುನಹ ಆ ಭಗವಂತನ ದಯದಿಂದಲೇ ಇಂದ್ರಾದಿ ದೇವತೆಗಳಿಗೂ ದುರ್ಲಭವಾದ ಅತ್ಯುನ್ನತವಾದ ಸಂಪತ್ತಿನಿಂದ ಪರಿಪೂರ್ಣವಾದ ಸುತಲ ಲೋಕದಲಿ ಪ್ರವೇಶಂಗೈಯಲ್ಪಟ್ಟವನಾಗಿ ಅಲ್ಲೂ ಲೋಕಾರಾಧ್ಯನಾದ ಶ್ರೀಹರಿಯನ್ನು ಸ್ವಧರ್ಮದಿಂದ ಪೂಜಿಸುತ ಬಂದರಿಂದಲೂ ಭಯಪಡದೆ ಈಗಲೂ ಸುಖದಿಂದ ವಾಸಗೈಯುತಲಿಧಾನೆ; ಬಲಿಚಕ್ರವರ್ತಿಯಿಂದ ಮಾಡಲ್ಪಟ್ಟ ಭೂದಾನಕ್ಕೆ ಸುತಲ ರಾಜ್ಯಾಧಿಪತ್ಯವೇ ಫಲವೆಂದು ತಿಳಿಯುತಲಿರುವ

ಕೆಲವರಭಿಮತವನ್ನು ನಿರಾಕರಿಸಿದನು ; ಬಲಿಯಿಂದ ಮಾಡಲ್ಪಟ್ಟ ಭೂದಾನಕ್ಕೆ ಈ ಸುತಲ ರಾಜ್ಯಾಧಿಪತ್ಯವು ಫಲವಲ್ಲ ; ಸಕಲ ಜೀವಸಮೂಹಗಳಿಗೂ ನಿಯಾಮಕನಾಗಿ ಆತ್ಮಾರಾಮನಾಗಿ ಭಗವಂತನಾಗಿ ಪರಮಾತ್ಮನಾಗಿ ಲೋಕಗುರುವಾಗಿ ಸತ್ಪಾತ್ರನಾದ ಶ್ರೀ ವಾಸುದೇವನಲ್ಲಿ ಉತ್ಕೃಷ್ಟವಾದ ಶ್ರದ್ಧೆಯಿಂದಲೂ ಅತ್ಯಂತಾದರದೊಡನೆ ಯುಕ್ತವಾದ ಮನಸ್ಸಿನಿಂದ ಸಮರ್ಪಿಸಲ್ಪಟ್ಟದ್ದಾಗಿ ಪ್ರಸಿದ್ಧವಾಗಿ ಸಾಕ್ಷಾನ್ಮುಕ್ತಿಗೆ ಮುಖ್ಯಸಾಧನವಾಗಿರುವ ಇಂಥಾ ಭೂದಾನಕ್ಕೆ ಸ್ವಲ್ಪವಾದ ಸುತಲಸಾಮ್ರಾಜ್ಯವು ಎಂತು ಫಲವಾದೀತು ; ದಾನಪಾತ್ರನಾದ ಅಂಥಾ ಶ್ರೀಹರಿಯು ಶೀಕ್ಷಿಸೋಣ ಬೀಳೋಣ ಎಡವೋಣ ಇತ್ಯಾದಿ ಸಮಯದಲ್ಲಿ ಪುರುಷನು ಪರವಶನಾಗಿದ್ದರೂ ಒಂದುಬಾರಿ ಯಾವ ಶ್ರೀಹರಿಯ ನಾಮಸಂಕೀರ್ತನಂಗೈಯುತಲಿರುವವನಾಗಿ ಯಾವ ಕರ್ಮಬಂಧವನ್ನು ಪರಿಹರಿಸಿಕೊಳ್ಳಲೋಸುಗ ಮೋಕ್ಷಾರ್ಥಿಗಳು ಈ ಲೋಕದಲ್ಲಿ ಯೋಗಾದಿಗಳಿಂದ ನಾನಾವಿಧಗಳಾದ ಕಾಯಕ್ಲೇಶಗಳನ್ನನುಭವಿಸುತಲಿರ್ಧಾರೋ ಅಂಥಾ ಕರ್ಮಬಂಧವನ್ನು ಶೀಘ್ರವಾಗಿ ಪರಿಹರಿಸಿಕೊಳ್ಳುವ ಭಗವದ್ಭಕ್ತರಿಗೂ ಜ್ಞಾನಿಗಳಿಗೂ ಸಕಲ ಜನರಿಗೂ ಯಥಾಯೋಗ್ಯವಾಗಿ ಆತ್ಮಸ್ವರೂಪವನ್ನು ತಿಳಿಸುವನಾಗಿ ಪರಮಾತ್ಮಸ್ವರೂಪನಾಗಿರುವ ಶ್ರೀಹರಿಯಲ್ಲಿ ಸಮರ್ಪಿಸಲ್ಪಟ್ಟ ಭೂದಾನಕ್ಕೆ ಸಕಲ ಸಾಮ್ರಾಜ್ಯವು ಫಲವಾಗಲಾರದು ; ಬಲಿಯಿಂದ ಪಡೆಯಲ್ಪಟ್ಟ ಸುತಲಸಾಮ್ರಾಜ್ಯವು ಭಗವಂತನ ದಯೆಗೆ ಫಲವಲ್ಲ ; ಭಕ್ತನಾದ ಬಲಿಗೆ ಅದು ವಿಘ್ನರೂಪವೇ ಆಗುವದು ; ಯಾವಕಾರಣ ಶ್ರೀಹರಿಯು ಈಶ್ವರನಾದ ತನ್ನ ಸ್ಮರಣೆಗೆ ಪ್ರತಿಬಂಧಕವಾಗಿ ಮಾಯಾಕಲ್ಪಿತವಾಗಿರುವ ಇಂಥಾ ಭೋಗೈಶ್ವರ್ಯವನ್ನೇ ಕೊಟ್ಟನೋ ಅದುಕಾರಣ ಭಗವಂತನು ಈ ಬಲೀಂದ್ರನನ್ನು ಅನುಗ್ರಹಿಸಲಿಲ್ಲ ; ಬಲೀಂದ್ರನ ಉಪಶಾಂತಿಯು ಭಕ್ತಿಯು ಎಂಥಾದ್ದೆಂದರೆ ; ಪೂರ್ವದಲ್ಲಿ ಆ ಬಲೀಂದ್ರನು ತನ್ನನ್ನು ಜಯಿಸುವದಕ್ಕೆ ಮತ್ತೊಂದು ಉಪಾಯವನ್ನರಿಯದೆ ಶ್ರೀಹರಿಯಿಂದ ಯಾಚನೆಯೆಂಬ ಕಪಟದಿಂದ ತನ್ನ ಒಂದು ಶರೀರವನ್ನು ಹೊರ್ತು ಆಕ್ರಮಿಸಲ್ಪಟ್ಟ ತ್ರೈಲೋಕ್ಯಸಾಮ್ರಾಜ್ಯವುಳ್ಳವನಾಗಿ ವರುಣಪಾಶಗಳಿಂದ ಕಟ್ಟಲ್ಪಟ್ಟವನಾಗಿ ಒಂದು ಪರ್ವತದ ಕಮರಿಯಲ್ಲಿ ಕಡಹಲ್ಪಟ್ಟವನಾಗಿ ಈ ವಾಕ್ಯವನ್ನು ನುಡಿದನು ! ಯಾವಕಾರಣ ಇಂದ್ರನು ಪ್ರತ್ಯಕ್ಷವಾಗಿ ತನ್ನ ಇಷ್ಟಾರ್ಥವನ್ನು ಯಾಚಿಸೋಣವನ್ನು ಬಿಟ್ಟು ಆ ಶ್ರೀಹರಿಯ ಮುಖದಿಂದ ಅಯೋಗ್ಯನಾದ ನನ್ನನ್ನು ಕುರಿತು ಅನಂತವಾದ ವಯಸ್ಸುಳ್ಳ ಕಾಲಕ್ಕೆ ಒಂದು ಅವಯವವಾದ ಮನ್ವಂತರದಿಂದ ವ್ಯತ್ಯಸ್ತವಾಗಿ ಮಾಡಲ್ಪಡುವವಾದ್ದರಿಂದ ಸ್ವಲ್ಪವಾಗಿ ಅತಿ ತುಚ್ಛವಾಗಿರುವ ತ್ರೈಲೋಕ್ಯಸಾಮ್ರಾಜ್ಯವನ್ನೇ ತನಿಗೋಸುಗ ಯಾಚಿಸಿದಂಥಾವನಾದನೇ ಹೊರ್ತು ಆ ಶ್ರೀಹರಿಯು ಪ್ರಸಾದದಿಂದ ಭಗವಂತನಲ್ಲಿ ಚ್ಯುತಿಯಿಲ್ಲದ ಭೃತ್ಯಭಾವವನ್ನು ಯಾಚಿಸಲಿಲ್ಲ; ಅದುಕಾರಣ ಆ ಇಂದ್ರನು ಶಾಸ್ತ್ರಜ್ಞನಾದರೂ ಪುರುಷಾರ್ಥಸ್ವರೂಪವನ್ನು ತಿಳಿಯುವದರಲ್ಲಿ ನಿಪುಣನಲ್ಲ; ಆ ಇಂದ್ರನಿಗೆ ಅತ್ಯಂತ ಸಹಾಯನಾದ ಬೃಹಸ್ಪತಿಯೂ ಕೂಡ ಮಂತ್ರಾಲೋಚನೆಗೋಸ್ಕರ ಅವನಿಂದ ಅಪೇಕ್ಷಿಸಲ್ಪಟ್ಟವನಾದರೂ ಪರಮಪುರುಷಾರ್ಥವನ್ನು ತಿಳಿಯುವದರಲ್ಲಿ ಚತುರನಲ್ಲ ; ಪ್ರಹ್ಲಾದನೊಬ್ಬನೆ ಪುರುಷಾರ್ಥಸ್ವರೂಪವನ್ನು ತಿಳಿದಂಥಾವನು ; ತನ್ನ ತಂದೆಯಾದ ಹಿರಣ್ಯಕಶಿಪುವು ಮುಕ್ತಿಯನ್ನು ಪಡದವನಾಗುತಿರಲು ಆಗ ನನಿಗೆ ಪಿತಾಮಹನಾದ ಪ್ರಹ್ಲಾದನು ಬಂದರಿಂದಲೂ ಭಯವಿಲ್ಲದ್ದಾಗಿರುವ ಆ ತಂದೆಯ ಸಾಮ್ರಾಜ್ಯವನ್ನು ಭಗವಂತನು ತಾನೇ ಕೊಡುವವನಾದಾಗ್ಯೂ ಆ ಸಾಮ್ರಾಜ್ಯವನ್ನು ಭಗವದ್ವ್ಯತಿರಿಕ್ತವಾದ್ದರಿಂದ ತುಚ್ಛವೆಂದು ಪರಿಗ್ರಹಿಸದೆ ಆ ಭಗವಂತನ ಧಾಸ್ಯವನ್ನೇ ಅಪೇಕ್ಷಿಸಿದನು ; ಅದುಕಾರಣ ಉಪಶಾಂತಿಯನ್ನೈದಿರುವ ರಾಗದ್ವೇಷಾದಿಗಳುಳ್ಳವನಾಗಿ ಭಗವದನುಗ್ರಹರಹಿತನಾಗಿರುವ ನನ್ನಂಥಾ ಪುರುಷನು ಆ ಪ್ರಹ್ಲಾದನ ಮಾರ್ಗವನ್ನನುಸರಿಸಿ ನಡೆಯಲೋಸುಗ ಇಚ್ಛೈಸುವನೆಂದು ಬಲೀಂದ್ರನು ನುಡಿದನು ! ಎಲೈ ಅರಸೆ, ಆ ಬಲಿಚಕ್ರವರ್ತಿಯ ಚರಿತ್ರೆಯನ್ನು ನಿನಗೆ ಅಷ್ಟಮಸ್ಕಂಧದಲ್ಲಿ ನಿರೂಪಿಸುತ್ತೇನೆ ; ಭಗವಂತನಾದ ಶ್ರೀ ನಾರಾಯಣನು ತಾನು ಸಕಲ ಜಗತ್ತಿಗೆ ಗುರುವಾದಾಗ್ಯೂ ಸ್ವಭಕ್ತರಲ್ಲಿ ದಯಾಯುಕ್ತವಾದ ಮನಸ್ಸುಳ್ಳವನಾದಕಾರಣ ಹಸ್ತದಿಂದ ಗದೆಯನ್ನು ಪಿಡಿದು ಆ ಬಲೀಂದ್ರನ ಗೃಹದ್ವಾರದಲ್ಲಿರುವ ಆ ನಾರಾಯಣಮೂರ್ತಿಯು ದಿಗ್ವಿಜಯಕಾಲದಲ್ಲಿ ಆ ಬಲಿಯ ಗೃಹದ್ವಾರಕ್ಕೆ ಬಂದ ರಾವಣನನ್ನು ಪಾದಾಂಗುಷ್ಠಪ್ರಹಾರದಿಂದ ಹತ್ತುಸಾವಿರ ಯೋಜನಗಳಿಗಿಂತಲೂ ಆಚೆಗೆ ದೂರದಲ್ಲಿ ಎಸದನು; ಆ ಸುತಲಕ್ಕಿಂತಲು ಕೆಳಗಿರುವ ತಲಾ

ತಲಲೋಕವೆಂಬ ಲೋಕದಲ್ಲಿ ದಾನವೇಂದ್ರನಾದ ತ್ರಿಪುರಾಧಿಪತಿಯಾದ ಮಯಾಸುರನು ಭಗವಂತನಾದ ಪರಮೇಶ್ವರನಿಂದ ಸಕಲಲೋಕ ಕ್ಷೇಮಕ್ಕೋಸ್ಕರ ದಹಿಸಲ್ಪಟ್ಟ ತನ್ನ ಮೂರು ಪಟ್ಟಣಗಳುಳ್ಳವನಾಗಿ ಪುನಹಾ ಈಶ್ವರಪ್ರಸಾದದಿಂದಲೇ ತಲಾತಲ ಲೋಕಾಧಿಪತ್ಯವನ್ನು ಪಡೆದು ಹರಿಯ ಚಕ್ರಾಯುಧ ಭಯವಿಲ್ಲದಂತೆ ಪರಮೇಶ್ವರನಿಂದ ರಕ್ಷಿಸಲ್ಪಟ್ಟವನಾಗಿ ಪೂಜ್ಯನಾಗಿ ಧಾನೆ; ಅದಕ್ಕಿಂತಲೂ ಕೆಳಗೆ ಮಹಾತಲವೆಂಬ ಲೋಕದಲ್ಲಿ ಅನೇಕ ಶಿರಸ್ಸುಗಳುಳ್ಳ ಮಹಾ ಕ್ರೋಧಯುಕ್ತಗಳಾದ ಸರ್ಪಗಳ ಸಮೂಹಗಳು ವಾಸಂಗೈಯುತಲಿವೆ; ಮಹಾ ಶರೀರಗಳುಳ್ಳ ಕುಹಕ ತಕ್ಷಕ ಕಾಳೀಯ ಸುಷೇಣ ಪ್ರಭೃತಿಗಳಾದ ಸರ್ಪಜಾತಿಗಳು ಶ್ರೀ ವಿಷ್ಣುವಾಹನವಾದ ಗರುಡನ ದೆಶೆಯಿಂದ ನಿರಂತರವೂ ಭಯಪಡುತಲಿರುವವರಾದಾಗ್ಯೂ ತಮ್ಮ ಪತ್ನೀ ಪುತ್ರ ಮಿತ್ರ ಬಂಧುಗಳೊಡನೆ ಕೂಡಿ ಅತ್ಯಂತ ಮತ್ತರಾಗಿ ರಮಿಸುತಲಿಧಾರೆ; ಅದಕ್ಕಿಂತಲೂ ಕೆಳಗೆ ರಸಾತಳವೆಂಬ ಲೋಕದಲ್ಲಿ ಶತೃಗಳಾದ ಸ್ವಭಾವದಿಂದಲೇ ಮಹಾ ತೇಜಸ್ವಿಗಳಾದ ಮಹಾ ಸಾಹಸಿಕರಾದ ದೈತ್ಯರು ದಾನವರು ಫಣಿಗಳೆಂಬ ನಾಮಧೇಯವುಳ್ಳ ನಿವಾತಕವಚರು ಹಿರಣ್ಯಪುರವಾಸಿಗಳಾದ ಕಾಲಕೇಯರು ಇತ್ಯಾದಿ ದೈತ್ಯ ದಾನವಜಾತಿ ವಿಶೇಷೋತ್ಪನ್ನರೂ ಸಕಲ ಲೋಕಗಳಲ್ಲಿಯೂ ಪ್ರಖ್ಯಾತವಾದ ಪ್ರಭಾವವುಳ್ಳ ಭಗವಂತನ ಚಕ್ರಾಯುಧದಿಂದಲೆ ಪರಿಹರಿಸಲ್ಪಟ್ಟ ವೀರ್ಯಮದವುಳ್ಳವರಾಗಿ ಸರ್ಪಗಳಂತೆ ಭಯದಿಂದ ವಾಸಂಗೈಯುತಲಿಧಾರೆ; ಆ ದೈತ್ಯ ದಾನವಾದಿಗಳು ಇಂದ್ರದೂತಿಯಾದ ಸರಮೇ ಎಂಬ ಸ್ತ್ರೀಶುನಕದಿಂದ ಪ್ರಯೋಗಿಸಲ್ಪಟ್ಟ ಮಂತ್ರರೂಪಗಳಾದ ವಾಕ್ಯಗಳನ್ನು ಕೇಳಿ ಇಂದ್ರನದೆಶೆಯಿಂದ ಭಯಪಡುತಲಿಧಾರೆ; ಅದಕ್ಕಿಂತಲು ಕೆಳಗಿರುವ ಪಾತಾಳಲೋಕದಲ್ಲಿ ಆ ನಾಗಲೋಕಕ್ಕೆ ಅಧಿಪತಿಗಳಾದ ವಾಸುಕಿ ಶಂಖ ಗುಳಿಕ ಮಹಾಶಂಖ ಶ್ವೇತ ಧನಂಜಯ ಧೃತರಾಷ್ಟ್ರ ಶಂಖಚೂಡ ಕಂಬಳಾಶ್ವ ದೇವದತ್ತ ಪ್ರಭೃತಿಗಳಾದ ನಾಗಾಧಿಪತಿಗಳು ಅತಿ ವಿಶಾಲಗಳಾದ ಹೆಡೆಗಳುಳ್ಳವರಾಗಿ ಮಹಾ ಕ್ರೋಧಯುಕ್ತರಾಗಿ ವಾಸಂಗೈಯುತಲಿಧಾರೆ; ಐದು ಏಳು ಹತ್ತು ನೂರು ಸಾವಿರವೆಂಬ ಸಂಖ್ಯೆಯೊಡನೆ ಯುಕ್ತಗಳಾದ ಶಿರಸ್ಸುಗಳುಳ್ಳ ಆ ನಾಗಾಧಿಪತಿಗಳ ಫಣಾಮಂಡಲಗಳಲ್ಲಿ ಉತ್ಪತ್ತಿ ಸಿದ್ಧಗಳಾಗಿ ಅತ್ಯಂತ ಪ್ರಕಾಶಿಸುತಲಿರುವ ಮಹಾರತ್ನಗಳು ತಮ್ಮ ಕಾಂತಿಗಳಿಂದ ಆ ಪಾತಾಳಲೋಕದಲ್ಲಿರುವ ಅಂಧಕಾರಸಮೂಹವನ್ನು ಅತ್ಯಂತವಾಗಿ ಪರಿಹರಿಸುತಲಿವೆ."

೨೫ನೇ ಅಧ್ಯಾಯ.

ಪ್ರಳಯಕಾಲದಲ್ಲಿ ಆದಿಶೇಷನಿಂದ ರುದ್ರೋತ್ಪತ್ತಿಯು.

"ಎಲೈ ಪರೀಕ್ಷಿದ್ರಾಯನೇ, ಪಾತಾಳಕ್ಕಿಂತಲೂ ಮುವ್ವತ್ತುಸಾವಿರ ಯೋಜನಗಳ ಕೆಳಗೆ ಪಾಂಚರಾತ್ರಾದಿ ಆಗಮನಿಷ್ಠರಾದ ಜ್ಞಾನಿಗಳು ಚತುರ್ವ್ಯೂಹಮೂರ್ತಿಗಳ ಉಪಾಸನಾಕ್ರಮದಲ್ಲಿ ಅಹಂಕಾರಕ್ಕೆ ಅಭಿಮಾನಿ ದೇವತೆಯಾದ್ದರಿಂದ ನಾನೆಂಬ ಅಭಿಮಾನವೇ ಚಿನ್ಹೆಯಾಗುಳ್ಳ ಯಾವ ಆದಿಶೇಷನನ್ನು ಅಹಂಕಾರದಲ್ಲಿ ತಾನು ಅಧಿದೇವತೆಯಾಗಿದ್ದುಕೊಂಡು ದೃಶ್ಯಗಳಾದ ದೇಹೇಂದ್ರಿಯಾದಿಗಳಿಗೂ ದ್ರಷ್ಟ್ರುವಾದ ಜೀವನಿಗೂ ಪರಸ್ಪರ ಐಕ್ಯವನ್ನುಂಟು ಮಾಡುವನಾದ್ದರಿಂದ ಸಂಕರ್ಷಣನೆಂದು ಹೇಳುವರೋ ಭಗವಂತನಾದ ತಾಮಸಮೂರ್ತಿಯಾದ ಅಂಥಾ ಆದಿಶೇಷನು ವಾಸಂಗೈಯುತಲಿಧಾನೆ; ಆ ಆದಿಶೇಷನ ಪ್ರಭಾವವು ಎಂಥಾದ್ದೆಂದರೆ: ಸಹಸ್ರಶಿರಸ್ಸುಗಳುಳ್ಳ ಭಗವಂತನಾದ ಯಾವ ಅನಂತಮೂರ್ತಿಯ ಒಂದು ಶಿರಸ್ಸಿನಲ್ಲಿ ಧರಿಸಲ್ಪಡುತಲಿರುವ ಈ ಅಖಂಡಲ ಭೂಮಂಡಲವು ಬಿಳೀ ಸಾಸುವೆಯಂತೆ ಸೂಕ್ಷ್ಮವಾಗಿ ಕಾಣಲ್ಪಡುತಲಿಧೆಯೋ ಆ ಪ್ರಳಯಕಾಲದಲ್ಲಿ ಈ ಪ್ರಪಂಚವನ್ನು ಸಂಹರಿಸಲಿಚ್ಛೈಸುತಲಿರುವ ಯಾವ ಅನಂತಮೂರ್ತಿಯ ಕೋಪದಿಂದ ವಕ್ರಗಳಾಗಿ ಮಾಡಲ್ಪಟ್ಟ ಅತ್ಯಂತ ಹಾರುತಲಿರುವ ಹುಬ್ಬುಗಳ ಮಧ್ಯಪ್ರದೇಶದಿಂದ ಹನ್ನೊಂದು ಮೂರ್ತಿಗಳುಳ್ಳ ತ್ರಿನೇತ್ರನಾದ ತ್ರಿಶೂಲಧಾರಿಯಾದ ಸಾಂಕರ್ಷಣೋಯೆಂಬ ರುದ್ರನು ಆವಿರ್ಭವಿಸಿದನೋ ಸರ್ಪಾಧಿಪತಿಗಳು ಭಗವದ್ಭಕ್ತರಾದ ಮುನಿಗಳೊಡನೆ ದೃಢವಾದ ಭಕ್ತಿ

ಯೋಗದಿಂದ ನಮಸ್ಕರಿಸುತಲಿರುವವರಾಗಿ ಯಾವ ಅನಂತಮೂರ್ತಿಯ ಪಾದಯುಗ್ಮದಲ್ಲಿ ರಕ್ತವರ್ಣಗಳಾಗಿ ಅತಿ ಸ್ಫುಟಗಳಾಗಿರುವ ನಖಗಳೆಂಬ ಮಾಣಿಕ್ಯಗಳ ಸಮೂಹ ಮಂಡಲಗಳಲ್ಲಿ ಅತ್ಯಂತ ಪ್ರಕಾಶಿಸುತಲಿರುವ ಕರ್ಣಕುಂಡಲಗಳ ಕಾಂತಿಯಿಂದ ಅಲಂಕರಿಸಲ್ಪಟ್ಟ ಕಪೋಲಪ್ರದೇಶಗಳುಳ್ಳ ಅತಿ ಮನೋಹರಗಳಾದ ತಮ್ಮ ಮುಖಗಳನ್ನು ಸಂತುಷ್ಟಚಿತ್ತರಾಗಿ ನೋಡುತಲಿಧಾರೆಯೋ ನಾಗರಾಜಪುತ್ರಿಯರು ತಮಗೆ ಇಷ್ಟಾರ್ಥಗಳನ್ನಪೇಕ್ಷಿಸುವರಾಗಿ ಮನೋಹರಗಳಾದ ಅರಳುಬಂದಿಗಳಿಂದ ಪ್ರಕಾಶಿಸುತ ದೀರ್ಘಗಳಾದ ಅತಿ ಶುಭ್ರಗಳಾದ ಸುಂದರಗಳಾದ ರಮಣೀಯ್ಯಗಳಾದ ಯಾವ ಅನಂತಮೂರ್ತಿಯ ಭುಜಗಳೆಂಬ ಸ್ವರ್ಣಸ್ತಂಭಗಳಲ್ಲಿ ಅಗರು ಶ್ರೀಗಂಧ ಕುಂಕುಮದ್ರವ್ಯಗಳಿಂದ ಅನುಲೇಪನಗೈಯುತ ಆ ಭುಜಗಳ ಸ್ಪರ್ಶದಿಂದ ಮಥಿಸಲ್ಪಟ್ಟ ತಮ್ಮ ಮನಸ್ಸಿನಲ್ಲಿ ಉಂಟಾದ ಕಾಮಾವೇಶದಿಂದ ಮನೋಹರವಾದ ಮುಗುಳುನಗೆಯುಳ್ಳವರಾಗಿ ಅನುರಾಗದಿಂದಲೂ ಮದದಿಂದಲೂ ಸಂತೋಷಯುಕ್ತರಾಗಿ ಮದದಿಂದ ಚಲಿಸಲ್ಪಟ್ಟ ಸ್ವಲ್ಪವಾಗಿ ರಕ್ತವರ್ಣಗಳಾದ ಕರುಣಾಕಟಾಕ್ಷಯುಕ್ತಗಳಾದ ನೇತ್ರಗಳುಳ್ಳದ್ದಾಗಿರುವ ಯಾವ ಆದಿಶೇಷನ ಮುಖಪದ್ಮವನ್ನು ಲಜ್ಜೆಯೊಡನೆ ಕೂಡಿದಂಥಾವರಾಗಿ ನೋಡುತಲಿಧಾರೆಯೋ ಅವನೇ ಅನಂತಮೂರ್ತಿಯೆಂದು ತಿಳಿ ; ಭಗವಂತನಾದ ಆದಿದೇವನಾದ ಸುಗುಣಸಮುದ್ರನಾದ ಆ ಶೇಷಮೂರ್ತಿಯು ಸಕಲಲೋಕ ಕ್ಷೇಮಾರ್ಥವಾಗಿ ಈಗ ಆ ಪ್ರಳಯಕಾಲದಲ್ಲಿ ಉಂಟಾದ ಅಸಹನೆಯೆಂಬ ಮಹಾ ಕ್ರೋಧವನ್ನು ಬಿಟ್ಟು ಉಪಶಾಂತನಾಗಿಹನು ; ದೇವ ದೈತ್ಯ ನಾಗೇಂದ್ರ, ಶಿದ್ಧ ಗಂಧರ್ವ ವಿದ್ಯಾಧರ ಮುನಿಗಳ ಸಮೂಹಗಳಿಂದ ಶೇವಿಸಲ್ಪಡುತಲಿರುವ ಆ ಅನಂತಮೂರ್ತಿಯು ನಿರಂತರವೂ ಮದದಿಂದ ಸಂತೋಷಯುಕ್ತಗಳಾದ ವಿಕಾರಯುಕ್ತಗಳಾದ ಜಡಗಳಾದ ನೇತ್ರಗಳುಳ್ಳವನಾಗಿ ಮನೋಹರವಾದ ತನ್ನ ವಚನಾಮೃತದಿಂದ ತನ್ನ ಗಣನಾಥರನ್ನೂ ಶೇನಾಪತಿಗಳನ್ನೂ ಸಂತೋಷಪಡಿಸುತ ದಿವ್ಯಗಳಾದ ನೀಲ ವಸ್ತ್ರಗಳನ್ನು ಧರಿಸಿ ಮಹಾ ರತ್ನಗಳಿಂದ ಕೆತ್ತಲ್ಪಟ್ಟ ಒಂದು ಕುಂಡಲವನ್ನು ಧರಿಸಿ ತನ್ನ ಹಲವೆಂಬ ಆಯುಧದ ಪೃಷ್ಠಭಾಗದಲ್ಲಿರಿಸಲ್ಪಟ್ಟ ರಮಣೀಯ್ಯವಾದ ಒಂದು ಭುಜವುಳ್ಳವನಾಗಿ ಉತ್ಕೃಷ್ಟವಾದ ಲೀಲೆಯುಳ್ಳವನಾಗಿ ಬಾಡದಿರುವ ಕಾಂತಿಯುಳ್ಳ ನೂತನಗಳಾದ ತುಲಸೀ ಪುಷ್ಪಗಳ ಪರಿಮಳಯುಕ್ತವಾದ ಮಕರಂದದಿಂದ ಮದಿಸುತಲಿರುವ ಭ್ರಮರ ಸಮೂಹಗಳ ಮನೋಹರವಾದ ಗಾನದಿಂದ ಪ್ರಕಾಶಿಸುತಲಿರುವ ವನಮಾಲೆಯನ್ನು ಇಂದ್ರನು ಸುವರ್ಣಮಯವಾದ ವರುಣ ನಿರ್ಮಿತವಾದ ಹಾರವಿಶೇಷವನ್ನು ಧರಿಸುವಂತೆ ವಕ್ಷಸ್ಥಳದಲ್ಲಿ ಧರಿಸುತಲಿಧಾನೆ ; ಈ ಅನಂತಮೂರ್ತಿಯು ಮೋಕ್ಷಾರ್ಥಿಗಳಾದ ಪುರುಷರಿಂದ ಸ್ತುತಿಸಲ್ಪಡುತ ಹೃದಯದಲ್ಲಿ ಧ್ಯಾನಂಗೈಯ್ಯಲ್ಪಡುತ ಆ ಪುರುಷರ ಚಿತ್ತವನ್ನೈದಿ ಅನಾದಿಗಳಾದ ಕಾಲಕರ್ಮವಾಸನೆಗಳಿಂದ ಅತ್ಯಂತ ಬದ್ಧನಾಗಿ ಅವಿದ್ಯಾಪೂರ್ಣವಾಗಿ ಸತ್ವರಜಸ್ತಮೋಗುಣಾತ್ಮಕವಾಗಿರುವ ಹೃದಯಗ್ರಂಥಿಯನ್ನು ಶೀಘ್ರವಾಗಿ ಛೇದಿಸುತಲಿಧಾನೆ ; ಅಮಿತವಾದ ಅನಂತಮೂರ್ತಿಯ ಪ್ರಭಾವವನ್ನು ಸರ್ವಜ್ಞನಾದ ಬ್ರಹ್ಮಪುತ್ರನಾದ ನಾರದಮುನಿಯು ಪೂರ್ವದಲ್ಲಿ ತುಂಬುರನೊಡನೆ ಬ್ರಹ್ಮದೇವನ ಸಭೆಯಲ್ಲಿ ವರ್ಣಿಸಿದನು ; ಜಗತ್ತಿನ ಉತ್ಪತ್ತಿ ಸ್ಥಿತಿ ಲಯಗಳಿಗೆ ಕಾರಣಗಳಾದ ಮಾಯೆಯು ಸತ್ವ ರಜಸ್ತಮೋಗುಣಗಳು ಯಾವವನ ಕಟಾಕ್ಷವೀಕ್ಷಣದಿಂದ ಸೃಷ್ಟಿಮೊದಲಾದ ತಮ್ಮ ವ್ಯಾಪಾರಗಳಲ್ಲಿ ಸಮರ್ಥಗಳಾದವೋ ಯಾವ ಆದಿಶೇಷನ ಸ್ವರೂಪವು ಅಂತರಹಿತವಾಗಿ ಅನಾದಿಯಾಗಿಹದೋ ಯಾವವನ ರೂಪವು ತಾನು ಒಂದಾದಾಗ್ಯೂ ತನ್ನಲ್ಲಿ ನಾನಾವಿಧ ಪ್ರಪಂಚವನ್ನು ಧರಿಸಿಧೆಯೋ ಅಂಥಾ ಬ್ರಹ್ಮಸ್ವರೂಪನಾದ ಆ ಅನಂತಮೂರ್ತಿಯ ತತ್ವಸ್ವರೂಪವನ್ನು ಪ್ರಾಕೃತನಾದ ಪುರುಷನು ಎಂತು ತಿಳಿದಾನು ; ಚೇತನಾಚೇತನಾತ್ಮಕವಾದ ಈ ಪ್ರಪಂಚವು ಯಾವವನಲ್ಲಿ ಮಾಯೆಯಿಂದ ತೋರುತಲಿಧೆಯೋ ಇಷ್ಟಾರ್ಥಗಳನ್ನೀವ ಸಕಲ ದೇವತೆಗಳಲ್ಲಿ ಪ್ರಮುಖನಾದ ಉತ್ಕೃಷ್ಟಮಹಿಮೆಯುಳ್ಳ ಆ ವಾಸುದೇವನು ಭಕ್ತರಾದ ನಮಗೆ ಉಪಾಸನಂಗೈಯ್ಯಲೋಸುಗ ಅತಿದಯೆಯಿಂದ ಶುದ್ಧಸತ್ವಗುಣವೇ ಮುಖ್ಯವಾಗುಳ್ಳ ಮೂರ್ತಿಯನ್ನು ಧರಿಸಿದನು ; ಭಗವಂತನು ತನ್ನ ಭಕ್ತರ ಮನಸ್ಸುಗಳನ್ನು ತನ್ನ ಅಧೀನಗಳನ್ನಾಗಿಗೈಯುಲೋಸುಗ ಪಾವನವಾದ ಲೀಲೆಯನ್ನು ಧರಿಸಿದನು ; ಪುರುಷನು ಮಹಾ ಪಾತಕಿಯಾದಾಗ್ಯೂ ತನಗೆತಾನೆಯಾದರೂ ಅರ್ಥಿಯಿಂದಲಾದರೂ ಪರಿಹಾಸದಿಂದಲಾದರೂ ಮತ್ತೊಂದು ಕಡೆಯಲ್ಲಿ ಕೇಳಿದಂಥಾನಾದರೂ ಯಾವ ಭಗವಂತನ ನಾಮವನ್ನು ಕೀರ್ತನಂಗೈದು

ಆ ಕ್ಷಣದಲ್ಲಿ ತಾನು ಮಹಾಪಾತಕದಿಂದ ಮುಕ್ತನಾಗಿ ಜನರ ಸಮಸ್ತ ಪಾಪವನ್ನು ಕೂಡಾ ಪರಿಹರಿಸುವನೋ ಅಂಥಾ ಭಗವಂತನಾದ ಆದಿಶೇಷನಿಗಿಂತಲೂ ಅನ್ಯನಾದ ದೇವನನ್ನು ಮೋಕ್ಷಾರ್ಥಿಯಾದ ಪುರುಷನು ಎಂತು ಭಜಿಸುವನಾದಾನು; ಸಹಸ್ರ ಶಿರಸ್ಸುಗಳುಳ್ಳ ಯಾವ ಆದಿಶೇಷನು ಒಂದು ಶಿರಸ್ಸಿನಲ್ಲಿ ಪರ್ವತ ನದಿ ಸಮುದ್ರಗಳೊಡನೆ ಸಕಲ ಪ್ರಾಣಿಗಳೊಡನೆ ಕೂಡಿರುವ ಈ ಭೂಗೋಳವು ಎಲ್ಲೋ ಒಂದು ಕಡೆಯಲ್ಲಿ ಪರಮಾಣುವಿನಂತೆ ಇರಿಸಲ್ಪಟ್ಟಿದ್ದಾಗಿ ಬ್ರಹ್ಮಾದಿಗಳಿಂದಲೂ ತಿಳಿಯಲ್ಪಡದಿರುವ ಮಹಿಮೆಯುಳ್ಳ ಸರ್ವವ್ಯಾಪಕನಾದ ಆ ಶೇಷಮೂರ್ತಿಯ ಸಾಮರ್ಥ್ಯಗಳು ಅನಂತಗಳಾದ್ದರಿಂದ ಆ ಸಾಮರ್ಥ್ಯಗಳನ್ನು ಸಾವಿರ ನಾಲಿಗೆಗಳುಳ್ಳವನಾದರೂ ಎಣಿಸುವದಕ್ಕೆ ಸಮರ್ಥನಾಗಲಾರನು; ಇಂಥಾ ಪ್ರಭಾವವುಳ್ಳವನಾಗಿ ಅನಂತ ಸಾಮರ್ಥ್ಯಗಳುಳ್ಳ ಅಮಿತಗಳಾದ ಗುಣಗಳೂ ಚರಿತ್ರಗಳೂ ಉಳ್ಳವನಾಗಿರುವ ಭಗವಂತನಾದ ಶೇಷಮೂರ್ತಿಯು ತನಗೆ ತಾನೇ ಆಧಾರನಾಗಿ ಪ್ರಪಂಚಸ್ಥಿತಿಗೋಸ್ಕರ ಭೂಮಿಯ ಮೂಲಪ್ರದೇಶದಲ್ಲಿರುವವನಾಗಿ ಲೀಲೆಯಿಂದ ಈ ಭೂಮಿಯನ್ನು ಧರಿಸುತಲಿದ್ಧಾನೆ; ಅವರವರ ಕರ್ಮಾನುಸಾರದಿಂದ ಫಲಾನುಭವಕ್ಕೋಸ್ಕರ ನಿರ್ಮಿಸಲ್ಪಟ್ಟವಾಗಿ ನನ್ನಿಂದ ಕ್ರಮದಿಂದ ಈರೀತಿ ನಿರೂಪಿಸಲ್ಪಟ್ಟವಾದ ಸ್ವರ್ಗ ಭೂಲೋಕ ಪಾತಾಳಲೋಕಗಳಲ್ಲಿರುವ ಈ ಸ್ಥಾನವಿಶೇಷಗಳೇ ಇಷ್ಟಾರ್ಥಗಳನ್ನು ಪಡೆಯಲೋಸುಗ ಸತ್ಕರ್ಮನಿಷ್ಠರಾದ ಪುರುಷರಿಂದ ಪಡೆಯತಕ್ಕಂಥಾವು! ಎಲೈ ಪರೀಕ್ಷಿದ್ರಾಯನೇ, ವಿಧಿಶಾಸ್ತ್ರವೇ ಪ್ರಮಾಣವಾಗುಳ್ಳ ಧರ್ಮಕ್ಕೆ ನಾನಾಪ್ರಕಾರಗಳಾಗಿ ಫಲರೂಪಗಳಾದ ಪರಸ್ಪರ ವಿಲಕ್ಷಣಗಳಾದ ಸ್ಥಾನಗಳನ್ನು ಸಮಗ್ರವಾಗಿ ನಿನ್ನ ಪ್ರಶ್ನೆಯನ್ನನುಸರಿಸಿ ನಿರೂಪಿಸಿದೆನು.”

೨೬ನೇ ಅಧ್ಯಾಯ.

ಪಾಪಾತ್ಮರಿಗುಂಟಾಗುವ ನರಕ ಯಾತನೆಗಳು.

ಅನಂತರದಲ್ಲಿ ಪರೀಕ್ಷಿದ್ರಾಯನು ಶುಕಮುನಿಯನ್ನು ಕುರಿತು “ಎಲೈ ಶುಕಮುನಿಯೇ, ಲೋಕದಲ್ಲಿ ಸತ್ಕರ್ಮಗಳು ಏಕರೂಪಗಳಾದರೂ ಆ ಕರ್ಮಫಲಭೋಗಗಳು ವಿಚಿತ್ರ ವಿಚಿತ್ರಗಳಾಗಿ ಒಂದಕ್ಕೊಂದು ಸಮಾನವಿಲ್ಲದಿರುವವೆಂಬ ವಿಚಿತ್ರವ್ಯಾಪಾರವು ಎಂತು ಉಂಟಾಗುವದೆಂಬ ಪ್ರಶ್ನವಾಕ್ಯವನ್ನು ಕೇಳಿ ಶುಕಮುನಿಯು ‘ಎಲೈ ಪರೀಕ್ಷಿದ್ರಾಯನೆ, ಕರ್ಮಗಳು ಏಕರೂಪಗಳಾಗಿ ತಾರತಮ್ಯದಿಂದುಂಟಾಗುವವು; ಸಾತ್ವಿಕವಾದ ಶ್ರದ್ಧೆಯಿಂದ ಕರ್ತೃವಾದ ಪುರುಷನಿಗೆ ಸುಖತ್ವವು ರಾಜಸವಾದ ಶ್ರದ್ಧೆಯಿಂದ ಕರ್ತೃವಿಗೆ ಸುಖತ್ವ ದುಃಖತ್ವಗಳೆರಡೂ ತಾಮಸವಾದ ಶ್ರದ್ಧೆಯಿಂದ ದುಃಖತ್ವವೇ ಉಂಟಾಗುವದು; ಈರೀತಿ ತ್ರಿವಿಧಗಳಾದ ಶ್ರದ್ಧೆಗಳಿಗೂ ಪರಸ್ಪರ ತಾರತಮ್ಯವುಂಟು; ಈಗ ನಿಷೇಧಶಾಸ್ತ್ರವೇ ಪ್ರಮಾಣವಾಗುಳ್ಳ ಅಧರ್ಮ ಫಲಭೋಗಗಳೂ ಆ ಅಧರ್ಮ ಕರ್ತೃವಾದ ಪುರುಷನ ತಾಮಸ ಶ್ರದ್ಧೆಯು ತಾರತಮ್ಯದಿಂದ ಅದೇರೀತಿ ವಿಚಿತ್ರಗಳಾಗಿ ಉಂಟಾಗುವವು; ಅನಾದಿಯಾದ ಅವಿದ್ಯೆಯಿಂದ ಮಾಡಲ್ಪಟ್ಟ ಪಾಪಕರ್ಮಗಳಿಗೆ ಫಲಗಳಾಗಿ ಆ ಪಾಪಕರ್ಮ ಪರಿಪಾಕಸ್ವರೂಪಗಳಾಗಿ ನಾನಾವಿಧಗಳಾಗಿರುವ ಅನೇಕಸಹಸ್ರಗಳಾದ ನರಕಗಳನ್ನು ಸಮಗ್ರವಾಗಿ ನಿನಗೆ ನಿರೂಪಿಸುವೆನು’ ಎಂದು ನುಡಿದನು.

“ಆ ವಚನವನ್ನು ಕೇಳಿ ಪರೀಕ್ಷಿದ್ರಾಯನು ‘ಎಲೈ ಸರ್ವಜ್ಞನಾದ ಶುಕಮುನಿಯೆ, ನರಕಗಳೆಂಬವು ಭೂಮಿಯಲ್ಲೇ ಕೆಲವು ಸ್ಥಾನವಿಶೇಷಗಳೋ ಅಲ್ಲದೆ ಬ್ರಹ್ಮಾಂಡದ ಹೊರಗೆ ಇರುವವೋ ಅಲ್ಲದೆ ಬ್ರಹ್ಮಾಂಡಾವರಣಗಳ ಮಧ್ಯದಲ್ಲಿ ಭೂಮಿಗಿಂತಲೂ ಪ್ರತ್ಯೇಕಗಳಾಗಿರುವವೋ ಆ ಕ್ರಮವನ್ನು ನೀನು ನನಗೆ ನಿರೂಪಿಸು’ ಎಂದು ಪ್ರಾರ್ಥಿಸಿದನು.

‘ಶುಕಮುನಿಯು “ಎಲೈ ಅರಸೆ ಕೇಳು: ಯಾವ ದಕ್ಷಿಣದಿಕ್ಕಿನಲ್ಲಿ ಅಗ್ನಿಷ್ವಾತ್ತಾದಿ ಪಿತೃಗಣಗಳು ತಮ್ಮ ಗೋತ್ರೋತ್ಪನ್ನರಾದ ಪುತ್ರ ಪೌತ್ರಾದಿಗಳಿಗೆ ಉತ್ಕೃಷ್ಟ ಸಮಾಧಿಯಿಂದ ಶಾಶ್ವತಗಳಾದ ಶ್ರೇಯಸ್ಸುಗಳನ್ನಪೇ

ಕ್ಷಿಸುವವರಾಗಿ ವಾಸಂಗೈಯುತಲಿಧಾರೆೋ ಅಂಥಾ ದಕ್ಷಿಣದಿಕ್ಕಿನಲ್ಲಿ ಬ್ರಹ್ಮಾಂಡ ಮಧ್ಯದಲ್ಲಿ ಭೂಮಿಗಿಂತಲೂ ಕಳ
ಗೆ ಬ್ರಹ್ಮಾಂಡಾವರಣ ಜಲಕ್ಕಿಂತಲೂ ಮೇಲೆ ನರಕಗಳು ಇರುತಲಿವೆ ; ಭಗವಂತನಾಗಿ ಪಿತೃದೇವತೆಗಳಿಗೆ ಅಧಿಪತಿ
ಯಾದ ಯಮಧರ್ಮರಾಯನು ಭೂಲೋಕದಲ್ಲಿ ಮೃತಿಯನ್ನೈದಿದ ಪ್ರಾಣಿಗಳು ಸ್ವದೂತರಿಂದ ತನ್ನ ಪಟ್ಟಣವ
ನ್ನೈದಿಸಲ್ಪಡುವರಾಗುತ್ತಿರಲು ಅವರವರ ಪಾಪಕ್ಕೆ ಅನುಗುಣವಾಗಿ ನರಕಗಳಲ್ಲಿ ತಾನು ಶ್ರೀಹರಿಯ ಆಜ್ಞೆಯನ್ನ
ತಿಕ್ರಮಿಸದೆ ತನ್ನ ಪರಿವಾರ ಗಣಗಳೊಡನೆ ಕೂಡಿ ಬಂದಿರುವ ಪ್ರಾಣಿಗಳನ್ನು ದಂಡಿಸುತಲಿಧಾನೆ ; ಕೆಲವು ಋಷಿ
ಗಳು ನರಕಗಳು ಇಪ್ಪತ್ತೊಂದು ಎಂದು ಹೇಳುವರು ! ಎಲೈ ಅರಸೆ, ಆ ನರಕಗಳ ನಾಮ ಸ್ವರೂಪ ಲಕ್ಷಣಗ
ಳನ್ನು ಕೇಳು : ತಾಮಿಸ್ರ, ಅಂಧತಾಮಿಸ್ರ, ರೌರವ ಮಹಾರೌರವ ಕುಂಭೀಪಾಕ ಕಾಲಸೂತ್ರ, ಅಸಿಪತ್ರವನ ಸೂ
ಕರಮುಖ ಅಂಧಕೂಪ ಕ್ರಿಮಿಭೋಜನ ಸಂದಂಶ ತಪ್ತಸೂರ್ಮಿ ವಜ್ರಕಂಟಕ ಶಾಲ್ಮಲಿ ವೈತರಣಿ ಪೂಯೋದ
ಪ್ರಾಣರೋಧ ವಿಶಸನ ಲಾಲಾಭಕ್ಷ ಸಾರಮೇಯಾದನ ಅವೀಚಿ ರೇತಃಪಾನಗಳೆಂಬ ಇವು ಇಪ್ಪತ್ತೊಂದು ಮಹಾನ
ರಕಗಳು ; ಕ್ಷಾರಕರ್ದಮ ರಕ್ಷೋಗಣಭೋಜನ ಶೂಲಪ್ರೋತ ದಂದಶೂಕ ಅವಟನಿರೋಧನ ಅಪರ್ಯಾವ
ರ್ತನ ಸೂಚೀಮುಖಗಳೆಂಬ ಇವು ಏಳು ಅವು ಇಪ್ಪತ್ತೊಂದೂ ಇಪ್ಪತ್ತೆಂಟಾದ ಈ ಮಹಾನರಕಗಳು ನಾನಾವಿಧ
ಯಾತನಾಸ್ಥಾನಗಳಾಗಿರುವವೆಂದು ಕೆಲವರು ಋಷಿಗಳು ಹೇಳುವರು ; ಯಾವ ಪುರುಷನು ಪರರ ಪತ್ನೀಪುತ್ರಾದಿ
ಗಳನ್ನಪಹರಿಸುವನೋ ಆ ಪುರುಷನು ಅತಿ ಭಯಂಕರರಾದ ಯಮದೂತರಿಂದ ಕಾಲಪಾಶಗಳಿಂದ ಕಟ್ಟಲ್ಪಟ್ಟವ
ನಾಗಿ ತಾಮಿಸ್ರವೆಂಬ ಮಹಾನರಕದಲ್ಲಿ ಬಲಾತ್ಕಾರದಿಂದ ಕೆಡಹಲ್ಪಡುವನು ; ಅಂಧಕಾರಮಯವಾದ ತಾಮಿಸ್ರ
ವೆಂಬ ನರಕದಲ್ಲಿ ಆ ಪುರುಷನು ಅನ್ನಪಾನಾದಿಗಳಿಲ್ಲದೆ ದಂಡಗಳಿಂದ ಬಡಿಯೋಣ ದಂಡಿಸೋಣ ಬೆದರಿಸೋಣ
ಇವೇ ಮೊದಲಾದ ಯಾತನೆಗಳಿಂದ ಪೀಡಿಸಲ್ಪಡುತಲಿರುವವನಾಗಿ ಆಗಲೇ ಮೂರ್ಛೆಯನ್ನೈದುವನು ; ಯಾ
ವನು ಪರಪುರುಷನನ್ನು ವಂಚಿಸಿ ಅವನ ಪತ್ನೀ ಪುತ್ರಾದಿಗಳನ್ನು ಅನುಭವಿಸುತಲಿಧಾನೆಯೋ ಆ ಪುರುಷ
ನು ಮೃತನಾದಮೇಲೆ ಅಂಧತಾಮಿಸ್ರವೆಂಬ ನರಕದಲ್ಲಿ ಬಿದ್ದು ನಾನಾವಿಧ ಯಾತನೆಗಳನ್ನನುಭವಿಸಿ ಆ ದುಸ್ಸಹ
ವಾದ ಯಾತನೆಯಿಂದಲೇ ನಷ್ಟವಾದ ಬುದ್ಧಿಯು ದೃಷ್ಟಿಯು ಉಳ್ಳವನಾಗಿ ಬುಡದಲ್ಲಿ ಛೇದಿಸಲ್ಪಟ್ಟ ವೃಕ್ಷದಂತೆ
ಜ್ಞಾನವಿಲ್ಲದೆ ಕೆಳಕ್ಕೆ ಬೀಳುವನು ; ಆ ನರಕವನ್ನು ಅಂಧತಾಮಿಸ್ರವೆಂದು ನುಡಿಯುವರು ; ಯಾವವನು ಈ ಶರೀ
ರವೇ ನಾನು ಈ ಧನಾದಿಗಳು ನನ್ನದೆಂದು ಪ್ರತಿದಿವಸವಲ್ಲಿಯೂ ಪ್ರಾಣಿಗಳಿಗೆ ದ್ರೋಹವಂಗೈದು ತನ್ನ ಕುಟುಂಬ
ಮಾತ್ರವನ್ನು ಪೋಷಿಸುತಲಿಧಾನೆಯೋ ಆ ಪುರುಷನು ದೇಹಾಂತದಲ್ಲಿ ಆ ಪತ್ನೀ ಪುತ್ರಾದಿಗಳನ್ನು ಈ ಲೋಕದ
ಲ್ಲಿ ಬಿಟ್ಟು ತಾನೊಬ್ಬನೇ ಪ್ರಾಣಿದ್ರೋಹದಿಂದ ರೌರವವೆಂಬ ನರಕದಲ್ಲಿ ಬೀಳುವನು ; ಯಾವರೀತಿಯಿಂದ ಈ
ಭೂಲೋಕದಲ್ಲಿ ಪ್ರಾಣಿಗಳು ಪೀಡಿಸಲ್ಪಟ್ಟರೋ ಅದೇರೀತಿ ಆ ನರಕದಲ್ಲಿ ಯಮನಿಂದ ಮಾಡಲ್ಪಟ್ಟ ಯಾತನೆಗಳ
ನ್ನನುಭವಿಸುತಲಿರುವ ಆ ಪುರುಷನನ್ನು ಆ ಪಾಪಕರ್ಮಗಳೇ ಸರ್ಪಗಳಿಗಿಂತಲೂ ಅತಿ ಕ್ರೂರಗಳಾದ ರುರುಗ
ಳೆಂಬ ನಾಮಧೇಯಗಳುಳ್ಳ ದುಷ್ಟಜಂತುಗಳಾಗಿ ಹಿಂಸೆಪಡಿಸುವವು ; ಆ ನರಕವನ್ನು ರೌರವವೆಂದು ಹೇಳುವರು ;
ಯಾವ ಪುರುಷನು ಪ್ರಾಣಿದ್ರೋಹದಿಂದ ತನ್ನ ದೇಹಮಾತ್ರವನ್ನೇ ಪೋಷಿಸುತಲಿಧಾನೋ ಆ ಪುರುಷನು ಮಹಾ
ರೌರವವೆಂಬ ನರಕದಲ್ಲಿ ಬೀಳುವನು ; ಆ ನರಕದಲ್ಲಿ ಬಿದ್ದಿರುವ ಆ ಪುರುಷನನ್ನು ಮಾಂಸಭಕ್ಷಕಗಳಾದ ರುರುಗ
ಳೆಂಬ ಆ ದುಷ್ಟಜಂತುಗಳು ಮಾಂಸಕ್ಕೋಸ್ಕರ ಹಿಂಸೆಪಡಿಸುವವು ; ಈ ಲೋಕದಲ್ಲಿ ಕ್ರೂರನಾದ ಯಾವ ಪುರು
ಷನು ಪಶು ಪಕ್ಷಿ ಮೊದಲಾದ ಪ್ರಾಣಿಗಳನ್ನು ತನ್ನ ಆಹಾರಾರ್ಥವಾಗಿ ಅಗ್ನಿಯಲ್ಲಿ ಪಾಕಂಗೈಯುತಲಿಧಾನೋ
ದಯಾರಹಿತನಾದ ರಾಕ್ಷಸಾರಿಗಳಿಗಿಂತಲೂ ದುಷ್ಟನಾದ ಆ ಪುರುಷನನ್ನು ಯಮದೂತರು ಕುಂಭೀಪಾಕವೆಂಬ
ಮಹಾ ನರಕದಲ್ಲಿ ತಪ್ತವಾದ ತೈಲದಿಂದ ಪೂರಿಸಲ್ಪಟ್ಟ ಕುಂಭದಲ್ಲಿ ಪಾಕಂಗೈಯುತಲಿಧಾರೆ ; ಯಾವವನು ತಂದೆಗೆ
ಅಸ್ಮತ್ಸಮ್ಮಂದರಿಗೆ ಬ್ರಾಹ್ಮಣರಿಗೆ ಮಹಾ ದ್ರೋಹಮಾಡುತಲಿಧಾನೋ ಆ ಪುರುಷನು ಹತ್ತುಸಾವಿರ ಯೋಜನ
ವಿಸ್ತಾರವುಳ್ಳ ಕಾಲಸೂತ್ರವೆಂಬ ಮಹಾ ನರಕದಲ್ಲಿ ಅಗ್ನಿ ಸೂರ್ಯರಿಂದ ಕೆಳಗೂ ಮೇಲೆಯೂ ಅತ್ಯಂತವಾಗಿ ತಪಿ
ಸಲ್ಪಡುತಲಿರುವ ತಾಮ್ರಮಯವಾದ ಕಾವಲಿಯಲ್ಲಿ ಕೂರಿಸಲ್ಪಟ್ಟವನಾಗಿ ಕ್ಷುತ್ತಿನಿಂದಲೂ ಬಾಯಾರಿಕೆಯಿಂದಲೂ

ಶರೀರದ ಒಳಗೂ ಹೊರಗೂ ದಹಿಸಲ್ಪಡುತ ಅತ್ಯಂತ ಯಾತನೆಯಿಂದ ಸುಮ್ಮನೆ ಕುಳಿತುಕೊಳ್ಳುತ ಏಳುತ ಮಲಗುತ ಓಡುತ ಪಶುವಿಗೆ ಎಷ್ಟು ರೋಮಗಳಿರುವವೋ ಅಷ್ಟು ಸಾವಿರ ವರುಷಗಳು ಈರೀತಿ ನಾಕಯಾತನೆಗಳನ್ನನುಭವಿಸುವನು ; ಯಾವ ಪುರುಷನು ಅತ್ಯಂತ ರೋಗಾದ್ಯುಪದ್ರವಿಲ್ಲದಿದ್ದಾಗ್ಯೂ ವೇದೋಕ್ತವಾದ ಸ್ವಕರ್ಮವನ್ನು ಅತಿಕ್ರಮಿಸಿ ದುಷ್ಟವಾದ ಪಾಷಂಡಮಾರ್ಗದಲ್ಲಿ ಪ್ರವರ್ತಿಸುತಲಿಧಾನೋ ಆ ಪುರುಷನನ್ನು ದೇಹಾಂತದಲ್ಲಿ ಯಮಭಟರು ಅಸಿಪತ್ರವನವೆಂಬ ನರಕವನ್ನೈದಿಸಿ ಕಶೇಕೋಲಿನಿಂದ ಪ್ರಹರಿಸುವ ಸಮಯದಲ್ಲಿ ಆ ಪುರುಷನು ಭಯದಿಂದ ಅತ್ತಿತ್ತ ಓಡುತಿರುವವನಾಗಿ ಉಭಯಪಾರ್ಶ್ವದಲ್ಲಿಯೂ ಹರತಗಳುಳ್ಳವಾಗಿ ಖಡ್ಗದಂತಿರುವ ತಾಳಪತ್ರಗಳಿಂದ ಕುಯ್ಯಲ್ಪಡುತ್ತಿರುವ ಸಮಸ್ತ ಅವಯವಗಳುಳ್ಳವನಾಗಿ ಕಟಕಟಾ ಮೃತನಾದೆನೆಂದು ಅತ್ಯಂತ ಯಾತನೆಯಿಂದ ಮೂರ್ಛಿತನಾಗಿ ಅಡಿಗಡಿಗೂ ಬೀಳುತಲಿರುವನು ; ಸ್ವಧರ್ಮತ್ಯಾಗಂಗೈದ ಪುರುಷನಿಗೂ ಇದೇ ನರಕಾನುಭವವುಂಟಾಗುವದು ; ಈ ಭೂಲೋಕದಲ್ಲಿ ಯಾವ ಅರಸಾದರೂ ಮಂತ್ರಿಯಾದರೂ ಅಧಿಕಾರಿಯಾದರೂ ದಂಡನೆಗೆ ಯೋಗ್ಯನಲ್ಲದಿರುವ ಪುರುಷನನ್ನು ದಂಡಿಸುವದು ಬ್ರಾಹ್ಮಣನಿಗೆ ದೇಹದಂಡವಂಗೈವದು ಇವೇ ಮೊದಲಾದ ದುಷ್ಕೃತ್ಯಗಳನ್ನಾಚರಿಸುವ ಪಾಪಿಷ್ಠನಾದ ಆ ಪುರುಷನು ದೇಹಾಂತದಲ್ಲಿ ಸೂಕರಮುಖವೆಂಬ ನರಕದಲ್ಲಿ ಬಿದ್ದು ಅತಿ ಬಲಶಾಲಿಗಳಾದ ಯಮದೂತರಿಂದ ಇಕ್ಷುದಂಡದಂತೆ ಹಿಂಡಲ್ಪಟ್ಟ ಅವಯವಗಳುಳ್ಳವನಾಗಿ ದೀನಸ್ವರದಿಂದ ರೋದನಂಗೈಯುತ ಯಾವರೀತಿಯಿಂದ ಚೋರರು ಶಿಕ್ಕಿ ಚನ್ನಾಗಿ ದಂಡಿಸಲ್ಪಟ್ಟವರಾಗಿ ಮೂರ್ಛೆಯನ್ನೈದುವರೋ ಆರೀತಿ ಮೂರ್ಛೆಯನ್ನೈದುವನು ; ಯಾವ ಪುರುಷನು ತಾನು ಈಶ್ವರನಿಂದ ಬ್ರಾಹ್ಮಣಾದಿ ವರ್ಣವಿಭಾಗದಿಂದ ವಿಧಿನಿಷೇಧಪೂರ್ವಕವಾಗಿ ಕಲ್ಪಿಸಲ್ಪಟ್ಟ ಜೀವನೋಪಾಯವುಳ್ಳವನಾಗಿ ಅನ್ಯರಿಗೆ ಉಂಟಾಗುವ ಬಾಧೆಯನ್ನು ತಿಳಿದು ಈಶ್ವರನಿಂದ ಕಲ್ಪಿತವಾದ ಮನುಷ್ಯರಕ್ತಪಾನಾದಿರೂಪವಾದ ಜೀವನವುಳ್ಳವನಾಗಿ ಅನ್ಯರಿಗುಂಟಾಗುವ ಬಾಧೆಯನ್ನರಿಯದೆ ಅಜ್ಞಾನಿಗಳಾಗಿರುವ ಮತ್ಕುಣಾದಿ ಪ್ರಾಣಿಗಳಿಂದ ಬಾಧಿಸುತಲಿಹನೋ ಆ ಪುರುಷನು ತನ್ನಿಂದ ಮಾಡಲ್ಪಟ್ಟ ಆ ಪ್ರಾಣಿಹಿಂಸೆಯಿಂದ ಅಂಧಕೂಪವೆಂಬ ನರಕದಲ್ಲಿ ಬಿದ್ದು ತನ್ನಿಂದ ಭೂಲೋಕದಲ್ಲಿ ಯಾವ ಪ್ರಾಣಿಗಳು ಪೀಡಿಸಲ್ಪಟ್ಟವೋ ಆ ಪಶು ಮೃಗ ಪಕ್ಷಿ ಸರ್ಪ ಮಶಕಗಳಿಂದಲೂ ಹೇನುಗಳಿಂದಲೂ ಮತ್ಕುಣಾದಿಗಳಿಂದಲೂ ಪೀಡಿಸಲ್ಪಡುತ ಸ್ವಲ್ಪವಾದರೂ ನಿದ್ರಾಸುಖವನ್ನರಿಯದೆ ನಿಂತಕಡೆಯಲ್ಲಿ ನಿಲ್ಲದೆ ದುಷ್ಟವಾದ ಶರೀರದಲ್ಲಿರುವ ಜೀವನಂತೆ ಅಂಧಕಾರದಲ್ಲಿ ಸುತ್ತುವನು ; ಯಾವ ಪುರುಷನು ಈ ಭೂಲೋಕದಲ್ಲಿ ಈಶ್ವರಪ್ರೇರಣೆಯಿಂದ ಲಬ್ಧಗಳಾದ ಭಕ್ಷ್ಯ ಭೋಜ್ಯಾದಿ ದ್ರವ್ಯಗಳನ್ನು ಪಡದು ಅವುಗಳಲ್ಲಿ ಸ್ವಲ್ಪವನ್ನಾದರೂ ದೇವ ಅತಿಥಿ ವೈಶ್ವದೇವಾದಿಗಳಿಗೋಸ್ಕರ ವಿಭಾಗಂಗೈಯದೆ ಪಂಚಮಹಾಯಜ್ಞಗಳನ್ನು ಬಿಟ್ಟು ಭೋಜನಂಗೈಯುತಲಿಧಾನೋ ಆ ಪುರುಷನು ಅತಿ ನಿಕೃಷ್ಟವಾದ ಕ್ರಿಮಿಭೋಜನವೆಂಬ ಮಹಾನರಕದಲ್ಲಿ ವಾಯಸಗಳಿಂದ ಪೀಡಿಸಲ್ಪಟ್ಟವನಾಗಿ ವಾಸಂಗೈವನು; ಯಜ್ಞದಾನಾದಿ ಶೂನ್ಯನಾಗಿ ಭಕ್ಷ್ಯಾದಿಗಳನ್ನು ಭಕ್ಷಿಸಿ ಆ ಪುರುಷನು ನರಕದಲ್ಲಿ ಲಕ್ಷಯೋಜನ ವಿಸ್ತಾರವುಳ್ಳ ಕ್ರಿಮಿಕುಂಭದಲ್ಲಿ ಬಿದ್ದು ಹುಳುವಾಗಿ ಆ ಹುಳುಗಳಿಂದಲೇ ಭಕ್ಷಿಸಲ್ಪಡುತ ತಾನೂ ಹುಳುಗಳನ್ನು ಭಕ್ಷಿಸುತ ಎಷ್ಟುಪರ್ಯಂತವು ಆ ಪಾಪವು ಕ್ಷಯಿಸುವದೋ ಅಷ್ಟುಪರ್ಯಂತವೂ ಶಾಸ್ತ್ರೋಕ್ತವಾದ ಆ ಪಾಪಕ್ಕೆ ತಕ್ಕ ಪ್ರಾಯಶ್ಚಿತ್ತವಂಗೈಯದಿರುವ ತನ್ನ ಆತ್ಮನನ್ನು ಈರೀತಿ ಯಾತನೆಪಡಿಸುವನು ; ಯಾವ ಪುರುಷನು ಈ ಲೋಕದಲ್ಲಿ ತನಗೆ ವಿಪತ್ತು ಇಲ್ಲದೇ ಇದ್ದಾಗ್ಯೂ ಬಲಾತ್ಕಾರದಿಂದ ಬ್ರಾಹ್ಮಣನ ಬಡವೆಯಾಗಿ ಮತ್ತೊಬ್ಬನ ಸ್ವತ್ತಾಗಿರುವ ಸುವರ್ಣ ರತ್ನಾದಿಗಳನ್ನು ಅಪಹರಿಸುತಲಿಧಾನೋ ಆ ಪುರುಷನನ್ನು ಸಂದಂಶವೆಂಬ ನರಕದಲ್ಲಿ ಯಮಭಟರು ಅಗ್ನಿವರ್ಣಗಳಿಂದ ಉಕ್ಕಿನಿಂದ ರಚಿಸಲ್ಪಟ್ಟ ಇಕ್ಕಳಗಳಿಂದ ದೇಹದ ತ್ವಕ್ಕಿನಲ್ಲಿ ಛೇದಿಸುವರು ; ಯಾವ ಪುರುಷನು ಈ ಲೋಕದಲ್ಲಿ ಅಗಮ್ಯಳಾದ ಸ್ತ್ರೀಯೊಡನೆ ಸಂಗವನ್ನು ಮಾಡುತಲಿಧಾನೋ ಯಾವ ಸ್ತ್ರೀಯು ಅಯೋಗ್ಯನಾದ ಪುರುಷನನ್ನು ಪರಿಗ್ರಹಿಸುತ್ತಾಳೆಯೋ ಆ ಸ್ತ್ರೀಯನ್ನೂ ಆ ಪುರುಷನನ್ನೂ ಯಮಭಟರು ತಪ್ತಸೂರ್ಮಿಯೆಂಬ ನರಕದಲ್ಲಿ ಕಶೇಕೋಲಿನಿಂದ ಪ್ರಹರಿಸುತ ಅಗ್ನಿತಪ್ತವಾದ ಲೋಹಮಯವಾದ ಸ್ತ್ರೀಪ್ರತಿಮೆಯೊಡನೆ ಪುರುಷನನ್ನೂ ಪುರುಷಪ್ರತಿಮೆಯೊಡನೆ ಸ್ತ್ರೀಯನ್ನೂ ಆಲಿಂಗನಂಗೈಸುವರು ; ಯಾವ ಪುರುಷನು ಈ ಲೋಕ

ದಲ್ಲಿ ಕಾಮಾತುರನಾಗಿ ಪಶ್ವಾದಿಗಳಲ್ಲಿ ರಮಿಸುತಲಿಧ್ದಾನೋ ಆ ಪುರುಷನನ್ನು ಯಮಭಟರು ವಜ್ರಕಂಟಕಶಾಲ್ಮಲಿಯೆಂಬ ನರಕದಲ್ಲಿ ವಜ್ರಮಯಗಳಾದ ತೀಕ್ಷ್ಣಗಳಾದ ಮುಳ್ಳುಗಳಿಂದ ವ್ಯಾಪಿಸಲ್ಪಟ್ಟ ಬೂರುಗದ ಮರವನ್ನು ಹತ್ತಿಸಿ ಅಲ್ಲಿಂದ ಸೆಳೆಯುವರು ; ಈ ಲೋಕದಲ್ಲಿ ಯಾವ ಅರಸುಗಳು ಮಂತ್ರಿ ಮೊದಲಾದವರು ತಾವು ಸತ್ಕುಲದಲ್ಲಿ ಹುಟ್ಟಿದಂಥಾವರಾಗಿ ಧರ್ಮಮರ್ಯಾದೆಗಳನ್ನು ಭಗ್ನಗಳನ್ನಾಗಿ ಮಾಡುತಲಿಧ್ದಾರೋ ಆ ಪುರುಷರು ದೇಹತ್ಯಾಗಾನಂತರದಲ್ಲಿ ವೈತರಣೀನದಿಯೆಂಬ ನರಕದಲ್ಲಿ ಬಿದ್ದು ಧರ್ಮಮರ್ಯಾದೆಯನ್ನತಿಕ್ರಮಿಸಿರುವ ಆ ಪುರುಷರು ಮಲಮೂತ್ರ ರಕ್ತ ಕೇಶ ನಖ ಅಸ್ಥಿ ಮಾಂಸಗಳೊಡನೆ ಕ್ರಿಮಿ ಮೇದಸ್ಸು ಹುಳಸೀರು ಇವುಗಳೊಡನೆ ಕೂಡಿ ದುರ್ಗಂಧಯುಕ್ತವಾಗಿ ಪ್ರವಹಿಸುತಲಿರುವ ಸಮಸ್ತ ನರಕಗಳಿಗೆ ಸುತ್ತಲೂ ಅಗಳನಂತಿರುವ ವೈತರಣಿ ಎಂಬ ಆ ನದಿಯು ದುಷ್ಟಗಳಾದ ಜಲಜಂತುಗಳಿಂದ ಉಭಯಪಾರ್ಶ್ವದಲ್ಲಿಯೂ ಭಕ್ಷಿಸುತಲಿರುವವರಾದಾಗ್ಯೂ ತಮ್ಮ ಪಾಪಕರ್ಮಬಲದಿಂದ ಜೀವಪ್ರಾಣಗಳನ್ನು ಬಿಡುವವರಾಗದೆ ತೇಲುತ ತಮ್ಮಿಂದ ಮಾಡಲ್ಪಟ್ಟ ಪಾಪಕರ್ಮಗಳಿಂದ ಪ್ರಾಪ್ತವಾದ ನರಕಯಾತನೆಯನ್ನು ಬಾರಿಬಾರಿಗೂ ಸ್ಮರಿಸುತ ಸಂತಾಪಪಡುವರು ; ಯಾವ ದ್ವಿಜರು ಶೂದ್ರಸ್ತ್ರೀಸಂಗದಲ್ಲಿ ಆಸಕ್ತರಾಗಿ ಶೌಚಾಚಾರ ನಿಯಮಗಳನ್ನು ವರ್ಜಿಸಿ ಲಜ್ಜಾರಹಿತರಾಗಿ ಸ್ವೇಚ್ಛಾಚಾರವನ್ನು ಪರಿಗ್ರಹಿಸುತಲಿಧ್ದಾರೋ ಅವರು ದೇಹಾಂತದಲ್ಲಿ ಮಲಮೂತ್ರ ಶ್ಲೇಷ್ಮಗಳಿಂದಲೂ ಕೀವುನಿಂದಲೂ ಜೊಲ್ಲು ನೀರುಗಳಿಂದಲೂ ಪರಿಪೂರ್ಣವಾದ ಪೂಯೋದವೆಂಬ ಸಮುದ್ರರೂಪವಾದ ನರಕದಲ್ಲಿ ಬಿದ್ದು ಅಸಹ್ಯವಾದ ಮಲಮೂತ್ರಾದಿಗಳನ್ನೇ ಭಕ್ಷಣಂಗೈವರು ; ಯಾವ ಪುರುಷರು ಈ ಲೋಕದಲ್ಲಿ ಶುನಕಗಳಂತೆ ಆಚಾರರಹಿತರಾಗಿ ಪ್ರಾಣಿಗಳ ಹಿಂಸೆಯಲ್ಲಿ ಉತ್ಸಾಹವುಳ್ಳವರಾಗಿ ಅವಿಹಿತಗಳಾದ ಸ್ಥಳಗಳಲ್ಲಿ ಮೃಗಗಳನ್ನು ಸಂಹರಿಸುತಲಿಧ್ದಾರೋ ಆ ಪುರುಷರನ್ನು ದೇಹಾಂತದಲ್ಲಿ ಯಮಭಟರು ಪ್ರಾಣನಿರೋಧವೆಂಬ ನರಕದಲ್ಲಿ ಬಾಣಗಳಿಂದ ಲಕ್ಷ್ಯವಿಟ್ಟು ಭೇದಿಸುವರು ; ದಾಂಭಿಕರಾಗಿರುವ ಯಾವ ಪುರುಷರು ಈ ಲೋಕದಲ್ಲಿ ದಂಭಾರ್ಥವಾಗಿ ಸಂಕಲ್ಪಿಸಲ್ಪಟ್ಟ ಕ್ರತುಗಳಲ್ಲಿ ಪಶುಗಳ ಹಿಂಸೆಪಡಿಸುತಲಿಧ್ದಾರೋ ದೇಹಾಂತದಲ್ಲಿ ವಿಶಸನವೆಂಬ ನರಕದಲ್ಲಿ ಬಿದ್ದಿರುವ ಆ ಪುರುಷರನ್ನು ಯಮಭಟರು ನಾನಾಪ್ರಕಾರವಾಗಿ ಯಾತನೆಪಡಿಸುವರು ; ಯಾವ ಬ್ರಾಹ್ಮಣನು ಈ ಲೋಕದಲ್ಲಿ ಬ್ರಾಹ್ಮಣ ಕುಲೋತ್ಪನ್ನಳಾದ ತನ್ನ ಪತ್ನಿಗೆ ಕಾಮಮೋಹಿತನಾಗಿ ರೇತಸ್ಸನ್ನು ಪಾನಂಗೈಸುತಲಿಧ್ದಾನೋ ದೇಹಾಂತದಲ್ಲಿ ಆ ಪುರುಷನನ್ನು ಲಾಲಾಭಕ್ಷವೆಂಬ ನರಕದಲ್ಲಿ ರೇತಸ್ಸಿನಿಂದ ಪೂರಿತವಾದ ಕಾಲ್ವೆಯಲ್ಲಿ ಕೆಡಹಿ ಯಮಭಟರು ಅವನಿಗೆ ರೇತಸ್ಸನ್ನೇ ಪಾನಂಗೈಸುವರು ; ಯಾವ ಪುರುಷರು ಈ ಲೋಕದಲ್ಲಿ ಚೌರ್ಯವ್ಯಾಪಾರದಿಂದ ಜೀವಿಸುತಲಿಧ್ದಾರೋ ಯಾರು ದ್ವೇಷಾದಿಗಳಿಂದ ಅನ್ಯಗೃಹಗಳಮೇಲೆ ಅಗ್ನಿಯನ್ನಿರಿಸುವರೋ ಯಾರು ಭಕ್ಷ್ಯಾದಿಗಳಲ್ಲಿ ವಿಷವನ್ನಿರಿಸಿ ಅವುಗಳಿಂದ ಜನರನ್ನು ಸಂಹರಿಸುತಲಿಧ್ದಾರೋ ಯಾವ ರಾಜಭಟರು ಗ್ರಾಮಗಳನ್ನು ಮಾರ್ಗಸ್ಥರಾದ ಜನರ ಸಮೂಹಗಳನ್ನು ಕೊಳ್ಳೆಮಾಡುತಲಿಧ್ದಾರೋ ದೇಹಾಂತದಲ್ಲಿ ಸಾರಮೇಯಾದನವೆಂಬ ನರಕದಲ್ಲಿ ಬಿದ್ದಿರುವ ಆ ಪುರುಷರನ್ನು ಯಮನಿಗೆ ದೂತಪ್ರಾಯಗಳಾಗಿ ವಜ್ರದಂತೆ ಅತಿ ಕಠಿನಗಳಾದ ಕೋರೆದಾಡೆಗಳುಳ್ಳವರಾಗಿರುವ ಏಳುನೂರು ಎಪ್ಪತ್ತು ಶುನಕಗಳು ಅತಿ ವೇಗದಿಂದ ಭಕ್ಷಿಸುವವು ; ಯಾವ ಪುರುಷರು ಸಾಕ್ಷಿವ್ಯಾಪಾರದಲ್ಲಾದರೂ ಕ್ರಯ ವಿಕ್ರಯದಲ್ಲಾದರೂ ಅನೃತವನ್ನು ನುಡಿಯುತಲಿಧ್ದಾರೋ ಆ ಪುರುಷರು ನೂರುಯೋಜನ ಉನ್ನತವಾದ ಪರ್ವತದಶಿಖರದಿಂದ ನಿರವಲಂಬವಾದ ಅವೀಚಿಯೆಂಬ ನರಕದಲ್ಲಿ ಯಮಭಟರಿಂದ ತಲೆಕೆಳಗಾಗಿ ಕೆಡಹಲ್ಪಟ್ಟು ಶಿಲಾಮಯವಾದ ಪ್ರದೇಶವು ಜಲದಂತೆ ಪ್ರಕಾಶಿಸುತ ಜಲದಂತೆ ತೋರುವದೇಹೊರ್ತು ಜಲವು ತರಂಗಗಳು ಇಲ್ಲವಾದ್ದರಿಂದ ಅವೀಚಿಯೆಂಬ ನಾಮಧೇಯವುಳ್ಳ ಆ ನರಕದಲ್ಲಿ ಆ ಪುರುಷರು ಪರ್ವತಶಿಖರದಿಂದ ಕೆಡಹಲ್ಪಟ್ಟವರಾಗಿ ತಿಲಾಪ್ರಮಾಣದಿಂದ ಖಂಡಗಳಾಗುತಲಿರುವ ಸಮಸ್ತ ಅವಯವಗಳುಳ್ಳವರಾದಾಗ್ಯೂ ಕರ್ಮಬಲದಿಂದ ಪ್ರಾಣಗಳನ್ನು ಬಿಡದೆ ಪುನಃ ಆ ಪರ್ವತಶಿಖರವನ್ನು ಹತ್ತಿಸಿ ಅಲ್ಲಿಂದ ಕೆಡಹಲ್ಪಡುವರು ; ಯಾವ ಬ್ರಾಹ್ಮಣಪತ್ನಿಯಾದರು ಈ ಲೋಕದಲ್ಲಿ ಸುರಾಪಾನಂಗೈಯುವಳೋ ಯಾವ ಪುರುಷನು ವ್ರತನಿಷ್ಠನಾಗಿರುವಕಾಲದಲ್ಲಿ ಸುರಾಪಾನಂಗೈಯುತಲಿಧ್ದಾನೋ ಯಾವಕ್ಷತ್ರಿಯನಾದರೂ ವೈಶ್ಯನಾದರೂ ತಮಗೆ ವೇದದಲ್ಲಿ ನಿಷೇಧಿಸಲ್ಪಟ್ಟಿರುವ ಸೋಮಪಾನಂಗೈಯುತಲಿಧ್ದಾನೋ ದೇಹಾಂ

ತಲ್ಲಿ ಅಯಃಪಾನವೆಂಬ ನರಕವನ್ನು ಐದಿಸಿಟ್ಟಿರುವ ಆ ಪುರುಷರನ್ನು ಯಮಭಟರು ಕೆಡಹಿ ಎದೆಯಲ್ಲಿ ಬಂ
ದು ಹೆಜ್ಜೆಯನ್ನಿಟ್ಟು ಆಕ್ರಮಿಸಿಕೊಂಡು ಅ ಬಾಯಲ್ಲಿ ಅಗ್ನಿಯಿಂದ ಅತ್ಯಂತ ತಪ್ತವಾಗಿ ದ್ರವಿಸಿರುವ ಲೋ
ಹವನ್ನು ಬಿಡುವರು; ಯಾವ ಪುರುಷನು ತಾನು ನೀಚಜನ್ಮದಲ್ಲಿ ಜನಿಸಿದವನಾದರೂ ಈ ಲೋಕದಲ್ಲಿ ತನ್ನ
ಭಾವನೆಯಿಂದ ತಾನೇ ದೊಡ್ಡವನೆಂದು ತಿಳಿದು ತಪೋವಿದ್ಯಾಚಾರ ವರ್ಣಾಶ್ರಮಧರ್ಮಗಳುಳ್ಳವರಾಗಿ ಮಹಾತ್ಮ
ರನ್ನು ಬಹುಮಾನಂಗೈಯದೆ ಇರುವನೋ ಆ ಪುರುಷನು ಪೂರ್ವದಲ್ಲೇ ಮೃತಪ್ರಾಯನಾಗಿದ್ದರೂ ಪುನಃ ಆ ದೇಹ
ವನ್ನು ಬಿಟ್ಟು ಕ್ಷಾರಕರ್ದಮವೆಂಬ ನರಕದಲ್ಲಿ ತಲೆಕೆಳಗಾಗಿ ಬಿದ್ದು ಅನೇಕ ನರಕಯಾತನೆಗಳನ್ನನುಭವಿಸುವನು;

ಯಾವ ಪುರುಷರಾದರೂ ಯಾವ ಸ್ತ್ರೀಯರಾ
ನ್ನು ಮಾಡಿ ಆ ನರಪಶುವನ್ನು ಸಮಹಿ
ಪುರುಷರನ್ನು ಆ ಸ್ತ್ರೀಯರನ್ನು ರಕ್ಷೋಗಣ
ವಾದ ಆ ನರರೇ ರಾಕ್ಷಸರಾಗಿ ಸಂಘೀಭವಿಸಿ
ಶರೀರಗಳನ್ನು ಶೀಳಿ ರಕ್ತಪಾನಂಗೈದು ಅವರು
ಂದ ನರ್ತನಾದಿಗಳನ್ನು ಮಾಡಿದರೋ ಅದೇರಿ
ಾನಂಗೈವರು; ಈ ಲೋಕದಲ್ಲಿ ಯಾವ ಪುರ
ಮನುಷ್ಯಾದಿಗಳನ್ನು ವಿಶ್ವಾಸವೆಂಬ ಉಪಾಯದಿ
ಮೊಚಿಸೂತ್ರಾದಿಗಳಲ್ಲಿ ತಗಲಿಸಿ ವಿಲಾಸಾರ್ಥವ
ಆ ಪುರುಷರು ದೇಹಾಂತದಲ್ಲಿ ಶೂಲಪ್ರೋತವೆಂ
ರೀರವುಳ್ಳವರಾಗಿ ಕ್ಷುತ್ತಿನಿಂದಲೂ ಬಾಯಾರಿಕೆ
ತ್ತಲೂ ತೀಕ್ಷ್ಣವಾದ ಕೊಕ್ಕಿಗಳಿಂದ ಬಡಿಯ
ಯಾವ ಪುರುಷನು ಈ ಲೋಕದಲ್ಲಿ ಕ್ರೂರವಾದ
ಸಮಾಡುತಲಿರ್ಧಾನೋ ಅವನು ದೇಹಾಂತದಲ್ಲಿ ದಂ
ಗಳು ಆ ಪಾಪಿಯನ್ನು ಇಲಿಗಳಂತೆ ಕಬಳಿಸು
ಹಿತಗಳಾದ ಇತರ ಪ್ರಾಣಿಗಳನ್ನು ಬಲಾತ್ಕಾರದಿಂ
ದೇಹಾಂತದಲ್ಲಿ ಯಮಭಟರು ಅವಟನಿರೋಧವೆಂಬ
ೊಡಿ ವಿಷಯುಕ್ತವಾದ ಧೂಮದಿಂದ ನಿರೋಧಂಗೈ
ಗೃಹಪತಿಯಾಗಿ ತನ್ನ ಗೃಹವನ್ನು ಕುರಿತು ಬಂ
ಯುಕ್ತನಾಗಿ ಕ್ರೂರದೃಷ್ಟಿಯಿಂದ ದಹಿಸುವನಂತೆ
ಂತದಲ್ಲಿ ಅಪರ್ಯಾವರ್ತನವೆಂಬ ನರಕದಲ್ಲಿ ವಜ್ರ
ರುವ ಹದ್ದುಗಳು ರಣಹದ್ದುಗಳು ವಳಾಕ ಮೊದಲ
ಗಳನ್ನು ಬಲಾತ್ಕಾರದಿಂದ ಕೀಳುವವು; ಯಾವ ಪು
ನೆಂದು ತಿಳಿಯುತ ವಾರೆನೋಟಗಳಿಂದ ಯಾರು
ದ ಪುರುಷರ ದೆಸೆಯಿಂದ ಶಂಕಿಸುತ ಈ ಧನವು
ಂತೆಯಿಂದ ಬಣಗುತಲಿರುವ ಹೃದಯವೂ ಮು
ಲೂ ವೃದ್ಧಿಗೊಂಡಿರುವುದರಿಂದಲೂ ರಕ್ಷಿಸೋ
ಯದೆ ಧನಪಿಶಾಚದಂತೆ ಆ ಧನವನ್ನು ರಕ್ಷಿಸ
ಬ ನರಕದಲ್ಲಿ ಬೀಳುವನು; ಯಮಭಟರು ಧನ

ಈ ಲೋಕದಲ್ಲಿ ತಮ್ಮ ಇಷ್ಟಾರ್ಥ ಸಿದ್ಧಿಗೋಸ್ಕರ ನರಹಿಂಸೆ
ಯಿಂದರಿಂದ ಭೈರವಾದಿ ದೇವತೆಗಳನ್ನು ಸೇವಿಸುತಲಿರ್ಧಾರೋ ಆ
ಭೋಜನವೆಂಬ ನರಕದಲ್ಲಿ ಅವರಿಂದ ಹಿಂಸೆಮಾಡಲ್ಪಟ್ಟ ಪಶುಗ
ಳಂತೆ ಹಿಂಸೆಪಡಿಸುತಲಿರುವವರಾಗಿ ಅವರ ಶಸ್ತ್ರದಿಂದ ಅವರ
ಲೋಕದಲ್ಲಿ ಯಾವರೀತಿ ಮಾಂಸವನ್ನು ಭಕ್ಷಿಸಿ ಸಂತೋಷ
ಪಾತ್ರ ರಕ್ತಪಾನಾದಿಗಳಿಂದ ಸಂತುಷ್ಟರಾಗಿ ನರ್ತನಂಗೈದು
ಗ್ರಾಮದಲ್ಲಾದರೂ ಅರಣ್ಯದಲ್ಲಾದರೂ ನಿರಪರಾಧಿಗಳಾದ
ರೂ ಬಹುಕಾಲ ಜೀವಿಸಲಿಚ್ಛೆಯುಳ್ಳ ಆ ಪ್ರಾಣಿಗಳನ್ನು
ನುನೇಕೋಲಿನಿಂದ ತಾಡಿಸುತ ಯಾತನೆಪಡಿಸುತಲಿರ್ಧಾರೋ
ಶೂಲದಲ್ಲಿ ಯಮಭಟರಿಂದ ಶೂಲಾದಿಗಳಲ್ಲಿ ತಗಲಿಸಲ್ಪಟ್ಟ
ದೋ ಪೀಡಿತರಾಗಿ ಗೃಧ್ರ ಮೊದಲಾದ ದುಷ್ಟಪಕ್ಷಿಗಳಿಂದ
ಗ; ತಮ್ಮಿಂದ ಆಚರಿಸಲ್ಪಟ್ಟ ಆ ಪಾಪವನ್ನು ಸ್ಮರಿಸುವರು;
ಾವವುಳ್ಳವನಾಗಿ ಸರ್ಪಗಳಂತೆ ಪ್ರಾಣಿಗಳಿಗೆ ಭಯವನ್ನುಂ
ಶೂಕವೆಂಬ ನರಕದಲ್ಲಿ ಬಿದ್ದು ಐದು ಏಳು ಶಿರಸ್ಸುಗಳುಳ್ಳ ಸ
; ಯಾವ ಪುರುಷರು ಈ ಲೋಕದಲ್ಲಿ ಬಾಲಕರನ್ನು ಬಲ
ಹಳ್ಳದಲ್ಲಿ ಓಡೆ ಮೊದಲಾದ್ದರಲ್ಲಿ ಕೂಡಿ ಪೀಡಿಸುತಲಿರ್ಧಾರೋ
ನರಕದಲ್ಲಿ ಆ ಪಾಪಿಗಳನ್ನು ಅದೇರೀತಿ ಹಳ್ಳ ಮೊದಲಾದ್ದರಲ್ಲಿ
ದು ಬಾಧಿಸುವರು; ಯಾವ ಪುರುಷರು ಈ ಲೋಕದಲ್ಲಿ ತಾ
ರುವ ಅತಿಥಿಗಳನ್ನಾದರೂ ಅಭ್ಯಾಗತರನ್ನಾದರೂ ಕ್ರೋಧ
ಬಾರಿಬಾರಿಗೂ ನೋಡುತಲಿರ್ಧಾನೋ ಆ ಪುರುಷನನ್ನು ದೇ
ಂತೆ ಅತಿ ಕಠಿಣಗಳಾದ ಕೊಕ್ಕಿಗಳುಳ್ಳವಾಗಿ ಬಲಶಾಲಿಗಳಾ
ದುಷ್ಟಪಕ್ಷಿಗಳು ಕ್ರೂರದೃಷ್ಟಿಯುಳ್ಳ ಆ ಪುರುಷನ ನೇ
ರುಷನು ಈ ಲೋಕದಲ್ಲಿ ಧನಮದವುಳ್ಳವನಾಗಿ ನಾನೇ ಶ್ರೇ
ಈ ಧನವನ್ನು ಅಪಹರಿಸುವರೋ ಎಂದು ಗುರು ಮೊದ
ಯವಾಗುವದೋ ಅಲ್ಲದೇ ನಷ್ಟವಾಗುವದೋ ಎಂಬ
ಉಳ್ಳವನಾಗಿ ಆ ಧನವನ್ನು ಸಂಪಾದಿಸೋಣದರಿಂ
ದಲೂ ಕ್ಲೇಶವನ್ನೈದುತ ಸ್ವಲ್ಪವನ್ನಾದರೂ ಸುಖವನ್ನ
ತಲಿರ್ಪ ಆ ಪುರುಷನು ದೇಹಾಂತದಲ್ಲಿ ಸೂಚೀಮುಖವೆಂ
ಪಿಶಾಚಿಯನಾದ ಆ ಪಾಪಿಯನ್ನು ವಾಯಸಗಳಂತೆ ಸರ್ವಾವ

ಯುವಗಳಲ್ಲಿಯೂ ಸೂಜಿಗಳಿಂದ ಚುಚ್ಚಿಚುಚ್ಚಿ ಸೂತ್ರಗಳನ್ನು ಪೋಣಿಸುವರು ! ಎಲೈ ಅರಸೆ, ಆ ಯಮಸ
ನದಲ್ಲಿ ಇಂಥಾ ನರಕಗಳು ಅನೇಕಸಹಸ್ರಗಳಾಗಿವೆ ; ಯಾವರೀತಿಯಿ ಧರ್ಮಿಷ್ಠರಾದ ಪುರುಷರು ಕ್ರಮದಿಂ
ಸ್ವರ್ಗಾದಿ ಲೋಕಗಳಲ್ಲಿ ವಾಸಂಗೈಯುವರೋ ಅದೇರೀತಿ ಅಧರ್ಮಿಷ್ಠರಾದ ಆ ಸಮಸ್ತ ಪುರುಷರು ಕ್ರಮದಿಂ
ಆ ಸಮಸ್ತಗಳಾದ ನರಕಗಳಲ್ಲಿ ತಮ್ಮ ತಮ್ಮ ಪಾಪಾನುಗುಣವಾಗಿ ವಾಸಂಗೈಯುತ ತಮ್ಮ ಪಾಪಪುಣ್ಯ ಶೇಷ
ಳಿಂದ ಪುನಃ ಜನ್ಮನಿಮಿತ್ತವಾಗಿ ಭೂಲೋಕವನ್ನೈದಿ ಸುಖದುಃಖಗಳನ್ನು ಮಿಶ್ರವಾಗಿ ಅನುಭವಿಸುವರು ! ಎಲ
ಅರಸೆ, ನಿವೃತ್ತಿಧರ್ಮ ಸ್ವರೂಪವು ನನ್ನಿಂದ ನಿನಗೆ ತೃತೀಯಸ್ಕಂಧದ್ದೀ ನಿರೂಪಿಸಲ್ಪಟ್ಟದೆ! ಈ ಬ್ರಹ್ಮಾಂ
ಕೋಶವು ಇಷ್ಟುಪ್ರಮಾಣವುಳ್ಳದ್ದೇ ಸರಿ ; ಈ ಬ್ರಹ್ಮಾಂಡ ಇತರ ಪುರಾಣಗಳಲ್ಲಿ ಹದಿನಾಲ್ಕುಪ್ರಕಾ
ವಾಗಿ ಕಲ್ಪಿಸಲ್ಪಟ್ಟದೆ ; ಉಪನಿಷತ್ತುಗಳಲ್ಲಿಯೂ ಅದೇರೀ ನಿರುಸಲ್ಪಟ್ಟದೆ ; ಭಗವಂತನಾದ ಮಹಾಪುರು
ನಾದ ಶ್ರೀ ನಾರಾಯಣನ ಮಾಯಾಗುಣಸ್ವರೂಪವಾಗಿ ಚತುರ್ದಶಲೋಕಾತ್ಮಕವಾಗಿರುವ ಯಾವ ಸ್ಥೂಲರೂ
ವುಂಟೋ ನನ್ನಿಂದ ನಿರೂಪಿಸಲ್ಪಟ್ಟ ಆ ಸ್ಥೂಲರೂಪವಾದ ವೈಶ್ಯವನ್ನು ಯಾವ ಪುರುಷನು ಅತ್ಯಂತ ಆದರ
ಣೆಯಿಂದಲೂ ಶ್ರದ್ಧಾಭಕ್ತಿಗಳಿಂದಲೂ ಪರಿಶುದ್ಧವಾದ ಬುದ್ಧಿವನಾಗಿ ಪಠಣಂಗೈಯುತ ಶ್ರವಣಂಗೈಯು
ಅನ್ಯರಿಗೆ ಶ್ರವಣಂಗೈಸುತಲಿಧಾನೋ ಆ ಪುರುಷನೇ ಪರಮಾ ಶ್ರೀ ವಾಸುದೇವನು ; ಅತಿ ಸೂಕ್ಷ್ಮವಾ
ನಿರ್ಗುಣಸ್ವರೂಪವನ್ನು ತಿಳಿಯಲು ಯೋಗ್ಯನಾದ ಯೋಗ್ಯೀ ಭಗವಂತನ ಸ್ಥೂಲಸೂಕ್ಷ್ಮಗಳಾದ ರೂ
ಗಳ ರೀತಿಯನ್ನು ಯಥಾವಿಧಿಯಾಗಿ ಗುರುಮುಖದಿಂದ ಶ್ರವಣ ಮೊದಲು ಬ್ರಹ್ಮಾಂಡಾತ್ಮಕವಾದ ಶ್ರೀ ಭ
ವಂತನ ಸ್ಥೂಲರೂಪದಲ್ಲಿ ಸಮಾಧಿಯಿಂದ ಜಯಿಸಲ್ಪಟ್ಟ ಮನಸ್ಸನ್ನು ಮೆಲ್ಲಗೆ ತನ್ನ ಬುದ್ಧಿಯಿಂದ ನಿರ್ಗುಣನಾ
ಭಗವಂತನ ಸೂಕ್ಷ್ಮರೂಪದಲ್ಲಿ ನಿಲ್ಲಿಸುವನಾಗಬೇಕು ! ಪರೀಕ್ಷಿದ್ರಾಯನೆ, ಸಮಸ್ತ ಜೀವಸಮೂಹಗಳ
ಆಶ್ರಯವಾಗಿ ಆಶ್ಚರ್ಯಕರವಾಗಿ ಈಶ್ವರನಾದ ಶ್ರೀ ವಾಸು ಸ್ಥೂಲಶರೀರವಾಗಿರುವ ಈ ಭೂ ದ್ವೀಪ ವರ್ಷ
ನದಿ ಪರ್ವತ ಅಂತರಿಕ್ಷ ಸಮುದ್ರ ಪಾತಾಳ ದಿಕ್ಕು ನರಕ ನಕ್ಷತ್ರಮಂಡಲಗಳು ಮೊದಲಾದ ಲೋಕಗ
ಸ್ಥಿತಿಕ್ರಮವು ನನ್ನಿಂದ ನಿನಗೋಸ್ಕರ ಸಮಗ್ರವಾಗಿ ನೀಪ್ಪಟ್ಟಿತು ” ಎಂದು ಶ್ರೀ ಶುಕಾಚಾರ್ಯನು ಪರಿ
ಕ್ಷಿದ್ರಾಯನನ್ನು ಕುರಿತು ನಿರೂಪಿಸಿದನೆಂದು ಸೂತಪಾಠಕು ನೈಮಿಶಾರಣ್ಯವಾಸಿಗಳಾದ ಶೌನಕಾದಿ ಋಷಿ
ಗಳನ್ನು ಕುರಿತು ನಿರೂಪಿಸಿದನು.

ಇಂತು ಶ್ರೀಮದ್ರಾಜಾಧಿರಾಜ ರಾಜಪರಮೇಶ್ವರ ಪ್ರೌಢಪ್ರತಾಪ ವೀರ ನರಪತಿ ಬಿರುದೆಂತೆಂಬರಗಂಡ ಲೋಕೈಕವೀರ
ಯದುಕುಲ ಪಯಃಪಾರಾವಾರ ಕಳಾನಿಧಿ ಶಂಖ ಚಕ್ರಾಂಕುಶ ಕುಠಾರ ಮಕರ ಮತ್ಸ್ಯ ಶರಭ ಸಾಳ್ವ ಗಂಡಭೇರುಂಡ
ಧರಣೀ ವರಾಹ ಹನುಮದ್ಗರುಡ ಕಂಠೀರವಾದ್ಯನೇಕ ಬಿರುದಾಂಕಿತರಾಗಿ ಮಹಿಶೂರ ಶ್ರೀಚಾಮರಾಜ ಮಹೀ
ಪಾಲ ಧರ್ಮಪತ್ನಿ ಕೆಂಪನಂಜಮಾಂಬಾ ಗರ್ಭಾಬ್ಧಿ ರಾಕಾಸುಧಾಕರಾಯಮಾನ ಶ್ರೀಚಾಮುಂ
ಡಿಕಾಂಬಾ ವರಪ್ರಸಾದೋದ್ಭವರಾದ ಕೃಷ್ಣರಾಜ ಒಡೆಯರವರಿಂದ ಬುಧಜನ
ಸಮ್ಮತಿಯಿಂದ ರಚಿಸಲ್ಪಟ್ಟ ಕರ್ಣಾಟಭಾಷಾರೂಪವಾದ ಶ್ರೀಕೃಷ್ಣರಾಜ
ವಾಣೀವಿಲಾಸವೆಂಬ ಶ್ರೀಭಾಗವತದ ಟೀಕಿನ

ಪಂಚಮಸ್ಕಂಧ ಸಮಾಪ್ತಿ.